ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ

ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು : ಅಮೃತಾ ರಶ್ಮಿ ಫೆರ್ನಾಂಡಿಸ್

ಮಾರ್ಗದರ್ಶಕರು : ಡಾ. ಶ್ರೀಧರ ಎಚ್. ಜಿ.
ಕನ್ನಡ ವಿಭಾಗದ ಮುಖ್ಯಸ್ಥರು,
ವಿವೇಕಾನಂದ ಕಾಲೇಜು, ಪುತ್ತೂರು.
ದಕ್ಷಿಣ ಕನ್ನಡ.

ಮಾನ್ಯತಾ ಕೇಂದ್ರ
ಡಾ. ಹಾ. ಮಾ. ನಾ. ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ-೫೭೪೨೪೦, ದ. ಕ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ -೫೮೩ ೨೭೬

೨೦೦೯

ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ

ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು : **ಅಮೃತಾ ರಶ್ಮಿ ಫೆರ್ನಾಂಡಿಸ್**
ಕನ್ನಡ ಉಪನ್ಯಾಸಕಿ
ಸ.ಪ.ಪೂ.ಕಾಲೇಜು, ಉಪ್ಪಿನಂಗಡಿ,
ಪುತ್ತೂರು ತಾಲೂಕು.

ಮಾರ್ಗದರ್ಶಕರು : **ಡಾ. ಶ್ರೀಧರ ಎಚ್. ಜಿ.**
ಕನ್ನಡ ವಿಭಾಗದ ಮುಖ್ಯಸ್ಥರು,
ವಿವೇಕಾನಂದ ಕಾಲೇಜು, ಪುತ್ತೂರು.
ದಕ್ಷಿಣ ಕನ್ನಡ.

ಮಾನ್ಯತಾ ಕೇಂದ್ರ
ಡಾ. ಹಾ. ಮಾ. ನಾ. ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ-೫೭೪೨೪೦, ದ.ಕ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ -೫೮೩ ೨೭೬

೨೦೧೯

ಪ್ರಮಾಣ ಪತ್ರ

'ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಲಾಗಿದೆ. ಡಾ. ಶ್ರೀಧರ ಎಚ್. ಜಿ. ಸಹಪ್ರಾಧ್ಯಾಪಕರು, ವಿವೇಕಾನಂದ ಕಾಲೇಜು, ಪುತ್ತೂರು ಇವರು ಈ ಪ್ರಬಂಧ ರಚನೆಗೆ ಮಾರ್ಗದರ್ಶನ ಮಾಡಿದ್ದಾರೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲಿ ಇಲ್ಲವೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅಮೃತಾ ರಶ್ಮಿ ಫೆರ್ನಾಂಡಿಸ್
ಕನ್ನಡ ಉಪನ್ಯಾಸಕಿ
ಸ.ಪ.ಪೂ.ಕಾಲೇಜು, ಉಪ್ಪಿನಂಗಡಿ,
ಪುತ್ತೂರು ತಾಲೂಕು.

ದಿನಾಂಕ: 04.06.2019
ಸ್ಥಳ : ಉಪ್ಪಿನಂಗಡಿ.

ದೃಢೀಕರಣ ಪತ್ರ

ಅಮೃತಾ ರಶ್ಮಿ ಫೆರ್ನಾಂಡಿಸ್ ಇವರು 'ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮಂಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧವನ್ನು ಇಲ್ಲವೇ ಇದರ ಯಾವುದೇ ಭಾಗವನ್ನು ಈ ಮೊದಲು ಅಭ್ಯರ್ಥಿಯು ಯಾವುದೇ ಪದವಿಗಾಗಲಿ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಶ್ರೀಧರ ಎಚ್. ಜಿ.

ಡಾ. ಶ್ರೀಧರ ಎಚ್. ಜಿ.
ಕನ್ನಡ ವಿಭಾಗದ ಮುಖ್ಯಸ್ಥರು,
ವಿವೇಕಾನಂದ ಕಾಲೇಜು, ಪುತ್ತೂರು
ದಕ್ಷಿಣ ಕನ್ನಡ.

ದಿನಾಂಕ : 04-06-2019
ಸ್ಥಳ : ಪುತ್ತೂರು

ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ

ಪರಿವಿಡಿ

ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ

ಅಧ್ಯಾಯ ೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವೈಧಾನಿಕತೆ

ಅಧ್ಯಾಯ ೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಪೀಠಿಕೆ

ತುಳುನಾಡು ಎಂದರೆ ಪ್ರಾದೇಶಿಕವಾಗಿ ತುಳು ಭಾಷಿಕರು ವಾಸಿಸುವ ಭೂಭಾಗ. ತುಳುನಾಡಿನ ಎಲ್ಲೆಗಳು ಕಾಲಕಾಲಕ್ಕೆ ಆಡಳಿತಾತ್ಮಕ ನಿರ್ಧಾರಗಳಿಗೆ ಅನುಗುಣವಾಗಿ ಬದಲಾಗಿವೆ. ತುಳುನಾಡು ಎನ್ನುವ ಈ ಪ್ರದೇಶ ತುಳು ಭಾಷಿಕ ನೆಲೆಯಿಂದಲೇ ಪ್ರಾಪ್ತವಾದುದು. ಪಂಚ ದ್ರಾವಿಡ ಭಾಷೆಗಳ ಪೈಕಿ ತುಳು ಭಾಷೆಯೂ ಒಂದು. ಆದರೆ ಉಳಿದ ನಾಲ್ಕು ಪ್ರಧಾನವಾದ ಭಾಷೆಗಳಿಗೆ ಒದಗಿದ ರಾಜ್ಯವಾಪ್ತಿಯ ವಿಸ್ತಾರ, ಆಡಳಿತಾತ್ಮಕ ಸ್ಥಾನಮಾನ, ಶಿಕ್ಷಣ ಮಾಧ್ಯಮದ ಸೌಲಭ್ಯ ಒದಗದೆ ಹೋದುದು ತುಳು ಭಾಷೆಗೆ ಒದಗಿದ ದೌರ್ಭಾಗ್ಯವೇ ಸರಿ. ತುಳು ಭಾಷೆಯ ಬಳಕೆಗೆ ಸಹಸ್ರಾರು ವರ್ಷಗಳ ಚರಿತ್ರೆ ಇದೆ. ಲಿಪಿ ಸಂಸ್ಕಾರವೂ ಇತ್ತಾದರೂ ಕ್ರಮೇಣ ಕಾಲದ ಒತ್ತಡಗಳು ತುಳು ಲಿಪಿಯ ಬಳಕೆಯನ್ನು ಹಿಮ್ಮೆಟ್ಟಿಸಿ ಕನ್ನಡ ಲಿಪಿಯಲ್ಲಿ ತುಳು ಭಾಷಿಕ ದಾಖಲೆಗಳನ್ನು ರೂಪಿಸುವ ಪದ್ಧತಿಯನ್ನು ರೂಢಿಸಿಕೊಂಡಂತಾಯಿತು. ತುಳು ಭಾಷೆಯನ್ನು ಹೊಂದಿರುವ ಈ ಭೂಪ್ರದೇಶದ ಗಡಿಗಳನ್ನು ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿ, ಉತ್ತರದಲ್ಲಿ ಸೀತಾನದಿ ಹಾಗೂ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆ ಎಂಬುದಾಗಿ ಗುರುತಿಸಲಾಗಿದೆ. ತುಳುನಾಡು ತನ್ನ ಚಾರಿತ್ರಿಕ ಘಟ್ಟವನ್ನು ಗುರುತಿಸಿಕೊಳ್ಳುವುದು ಮೌರ್ಯರ ಕಾಲದಿಂದ; ಅದರಲ್ಲೂ ಮುಖ್ಯವಾಗಿ ಅಶೋಕನ ಆಳ್ವಿಕೆಯ ಅವಧಿಯಿಂದ. 'ಬನವಾಸಿಯ ಕದಂಬರ ಭಗೀರಥವರ್ಮನು ತನ್ನ ರಾಜ್ಯದ ಪಶ್ಚಿಮ ಸಮುದ್ರ ತೀರದ ಭಾಗವನ್ನು ರಾಜ್ಯಾಡಳಿತಕ್ಕೆ ಅನುಕೂಲವಾಗುವಂತೆ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿದನು. ಅವುಗಳೆಂದರೆ ಕಾಸರಗೋಡು, ಬಾರ್ಕೂರು, ಮಂಗಳೂರು, ಕಡಬ ಪ್ರದೇಶಗಳು. ಕದಂಬರ ಇನ್ನೊಂದು ಶಾಖೆಯಾದ ಹಾನಗಲ್ಲಿನ ಕದಂಬರ ನಾಲ್ಕನೆಯ ಮಯೂರವರ್ಮನು ತುಳುನಾಡಿಗೆ ಬಂದು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು.'[೧] ಅಳುಪರು ಕ್ರಿ.ಶ. ಒಂದನೆಯ ಶತಮಾನದಿಂದ ೧೪ನೆಯ ಶತಮಾನದರೆಗೆ ಅಧಿಕಾರ ನಡೆಸಿದರು. ಅನಂತರ ಹೊಯ್ಸಳ, ವಿಜಯನಗರ ಹಾಗೂ ಕೆಳದಿಯ ಅರಸರು ಆಳ್ವಿಕೆ ನಡೆಸಿದರು. ಹೈದರಾಲಿ ಮತ್ತು ಟಿಪ್ಪುವಿನ ಮರಣದ ನಂತರ ಬ್ರಿಟಿಷರ ವಶವಾಯಿತು. ಟಿಪ್ಪುವಿನ ಪತನದ ಬಳಿಕ ಬ್ರಿಟಿಷರು ತುಳುನಾಡನ್ನು ಸೇರಿಸಿಕೊಂಡು ಹೊಸ ಕೆನರಾ ಜಿಲ್ಲೆಯನ್ನು ರಚಿಸಿದರು. ಕೆನರಾ ಜಿಲ್ಲೆ ಅಥವಾ ಪ್ರಾಂತ್ಯದಲ್ಲಿ ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿಕೊಂಡಿದ್ದವು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ.ಶ.೧೮೬೦ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ಪ್ರಾಂತಕ್ಕೂ, ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸ್ ಪ್ರೆಸಿಡೆನ್ಸಿಗೂ ಸೇರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾಗಿ ಆಡಳಿತಾತ್ಮಕ ಅನುಕೂಲದ ಉದ್ದೇಶದಿಂದ ೧೯೯೭ರಲ್ಲಿ ವಿಭಜಿಸಲಾಯಿತು. ಉಡುಪಿ ಜಿಲ್ಲೆಯು ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳನ್ನು ಪಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯೊಳಗೆ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲೂಕುಗಳು ಸೇರಿಕೊಂಡವು.[೨]

ಅತಿ ಪುರಾತನ ಕಾಲದಿಂದಲೂ ತುಳುನಾಡಿಗೆ ಆಲುವ, ಆಳುವ, ಆಳುವಖೇಡ, ಆಳ್ವಖೇಡ ಇತ್ಯಾದಿಯಾಗಿ ಅದೊಂದು ಹೆಸರಿದ್ದಿತೆಂದು ಗ್ರಂಥಾಧಾರ ಹಾಗೂ ಶಾಸನಗಳ ಆಧಾರದಿಂದ ದಿ| ಗೋವಿಂದ ಪೈಗಳು ತೋರಿಸಿಕೊಟ್ಟಿದ್ದಾರೆ.[೩] ತುಳುನಾಡು ಎಂಬ ಪದದ ಮೂಲವನ್ನು ವಿಶ್ಲೇಷಿಸುವ ಗೋವಿಂದ ಪೈ; ತುಳು ಎಂಬುದು 'ತುಳೈ' ಅಂದರೆ ನೀರಿನಲ್ಲಿ ಹುಟ್ಟುಹಾಕು, ನೀರಿನಲ್ಲಿ ಆಟವಾಡು ಎಂಬ ಅರ್ಥದ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದ ಬೆಸ್ತರಿಂದ, ಮೀನುಗಾರರಿಂದ ಬಂದಿರಬೇಕು.[೪] 'ತೂಳ್' ಅಂದರೆ ದಾಳಿಮಾಡು ಎಂಬ ಅರ್ಥದ ಹಿನ್ನೆಲೆಯಲ್ಲಿ 'ತುಳು' ಎಂಬ ಪದದ ಮೂಲವನ್ನು ಚರ್ಚಿಸುತ್ತ, ಅದು ತುಳುವರ ಆಕ್ರಮಣಶೀಲತೆ, ಯುದ್ಧಪ್ರಿಯತೆ ಮುಂತಾದ ಗುಣಗಳಿಂದ ಹುಟ್ಟಿರಬೇಕು ಎಂದು ಬಿ.ಎ.ಸಾಲೆತ್ತೂರ್ ವಾದಿಸುತ್ತಾರೆ'.[೫] ತುಳುನಾಡು ಎಂಬುದು ಮೂಲತಃ 'ತುರುನಾಡು' ಎಂಬ ನಿಷ್ಪತ್ತಿಯನ್ನು ಹೊಂದಿದೆ ಎಂದು ಪಾದೂರು ಗುರುರಾಜ ಭಟ್ ಅವರು ತಿಳಿಸುತ್ತಾರೆ.[೬] 'ತುಳು' ಶಬ್ದದ ವಿಷಯದಲ್ಲಿ ವಿದ್ವಾಂಸರುಗಳ ನಡುವೆ ಭಿನ್ನಾಭಿಪ್ರಾಯಗಳು ಇವೆ. ಮಿಶನರಿ W.Stock ಎಂಬವರ ವಿವರಣೆ ಹೀಗಿದೆ; 'ತುಳುನಾಡಿನ ಮಣ್ಣನ್ನು ತಕ್ಕಡಿಯಲ್ಲಿ (ಸಂಸ್ಕೃತ=ತುಲಾ) ತೂಗಿ ನೋಡಿದಾಗ ಅದು ಹತ್ತಿರದ ಇತರ ಪ್ರದೇಶದ ಮಣ್ಣುಗಳಿಗಿಂತ ಭಾರವಾಗಿತ್ತು. ಹೀಗೆ ತುಲಾ–ತುಳು ಶಬ್ದ ಉತ್ಪತ್ತಿಯಾಯಿತು'.[೭] ತುಳು ಪದದ ಅರ್ಥವನ್ನು ಸೇಡಿಯಾಪು ಕೃಷ್ಣಭಟ್ಟರು 'ಜಲಭರಿತ' ಎಂಬುದಾಗಿ ವಿವಿಧ ಉದಾಹರಣೆಗಳೊಂದಿಗೆ ಚರ್ಚಿಸುತ್ತಾರೆ.[೮]

ಬದುಕು ನಿರ್ವಹಣೆಯಲ್ಲಿ ದೈನಂದಿನ ಆವರ್ತಗಳು, ವಾರ್ಷಿಕ ಆವರ್ತಗಳು ಎಂಬ ಪರಿಕಲ್ಪನೆಯಲ್ಲಿ ಆಚರಿಸಿಕೊಂಡು ಬರುವ ಆಚಾರ–ವಿಚಾರ, ವಿಧಿ–ನಿಷೇಧಗಳು, ನಂಬಿಕೆ, ನಡವಳಿಕೆಗಳು ಹಾಗೂ ಹುಟ್ಟಿನಿಂದ ಆರಂಭವಾಗಿ ಸಾವಿನತನಕ ಸಂಸ್ಕಾರಾತ್ಮಕವಾಗಿ ಬಳಕೆಗೊಳ್ಳುವ ನಾನಾ ರೀತಿಯ ಕಾಲಬದ್ಧವಾದ ಕ್ರಿಯಾವಿಧಿಗಳು ಸಂಸ್ಕೃತಿಯ ಪ್ರತೀಕಗಳಾಗುತ್ತವೆ. ಸಂಸ್ಕೃತಿ ಎನ್ನುವಂತಹ ಒಂದು ಸಂಗತಿ ಮೂರ್ತವಾಗಿ ಖಚಿತವಾಗಿ ಬೌದ್ಧಿಕ ರಚನೆ. ಸಂಸ್ಕೃತಿ ಎಂಬುದು ಮೂಲತಃ ಸಂಸ್ಕೃತ ಭಾಷೆಯ ಶಬ್ದ. ಮೂಲದಲ್ಲಿ ಸಂಸ್ಕೃತಿ ಎಂದರೆ ಸಂಸ್ಕರಣಕ್ಕೆ ಸಂಬಂಧಪಟ್ಟಿದ್ದು. ಸಂಸ್ಕೃತಿ ಶಬ್ದಕ್ಕೆ 'ಒಂದು ದೇಶದ ಅಥವಾ ಜನಾಂಗದ ಮಾನಸಿಕ ಸಾಧನೆ; ನಾಗರಿಕತೆ' ಎಂಬ ಅರ್ಥವನ್ನು ನಿಘಂಟುಗಳು ನೀಡಿವೆ. ಡಿವಿಜಿ, ಮಾಸ್ತಿ, ದೇವುಡು ಮೊದಲಾದ ನವೋದಯ ಕಾಲದ ರಾಷ್ಟ್ರೀಯವಾದಿ ಲೇಖಕರು, ಕೆಲಮಟ್ಟಿಗೆ ಕುವೆಂಪು ಕೂಡ, ನಿರ್ದಿಷ್ಟ ಸಮುದಾಯದ ಜೀವನ ವಿಧಾನದಿಂದ ಆಯ್ದು ತೆಗೆದ ಉದಾಹರಣೆಗಳಿಂದ ಸಂಸ್ಕೃತಿ ವ್ಯಾಖ್ಯೆಯನ್ನು ರೂಪಿಸಿದರು. ಅವರು ಸಂಸ್ಕೃತಿಗೆ ಕೊಟ್ಟ ವ್ಯಾಖ್ಯೆಗಳು ಶುದ್ಧೀಕರಣವಾದಿ ಅರ್ಥವನ್ನು ಒಳಗೊಂಡಿವೆ. ೧೯೭೦ರ ದಶಕದ ನಂತರ ಕರ್ನಾಟಕದಲ್ಲಾದ ಬೆಳವಣಿಗೆಗಳಲ್ಲಿ ಮೇಲಿನ ಸಂಸ್ಕೃತಿ ವ್ಯಾಖ್ಯೆ ಹಿಂಜರಿಕೆಗೆ ಒಳಗಾಯಿತು. 'ಸಂಸ್ಕೃತಿ ಎಂದರೆ ಒಂದು ಸಮುದಾಯದ ಸಮಗ್ರ ಜೀವನ ವಿಧಾನ; ಇದರಲ್ಲಿ ಕೇಡು ಒಳಿತು ಮೇಲುಕೀಳು ಎಂಬ ತರತಮವಿಲ್ಲ' ಎಂಬ ವ್ಯಾಖ್ಯೆ ಹೆಚ್ಚು ಬಳಕೆಯಾಗತೊಡಗಿತು.[೯]

'ಮಾನವನ ಸುಧಾರಿತ, ಸುಸಂಸ್ಕೃತ ಪರಿಣಾಮವನ್ನೇ ಸಂಸ್ಕೃತಿಯೆನ್ನಬಹುದು'.[೧೦]

'ಸಂಸ್ಕೃತಿ ಎಂದರೆ ಜೀವನಕ್ರಮ. ಸಂಸ್ಕೃತಿ ಎನ್ನುವುದು ನಾವು ಮನ್ನಿಸುವ ಯಾವುದೋ ಒಂದು ಸಭ್ಯ ಸಂಸ್ಕಾರ, ಮೌಲ್ಯಪ್ರಜ್ಞೆ, ಸಂಸ್ಕೃತಿ ಶಬ್ದವು ಸಾಮಾಜಿಕವಾಗಿ ನೆಲೆಗೊಂಡಿರುವ ವರ್ತನೆ,

ಸಹಜ ಸ್ವಭಾವ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. ಸಂಸ್ಕೃತಿ ಎಂದರೆ ಸಾಹಿತ್ಯ, ನಾಟಕ, ಸಂಗೀತ, ನೃತ್ಯ, ಇತ್ಯಾದಿ ಕಲೆಗಳನ್ನು ಕುರಿತ ಚಟುವಟಿಕೆ ಎಂದಾಗಿದೆ. ಸಂಸ್ಕೃತಿ ಎಂದರೆ ಚರಿತ್ರೆ.[೧೧]

'ಮಾನವನು ಕಾರ್ಯನಿರತನಾದಾಗ ಆತನ ಮನಸ್ಸು ವಿಕಾಸಗೊಳ್ಳುತ್ತದೆ. ಈ ವಿಕಾಸವು ಪದೇ ಪದೇ ತೋರಿಬರುತ್ತದೆ. ಹೀಗೆ ತೋರಿಬರುವ ಮನೋವಿಕಾಸವನ್ನೇ ಸಂಸ್ಕೃತಿ ಎನ್ನಬಹುದು. ಸಂಸ್ಕೃತಿಯ ಪ್ರಸ್ತಾಪ ಬಂದಾಗ ಧರ್ಮ, ದೇವರು, ದೈವ, ಸಮಾಜ ವ್ಯವಸ್ಥೆ, ಆಚರಣಾತ್ಮಕ ವಿಧಿಗಳು, ನಂಬಿಕೆ ನಡವಳಿಕೆ, ಕುಲಕಸುಬು, ಉಣಿಸುತಿನಿಸು, ಉಡುಪು ತೊಡುಪು, ಜನಪದ ಸಾಹಿತ್ಯ, ಕಲೆಗಳು, ವ್ಯಾಪಾರ ಸಾಪಾರ, ವ್ಯವಹಾರ ವಿಧಾನ ಇವೆಲ್ಲವನ್ನೂ ಅದರ ಘಟಕಗಳೆಂದು ಪರಿಗಣಿಸಲಾಗುತ್ತದೆ.'[೧೨]

ತುಳುನಾಡಿನ ಸಾಂಸ್ಕೃತಿಕ ಸ್ವರೂಪವನ್ನು ಗಮನಿಸಿದರೆ ಅದು ಪೂರ್ವದಲ್ಲಿ ಆದಿಮಾನವನ ನೆಲೆಯಾಗಿತ್ತು ಎಂಬ ಅಂಶವು ಅಧ್ಯಯನಗಳಿಂದ ದೃಢಪಟ್ಟಿದೆ. ತುಳುನಾಡು ಕರಾವಳಿ ಪ್ರದೇಶವಾಗಿದ್ದು, ಎತ್ತರ ತಗ್ಗುಗಳಿಂದ ಕೂಡಿದ ಭೂಮಿ, ವಿಶಾಲವಾದ ಸಮುದ್ರತೀರ, ದಟ್ಟ ಜನವಸತಿ ಹೊಂದಿದೆ. ತುಳುನಾಡಿನ ಚರಿತ್ರೆಯ ಆರಂಭಕಾಲದಲ್ಲಿ ಮೂಲದ್ರಾವಿಡ ಸಂಸ್ಕೃತಿಗೆ ಸೇರಿದ ಕೊರಗ, ಪರವ, ಪಂಬದ, ನಲಿಕೆ, ಮಲೆಕುಡಿಯ ಮುಂತಾದ ಜನಸಮುದಾಯಗಳು ವಾಸವಾಗಿದ್ದವು. ಒಂದು ಪ್ರದೇಶದ ಭೌಗೋಳಿಕ ಸ್ಥಿತಿ, ಹವಾಮಾನಗಳಿಗೂ ಅಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿಗಳಿಗೂ ಸಂಬಂಧವಿದೆಯೆಂದು ಹೇಳಬೇಕಾಗುತ್ತದೆ. ದೈವಚರಿತ್ರೆಗೆ ಸಂಬಂಧಪಟ್ಟ ಪಾಡ್ದನ ಅಥವಾ ಸಂಧಿಗಳಂತೂ ಜನಪದ ಸಾಹಿತ್ಯದ ಅಪೂರ್ವ ಖನಿಗಳಾಗಿದ್ದು, ತುಳುನಾಡಿನ ಪುರಾಣಸಂಹಿತೆಗಳೆನ್ನಬಹುದು. ನಾಗಾರಾಧನೆ ದೇಶದ ಹಾಗೂ ಪ್ರಪಂಚದ ಹಲವೆಡೆ ಇದ್ದರೂ ತುಳುನಾಡಿನಷ್ಟು ವೈವಿಧ್ಯ ಬೇರೆಡೆ ಇಲ್ಲವೆನ್ನಬಹುದು. ಇಂದಿಗೂ ವೈವಿಧ್ಯಪೂರ್ಣವಾದ ನಾಗಾರಾಧನಾ ಸಂಪ್ರದಾಯಗಳು ಬಹುವಾಗಿ ಜೀವಂತವಿರುವ ಮುಖ್ಯಪ್ರದೇಶವೆಂದರೆ ತುಳುನಾಡು ಅಥವಾ ಅವಿಭಜಿತ ದಕ್ಷಿಣಕನ್ನಡ ಮತ್ತು ಅದರ ದಕ್ಷಿಣಕ್ಕಿರುವ ಕೇರಳದಲ್ಲಿ ಎನ್ನಬಹುದು.

ಮಾತೃಪ್ರಧಾನ ವ್ಯವಸ್ಥೆಯು ಕಂಡುಬರುವಂತಹ ವಿಶಿಷ್ಟನಾಡು ತುಳುನಾಡು. ಇತರೆಡೆ ಪಿತೃಪ್ರಧಾನ ವ್ಯವಸ್ಥೆಯೇ ಕಂಡುಬರುತ್ತಿರುವಾಗ ತುಳುನಾಡಿನಲ್ಲಿ ಅಳಿಯಕಟ್ಟು ಪ್ರಚಲಿತದಲ್ಲಿತ್ತು. ನಾ.ಮೊಗಸಾಲೆಯವರ ಉಲ್ಲಂಘನೆಯು ಮಾತೃಪ್ರಧಾನ ವ್ಯವಸ್ಥೆಯ ವೈಭವ ಹಾಗೂ ಅದರ ಪತನವನ್ನು ಚಿತ್ರಿಸುತ್ತಾ ಸಾಗುತ್ತದೆ. ಅಳಿಯಕಟ್ಟು ಸಂಪ್ರದಾಯವೆಂದರೆ ಮದುವೆಯಾದ ಮೇಲೂ ಕೂಡ ಹೆಣ್ಣು ಹೆತ್ತವರ ಮನೆಯಲ್ಲೇ ಉಳಿದು ಗಂಡು ಮನೆ ಅಳಿಯನಾಗಿರುವ ಸಂಪ್ರದಾಯ. ಕರ್ನಾಟಕದಲ್ಲಿ ಭೂಮಸೂದೆ ಜಾರಿಯಾಗುವ ಸಂದರ್ಭದಲ್ಲಿ ಹಲವು ಸಂಘರ್ಷಗಳಿಗೊಳಗಾಗಿ ಈ ಪದ್ಧತಿ ಕ್ಷೀಣಿಸಿದ್ದರೂ ಇಂದಿಗೂ ಕೂಡ ವಿರಳವಾಗಿ ಮಾತೃಪ್ರಧಾನ ವ್ಯವಸ್ಥೆ ಜಾರಿಯಲ್ಲಿದೆ. ಇಂದಿಗೂ ಮದುವೆಯ ಸಂದರ್ಭಗಳಲ್ಲಿ ಸೋದರಮಾವನಿಗೆ ಪ್ರಾಶಸ್ತ್ಯವಿರುವುದು ಕಂಡುಬರುತ್ತದೆ. ಕೂಡು ಕುಟುಂಬವಾಗಿ ಬೆಳೆದಿದ್ದ ಕುಟುಂಬಗಳು ಇಂದು ಶಿಕ್ಷಣ, ಜಾಗತೀಕರಣದ ದಾಳಿಗೆ ತುತ್ತಾಗಿ ವಿಘಟನೆಯಾಗಿ ವಿಭಕ್ತ ಕುಟುಂಬಗಳು ಎಲ್ಲೆಡೆ ಹರಡಿವೆ. ಪ್ರಸ್ತುತ ಕುಟುಂಬಗಳ ವ್ಯವಸ್ಥೆಯು ಸಾಕಷ್ಟು ಬದಲಾವಣೆಗಳನ್ನು ಪಡೆದಿದೆ. ವೈಯಕ್ತಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಸ್ತ್ರೀ–ಪುರುಷ

ಸಮಾನತೆ ಹೆಚ್ಚಿರುವಂತಹ ಈ ಕಾಲದಲ್ಲಿ ಕಾದಂಬರಿ ಹಾಗೂ ಕಥೆಗಳು ಕಟ್ಟಿಕೊಡುವಂತಹ ಚಿತ್ರಣ ಚಿಂತನಯೋಗ್ಯವಾಗಿದೆ. ಒಂಟಿತನ, ವಿಕಾಂಗಿತನ, ಅಸಹಾಯಕತೆ, ವೃದ್ಧಾಪ್ಯದಲ್ಲಿ ಅತಂತ್ರಸ್ಥಿತಿಗೆ ಒಳಗಾಗುವುದನ್ನು ಕಾಣುತ್ತೇವೆ. ಶಿಕ್ಷಣದ ಗುಣಮಟ್ಟ ಹೆಚ್ಚಿ ಬೌದ್ಧಿಕ ಶ್ರಮದ ಉದ್ಯೋಗಗಳತ್ತ ಒಲವು ಹೆಚ್ಚುತ್ತಿರುವಂತಹ ಸಂದರ್ಭದಲ್ಲಿ ಕುಟುಂಬಗಳು ಹೊಸ ಬಗೆಯ ಸಮಸ್ಯೆಗಳಿಗೆ ತುತ್ತಾಗುತ್ತಿರುವುದನ್ನು ಗಮನಿಸಬಹುದು. ಕುಟುಂಬ ವ್ಯವಸ್ಥೆಯ ಮೇಲೆ ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಗಳು ಪ್ರಭಾವ ಬೀರುತ್ತವೆ. ತುಳುನಾಡಿನ ಕಥನ ಸಾಹಿತ್ಯವು ನಿರೂಪಿಸುವ ತುಳು ಸಂಸ್ಕೃತಿಯ ನಿರೂಪಣೆಗಳ ಕುರಿತು ಇದುವರೆಗೆ ಅಧ್ಯಯನಗಳು ನಡೆದಿರುವುದಿಲ್ಲ. ಈ ಪ್ರಾದೇಶಿಕ ವ್ಯಾಪ್ತಿಯನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅವಿಭಜಿತ ತುಳುನಾಡು ಎಂದು ಪರಿಕಲ್ಪಿಸಲಾಗಿದ್ದು ಅಧ್ಯಯನಕ್ಕೆ ಕಥನ ಸಾಹಿತ್ಯವನ್ನು ಆಯ್ಕೆ ಮಾಡುವಾಗ ಸಮಗ್ರವಾದ ತುಳುನಾಡಿನ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಕೃತಿಗಳನ್ನು ಆಯ್ದುಕೊಳ್ಳಲಾಗಿದೆ. ಹೀಗೆ ಕೃತಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆಧುನಿಕ ಕನ್ನಡ ಸಾಹಿತ್ಯ ಸಾಗಿ ಬಂದ ಶತಮಾನದಷ್ಟು ಕಾಲದ ಪರಿಧಿಯನ್ನು ಗೃಹೀತವಾಗಿಟ್ಟುಕೊಂಡು ವಸ್ತುನಿಷ್ಠವಾಗಿ ಬೇರೆ ಬೇರೆ ಕಾಲಮಾನದ ಕೃತಿಗಳನ್ನು ಆಯ್ದುಕೊಳ್ಳಲಾಗಿದೆ.

'ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ' ಎಂಬ ಶೀರ್ಷಿಕೆಯನ್ನು ಅಧ್ಯಯನಕ್ಕೆ ಆಯ್ಕೆಮಾಡಲಾಗಿದ್ದು ತುಳುಸಂಸ್ಕೃತಿಯು ಹೊಂದಿದ ಅನನ್ಯತೆ ಹಾಗೂ ಪಲ್ಲಟಗಳ ಕಡೆ ಈ ಅಧ್ಯಯನದಲ್ಲಿ ಗಮನವನ್ನು ಕೇಂದ್ರೀಕರಿಸಲಾಗಿದೆ. ಯಾವುದೇ ಸಮಾಜವೂ ಕಾಲಧರ್ಮಕ್ಕೆ ಅನುಗುಣವಾಗಿ ಸ್ಥಿತ್ಯಂತರಗೊಳ್ಳುತ್ತಾ ಸಾಗುವುದು ಸ್ವಾಭಾವಿಕ. ಆಯಾ ಕಾಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳು ಬದಲಾವಣೆಯನ್ನು ಒತ್ತಾಯಿಸುತ್ತವೆ. ಬದಲಾದ ಸನ್ನಿವೇಶವನ್ನು ಸಾಮಾನ್ಯರು ಒಪ್ಪಿಕೊಳ್ಳಬೇಕಾಗುತ್ತದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮಾನ್ಯತೆ ಇರುವ ವಿಷಯಗಳ ಕಡೆ ಬದಲಾವಣೆಗಳ ಒಲವು ಸಾಮಾನ್ಯ. ಸ್ಥಿತ್ಯಂತರವು ಜನರಲ್ಲಿ ಉಂಟುಮಾಡುವ ತಲ್ಲಣಗಳು, ಸರಿ ತಪ್ಪುಗಳ ಸಂಘರ್ಷ, ಹಿಂದಿನದನ್ನು ಬಿಡಲು ಒಪ್ಪದ ಮನೋಸ್ಥಿತಿಅಧ್ಯಯನಕ್ಕೆ ಅವಶ್ಯಕ ಸಾಮಗ್ರಿಯನ್ನು ಒದಗಿಸುತ್ತದೆ.

ಇಂದಿನ ಅವಿಭಜಿತ ದಕ್ಷಿಣ ಕನ್ನಡವೇ ಹಿಂದಿನ ತುಳುನಾಡು. ತುಳುನಾಡಿನ ರಾಜಕೀಯ ಎಲ್ಲೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಇದ್ದವು. ಭಾಷಿಕವಾಗಿ ತುಳು ಮಾತನಾಡುವ ಪ್ರದೇಶವನ್ನು 'ತುಳುನಾಡು' ಎಂದು ಗುರುತಿಸುವ ಪ್ರಯತ್ನ ನಡೆದಿದೆ. ರಾಜಕೀಯವಾಗಿ ಹಲವು ಅರಸು ಮನೆತನಗಳ ಕೈಕೆಳಗೆ ಆಳ್ವಿಕೆಗೆ ಒಳಪಟ್ಟು ಸಮೃದ್ಧಿಯತ್ತ ಸಾಗಿದೆ. ಈ ಅಧ್ಯಯನದಲ್ಲಿ ತುಳುನಾಡು ಎಂದಾಗ ಅವಿಭಜಿತ ದಕ್ಷಿಣ ಕನ್ನಡ ಕಾಸರಗೋಡು ಸೇರಿದಂತೆ ಎಂಬುದಾಗಿ ಅಧ್ಯಯನ ದೃಷ್ಟಿಯಿಂದ ಸ್ವೀಕರಿಸಲಾಗಿದೆ.

ತುಳುನಾಡಿನ ಚರಿತ್ರೆಯ ಕುರಿತು ಅಧ್ಯಯನ ನಡೆಸಲು ಆರಂಭಿಕ ಪ್ರಯತ್ನ ಮಾಡಿದವರು ಯಂ.ಗಣಪತಿ ರಾವ್ ಐಗಳು. ಶ್ರೀಮಂಜೇಶ್ವರ ಗೋವಿಂದ ಪೈಗಳು, ಡಾಕ್ಟರ್ ಆನಂದ ಭಾಸ್ಕರ ಸಾಲೆತ್ತೂರರು ತುಳುನಾಡಿನ ಕುರಿತು ನಿಖರ ಮಾಹಿತಿ ಒದಗಿಸಲು ಶ್ರಮಿಸಿದ್ದಾರೆ. ಡಾ.ಪಾದೂರು ಗುರುರಾಜ ಭಟ್, ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್, ಮುಂಡಿಕ್ಕಾ

ಗಣಪಯ್ಯ ಭಟ್, ಕೆ.ಮೋಹನ್ ಕೃಷ್ಣ ರೈ, ಅಮೃತ ಸೋಮೇಶ್ವರ, ಮೊದಲಾದವರು ತುಳುನಾಡಿನ ನಾಡು ನುಡಿ ಸಂಸ್ಕೃತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿದವರು. ಇವರ ಅಧ್ಯಯನಗಳು ತುಳು ಸಂಸ್ಕೃತಿಯ ಕುರಿತು ವಿಶ್ಲೇಷಿಸುತ್ತವೆ.

ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಹಲವು ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಪ್ರಾರಂಭವಾದವು. ಹೀಗೆ ಆರಂಭವಾದ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ತುಳುನಾಡಿನ ಗುಲ್ವಾಡಿ ವೆಂಕಟರಾಯರು ರಚಿಸಿದ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ (೧೮೯೯) ಆರಂಭದ ಕಾದಂಬರಿಗಳಲ್ಲಿ ಒಂದು. ಮಂಗಳೂರಿನ ಬೋಳಾರ ಬಾಬುರಾಯರ 'ವಾಗ್ದೇವಿ' ೧೯೦೫ರಲ್ಲಿ ಬೆಳಕಿಗೆ ಬಂದಿತು. ಕಾರಂತರ ಚೋಮನ ದುಡಿ ೧೯೩೩ರಲ್ಲಿ ಪ್ರಕಟವಾದರೆ, ಮರಳಿ ಮಣ್ಣಿಗೆ, ಔದಾರ್ಯದ ಉರುಳಲ್ಲಿ ಕಾದಂಬರಿಗಳು ಪ್ರಕಟವಾದವು. ಎಚ್.ನಾಗವೇಣಿ, ಮಿತ್ರಾ ವೆಂಕಟ್ರಾಜ, ಎಂ.ವೀರಪ್ಪ ಮೊಯಿಲಿ, ನಾ.ಮೊಗಸಾಲೆ, ವಿಶುಕುಮಾರ, ಸಾರಾ ಅಬೂಬಕ್ಕರ್, ಪ್ರಭಾಕರ ನೀರ್‌ಮಾರ್ಗ ಗಮನಿಸಬಹುದಾದ ಪ್ರಮುಖ ಕಾದಂಬರಿಕಾರರು.

೧.೨. ಅಧ್ಯಯನದ ಉದ್ದೇಶ

ಶತಮಾನಗಳಷ್ಟು ದೀರ್ಘ ಅವಧಿಯ ತನಕ ವ್ಯಾಪಿಸಿಕೊಂಡಿರುವ ಆಧುನಿಕ ಕನ್ನಡ ಸಾಹಿತ್ಯವು ನಿರ್ದಿಷ್ಟವಾದ ಒಂದು ಕಥನ ಪರಂಪರೆಯನ್ನು ಪೋಷಿಸಿಕೊಂಡು ಬಂದಿದೆ. ಕಥೆ ಮತ್ತು ಕಾದಂಬರಿಗಳು ಸೃಜನಶೀಲ ಅಭಿವ್ಯಕ್ತಿಯ ಸಮರ್ಥ ನಿರೂಪಗಳಾದುದರಿಂದ ಈ ಸಾಹಿತ್ಯ ಪ್ರಕಾರಗಳು ಪ್ರಕಟಿಸಿರುವ ತುಳು ಸಂಸ್ಕೃತಿಯ ಚಿತ್ರಣಗಳನ್ನು ದಾಖಲಿಸುವುದು ಮತ್ತು ಅಧ್ಯಯನಕ್ಕೆ ಒಳಪಡಿಸುವ ಇಂಗಿತವನ್ನು ಹೊಂದಲಾಗಿದೆ. ಹೊಸಗನ್ನಡ ಸಾಹಿತ್ಯದ ನೂರು ವರ್ಷದ ಅವಧಿಯ ಬರಹಗಳನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ/ದಲಿತ ಎಂಬ ಮಾನದಂಡದ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯ ಮಾನದಂಡಗಳನ್ನು ಗಮನಿಸದೆ ಪ್ರಾದೇಶಿಕವಾಗಿ ಅಧ್ಯಯನ ಕೈಗೊಳ್ಳಲಾಗುವುದು. ತುಳುನಾಡಿನ, ತುಳು ಸಂಸ್ಕೃತಿಯ ಹಿನ್ನೆಲೆಯಿಂದ ಬಂದ ಲೇಖಕರು ತಮ್ಮ ಕೃತಿಗಳಲ್ಲಿ ತುಳು ಸಂಸ್ಕೃತಿಯ ಚಹರೆಗಳನ್ನು ಸಹಜವಾಗಿ ಚರ್ಚಿಸುವ, ಅಭಿವ್ಯಕ್ತಿಸುವ ಪ್ರಯತ್ನ ಮಾಡಿದ್ದಾರೆ. 'ತುಳುನಾಡಿನ ಪ್ರಾತಿನಿಧಿಕ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ಸ್ವರೂಪ' ಎಂಬ ಶೀರ್ಷಿಕೆಯಲ್ಲಿ ನಾನು ತುಳು ಸಂಸ್ಕೃತಿಯ ಸ್ವರೂಪವನ್ನು ಕುರಿತು ಚರ್ಚಿಸಲು ಇಚ್ಛಿಸಿದ್ದೇನೆ. ಇದರ ಅರ್ಥವನ್ನು ಈ ರೀತಿಯಾಗಿ ನಾನು ಇಟ್ಟುಕೊಂಡಿದ್ದೇನೆ. ತುಳುನಾಡಿನ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿ ಎಂಬ ಅರ್ಥದಲ್ಲಿ ಇದರ ವಿಶ್ಲೇಷಣೆಯನ್ನು ಕೈಗೊಳ್ಳುತ್ತೇನೆ. ಅದರಲ್ಲಿ ವಿಶೇಷವಾಗಿ ಕನ್ನಡ ಕತೆ ಮತ್ತು ಕಾದಂಬರಿಗಳನ್ನು ಅನುಲಕ್ಷಿಸಿ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಆಯ್ದುಕೊಂಡು ಅಧ್ಯಯನವನ್ನು ಕೈಗೆತ್ತಿಕೊಂಡಿದ್ದೇನೆ. ಯಾಕೆಂದರೆ ಸಾಹಿತ್ಯ ಎಂದಾಕ್ಷಣ ಕಾವ್ಯ, ನಾಟಕ, ಜಾನಪದ ಎಲ್ಲವೂ ಸೇರುತ್ತದೆ. ನಾನು ವಿಶೇಷವಾಗಿ ೧೯೦೦ರಿಂದ ೨೦೧೫ರವರೆಗೆ ಒಟ್ಟು ೧೯ ಕಾದಂಬರಿಗಳು ಹಾಗೂ ೧೧ ಕತೆಗಾರರ ೧೧ ಕತೆಗಳನ್ನು ಚರ್ಚೆಗೆ ಕೈಗೆತ್ತಿಕೊಂಡಿರುತ್ತೇನೆ.
೧.ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿಗಳನ್ನು ದಾಖಲಿಸಲಾಗುವುದು.

೨. ಅಧ್ಯಾಯ ಎರಡರಲ್ಲಿ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗುವುದು.

೩. ಅಧ್ಯಾಯ ಮೂರರಲ್ಲಿ ತುಳು ಸಂಸ್ಕೃತಿಯ ನಿರ್ವಚನವನ್ನು ಮಾಡುವ ಪ್ರಯತ್ನ ಮಾಡಲಾಗುವುದು. ಭೂತಾರಾಧನೆ, ಕೋಳಿ ಅಂಕ, ಕಂಬಳಗಳು ತುಳುನಾಡಿನ ಕತೆ ಕಾದಂಬರಿಗಳಲ್ಲಿ ದಾಖಲಾದ ಬಗೆಯನ್ನು ಅರಿಯುವ ಪ್ರಯತ್ನ ಮಾಡಲಾಗುವುದು. ಬೇಟೆಯ ಚಿತ್ರಗಳು, ತುಳುನಾಡಿನ ಕುಣಿತಗಳು, ಜೀವನಾವರ್ತನ ಆಚರಣೆಗಳು, ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಕಾದಂಬರಿಗಳಲ್ಲಿ ನಿರೂಪಿತವಾದ ರೀತಿಯನ್ನು ಅಧ್ಯಯನ ಮಾಡಲಾಗುವುದು.

೪. ಅಧ್ಯಾಯ ನಾಲ್ಕರಲ್ಲಿ ತುಳುನಾಡಿನ ಕತೆ ಕಾದಂಬರಿಗಳಲ್ಲಿ ಇಂಗ್ಲಿಷ್ ಶಿಕ್ಷಣದ ಹಿನ್ನೆಲೆ ಮತ್ತು ತುಡಿತ, ಸಾಂಪ್ರದಾಯಿಕ ಮತ್ತು ಇಂಗ್ಲಿಷ್ ಶಿಕ್ಷಣದ ನಡುವಿನ ಸಂಘರ್ಷ, ಇಂಗ್ಲಿಷ್ ಭಾಷೆಯ ಪ್ರಭಾವ ಮತ್ತು ಪಲ್ಲಟಗಳು, ದೇಸಿ ಭಾಷೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

೫. ಅಧ್ಯಾಯ ಐದರಲ್ಲಿ ತುಳುನಾಡಿನ ಕತೆ ಕಾದಂಬರಿಗಳಲ್ಲಿ ಗಾಂಧಿ ಭೇಟಿಯ ಪ್ರಭಾವಗಳನ್ನು ಅರ್ಥೈಸುವ ಪ್ರಯತ್ನ ಮಾಡಲಾಗುವುದು. ತುಳುನಾಡಿಗೆ ಗಾಂಧಿ ಆಗಮಿಸಿದ್ದರಿಂದ ಉಂಟಾದ ಪ್ರಭಾವಗಳನ್ನು ನೂಲುವುದು ಮತ್ತು ಕಾಂಗ್ರೆಸ್ ಸದಸ್ಯತ್ವ, ಖಾದಿ ಪ್ರಚಾರ ಮತ್ತು ಮಾರಾಟ, ವಿದೇಶಿ ವಸ್ತ್ರ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ ಇತ್ಯಾದಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು.

೬. ಅಧ್ಯಾಯ ಆರರಲ್ಲಿ ತುಳುನಾಡಿಗೆ ಗಾಂಧೀಜಿಯ ಭೇಟಿಯ ಪರಿಣಾಮಗಳನ್ನು ಅಧ್ಯಯನ ಮಾಡಲಾಗುವುದು. ಗಾಂಧಿ ಭೇಟಿಯಿಂದ ಮದ್ಯಪಾನ ನಿಷೇಧ, ವಿಧವಾ ವಿವಾಹ, ಸರಳ ವಿವಾಹ, ಏಕರೂಪಿ ಸಂಸ್ಕೃತಿ ಹೇರಿಕೆ ಮೊದಲಾದ ಪರಿಣಾಮಗಳು ಉಂಟಾದ ಬಗೆಯನ್ನು ಅಧ್ಯಯನ ಮಾಡಲಾಗುವುದು. ಪತ್ರಿಕೆ ಮತ್ತು ಪುಸ್ತಕಗಳ ಪ್ರಭಾವ, ರಾಷ್ಟ್ರೀಯ ಶಾಲೆ ಸ್ಥಾಪನೆ, ಬೆಳವಣಿಗೆ, ಸಮಸ್ಯೆಗಳ ಕುರಿತು ತರ್ಕಿಸಲಾಗುವುದು.

೭. ಅಧ್ಯಾಯ ಏಳರಲ್ಲಿ ತುಳುನಾಡಿನ ಸಂಸ್ಕೃತಿಯಲ್ಲಿ ಪಲ್ಲಟ ಸೃಷ್ಟಿಸಿದ ಭೂಸುಧಾರಣೆ ಕಾನೂನಿನ ಅನುಷ್ಠಾನ, ಧನಿ-ಒಕ್ಕಲುಗಳ ನಡುವಿನ ಸಂಬಂಧ, ಭೂಸುಧಾರಣೆ ಕಾನೂನಿನಿಂದ ಕೃಷಿ ಮತ್ತು ಗುತ್ತಿನ ಮನೆಯ ಮೇಲಾದ ಪರಿಣಾಮಗಳು, ಕಾನೂನು ಮತ್ತು ಪಟ್ಟಭದ್ರರ ಕ್ರೌರ್ಯ, ಕೃಷಿ ಸಂಸ್ಕೃತಿ ಮತ್ತು ಆಧುನಿಕತೆಯ ತಲ್ಲಣಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

೮. ಅಧ್ಯಾಯ ಎಂಟರಲ್ಲಿ ತುಳುನಾಡಿನ ಕತೆ ಕಾದಂಬರಿಗಳು ಚಿತ್ರಿಸುವ ವಲಸೆಯ ವಿನ್ಯಾಸಗಳನ್ನು ಕುರಿತು ಅಧ್ಯಯನ ಮಾಡಲಾಗುವುದು. ತುಳುನಾಡಿನಿಂದ ಶೈಕ್ಷಣಿಕ ಮತ್ತು ಔದ್ಯೋಗಿಕ ವಲಸೆಗಳು, ತುಳುನಾಡಿಗೆ ವಲಸೆ, ವಲಸೆಯಿಂದ ತುಳುನಾಡಿನ ಮೇಲಾದ ಪರಿಣಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

೯. ಅಧ್ಯಾಯ ಒಂಬತ್ತರಲ್ಲಿ ತುಳುನಾಡಿನ ಕತೆ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಮಾತೃಪ್ರಧಾನ ವ್ಯವಸ್ಥೆ, ಮಾತೃಪ್ರಧಾನ ವ್ಯವಸ್ಥೆಗೆ ಬಂದ ತೊಡಕುಗಳು, ಕೆಳವರ್ಗದಲ್ಲಿ ಕೌಟುಂಬಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲಾಗುವುದು.

೧೦. ಅಧ್ಯಾಯ ಹತ್ತರಲ್ಲಿ ತುಳುನಾಡಿನ ಹೋಟೆಲ್, ಬೀಡಿ, ಪ್ರಾಣಿ ಸಾಕಾಣಿಕೆ, ಬ್ಯಾಂಕಿಂಗ್, ಜೇನು, ಮೀನುಗಾರಿಕೆ ಉದ್ಯಮಗಳು ಬೆಳೆದ ಬಗೆಯನ್ನು ದಾಖಲಿಸಲಾಗುವುದು.

೧೧. ಅಧ್ಯಾಯ ಹನ್ನೊಂದರಲ್ಲಿ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗುವುದು. ಅನುಬಂಧದಲ್ಲಿ ತುಳುನಾಡಿನ ಸಾಂಸ್ಕೃತಿಕ ಮಹತ್ವವನ್ನು ಸಾರುವ ಛಾಯಾಚಿತ್ರಗಳನ್ನು ಸಂಗ್ರಹಿಸಿ ಪ್ರಕಟಿಸಲಾಗುವುದು. ಪರಾಮರ್ಶನ ಗ್ರಂಥ ಹಾಗೂ ಆಕರ ಕೃತಿಗಳ ಪಟ್ಟಿಯನ್ನು ನೀಡಲಾಗುವುದು.

೧.೩. ಅಧ್ಯಯನದ ವ್ಯಾಪ್ತಿ

ಕ್ರಿ.ಶ. ೧೯೦೦ ರಿಂದ ೨೦೧೫ದವರೆಗಿನ ಕಾಲಘಟ್ಟದ ಅವಧಿಯಲ್ಲಿ ಪ್ರಕಟವಾದ ಪ್ರಾತಿನಿಧಿಕ ತುಳುನಾಡಿನ ಕತೆ ಹಾಗೂ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ತುಳುನಾಡಿನಲ್ಲಿ ಹಲವು ಕಥನಕಾರರು ಬರಹವನ್ನು ಕೈಗೊಂಡಿದ್ದರೂ, ಅಧ್ಯಯನದ ಉದ್ದೇಶಕ್ಕೆ ತಕ್ಕಂತೆ ಕತೆ ಹಾಗೂ ಕಾದಂಬರಿಗಳನ್ನು ಆಯ್ದುಕೊಳ್ಳಲಾಗಿದೆ. ಪ್ರಾದೇಶಿಕ ಕಾದಂಬರಿಗಳ ಅಧ್ಯಯನ ಇದಾಗಿದ್ದು, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಂಬ ವಿಂಗಡಣೆಯನ್ನು ಇಲ್ಲಿ ಕೈಬಿಡಲಾಗಿದೆ. ಇಲ್ಲಿ ಮುಖ್ಯವಾಗಿ ೯ ಕಾದಂಬರಿಕಾರರ ೧೯ ಕಾದಂಬರಿಗಳು ಹಾಗೂ ೧೧ ಕತೆಗಾರರ ೧೧ ಕತೆಗಳನ್ನು ಅಧ್ಯಯನಕ್ಕೆ ಆರಿಸಿಕೊಂಡಿದ್ದೇನೆ. ನಾನು ಆಯ್ದುಕೊಂಡ ಕತೆ ಕಾದಂಬರಿಗಳು ಉತ್ತಮ ಕಲಾಕೃತಿ ಎನ್ನುವುದಕ್ಕಿಂತ ಮಿಗಿಲಾಗಿ ತುಳುಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಆದ್ದರಿಂದ ಈ ಕತೆ ಕಾದಂಬರಿಗಳನ್ನು ಆಯ್ದುಕೊಂಡಿದ್ದೇನೆ.

೧.೪. ಅಧ್ಯಯನದ ವೈಧಾನಿಕತೆ

ತುಳು ಸಂಸ್ಕೃತಿಯ ನಿರೂಪಣೆಗೆ ಪ್ರಾಧಾನ್ಯತೆಯನ್ನು ನೀಡಿದ, ಪ್ರಾದೇಶಿಕವಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಬರಹಗಾರರ ಸೃಜನಶೀಲ ಅಭಿವ್ಯಕ್ತಿಯಾದ ಕತೆ, ಕಾದಂಬರಿಗಳನ್ನು ಕಾಲಬದ್ಧ ನೆಲೆಯಲ್ಲಿ ಅಯ್ದುಕೊಳ್ಳಲಾಗುವುದು. ಕತೆ ಮತ್ತು ಕಾದಂಬರಿಗಳಲ್ಲಿ ಪ್ರಕಟಗೊಳ್ಳುವ ಸಾಂಸ್ಕೃತಿಕ ಮಹತ್ವದ ನಿರೂಪಗಳು, ವಿವರಗಳು, ಅನನ್ಯತೆಯನ್ನು ಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುವುದು.

ಕಾಲದ ದೃಷ್ಟಿಯಿಂದ ಉಂಟಾಗುವ ಪಲ್ಲಟಗಳಿಗೆ ಕಾರಣ ಹುಡುಕಲಾಗುವುದು. ಆಧುನಿಕತೆ, ಉದಾರೀಕರಣ, ಮತ್ತು ಜಾಗತೀಕರಣ ಪ್ರಕ್ರಿಯೆಗಳು, ಏಕ ಸಂಸ್ಕೃತಿ, ಏಕಭಾಷೆಯ ಹೇರಿಕೆಯಂಥ ಒತ್ತಡಗಳು ಉಂಟುಮಾಡುವ ತಲ್ಲಣಗಳು ಸಂಸ್ಕೃತಿಯ ಬಹುರೂಪೀ ಆಯಾಮದಲ್ಲಿ ಬೀರಬಹುದಾದ ಪ್ರಭಾವದಿಂದ ಉಂಟಾಗುವ ಅಸ್ಮಿತೆಯ ಪ್ರಶ್ನೆಯನ್ನು ನಿರೂಪಿಸುವ ವೈಧಾನಿಕತೆಯನ್ನು ಹೊಂದಲಾಗಿದೆ. ಈ ಅಧ್ಯಯನವು ಏಕಕಾಲದಲ್ಲಿ ಸಾಹಿತ್ಯ ವಾಗ್ವಾದವನ್ನು ಮುಂದಿಟ್ಟುಕೊಂಡು ಸಂಸ್ಕೃತಿ ಮತ್ತು ಸಮಾಜವನ್ನು ಕೇಂದ್ರೀಕರಿಸಿಕೊಳ್ಳುವಂಥದ್ದು. ಈ ನಿಟ್ಟಿನಲ್ಲಿ ಸಮಾಜಕೇಂದ್ರಿತ ವೈಚಾರಿಕ ತಳಹದಿಯ ಅಧ್ಯಯನ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಲ್ಲಿ ವಿಶ್ಲೇಷಣಾ ವಿಧಾನವನ್ನು ಅಳವಡಿಸಲಾಗಿದೆ.

- ತುಳುನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿಯಿಂದ ಸಾಂಸ್ಕೃತಿಕ ಜಗತ್ತಿನ ಮೇಲಾದ ತಲ್ಲಣಗಳು ಹಾಗೂ ಸ್ಥಿತ್ಯಂತರಗಳ ಅಧ್ಯಯನ ಮಾಡುವುದು.
- ಭೂಮಸೂದೆ ಜಾರಿಯ ಪೂರ್ವ ಹಾಗೂ ನಂತರದ ದಿನಗಳಲ್ಲಿ ತುಳುನಾಡಿನ ಬದುಕಿನ ಮೇಲಾದ ಆಘಾತ, ಗೊಂದಲಗಳು ಹಾಗೂ ಬದಲಾವಣೆಗಳನ್ನು ದಾಖಲಿಸುವುದು.
- ಇಂಗ್ಲಿಷ್ ಅಧಿಕಾರದ ಭಾಷೆಯಾಗಿ, ವ್ಯವಹಾರದ ಭಾಷೆಯಾಗಿ ಜನಮಾನಸದ ಮೇಲೆ ಬೀರಿದ ಪ್ರಭಾವಗಳು ಹಾಗೂ ಇಂಗ್ಲಿಷ್ ಭಾಷೆಯ ಮೇಲಿನ ತುಡಿತ ವೃದ್ಧಿಯಾಗುವುದನ್ನು ಗುರುತಿಸುವುದು.
- ತುಳುನಾಡಿಗೆ ಆಧುನಿಕತೆ ಪ್ರವೇಶಿಸಿದಾಗ ಪರಂಪರೆಯ ಮೇಲೆ ಗೌರವ ಇರುವ ಮನುಷ್ಯರು ಎದುರಿಸಿದ ಬಗೆ ಕುತೂಹಲಕಾರಿಯಾಗಿದೆ. ಬದಲಾವಣೆಯನ್ನು ಸುಲಭವಾಗಿ ಒಪ್ಪಿಕೊಳ್ಳಲು ಕಾರಣವಾದ ಅಂಶಗಳ ಬಗ್ಗೆ ಅಧ್ಯಯನ ನಡೆಸುವುದು.
- ಕೃಷಿ ತೀವ್ರವಾದ ಆತಂಕ ಎದುರಿಸುತ್ತಿರುವುದು ಪ್ರಜ್ಞಾವಂತ ನಾಗರಿಕರು ತಿಳಿದಿರುವ ವಿಷಯ. ತುಳುನಾಡು ಕೃಷಿಯಲ್ಲೇ ಬದುಕು ಕಟ್ಟಿಕೊಂಡಿತ್ತು. ಕೃಷಿಯಿಂದ ಜನರು ದೂರಸರಿಯುತ್ತಿರುವ ಪಲ್ಲಟದ ಕುರಿತು ಚರ್ಚಿಸುವುದು.
- ತುಳುನಾಡಿನಿಂದ ಆರ್ಥಿಕತೆಯ ಕಾರಣದಿಂದ, ಉತ್ತಮ ವಿದ್ಯಾಭ್ಯಾಸದ ಫಲವಾಗಿ ದೊರೆತ ಉತ್ತಮ ಉದ್ಯೋಗಕ್ಕಾಗಿ ಜನರು ವಲಸೆ ಹೋಗಿದ್ದಾರೆ. ದಿನಗಳು ಸಾಗುತ್ತಿದ್ದಂತೆ ವಲಸೆಯ ಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚಳವಾಗುತ್ತಿದೆ. ಈ ಸ್ಥಿತ್ಯಂತರದ ಅಧ್ಯಯನ ನಡೆಸಬೇಕಾಗಿದೆ.
- ಆಧುನಿಕತೆಯಿಂದ ಪ್ರವೇಶಗೊಂಡ ಹೊಸ ಉದ್ಯಮಗಳು ಜನರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸಿದವು. ಇದರಿಂದ ಆದ ಪಲ್ಲಟಗಳನ್ನು ಗಮನಿಸುವುದು ಅನಿವಾರ್ಯವಾಗಿದೆ.
- ತುಳುನಾಡಿನ ಕೌಟುಂಬಿಕ ವ್ಯವಸ್ಥೆಯು ಆಧುನಿಕ ಕಾನೂನಿನಿಂದ ಪಲ್ಲಟಗೊಳ್ಳುತ್ತಿದೆ. ಆರ್ಥಿಕ ಲಾಭ ಗಳಿಸಬೇಕಾದರೆ ನಾವು ವ್ಯವಸ್ಥೆಯನ್ನು ಅಧಿಕಾರದ ಕಾನೂನಿಗೆ ತಕ್ಕಂತೆ ಬದಲಾಯಿಸುವುದು ಅಗತ್ಯವಾಗಿ ಬಿಡುತ್ತದೆ. ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಆ ವ್ಯವಸ್ಥೆಯಿಂದ ಸೂಕ್ತ ಲಾಭ ಮಾಡಿಕೊಳ್ಳುವುದು ಅಸಾಧ್ಯವಾಗುತ್ತದೆ.

ಅಡಿ ಟಿಪ್ಪಣಿ

೧. ತುಳು ಸಾಹಿತ್ಯ ಚರಿತ್ರೆ, ಡಾ.ಬಿ.ಎ.ವಿವೇಕ ರೈ, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ, ೨೦೦೭, ಪುಟ ೩೨.

೨. ತುಳು ಸಾಹಿತ್ಯ ಚರಿತ್ರೆ, ಡಾ.ಬಿ.ಎ.ವಿವೇಕ ರೈ, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ, ೨೦೦೭, ಪುಟ ೩೫.

೩. ಪೊಲಿ, ಪ್ರಸಂ. ಶ್ರೀ.ಎಂ.ಮುಕುಂದ ಪ್ರಭು, ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು, ೨೦೦೦, ಪುಟ ೫.

೪. ಪೊಲಿ, ಪ್ರಸಂ. ಶ್ರೀ.ಎಂ.ಮುಕುಂದ ಪ್ರಭು, ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು, ೨೦೦೦, ಪುಟ ೫.

೫. ಪೊಲಿ, ಪ್ರಸಂ. ಶ್ರೀ.ಎಂ.ಮುಕುಂದ ಪ್ರಭು, ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು, ೨೦೦೦, ಪುಟ ೬.

೬. ತುಳುನಾಡು, ಪಾದೂರು ಗುರುರಾಜ ಭಟ್, ಡಾ.ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್(ರಿ.), ಉಡುಪಿ, ೨೦೦೯, ಪುಟ ೬.

೭. W.Stock, Work of the mission, CSI, KSD, souvenir Ed. by M.R.T.Pai, ೧೯೯೧.

೮. ತುಳು ಸಾಹಿತ್ಯ ಚರಿತ್ರೆ, ಡಾ.ಬಿ.ಎ.ವಿವೇಕ ರೈ, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ, ೨೦೦೭.

೯. ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ರಹಮತ್ ತರೀಕೆರೆ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೨೦೦೭.

೧೦. ಕನ್ನಡ ಸಂಸ್ಕೃತಿ, ಮರಿಯಪ್ಪ ಭಟ್ಟ, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ ನಿಯಮಿತ ಬೆಂಗಳೂರು–೧೮, ೧೯೬೭, ಪುಟ ೩.

೧೧. ತುಳುನಾಡು, ಪಾದೂರು ಗುರುರಾಜ ಭಟ್, ಡಾ.ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್(ರಿ.), ಉಡುಪಿ, ೨೦೦೯, ಪುಟ ೧೯೭

೧೨. ತುಳು ಸಂಸ್ಕೃತಿಯ ಕೆಲವು ನೋಟಗಳು, ಡಾ.ಅಮೃತ ಸೋಮೇಶ್ವರ, ಕೊಡಿಮು, ವಿಶ್ವ ತುಳು ಸಮ್ಮೇಳನೊ ನೆಂಪು ಸಂಚಿ, ಉಜಿರೆ, ೨೦೦೯, ಪುಟ ೧೦೦.

ಅಧ್ಯಾಯ ೨. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೨. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಪ್ರಾದೇಶಿಕತೆಯನ್ನು ಆಂಗ್ಲಭಾಷೆಯಲ್ಲಿ ರೀಜನಾಲಿಟಿ ಎಂದು ಕರೆಯುತ್ತೇವೆ. ರಾಷ್ಟ್ರೀಯತೆಯ ವಿರುದ್ಧವಾಗಿ ಪ್ರಾದೇಶಿಕತೆ ಇದೆ. ರಾಷ್ಟ್ರೀಯತೆ ವಿವಿಧತೆಯಲ್ಲಿ ಏಕತೆಯನ್ನು ಸೂಚಿಸಿದರೆ, ಪ್ರಾದೇಶಿಕತೆಯು ಆಯಾ ಪ್ರದೇಶದ ವಿಶಿಷ್ಟತೆ, ಅನನ್ಯತೆಯನ್ನು ಉಳಿಸಿ ಬೆಳೆಸುವ, ಗುರುತಿಸುವ ಪ್ರಯತ್ನವಾಗಿದೆ. ಪ್ರತಿ ಪ್ರದೇಶವೂ ವಿಶಿಷ್ಟ ಮತ್ತು ಅನನ್ಯ. ತನ್ನ ಭೌಗೋಳಿಕ ಇರುವಿಕೆ, ಅಲ್ಲಿನ ಹವಾಗುಣ, ಬೆಳೆಯುವ ಸಸ್ಯವರ್ಗ ಪ್ರತಿ ಪ್ರದೇಶಗಳು ವಿಭಿನ್ನವಾಗಿ ರೂಪುಗೊಳ್ಳಲು ಕಾರಣವಾಗಿವೆ. ಒಂದೇ ರೀತಿಯ ಭೌಗೋಳಿಕ ಲಕ್ಷಣಗಳಿರುವ ಸ್ವಲ್ಪ ಭಿನ್ನತೆಗಳೊಂದಿಗೆ ಒಂದೇ ರೀತಿಯ ಮನೋಧರ್ಮ ರೂಪಿತವಾಗಲು ಪ್ರಯತ್ನಿಸುತ್ತದೆ. ಒಂದು ಪ್ರದೇಶದ ಜನರ ನಂಬಿಕೆ, ಆಚರಣೆಗಳು ಸಾಮ್ಯತೆಯನ್ನು ಹೊಂದಿರುತ್ತವೆ. ಆಯಾ ಪ್ರದೇಶದ ಜನಜೀವನ, ಸಂಸ್ಕೃತಿ ಅಲ್ಲಿಯೇ ಹುಟ್ಟಿ ಬೆಳೆದ ವ್ಯಕ್ತಿಯಬದುಕಿನ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತದೆ. ಕಥನ ಸಾಹಿತ್ಯದ ಮೂಲಕ ಒಬ್ಬ ಸಾಹಿತಿ ತಾನು ಕಂಡುಂಡ ಅನುಭವಗಳನ್ನು ದಾಖಲಿಸುವಾಗ ಅದು ನೈಜಕ್ಕೆ ಹತ್ತಿರವಾಗಿರುತ್ತದೆ. ದಿನನಿತ್ಯದ ಬದುಕೇ ಅಗಿರುತ್ತದೆ. ಅಲ್ಲಿ ಗಾಢವಾದ ಅನುಭವದ ಪ್ರಭಾವವಿದೆ. ಆಳವಾದ ಅನುಭವದಿಂದ ರಚಿತವಾದ ಕೃತಿ ಆಳಸ್ತರಕ್ಕೆ ಸೇರುತ್ತದೆ.

"ಒಬ್ಬ ಬರಹಗಾರ ಯಾವಾಗಲೂ ತಾನು ಹುಟ್ಟಿದ ಪರಿಸರಕ್ಕೆ ಒಂದಿಲ್ಲೊಂದು ಕಾರಣಕ್ಕೆ ಬದ್ಧನಾಗಿರುತ್ತಾನೆ. ಈ ಬದ್ಧತೆಯು ಅವನ ಬರಹದಲ್ಲಿ ಹೇಗೆ ವ್ಯಕ್ತವಾಗಿದೆಯೆಂಬುದನ್ನು ಅರ್ಥಮಾಡಿಕೊಳ್ಳುವುದೇ ಪ್ರಾದೇಶಿಕತೆ."[1] ಎಂಬುವುದನ್ನು ಗಮನಿಸಬಹುದು.

ಪ್ರಸ್ತುತ ನಿಬಂಧವು ತುಳುನಾಡಿನ ಪ್ರಾದೇಶಿಕ ಅಧ್ಯಯನಕ್ಕೆ ಸಂಬಂಧಿಸಿದ್ದು, ಇದುವರೆಗೆ ನಡೆದ ಅಧ್ಯಯನಗಳ ವಿವರಗಳು ಇಂತಿವೆ.

ಕನ್ನಡ ಸಂಸ್ಕೃತಿ ಬಗ್ಗೆ ಬಂದ ಕೆಲವು ಕೃತಿಗಳೆಂದರೆ ಮಾಸ್ತಿಯುವರ 'ಕನ್ನಡ ಜನತೆಯ ಸಂಸ್ಕೃತಿ', ದೇವುಡು ಅವರ 'ಕರ್ನಾಟಕ ಸಂಸ್ಕೃತಿ'(೧೯೩೫), ಚಿದಾನಂದ ಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'(೧೯೬೬), ಡಾ॥ ತಿಪ್ಪೇಸ್ವಾಮಿಯವರ 'ಕನ್ನಡ ಸಂಸ್ಕೃತಿ ಪೂರ್ವ ಪೀಠಿಕೆ'(೧೯೬೭), ತೇಜಸ್ವಿಯವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ', ಕುವೆಂಪುರವರ 'ಸಂಸ್ಕೃತಿ ಕ್ರಾಂತಿ ಕಹಳೆ ನಾಂದಿ', ಎಸ್.ಎಸ್.ಹಿರೇಮಠರವರ 'ಕರ್ನಾಟಕ ಜನಪದ ಸಂಸ್ಕೃತಿ', ಡಾ.ನಂ. ತಪಸ್ವೀಕುಮಾರ್ ಅವರ 'ಸಂಸ್ಕೃತಿ ವಿಕಾಸ' ಮುಖ್ಯವಾದವು. ಡಾ. ರಹಮತ್ ತರೀಕೆರೆಯವರ 'ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿ ಸಂಸ್ಕೃತಿ ಅಧ್ಯಯನಗಳು ನಡೆದು ಬಂದ ಹಾದಿ ಗುರುತಿಸುತ್ತಾ ಹೊಸ ಹಾದಿಯನ್ನು ಸೂಚಿಸುತ್ತದೆ. ಅಬ್ಬಲಿಗೆ ಕೃತಿಯಲ್ಲಿ ಸಂಸ್ಕೃತಿ ಕುರಿತ ಲೇಖನಗಳಿವೆ. ಮುಳಿಯ ತಿಮ್ಮಪ್ಪಯ್ಯನವರು ಗುರುತಿಸುವಂತೆ : "ವಿದ್ಯಾಭ್ಯಾಸ –ಲೋಕವ್ಯವಹಾರ ಜ್ಞಾನಗಳಿಂದ ಪಳಗಿ ಹದ ಪಡೆದ ಬುದ್ಧಿಗೆ ಸಂಸ್ಕಾರವೆಂದು ಹೆಸರು.

'ಸಮ್ಯಕ್ ಕಾರಯತಿ'(ಸರಿಯಾಗಿ ಮಾಡಿಸುತ್ತಿದೆ) ಎಂಬುದೇ ಆ ಪದದ ಅರ್ಥವು.[೨] ತುಳುನಾಡಿಗೆ ಸಂಬಂಧಪಟ್ಟಂತೆ ಚಾರಿತ್ರಿಕ ಅಂಶಗಳ ಮೇಲೆ ಹಲವು ವಿದ್ವಾಂಸರು ಬೆಳಕು ಚೆಲ್ಲಿದ್ದಾರೆ. ಸ್ಟರಕ್ ಜೆ.ಅವರ 'ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್', ಸ್ಟುವರ್ಟ್ ಎಚ್.ಎ. ಅವರ 'ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್', ಗಣಪತಿರಾವ್ ಐಗಳ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', ಸಾಲೆತ್ತೂರು ಬಿ. ಅವರ 'ಏನ್‌ಶ್ಯಂಟ್ ಕರ್ನಾಟಕ ಸಂಪುಟ ೧', ರಮೇಶ್ ಕೆ.ವಿ. ಅವರ 'ಎ ಹಿಸ್ಟರಿ ಆಫ್ ಸೌತ್ ಕೆನರಾ', ಗುರುರಾಜ ಭಟ್ ಪಿ. ಅವರ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್', ಉದಯವರ್ಮರಾಜ ಅವರ 'ತುಳುನಾಡಿನ ಗತವೈಭವ' ಇವು ಗಮನಿಸಬೇಕಾದ ಮುಖ್ಯ ಕೃತಿಗಳು. ತುಳುನಾಡಿನ ಚಾರಿತ್ರಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳು ಇವುಗಳಲ್ಲಿವೆ.

ತುಳುನಾಡಿನ ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ನಡೆದಿವೆ. ವಿದೇಶಿ ವಿದ್ವಾಂಸರು, ದೇಶಿ ವಿದ್ವಾಂಸರು ಈ ನಿಟ್ಟಿನಲ್ಲಿ ತೊಡಗಿ ಅಧ್ಯಯನಗಳನ್ನು ಕೈಗೊಂಡಿರುವುದು ಗಮನಾರ್ಹ. ಭೂತರಾಧನೆಯ ಕುರಿತು ಕ್ರಿ.ಶ. ೧೮೭೫ರಲ್ಲಿ ಎಂ.ಜೆ. ವಾಲ್‌ಹೌಸ್ 'On behalf of the Bhutas – Devil and ghost worship in western India' ಎಂಬ ಲೇಖನವನ್ನು ಬರೆದಿದ್ದಾರೆ. ಎ.ಸಿ. ಬರ್ನೆಲ್ ಅವರು 'The Devil worship of the Thuluva'(೧೮೯೪–೯೭) ಎಂಬ ಪಾಡ್ದನಗಳ ಸಂಕಲನದಲ್ಲಿ ೨೬ ಭೂತಗಳ ಪಾಡ್ದನಗಳನ್ನು ನೀಡಲಾಗಿದೆ. ೧೮೮೬ರಲ್ಲಿ ಮ್ಯಾನರ್‌ರವರು ಪಾಡ್ದನೊಳು ಎಂಬ ಕೃತಿ ರಚಿಸಿದ್ದಾರೆ. ಇದರಲ್ಲಿ ೨೧ ತುಳು ಪಾಡ್ದನಗಳಿವೆ. ೧೮೯೧ರ census of India Vol-13 part one: Madras' ಸಂಪುಟದ 'Religion : An Account of Chief Religion', ಆರ್ ಕಾಲ್ಡ್‌ವೆಲ್ ಅವರ ಲೇಖನ 'Demomology in South India', ಜೆ.ಸ್ಟರ್ರಕ್ ಸಂಪಾದಿಸಿರುವ 'District Manual of South Kanara vol.–೧ ಸಂಪುಟದ 'The people' ಮೊದಲಾದ ಅಧ್ಯಾಯಗಳಲ್ಲಿ ಭೂತಾರಾಧನೆಯ ವಿವರಗಳಿವೆ. ಶೀನಪ್ಪ ಹೆಗ್ಗಡೆಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಕಟ್ಟು'(೧೯೧೫), ಎಂ.ಗಣಪತಿ ರಾವ್ ಐಗಳ್ ಅವರ 'ಅತ್ತಾವರ ದೈವೊಂಗೊಳು'(೧೯೨೮), 'ತುಳುವಾಲ ಬಲಿಯೇಂದ್ರೆ'(೧೯೨೯), ಸತ್ಯಮಿತ್ರ ಬಂಗೇರ ಅವರ 'ಅಳಿಯ ಸಂತಾನದ ಕಟ್ಟ್‌ದ ಗುಟ್ಟು'–ಎಂಬ ತುಳು ಗ್ರಂಥ (೧೯೩೦), 'ತುಳು ಪಾಡ್ದನೊಳು'(೧೯೩೩), ಬಿ.ಎ. ಸಾಲೆತ್ತೂರು ಅವರ Ancient Karnataka vol. ೧: History of Tuluva ಗ್ರಂಥದ 'Life in Early Tuluva' ಎಂಬ ಅಧ್ಯಾಯ(೧೯೩೬), ಎಸ್. ಎಸ್.ಕಿಲ್ಲೆ ಮತ್ತು ಶೀನಪ್ಪ ಹೆಗ್ಗಡೆಯವರ 'ಪ್ರಾಚೀನ ತುಳುನಾಡು'(೧೯೫೪)ಎಂಬ ಗ್ರಂಥದ ನಾಲ್ಕನೆಯ ಭಾಗ, ಪಿ. ಗುರುರಾಜ ಭಟ್ ಅವರ Studies in Tuluva History and Culture(೧೯೭೪) ಗ್ರಂಥದ ಹನ್ನೊಂದು ಮತ್ತು ಹನ್ನೆರಡನೆಯ ಅಧ್ಯಾಯಗಳು–ಮೊದಲಾದ ಬರವಣಿಗೆಗಳಲ್ಲಿ ತುಳು ಸಂಸ್ಕೃತಿಯ ಆರಾಧನೆ, ಜೀವನಕ್ರಮಗಳ ಕಟ್ಟುಕಟ್ಟಳೆಗಳ ವಿವರವಿದೆ. ಬಿ.ಎ. ವಿವೇಕ ರೈ ಅವರ 'ತುಳು ಜನಪದ

ಸಾಹಿತ್ಯ', 'ಆನ್ವಯಿಕ ಜಾನಪದ', 'ತೌಳವಸಂಸ್ಕೃತಿ', 'ತುಳುವ ಅಧ್ಯಯನ ಕೆಲವು ವಿಚಾರಗಳು', ಅಮೃತ ಸೋಮೇಶ್ವರರ 'ಅವಿಲು', 'ತುಳು ಬದುಕು', 'ಕೊರಗರು', ಪುರುಷೋತ್ತಮ ಬಿಳಿಮಲೆಯವರ 'ಸುಳ್ಯ ಪರಿಸರದ ಗೌಡ ಜನಾಂಗ ಒಂದು ಸಾಂಸ್ಕೃತಿಕ ಅಧ್ಯಯನ', 'ಕರಾವಳಿ ಜಾನಪದ', 'ಕೂಡುಕಟ್ಟು' ,ಎ.ವಿ. ನಾವಡ ಮತ್ತು ಗಾಯತ್ರಿ ನಾವಡರ 'ಕಾಡ್ಯನಾಟ–ಪಠ್ಯ ಮತ್ತು ಪ್ರದರ್ಶನ, ಪಾಲ್ತಾಡಿ ರಾಮಕೃಷ್ಣ ಆಚಾರರ 'ಜಾನಪದ ಸ್ಪಂದನ', 'ಜನಪದ ಕುಣಿತಗಳು', ವಾಮನ ನಂದಾವರರ 'ಜನಪದ ಸುತ್ತಮುತ್ತ', 'ತುಳುವೆರೆ ಕುಸಾಲ್‌ಕುಸೆಲ್', 'ಸಿಂಗದನ', ಇ.ಆರ್.ಪಾಂಡುರಂಗ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಭೈರರು', ಕೆ. ಚಿನ್ನಪ್ಪ ಗೌಡರ 'ಭೂತಾರಾಧನೆ–ಜಾನಪದೀಯ ಅಧ್ಯಯನ', 'ಜಾಲಾಟ', 'ಭೂತಾರಾಧನೆ ಕೆಲವು ಅಧ್ಯಯನಗಳು', 'ಪನಿಯಾರ'(ಸಂ), ಸುಶೀಲಾ ಪಿ. ಉಪಾಧ್ಯಾಯ ಅವರ 'ಜನಪದ ಆರಾಧನೆ ಮತ್ತು ರಂಗಕಲೆ', ಕ.ವೆಂ. ರಾಜಗೋಪಾಲರ 'ತುಳುವರ ಆಚರಣೆಗಳಲ್ಲಿ ಕಲಾವಂತಿಕೆ', ಯು.ಪಿ. ಉಪಾಧ್ಯಾಯ, ಸುಶೀಲಾ ಉಪಾಧ್ಯಾಯ ಅವರ 'Bhuta worship–Aspects of a Ritualistic Theatre', ಪಿ. ಪದ್ಮನಾಭ ಅವರ 'Special Study Report on Bhuta–cult in South Canara District' (Census of India ೧೯೭೧), ರಾಮಕೃಷ್ಣ ಟಿ. ಶೆಟ್ಟಿ ಅವರ 'ತುಳು ಸಂಪೊತ್ತು', ಬನ್ನಂಜೆ ಬಾನು ಅಮೀನ್ ಮತ್ತು ಮೋಹನ್ ಕೋಟ್ಯಾನ್ ಅವರ 'ತುಳುನಾಡಿನ ಗರೊಡಿಗಳ ಸಾಂಸ್ಕೃತಿಕ ಅಧ್ಯಯನ', ಬೋಳ ಚಿತ್ತರಂಜನದಾಸ ಶೆಟ್ಟರ 'ಕಂಬಳ', ಎ.ವಿ.ನಾವಡರ 'ವಿವಕ್ಷೆ', ಶಿವರಾಮ ಕಾರಂತರ 'ಭೂತಾರಾಧನೆ' ಮೊದಲಾದ ಗ್ರಂಥಗಳು ತುಳು ಜಾನಪದದ ಬಗ್ಗೆ ಚರ್ಚಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಜೇಶ್ವರ ಗಣಪತಿ ರಾವ್ ಐಗಳ್, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ ೧೯೨೩. ತುಳುನಾಡಿನ ಆಡಳಿತ ವ್ಯವಸ್ಥೆಯ ಹಾಗೂ ಆಡಳಿತ ವಿಕೇಂದ್ರಿಕರಣದ ಬಗ್ಗೆ ಈ ಕೃತಿಯಲ್ಲಿ ವಿವರಿಸುತ್ತಾರೆ.

ತುಳುನಾಡಿನ ಲೇಖಕರು ಬರೆದ ಕಾದಂಬರಿಗಳನ್ನು ಆಧರಿಸಿ ಹಲವು ನೆಲೆಗಳಲ್ಲಿ ಅಧ್ಯಯನಗಳು ನಡೆದಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಎಂ.ಫಿಲ್ ಪ್ರಬಂಧಗಳು ತುಳುನಾಡಿನ ಕಾದಂಬರಿ ಹಾಗೂ ಸಾಂಸ್ಕೃತಿಕ ಆಯಾಮಗಳಿಗೆ ಸಂಬಂಧಪಟ್ಟಂತೆ ಚರ್ಚಿಸಿವೆ. ಜಗದೀಶ್ ಕೆರನಹಳ್ಳಿ 'ಹೆಜ್ಜೆ ಮತ್ತು ಗಾಂಧಿ ಬಂದ ಕಾದಂಬರಿಗಳ ಅಧ್ಯಯನ', ಪಿ.ಸಿ. ದಮಯಂತಿ ಅವರ 'ನಾಗವೇಣಿಯವರ ಗಾಂಧಿ ಬಂದ ಕಾದಂಬರಿಯ ಸಾಂಸ್ಕೃತಿಕ ಒಳನೋಟಗಳು', ಹರಿಣಾಕ್ಷಿ ಎಂ.ಡಿ. ಅವರ, 'ಉಲ್ಲಂಘನೆ ಕಾದಂಬರಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಸ್ತ್ರೀಕೇಂದ್ರಿತ ಸವಾಲುಗಳು', ವೀಣಾ ಕುಮಾರ್ ಅವರ, 'ಗಾಂಧಿ ಬಂದ ಕಾದಂಬರಿಯ ಒಂದು ಸಾಂಸ್ಕೃತಿಕ ಅಧ್ಯಯನ', ಕಿಟ್ಟು ಕೆ. ಅವರ, 'ಶ್ರೀ ಪ್ರಭಾಕರ ನೀರ್‌ಮಾರ್ಗ ಅವರ ಕಾದಂಬರಿಗಳಲ್ಲಿ ತುಳುವ ಸಂಸ್ಕೃತಿಯ ಪ್ರತಿನಿಧೀಕರಣ' ಪ್ರಬಂಧಗಳನ್ನು ಈ ದೃಷ್ಟಿಯಿಂದ ಗಮನಿಸಬಹುದು.

ಡಾ.ವಿಶ್ವನಾಥ ಕಾರ್ನಾಡ್ ಅವರ 'ತುಳುವರ ಮುಂಬಯಿ ವಲಸೆ : ಒಂದು ಅಧ್ಯಯನ' ಪ್ರಬಂಧದಲ್ಲಿ ಒಂದು ಶತಮಾನದ ತುಳುವರ ಮುಂಬಯಿ ವಲಸೆಯನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಇದು ಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಒಳಗೊಂಡಿದ್ದು ಸಂದರ್ಭಕ್ಕೆ ತಕ್ಕಂತೆ ಗ್ರಂಥ, ಲೇಖನ, ಪತ್ರಿಕಾ ಸಾಹಿತ್ಯವನ್ನು ಪೂರಕವಾಗಿ ಬಳಸಿಕೊಂಡಿದೆ. ಹನ್ನೊಂದು ಅಧ್ಯಾಯಗಳನ್ನು ಒಳಗೊಂಡಿದೆ. ಮುಂಬೈ ವಿಶ್ವವಿದ್ಯಾಲಯಕ್ಕೆ ಈ ಪ್ರಬಂಧವನ್ನು ಅರ್ಪಿಸಲಾಗಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕತೆಗಳ ಹುಟ್ಟು ಮತ್ತು ಬೆಳವಣಿಗೆ' ಸಂಶೋಧನಾ ಪ್ರಬಂಧವನ್ನು ಡಾ. ಸಬಿಹಾರವರು ರಚಿಸಿದ್ದು, ಸಣ್ಣ ಕತೆಗಳ ಕುರಿತು ಚರ್ಚಿಸಿದ್ದಾರೆ. 'ಭೂತಾರಾಧನೆ: ಒಂದು ಜಾನಪದೀಯ ಅಧ್ಯಯನ' ಸಂಶೋಧನಾ ಪ್ರಬಂಧವನ್ನು ಕೆ. ಚಿನ್ನಪ್ಪಗೌಡರು ಮಂಗಳೂರು ವಿಶ್ವವಿದ್ಯಾಲಯಕ್ಕೆ ೧೯೮೮ರಲ್ಲಿ ಸಲ್ಲಿಸಿದ್ದಾರೆ. 'ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಐತಿಹ್ಯಗಳು' ಎಂಬ ಶೀರ್ಷಿಕೆಯ ಅಡಿ ಸುಬ್ಬಣ್ಣ ರೈಯವರು ಐತಿಹ್ಯಗಳನ್ನು ಚರ್ಚಿಸಿದ್ದಾರೆ. 'ನಲಿಕೆ ಜನಾಂಗದ ಕುಣಿತಗಳು: ಒಂದು ಅಧ್ಯಯನ' ಎಂಬ ವಿಷಯವನ್ನು ಆಯ್ದು ಪಿ. ರಾಮಕೃಷ್ಣಾಚಾರ್ ಅಧ್ಯಯನ ಕೈಗೊಂಡಿದ್ದು ತುಳುನಾಡಿನ ನಲಿಕೆ ಜನಾಂಗದ ಕುಣಿತಗಳ ಕುರಿತು ಚರ್ಚಿಸಿದ್ದಾರೆ. 'ಮುಗೇರರ ಕುಣಿತಗಳು' ಅಭಯ್ ಕುಮಾರ್ ಅವರ ಸಂಶೋಧನಾ ಪ್ರಬಂಧ. ಇಂದಿರಾ ಹೆಗ್ಗಡೆ ಅವರ 'ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಡಾ. ರಾಜಶ್ರೀ ಅವರ 'ತುಳು ಜನಪದ ಇಹಪರ ಲೋಕದೃಷ್ಟಿ', ಸುಂದರ ಕೇನಾಜೆ ಅವರ 'ತುಳುನಾಡಿನ ಭತ್ತ ಬೇಸಾಯ' ಸಂಶೋಧನಾ ಪ್ರಬಂಧಗಳು. ಈ ಪ್ರಬಂಧಗಳನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ೨೦೦೨ರಲ್ಲಿ ಬರಗೂರು ರಾಮಚಂದ್ರಪ್ಪನವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ಕರ್ನಾಟಕ ಸಂಗಾತಿ' ಕೃತಿಯಲ್ಲಿ ಎ.ವಿ. ಪ್ರಸನ್ನ ಬರೆದ 'ಕರ್ನಾಟಕದಲ್ಲಿ ಭೂಸುಧಾರಣೆ' ಎಂಬ ಲೇಖನದಲ್ಲಿ ಭೂಸುಧಾರಣೆಯ ಉದ್ದೇಶ ಹಾಗೂ ಅಗತ್ಯತೆಗಳ ಕುರಿತು ವಿವರಿಸುವ ಪ್ರಯತ್ನ ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕೃತಿ(೨೦೦೭)ಯಲ್ಲಿ ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಸೂರ್ಯನಾಥ ಕಾಮತ್ ಅವರ ಲೇಖನವಿದೆ. ಬ್ರಹ್ಮ ಸಮಾಜ, ಕಾರ್ನಾಡ್ ಸದಾಶಿವರಾವ್, ಕುದ್ಮುಲ್ ರಂಗರಾವ್ ಅವರ ಹೋರಾಟದ ಚಿತ್ರಣವಿದೆ. ಇದೇ ಕೃತಿಯಲ್ಲಿ 'ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ–ಜನ ಸಾಮಾನ್ಯರ ಪಾತ್ರ' ಎಂಬ ಲೇಖನವನ್ನು ಡಾ.ಪೀಟರ್ ವಿಲ್ಸನ್ ಪ್ರಭಾಕರ್ ಬರೆದಿದ್ದಾರೆ. ಎಚ್. ನಾಗವೇಣಿ ಬರೆದ 'ವಸುಂಧರೆಯ ಗ್ಯಾನ' ಲೇಖನಗಳ ಗುಚ್ಛದಲ್ಲಿ 'ಗೇಣಿದಾರರ ಏಣಿಯಾಟ' ಲೇಖನದಲ್ಲಿ ದಕ್ಷಿಣ ಕನ್ನಡದಲ್ಲಿ ಭೂಮಾಲೀಕರ ಅಧಿಕಾರ ಕಡಿಮೆ ಮಾಡುವಲ್ಲಿ ಬೀಡಿ ಉದ್ಯಮ, ಹಂಚಿನ ಕಾರ್ಖಾನೆಗಳು ಹಾಗೂ ಭೂಸುಧಾರಣೆ ಕಾನೂನು ಯಶಸ್ವಿಯಾದುದರ ವಿವರಣೆಯಿದೆ.

ಈ ಮೇಲೆ ತಿಳಿಸಿದ ಕೃತಿಗಳು ತುಳುಸಂಸ್ಕೃತಿಯ ಚಿತ್ರವನ್ನು ಕೊಡಲು ಪ್ರಯತ್ನಿಸಿವೆ. ಆದರೆ ಇದುವರೆಗೆ ಕತೆ, ಕಾದಂಬರಿಗಳನ್ನು ನೋಡುವ, ವಿಶ್ಲೇಷಿಸುವ, ಅಧ್ಯಯನ ಮಾಡುವ

ಪ್ರಯತ್ನವನ್ನು ಯಾರೂ ಕೈಗೆತ್ತಿಕೊಂಡಿಲ್ಲ. ಕೈಗೊಂಡರೂ ಪಾರ್ಶ್ವಿಕವಾಗಿವೆ. ಸ್ವಲ್ಪ ಮಟ್ಟಿಗಿನ ಅಧ್ಯಯನಗಳು ನಡೆದಿವೆ. ಈ ಕಾರಣದಿಂದ ನಾನು ಕತೆ, ಕಾದಂಬರಿಗಳನ್ನು ಆಧರಿಸಿ ಆಧುನಿಕ ಕಾಲದ ಕೆಲವು ಪಠ್ಯಗಳನ್ನು ಗಮನದಲ್ಲಿರಿಸಿ ತುಳು ಸಂಸ್ಕೃತಿಯ ಚಿತ್ರವನ್ನು ಅನಾವರಣಗೊಳಿಸಲು ಬಯಸಿದ್ದೇನೆ.

ಅಡಿಟಿಪ್ಪಣಿ

೧. ಉಳುಮೆ, ರಾಜಪ್ಪ ದಳವಾಯಿ, ಭಾಗ್ಯಶ್ರೀ ಎಂಟರ್‌ಪ್ರೈಸಸ್, ಬೆಂಗಳೂರು, ೨೦೦೨, ಪುಟ ೧೨೫.

೨. ಅಬ್ಬಲಿಗೆ, ಸಂ. ಎನ್.ಜಿ. ಪಟವರ್ಧನ್, ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, ೨೦೦೩, ಪುಟ ೩.

ಅಧ್ಯಾಯ ೩. ತುಳುನಾಡಿನ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ನಿರ್ವಚನ

೩.೧. ತುಳು ಸಂಸ್ಕೃತಿಯ ನಿರೂಪಣೆ

೩.೨. ಜನಪದ ಆರಾಧನೆಗಳು (ಭೂತಾರಾಧನೆ–ಕೋಳಿ ಅಂಕ–ಕಂಬಳ)

೩.೩. ಜೀವನಾವರ್ತನ ಆಚರಣೆಗಳು

೩.೪. ತುಳುನಾಡಿನ ಕುಣಿತಗಳು

೩.೫. ಬೇಟೆಯ ಚಿತ್ರಗಳು

೩.೬. ತುಳುನಾಡಿನ ಕಥನ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ

ಅಧ್ಯಾಯ ೩. ತುಳುನಾಡಿನ ಕಥನ ಸಾಹಿತ್ಯದಲ್ಲಿ ತುಳು ಸಂಸ್ಕೃತಿಯ ನಿರ್ವಚನ

೩.೧. ತುಳು ಸಂಸ್ಕೃತಿಯ ನಿರೂಪಣೆ

ಅನನ್ಯತೆ ಎಂಬ ಪದವು ವಿಶಿಷ್ಟವಾದ ಎಂಬ ಅರ್ಥವನ್ನು ಸೂಚಿಸುತ್ತದೆ. ಅನನ್ಯತೆ ಎಂಬುದು ಒಂದು ವಿಷಯದ ವಿಶಿಷ್ಟತೆಯಾಗಿದ್ದು, ಅದರಿಂದಾಗಿ ಇತರ ವಿಷಯಗಳಿಂದ ಪ್ರತ್ಯೇಕಿಸಬಹುದಾದ ಗುಣಲಕ್ಷಣಗಳನ್ನು ಗುರುತಿಸಬಹುದಾಗಿದೆ. ಅನನ್ಯತೆ ಮತ್ತೆ ಮತ್ತೆ ಒಂದು ಸಮುದಾಯದಿಂದ ಜೀವಿಸಲ್ಪಟ್ಟು ರೂಢಿಗೊಂಡಂತಹ ಆಚರಣೆ, ಸಂಪ್ರದಾಯ, ನಂಬಿಕೆ ಆಗಿರಬಹುದು.

ತುಳು ಸಂಸ್ಕೃತಿಯು ತನ್ನದೇ ಆದ ಅನನ್ಯತೆಯನ್ನು ಹೊಂದಿದೆ. ಇತರೆ ಸಂಸ್ಕೃತಿಗಳೊಡನೆ ಸಂಸರ್ಗಗೊಂಡರೂ ಕೂಡ ವಿಶೇಷವಾಗಿ ಗುರುತಿಸಲಾಗುವ ಹಾಗೂ ಅನ್ಯ ಸಂಸ್ಕೃತಿಗಳಿಂದ ಬೇರೆಯದಾಗಿ ಗುರುತಿಸಲು ಸಾಧ್ಯವಾಗುವ ಲಕ್ಷಣಗಳನ್ನು ಅನನ್ಯತೆ ಎಂದು ಪ್ರತಿಪಾದಿಸಬಹುದು. ಆಧುನಿಕತೆ, ರಾಷ್ಟ್ರೀಯತೆ, ಯಂತ್ರ ನಾಗರೀಕತೆ, ಜಾಗತೀಕರಣದ ದಾಳಿ ನಡೆದಾಗಲೂ ಕೂಡ ಮೂಲ ಆಚರಣೆಗಳು ನಶಿಸದೆ ಬಲಗೊಳ್ಳುತ್ತವೆ. ಆಧುನಿಕತೆಯ ಉದ್ಭವವಾದ ಹಲವು ಸಂಕಟಗಳಾದ ಒತ್ತಡ, ಯಾಂತ್ರಿಕತೆ, ವೈಯಕ್ತಿಕತೆ ಕಳೆದುಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಮತ್ತೆ ಜೀವಂತಿಕೆಯನ್ನು ಈ ಅನನ್ಯತೆಗಳು ತರುತ್ತವೆ.

೧೯೯೦ರಲ್ಲಿ ಜಾಗತೀಕರಣ ಜಾರಿಗೆ ಬಂತು. ಜಾಗತೀಕರಣದ ಪ್ರಭಾವ ತುಳುನಾಡಿನಲ್ಲೂ ಆಗಿದೆ. ಜಾಗತೀಕರಣ ಕೇವಲ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ಸಾಂಸ್ಕೃತಿಕ ಕ್ಷೇತ್ರಕ್ಕೂ ದಾಳಿಯಿತ್ತಿದೆ. ಜಾಗತೀಕರಣದ ಪ್ರಭಾವಕ್ಕೆ ಒಳಗಾದ ಮೇಲೂ ಕೂಡ ತುಳುನಾಡಿನ ಮೂಲಬೇರುಗಳನ್ನು ಅಲ್ಲಾಡಿಸಲು ಸಾಧ್ಯವಾಗಿಲ್ಲ. ಇಲ್ಲಿನ ಆರಾಧನಾ ಪರಂಪರೆಯಾದ ಭೂತಾರಾಧನೆ, ಕುಣಿತಗಳಲ್ಲಿ ಒಂದಾದ ಯಕ್ಷಗಾನ, ನಾಗಮಂಡಲ, ಕಂಬಳ, ಕೋಳಿ ಅಂಕಗಳು ಇನ್ನೂ ಬಲಿಷ್ಠವಾಗಿವೆ. ಜಾಗತೀಕರಣದ ಆಗಮನದ ನಂತರ ತನ್ನ ಸಂಸ್ಕೃತಿಯ ಹುಡುಕಾಟವು ನಡೆದಿದೆ. ಅಂತರಾಷ್ಟ್ರೀಯ ಏಕತೆಯ ಎದುರು ತನ್ನ ಅನನ್ಯತೆ, ಅಸ್ಮಿತೆಯ ಕುರಿತು ಆಂತರಿಕ ಚಿಂತನೆಗಳು ನಡೆದಿವೆ. ಹಲವು ಕತೆ, ಕಾದಂಬರಿಗಳು ಈ ನೆಲೆಗಟ್ಟಿನಲ್ಲಿ ರೂಪಿತವಾಗಿದ್ದು, ಆಧುನಿಕ ಭರಾಟೆಯಲ್ಲಿ ತಮ್ಮ ಗಟ್ಟಿತನವನ್ನು ಹೊರಗೆಡಹುವಲ್ಲಿ ಯಶಸ್ವಿಯಾಗಿವೆ. ಪ್ರಾದೇಶಿಕ ಅನನ್ಯತೆಗಳನ್ನು ಬಿಂಬಿಸಿವೆ. ೧೯೯೦ರ ದಶಕದ ನಂತರ ಇಂತಹ ಪ್ರಾದೇಶಿಕ ಕಾದಂಬರಿಗಳು ಹೆಚ್ಚಾಗಿ ರೂಪುಗೊಂಡಿವೆ. ತಮ್ಮತನದ ಅಸ್ಮಿತೆಯನ್ನು ಹುಡುಕಾಡಿ ಇಂದಿನ ಪೀಳಿಗೆಗೆ ಅದನ್ನು ಶ್ರುತಪಡಿಸಿ ಬಲಪಡಿಸುವ ಉದ್ದೇಶವನ್ನು ಹೊಂದಿವೆ.

'ಉಲ್ಲಂಘನೆ' ಕಾದಂಬರಿಯ ಸುಂದರ ಆಧುನಿಕತೆಯ ಮನೋಭಾವ ಉಳ್ಳವನಾದರೂ ಆಂತರ್ಯದಲ್ಲಿ ತನ್ನ ಮೂಲಬೇರುಗಳನ್ನು ಮರೆತವನಲ್ಲ. ಆಧುನಿಕತೆಯ ಚಿಂತನೆಗಳನ್ನು ಹೊಂದಿದ್ದರೂ ನಾಗಮಂಡಲವನ್ನು ವಿಜೃಂಭಣೆಯಿಂದ ಆಚರಿಸುತ್ತಾನೆ. ಜಾಗತೀಕರಣವು ವಿಶ್ವವ್ಯಾಪಿ ಏಕತೆ ತರಲು ಪ್ರಯತ್ನಿಸಿದರೆ, ಈ ಕಾಲಘಟ್ಟದಲ್ಲಿ ರೂಪಿತವಾದ ಕಾದಂಬರಿಗಳು

ತಮ್ಮ ಸಾಂಸ್ಕೃತಿಕ ಅನನ್ಯತೆ ಬಿಂಬಿಸಲು ಪ್ರಯತ್ನಿಸಿವೆ. ಜಾಗತೀಕರಣಕ್ಕೆ ಪ್ರತಿಕ್ರಿಯೆಯಾಗಿ ತಮ್ಮ ಅಸ್ಮಿತೆ, ತಮ್ಮತನದ ಹುಡುಕಾಟ ಹಾಗೂ ಅದರ ಅನನ್ಯತೆ ಸ್ಥಾಪಿಸುವಲ್ಲಿ ಪ್ರಾದೇಶಿಕ ಕಾದಂಬರಿಗಳು ಪ್ರಯತ್ನವನ್ನು ಮಾಡಿವೆ. ತುಳುನಾಡಿನ ಧಾರ್ಮಿಕ ಸಂಸ್ಕೃತಿ ಹಿಂದಿಗಿಂತಲೂ ಬಲಿಷ್ಠವಾಗಿದೆ. ಅದರ ಬೇರುಗಳನ್ನು ಕಿತ್ತು ಹಾಕಲು ಸಾಧ್ಯವಾಗಿಲ್ಲ. ಜಾಗತೀಕರಣದ ಪ್ರಭಾವದಿಂದ ಬಂದ ಹೊಸತನವನ್ನು ಸ್ವೀಕರಿಸಿ ಇನ್ನೂ ಪ್ರಜ್ವಲಿಸುತ್ತಿದೆ.

ತುಳು ಸಂಸ್ಕೃತಿ ಎಂದಾಗ ಪ್ರಮುಖವಾಗಿ ಮಾತೃಪ್ರಧಾನ ವ್ಯವಸ್ಥೆ, ನಾಗಾರಾಧನೆ, ಭೂತಾರಾಧನೆ, ಯಕ್ಷಗಾನ, ಕಂಬಳ, ಕೋಳಿ ಅಂಕ ಮೊದಲಾದ ಸಂಗತಿಗಳು ಅನನ್ಯ ಎಂಬುದಾಗಿ ಗುರುತಿಸಲ್ಪಡುತ್ತವೆ.

ಮಾತೃಪ್ರಧಾನ ವ್ಯವಸ್ಥೆಯನ್ನು ತುಳುನಾಡಿನ ಅನನ್ಯತೆ ಎಂಬುದಾಗಿ ಗುರುತಿಸುವ ಕ್ರಮವಿದೆ. ಶೀನಪ್ಪ ಹೆಗ್ಡೆಯವರು ಇದನ್ನು ತುಳುನಾಡಿನ ಅನನ್ಯತೆಯಾಗಿ ಗುರುತಿಸುವ ಪ್ರಯತ್ನ ಮಾಡುತ್ತಾ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯ ರಾಯನ ಅಳಿಯಕಟ್ಟು' ಎಂಬ ಗ್ರಂಥವನ್ನು ರಚಿಸಿದ್ದಾರೆ. ಗ್ರಾಮ ಪದ್ಧತಿ, ಸಹ್ಯಾದ್ರಿ ಖಂಡ, ಪಾಡ್ದನಗಳು, ಸ್ಥಳಪುರಾಣಗಳು, ಐತಿಹ್ಯಗಳನ್ನು ಬಳಸಿ ಬಾರಕೂರು ಪರಿಸರದಲ್ಲಿ ಸೃಷ್ಟಿಯಾಗಿದೆ ಎಂದು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ತುಳು ಸಂಸ್ಕೃತಿಯಲ್ಲಿ ಕೃಷಿಗೆ ಅನನ್ಯವಾದ ಸ್ಥಾನವಿದೆ. ಕಾಡು ಕಡಿದು ಭತ್ತದ ಕೃಷಿ ಮಾಡಿದ ಸಾಧನೆ ಮೆಚ್ಚುವಂಥದ್ದು. ಊಳಿಗಮಾನ್ಯ ವ್ಯವಸ್ಥೆಯಡಿ ಭತ್ತದ ಕೃಷಿ ಮಹತ್ವದ ಸ್ಥಾನ ಪಡೆದಿತ್ತು. ನೇಜಿ ನೆಡುವಾಗ ಹಾಡುವ ಕಬಿತ ಹಾಗೂ ಉರಲ್‌ಗಳಿಗೆ ಸಾಂಸ್ಕೃತಿಕ ಮಹತ್ವವಿದೆ.

ಬೇಟೆ ಸಂಸ್ಕೃತಿ

ತಳಸಮುದಾಯಗಳು ಕಾಡಿನಲ್ಲಿ ಸಾಂಘಿಕ ಜೀವನ ನಡೆಸುತ್ತಿದ್ದು, ಮೇಲ್ವರ್ಗದವರಿಂದ ಕೆಲ ನಿಷೇಧಗಳನ್ನು ಅನುಭವಿಸುತ್ತಿದ್ದರು. ನಿರ್ಬಂಧಗಳು ಸಾಮಾನ್ಯವಾಗಿದ್ದವು. ಅವರು ಅವರದೇ ಆದ ಬದುಕನ್ನು ರೂಪಿಸಲು ಹಲವು ಚಾಣಾಕ್ಷ ತಂತ್ರಗಳು ಅನಿವಾರ್ಯವಾಗಿದ್ದವು. ಆರ್ಥಿಕ ಮೂಲಗಳ ಪ್ರತಿಕೂಲ ಲಭ್ಯತೆಯ ಸಂದರ್ಭದಲ್ಲಿ ಕಾಡು ಅದನ್ನು ಸರಿದೂಗಿಸಲು ಸಹಕಾರಿಯಾಗಿತ್ತು. ಕಾಡುಪ್ರಾಣಿಗಳ ಬೇಟೆ ಜೀವನೋಪಾಯವಾಗಿತ್ತು. ಸಂಕಷ್ಟದ ಸಂದರ್ಭದಲ್ಲಿ ಆಹಾರದ ಕೊರತೆ ಎದುರಾದಾಗ, ಬೇಟೆ ಕಾಪಾಡುತ್ತಿತ್ತು. ತಳಸಮುದಾಯದವರ ಧೈರ್ಯ ಹಾಗೂ ಮುನ್ನುಗ್ಗುವ ಪ್ರವೃತ್ತಿ ಗಮನಿಸುವಂಥಾದ್ದು.

ಕುಣಿತಗಳು ತುಳುನಾಡಿನ ಸಾಂಸ್ಕೃತಿಕ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. 'ಆಟಿಕಳಂಜ' ಕುಣಿತವನ್ನು ದಲಿತ ವರ್ಗದ ಮುಗೇರ ಮತ್ತು ನಲಿಕೆಯವರು ಮನೆಮನೆಗೆ ಭೇಟಿ ನೀಡುವ ಮೂಲಕ ಆಚರಿಸುತ್ತಾರೆ. ಆಟಿಕಳಂಜ ಆಟಿ ತಿಂಗಳಲ್ಲಿ ಮನೆಮನೆಗೆ ಬಂದು

ಮಾರಿಯನ್ನು ನಿವಾರಿಸುತ್ತಾನೆ ಎಂಬ ನಂಬಿಕೆ ಇದೆ. ಯಕ್ಷಗಾನವು ಪ್ರಮುಖ ಕಲೆಯಾಗಿದ್ದು ಪ್ರಸಿದ್ಧಿಯನ್ನು ಗಳಿಸಿದೆ.

ತುಳು ಸಂಸ್ಕೃತಿ ಎಂದಾಗ ಅದು ಇಲ್ಲಿ ನೆಲೆಸಿದ ತಳಸಮುದಾಯದ ಸಂಸ್ಕೃತಿಯಾಗಿದೆ. ತಳಸಮುದಾಯದವರು ತಮ್ಮದೇ ಆದ ಆಚರಣೆಗಳನ್ನು ಹೊಂದಿದ್ದರು. ಸಾಂಘಿಕ ಜೀವನ, ನಾಗರಿಕ ಸಮುದಾಯದಿಂದ ಪ್ರತ್ಯೇಕವಾಗಿ ಬದುಕುವಾಗ ಇದ್ದ ಸಾಂಸ್ಕೃತಿಕ ಅನನ್ಯತೆಗಳು ಆಡಳಿತಾತ್ಮಕ ಒತ್ತಡಗಳಿಗೆ ಒಳಗಾದಾಗ ದುರ್ಬಲಗೊಂಡವು. ರಾಜಕೀಯ ಬಲ ಇದ್ದ ಸಮುದಾಯಗಳು ತಮ್ಮ ಆಚರಣೆಗಳಿಗೆ ಅಧಿಕೃತತೆ ಪಡೆದರೆ, ತಳ ಸಮುದಾಯದ ಆಚರಣೆಗಳು ತಮಗೆ ಸಿಗುವ ಬೆಂಬಲ ಹಾಗೂ ಪರಂಪರೆಯ ಮೇಲಿನ ಒಲವಿನಿಂದ ಉಳಿಯುತ್ತವೆ. ತುಳುನಾಡಿನ ಸಾಂಸ್ಕೃತಿಕ ಬದುಕಿಗೆ ಉದಾಹರಣೆಯಾಗಿ ಬಂಟರು, ಮೊಗವೀರರು, ಪಂಬದರು, ಕೊರಗರು, ಬಿಲ್ಲವರು ಈ ಸಮುದಾಯದಲ್ಲಿ ಬಳಕೆಯಲ್ಲಿರುವ ಆಚರಣೆಗಳನ್ನು ಪ್ರಮುಖವಾಗಿಟ್ಟುಕೊಂಡು ಅನನ್ಯತೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಬಂಟರು

ಬಂಟ ಜನಾಂಗವು ತುಳುನಾಡಿನಲ್ಲಿ ಪ್ರತಿಷ್ಠಿತ ಜನಾಂಗವಾಗಿದ್ದು ಆಡಳಿತಾತ್ಮಕವಾಗಿ ಉನ್ನತ ಸ್ಥಾನಮಾನ ಹೊಂದಿತ್ತು. ಬಂಟರು ಬೇಸಾಯವನ್ನು ಪ್ರಧಾನ ವೃತ್ತಿಯಾಗಿ ಸ್ವೀಕರಿಸಿದ್ದರಿಂದ 'ಬಾರಗರು' ಎಂದೂ ಕರೆಯುತ್ತಾರೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಪ್ರಧಾನ ಅಧಿಕಾರ ಹೊಂದಿದ್ದು, ಆಚರಣೆ, ಆರಾಧನೆಗಳನ್ನು ಜೀವಂತವಾಗಿಡುವಲ್ಲಿ ಇವರ ಪಾತ್ರ ಪ್ರಧಾನವಾಗಿತ್ತು.

ಬಿಲ್ಲವರು

ತುಳುನಾಡಿನ ಪ್ರಮುಖ ಸಮುದಾಯಗಳಲ್ಲೊಂದಾದ ಬಿಲ್ಲವರು 'ಮೂರ್ತೆ' ಕೆಲಸವನ್ನು ಪ್ರಧಾನವಾಗಿ ಮಾಡುತ್ತಾರೆ. ತಾಳೆಮರದಿಂದ ಹೆಂಡ ಇಳಿಸುವುದನ್ನು ಮೂರ್ತೆಗಾರಿಕೆ ಎನ್ನುವರು. ಬಿಲ್ಲವರಿಗೆ ಬಿರುವ, ಬೈದ್ಯ, ಪೂಜಾರಿ ಮುಂತಾದ ಉಪನಾಮಗಳೂ ಇವೆ.

ಮೊಗವೀರರು

ತುಳುನಾಡಿನ ಪ್ರಮುಖ ಜನಾಂಗವಾದ 'ಮೊಗವೀರರು' ಮೀನು ಹಿಡಿಯುವ ಕಾಯಕವನ್ನು ಮಾಡುತ್ತಾರೆ. ಕರಾವಳಿ ಪ್ರದೇಶವನ್ನು ಹೊಂದಿದ ತುಳುನಾಡಿನಲ್ಲಿ ಇವರ ವೃತ್ತಿಗೆ ವಿಪುಲ ಅವಕಾಶವಿದೆ. ಇವರನ್ನು ತುಳುಭಾಷೆಯಲ್ಲಿ 'ಮರಕಲ' ಎಂದೂ ಕರೆಯುವರು.

ಕೊರಗರು

ಕೊರಗರು ಇಲ್ಲಿನ ಮೂಲನಿವಾಸಿಗಳಾಗಿದ್ದು ಕಾಡುಗಳಲ್ಲಿ ಗುಂಪಾಗಿ ವಾಸಿಸುತ್ತಿದ್ದರು. ತಮ್ಮದೇ ಆದ ವಿಶಿಷ್ಟ ಭಾಷೆ, ಆಚರಣೆಗಳನ್ನು ಹೊಂದಿದ್ದು ಇತರರಿಂದ ಭಿನ್ನವಾಗಿ ಗುರುತಿಸಬಹುದು. ಡೋಲು ಕೊರಗರ ಅನನ್ಯತೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕಾಡಿನ ಉತ್ಪನ್ನಗಳಿಂದ ಇವರ ಬದುಕು ಸಾಗುತ್ತಿತ್ತು. ಕೊರಗರು ಕಾಡನ್ನು ಆವಾಸಸ್ಥಾನವನ್ನಾಗಿ ಹೊಂದಿದ್ದು, ಕಾಡಿನ ಬಿಳಲುಗಳಿಂದ ಹೆಣೆಯುವ ಕಾಯಕ ಮಾಡುತ್ತಾ, ಕಾಡುತ್ಪತ್ತಿ ಸಂಗ್ರಹ ಮಾಡುತ್ತಾ ಬದುಕು ಕಟ್ಟಿಕೊಂಡವರು. ಕೊಡ್ತಾಯಿ ಎನ್ನುವ ನಾಯಕ, ದೈವಾರಾಧನೆಗೆ ಒಬ್ಬ ಪೂಜಾರಿ ಅನಿವಾರ್ಯವಾಗಿದ್ದರು. ಕೊರಗರ ಮನೆಗಳಿಗೆ ಕೊಟ್ಟ ಎಂಬ ಹೆಸರಿತ್ತು.

ಕುಡಿಯರು

ಕುಡಿಯರು ಇಲ್ಲವೆ ಮಲೆಕುಡಿಯರು ತುಳುನಾಡಿನ ಪ್ರಮುಖ ಜನಾಂಗ. ಕಾಡನ್ನು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡಿರುವ ಕುಡಿಯರು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದವರು. ಮಾನವ ಬದುಕಿಗೆ ಅಗತ್ಯವಾಗಿ ಬೇಕಾದದ್ದು ನಿಲ್ಲಲು ಭದ್ರ ತಾಣ, ಧೈರ್ಯಕ್ಕಾಗಿ ಹಾಗೂ ಭಾವನೆಗಳನ್ನು ಹಂಚಲು ತಮ್ಮಂತೆ ಇರುವ ಮನುಷ್ಯರು, ಕುಡಿಯಲು ನೀರು, ನಂಬಿಕೆಗೆ ದೈವಾರಾಧನೆ, ತಿನ್ನಲು ಆಹಾರ, ಸಮೂಹ ವ್ಯವಸ್ಥೆಗೆ ಮುಂದಾಳು. ಆತನ ಮಾರ್ಗದರ್ಶನದಲ್ಲಿ ಪರಂಪರೆಯ ನಂಬಿಕೆಗಳಿಗೆ ಬದ್ಧವಾದ ನಡೆಯಿಂದ ನೀತಿ ನಿಯಮಗಳು. ಈ ರೀತಿ ಸರಳವಾಗಿ, ಸ್ವಾವಲಂಬಿಗಳಾಗಿ ಬದುಕಿದವರು ಮಲೆಕುಡಿಯರು. ಅವರು ಶ್ರಮಜೀವಿಗಳು, ಕಷ್ಟಸಹಿಷ್ಣುಗಳು ಆಗಿದ್ದರು. ಕಾಡಿನ ಮೃಗಗಳ ಸೂಕ್ಷ್ಮತೆಯನ್ನು ಅರಿಯುತ್ತಾ ಅವುಗಳೊಂದಿಗೆ ಸಹಬಾಳ್ವೆ ನಡೆಸಿದವರು. ಕ್ರೂರಮೃಗಗಳಿಂದ ಆಕ್ರಮಣಗಳು ಎದುರಾದಾಗ ಸೆಣಸಿ ಧೈರ್ಯಕ್ಕೆ ಹೆಸರಾದವರು.

ಕಲ್ಕುಡನ ಆರಾಧನೆ ಅವರ ನಂಬಿಕೆಗೆ ಸಂಬಂಧಿಸಿದೆ. ದೈವಾರಾಧನೆಯನ್ನು ನಿಷ್ಠೆಯಿಂದ ತಪ್ಪದೆ ಪಾಲಿಸಿಕೊಂಡು ಬರುವ ಜನಾಂಗ. ದೈವಾರಾಧನೆಗೆ ಮುಖ್ಯ ಕಾರಣ ಭಯ. ಆಕಸ್ಮಿಕ ಸಾವು, ಕಾಯಿಲೆ, ದುರ್ಮರಣಗಳು ಸಂಭವಿಸಿದಾಗ ಮೊದಲು ಕಾಣಿಸುವ ಭಯವೇ ದೈವದ್ದು. ದೈವ ಮುನಿದಿದೆ; ಬಲಿ ತೆಗೆದುಕೊಳ್ಳುತ್ತದೆ ಎಂಬ ನಂಬಿಕೆ ಆರಾಧನೆಗೆ ಪ್ರೇರೇಪಿಸುತ್ತದೆ.

ಕುಡಿಯರಲ್ಲಿ ಗುಂಪುಗುಂಪಾಗಿ ನೆಲೆಸುವ ಕ್ರಮವಿದೆ. ಎದುರಾಗುವ ಭಯ, ಆಕಸ್ಮಿಕಗಳನ್ನು ಜೊತೆಯಾಗಿದ್ದರೆ ಎದುರಿಸುವುದು ಸುಲಭ. ಜನರು ಸಾಂಘಿಕವಾಗಿ ನೆಲೆಸಲು ಆರಂಭಿಸುವಾಗ ಕೆಲವು ಸಾಮೂಹಿಕ ನಿಯಮಗಳು ಅಗತ್ಯವೆನಿಸುತ್ತವೆ. ಈ ನಿಯಮಗಳನ್ನು ಮೀರಿದಾಗ ತಪ್ಪು ಕಾಣಿಕೆ ನೀಡಿ ಮತ್ತೆ ಸಮೂಹ ಜೀವನದಲ್ಲಿ ಸೇರುವ ಪದ್ಧತಿಗಳು ಆಚರಣೆಯಲ್ಲಿದ್ದವು. ಕುಟುಂಬ ಇಲ್ಲವೆ ವ್ಯಕ್ತಿ ಏಕಾಂಗಿಯಾದಾಗ ಮನೋವ್ಯಥೆ ಮಾತ್ರವಲ್ಲದೆ, ಕುಮರಿ ಬೇಸಾಯ ಮಾಡಲು ಅಪಾರ ಪರಿಶ್ರಮ ಬೇಕಾಗುತ್ತದೆ. ಆದ್ದರಿಂದ ಏಕಾಂಗಿಯಾಗಿ ಬದುಕುವುದು ಕಷ್ಟ. ತಪ್ಪು ಮಾಡಿದವರಿಗೆ ಸಾಮಾಜಿಕ ಬಹಿಷ್ಕಾರಗಳಿದ್ದಂತೆ, ತಪ್ಪಿಗೆ ಸೂಕ್ತ ದಂಡ

ನೀಡಿ ಮತ್ತೆ ಸೇರುವ ಅವಕಾಶವು ಇತ್ತು. ಮಹಿಳೆಯರಿಗೆ ಸ್ವಾತಂತ್ರ್ಯವಿತ್ತು. ಮರುವಿವಾಹಕ್ಕೂ ಯಾವುದೇ ತೊಡಕಿರಲಿಲ್ಲ. ಬಹುಪತ್ನಿತ್ವವೂ ರೂಢಿಯಲ್ಲಿದ್ದದ್ದು ಕಂಡುಬರುತ್ತದೆ. ಬೇಟೆಯಾಡುವುದು ಆಹಾರದ ಮೂಲವಾಗಿತ್ತಲ್ಲದೆ ಕ್ರೂರ ಪ್ರಾಣಿಗಳಿಂದ ರಕ್ಷಣೆಗೂ ಅನಿವಾರ್ಯವಾಗಿತ್ತು.

ಪಂಬದರು

ತುಳುನಾಡಿನ ಪ್ರಮುಖ ಜನಾಂಗವಾಗಿದ್ದು ಭೂತಾರಾಧನೆಯನ್ನು ಮಾಡಿ ತಮ್ಮ ಬದುಕು ಸಾಗಿಸುತ್ತಿದ್ದರು. ಆರಾಧನೆಯಲ್ಲಿ ಇವರ ಪಾತ್ರ ಮಹತ್ವದ್ದು. ಮನೆಯ ಹೆಂಗಸರು ಅಣಿ ಕಟ್ಟುವಲ್ಲಿ, ಪಾಡ್ದನ ಹಾಡುವಲ್ಲಿ ಸಹಾಯಹಸ್ತ ಚಾಚುತ್ತಿದ್ದರು.

ತುಳುನಾಡಿನಲ್ಲಿ ತಳಸಮುದಾಯದ ಹಲವು ಜನಾಂಗಗಳಿದ್ದರೂ ಕಥನ ಸಾಹಿತ್ಯದಲ್ಲಿ ಪ್ರಮುಖವಾಗಿ ಗುರುತಿಸಲಾದ ಜನಾಂಗಗಳು ನಿರ್ದಿಷ್ಟವಾಗಿವೆ. ಇಲ್ಲಿ ಪ್ರತಿಯೊಂದು ಜನಾಂಗದ ಬದುಕಿನ ರೀತಿನೀತಿ, ಆಚರಣೆ, ಸಾಮಾಜಿಕ ಕಟ್ಟುಕಟ್ಟಳೆಗಳು, ಆರ್ಥಿಕ ಮೂಲ, ಜೀವನಾವರ್ತನ ಘಟನೆಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳು ಇವೆ. ಈ ಜನಾಂಗಗಳು ಅನ್ಯ ಜನಾಂಗದ ಪ್ರಭಾವವಿಲ್ಲದೆ ಸ್ವತಂತ್ರವಾಗಿ ಬದುಕುವ ಕ್ಷಣದಲ್ಲಿ ಅದರ ಅನನ್ಯತೆಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಿದೆ. ಕಾಡು ತ್ಯಜಿಸಿ ನಾಗರಿಕ ಲೋಕವನ್ನು ಪ್ರವೇಶಿಸಿದ ಕೂಡಲೇ ಅನನ್ಯತೆಗಳು ಮಾರ್ಪಾಡುಗೊಳ್ಳಲು ರಾಜಕೀಯ, ಆರ್ಥಿಕ, ಸಾಮಾಜಿಕ ಒತ್ತಡಗಳು ಕಾರಣೀಭೂತವಾಗುತ್ತವೆ. ಅನನ್ಯತೆ ಎಂದಾಗ ಅದು ಒಂದು ಕಾಲಕ್ಕೆ ಸೀಮಿತವಾಗುತ್ತದೆ. ಕಾಲದ ಒತ್ತಡಕ್ಕೆ ಮಣಿದು ಬದಲಾದಾಗಲೂ ತನ್ನ ಮೂಲ ಅಸ್ತಿತ್ವದ ಕಡೆ ತುಡಿಯುವುದು, ಬಲಪಡಿಸುವುದು ವಿದ್ಯಾವಂತ ನಾಗರಿಕರಲ್ಲೂ ಗುರುತಿಸಲು ಸಾಧ್ಯವಿದೆ.

೩.೨. ಜನಪದ ಆಚರಣೆಗಳು(ಭೂತಾರಾಧನೆ–ಕಂಬಳ–ಕೋಳಿ ಅಂಕ)

ತುಳುನಾಡಿನ ಸಂಸ್ಕೃತಿಯ ಪ್ರಮುಖ ಭಾಗವೇ ಭೂತಾರಾಧನೆ. ತುಳುನಾಡಿನ ತಳಸಮುದಾಯದವರ ಆರಾಧನಾ ಕ್ರಮವೇ ಭೂತಾರಾಧನೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಭೂತಾರಾಧನೆಯ ಇತಿಹಾಸವನ್ನು ಕೆದಕಿದರೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಭೂತಾರಾಧನೆಯ ಕುರಿತು ಶಾಸನಗಳಲ್ಲಿ ಉಲ್ಲೇಖಗಳು ದೊರೆಯುವುದರಿಂದ ಹಿಂದಿನ ಕಾಲದಿಂದಲೂ ರೂಢಿಯಲ್ಲಿತ್ತು ಎಂದು ತಿಳಿದುಬರುತ್ತದೆ. “ಸುಮಾರು ಕ್ರಿ.ಶ.೧೪೫೦ರಲ್ಲಿ ಬರೆದ ನಂದಳಿಕೆಯ ಶಾಸನವೊಂದರಲ್ಲಿ ಭೂತದ ಉಲ್ಲೇಖ ಸಿಗುತ್ತದೆ. ಕ್ರಿ.ಶ.೧೫೫೬ರ ಶಾಸನದಲ್ಲಿ ವಿಟ್ಲದ ಅರಸರಾದ ಡೊಂಬ ಹೆಗ್ಗಡೆಯವರು ಮಲೆರಾಯ ಭೂತಕ್ಕೆ ಉಂಬಳಿ ಬಿಟ್ಟ ಉಲ್ಲೇಖವಿದೆ.”[೨] ಆದ್ದರಿಂದ ೧೪ನೇ ಶತಮಾನದ ಪೂರ್ವದಿಂದಲೂ ಭೂತಾರಾಧನೆ ತುಳುನಾಡಿನಲ್ಲಿ ಇತ್ತು ಎಂಬುದಕ್ಕೆ ದಾಖಲೆಗಳು ಲಭ್ಯವಾಗುತ್ತವೆ.

ಭೂತಾರಾಧನೆ ತುಳುನಾಡಿನಲ್ಲಿ ವ್ಯಾಪಕವಾಗಿ ಹರಡಿದ್ದು, ಅದರ ಹಿಂದಿನ ಉದ್ದೇಶ, ಆರಾಧನೆಯ ಕಾರಣಗಳನ್ನು ಹುಡುಕುತ್ತಾ ಹೋದಂತೆ ಹಲವು ವಿಚಾರಗಳು ಸ್ಪಷ್ಟವಾಗುತ್ತಾ

ಹೋಗುತ್ತವೆ. ಭೂತಾರಾಧನೆಯಲ್ಲಿ ಸಾಮಾನ್ಯ ಜನರಿಗಿಂತ ಅಸಾಮಾನ್ಯವಾಗಿ ಬದುಕಿ ಬಾಳಿದವರು, ಶೋಷಣೆಯನ್ನು ಪ್ರತಿಭಟಿಸಿದವರು, ಆಡಳಿತಾತ್ಮಕ ಶಕ್ತಿಗಳಿಂದ ದುರಂತಕ್ಕೆ ತುತ್ತಾದವರನ್ನು ಆರಾಧಿಸುತ್ತಾರೆ. ಉದಾಹರಣೆಗೆ ಕೋಟಿ–ಚೆನ್ನಯ. ತಮ್ಮ ಬೆಳೆಗಳಿಗೆ ತೊಂದರೆ ಕೊಡುವ ಪ್ರಾಣಿಗಳನ್ನು ಆರಾಧಿಸುವ ಕ್ರಿಯೆಯಾಗಿ ಗಮನಸೆಳೆಯುತ್ತದೆ. ಉದಾಹರಣೆಗೆ ಪಂಜುರ್ಲಿ,ಪಿಲಿಭೂತ ಮೊದಲಾದವು. ಭೂತಗಳು ಜನರಿಗೆ ಧೈರ್ಯ, ಶಾಂತಿ, ಮಾನಸಿಕ ಬೆಂಬಲವನ್ನು ಒದಗಿಸುವ, ಕಷ್ಟಕಾಲದಲ್ಲಿ ಸ್ಥೈರ್ಯ ಪಡೆಯುವ ಶಕ್ತಿಯಾಗಿ ಗಮನಸೆಳೆಯುತ್ತವೆ. ತಾವು ನಂಬಿದ ದೈವ ಕೈ ಬಿಡುವುದಿಲ್ಲ ಎಂಬ ನಂಬಿಕೆ ಬದುಕಿನ ಹಲವು ಆಘಾತಗಳನ್ನು ಸಹಿಸಲು, ಮುನ್ನಡೆಯಲು ಸ್ಫೂರ್ತಿ ನೀಡುವಂಥದು. ಭೂತಾರಾಧನೆಯನ್ನು ತುಳುನಾಡಿನ ಮೂಲನಿವಾಸಿಗಳಲ್ಲಿ ಪ್ರಧಾನವಾಗಿ ಗುರುತಿಸಬಹುದು. ತುಳುನಾಡು ವೃತ್ತಿ ಪ್ರಧಾನವಾಗಿತ್ತು. ಕ್ರಮೇಣ ಆಯಾ ವೃತ್ತಿ ನಡೆಸುವವರೂ ತಮ್ಮ ತಮ್ಮಲ್ಲೇ ವಿವಾಹ ಸಂಬಂಧಗಳನ್ನು ಏರ್ಪಡಿಸಿದ ಕಾರಣ ಹಲವು ಜಾತಿ, ಪಂಗಡಗಳು ಹುಟ್ಟಿಕೊಂಡವು. ನಲಿಕೆ, ಪರವ, ಪಂಬದ ಜಾತಿಯವರು ಭೂತಗಳನ್ನು ಕಟ್ಟುವವರು. ಇಂದಿಗೂ ಈ ತಳಸಮುದಾಯದವರೆ ಭೂತಾರಾಧನೆಯ ವಿಧಿವಿಧಾನಗಳನ್ನು ಆಚರಿಸುವ ಹೊಣೆ ಹೊತ್ತಿರುವುದನ್ನು ಗಮನಿಸಿದರೆ ಇವರು ಮೂಲತಃ ಭೂತಾರಾಧಕರು. ಮುಂದೆ ವಲಸೆ ಬಂದ ಇತರೆ ಜನಾಂಗಗಳು ಇಲ್ಲಿನ ಆಡಳಿತದ ಹೊಣೆ ಹೊತ್ತಾಗ ಅನಿವಾರ್ಯವಾಗಿ ಗ್ರಾಮ ಭೂತಗಳ ಕೈಂಕರ್ಯದ ಜವಾಬ್ದಾರಿ ವಹಿಸಬೇಕಾಗಿದ್ದು, ಅದನ್ನು ನಿಷ್ಠೆಯಿಂದ ಪಾಲಿಸಿದ್ದನ್ನು ತಿಳಿಯಬಹುದು. ಹೀಗೆ ಜೈನರು, ಬ್ರಾಹ್ಮಣರು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ಆರಾಧನೆಗಳನ್ನು ಮಾಡಲೇಬೇಕಾದ ಇಲ್ಲವಾದರೆ ಅಧಿಕಾರ ಕಳಕೊಳ್ಳುವ ಭೀತಿಗೆ ಒಳಗಾಗಿ ಊರಿಗಾಗಿ ಅವೆಲ್ಲವನ್ನೂ ಮಾಡಬೇಕಾಗಿ ಬಂತು. 'ಗಾಂಧಿ ಬಂದ' ಕಾದಂಬರಿಯಲ್ಲಿ ಹೆಬ್ಬಾರರು ಊರಿನ ಪಟೇಲರಾಗಿ ಊರಿನ ಸಮಸ್ತ ಕಾರ್ಯಗಳ ಮೇಲುಸ್ತುವಾರಿ ವಹಿಸಬೇಕಾಗಿತ್ತು. ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದರೂ ಭೂತಾರಾಧನೆಯನ್ನು ಅವರು ನಡೆಸುತ್ತಾರೆ. ಅದೇ ರೀತಿ ಗುತ್ತು ಮನೆತನದವರೂ ಊರಿನ ಎಲ್ಲ ಚಟುವಟಿಕೆಗಳಲ್ಲೂ ನಿರ್ದೇಶನ, ಮಾರ್ಗದರ್ಶನ ನೀಡುತ್ತಿದ್ದರು. 'ಗಾಂಧಿ ಬಂದ' ಕಾದಂಬರಿಯಲ್ಲಿ ಗುತ್ತಿನ ಪಾಂಡುಶೆಟ್ಟರು ಮುಂದಾಳತ್ವ ವಹಿಸುತ್ತಿದ್ದರು. ಭೂತಾರಾಧನೆಯು ಕಾಲದಿಂದ ಕಾಲಕ್ಕೆ ಬದಲಾವಣೆಗಳನ್ನು ಹೊಂದುತ್ತಾ ಬಂದಿದ್ದರೂ ಅದರ ಮೂಲ ಆಶಯದಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ.

"ಭೂತಾರಾಧನೆಯು ಕ್ರಮಬದ್ಧ ಜೀವನದ ಮೊತ್ತಮೊದಲಿನ ವ್ಯವಸ್ಥೆಯೆಂದೂ, ನ್ಯಾಯ, ನೀತಿ, ಸತ್ಯ ಧರ್ಮಗಳಿಗನುಗುಣವಾಗಿ ವ್ಯವಹರಿಸಲು ತುಂಬ ಸಹಾಯವಾಗಿತ್ತೆಂದೂ ಸತ್ಪುರುಷರ ಮರಣಾನಂತರ ಅವರ ಪವಿತ್ರಾತ್ಮಗಳು ಲೋಕಕಲ್ಯಾಣಕ್ಕಾಗಿ ಸಂಚರಿಸುತ್ತಿದ್ದು ತಮ್ಮ ಭಜಕರರನ್ನು ಸಂರಕ್ಷಿಸುತ್ತವೆ. ಎಂಬ ತತ್ವವನ್ನು ಆಧರಿಸಿತ್ತೆಂದೂ, ಈ ಮೂಲ ಭಾವನೆಯೇ ಸಮಾಜವನ್ನು ವ್ಯವಸ್ಥಿತ ರೀತಿಯಲ್ಲಿ ಬೆಳೆಯಿಸಿ ಪೋಷಿಸಿತೆಂದೂ, ಕ್ರಮೇಣ ಇಂತಹ ಪವಿತ್ರಾತ್ಮಗಳ ಮೂಲವನ್ನು ಶೋಧಿಸುವ ವಿಚಾರವುಂಟಾಗಿ ಪರಮಾತ್ಮನ ಕಲ್ಪನೆಯೊದಗಿತೆಂದೂ, ಪರಿಣಾಮವಾಗಿ ಸ್ವರ್ಗ, ನರಕ, ಪಾಪ, ಪುಣ್ಯ, ಆತ್ಮ, ಪರಮಾತ್ಮ ಎಂಬ ದ್ವಂದ್ವಗಳ

ಅಭಿಪ್ರಾಯವು ಬೆಳೆಯಿತೆಂದು ಎಣಿಸಬಹುದು.[2] ಈ ಅಭಿಪ್ರಾಯವನ್ನು ಪಾದೂರು ಗುರುರಾಜ ಭಟ್ ವ್ಯಕ್ತಪಡಿಸುತ್ತಾರೆ.

ದೈವಾರಾಧನೆಯು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ. ಲಕ್ಕೆಸಿರಿ, ವಿಷ್ಣುಮೂರ್ತಿ, ಅಣ್ಣಪ್ಪ, ಮಲರಾಯಿ, ಪಂಜುರ್ಲಿ, ಮೈಸಂದಾಯ, ಕೋಟಿ-ಚೆನ್ನಯ, ದಾರಗೆ, ಅಂಗಾರ, ಆಲಿಭೂತ ಮುಂತಾದ ಅಸಂಖ್ಯ ದೈವಗಳನ್ನು ಇಲ್ಲಿ ಆರಾಧಿಸಲಾಗುತ್ತದೆ. ಈ ದೈವಭೂತಗಳನ್ನು ಮುಖ್ಯವಾಗಿ ಪ್ರಾಣಿಭೂತದವು(ಭೂತನಾಗೆ, ಪಿಲಿಭೂತ, ಪಂಜುರ್ಲಿ, ಮೈಸಂದಾಯ) ಮನುಷ್ಯರೂಪದವು(ಅಣ್ಣಪ್ಪ, ಅಬ್ಬಗೆ-ದಾರಗೆ, ಕೋಟಿ-ಚೆನ್ನಯ, ದೇವುಪೂಂಜ, ಜೋಗಿಪುರುಷ) ವೈದಿಕ ನೆಲೆಯವು(ಭೈರವಿ, ಬ್ರಹ್ಮ, ಧೂಮಾವತಿ, ರಕ್ತೇಶ್ವರಿ, ಖಡ್ಗೇಶ್ವರಿ, ವಿಷ್ಣುಮೂರ್ತಿ) ಎಂಬುದಾಗಿ ಈಗಾಗಲೇ ವರ್ಗೀಕರಿಸಲಾಗಿದೆ. ಇವುಗಳಲ್ಲದೆ ಪ್ರದೇಶಸಂವಾದಿಗಳಾದ ಮಲರಾಯಿ, ಪೊಸ್ರಳತಾಯೆ, ಮಲ್ಟಾಂಡಿ, ಕಡಮಂತಾಯೆ ಮುಂತಾದ ದೈವಗಳೂ ಮರ್ಲುಜುಮಾದಿ, ಪೊಟ್ಟೆ ಮುಂತಾದ ವೈಕಲ್ಯಗಳುಳ್ಳ ದೈವಗಳೂ ಇಲ್ಲಿ ಧಾರಾಳವಾಗಿವೆ. ಈ ದೈವಗಳ ಪೂಜೆಯಲ್ಲಿ ತಾಮಸವಿಧಿಗಳಿಗೆ ಪ್ರಾಶಸ್ತ್ಯವಿದೆ. ಇವುಗಳಿಗೆ ನೇಮ, ಬಲಿ, ಕೋಲ, ಆಯನಗಳನ್ನು ಕಾಲಕಾಲಕ್ಕೆ ಸಲ್ಲಿಸಲಾಗುತ್ತದೆ.[3]

ತುಳುನಾಡಿನ ಕಾದಂಬರಿಗಳಲ್ಲಿ ಹಲವು ಭೂತಗಳ ಹಾಗೂ ಆರಾಧನೆಯ ವಿವರಗಳಿವೆ. 'ಚೋಮನ ದುಡಿ' ಕಾದಂಬರಿಯಲ್ಲಿ ಪಂಜುರ್ಲಿ ಗುಡಿ ಕಂಡು ಅಡ್ಡ ಬಿದ್ದು ಹಿಂದಿರುಗುವ ಚೋಮನ ವಿವರಗಳಿವೆ. 'ಗಾಂಧಿ ಬಂದ' ಹಾಗೂ 'ಉಲ್ಲಂಘನೆ', ಕಾದಂಬರಿಗಳಲ್ಲಿ ಜುಮಾದಿ ಭೂತದ ವಿವರಗಳಿವೆ. 'ತೆಂಬರೆ' ಕಾದಂಬರಿಯಲ್ಲಿ ಪಿಲಿಭೂತ, ರಾಜನ್ ದೈವ, ಪಂಜುರ್ಲಿ, ಕೊಡಮಣಿತಾಯ, ಲಕ್ಕೆಸಿರಿ ಮೊದಲಾದ ಭೂತಗಳ ಆರಾಧನೆಯ ವಿವರಗಳು ದಕ್ಕುತ್ತವೆ.

'ತುಳುನಾಡಿನ ಮಣ್ಣಿನ ಗುಣವನ್ನು ಮೈಗೂಡಿಸಿಕೊಂಡಿರುವ ಭೂತಾರಾಧನೆಯಲ್ಲಿ ತುಳು ಜನಪದರ ಆಳವಾದ ನಂಬಿಕೆಗಳು, ಸಂಪ್ರದಾಯ, ಆಚಾರವಿಚಾರಗಳು ಬೆರೆತುಕೊಂಡಿವೆ. ಭೂತಾರಾಧನೆಯೆಂದರೆ ಪ್ರಕೃತಿ ಆರಾಧನೆಯೂ ಹೌದು ಪಿತೃ ಆರಾಧನೆಯೂ ಆಗಿರುವುದು. ತಮ್ಮ ಎಲ್ಲಾ ಕಾರ್ಯಕ್ರಮಗಳಲ್ಲಿ ದೈವವನ್ನು ಮುಂದಿಟ್ಟುಕೊಂಡು ನಮ್ಮ ಹಿರಿಯರು ಬಾಳುತ್ತಿದ್ದ ರೀತಿ, ಅವರ ನಿವೇದನೆಗಳು ಆಚಾರ ಸಂಪ್ರದಾಯಗಳು ವೈಚಾರಿಕವಾದುದು. ಭೂತಾರಾಧನೆಯು ಜನರ ಸಾಮೂಹಿಕ ದುಡಿಮೆಯ ಸಾಮರಸ್ಯದ, ಅನ್ಯೋನ್ಯತೆಯ ಪ್ರತೀಕವಾಗಿರುವುದು. ಇದು ಕುಟುಂಬದ ಎಲ್ಲಾ ಸದಸ್ಯರು ಒಟ್ಟು ಸೇರುವ ಕೌಟುಂಬಿಕ ಹಬ್ಬ ಹಾಗೂ ಸಾಂಸ್ಕೃತಿಕ ಉತ್ಸವವೂ ಆಗಿರುವುದು. ಕುಟುಂಬದ ಹಾಗೂ ಊರಿನ ಅನೇಕ ಸಮಸ್ಯೆಗಳು, ವ್ಯಾಜ್ಯಗಳು, ಭಿನ್ನಾಭಿಪ್ರಾಯಗಳು ಹಿರಿಯರ ಗಣ್ಯರ ಸಮ್ಮುಖದಲ್ಲಿ ದೈವದ ಅಭಯದ ನುಡಿಯೊಂದಿಗೆ ಇತ್ಯರ್ಥವಾಗುತ್ತಿದ್ದವು ಎನ್ನುವುದು ವಿಶೇಷ. ಇಲ್ಲಿ ನಂಬಿಕೆ ಹಾಗೂ ದೈವದ ಹೆದರಿಕೆಯೆ ಮೂಲ ಪ್ರೇರಕ ಶಕ್ತಿಯಾಗಿರುವುದು'[4] ಎಂಬುದಾಗಿ ರಮಾನಾಥ್ ಕೋಟೆಕಾರ್ ಅಭಿಪ್ರಾಯಪಡುತ್ತಾರೆ. ಹೀಗೆ ಭೂತಾರಾಧನೆಯು ಕುಟುಂಬ ಹಾಗೂ ಸಮಾಜದ ಸಾಮರಸ್ಯದಲ್ಲಿ ಪ್ರಮುಖ ಪಾತ್ರವಹಿಸಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ.

"ಎ.ಶ್ರೀಧರ್ ಅವರ ಪ್ರಕಾರ ಕೆಲವು ಭೂತಗಳು ಹಿಂದೆ ಕೆಳವರ್ಗದ ಜಾತಿಗಳಲ್ಲಿ ಸಾಮಾನ್ಯ ಮನುಷ್ಯರಾಗಿ ಹುಟ್ಟಿ, ಕೆಳವರ್ಗದವರಿಗೆ ಕಂಟಕಪ್ರಾಯವಾಗಿದ್ದ "ವ್ಯವಸ್ಥೆಯ" ವಿರುದ್ಧ ಪ್ರತಿಭಟಿಸಿ ವೀರಮರಣ ಹೊಂದಿದವರು. ಮತ್ತೆ ಅವರು ಭೂತಗಳಾಗಿ ಈ "ಕೆಳವರ್ಗದವರ" ರಕ್ಷಕರಾಗಿದ್ದುಕೊಂಡು, ಕೆಳವರ್ಗದವರಿಗೆ ಕಿರುಕುಳ ನೀಡುವ ಊಳಿಗದೊರೆಗಳನ್ನು ಅಥವಾ ಗುತ್ತಿನ ಮನೆಯವರನ್ನು ಪೀಡಿಸಿ ಅವರಿಂದ ಪೂಜೆಯನ್ನು ಸ್ವೀಕರಿಸಿ ತೃಪ್ತರಾಗುತ್ತವೆ."[೫] ಇಲ್ಲಿ ಭೂತಗಳು ಕೆಳವರ್ಗಕ್ಕೆ ಸೇರಿದವು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. "ಭೂತ ಎಂಬುದು 'ಅದ್ಭುತ' ಅಥವಾ 'ಭೂಮ' ಎಂಬ ಅರ್ಥವನ್ನು ಕೊಡುತ್ತದೆ ಹೊರತು ಕಾಲಕ್ಕೆ ಸಂಬಂಧಪಟ್ಟ(past ಎಂಬ) ಅರ್ಥವನ್ನಲ್ಲ. ತಮ್ಮ ಬುದ್ಧಿಗೆ ಮತ್ತು ಮನಸ್ಸಿಗೆ ನಿಲುಕದ ಶಕ್ತಿಯನ್ನು ಒಲಿಸಿಕೊಳ್ಳುವುದಕ್ಕಾಗಿ, ವರ್ಣಯುಕ್ತ ವಿಶಿಷ್ಟ ಅಲಂಕಾರಿಕ ವೇಷದ ದೈವವನ್ನು, ಭಕ್ತಿಗಿಂತಲೂ ಭಯವೇ ಮೂಲವಾಗಿ ಆರಾಧಿಸತೊಡಗಿದ್ದು ಭೂತಾರಾಧನೆಯ ಮೂಲ ಎಂದು ಹೇಳಬಹುದು."[೬] ಹೀಗೆ ಭೂತಾರಾಧನೆಯಲ್ಲಿ ಭಯದ ಎಳೆ ಇರುವ ಅಂಶವಿದೆ. ಕುಡಿಯರ ಕೂಸು ಕಾದಂಬರಿಯಲ್ಲಿ ಭೂತದ ಭಯದ ಕಾರಣವಾಗಿ ಮೃತರಾಗುವ ವಿವರಗಳಿವೆ. "ತುಳುನಾಡಿನಲ್ಲಿ ಭೂತಗಳ ಸಂಖ್ಯೆ ಐನೂರನ್ನು ದಾಟುತ್ತದೆ. ಅವುಗಳಲ್ಲಿ ಸುಮಾರು ಮೂವತ್ತು ನಲವತ್ತು ಭೂತಗಳು ಹೆಚ್ಚು ಪ್ರಸಿದ್ಧವಾಗಿದ್ದು ಎಲ್ಲ ಕಡೆಗಳಲ್ಲಿಯೂ ಆರಾಧಿಸಲ್ಪಡುತ್ತವೆ."[೭] ಇಲ್ಲಿ ಭೂತಗಳ ಸಂಖ್ಯೆಯ ವಿವರವಿದೆ.

ಭೂತಾರಾಧನೆಯ ಹಂತಗಳು

ಭೂತಾರಾಧನೆಯು ತನ್ನದೇ ಆದ ವಿಶಿಷ್ಟ ವಿಧಿವಿಧಾನಗಳನ್ನು ಹೊಂದಿದೆ. ಇದರ ಮೂಲ ಆಶಯ ಹಾಗೂ ಆಚರಣೆಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಮೂಲನಿವಾಸಿಗಳಾದ ಮಲೆಕುಡಿಯರಲ್ಲಿ ಬೆಟ್ಟಗಳ ಮೇಲೆ ಭೂತಾರಾಧನೆ ನಡೆದರೆ, ನಾಡಿನಲ್ಲಿ ಬಯಲುಜಾಗದಲ್ಲಿ, ಗದ್ದೆಯಲ್ಲಿ ನಡೆಯುವುದು ಸಾಮಾನ್ಯ. ಭೂತಾರಾಧನೆಯನ್ನು ನಡೆಸುವವರು ಸಾಮಾನ್ಯವಾಗಿ ತಳಸಮುದಾಯದವರು, ಮೇಲ್ವಿಚಾರಣೆ ನಡೆಸುವವರು ಮೇಲ್ವರ್ಗದವರು. ಭೂತಾರಾಧನೆಯಲ್ಲಿ ಕಂಡುಬರುವ ಪ್ರಮುಖ ಹಂತಗಳನ್ನು ಈ ಕೆಳಗಿನಂತೆ ವಿವರಿಸಬಹುದು.

'೧. ಕಲಾವಿದನಿಗೆ 'ಎಣ್ಣೆಬೂಳ್ಯ' ನೀಡುವುದು. ೨. ಕಲಾವಿದನು ತೆಂಬರೆಯ ಹಿಮ್ಮೇಳದೊಂದಿಗೆ 'ಒಸಯೊ ಸಂಧಿ'ಯನ್ನು ಹೇಳುವುದು. ೩. ಬಣ್ಣ ಮತ್ತು ವೇಷಭೂಷಣಗಳ ಸಿದ್ಧತೆ. ೪. ಕೊಡಿಯಡಿಯಲ್ಲಿ ಭೂತದ 'ಭಂಡಾರ'ವನ್ನು ತಂದಿಟ್ಟು ದೀಪ ಉರಿಸಿ ಅಲಂಕಾರ ಮಾಡುವುದು. ೫. ಕಲಾವಿದನು ನಿರ್ವಹಿಸುವ 'ಗಗ್ಗರದೆಚ್ಚಿ'. ೬. ಕೊಡಿಯಡಿಯ ಎದುರು ಬಲಿಮುದ್ರೆಯನ್ನು ಇಡುವುದು. ೭. ಭೂತಕ್ಕೆ ಪ್ರಾರ್ಥನೆ ಸಲ್ಲಿಸುವುದು. ೮. ಭೂತದ ಪ್ರತೀಕವಾದ ಕಲಾವಿದನು ಕುಣಿದು ಅಟ್ಟಹಾಸ ಕೊಡುವುದು. ೯. ಭೂತದ ಕಾರಣಿಕ ಪ್ರದರ್ಶನ. ೧೦. ಭೂತಕ್ಕೆ ಅಹಾರವನ್ನು ಸಲ್ಲಿಸುವುದು. ೧೧. ಭೂತವು ಸಂತೃಪ್ತಿಯನ್ನು ಪ್ರಕಟಿಸಿ ಅಭಯದ ಮಾತುಗಳನ್ನು ಹೇಳುವುದು. ೧೨. ಆರಾಧನೆಯು ಮುಕ್ತಾಯ ಹೊಂದಿದ ಅನಂತರದಲ್ಲಿ ಕಲಾವಿದನು 'ಬಿರಿಬೂಳ್ಯ'(ಮುಕ್ತಾಯದ ವೀಳ್ಯ) ಹಿಡಿಯುವುದು.'[೮]

೧. **ಎಣ್ಣೆ ವೀಳ್ಯ ಹಿಡಿಯುವುದು**

ಐದು ವೀಳ್ಯದೆಲೆ, ಒಂದು ಅಡಿಕೆ ಮತ್ತು ಎಣ್ಣೆಯನ್ನು ಕೊಟ್ಟು ಭೂತ ನಡೆಸುವ ಯಜಮಾನ ಭೂತಾರಾಧನೆ ಮಾಡುವವನಿಗೆ ನೀಡಿ ಭೂತ ಕಟ್ಟಲು ಅನುಮತಿ ನೀಡುವುದನ್ನು **'ಎಣ್ಣೆ ವೀಳ್ಯ ಹಿಡಿಯುವುದು'** ಎನ್ನುತ್ತಾರೆ.

೨. ಎಣ್ಣೆ ವೀಳ್ಯ ಸ್ವೀಕರಿಸುವ ಸಂದರ್ಭದಲ್ಲಿ ಹಾಡುವ ಪಾಡ್ದನದ ಭಾಗವನ್ನು **ಒಸಯೊ ಸಂಧಿ** ಎನ್ನುತ್ತಾರೆ. ಇದನ್ನು ಭೂತನರ್ತಕನ ತಾಯಿ ಇಲ್ಲವೆ ಹೆಂಡತಿ ತೆಂಬರೆ ಬಡಿಯುತ್ತ ಹಾಡುವರು. ತೆಂಬರೆ ಕಾದಂಬರಿಯಲ್ಲಿ ಮೈರೆ ಒಸಯೊ ಸಂಧಿ ಹಾಡುವ ಚಿತ್ರಣವಿದೆ.

೩. **ಬಣ್ಣ ಮತ್ತು ವೇಷಭೂಷಣಗಳ ಸಿದ್ಧತೆ**

"ಸ್ನಾನದಿಂದ ಬಂದ ಕಲಾವಿದನು ಮುಖವರ್ಣಿಕೆಗೆ ತೊಡಗುತ್ತಾನೆ. ಆತನ ಸಹಚರರು ಇದಕ್ಕೆ ಸಹಕರಿಸುತ್ತಾರೆ. ಮುಖವರ್ಣಿಕೆಗಾಗಿ ಅರಿಶನದ ಬಣ್ಣ (ಅರಿದಾಳ), ಸಪೇತ (ಬಿಳಿ ಬಣ್ಣ), ಕಾಡಿಗೆ (ಕಪ್ಪು) ಮತ್ತು ಇಂಗ್ಲಿಕ(ಕೆಂಪು ಬಣ್ಣ) ಮುಂತಾದ ವಸ್ತುಗಳನ್ನು ಬಳಸುತ್ತಾರೆ. ಅರಿದಾಳವನ್ನು ತಳಹದಿಯ ಬಣ್ಣವಾಗಿ ಬಳಸಿ ಮುಖಕ್ಕೆ ಲೇಪಿಸಿ ಭೂತಕ್ಕೆ ಕೈಮುಗಿದು ಮುಖವರ್ಣಿಕೆಗೆ ಪ್ರಾರಂಭಿಸುತ್ತಾರೆ." ಹೀಗೆ ಮುಖವರ್ಣಿಕೆ ಕೈಗೊಳ್ಳುವುದು ಭೂತಾರಾಧನೆಯ ಮುಖ್ಯ ಅಂಗವಾಗಿದೆ.

೪. **ಕೊಡಿಯಡಿಯಲ್ಲಿ ಭೂತದ 'ಭಂಡಾರ'ವನ್ನು ತಂದಿಟ್ಟು ದೀಪ ಉರಿಸಿ ಅಲಂಕಾರ ಮಾಡುವುದು.**

ಭೂತಾರಾಧನೆಯ ಸಂದರ್ಭದಲ್ಲಿ ಈ ಕಾರ್ಯವನ್ನು ಮಾಡುತ್ತಾರೆ. ಇದರ ನಂತರ ಮದಿಪು ಹೇಳುವ ಕ್ರಿಯೆ ಆರಂಭವಾಗುತ್ತದೆ.

೫. **ಗಗ್ಗರ ಕಟ್ಟುವುದು**

ಕಂಚಿನಿಂದ ಮಾಡಿದ ಒಳಗೆ ಟೊಳ್ಳಾಗಿ ಗೆಜ್ಜೆ ತುಂಬಿಸಲ್ಪಟ್ಟು ಅರ್ಧಬಾಯಿ ತೆರೆದುಕೊಂಡಿರುವ ಕಾಲ್ಕಡಗವನ್ನು ಗಗ್ಗರ ಎನ್ನುವರು.

೬. **ಮುಡಿ ಅಣಿ ಏರಿಸುವುದು**

ಭೂತ ಕಲಾವಿದನು ಅಣಿಯನ್ನು ಕಟ್ಟಿಕೊಳ್ಳುವುದು ಭೂತಾರಾಧನೆಯಲ್ಲಿ ಮುಖ್ಯವಾದ ಭಾಗವಾಗಿದೆ.

೭. **ಹೂ ಅಕ್ಕಿ ಹಾಕುವುದು**

ಬಲಿಪೀಠದಲ್ಲಿದ್ದ ಕುಂಕುಮ ಅಕ್ಕಿ, ಹಿಂಗಾರ ಹೂವಿನ ಎಸಳುಗಳನ್ನು ನಾಲ್ಕು ದಿಕ್ಕುಗಳಿಗೂ ಎಸೆಯುವುದು.

೮. ಅನುಗ್ರಹ(ಮದಿಪು)

ಭಕ್ತರು ತಮ್ಮ ಸಂಕಷ್ಟಗಳನ್ನು ತೋಡಿಕೊಂಡಾಗ ಭೂತ ಅಭಯ ನೀಡುತ್ತದೆ. "ಕೊನೆಯಲ್ಲಿ ಭೂತವು ಕಲಾವಿದನ ಮೂಲಕ ತನ್ನ ಅಭಿಪ್ರಾಯವನ್ನು ತಿಳಿಸುತ್ತದೆ. ಕಲಾವಿದರು ಹೇಳುವ ಈ ನಿರ್ಣಾಯಕ ಮಾತುಗಳನ್ನು ಮದಿಪು ಎನ್ನಲಾಗುತ್ತದೆ."[೧೦]

೯. ವೀಳ್ಯ ಹಂಚುವುದು

ನೆರೆದ ಭಕ್ತರಿಗೆ ಪ್ರಸಾದ ಹಂಚುವುದನ್ನು ವೀಳ್ಯ ಹಂಚುವುದು ಎನ್ನುತ್ತಾರೆ.

ಕಾದಂಬರಿಗಳಲ್ಲಿ ಭೂತಾರಾಧನೆ

ತುಳುನಾಡಿನಲ್ಲಿ ಭೂತಾರಾಧನೆ ಅವೈದಿಕ ಸಂಸ್ಕೃತಿಯಾಗಿ ಬೆಳೆದುಬಂದಿತ್ತು. ದೈವಾರಾಧನೆ ಬೆಳೆದುಬರಲು ಮುಖ್ಯ ಕಾರಣ ಭಯ. ಜನರ ಮನದ ಭಯನಿವಾರಣೆಗಾಗಿ, ಅಹಿತಕರ ಘಟನೆಗಳು ನಡೆದಾಗ, ಸಾವು ಸಂಭವಿಸಿದಾಗ ದೈವ ಮುನಿದಿದೆ ಎಂಬ ಭೀತಿ ಜನರಿಗೆ ಕಾಡುತ್ತಿತ್ತು. ಆ ಭೀತಿ ನಿವಾರಣೆಗಾಗಿ ದೈವವನ್ನು ಒಲಿಸಲು ಭೂತಕೋಲ ಕೊಟ್ಟು ಸಂತೃಪ್ತಿಗೊಳಿಸುವ, ಮುಂದೆಯೂ ಕಾಪಾಡುವ ಅಭಯ ಪಡೆಯುವ ಜನರ ನಂಬಿಕೆಯನ್ನು ಹಲವು ಕಥೆ ಕಾದಂಬರಿಗಳು ಚಿತ್ರಿಸಿವೆ. ದೈವ ಕಾಪಾಡುತ್ತದೆಜೊತೆಗೆ ತಪ್ಪಿ ನಡೆದರೆ ದೈವ ಮುನಿಯುತ್ತದೆ ಎಂಬ ಭಯವೂ ಜನಮಾನಸದಲ್ಲಿ ಸ್ಪಷ್ಟವಾಗಿ ಬೇರೂರಿತ್ತು. ಭೂತಾರಾಧನೆಯ ಆಚರಣೆಯನ್ನು ಶಿವರಾಮ ಕಾರಂತರ 'ಕುಡಿಯರ ಕೂಸು', ಎಚ್.ನಾಗವೇಣಿ ಅವರ 'ಗಾಂಧಿ ಬಂದ', ನಾ.ಮೊಗಸಾಲೆ ಅವರ 'ಉಲ್ಲಂಘನೆ', ಎಂ.ವೀರಪ್ಪಮೊಯಿಲಿ ಅವರ 'ತೆಂಬರೆ', ಪ್ರಭಾಕರ ನೀರ್‌ಮಾರ್ಗರ ಕಾದಂಬರಿಗಳು ಚಿತ್ರಿಸಿವೆ.

"According to Bore Lingayya the culture of Kudiyas has been destroyed. They used to have sword fight soon after the kola. They were using drums, temate and trumpet."[೧೧]

ಕುಡಿಯರ ಕೂಸು ಕಾದಂಬರಿಯು ಕಲ್ಕುಡ ದೈವಕ್ಕೆ ಅರ್ಪಿಸುವ ಭೂತಕೋಲದ ವಿವರಗಳನ್ನು ಒಳಗೊಂಡಿದೆ. ಮಲೆಕುಡಿಯ ಸಮುದಾಯದಲ್ಲಿ ಗುರಿಕಾರಿಕೆ ಹಾಗೂ ಭೂತಕೋಲದ ಪೂಜಾರಿಯ ಹುದ್ದೆ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಅದೇ ಸಮುದಾಯದವರೇ ಪೂಜಾರಿಯಾಗಿರುವುದು ಗಮನಿಸಬೇಕಾದ ಅಂಶ. ಭೂತ ನೀಡುವ ಮದಿಪು ಆ ಜನರಲ್ಲಿ ತಪ್ಪು ಮಾಡದಂತೆ ನಿಯಂತ್ರಿಸುತ್ತಿದ್ದವು. ಭೂತಕ್ಕೆ ತಿಳಿದರೆ ರಕ್ತ ಕಾರಿ ಸಾಯುವರೆಂಬ ಭೀತಿ ಸರ್ವರಲ್ಲೂ ಇತ್ತು. ತಪ್ಪು ಮಾಡಿದವರು ಹೆದರಿಯೇ ಪ್ರಾಣ ಕಳೆದುಕೊಳ್ಳುತ್ತಿದ್ದರು. ಗುರಿಕಾರ ಕೆಂಚ ಮಗ, ಸೊಸೆ ಸತ್ತಾಗ ಕಲ್ಕುಡ ಮುನಿದಿದ್ದಾನೆಂದು ಬೆದರಿ ಹಿರಿಮಲೆಯ ಗುರಿಕಾರನನ್ನು ಭೇಟಿಮಾಡಿ ಕೋಲ ನಡೆಯುವಂತೆ ನೋಡಿಕೊಳ್ಳುತ್ತಾನೆ. ದೈವದ ಭೀತಿಯಿಂದ ಕೆಂಚನ ಸೊಸೆ ಸಾಯುವುದು, ಕೆಂಪಿಯ ಸಾವು ಇವುಗಳನ್ನು ಗಮನಿಸಬಹುದು. ಇಲ್ಲಿ ಈರ್ವರೂ ತಮ್ಮ ತಪ್ಪು ದೈವಕ್ಕೆ ತಿಳಿದಿದೆ ಎಂಬ ಭೀತಿಯಿಂದಲೇ ಸಾವನ್ನು

ಆಹ್ವಾನಿಸುತ್ತಾರೆ. ಮಲೆಕುಡಿಯರ ಕತ್ತಿ ಕುಣಿತ ಗುರುತಿಸಬಹುದು. ದೈವದ ಸಂಪ್ರೀತಿಗಾಗಿ ನೀಡುವ ಹಂದಿ, ಕೋಳಿಗಳ ಬಲಿ ಮುಖ್ಯವಾದದ್ದು. ಪ್ರಾಣಿ ಬಲಿ ನೀಡದಿದ್ದರೆ ನರಬಲಿ ಖಂಡಿತ ಎಂಬ ಭೀತಿಯೂ ಸೇರಿ ಪ್ರಾಣಿ ಬಲಿಗೆ ಹೆಚ್ಚಿನ ಮಹತ್ವ ನೀಡಿರುವುದು ಕಂಡುಬರುತ್ತದೆ.

'ಕಿರಿಮಲೆಯ ಕಲ್ಕುಡ ಉಳಿದ ದೈವಗಳಂತಲ್ಲವಂತೆ, ಬಲು ಸಿಡುಕಿನ ದೈವ, ಪ್ರತಾಪಶಾಲಿದೈವ; ಕಣಿವೆಯ ಕೆಳಗಿನ ದೆವ್ವ, ದೇವರುಗಳಂತೆ ಶಾಂತಸ್ವಭಾವಿಯಲ್ಲ. ಕಣಿವೆಯ ಕೆಳಗಿನ ದೆವ್ವಗಳಿಗೆ ಸಲ್ಲಿಸುವ ಕೋಲ, ನೇಮ ನಾಲ್ಕು ದಿನ ಹೆಚ್ಚು ಕಡಿಮೆಯಾದರೂ ನಡೆಯುತ್ತದೆ. "ನನ್ನಪ್ಪ, ನನ್ನಮ್ಮ, ತಪ್ಪಿ ನಡೆದೆ, ಇದೋ ಕಾಣಿಕೆ." ಎಂದರೆ ದೈವ ತೆಪ್ಪಗಾಗುತ್ತದೆ. ಕಿರಿಮಲೆಯ ಕಲ್ಕುಡ ಆ ರೀತಿಯ ಬೆನ್ನುಮೂಳೆ ಇಲ್ಲದಂಥ ದೆವ್ವವೇ ಅಲ್ಲ. ಅಂಥ ದೆವ್ವವಾಗಿದ್ದರೆ ಮನುಷ್ಯ ಕಾಲಿರಿಸಲು ಅಂಜುವ ಮೂಲೆಯ ಕೊರಕಲೊಂದರಲ್ಲಿ ಕುಳಿತು, ಕಣ್ಣೆಟಕುವಷ್ಟು ದೂರದ ಬೆಟ್ಟಗಳಿಗೆ ಅಧಿನಾಯಕನಾಗಿದ್ದು, ತನ್ನವರಿಂದ ಕಪ್ಪಕಾಣಿಕೆಯನ್ನು ತರಿಸಿಕೊಳ್ಳುವಷ್ಟು ಶಕ್ತಿ ಅದಕ್ಕಿರುವುದು ಅಸಾಧ್ಯದ ಮಾತು. ಅಲ್ಲದೆ, ಕಂಪನಿ ಸರಕಾರ ಬರುವ ಮುಂಚೆ ಅ ಕಲ್ಕುಡ ಎಂದೆಂದೂ ಕುರಿ, ಕೋಳಿಗಳ ಕಾಣಿಕೆ ಪಡೆದು, ತೃಪ್ತಿಪಟ್ಟ ದೈವವೇ ಅಲ್ಲ. ಐದು ವರ್ಷಗಳಿಗಾದರೂ ಒಮ್ಮೆ, ನರಮನುಷ್ಯನ ತಲೆಯನ್ನೇ ಕೊಂಡ ದೈವ ಅದು.'(ಕುಡಿಯರ ಕೂಸು, ಪುಟ ೨)

'ಕುಡಿಯರ ಕೂಸು' ಕಾದಂಬರಿ ಚಿತ್ರಿಸುವಂತೆ ತನ್ನ ಜೊತೆಗಿದ್ದವನ ಅಕಾಲಿಕ ಸಾವು ಅವರನ್ನು ಇನ್ನಿಲ್ಲದಂತೆ ಕಂಗೆಡಿಸುತ್ತಿತ್ತು. ಇನ್ನೂ ತಾರುಣ್ಯ ಇರುವ ಆರೋಗ್ಯವಂತ ಸಹವಾಸಿಗಳು ಪ್ರಾಣ ಕಳಕೊಂಡಾಗ ನೈಜ ಕಾರಣ ತಿಳಿಯದೆ ದೈವ ಮುನಿದಿದೆ ಎಂಬ ಭೀತಿ ತೀವ್ರತರವಾಗಿ ಕಂಗೆಡಿಸುತ್ತಿತ್ತು. ಆ ಭಯ ಹೋಗಲಾಡಿಸಲು ದೈವವನ್ನು ಖುಷಿ ಪಡಿಸುವ ಪ್ರಾಣಿ ಬಲಿ, ಕುಣಿತಗಳು ಸಾಮಾನ್ಯವಾಗಿದ್ದವು. ದೈವಾರಾಧನೆ ಸಂದರ್ಭ ಪೂಜಾರಿ ನೀಡುವ ಪರಿಹಾರಗಳು, ಮಾತುಗಳು ಸಮುದಾಯ ಜೀವನ ಸಮರ್ಪಕವಾಗಿ ಸಾಗಿಸಲು ಸಹಾಯಕವಾಗಿತ್ತು. ದೈವದ ನಂಬುಗೆ ಎಲ್ಲರನ್ನೂ ಒಟ್ಟಿಗೆ ಬಾಳಲು ಪ್ರೇರಣೆ ನೀಡಿತ್ತು ಎಂದರೆ ಸುಳ್ಳಲ್ಲ.

ಬೆಸ್ತರ ಜಾರಂದಾಯ ನೇಮ

'ಗಾಂಧಿ ಬಂದ' ಕಾದಂಬರಿಯಲ್ಲಿ ಬೆಸ್ತರ ಜಾರಂದಾಯ ನೇಮದ ವಿವರಗಳಿವೆ. ಮೂರು ದಿನಗಳ ಕಾಲ ನಡೆಯುವ ಈ ಕೋಲದಲ್ಲಿ ಮೊದಲನೆಯ ದಿನ ಕೊಡಿ ಏರಿಸುವ ಹಬ್ಬ, ಎರಡನೇ ದಿನ ಜಾರಂದಾಯ ಕೋಲ, ಮೂರನೆ ದಿನ ಜುಮಾದಿ ಕೋಲ. ಎಲ್ಲ ಸಮುದಾಯದವರು ಖುಷಿಯಿಂದ ಬೆರೆತು ಆಚರಿಸುವ ಹಬ್ಬ. ಬೆಸ್ತರಿಗೆ ಈ ಮೂರು ದಿನಗಳಲ್ಲಿ ಕಡಲಿನಲ್ಲಿ ದುಡಿತವಿಲ್ಲ. ದುಡಿದರೆ ಬಹಿಷ್ಕಾರ ಹಾಕಲಾಗುತ್ತಿತ್ತು.

ಕೋಡ್ದಬ್ಬು ದೈವದ ಆರಾಧನೆ

ಸುಗ್ಗಿ ತಿಂಗಳ ಆರಂಭದಂದು ಕೋಡ್ದಬ್ಬು ದೈವದ ಆರಾಧನೆ ನಡೆಯುತ್ತದೆ. ಅಂದೇ ಮೀನು ಹಿಡಿಯುವ ಹಬ್ಬ. ಮೀನು ಹಿಡಿದು ರಾತ್ರಿ ಕೋಡ್ದಬ್ಬು ದೈವಕ್ಕೆ ಅಗೇಲು ಬಡಿಸಲಾಗುತ್ತದೆ. "ಮಳೆಗಾಲದಲ್ಲಿ ಬಂಟರು ಕುತ್ತರಿಗೆ ಹೋಗುತ್ತಿದ್ದರು. ಮಳೆಗಾಲದ ದಿನಗಳಲ್ಲಿ ವ್ಯವಸಾಯದ ಕೆಲಸ ಮುಗಿದು ಬಿಡುವು ದೊರೆತ ಮೇಲೆ ನದಿಯಿಂದ ಮೀನು ಹಿಡಿಯುವ ಹವ್ಯಾಸ ಇತ್ತು."[೨]

ಕೊರಗ ತನಿಯ

ಕೊಟ್ಟ ಕಾದಂಬರಿಯಲ್ಲಿ ಕೊರಗತನಿಯನ ಕೋಲದ ವಿವರಣೆಯಿದೆ. ಕೊರಗರ ಕೊರಗತನಿಯ ಕೋಲದ ವೇಷಭೂಷಣದಲ್ಲಿ ಆಡಂಬರವಿಲ್ಲ. ಸರಳತೆಯೇ ಇದರ ವೈಶಿಷ್ಟ್ಯ. "ಕೊರಗತನಿಯನಿಗೆ ಪ್ರಭಾವಳಿ ಕೂಡ ಇಲ್ಲ. ತಲೆಗೆ ಮುಟ್ಟಾಳೆ, ಸೊಂಟಕ್ಕೆ ಗೆಜ್ಜೆ, ಕೈಯಲ್ಲಿ ಬೆತ್ತ ಇಷ್ಟೇ ಅದರ ವೇಷ."(ಕೊಟ್ಟ, ಪುಟ ೨೩೬) ಧೀರಜ್ ಮಲ್ಲಯ್ಯನಲ್ಲಿ ಹೇಳುವ ಮಾತುಗಳು ಕೊರಗತನಿಯ ದೈವದ ಭೂತಾರಾಧಕರ ಸರಳತೆಯನ್ನು ಹಾಗೂ ಸಾಂಸ್ಕೃತಿಕ ಭಿನ್ನತೆಯನ್ನು ಪ್ರಚುರಪಡಿಸುತ್ತದೆ.

ಕೊರಗ ತನಿಯ ಪಾಡ್ದನದ ಕತೆಯನ್ನು ಕಾದಂಬರಿ ವಿವರಿಸುತ್ತದೆ. "ಪಣಂಬೂರು ಪಟ್ಟಸಾಲೆಯಲ್ಲಿ ಓಡಿ ಎಂಬುವವನಿದ್ದ. ಅವನ ಪತ್ನಿ ಅಚ್ಚುಮೈರೆ; ಅವರ ಮಗನೇ ತನಿಯ. ಅವನು ತಿಂಗಳ ಮಗುವಾಗಿದ್ದಾಗ ತಾಯಿ ಸತ್ತಳು. ಆಮೇಲೆ ತಂದೆ ಸತ್ತನು. ಅವನ ವಂಶದವರಾದ ಏಳು ಕೊಪ್ಪದ ಕೊರಗರು ಅಳಿದು ಹೋದರು. ಏಳು ಕೊಪ್ಪದ ಡೋಲನ್ನು ಒಂದು ಕಡೆ ತೂಗು ಹಾಕಿದ. ದಿಕ್ಕು ದೆಸೆಯಿಲ್ಲದೆ ಓಡಿಯ ಮಗ ತನಿಯ ಮನೆಬಿಟ್ಟು ಕಾಡಿಗೆ ಓಡಿಹೋದನು. ಬಡಗುದೆಸೆಗೆ ನಡೆದೂ ನಡೆದೂ ಸಾವಿರಾಳು ಹೋಗುವ ಹಾದಿಯಲ್ಲಿ ಕುಳಿತು, ವೀಳ್ಯದೆಲೆಯೆಂದು ಕಾಸರ್ಕನ ಎಲೆಯನ್ನು, ಅಡಿಕೆ ಎಂದು ದಡ್ಡಾಲಿನ ಕಾಯನ್ನು ಇಟ್ಟುಕೊಂಡು ಆಡುತ್ತಿರುತ್ತಾನೆ. ತನಗೆ ಬಂದ ಕಷ್ಟ ಕಂಡು ಒಮ್ಮೆ ಅಳುತ್ತಾನೆ, ಒಮ್ಮೆ ನಗುತ್ತಾನೆ. ಅಷ್ಟರಲ್ಲಿ ಕದಿರೆಯಿಂದ ಬಿದಿರೆಗೆ ಕಳ್ಳು ಹೊತ್ತುಕೊಂಡು ತಾಯಿ ಮೈರಕ್ಕೆ ಬೈದೆತಿ, ಮಗ ಚೆನ್ನಯ್ಯ ಆ ದಾರಿಯಾಗಿ ಬರುತ್ತಾರೆ. 'ನೀನು ಯಾರು? ಒಮ್ಮೆ ಅಳುವುದೇಕೆ? ಒಮ್ಮೆ ನಗುವುದೇಕೆ? ನಮಗೆ ದಾರಿ ಬಿಡು, ನಾವು ಆ ಕಡೆ ಹೋಗುತ್ತೇವೆ' ಎಂದು ಮೈರಕ್ಕೆ ಬೈದೆತಿ ಹೇಳ್ತಾಳೆ. ತನಿಯನು ಅವಳಿಗೆ 'ದಾರಿ ಕೇಳುತ್ತಿದ್ದೀರಾ? ನನಗೆ ಸೊಂಟಕ್ಕೆ ಸುತ್ತಲೂ ಬಟ್ಟೆ ಇಲ್ಲ. ನಾನು ಬಂಗೇರ ಮೂಲದ ಸೋಮಣ್ಣಾಯ ಬಳಿಗೆ ಸೇರಿದವ. ನನ್ನ ಅಪ್ಪೆ-ಅಮ್ಮೆ ಇಬ್ಬರೂ ಇಲ್ಲ' ಎನ್ನುತ್ತಾನೆ. ಮೈರಕ್ಕೆ ಬೈದೆತಿ ತನ್ನ ಮಗ ಚೆನ್ನಯ್ಯನ ತಲೆ ಮೇಲಿದ್ದ ಕಳ್ಳಿನ ಕೊಡವನ್ನು ಇಳಿಸಿ, ತಲೆ ಇಟ್ಟಿದ್ದ ಸಿಂಬೆ ಬಟ್ಟೆಯನ್ನು ತನಿಯನಿಗೆ ಸೊಂಟಕ್ಕೆ ಸುತ್ತಿಕೊಳ್ಳಲು ಕೊಡುತ್ತಾಳೆ. ತನಿಯನಿಗೆ ಅಪ್ಪ ಅಮ್ಮ ಇಲ್ಲದ್ದನ್ನು ಕೇಳಿ ಮೈರಕ್ಕೆ ಬೈದೆತಿ 'ನನಗೆ ಎರಡು ಮಕ್ಕಳಿದ್ದಾರೆ, ನೀನು ಸೇರಿ ಮೂರಾಯಿತು, ಬರುತ್ತೀಯಾ' ಎಂದು ಕೇಳಿದಳು. ತನಿಯ 'ಬರುತ್ತೇನೆ' ಎಂದ. ಬುತ್ತಿಯಲ್ಲಿಯ ಅನ್ನವನ್ನು ಅವನಿಗೆ ಉಣ್ಣಿಸಿ ಕಳ್ಳಿನ ಕೊಡವನ್ನು ತಲೆ ಮೇಲೆ ಹೊರಿಸಿಕೊಂಡು ಮನೆಗೆ ಹೊರಟಳು. 'ದೂರದಿಂದ ಈ ಮೂವರು ಬರುವುದನ್ನು ನೋಡಿದ 'ಅತ್ತಲಾ ಬೈದೆತಿ' ತನ್ನ ತಾಯಿ ಮತ್ತು

ಸಣ್ಣಯ್ಯ ಇಬ್ಬರೇ ಹೋದವರು, ಈಗ ಮೂವರು ಬರುತ್ತಿದ್ದಾರಲ್ಲ ಎಂದುಕೊಂಡು ತಾಯಿಯಲ್ಲಿ 'ಎಂತಹ ಹುಡುಗ, ಎಷ್ಟು ಸುಂದರ; ಎಲ್ಲಿ ಸಿಕ್ಕಿದ?'ಎಂದು ಕೇಳಿದಳು. ತಾಯಿ ಮೈರಕ್ಕೆ ಬೈದೆತಿ 'ಕಲ್ಲಾಪುವಿನ ಗುಡಿ ಹತ್ತಿರ ಸಿಕ್ಕಿದ, ಹೊರಗಿನ ಕೆಲಸಕ್ಕೆ ಇರಲೆಂದು ಅವನನ್ನು ಕರೆದುಕೊಂಡು ಬಂದೆ' ಎಂದು ಹೇಳಿ ಅವನನ್ನು ಸಲಹುತ್ತಾ ಬಂದಳು. ಒಮ್ಮೆ ಏಳು ರಾತ್ರಿ ಎಂಟು ಹಗಲು ಕಳೆದರೂ ತಾಯಿ ಮೈರಕ್ಕೆ ಬೈದತಿಯ ಕಳ್ಳು ಮಾರಾಟವಾಗಲಿಲ್ಲ. ಆಕೆಯು ಕದ್ರಿ ದೇವಸ್ಥಾನದ ಮಂಜುನಾಥನಿಗೆ ತಾನು ತಂದ ಕಳ್ಳು ಮುಗಿದರೆ ಕದ್ರಿಯ ದೇವಸ್ಥಾನಕ್ಕೆ ಕಂಚಿನ ಹೊದಿಕೆ ಇಡಿಸುತ್ತೇನೆ ಎಂದು ಹರಕೆ ಹೊತ್ತಳು. ಹೇಳಿದ ಮಾತು ಗಂಟಲಿನಿಂದ ನಾಲಿಗೆಗೆ ಬರುವಷ್ಟರಲ್ಲಿಯೇ ಮಡಿಕೆ ಕಳ್ಳು ಮಾರಾಟವಾಯಿತು. ಮಗ ಚೆನ್ನಯ್ಯನಿಗೆ ಹೇಳಿ ತನಿಯನಿಗೆ ಕೊಟ್ಟಿಗೆಯನ್ನು ಕಟ್ಟಿಸಿಕೊಟ್ಟಳು. ಅಡಿಕೆ ತೋಟಕ್ಕೆ ಕಳುಹಿಸಿ ಅಲ್ಲಿಂದ ಒಂದು ಹಾಳೆಯನ್ನು ತರಿಸಿ ಅವನ ತಲೆಗೆ ಮುಟ್ಟಾಳೆ ಮಾಡಿಸಿಕೊಟ್ಟಳು. ಆಗ ತನಿಯ ತಾಯಿ ಮೈರಕ್ಕೆ ಬೈದೆತಿಯನ್ನು ಕುರಿತು 'ಅಮ್ಮ ನನಗೊಂದು ಪೀಂಪಿಲಿಕತ್ತಿ ಕೊಡಿ, ನನ್ನ ಕುಲಜನ್ಮದ ಕೆಲಸ ಮಾಡುತ್ತೇನೆ' ಎಂದ. ಚೆನ್ನಯ್ಯನಿಂದ ಕತ್ತಿ ಪಡೆದು ಸಾವಿರ ಕೈಬುಟ್ಟಿಮಾಡಿಕೊಂಡು ಹೋಗಿ ಕದ್ರಿ ದೇವಸ್ಥಾನಕ್ಕೆ ಕೊಟ್ಟು ಬಂದನು. ಒಂದು ದಿನ ಮೈರಕ್ಕೆ ಬೈದೆತಿ ಮಗಳನ್ನು ಕರೆದು, 'ಮಗಳೇ, ಕದ್ರಿ ದೇವಸ್ಥಾನಕ್ಕೆ ಏಳು ಹೊರೆ ಕೊಂಡು ಹೋಗುವುದು ಇದೆ. ಏಳು ಜನರನ್ನು ಸಿದ್ಧಮಾಡು' ಎಂದರೆ ತನಿಯ 'ತಾಯಿ ಏಳು ಜನ ಬೇಡ, ಏಳು ಜನರ ಊಟ, ಏಳು ಜನರ ಅಡಿಕೆ ಹಾಗೂ ಏಳು ಕುಪ್ಪಿ ಕಳ್ಳನ್ನು ನನಗೆ ಕೊಡಿ, ನಾನೊಬ್ಬನೇ ಆ ಹೊರೆಯನ್ನು ಕದ್ರಿ ದೇವಸ್ಥಾನಕ್ಕೆ ಕೊಂಡು ಹೋಗುತ್ತೇನೆ' ಎಂದ. ಮೈರಕ್ಕೆ ಬೈದೆತಿ ಏಳು ಜನರ ಊಟ, ಅಡಿಕೆ ಹಾಗೂ ಕಳ್ಳನ್ನು ತನಿಯನಿಗೆ ನೀಡಿ, ಏಳು ಹೊರೆಯನ್ನು ಒಂದೇ ಹೊರೆ ಮಾಡಿದಳು. ಅದನ್ನು ಅವನು ಸರಾಗವಾಗಿ ಎತ್ತಿಕೊಂಡು ದೇವಸ್ಥಾನದ ಹತ್ತಿರ ಹೋದರೆ ಒಳಗಿದ್ದ ದೈವ ಇವನನ್ನು ಒಳಕ್ಕೆ ಬಾರದಂತೆ ತಡೆಯಿತು. ಆಗ ತನಿಯ 'ದೇವಸ್ಥಾನದ ಹತ್ತಿರ ಬರಬಾರದೆಂದು ಯಾರು ಹೇಳುತ್ತಾರೆ. ನಾನು ತಂದ ಹೊರೆ ಆದೀತು... ನಾನು ಆಗಲಾರೆನೆ' ಎಂದು ಆ ಕಡೆ ಈ ಕಡೆ ನೋಡುವಾಗ ಕದ್ರಿ ದೇವಸ್ಥಾನದ ಗೋಪುರದ ಮಾಡಿಗೆ ಮಾದಳದ ಹಣ್ಣೊಂದು ಮರದಿಂದ ಬಾಗಿಕೊಂಡಿರುವುದು ಕಾಣಿಸಿತು. ತನ್ನ ತಾಯಿ ಮಾದಳದ ಉಪ್ಪಿನಕಾಯಿ ಹಾಕಬೇಕೆಂದು ಹೇಳುತ್ತಿದ್ದುದು ನೆನಪಿಗೆ ಬಂದು ಅದನ್ನು ಕೀಳಲು ಮುಂದಾದ. ಆ ಹಣ್ಣನ್ನು ತನಿಯ ಮುಟ್ಟಿದೊಡನೆ ಮಾಯವಾದ. ಮಾಯವಾದವನೇ ಕಲ್ಲಾಗಿ ಹೋದ, ಈಗ ಕಲ್ಲಾಗಿ ಇದ್ದಾನೆ. ತನ್ನ ಜನಾಂಗದವರು ನೆನೆದಾಗ ಮಾತ್ರ ಬಂದು ಪೂಜೆ ಸ್ವೀಕರಿಸಿ ಕಷ್ಟ ಪರಿಹರಿಸುತ್ತಾನೆ." (ಕೊಟ್ಟ, ಪುಟ ೨೩೭–೨೩೮) ಕೊರಗ ತನಿಯನ ಪಾಡ್ದನವು ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಕಲ್ಲಾದ ತನಿಯನನ್ನು ಕೊಲೆ ಮಾಡಲಾಯಿತೇ?, ದೇವಸ್ಥಾನ ಅಪವಿತ್ರಗೊಳಿಸಿದ ಕಾರಣದಿಂದ ಆತನ ಕೊನೆಯಾಯಿತೆ? ವೀರಾವೇಶದಿಂದ ಹೋರಾಡಿದ ಹಾಗೂ ಏಳು ಜನರ ಹೊರೆ ಒಬ್ಬ ಹೊರುವಷ್ಟು ಶಕ್ತಿಶಾಲಿಯಾದ ಆತನನ್ನು ಕೊರಗರು ದೈವವಾಗಿ ಸ್ವೀಕರಿಸಿರಬೇಕು.

ಉಲ್ಲಂಘನೆ ಕಾದಂಬರಿಯು ಜುಮಾದಿ ದೈವದ ವಿವರಗಳನ್ನು ನೀಡುತ್ತದೆ." ಭೂತಾರಾಧನೆಯಲ್ಲಿ ಶಕ್ತಿಯನ್ನು ಅರ್ಧನಾರೀಶ್ವರ ರೂಪದಲ್ಲಿ (ಅರ್ಧ ಪುರುಷ, ಅರ್ಧ ಸ್ತ್ರೀ) ಆರಾಧಿಸುತ್ತಾರೆ. ಉದಾ: ಜುಮಾದಿದೈವ."[೨೩]

ದೈವ, ದೇವರು ಮತ್ತು ತೀರಿಹೋದ ಹಿರಿಯರ ಬಗ್ಗೆ ತುಳು ಸಂಸ್ಕೃತಿಯಲ್ಲಿ ಪ್ರೀತಿ, ನಂಬಿಕೆ ಹಾಗೂ ಭಯಗಳಿದ್ದವು. ಯಾವುದೇ ನಿರ್ಧಾರ ಸಂಪ್ರದಾಯವಿಲ್ಲದೆ ಮಾಡಲು ಹಿಂಜರಿಯುತ್ತಿದ್ದರು. ಸಂಪ್ರದಾಯ ಮೀರಿದರೆ ತಪ್ಪಾಗುವ ಭಯ ಕಾಡುತ್ತಿತ್ತು.

ಮೂಲದಾಳುಗಳಿಗೆ ಮನೆಯ ಒಳಗೆ ಊಟ ಬಡಿಸುವ ನಿರ್ಧಾರ ಸಂಕಪ್ಪಣ್ಣ ಪ್ರಕಟಿಸಿದಾಗ ಅಂಬಕ್ಕ ಕೊಡುವ ಉತ್ತರದಿಂದ ಮನಸ್ಥಿತಿ ಗಮನಿಸಬಹುದು. "ನೋಡು, ನಮಗೆ ಇನ್ನೊಂದು ಗುತ್ತಿನ ಅಥವಾ ಬೀಡಿನ ಮಾದರಿ ಬೇಡ. ನಮ್ಮ ಹಿರಿಯರು ಹೇಗೆ ಬದುಕಿ ಬಾಳಿದ್ದಾರೋ, ಆ ರೀತಿ ನಡೆದುಕೊಳ್ಳದಿದ್ದರೆ ನಮ್ಮ ದೈವ ದೇವರು, 'ಸಯಿತ್ತಿನಾಕುಳು'(ಸತ್ತು ಹೋದ ಹಿರಿಯರು) ಮುನಿದಾರು!"(ಉಲ್ಲಂಘನೆ, ಪುಟ ೨೪)

ಗುತ್ತು ಮನೆಯು ಭೂತಾರಾಧನೆಯ ನೆಲೆಯಾಗಿತ್ತು. ಭೂತಾರಾಧನೆಯನ್ನು ತಪ್ಪದೆ ಆಚರಿಸುತ್ತಿದ್ದರು. ಉಲ್ಲಂಘನೆ ಕಾದಂಬರಿಯಲ್ಲಿ ಭೂತದ ಗುಡಿ ಹಾಗೂ ಆರಾಧನೆಗಳ ಉಲ್ಲೇಖಗಳಿವೆ.

"... ಮಂಚದ ಬಲಭಾಗದಲ್ಲಿ ಪೂರ್ವಾಭಿಮುಖವಾಗಿ ಉಯ್ಯಾಲೆ. ಆ ಉಯ್ಯಾಲೆಯಲ್ಲಿ ಗುತ್ತಿನ ದೈವ ಜುಮಾದಿಯ ಮುಖವಾಡ. ಬಳಿಯಲ್ಲಿ ಚಿನ್ನದಲ್ಲಿ ಕೆತ್ತಿದ ದೈವದ ಮೂರ್ತಿ. ಅದರ ಬಳಿಯಲ್ಲಿ ಕಂಚಿನ ಕೂಜಿ ಅದರ ಜೊತೆಯಲ್ಲಿ ಕಂಚಿನ ದೀಪ. ಬೆಳ್ಳಿಯ ಖಡ್ಸಲೆ ಮತ್ತು ಕಂಚಿನ ಭಾರವಾದ ದೊಡ್ಡ ಮಣಿ."(ಉಲ್ಲಂಘನೆ, ಪುಟ ೧೭)

ಭೂತಾರಾಧನೆಯ ಕಾಲ

ಭೂತಾರಾಧನೆಯು ಡಿಸೆಂಬರ್‌ನಿಂದ ಮೇ ತಿಂಗಳಿನವರೆಗೆ ಜರುಗುತ್ತದೆ. ತುಳುನಾಡಿನ ಜನ ಭೂತಾರಾಧನೆಗೆ ನಂಬಿಕೆ, ಭಕ್ತಿ, ಗೌರವಗಳಿಂದ ಹೋಗುತ್ತಾರೆ. "ಭೂತಾರಾಧನೆಯು ದೀಪಾವಳಿ ಹಬ್ಬದಿಂದ ತೊಡಗಿ ಪತ್ತನಾಜೆವರೆಗೆ(ಡಿಸೆಂಬರ್‌ನಿಂದ ಮೇವರೆಗೆ) ಜರುಗುವುದನ್ನು ಗಮನಿಸಿದರೆ ಪ್ರಕೃತಿ ಸೌಮ್ಯವಾಗಿರುವ ಕಾಲದಲ್ಲಿ ಆಕೆಯ ಆರಾಧನೆಯ ಕಟ್ಟುಕಟ್ಟಳೆಯನ್ನು ಮುಗಿಸಿ ಮುಂಬರುವ ಮಳೆಗಾಲದಲ್ಲಿ ಕೆರಳದೆ, ಮುನಿಯದೆ ನಮ್ಮನ್ನು ರಕ್ಷಿಸು ಎಂಬ ಭಯ ಮೂಲವಾದ ಪ್ರಾರ್ಥನೆಯೇ ಮುಖ್ಯವಾದಂತೆ ತೋರುತ್ತದೆ."[೧೪]

ಭೂತಾರಾಧನೆಯಲ್ಲಿ ಶೋಷಣೆ

ಭೂತಾರಾಧನೆಯಲ್ಲಿ ಶೋಷಣೆ ನಡೆಯುತ್ತದೆ ಎಂಬ ಅಭಿಪ್ರಾಯವನ್ನು ತೆಂಬರೆ ಕಾದಂಬರಿಯು ವ್ಯಕ್ತಪಡಿಸುತ್ತದೆ. ನುಡಿಗಟ್ಟು ನೀಡುವಾಗ ಒತ್ತಾಯದಿಂದ ಹೇಳಿಸಿ ಕ್ರೌರ್ಯ ಮೆರೆಯುವ ಧನಿಕರು ಇದ್ದರು. "ಭೂತಾರಾಧನೆಯ ಸಾಮಾಜಿಕ ವ್ಯವಸ್ಥೆಯ ಕಟ್ಟಡ ಸಾಕಷ್ಟು ಬಲಿಷ್ಠವಾಯಿತು.ಈ ಕಟ್ಟಡವು ನಂಬಿಕೆ ಮತ್ತು ಸಂಪ್ರದಾಯಗಳ ಬೆಸುಗೆಯಿಂದ ಬಂಧಿತವಾಗಿದೆ. ಅದನ್ನೇ ಬಳಸಿ ಈ ವ್ಯವಸ್ಥೆಯ ನಾಯಕರು ಅಧಿಕಾರ-ದರ್ಪ-ಪ್ರತಿಷ್ಠೆ-ದುರಭಿಮಾನಗಳಿಂದ ಮೆರೆಯುತ್ತಾರೆ. ತಮ್ಮ ಸ್ವಾರ್ಥಸಾಧನೆಗಾಗಿ ಭೂತಕಟ್ಟುವ ಪಂಬದ-ಪರವ-ನಲ್ಕೆಯವರನ್ನು ಬಲಿಪಶು ಮಾಡುತ್ತಾರೆ."(ತೆಂಬರೆ, ಪುಟ ೨೧)

"ಭೂತಕಟ್ಟುವವನು ಸದಾ ಮೊಕ್ತೇಸರ ಅಥವಾ ಆಡಳಿತದಾರನ ಹೆದರಿಕೆಯಲ್ಲಿಯೇ ಇರಬೇಕಾಗುತ್ತದೆ. ಅದರಲ್ಲೂ 'ಬಳೆ' ತೊಟ್ಟವನಿಗಂತೂ ಇನ್ನಷ್ಟು ಆತಂಕ ಭಯ. ಏಕೆಂದರೆ ಒಮ್ಮೆ ಉಚ್ಚಾಟನೆಯಾದರೆ ಮತ್ತೆ ಅವನಿಗೆ ಯಾರಿಂದಲೂ ಹೇಳಿಕೆ ಬರುವುದಿಲ್ಲ. ಅವನಿಗೆ ಆತ್ಮಸಾಕ್ಷಿಯಾಗಿ ನುಡಿಗಟ್ಟು ನೀಡುವ ಸ್ವಾತಂತ್ರ್ಯವಿರುವುದಿಲ್ಲ. ಪ್ರಮುಖರು ಹೇಳಿದಂತೆ ನುಡಿ ಹೇಳಬೇಕಾಗುತ್ತದೆ. ಉಚ್ಚಾಟನೆ ಮಾಡಲು ಕೊಡುವ ಕಾರಣಗಳು ಹಲವಾರು. ಭೂತದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಇರುವುದು, ಆರಾಧನೆಯ ಸಂದರ್ಭದಲ್ಲಿ ಕುಡಿಯುವುದು, ಮಡಿಮೈಲಿಗೆಯಲ್ಲಿ ಶುದ್ಧತೆ ಇಲ್ಲದೇ ಇರುವುದು, ಬಲಹೀನನಾಗಿರುವುದು, ನುಡಿಗಟ್ಟು ಹೇಳಲು ಬಾರದೇ ಇರುವುದು. ಈಗಿನ ನ್ಯಾಯಪದ್ಧತಿಯಲ್ಲಿ ಭೂತಕಟ್ಟಿದವ ನ್ಯಾಯದಾನ ಮಾಡಿದಾಗ ಏನಾದರೂ ಹೆಚ್ಚುಕಡಮೆಯಾದರೆ ತಕ್ಷಣವೇ ಆ ಭೂತದ ಆವೇಶವನ್ನು 'ತಂತ್ರಿಗಳು' ಸ್ಥಗಿತಗೊಳಿಸುತ್ತಾರೆ. ಆಗ ಪ್ರಮುಖ ಶಕ್ತಿಯಾದ ಭೂತ ಬಾಯಿಗೆ ಬೀಗ ಹಾಕಿ ಕೂತು ಮೌನವಾಗಿರಬೇಕು."(ತೆಂಬರೆ, ಪುಟ ೨೯). ಭೂತಾರಾಧನೆಯಲ್ಲಿ ಮೇಲ್ವರ್ಗದವರಿಂದ ಶೋಷಣೆಗೆ ಒಳಗಾಗುವ ಭೂತಾರಾಧಕರ ಮೇಲೆ ಪ್ರಸ್ತುತ ಸಾಲುಗಳು ಬೆಳಕನ್ನು ಚೆಲ್ಲುತ್ತವೆ. ನುಡಿಕಟ್ಟು ಹೇಳುವಲ್ಲಿನ ನಿರ್ಬಂಧಗಳು, ಬದುಕಿನ ಆಧಾರವಾಗಿರುವ ಭೂತಾರಾಧನೆಯಿಂದ ಉಚ್ಚಾಟಿಸಲ್ಪಟ್ಟಾಗ ಆರ್ಥಿಕ ಹಿನ್ನಡೆಗೆ ಒಳಗಾಗುವ ಅಪಾಯ, ವೈದಿಕ ಪ್ರವೇಶವನ್ನು ಅವರ ನಿಯಂತ್ರಣವನ್ನು ಅರಿಯಲು ಸಾಧ್ಯವಿದೆ.

ಭೂತಗಳು ನ್ಯಾಯದ ನೆಲೆಯೂ ಆಗಿರುವುದರಿಂದ ಭೂತ ಕಟ್ಟುವವರನ್ನು ತಮಗೆ ಬೇಕಾದ ನ್ಯಾಯ ನೀಡಲು ಬಳಸುತ್ತಿದ್ದರು. ಜಮೀನ್ದಾರರಿಗೆ ಬೇಕಾದ ನ್ಯಾಯ ನೀಡಬೇಕಾಗುತ್ತಿತ್ತು. ಇಲ್ಲವಾದರೆ ವಿರೋಧ ಮೊದಲಾದ ಅಹಿತಕರ ಘಟನೆಗಳು ಸಂಭವಿಸುತ್ತಿತ್ತು. "ಭೂತಗಳನ್ನು ಕೋಲ ನೇಮಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿದ್ದನ್ನು ಕಂಡವನು ಐತ. ಪರವರನ್ನು, ಪಂಬದನನ್ನು ಬಳಸಿಕೊಂಡು ಗೇಣಿದಾರರ ಭೂಮಿಯನ್ನು ಸೆಳೆದುಕೊಂಡ ಅನೇಕ ಘಟನೆಗಳನ್ನು ಕಂಡವನು ಕೇಳಿದವನು ಅವನು."(ತೆಂಬರೆ, ಪುಟ ೮೮) ತೆಂಬರೆ ಕಾದಂಬರಿಯಲ್ಲಿ ಗೇಣಿಯ ಭೂಮಿ ಸೆಳೆದ ನೈಜ ಘಟನೆ ಐತನ ಜೀವನದಲ್ಲೂ ನಡೆಯಿತು. ಭೂತಾರಾಧನೆಯ ವೇಳೆ ಭೂಮಿ ಬೂದನದೇ ಎಂಬ ಅಭಯ ನೀಡಿದ್ದರೂ, ಬೆಳೆ ಕೊಯ್ಯುವ ವೇಳೆ ಚೆಲುವಯ್ಯ ತನ್ನ ಹಿಂಬಾಲಕರ ಮೂಲಕ ಬೂದನ ಪರಿವಾರಕ್ಕೆ ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ. ಬೂದ ಮೃತನಾದರೆ, ಅತನ ಪತ್ನಿಯ ಕೈತಟ್ಟನ್ನೇ ಕತ್ತರಿಸಿಹಾಕುತ್ತಾರೆ. ಇಷ್ಟೇ ಅಲ್ಲದೆ ಮದಿಪು ನೀಡಿದ ಐತನ ಮನೆಗೆ ಬಂದು ಚಿಲಕ ಹಾಕಿ ಮನೆಗೆ ಬೆಂಕಿ ಹಾಕುತ್ತಾರೆ. ಐತನ ತಾಯಿ ಸುಟ್ಟು ಹೋಗುತ್ತಾರೆ. ಜಮೀನಿಗಾಗಿ ಇಂತಹ ಹೀನ ಕೃತ್ಯ ಮಾಡಿರುವುದನ್ನು ಅನುಭವಿಸಿದವನು ಐತ.

ಭೂತಾರಾಧನೆಯಲ್ಲಿ ಮಹಿಳೆಯರು

ಭೂತಕಟ್ಟುವವನ ಜೊತೆ ಬೆಂಬಲವಾಗಿ ನಿಂತು ಸಹಕರಿಸುವ ಮಹಿಳೆಯರ ಪಾತ್ರ ಹಿರಿದು. ಆದರೆ ವಿಪರ್ಯಾಸವೆಂದರೆ ಭೂತಕಟ್ಟುವವನಿಗೆ ಇರುವ ಬೆಲೆಯೂ ಇವರಿಗಿಲ್ಲ. ಭೂತಕಟ್ಟುವ ಸ್ವಾತಂತ್ರ್ಯ ಹೆಣ್ಣುಮಕ್ಕಳಿಗೆ ಇಲ್ಲ. ಅವರು ಸಂಧಿ ಹಾಡಿ ಆವೇಶ ಬರಲು

ಸಹಕರಿಸುತ್ತಾರೆ. ಇವರ ನೆನೆಪಿನ ಶಕ್ತಿ ಅಗಾಧವಾದದ್ದು. ಯಾವುದೇ ಭಯವಿಲ್ಲದೆ ಸಂಧಿ ಹಾಡುವ ಇವರ ಶ್ರಮ ಗಮನಾರ್ಹ. ಭೂತಾರಾಧನೆಯಿಂದ ಸಿಗುವ ಸಂಪಾದನೆ ಸಾಕಾಗದೆ ಕುಟುಂಬಕ್ಕಾಗಿ ಮತ್ತೆ ಕೂಲಿಮಾಡಿ ಬದುಕು ಸಾಗಿಸುವ ಹೆಣ್ಣುಮಕ್ಕಳ ಪಾಡು ತುಂಬಾ ಶೋಚನೀಯ. ಸಂಪ್ರದಾಯದ ಬಲೆಯಲ್ಲೇ ಇದ್ದ ಭೂತಾರಾಧನೆ ಮಹಿಳೆಯರಿಗೆ ಭೂತಕಟ್ಟಲು ಅವಕಾಶ ನೀಡಲಿಲ್ಲ.

ತಾನು ಕುಣಿಯಬೇಕು ಎನ್ನುವ ಹಂಬಲವಿದ್ದರೂ ಹುಡುಗಿಯರು ಹಾಗೆಲ್ಲ ಕುಣಿಯಬಾರದು ಎಂದೆಲ್ಲ ಅಮ್ಮ ಹೇಳುತ್ತಿದ್ದ ಮಾತುಗಳು ಭೂತಕ್ಕಿಂತ ಭಯಂಕರವಾಗಿ ಕಾಣಿಸಿತ್ತು ಮೈರೆಗೆ. ಒಮ್ಮೆಯಂತೂ ಅಮ್ಮನೊಡನೆ ಮಾತಾಡುತ್ತಾ ಮಾತಾಡುತ್ತಾ ಮೈರೆ ಕೇಳಿದ್ದಳು, 'ಹೆಂಗಸರು ಯಾಕೆ ಭೂತ ಕಟ್ಟುವುದಿಲ್ಲ? ಹೆಣ್ಣು ದೇವತೆಗಳಿಗೂ ಗಂಡಸರೇ ಭೂತ ಕಟ್ಟುವುದು ಯಾಕೆ? ಹೆಂಗಸರು ಯಾಕೆ ಭೂತಗಳ ಬಳಿಗೆ ಹೋಗಬಾರದು? ಉತ್ತರವಿಲ್ಲ.' 'ಅದೆಲ್ಲ ಹಿರಿಯರು ಮಾಡಿದ ಸಂಪ್ರದಾಯ ಅದು ನಮ್ಮ ಕಟ್ಟುಕಟ್ಟಳೆ. ಭೂತದ ದೃಷ್ಟಿಬಿದ್ದರೆ ಹೆಣ್ಣುಗಳು ಹಾಳಾಗುತ್ತಾರೆ, ರಕ್ತ ಕಾರುತ್ತಾರೆ, ಬಾವಿಗೆ ಬೀಳುತ್ತಾರೆ.'(ತೆಂಬರೆ, ಪುಟ ೩೫) 'ತೆಂಬರೆ' ಕಾದಂಬರಿಯಲ್ಲಿನ ಈ ಮಾತುಗಳು ಭೂತಾರಾಧನೆಯ ಕುರಿತ ಮಹಿಳೆಯರ ಇತಿಮಿತಿಯನ್ನು ಗುರುತಿಸುತ್ತವೆ.

ಭೂತ ಕಟ್ಟುವವನ ಸ್ಥಿತಿಗತಿ

ಭೂತ ಕಟ್ಟುವವ ಲೋಕದ ದೃಷ್ಟಿಯಿಂದ ಭೂತಾರಾಧನೆಯಂದೂ ಮಾತ್ರವೇ ಗೌರವಕ್ಕೆ ಪಾತ್ರನಾಗುತ್ತಾನೆ. ಉಳಿದ ದಿನಗಳಲ್ಲಿ ಅವನೊಬ್ಬ ಅಸ್ಪೃಶ್ಯ. ಅವನಿಗೆ ಸಂಭಾವನೆಯೂ ಕಡಿಮೆ. ಬಡವನಾದ ಆತನ ಬದುಕು ಸಾಗಿಸಲು ಆ ಸಂಪಾದನೆಯಿಂದ ಸಾಧ್ಯವಿಲ್ಲ. ಸೀಮಿತ ಕಡೆಗಳಲ್ಲಿ ಮಾತ್ರವೇ ಭೂತ ಕಟ್ಟಲು ಅವಕಾಶವಿರುವುದರಿಂದ ಆ ವ್ಯವಸ್ಥೆ ಮೀರಿ ಹೋಗಲು ಆತನಿಂದ ಸಾಧ್ಯವಿಲ್ಲ. ಬೇರೆ ದುಡಿಮೆಗಳಲ್ಲಿ ಪಲ್ಲಟ ಕಂಡುಬಂದರೂ ದೈವಾರಾಧನೆಯ ವಿಧಿನಿಷೇಧಗಳು ಹಾಗೇ ಮುಂದುವರಿಯುತ್ತಿರುವುದು ಭಕ್ತಿಯ ನಂಬಿಕೆಗಳಲ್ಲಿ ಇರುವ ಸ್ಥಿರತೆ ಅದನ್ನು ಮೀರಲು ಇರುವ ಭಯವನ್ನು ಸ್ಪಷ್ಟವಾಗಿ ಗುರುತಿಸಬಹುದು.

"ಕೋಲ, ನೇಮ ಕಟ್ಟುವವರಲ್ಲೂ ಪಂಬದ, ಪರವ, ನಲಿಕೆ, ಪಾಣಾರ, ಅಜಿಲರೆಂಬ ಜಾತಿಯ ಜನರಿದ್ದಾರೆ. ಪರವರು ರಾಜನ್ ದೈವಗಳಾದ ಜುಮಾದಿ, ಕಲ್ಕುಡ, ಪಂಜುರ್ಲಿಗೆ ಕಟ್ಟುತ್ತಾರೆ. ನಲಿಕೆಯವರ ಕ್ಷೇತ್ರ ಸೀಮಿತ. ಅವರು ಇನ್ನೊಂದು ಕಡೆ ಭೂತಕಟ್ಟಲು ಹೋಗಬೇಕಾದರೆ ಅನುಮತಿ ಪಡೆಯಬೇಕು. ಅವರು ಚಾಮುಂಡಿ ಇತ್ಯಾದಿ ದೈವಗಳಿಗೆ ಕಟ್ಟುತ್ತಾರೆ. ಪಂಬದರ ಮನೆದೈವ ಪಂಜುರ್ಲಿ."(ತೆಂಬರೆ, ಪುಟ ೨೦)

ಭೂತ ಕಟ್ಟುವವನು ತೀರ ಮಡಿಯನ್ನು ಕಾಪಾಡಬೇಕಾಗುತ್ತದೆ. ಬಳೆಯನ್ನು ಹಾಕಿದ ನಂತರ ಬದುಕಿಗೆ ಹಲವು ನಿಯಮಗಳು ಮುಖ್ಯವಾಗುತ್ತವೆ. ತೆಂಬರೆ ಕಾದಂಬರಿಯಲ್ಲಿ ಭೂತಾರಾಧನೆ ಮಾಡುವವನು ಆಚರಿಸುವ ಮಡಿ ಮೈಲಿಗೆಗಳು ದಾಖಲಾಗಿವೆ. "ಮನೆಯಲ್ಲಿ ಹೆರಿಗೆಯಾದಾಗ ಅಥವಾ ಸಾವಿನ ಸೂತಕವಾದಾಗ ಮನುಷ್ಯನಾಗಿದ್ದೂ ಆತ ಕಲ್ಲಿನಂತೆ

ಬಿದ್ದುಕೊಂಡಿರಬೇಕು. ಕುಟುಂಬದಲ್ಲಿ ಯಾರಾದರೂ ತೀರಿಕೊಂಡರೆ ಅವರ ಹತ್ತಿರ ಸುಳಿಯುವಂತಿಲ್ಲ. ನಲವತ್ತೊಂದು ದಿನಗಳವರೆಗೆ ಸೂತಕ ಎಂದು ಬೇರೊಂದು ಗುಡಿಸಲು ಕಟ್ಟಿಕೊಂಡು ತನ್ನ ಮನೆಗೆ ಅಸ್ಪೃಶ್ಯನಾಗಿ, ಒಂಟಿಯಾಗಿ ಅಡುಗೆಮಾಡಿಕೊಂಡು ಕಾಲ ಕಳೆಯಬೇಕು. ತಾಯಿ ಸಾಯಲಿ, ತಂದೆ ಸಾಯಲಿ, ಹೆಂಡತಿ ಮಕ್ಕಳೇ ಸಾಯಲಿ, ಅವರನ್ನು ಮುಟ್ಟಕೂಡದು-ಹೆಣಕ್ಕೆ ಹೆಗಲು ಕೊಡಕೂಡದು. ಮನುಷ್ಯ ಸಂಬಂಧವನ್ನು ಕತ್ತರಿಸಿಕೊಂಡು ಭೂತದಂತೆ ಬದುಕಬೇಕು. ಕೈಗೆ ಬಳೆ ಹಾಕಿಕೊಳ್ಳುವುದು ಎಂದರೆ ಭೂತಕ್ಕೆ ತನ್ನನ್ನು ತೆತ್ತುಕೊಂಡಂತೆ."(ತೆಂಬರೆ, ಪುಟ ೨೩). ಇಲ್ಲಿ ಭೂತಕಟ್ಟುವವನ ಬದುಕಿನ ತ್ಯಾಗಜೀವನ ಹಾಗೂ ಆಚರಿಸಬೇಕಾದ ಕಠಿಣ ನಿಯಮಗಳ ಉಲ್ಲೇಖವಿದೆ.

ಬಳೆ ಹಾಕುವುದು

ಭೂತಾರಾಧಕರಿಗೆ ಬಳೆ ಹಾಕುವ ಒಂದು ಪದ್ಧತಿಯಿದೆ. ಅದರ ನಂತರ ಅವರ ಜೀವನ ವಿಧಾನ ಬದಲಾಗುತ್ತದೆ. ಭೂತಾರಾಧಕ ಸಂಬಂಧಪಟ್ಟ ಭೂತಕ್ಕೆ ಹಾಗೂ ನಿಗದಿತ ಸೀಮೆಯೊಳಗೆ ಭೂತಕಟ್ಟುವ ನಿರ್ಬಂಧಕ್ಕೆ ಒಳಗಾಗುತ್ತಾನೆ. ತೆಂಬರೆ ಕಾದಂಬರಿಯು ಬಳೆ ಹಾಕುವ ವಿವರಗಳನ್ನು ನೀಡುತ್ತದೆ. "ಬಳೆ ಹಾಕಿಕೊಂಡವ ತಾನು ಕಟ್ಟುವ ಒಂದೇ ಹೆಸರಿನ ಭೂತಕ್ಕೆ ಮಾತ್ರವೇ ಕಟ್ಟಬೇಕು ಎಂಬ ನಿಯಮ. ಜೊತೆಗೆ ಇದು ಸೀಮೆಯನ್ನು ನಿಗದಿಪಡಿಸುತ್ತದೆ. ಆ ಸೀಮೆಯ ಗಡಿಯನ್ನು ದಾಟಿಹೋಗಕೂಡದು. ಒಂದು ವೇಳೆ ಗಡಿದಾಟಿದರೆ ದಂಡವನ್ನು ಹೇರಲಾಗುತ್ತದೆ. ಕುಣಿತ ಮತ್ತು ನುಡಿಗಟ್ಟುಗಳಲ್ಲಿ ಪ್ರಾವೀಣ್ಯವನ್ನು ಪಡೆದು 'ಪ್ರತಿಷ್ಠಿತ' ಎನಿಸಿದ ವ್ಯಕ್ತಿಗೆ ಈ ಬಳೆಯನ್ನು ಹಾಕುತ್ತಾರೆ. ಆ ವ್ಯಕ್ತಿ ಆ ಒಂದು ವ್ಯವಸ್ಥೆಯ ಸೀಮೆಯಲ್ಲಿ ಇರಬೇಕಾಗುತ್ತದೆ. ಎಲ್ಲ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಬಳೆ ಹಾಕುವ ಪದ್ಧತಿಯೆಂದರೆ ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ದೈವಕ್ಕೆ ಒತ್ತೆ ಇಡುವುದು."(ತೆಂಬರೆ, ಪುಟ ೨೬-೨೭)

ಭೂತಾರಾಧನೆಯಲ್ಲಿ ನ್ಯಾಯವ್ಯವಸ್ಥೆ

ಭೂತಾರಾಧನೆಯಲ್ಲಿ ನ್ಯಾಯ ತೀರ್ಮಾನ ಮಾಡುವ ಭಾಗ ಮುಖ್ಯವಾದುದು. ಭೂತದ ನ್ಯಾಯವನ್ನು ಭಯಭಕ್ತಿಯಿಂದ ಜನ ಒಪ್ಪುತ್ತಿದ್ದರು.

"ಊರಿನ ನ್ಯಾಯ ಪಂಚಾತಿಕೆಗಳು ಭೂತಸ್ಥಾನ ಅಥವಾ ಗರಡಿಗಳಲ್ಲಿ ನೆರವೇರುವುದು."[೨೫] ಬ್ರಿಟಿಷರು ಕೂಡ ಭೂತಾರಾಧನೆಯ ಸಂದರ್ಭ ನೀಡುವ ನ್ಯಾಯಕ್ಕೆ ಕಾನೂನಿನ ಮಾನ್ಯತೆ ನೀಡಿದ್ದರೆಂಬ ವಿವರವನ್ನು ತೆಂಬರೆ ಕಾದಂಬರಿ ದಾಖಲಿಸುತ್ತದೆ. ಕುಡಿಯರ ಕೂಸು, ತೆಂಬರೆ ಕಾದಂಬರಿಗಳು ಭೂತಾರಾಧಕ ಊರಿನ ವಿವರಗಳನ್ನು ಸಂಗ್ರಹಿಸಿ ನ್ಯಾಯ ನೀಡುವಲ್ಲಿ ತೋರುವ ಧೈರ್ಯ, ಎಚ್ಚರಿಕೆಗಳನ್ನು ದಾಖಲಿಸುತ್ತವೆ.

"ವಿವಾದಗಳ ವಿಚಾರಣೆಯ ಸಂದರ್ಭದಲ್ಲಿ ದೈವದ ಅಲೌಕಿಕ ಅಸ್ತಿತ್ವವನ್ನು ಒಪ್ಪಿಕೊಂಡ ಜನರು ಅದರ ಮಾತು ಮತ್ತು ವರ್ತನೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಜನರ ಇಂತಹ ಭಾವನೆಗಳನ್ನು ಗಟ್ಟಿಗೊಳಿಸುವ ತಂತ್ರಗಳನ್ನು ಭೂತ ಕಟ್ಟಿದವ ಅನುಸರಿಸುತ್ತಾನೆ. ಕೆಲವು ವೇಳೆ

ವೀಳ್ಯದೆಲೆಯನ್ನು ಮೇಲಕ್ಕೆ ಹಾರಿಸಿ ಅದು ಮೇಲ್ಮುಖವಾಗಿ ಅಥವಾ ಕೆಳಮುಖವಾಗಿ ಬೀಳುವುದನ್ನು ಹೊಂದಿಕೊಂಡು ನ್ಯಾಯ ತೀರ್ಮಾನ ಮಾಡುತ್ತಾನೆ. ವಾದಿ, ಪ್ರತಿವಾದಿ ಮತ್ತು ನೆರೆದಿರುವ ಭಕ್ತರ ಕೈಗೆ ಅಕ್ಕಿಕಾಳುಗಳನ್ನು ಕೊಟ್ಟು ಎಣಿಸಿದಾಗ ಸಮಸಂಖ್ಯೆ ಮತ್ತು ಬೆಸಸಂಖ್ಯೆಯ ಅಕ್ಕಿಕಾಳುಗಳು ಇರುವುದರ ಮೇಲೆ ತೀರ್ಮಾನ ಕೊಡುತ್ತಾನೆ ಅಥವಾ ತೆಂಗಿನ ಕಾಯಿಯನ್ನು ನೆಲಕ್ಕೆ ಅಪ್ಪಳಿಸಿದಾಗ ಒಡೆದ ಭಾಗಗಳು ಕವುಚಿ ಬೀಳುವುದರ ಮೂಲಕ ತೀರ್ಮಾನ ನೀಡುತ್ತಾನೆ. ವೀಳ್ಯದೆಲೆ ಕವುಚಿ ಬಿದ್ದರೆ, ಕಾಳುಗಳ ಸಂಖ್ಯೆ 'ಸಮ' ಬಂದರೆ, ತೆಂಗಿನಕಾಯಿಯ ಭಾಗಗಳು ಕವುಚಿ ಬಿದ್ದರೆ ಆಗ ಇಂತಹ ಘಟನೆಗಳು ಕೇಡನ್ನು, ದೋಷವನ್ನು, ಜನರ ನಂಬಿಕೆಯು ಕಡಿಮೆಯಾಗಿದೆ ಎಂಬುದನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ. ತನ್ನ ವಾಕ್ಚಾತುರ್ಯ ಮತ್ತು ಜಾಣ್ಮೆಯ ಮೂಲಕ ಭೂತ ಕಟ್ಟಿದವನು ದೈವದ ಅಲೌಕಿಕತೆಯನ್ನು ಜನರ ಮನಸ್ಸಿನಲ್ಲಿ ಪ್ರತಿಷ್ಠಾಪಿಸಲು ಶ್ರಮಿಸುವುದು ಕಂಡುಬರುತ್ತದೆ."(ತೆಂಬರೆ, ಪುಟ ೯೬) ಭೂತವು ನೀಡುವ ನ್ಯಾಯವನ್ನು ಜನಸಮುದಾಯ ಸ್ವಾಗತಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಭೂತಾರಾಧನೆಯಲ್ಲಿ ಜಾತಿವ್ಯವಸ್ಥೆ

"ಭೂತಾರಾಧನೆ ಜಾತಿವ್ಯವಸ್ಥೆಯನ್ನು ಮತ್ತಷ್ಟು ಭದ್ರಗೊಳಿಸಿರುವ ಅಂಶ ಇತ್ತೀಚಿನ ಅಧ್ಯಯನಗಳಿಂದ ಸಾಬೀತುಗೊಂಡಿದೆ. ಮೇಲ್ನೋಟಕ್ಕೆ ಭೂತಾರಾಧನೆಯ ಸಂದರ್ಭದಲ್ಲಿ ಎಲ್ಲಾ ಜಾತಿಯ ಜನರೂ ಒಂದೇ ಕಡೆ ಸೇರಿದ್ದಾರೆ ಎನ್ನುವ ಭಾವನೆ ಬರುತ್ತದೆ. ಭೂತಾರಾಧನೆಯಲ್ಲಿ ವೇಷ ಕಟ್ಟಿಕೊಂಡು ಕುಣಿಯುವವರು ಕೆಳಜಾತಿಯವರು. ಅಂದರೆ ಪರವ, ಪಂಬದ, ನಲಿಕೆ ಮುಂತಾದ ಜಾತಿಯವರು. ಮೇಲುಜಾತಿಯವರು ಭೂತದ ವೇಷವನ್ನು ಇವರಿಂದ ಕಟ್ಟಿಸುತ್ತಾರೆ. ಇಲ್ಲಿ ವ್ಯವಸ್ಥೆ ಬದಲಾಗಬಾರದು, ಬದಲಾದರೆ ತಮ್ಮ ಕೈಯಲ್ಲಿರುವ ಅಧಿಕಾರ ಹೋಗಿಬಿಡಬಹುದು ಎನ್ನುವ ಭಯ ಶ್ರೀಮಂತವರ್ಗಕ್ಕಿದೆ. ಹಾಗಾಗಿ ಸಾಮಾಜಿಕ ಅಂತರಗಳನ್ನು ಯಥಾಪ್ರಕಾರ ಕಾಪಾಡಿಕೊಂಡು ಬರುವುದೇ ಶ್ರೀಮಂತರ ಜೀವನದ ಏಕೈಕ ಗುರಿಯಾಗಿ ಕಂಡುಬರುತ್ತದೆ."[೧೬] ತಳಸಮುದಾಯದವರ ಪಾತ್ರ ಭೂತಾರಾಧನೆಯಲ್ಲಿ ಮುಖ್ಯವಾಗಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ.

"ಮೇಲ್ನೋಟಕ್ಕೆ ಭೂತಾರಾಧನೆಯ ಸಂದರ್ಭದಲ್ಲಿ ಎಲ್ಲಾ ಜಾತಿಗಳ ಜನರು ಒಂದೆಡೆ ಸೇರಿದ್ದಾರೆಂಬ ಭಾವನೆ ಬಂದರೂ, ಭೂತಾರಾಧನೆಯ ಸಂದರ್ಭದಲ್ಲಿ ಜಾತಿಗೆ ತಕ್ಕಂತೆ ಕೆಲಸ ಕಾರ್ಯಗಳನ್ನು ವರ್ಗೀಕರಿಸಲಾಗುತ್ತದೆ. ಕೆಳಜಾತಿಯವರಾದ ಪರವ, ಪಂಬದ, ನಲಿಕೆ ಮೊದಲಾದ ಜನರು ವೇಷಕಟ್ಟಿಕೊಂಡು ಕುಣಿಯುವವರಾದರೆ, ಮೇಲ್ಜಾತಿಯವರು ವೇಷವನ್ನು ಇವರಿಂದ ಕಟ್ಟಿಸುತ್ತಾರೆ."[೧೭] ಜಾತಿವ್ಯವಸ್ಥೆಯ ಪ್ರಕಾರ ಕೆಲಸ ಕಾರ್ಯಗಳ ಹಂಚಿಕೆ ಸಾಮಾನ್ಯವಾಗಿ ನಡೆಯುತ್ತಿತ್ತು.

"ಅಣಿಯನ್ನು ಕಟ್ಟಿಕೊಂಡು ಮುಖವಾಡ ಧರಿಸಿ, ಆಯುಧಗಳನ್ನು ಹಿಡಿದುಕೊಳ್ಳುವುದು ಮುಂದಿನ ಪ್ರಮುಖ ಹಂತ. ಇದು ಮೂರ್ತದಿಂದ ಅಮೂರ್ತದೆಡೆಗೆ ಸ್ಥಿತ್ಯಂತರಗೊಳುವ ಹಂತ. ಈ ಹಂತದಲ್ಲಿ ಆರಾಧನೆಯ ಚಿತ್ರಣವನ್ನೊಳಗೊಂಡ ಸಂಧಿಯ ಭಾಗವನ್ನು ಹಾಡುತ್ತಾರೆ. ಭೂತ

ಕಟ್ಟಿದ ಐತ ಪಂಬದ ಅಣಿ, ಮುಖವಾಡ ಮತ್ತು ಆಯುಧಗಳಿಂದ ಅಲೌಕಿಕ ಹಂತಕ್ಕೆ ಏರುತ್ತಾನೆ. ಭೂತವು ಜನರ ಜೊತೆ ಬೆಸೆದುಕೊಂಡಿರುವ ಆತ್ಮೀಯ ಸಂಬಂಧವನ್ನು ಪ್ರಕಟಪಡಿಸುತ್ತದೆ..... 'ನಾನು ಶೀಲವಂತರಿಗೆ ನನ್ನ ತುಂಬಿದ ಕೊಡದಲ್ಲಿರುವ ಅಮೃತವನ್ನು ಉಣಬಡಿಸುತ್ತೇನೆ; ಕೆಟ್ಟವರಿಗೆ ನನ್ನ ಮೊಲೆಯಲ್ಲಿ ತುಂಬಿದ ವಿಷವನ್ನು ಉಣಿಸುತ್ತೇನೆ. ನಾನು ನ್ಯಾಯಕ್ಕೆ ಆಶ್ರಯ ಕೊಡುತ್ತೇನೆ, ನನ್ನ ಖಡ್ಗದಿಂದ ಎಲ್ಲಾ ವಿಧದ ಅನ್ಯಾಯಗಳನ್ನು ನಿಗ್ರಹಿಸುತ್ತೇನೆ. ನಾನು ನ್ಯಾಯಕ್ಕೆ ಅನುವು ಮಾಡಿ ಅನ್ಯಾಯಕ್ಕೆ ನನ್ನ ಖಡ್ಗವನ್ನು ತೋರಿಸಿ, ನ್ಯಾಯಕ್ಕೆ ನಾನೇ ರಕ್ಷಣೆಯ ಬೇಲಿಯಾಗುತ್ತೇನೆ.'(ತೆಂಬರೆ, ಪುಟ ೫೫) ತಳಸಮುದಾಯದವರಿಂದ ಭೂತಾರಾಧನೆ ಆಚರಿಸಲ್ಪಟ್ಟರೂ ನ್ಯಾಯ ಎಲ್ಲ ಸಮುದಾಯದವರಿಗೂ ಲಭ್ಯವಾಗುತ್ತಿತ್ತು. ಭೂತ ನೀಡುವ ನ್ಯಾಯದ ಮಾತುಗಳನ್ನು ಎಲ್ಲ ಸಮುದಾಯದವರು ಒಪ್ಪಿಕೊಳ್ಳುತ್ತಿದ್ದರು.

ಭೂತಾರಾಧನೆಯಲ್ಲಿ ರಾಜಕೀಯ ವ್ಯವಸ್ಥೆ

ಭೂತಾರಾಧನೆಯು ತುಳುನಾಡಿನ ರಾಜಕೀಯ ವ್ಯವಸ್ಥೆಯಡಿ ಪೋಷಿಸಿಕೊಂಡು ಬಂದಿತ್ತು. ಅಧಿಕಾರ ಕೇಂದ್ರಗಳು ಧಾರ್ಮಿಕ ಸಂಸ್ಕೃತಿಯ ಹರಿಕಾರರಾಗಿದ್ದು ಸರ್ವರನ್ನು ಒಳಗೊಂಡ ಭೂತಾರಾಧನೆಯನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದ್ದವು. ಜೈನ ಇಲ್ಲವೆ ಬ್ರಾಹ್ಮಣ ಅಧಿಕಾರದ ಚುಕ್ಕಾಣಿ ಹಿಡಿದಾಗ ಆತನೂ ಭೂತಾರಾಧನೆ ಮಾಡಲೇಬೇಕಾದ ಅನಿವಾರ್ಯತೆ ಒದಗಿದಾಗ ಅದನ್ನು ಒಪ್ಪಿಕೊಳ್ಳದಿದ್ದರೆ ಅಧಿಕಾರ ಕಳಕೊಳ್ಳುವ ಭೀತಿ ಇತ್ತು.

'ತೆಂಬರೆ' ಕಾದಂಬರಿ ಭೂತಾರಾಧನೆಯಲ್ಲಿ ರಾಜಕೀಯ ವ್ಯವಸ್ಥೆಯ ಬಿಂಬಗಳನ್ನು ಪರಿಚಯಿಸುತ್ತಾ ವಿಶಿಷ್ಟ ಭೂತಗಳ ಕಡೆಗೂ ಗಮನಸೆಳೆಯುತ್ತದೆ. 'ತೆಂಬರೆ' ಕಾದಂಬರಿ ವಿಭಿನ್ನ ಪ್ರಶ್ನೆಗಳನ್ನು ಎತ್ತುತ್ತಾ ಭೂತಾರಾಧನೆಯಲ್ಲಿ ರಾಜಕೀಯ ವ್ಯವಸ್ಥೆ ಹುಟ್ಟಿಕೊಳ್ಳುವ ಬಗೆ ಆಶ್ಚರ್ಯವನ್ನು ತರುತ್ತದೆ. ಗ್ರಾಮದ ಆಡಳಿತದಲ್ಲಿ ಭೂತಾರಾಧನೆ ಮಹತ್ವದ ಪಾತ್ರ ವಹಿಸುತ್ತಿತ್ತು.

"ತುಳುನಾಡಿನಲ್ಲಿ 'ಗುತ್ತು' ಎನ್ನುವುದು ಗ್ರಾಮದಲ್ಲಿ ಒಂದು ಆರ್ಥಿಕ ಘಟಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ. ಸಾಂಪ್ರದಾಯಿಕವಾಗಿ ಒಂದು ಗ್ರಾಮದಲ್ಲಿ ನಾಲ್ಕು ಗುತ್ತುಗಳಿರುತ್ತವೆ. ಕೆಲವೊಮ್ಮೆ ಎಂಟು ಗುತ್ತುಗಳಿರಬಹುದು. ಭೂಮಿಯ ಮೇಲಿನ ಹಕ್ಕನ್ನು ಗುತ್ತಿನ ರೂಪದಲ್ಲಿ ಪಡೆದವನು ಗುತ್ತಿನವನು."(ತೆಂಬರೆ, ಪುಟ ೭೮)

ಅನ್ಯಧರ್ಮೀಯರ ಭೂತಾರಾಧನೆ

"ತುಳುನಾಡಿನ ಜೈನ ಧರ್ಮೀಯರು ನಡೆಸುವ ಭೂತಾರಾಧನೆ–ನಾಗಾರಾಧನೆಗಳನ್ನು ಪರಿಶೀಲಿಸಬಹುದು. ಜೈನಧರ್ಮವು ಪ್ರತಿಪಾದಿಸಿದ 'ಸಮ್ಯಕ್ತ್ವ'ಕ್ಕೆ ವಿರೋಧವಾಗಿ ಇಂಥ ಆಚರಣೆಗಳನ್ನು ಅವರು ಸ್ವೀಕರಿಸಿದುದಕ್ಕೆ ಧಾರ್ಮಿಕೇತರ ಕಾರಣಗಳಿವೆ. ತುಳುನಾಡನ್ನು ಆಳುತ್ತಿದ್ದ ಜೈನ ಅರಸರಿಗೆ ತಮ್ಮ ಅರಸೊತ್ತಿಗೆಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ, ಪ್ರಾದೇಶಿಕ ಸಂಸ್ಕೃತಿಯೊಂದಿಗೆ ಸೇರಿ ಹೋಗುವುದು, ತಮ್ಮ ಜನಪ್ರಿಯತೆಯನ್ನು ಕಾಯ್ದುಕೊಳ್ಳುವುದು ಅನಿವಾರ್ಯವಾಗಿತ್ತು. ಆಂತರಿಕ ವಿಘಟನೆಗಳ ವಿರುದ್ಧ ಸಶಕ್ತವಾದ ವ್ಯೂಹವೊಂದನ್ನು ಅವರು ರಚಿಸಿಕೊಳ್ಳಬೇಕಾಗಿತ್ತು."[೮] ಭೂತಾರಾಧನೆ ಮೂಲತಃ ತುಳುನಾಡಿನ

ಮೂಲನಿವಾಸಿಗಳದ್ದಾಗಿದ್ದರೂ, ಜೈನ, ಬ್ರಾಹ್ಮಣರು ಭೂತಾರಾಧನೆಯನ್ನು ಕೈಗೊಂಡ ಉದಾಹರಣೆಗಳು ಕಾದಂಬರಿಗಳಲ್ಲಿ ದೊರೆತಿವೆ.

"ಹೊಸ ನಂಬಿಕೆಗಳನ್ನು ಹೊಂದಿದ ತಮ್ಮದೇ ದೇವರುಗಳನ್ನು ಆರಾಧಿಸುವ ಜನರು, ಅದರಲ್ಲೂ ಮುಖ್ಯವಾಗಿ ಜೈನರು ಮತ್ತು ಬ್ರಾಹ್ಮಣರು ತುಳುನಾಡಿಗೆ ಬಂದು, ತಮ್ಮ ನಂಬಿಕೆ ನಡವಳಿಕೆಗಳನ್ನು ಇಲ್ಲಿ ಪ್ರಸಾರ ಮಾಡಿದರೂ ಭೂತಾರಾಧನೆಯ ಪ್ರಭಾವವು ಇವರ ಮೇಲಾಯಿತು. ಹೀಗಾಗಿ, ಒಂದಲ್ಲ ಒಂದು ರೀತಿಯಲ್ಲಿ ತುಳುನಾಡಿನ ಈ 'ಸತ್ಯಗಳನ್ನು' ಜೈನರು ಮತ್ತು ಬ್ರಾಹ್ಮಣರು ತಮ್ಮದಾಗಿ ಸ್ವೀಕರಿಸಿಕೊಂಡರು."[೧೯] ಹೀಗೆ ತುಳುನಾಡಿನ ಭೂತಗಳನ್ನು ಇಲ್ಲಿಗೆ ಅನಂತರ ಬಂದು ನೆಲೆಸಿದ ಜನಾಂಗದವರು ಆರಾಧಿಸಿದ ಮಾಹಿತಿ ಇದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಹೆಬ್ಬಾರರು ಗುತ್ತಿನ ಪಟೇಲರಾಗಿ ನಡೆಸುವ ಜುಮಾದಿ ಭೂತದ ಕೋಲದ ವಿವರವಿದೆ. ಇಲ್ಲಿ ಹೆಬ್ಬಾರರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿದ್ದು ಊರಿನ ದೈವದ ಕೋಲವನ್ನು ನಡೆಸುವ ಜವಾಬ್ದಾರಿ ಹೊತ್ತಿರುವ ವಿವರಗಳಿವೆ. ಹೀಗೆ ಆಡಳಿತದ ಕಾರಣದಿಂದಾಗಿ ಮೇಲ್ವರ್ಗದವರು ಭೂತಾರಾಧನೆ ನಡೆಸುವ ಅನಿವಾರ್ಯತೆಗೆ ಒಳಗಾದದ್ದರ ಸ್ಪಷ್ಟತೆ ಇದೆ.

ಮಾರಿ ಪೂಜೆ

ಮಾರಿಯಮ್ಮ ತುಳುನಾಡಿನ ಪ್ರಮುಖ ದೇವತೆ. ಮಾರಿಗುಡಿಗಳು ಬೇಕಾದಷ್ಟು ಕಾಣಸಿಗುತ್ತವೆ. "ದಕ್ಷಿಣ ಭಾರತದ ಮಾರಿಯಮ್ಮ(ಸಿಡುಬು ದೇವತೆ)ನನ್ನು ತುಳು ಕರಾವಳಿಯಲ್ಲಿ ಪೂಜಿಸುವರು. ಇಲ್ಲಿ ಅಸಂಖ್ಯ ಮಾರಿಯಮ್ಮನ ಗುಡಿಗಳಿವೆ. ಈಕೆಗೆ ಸಣ್ಣ ಹರಕೆಯೊಂದಿಗೆ ಆಡು ಕುರಿಗಳ ಬಲಿಯೂ ನೆರವೇರುವುದು. ವಿಶೇಷ ಸಂದರ್ಭದಲ್ಲಿ ಕೋಣ ಕಡಿಯಲಾಗುವುದು. ಕೋಳಿ ಮತ್ತು ಸಣ್ಣ ಪ್ರಾಣಿಗಳನ್ನು ಬಲಿ ಕೊಡುವಾಗ ತಲೆಯನ್ನು ಒಂದೇ ಏಟಿನಿಂದ ಕಡಿಯಲಾಗುತ್ತದೆ."[೨೦]

"ಮಾರಿ ಓಡಿಸುವಾಗ ಮನೆಮನೆಗೆ ತಿಳಿಯುವಂತೆ ಪ್ರಚಾರ ಮಾಡಲಾಗುತ್ತಿತ್ತು. ಒಮ್ಮೆ ಊರಿನಲ್ಲಿ ಅಲ್ಲಲ್ಲಿ ಸಿಡುಬು ಕಾಣಿಸಿಕೊಂಡಿತು. ಆಗ ಅದಕ್ಕೆ ಔಷಧಿ ಇರಲಿಲ್ಲ. ಆಗಿನ ನಂಬಿಕೆ ಎಂದರೆ ಈ ಸಿಡುಬು ಎಂಬ ಮಾರಿಯನ್ನು ಊರಿನ ಗಡಿಭಾಗಕ್ಕೆ ಓಡಿಸಿಕೊಂಡು ಹೋಗಿ ಅಲ್ಲಿ ಅದಕ್ಕೆ ಕೋಳಿಗಳನ್ನು ಬಲಿಯರ್ಪಿಸಿ ಮತ್ತೆ ಅದನ್ನು ಅಟ್ಟಿಸಿಕೊಂಡು ಹೋಗಿ ಕಾಡಿಗೆ ಬಿಟ್ಟುಬರುವುದು. ಆ ಸಿಡುಬು ಎಂಬ ಮಾರಿ ಅಲ್ಲಿ ಸಾಯುತ್ತಿತ್ತು ಎಂಬುದು. ಈ ಮಾರಿಯನ್ನು ಓಡಿಸಲಿಕ್ಕಾಗಿ ಊರಿನ ದೈವಸ್ಥಾನದಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿತ್ತು. ಅಲ್ಲಿ ಪೂಜೆ ಎಲ್ಲ ಆದ ಮೆಲೆ ಊರಿನ ಜನರೆಲ್ಲ ಸೇರಿಕೊಂಡು ಮಾರಿಯನ್ನು ಓಡಿಸುತ್ತಿದ್ದರು. ಆಗ ಜನರೆಲ್ಲ ಕೈಯಲ್ಲಿ ತೆಂಗಿನ ಸೋಗೆಯಿಂದ ಕಟ್ಟಿದ ತೂಟೆ(ಪಂಜು)ಗೆ ಬೆಂಕಿ ಹಚ್ಚಿ ಅದನ್ನು ಹಿಡಿದುಕೊಂಡು ಬೀಸುತ್ತಾ ಬೊಬ್ಬಿರಿಯುತ್ತಾ ಓಡುತ್ತಿದ್ದರು."[೨೧] ಈ ರೀತಿ ಮಾರಿ ಓಡಿಸುವ ಕ್ರಮ ತಿಳಿದುಬರುತ್ತದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಮಾರಿ ಪೂಜೆಯ ಪ್ರಸ್ತಾಪವಿದೆ. ಸೂರಕ್ಕೆಯ ಮಗ ಮಾರಪ್ಪ ಗಾಂಧಿವಾದಿ. ಸೂರಕ್ಕೆಗೆ ಮಾರಿಪೂಜೆಗೆ ಕೋಳಿ ನೀಡಲೇಬೇಕೆಂದಿದ್ದರೂ ಮಾರಪ್ಪ ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದ. ಇದು ಗಾಂಧಿವಾದದ ಪ್ರಭಾವ. ಉರ್ವ ಮಾರಿಗುಡಿಯಲ್ಲಿ ಮಾರಿಗೆ ಕೋಣ ಕಡಿಯುವಾಗ ಅದನ್ನು ಕಾರ್ನಾಡ್ ಸದಾಶಿವರಾಯರ ಜೊತೆ ಸೇರಿ ವಿರೋಧಿಸಿದ್ದ. ಹೀಗೆ ಗಾಂಧಿ ಮೌಲ್ಯಗಳು ಯುವಕರಲ್ಲಿ ಜಾಗೃತಿ ಮೂಡಿಸಿದ್ದನ್ನು ಅರಿಯಬಹುದು. ಅದೇ ಕಾಲಕ್ಕೆ ಹಿರಿಯರು ತಮ್ಮ ನಂಬಿಕೆಗಳಿಂದ ಹೊರಬರಲಾರದೆ ಹೇಗಾದರೂ ಅದನ್ನು ಉಳಿಸುವ ಸನ್ನಾಹವು ವ್ಯಕ್ತವಾಗುತ್ತದೆ.

"ಊರಿನ ಮಾರಿಗೊಂದು ಕೋಳಿ ಕೊಡದಿದ್ದರೆ ಮಾರಿಯ ಕೆಟ್ಟ ದಿಟ್ಟಿ ನಮ್ಮತ್ತ ಬೀಳುತ್ತದೆಂದು ಸೂರಕ್ಕೆ ಮಗನಲ್ಲಿ ಗೋಗರೆದರೂ ಆತ ಕೇಳುವವನಲ್ಲ. ಆ ಪರಂಗಿಯವರೇ ನಮ್ಮನ್ನು ಕಾಡುವ ಮಾರಿಗಳು, ಅದಕ್ಕಿಂತ ದೊಡ್ಡ ಮಾರಿ ಇದೆಯಾ? ಈ ಊರ ಮಾರಿ ಓಡಿಸುವ ಬದಲು ಎಲ್ಲರು ಸೇರಿ ಆ ಪರಂಗಿ ಮಾರಿಯನ್ನು ಓಡಿಸಲಿ-ಎಂದು ಹೇಳಿ ಸೂರಕ್ಕೆಯ ಪಿಸುರನ್ನು ಮತ್ತಷ್ಟು ಹೆಚ್ಚಿಸುತ್ತಾನೆ."(ಗಾಂಧಿ ಬಂದ, ಪುಟ ೨೪೨)

'ಕರಾವಳಿ' ಕಾದಂಬರಿಯಲ್ಲಿ ಮಾರಿ ಪೂಜೆಯ ಚಿತ್ರಣವಿದೆ. ಕಡಲಿಗೆ ಇಳಿದರೂ ಮೀನು ಸಿಗದೆ ಬರಿಗೈಲಿ ವಾಪಾಸಾದಾಗ ಉರ್ವ ಮಾರಿಗುಡಿಗೆ ಬಂದು ಮಾರಿಪೂಜೆ ಮಾಡುತ್ತಾರೆ. ಇಷ್ಟಾರ್ಥ ನೆರವೇರಿಸಿದರೆ ಹದಿನಾಲ್ಕು ಪವನುಗಳ ಮೀನಿನ ಸರ ಹಾಕುತ್ತೇವೆ ಎಂದು ಪ್ರಾರ್ಥಿಸಿದರು.

ವಸಾಹತುಶಾಹಿ ಪಲ್ಲಟಗಳು

"ಭೂತಾರಾಧನೆಗೆ ಬ್ರಾಹ್ಮಣನು ಅತ್ಯಗತ್ಯವಲ್ಲವಾದರೂ, ದೈವಸ್ಥಾನಗಳು ಗತಿಕೆಟ್ಟಾಗ ಅಶೌಚವಾದ ಶುಚಿತ್ವಕ್ಕೆ ಬ್ರಾಹ್ಮಣನ ನೆರವು ಅವಶ್ಯಕವಾಗಿದೆ."[೨೨] ತಳ ಸಮುದಾಯದವರ ಆರಾಧನೆಯಲ್ಲಿ ಮೇಲ್ವರ್ಗದವರು ಭಾಗಿಯಾಗುತ್ತಾರೆ.

ತುಳುನಾಡಿನಲ್ಲಿ ಶಿಕ್ಷಣ, ಆಧುನಿಕ ವಿದ್ಯಾಭ್ಯಾಸ ಪಡೆದು ಆರ್ಥಿಕವಾಗಿ ಸಬಲತೆ ಹೊಂದಿದರೂ ಊರಿಗೆ ಮರಳಿ ಭೂತಾರಾಧನೆ, ನಾಗಾರಾಧನೆಗಳನ್ನು ವೈಭವದಿಂದ ಆಚರಿಸುವ ಮನೋಭಾವ ಗುರುತಿಸಬಹುದು. ತಾವು ಆರ್ಥಿಕವಾಗಿ ದೃಢತೆ ಹೊಂದಿದರೂ ಮೂಲಭೂತ ನಂಬಿಕೆ ಮಾಸದೆ ಇನ್ನು ಬಲಗೊಳ್ಳುವುದನ್ನು ಕಾದಂಬರಿಗಳು ಧ್ವನಿಸುತ್ತವೆ. ಈ ನಂಬಿಕೆಗಳು ಮನಸ್ಸಿಗೆ ಸಾಂತ್ವನ, ಧೈರ್ಯ, ಅಭಯವನ್ನು ನೀಡುತ್ತವೆ ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಕ್ಷಣಕ್ಷಣಕ್ಕೂ ಒತ್ತಡಗಳಿಂದ ನಲುಗುತ್ತಿರುವ ಜನರಿಗೆ ಈ ನಂಬಿಕೆಗಳು ಮಾನಸಿಕ ಸ್ಥೈರ್ಯ ನೀಡುತ್ತವೆ. ಕೈಗಾರಿಕೆ, ನಗರೀಕರಣ, ಆಧುನಿಕ ಸೌಲಭ್ಯಗಳಿಂದ ನಾಗರಿಕವಾಗಿ ತುಂಬ ಬೆಳೆದಿದ್ದರೂ, ಮೂಲನಂಬಿಕೆಗಳನ್ನು, ಆಚರಣೆಗಳನ್ನು ಇನ್ನು ಬಿಡದೆ ಪಾಲಿಸುವುದು ತುಳುನಾಡಿನ ಮಟ್ಟಿಗೆ ಸೋಜಿಗವನ್ನು ಹುಟ್ಟುಹಾಕುತ್ತದೆ.

"ಆರ್ಥಿಕವಾಗಿ ಎಷ್ಟೇ ಪ್ರಗತಿ ಹೊಂದಲಿ, ದಕ್ಷಿಣ ಕನ್ನಡದ ಕೆಲವು ಜನಾಂಗಗಳು ತಮ್ಮ ಪರಂಪರೆಯ ಜೊತೆಗೆ ತಮ್ಮನ್ನು ತಾವು ಗುರುತಿಸಿಕೊಳ್ಳುವ, ನಗರದಿಂದ ಹಿಂತಿರುಗಿದರೆ ತಮ್ಮ

ಕುಲದೇವತೆಗಳಿಗೆ ಕೋಲಗಳನ್ನು ಕೊಡುವ ಧರ್ಮಭೀರು ಮನೋಧರ್ಮವನ್ನು ಅರ್ಥೈಸಲು ಇಂತಹ ಅಧ್ಯಯನದಿಂದ ನಮಗೆ ಸಾಧ್ಯವಾಗುತ್ತದೆ.[೨೩] ತೆಂಬರೆ ಕಾದಂಬರಿಯಲ್ಲಿ ವಿಜ್ಞಾನಿಯಾದರೂ ಗಂಗಾಧರ ಭೂತಾರಾಧನೆ ಮಾಡಲು ಐತನಿಗೆ ಕರೆ ನೀಡುವುದು; ಚೆಲುವಯ್ಯ ಶೆಟ್ಟಿ ಮುಂಬೈಯ ಹಣವಂತನಾದರೂ ಭೂತಾರಾಧನೆಯನ್ನು ಆಚರಿಸುವುದು; ಉಲ್ಲಂಘನೆಯಲ್ಲಿ ಸುಂದರ ನಾಗಮಂಡಲವನ್ನು ವೈಭವದಿಂದ ಆಚರಿಸಲು ಮುಂದಾಗುವುದು ಮೊದಲಾದ ಉದಾಹರಣೆಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದುವರಿದರೂ ಪರಂಪರೆಯ ಜೊತೆ ಗುರುತಿಸಿಕೊಳ್ಳುವ ಜನರ ಮನೋಭಾವವನ್ನು ದಾಖಲಿಸುತ್ತವೆ.

"ಬ್ರಿಟಿಷರ ಆಗಮನದ ನಂತರ ಪ್ರಥಮ ಬಾರಿಗೆ ನಮ್ಮ ಗುಡಿಗಾರರು, ಗರಡಿಯ ಬಾಗಿಲುಗಳಲ್ಲಿ ಕೋವಿ ಹಿಡಿದು ನಿಂತ ಅವರ ಚಿತ್ರಗಳನ್ನು ಬಿಡಿಸತೊಡಗಿದರು. ಅಂದರೆ ಈ ವಿಲ್ಲುಗಳನ್ನು ಆರಾಧಿಸುತ್ತಾ ಬಂದ ನಾವು ನಮ್ಮ ದೇವರುಗಳ ರಕ್ಷಣೆಯನ್ನೇ ಅವರ ಕೈಗೆ ಕೊಟ್ಟುದು ವಿಚಿತ್ರವಾಗಿ ಕಾಣಿಸುವುದಿಲ್ಲವೇ? ಇದು ಗರಡಿಗಳಲ್ಲಿ ಮಾತ್ರವಲ್ಲ, ಭೂತದ ಕೊಟ್ಟಗೆಯ ಬಾಗಿಲುಗಳಲ್ಲಿ, ದೇವಸ್ಥಾನದ ಹೆಬ್ಬಾಗಿಲುಗಳಲ್ಲಿ ಬ್ರಿಟಿಷರು ಕೋವಿ ಹಿಡಿದು ನಿಂತ ಚಿತ್ರ ನಾನು ಕಂಡದ್ದಿದೆ."[೨೪] ವಸಾಹತುಕಾಲದಲ್ಲಿ ಆರಾಧನೆಯ ಬದಲಾದ ಸ್ವರೂಪವನ್ನು ಗಮನಿಸಬಹುದು. ಅಧಿಕಾರದ ಭೀತಿಯಿಂದ ಇದು ಉಂಟಾಗಿರಬಹುದು.

ವಸಾಹತೋತ್ತರ ಪಲ್ಲಟಗಳು

ವಸಾಹತೋತ್ತರ ಕಾಲದಲ್ಲಿ ವೃತ್ತಿ ಪಲ್ಲಟವು ಪ್ರಮುಖವಾಗಿ ಕಂಡುಬರುತ್ತದೆ. "ನಂಬಿಕೆಯ ದೃಷ್ಟಿಯಿಂದ ಇಂದು ಜನರು ಮೂಢನಂಬಿಕೆಗಳಿಂದ ಹೊರಗೆ ಬಂದಿದ್ದರೂ ಭೂತಾರಾಧನೆಯಲ್ಲಿ ಸೇರುವ ಜನರ ಪ್ರಮಾಣ ಅತಿ ಹೆಚ್ಚಾಗಿದೆ. ಅಲ್ಲದೆ ಈಗ ಭೂತಸ್ಥಾನಗಳನ್ನು 'ಭೂತಾಲಯ'ಗಳೆಂದು ಕರೆಯುವುದೂ, ಅವುಗಳಿಗೆ 'ಅಷ್ಟಬಂಧ ಬ್ರಹ್ಮಕಲಶ' ಮಾಡುವುದೂ ಆರಂಭಗೊಂಡಿದೆ."[೨೫] ಭೂತಗಳು ನೇರವಾಗಿ ಬ್ರಾಹ್ಮಣೀಕರಣ ಪ್ರಕ್ರಿಯೆಗೆ ಒಳಗಾಗುವುದನ್ನು ನಾವಿಲ್ಲಿ ನೋಡಬಹುದು."[೨೬] ತೆಂಬರೆ ಕಾದಂಬರಿಯಲ್ಲಿ ಚೆಲುವಯ್ಯ ಶೆಟ್ಟಿ ಪಂಜುರ್ಲಿ ಭೂತದ ಆರಾಧನೆಯನ್ನು ನೇಮೋತ್ಸವ ಎಂದು ವೈಭವದಿಂದ ಆಚರಿಸುವ ವಿವರವಿದೆ.

ಕೋಳಿ ಅಂಕ

ತುಳು ಶಬ್ದಕೋಶ ರಚಿಸಿದ ಮ್ಯಾನರ್ ಕೋಳಿ ಅಂಕದ ಬಗ್ಗೆ ಒಂದು ವರದಿಯನ್ನು ೧೮೭೮ರಲ್ಲಿ ಬರೆದಿದ್ದಾರೆ. ಮಂಜುಟ್ಟಿಗೋಣ ಪಾಡ್ದನದಲ್ಲಿ ಕೋಳಿ ಅಂಕದ ಉಲ್ಲೇಖಗಳಿವೆ. ಕೋಳಿ ಅಂಕ ತುಳುನಾಡಿನ ವಿಶಿಷ್ಟ ಸಂಸ್ಕೃತಿಯನ್ನು ಮನಗಾಣಿಸುತ್ತದೆ. ಕಂಬಳದ ನಂತರ ಅಥವಾ ಜಾತ್ರಾ ಸಂದರ್ಭಗಳಲ್ಲಿ ಕೋಳಿ ಅಂಕ ವಿಶೇಷವಾಗಿ ಜರುಗುತ್ತದೆ. ಕೋಳಿ ಅಂಕದ ಸ್ಪರ್ಧೆಗಳಿಗಾಗಿ ಹುಂಜಗಳನ್ನು ತುಂಬಾ ಜಾಗ್ರತೆಯಾಗಿ ಆರಿಸಿ ಸಾಕಲಾಗುತ್ತದೆ. ಬಂಟರು ಹಾಗೂ ಕೆಳವರ್ಗದವರು ಕೋಳಿ ಸಾಕುವುದು ಸಾಮಾನ್ಯ. ಕೋಳಿ ಅಂಕವು ಹಲವರ ಸಹಯೋಗದಿಂದ ನಡೆಯುವ ಸಾಂಘಿಕ ಚಟುವಟಿಕೆ. ಹುಂಜವನ್ನು ಕಾಳಗಕ್ಕೆ ಬಿಡುವವನು,

ಪಂದ್ಯ ಕಟ್ಟುವವನು, ಸುಸ್ತಾದ ಹುಂಜಕ್ಕೆ ಗಾಳಿ ಬೀಸಲೊಬ್ಬ, ಗಾಯಗೊಂಡ ಹುಂಜಗಳಿಗೆ ಚಿಕಿತ್ಸೆ ನೀಡುವವನು, ಕಾಲಿಗೆ ಚೂರಿ ಕಟ್ಟುವವ ಇವರೆಲ್ಲರ ಸಹಕಾರದಿಂದ ಕೋಳಿಕಾಳಗ ನಡೆಯುತ್ತದೆ. ಹುಂಜದ ಜೊತೆ ಹೋರಾಡಲು ಸೂಕ್ತ ಹುಂಜ ಆಯ್ಕೆ ಮಾಡುವುದು ಜವಾಬ್ದಾರಿಯುತ ಕೆಲಸ.

ಕೋಳಿ ಅಂಕದಲ್ಲಿ ಹಲವು ಪಾರಿಭಾಷಿಕ ಪದಗಳು ಬಳಕೆಯಾಗುತ್ತವೆ. ಅವುಗಳಅರ್ಥವನ್ನು ಈ ಕೆಳಗಿನಂತೆ ಗುರುತಿಸಬಹುದು.

ಪತಿ ಮಾಡುವುದು : ವಯಸ್ಸು, ಬೆಳವಣಿಗೆ, ಬಣ್ಣ ಗಮನಿಸಿ ಕಾದಾಟಕ್ಕೆ ಹುಂಜಗಳ ಸೂಕ್ತ ಜೋಡಿ ಆರಿಸುವುದನ್ನು ಪತಿ ಮಾಡುವುದು ಎನ್ನುತ್ತೇವೆ.

ಒಡ್ಡಾವುನ ಕ್ರಿಯೆ : ಆಯ್ದ ಹುಂಜಗಳನ್ನು ಕಾದಾಟದ ಅಂಕದೊಳಗೆ ಪರಸ್ಪರ ಎದುರುಬದುರಾಗಿಸಿ ಸಿಟ್ಟುಬರಿಸಿ ಹೋರಾಡಲು ಪ್ರೇರೇಪಿಸುವ ಕ್ರಿಯೆ.

ಬಾಳು ಕಟ್ಟುವ ಕ್ರಿಯೆ : ಹುಂಜದ ಬಲಗಾಲಿಗೆ ಎರಡೂ ಕಡೆ ಚೂಪಾಗಿರುವ ಕತ್ತಿಯನ್ನು ಕಟ್ಟುವ ಕ್ರಿಯೆ.

ಉರಬಾಲ್ : ಒಬ್ಬನ ಎರಡು ಕೋಳಿಗಳು ಹಾಗೂ ಎದುರಾಳಿಯ ಎರಡು ಕೋಳಿಗಳನ್ನು ಜೊತೆಗೆ ಬಿಡುವ ಕ್ರಮವಿದೆ. ಒಬ್ಬ ಯಜಮಾನನ ಎರಡು ಕೋಳಿಗಳು ಗೆದ್ದರೂ ಎದುರಾಳಿಗೆ ಒಂದು ಕೋಳಿ ನೀಡಲಾಗುತ್ತದೆ. ಇದನ್ನು ಉರಬಾಲ್ ಎನ್ನಲಾಗುತ್ತದೆ.

ಒಟ್ಟೆ ಮತ್ತು ಬಂಟೆ : ಎದುರಾಳಿ ಹುಂಜಕ್ಕೆ ಬಾಳನ್ನು ತಾಗಿಸಿ ಗೆದ್ದ ಹುಂಜಕ್ಕೆ 'ಬಂಟೆ' ಎಂದರೆ ಸೋತ ಹುಂಜಕ್ಕೆ 'ಒಟ್ಟೆ' ಎನ್ನುವರು.

ಕುಕ್ಕುಟ ಪಂಚಾಂಗ: ಕೋಳಿ ಅಂಕಕ್ಕೆ ಹೋಗುವಾಗ ಕುಕ್ಕುಟ ಪಂಚಾಂಗ ನೋಡಿ ಹೋಗುವ ಕ್ರಮವಿದೆ. ತಿಥಿ, ವಾರ, ಪಕ್ಷ ಗಮನಿಸಿ ಯಾವ ಕೋಳಿಯನ್ನು ಯಾವ ಕೋಳಿಯ ಜೊತೆ ಕಟ್ಟಬೇಕೆಂದು ಕುಕ್ಕುಟ ಪಂಚಾಂಗ ಗಮನಿಸಿ ತಿಳಿಸುವ ಪ್ರವೀಣರಿದ್ದಾರೆ. ಗಾಂಧಿಬಂದ' ಕಾದಂಬರಿಯಲ್ಲಿ ಕಿಟ್ಟುಭಟ್ಟರು ಕೋಳಿ ಪಂಚಾಂಗ ನೋಡುವುದರಲ್ಲಿ ಸಮರ್ಥರು. ಕಿಟ್ಟುಭಟ್ಟರು ಕೋಳಿಗಳ ಜಾತಕಗಳನ್ನು ಬರೆದುಕೊಡುತ್ತಿದ್ದರು. ಬಣ್ಣಕ್ಕೆ ಅನುಗುಣವಾಗಿ ಹುಂಜವನ್ನು ಕಟ್ಟಬೇಕಾದ ಜೊತೆಯನ್ನು ತಿಳಿಸುತ್ತಿದ್ದರು.

ಕಾದಂಬರಿಗಳಲ್ಲಿ ಕೋಳಿ ಅಂಕ

ಎಚ್.ನಾಗವೇಣಿ ಅವರ 'ಗಾಂಧಿ ಬಂದ' ಕಾದಂಬರಿಯಲ್ಲಿ ಹೆಬ್ಬಾರರ ದೇವರ ಕಂಬಳದ ಮಾರನೆ ದಿನ ಜರುಗುವ ಕೋಳಿ ಅಂಕದ ಪ್ರಸ್ತಾಪವಿದ್ದರೆ, ಉಲ್ಲಂಘನೆಯಲ್ಲಿ 'ಬಿನ್ನರೆಕಟ್ಟ' ಎಂಬ ಖುಷಿಗಾಗಿ ಆಡುವ ಕೋಳಿ ಅಂಕದ ವಿವರವಿದೆ.

ಕೋಳಿ ಅಂಕವು ಜನಸಾಮಾನ್ಯರಲ್ಲಿ ಪ್ರತಿಷ್ಠಿತ ಆಟವಾಗಿದ್ದು, ಅದರಲ್ಲಿ ಗೆಲುವು ಸಂಪಾದಿಸುವುದು ಗೌರವದ ಸಂಕೇತವಾಗಿತ್ತು. ಗುತ್ತು ಮನೆಗಳಲ್ಲಿ ಆಟಕ್ಕಾಗಿಯೇ

ಕೋಳಿಮರಿಗಳನ್ನು ಆಯ್ದು, ಗೂಡಿನಲ್ಲೇ ಬೆಳೆಸಿ, ರೋಷಭರಿಸಿ ಕಾದಾಟಕ್ಕೆ ಅಣಿಗೊಳಿಸಲಾಗುತ್ತದೆ.

ಕೋಳಿ ಅಂಕದ ಸಂದರ್ಭದಲ್ಲಿ ಹಲವು ನಂಬಿಕೆಗಳೂ ಪ್ರಚಲಿತದಲ್ಲಿವೆ. ಹಸಿರು ಹಾವನ್ನು ತಲೆಯ ರುಮಾಲಿನಲ್ಲಿ ಸಿಕ್ಕಿಸಿದರೆ ಗೆದ್ದು ಬರುವ ವಿಶ್ವಾಸ, ಕುಕ್ಕುಟ ಪಂಚಾಂಗ ಕೇಳುವ ಹಾಗೂ ನೋಡುವ ಪದ್ಧತಿ ಕೂಡ ಇತ್ತು.

ಕೋಳಿ ಅಂಕದಲ್ಲಿ ಗೆಲ್ಲುವುದು ಗುತ್ತಿನೊಡೆಯರಿಗೆ ಪ್ರತಿಷ್ಠೆಯ ಸಂಗತಿ. ಕೋಳಿ ಅಂಕ ಸ್ಪರ್ಧೆಯು ಕೆಳವರ್ಗದವರಿಗೆ ಆಡಲು ಅವಕಾಶ ನೀಡಿತ್ತು. ಕೆಳವರ್ಗದವರು ಆಡಬಾರದೆಂಬ ನಿಷೇಧವಿರಲಿಲ್ಲ. ಭೂತಾರಾಧನೆಯ ಅನಂತರ ಈಗಲೂ ಈ ಪದ್ಧತಿ ಅಲ್ಲಲ್ಲಿ ರೂಢಿಯಲ್ಲಿದೆ. ಕಂಬಳದ ಮಾರನೆ ದಿನ ಕೋಳಿ ಅಂಕ ನಡೆಯುವ ರೂಢಿಯಿದೆ. ಕೋಳಿ ಅಂಕಕ್ಕೆ ಹುಂಜಗಳನ್ನು ಆರಿಸುವುದು ಸವಾಲಿನ ಕೆಲಸ. ಮರಿಗಳನ್ನು ಆರಿಸಿದ ನಂತರ ಬೇರೆ ಮರಿಗಳೊಟ್ಟಿಗೆ ಸೇರಿಸದೆ ಏಕಾಂತದಲ್ಲಿ ನೀರು–ತಿನಿಸು ನೀಡಬೇಕು. ಅದನ್ನು ಇತರ ಹುಂಜಗಳ ಜೊತೆಗೆ ಹುಸಿ ಕಾಳಗಕ್ಕೆ ಒಡ್ಡಿ ರೋಷ ಬರುವಂತೆ ಮಾಡುವುದು. ದಿನನಿತ್ಯ ಅಕ್ಕಿ, ಭತ್ತದ ಜೊತೆಗೆ ಬೇಯಿಸಿದ ಮೊಟ್ಟೆಯನ್ನು ಆಹಾರವಾಗಿ ನೀಡಬೇಕು. ಕೋಳಿ ಅಂಕಕ್ಕೆ ಕೋಳಿಗಳನ್ನು ಹೀಗೆ ಸಿದ್ಧಪಡಿಸುತ್ತಾರೆ.

'ಉಲ್ಲಂಘನೆ'ಯಲ್ಲಿ ನಂಟರ ಕೋಳಿ ಅಂಕದ ವಿವರಗಳಿವೆ. ಇಲ್ಲಿ ಎರಡೂ ಕೋಳಿಗಳು ಸಾಯುವುದು ಮುಖ್ಯ. ಮನೆಗೆ ನೆಂಟರು ಬಂದಾಗ ಇದನ್ನು ಆಡಿಸುತ್ತಿದ್ದರು. ಗುತ್ತಿನಾರ್ ಶೀನಪ್ಪ ಹೆಗ್ಡೆಯವರಿಗೆ ಕೋಳಿ ಅಂಕವೆಂದರೆ ತುಂಬಾ ಇಷ್ಟ. ನೆಂಟರಿಗಾಗಿ ಆಡಿದ ಕೋಳಿ ಪಂದ್ಯದಲ್ಲಿ ಗೆದ್ದ ಹಾಗೂ ಸೋತ ಎಲ್ಲ ಕೋಳಿಗಳ ಪದಾರ್ಥ ತಯಾರಿಸಲಾಯಿತು. ಇಲ್ಲಿ ಯಾರೂ ಜೋಲು ಮುಖ ಮಾಡಿಕೊಂಡಿರಲಿಲ್ಲ. ಏಕೆಂದರೆ ಇಲ್ಲಿ ಸೋಲು–ಗೆಲುವು ಮುಖ್ಯವಲ್ಲ. ಎರಡೂ ಕೋಳಿಗಳು ಪ್ರಾಣ ಬಿಡುವುದು ಮುಖ್ಯ.

ಭೂತಾರಾಧನೆಯ ಭಾಗವಾಗಿ ಕೋಳಿ ಅಂಕ

ಭೂತಾರಾಧನೆಯ ಭಾಗವಾಗಿ ಕೋಳಿ ಅಂಕ ಆಡುವ ಕ್ರಮ ಇತ್ತು. 'ಗಾಂಧಿ ಬಂದ' ಕಾದಂಬರಿಯಲ್ಲಿ ಜುಮಾದಿ ಭೂತದ ಆರಾಧನೆಯ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಕೋಳಿ ಅಂಕ ಆಡುವ ವಿವರಗಳಿವೆ. ಕೋಲದ ಪೂರ್ವಭಾವಿಯಾಗಿ ನಡೆಯುವ ವಿಧಿಯಾಗಿದ್ದು, ಮಣ್ಣಮೂರ್ತದ ನಂತರ ಹೆಬ್ಬಾರರ ಕೂಲಿಯಾಳುಗಳಾದ ಅಂತಪ್ಪ ಮತ್ತು ಪಿಜಿನ ಮೂಲ್ಯ ತಮ್ಮ ಕೋಳಿಗಳ ಮೂಲಕ ಈ ವಿಧಿಯನ್ನು ನಡೆಸಿಕೊಡುತ್ತಾರೆ. ಕೋಳಿ ಅಂಕವು ಬೈದೇಲಣನೇಮದ ಮಾರನೆಯ ದಿನ ಗರಡಿಯ ಗದ್ದೆಯಲ್ಲಿ ನಡೆಯುತ್ತದೆ ಎಂಬುದನ್ನು 'ಕರಾವಳಿ' ಕಾದಂಬರಿ ಚಿತ್ರಿಸುತ್ತದೆ.

ಕಂಬಳ

ಮಾನವನ ಬದುಕು ಸಂಕೀರ್ಣಮಯವಾಗಿದ್ದು ಹಲವು ಆಚರಣೆಗಳು, ಸಂಪ್ರದಾಯ, ರೀತಿನೀತಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಪ್ರಾದೇಶಿಕ ವ್ಯತ್ಯಾಸವನ್ನು ಕಾಣಬಹುದು. ಈ ಪ್ರಾದೇಶಿಕ ವ್ಯತ್ಯಾಸಗಳೇ ಒಂದು ಪ್ರದೇಶದ ವೈಶಿಷ್ಟ್ಯವಾಗಿ ಮಾರ್ಪಡುತ್ತವೆ. ತುಳುನಾಡು ಇಂತಹ ಹಲವು ಆಚರಣೆ, ಪದ್ಧತಿಗಳೊಂದಿಗೆ ಗುರುತಿಸಿಕೊಂಡಿದೆ. ಭೂತಾರಾಧನೆ, ನಾಗಾರಾಧನೆ, ಕೋಳಿ ಅಂಕ, ಕಂಬಳ ಇವೆಲ್ಲವೂ ಇಲ್ಲಿನ ಸಂಸ್ಕೃತಿ ಎಂಬುದಾಗಿ ಪ್ರಸಿದ್ಧಿ ಪಡೆದಿವೆ.

ಆಧುನಿಕ ಸಂದರ್ಭದಲ್ಲಿ ಕಂಬಳವು ಕ್ರೀಡೆಯಾಗಿ ಜನಜನಿತವಾಗಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಕುರಿತು ಚರ್ಚೆಗಳು ಏರ್ಪಟ್ಟು ಕಂಬಳ ಬೇಕೆ? ಬೇಡವೆ? ಎಂಬ ಗೊಂದಲಗಳು ಉದ್ಭವವಾದದ್ದು ಇದೆ. ಕಾನೂನಿನ ಚೌಕಟ್ಟಿನೊಳಗೆ ಇಂದಿಗೂ ಕಂಬಳ ನಡೆಯುತ್ತಿದೆ. ಕೆಸರಿನ ಗದ್ದೆಯಲ್ಲಿ ಕೋಣಗಳನ್ನು ಓಡಿಸುವುದನ್ನು ಕಂಬಳ ಎನ್ನುತ್ತೇವೆ. ಕಂಬಳವು ಇಂದು ಕ್ರೀಡೆಯಾಗಿ ಪ್ರಸಿದ್ಧಿಯನ್ನು ಹೊಂದಿದ್ದರೂ, ಹಿಂದೆ ಅದೊಂದು ಆಚರಣೆಯಾಗಿತ್ತು.

'ಈ ಆಚರಣಾತ್ಮಕ ಆಟಕ್ಕೆ ೮೦೦ ವರ್ಷಗಳ ಇತಿಹಾಸವಿದೆ. 'ಕೆಸರುಗದ್ದೆ' ಎಂಬ ಅರ್ಥದಲ್ಲಿ 'ಕಂಬುಲ' ಎಂಬ ಪದವು ನಿಷ್ಪನ್ನವಾದರೂ 'ಗದ್ದೆಯ ಆಚರಣೆ' ಎಂಬ ಅರ್ಥದಲ್ಲಿ ಈಗ ಪ್ರಯೋಗದಲ್ಲಿದೆ.'[೨೭]

'ತುಳುನಾಡಿನಲ್ಲಿ ವಿಶೇಷವಾದ ಒಂದು ಸ್ಪರ್ಧೆ ಎಂದರೆ ಪಂಥದಲ್ಲಿ ಕೋಣಗಳನ್ನು ಓಡಿಸುವ ಕಂಬಳ. ಗದ್ದೆ ಬೇಸಾಯದ ಮುಕ್ತಾಯದ ಹಂತದಲ್ಲಿ ಹಲಗೆ ಕಟ್ಟಿ ಜೊತೆ ಕೋಣಗಳನ್ನು ತಮಾಷೆಯಾಗಿ ಗದ್ದೆಯಲ್ಲಿ ಓಡಿಸುವ ವಿನೋದವೇ ಮುಂದೆ ಬೆಳೆದು ಕಂಬಳವೆಂಬ ಕ್ರೀಡೆಯಾಗಿರಬಹುದೆಂದು ಕೆಲವರ ಅಭಿಪ್ರಾಯ.'[೨೮]

ಎಚ್.ನಾಗವೇಣಿ ಅವರ 'ಗಾಂಧಿ ಬಂದ' ಕಾದಂಬರಿ ತುಳುನಾಡಿನ ನೆಲದ ಸೊಗಡು, ಇಲ್ಲಿನ ಸತ್ವಗಳನ್ನು ಹೀರಿಕೊಂಡು ರೂಪಿತವಾಗಿದೆ. ಈ ಕಾದಂಬರಿಯಲ್ಲಿ ಜುಮಾದಿಯ ಹರಕೆಯ ಕಂಬಳದ ವಿವರವಿದೆ. ಇದು ಹೆಬ್ಬಾರರ ಮನೆಯಲ್ಲಿನ ಚಂದ್ರಕರೆ ಕಂಬಳದ ತಯಾರಿಯ ವಿವರಗಳೊಂದಿಗೆ ಆರಂಭವಾಗಿದೆ. ಕಂಬಳದ ಆಚರಣೆಯಲ್ಲಿ ಕೊರಗರಿಗೆ ಇರುವ ಮಹತ್ವದ ಸ್ಥಾನ ಹಾಗೂ ಅವರ ಪಾಲ್ಗೊಳ್ಳುವಿಕೆಯ ಅನಿವಾರ್ಯತೆಯ ಮೇಲೆ ಕಾದಂಬರಿ ಬೆಳಕು ಚೆಲ್ಲಿದೆ. ಇಂದಿನ ಕಾಲಘಟ್ಟದಲ್ಲಿ ಕ್ರೀಡೆಯಾಗಿ ರೂಪಿತವಾದ ಕಂಬಳಕ್ಕಿಂತ, ಆಚರಣೆಯಾಗಿ ಹಲವು ಕಟ್ಟುಪಾಡುಗಳು ಹಾಗೂ ಜನರ ಸಹಕಾರದೊಂದಿಗೆ ನಡೆಯುವ ಸಾಂಪ್ರದಾಯಿಕ ಕಂಬಳವನ್ನು ಕಾದಂಬರಿಕಾರ್ತಿ ಚಿತ್ರಿಸಿದ್ದಾರೆ. ಕಾದಂಬರಿಕಾರ್ತಿ ಕಂಬಳದ ಕುರಿತು ಬಂದಂತಹ ಬರಹಗಳನ್ನು ಪರಿಶೀಲಿಸಿರುವುದು ಸ್ಪಷ್ಟವಾಗುತ್ತದೆ.

ಕಂಬಳ ನಡೆಯುವ ಪ್ರದೇಶವು ಆರ್ಥಿಕ ಚಟುವಟಿಕೆಯ ತಾಣವಾಗಿ ರೂಪುಗೊಳ್ಳುತ್ತದೆ. ಮಾರುವವರು ಕೊಳ್ಳುವವರಿಂದ ಆ ಪ್ರದೇಶ ವ್ಯಾಪಾರಿ ಸ್ಥಳವಾಗುತ್ತದೆ. ಸ್ವಾತಂತ್ರ್ಯ ಪೂರ್ವ

ಕಾಲಘಟ್ಟದಲ್ಲಿ ನಡೆಯುವ ಈ ಕಾದಂಬರಿ ಆಗಿನ ಕಾಲದ ಜನಜೀವನ ವಿಧಾನದ ಚಿತ್ರಣ ನೀಡುತ್ತದೆ. ಪ್ರವಹಿಸುತ್ತಿರುವ ಕಥಾನಕದೊಳಗೆ ಕಂಬಳವು ಹಲವು ವೈವಿಧ್ಯಮಯ ಚಿತ್ರಣಗಳೊಂದಿಗೆ ಬೆರೆತು ಹೋಗಿರುವುದ್ನು ನೋಡಬಹುದು. ಕಂಬಳವು ಏಕಕಾಲದಲ್ಲಿ ಕ್ರೀಡೆ, ಆಚರಣೆ, ಸಾಮಾಜಿಕ ಚಟುವಟಕೆ, ಆರ್ಥಿಕ ಚಟುವಟಿಕೆ, ವಿಧಿ ನಿಷೇಧಗಳು, ಮನುಷ್ಯನ ಮನಸ್ಥಿತಿಗಳನ್ನು ಒಳಗೊಳ್ಳುವುದನ್ನು ಕಾಣಬಹುದು.

ಕಂಬಳ ಆಚರಣೆ ನಡೆಯುವಾಗ ಹಲವು ವಿಧಿ ನಿಷೇಧಗಳು ಪಾಲನೆಗೆ ಒಳಪಡುತ್ತವೆ. ಕಾದಂಬರಿಯಲ್ಲಿ ಕೆಲವೊಂದನ್ನು ಗುರುತಿಸಬಹುದು.

- "ಸೂರ್ಯ ನಡುನೆತ್ತಿಗೆ ಬರುವುದರೊಳಗೆ ಕಂಬಳದ ಊಟ ತಯಾರಿರಬೇಕು! ಮನೆಗೆ ಬಂದ ನೆಂಟರಿಷ್ಟರಿಗೆ ಮಾತ್ರ ಊಟವಲ್ಲ. ಕಂಬಳಕ್ಕೆ ಕೋಣ ತರುವ ಎಲ್ಲ ಒಡೆಯರಿಗೂ ಆಳುಗಳಿಗೂ ಹೆಬ್ಬಾರರು ಊಟ ಹಾಕಬೇಕಾದುದು ಕಂಬಳದ ಕಟ್ಟು."(ಗಾಂಧಿ ಬಂದ, ಪುಟ ೧೯)
- "ದೈವದ ಕಂಬಳವಾದ ಕಾರಣ ಊರವರೇ ಅದನ್ನು ನಡೆಸಿಕೊಡುವ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿದೆ."(ಗಾಂಧಿ ಬಂದ, ಪುಟ ೨೩)
- "ಸರ್ವಾಲಂಕೃತರಾದ ಲವ-ಕುಶರು ಇನ್ನು ಕಂಬಳದ ಕಳದಲ್ಲಿ ಮುಹೂರ್ತದ ಕೋಣಗಳಾಗಿ ಓಡುವುದೊಂದು ಬಾಕಿ. ಮನೆಯವರಾದ ಕಾರಣ ಅವರು ಸ್ಪರ್ಧೆಯಲ್ಲಿ ಓಡುವಂತಿಲ್ಲ."(ಗಾಂಧಿ ಬಂದ, ಪುಟ ೩೦)
- "ಕಂಬಳ ಗದ್ದೆಯ ಕೇಡು ನಿವಾರಣೆಗಾಗಿ ಕೊರಗರು ಕಂಬಳದ ಕಳದಲ್ಲಿ ಕೋಣಗಳಾಗಿ ಓಡಿ ಕೆಟ್ಟ ಶಕ್ತಿಗಳನ್ನು ಆವಾಹಿಸಿಕೊಳ್ಳುವುದು ಕಂಬಳದ ಪ್ರಮುಖ ಸಂಪ್ರದಾಯ."(ಗಾಂಧಿ ಬಂದ, ಪುಟ ೩೧)
- "ಪೂಕರೆ ನೆಟ್ಟ ನಂತರ ಕಂಬಳ ಗದ್ದೆಗೆ ಕೋಣಗಳು ಇಳಿಯುವಂತಿಲ್ಲ ಹಾಗೂ ಪೂಕರೆ ಹಾಕಿದ ಮರುದಿನವೇ ಕಂಬಳದ ಗದ್ದೆಗೆ ಭತ್ತದ ಸಸಿ ನಾಟಿಯಾಗಬೇಕು."(ಗಾಂಧಿ ಬಂದ, ಪುಟ ೩೪)

ಕಾದಂಬರಿಯ ನಿರೂಪಣೆ ತೃತೀಯ ಪುರುಷದಲ್ಲಿದ್ದರೂ, ಕಂಬಳದ ವಿಧಿ ನಿಷೇಧಗಳ ಸಂದರ್ಭದಲ್ಲಿ ಕೆಲವೆಡೆ ಕಾದಂಬರಿಕಾರ್ತಿಯ ನೇರ ಪ್ರವೇಶ ಗಮನಕ್ಕೆ ಬರುತ್ತದೆ. ಕೆಲವೆಡೆ ಕಥೆಯ ಜೊತೆ ಸೇರಿಕೊಂಡು ವಿಧಿ ನಿಷೇಧಗಳು ಬರುವುದಿದೆ.

- "ಕಂಬಳದ ಊಟಕ್ಕೆ ಹುರುಳಿ ಸಾರು ಬೇಕೇ ಬೇಕಲ್ಲವೇ."(ಗಾಂಧಿ ಬಂದ, ಪುಟ ೨೧-೨೨)
- "ಮೊನ್ನೆ ಕಂಬಳಕ್ಕೆ ಇನ್ನೇನು ಮೂರು ದಿವಸವಿದೆ ಎನ್ನುವಾಗ 'ಕುದಿ ಓಡಿಸುವುದಕ್ಕೆ' ಕಂಬಳ ಗದ್ದೆಗೆ ಬಂದಿಳಿದವರು, ಕಂಬಳ ಕಳದಲ್ಲಿ ನಾಕೈದು ಜತೆ ಕೋಣಗಳನ್ನು ಓಡಿಸಿ ಬಿಟ್ಟು ಕಂಬಳಕ್ಕೆ ನಾಂದಿ ಹಾಕಿಸಿದ್ದಾರೆ. ಕುದಿ ಓಡಿಸಿದ

ನಂತರ ಕಂಬಳ ಗದ್ದೆಯ ಮಡಿ-ಮೈಲಿಗೆ ಕಾಪಾಡುವುದು, ಮುಟ್ಟಿನ ಹೆಂಗಸರ ನೆರಳು ಕಂಬಳ ಗದ್ದೆಗೆ ತಟ್ಟದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ ಎಂದು ಹೆಬ್ಬಾರರಿಗೆ ಎಚ್ಚರಿಕೆ ನೀಡಿ, ಹಾಗೆ ಹೋದ ಶೆಟ್ರುಗಳು ಮತ್ತೆ ಮರಳಿ ಕಂಬಳ ಗದ್ದೆಗೆ ಬಂದದ್ದು ನಿನ್ನೆಯೇ."(ಗಾಂಧಿ ಬಂದ, ಪುಟ ೨೩-೨೪)

- "ನಿನ್ನೆ ಹಾಗೆ ಬಂದವರು ಕಂಬಳದ ಗದ್ದೆಗೆ ಕೆಟ್ಟಕಣ್ಣುಗಳು, ಕೆಟ್ಟ ದಿಟ್ಟಿ ತಗಲಬಾರದೆಂದು ಗದ್ದೆಯ ಹುಣಿಗೆ ಸುತ್ತಲೂ ಜೇಡಿ ಮಣ್ಣಿಗೆ, ಕೆಮ್ಮಣ್ಣು ಸೇರಿಸಿ ಮೂರು ಮೂರು ಗೆರೆಗಳನ್ನು ಎಳೆಸಿ ಶುದ್ಧಮಾಡಿಸಿದ್ದಾರೆ."(ಗಾಂಧಿ ಬಂದ, ಪುಟ ೨೪)
- "ಅದೇ ಕಂಬಳದ ಹಿಂದಿನ ದಿನ, ಕೊರಗರೆಲ್ಲ ಡೋಲು ಬಾರಿಸುತ್ತಾ ಊರಲ್ಲೆಲ್ಲ ಕಂಬಳದ ಸುದ್ದಿ ಸಾರಿ ಬಂದು, ರಾತ್ರಿಯಾದೊಡನೆ ಕಂಬಳಗದ್ದೆಯಲ್ಲಿ ಹನಿಯುತ್ತಿರುವ ಇಬ್ಬನಿಯಡಿ ಕೂತು ಕಂಠಪೂರ್ತಿ ಕಳ್ಳು ಕುಡಿಯುತ್ತಾ, ಡೋಲು ಬಾರಿಸುತ್ತಾ.. ಕುಣಿಯುತ್ತಾ ನಲಿಯುತ್ತಾ ಮಧ್ಯೆ ಮಧ್ಯೆ ಊರೊಳ್ ಹೇಳುತ್ತಾ 'ಪನಿ ಕುಳ್ಳುವ' ಸಂತಸದಲ್ಲಿದ್ದರು. ಕೊರತಿಯರು ಅಲ್ಲೇ ಅಗ್ಗಿಷ್ಟಿಕೆ ಹಾಕಿ ಕಪ್ಪರ್ ರೊಟ್ಟಿ ಸುಡುತ್ತಿದ್ದರು."(ಗಾಂಧಿ ಬಂದ, ಪುಟ ೨೫)

ಕಂಬಳವು ನಡೆಯುವ ತಾಣ ವ್ಯಾಪಾರಕ್ಕೆ ವಿಪುಲ ಅವಕಾಶವನ್ನು ನೀಡುತ್ತದೆ. ಅಂಗಡಿಗಳು ಎದ್ದ ರೀತಿ, ಸ್ವಾತಂತ್ರ್ಯ ಪೂರ್ವ ಕಾಲದ ವ್ಯಾಪಾರಿ ವಸ್ತುಗಳ ಕುರಿತು ವಿವರಣೆಯಿದೆ. ಆ ಕಾಲದ ಬಳಕೆಯ ವಸ್ತುಗಳು ಇಂದು ಮರೆಯಾಗಿವೆ ಅಥವಾ ನವೀಕರಿಸಲ್ಪಟ್ಟಿವೆ. ಸಂತೆಯಲ್ಲಿ ಜಾತಿಬೇಧವಿಲ್ಲದೆ ಜನ ಅಂಗಡಿ ತೆರೆಯುವುದು ಹಾಗೂ ಮಹಿಳೆಯರೂ ತಾವು ಬೆಳೆದ ವಸ್ತುಗಳನ್ನು ತಂದು ವ್ಯಾಪಾರ ಆರಂಭಿಸುವುದು ವಿಶೇಷವಾಗಿದೆ. ಕೋಮು ಸೌಹಾರ್ದತೆಯ ತುಳುನಾಡು ಇಲ್ಲಿ ಒಡಮೂಡಿದೆ. ಪರಿಶೀಲನೆಗಾಗಿ ಈ ಕೆಳಗಿನ ವಾಕ್ಯಗಳನ್ನು ಗಮನಿಸಬಹುದು.

- "ವರದನ್ಯಾಕರ ನೊಗ-ನೇಗಿಲು, ಕೊಂಡೆ-ಸೇರು, ಪಾವು, ಕಳಸೆ-ಗೆರಸೆ ಇತ್ಯಾದಿ ಇತ್ಯಾದಿಗಳಿರುವ ರೈತಾಪಿ ಸರಕಿನ ಅಂಗಡಿ, ಆದಂಬ್ಯಾರಿಯ ಮಣಿ ಸರಕಿನ ಅಂಗಡಿ, ಕೊಲ್ಪೆಯ ಸೀನಾಚಾರಿಯ ಬಗೆ ಬಗೆಯ ಕತ್ತಿ ಹಾರೆ, ಕಾವಲಿ, ಪಿಕ್ಕಾಸಿ, ಕೊಡಲಿ, ಚಾಕು ಚೂರಿಗಳ ಅಂಗಡಿ, ಗುಡ್ಡೆಯ ಕೇಶವಾಚಾರಿಯ ತುರಿಮಣೆ ಶ್ಯಾವಿಗೆ ಮಣೆ, ಉಪ್ಪಿನ ಮರಿಗೆ, ಚಕ್ಕುಲಿ ಅಂಡೆ, ಮಜ್ಜಿಗೆ ಮಂತು ಇತ್ಯಾದಿ ಮರದ ಸಾಮಾನುಗಳ ಅಂಗಡಿ, ಅದರ ಮಗ್ಗುಲಲ್ಲೆ ಮೋಂತು ಪರ್ಬುವಿನ ಗಜಲಹಣ್ಣು, ಕಿತ್ತಲೆಹಣ್ಣು, ಬುಗರಿಹಣ್ಣು, ಬಾಳೆಹಣ್ಣು, ಬಚ್ಚಂಕಾಯಿ(ಕಲ್ಲಂಗಡಿ)ಗಳ ಚಪ್ಪರಗಳು ತಲೆ ಎತ್ತಿಕೊಂಡವು."(ಗಾಂಧಿ ಬಂದ, ಪುಟ ೧೮)

➤ "...ತೆರೇಸಮ್ಮನ ನೋಕಟೆ ಬೀಜ, ಹುರಿದ ಗೇರು ಬೀಜದ ಬುಟ್ಟಿಗಳು, ಮೋನು ಪೂಜಾರಿಯ ಹೆಸರು ಬೇಳೆಯ ಸೋಜಿ ಪಾಯಸದ ಚಪ್ಪರ, ಅಕ್ಕಮ್ಮ ಮ್ಯೊಲ್ದಿಯ ಸಿಹಿ ಗುಳಿಯಪ್ಪ, ಎರಿಯಪ್ಪ....."(ಗಾಂಧಿ ಬಂದ, ಪುಟ ೧೮)

ಜಾತಿ ಶ್ರೇಣೀಕರಣ ವ್ಯವಸ್ಥೆ ಕಂಬಳದಲ್ಲಿ ಭದ್ರವಾಗಿ ನೆಲೆಯೂರಿತ್ತು. ಕೊರಗರು ಪ್ರಮುಖವಾಗಿ ಮಾಡಬೇಕಾದ ಕೆಲವು ಕೆಲಸಗಳಿದ್ದವು. ಕಂಬಳದ ಹಿಂದಿನ ದಿನ ಊರಿನಲ್ಲಿ ಡೋಲು ಬಡಿದು ಮರ್ಯಾದೆಯ ಹೇಳಿಕೆ ನೀಡಬೇಕಾಗಿತ್ತು. ರಾತ್ರಿಯಿಡೀ 'ಪನಿ ಕುಳ್ಳುವ' ಕ್ರಿಯೆಯಲ್ಲಿ ಭಾಗಿಯಾಗಬೇಕಾಗಿತ್ತು. ಕಂಬಳ ಆರಂಭಗೊಳ್ಳುವ ಪೂರ್ವದಲ್ಲಿ ಕಳದಲ್ಲಿ ಕೋಣಗಳಾಗಿ ಓಡಬೇಕಾಗಿತ್ತು. ಆದರೆ ಮೇಲ್ಜಾತಿಯವರನ್ನು ಮುಟ್ಟುವ ಹಾಗಿರಲಿಲ್ಲ. ತಮ್ಮ ಕಾರ್ಯಕ್ಕಾಗಿ ಸೂಕ್ತ ಪ್ರತಿಫಲ ಅವರಿಗೆ ಲಭ್ಯವಾಗುತ್ತಿರಲಿಲ್ಲ.

"ಗದ್ದೆಯಲ್ಲಿ ಕೂತು, ಒಡೆಯರ ಮನೆಯವರು ಎಸೆದ ಎಂಜಲನ್ನವನ್ನು ಒಣಗಿಸುತ್ತಿದ್ದ ಕೊರಗರ ಕೊರತಿಯರಿಗೂ ಕೂಡಾ ತಮ್ಮ ಉಳ್ಳಾಯ ಕೊಟ್ಟ ಕಂಬಳದ ಭಕ್ಷೀಸನ್ನು ಸಂತೆಗೆ ಸುರಿಯುವ ಹಂಬಲ. ಆದರೇನು? ಸಂತೆಯ ಗದ್ದಲದಲ್ಲಿ ಅಪ್ಪಿತಪ್ಪಿ ತಾವೇನಾದರೂ ದೊಡ್ಡ ಜಾತಿಯವರನ್ನು ಮುಟ್ಟಿಬಿಟ್ಟರೆ! ಕೊರತಿಯರು ಬೆದರಿ ದೂರದಲ್ಲೇ ಕೂತು ಕಂಬಳ ನೋಡಿದರು."(ಗಾಂಧಿ ಬಂದ, ಪುಟ ೩೩)

"ಶೆಟ್ಟರಿಬ್ಬರಿಗೂ ಐತುವಿನ ಮಾತಿನಿಂದ ನಂಬಿಕೆ ಬಂದೊಡನೆ ತಮ್ಮ ತಮ್ಮ ನಿಲುವಂಗಿಗಳ ಕಳ್ಳಕಿಸೆಯಿಂದ ಒಂದಷ್ಟು ಮುಕ್ಕಾಲು ಪೈಗಳನ್ನು ತೆಗೆದು ಕೊರಗರತ್ತ ಎಸೆದರು. ಮುಂಜಾನೆಯ ತಂಗಳನ್ನಕ್ಕೆ ಹಸಿದ ಕೋಳಿಗಳು ಮುತ್ತುವಂತೆ ಕೊರಗರು ದುಡ್ಡಿಗಾಗಿ ಮುತ್ತಿಕೊಂಡರು."(ಗಾಂಧಿ ಬಂದ, ಪುಟ ೩೧)

ಕಂಬಳದ ಗದ್ದೆಗೆ ಹರಕೆ ಹೊತ್ತುಕೊಳ್ಳುವ ಸಂಪ್ರದಾಯವಿತ್ತು. ಇದರಿಂದ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ನಂಬಿಕೆ ಜನಸಮುದಾಯದಲ್ಲಿತ್ತು.

"ಮೊನ್ನೆ ಆಕೆಯ ಹಸು ಬೊಳ್ಳಿಗೆ ಕಾಲುಕುಂಟು ರೋಗ ಬಂದಾಗ, ಗುಣವಾದರೆ ಕಂಬಳಗದ್ದೆಗೆ ಅಕ್ಕಿ ಹಾಕುತ್ತೇನೆ ಎಂದು ಹರಕೆ ಹೇಳಿಕೊಂಡಿದ್ದಳಂತೆ."(ಗಾಂಧಿ ಬಂದ, ಪುಟ ೩೩)

"...ರುಕುಣಿಯಮ್ಮ ತೆನೆಗಳಿಗೆ ಕೆಂಬೂದಿ ಎಸೆಯುತ್ತಾ, ಭತ್ತದ ತೆನೆ ಉಳಿಸಿಕೊಟ್ಟರೆ ಮುಂದಿನ ಕಂಬಳಕ್ಕೆ ಕಂಬಳದ ಗದ್ದೆಗೆ ಅಕ್ಕಿ ಚೆಲ್ಲುತ್ತೇನೆ ಎಂದು ಹರಕೆ ಹೇಳಿದ್ದರು."(ಗಾಂಧಿ ಬಂದ, ಪುಟ ೩೩)

ಕಂಬಳದ ಕೋಣಗಳನ್ನು ಪೋಷಿಸುವ ವಿಧಾನ ನಾಜೂಕಾದದ್ದು ಹಾಗೂ ವಿಪರೀತ ಖರ್ಚಿನದ್ದು. ಕಂಬಳದ ದಿನ ಅವುಗಳ ಅಲಂಕಾರವೂ ವಿಶಿಷ್ಟವಾದದ್ದು.

"ಕಂಬಳದ ಕೋಣಗಳನ್ನು ಸಾಕುವುದೆಂದರೆ ಅದೇನು ಕುಶಾಲಿನ ಮಾತೇ? ನಿರ್ಮಲವಾದ ಕೊಟ್ಟಿಗೆಯಲ್ಲಿರಿಸಿ ದಿನಾ ಎಳ್ಳೆಣ್ಣೆ ಹಚ್ಚಿ, ತಿಕ್ಕಿ, ಬಿಸಿನೀರಲ್ಲಿ ಮೀಯಿಸದಿದ್ದರೆ ಅವು ಹೆಬ್ಬಾರರ ತಂದೆಯಂತೆ ವೈಕುಂಠ ಯಾತ್ರೆ ಮಾಡುತ್ತಾವಷ್ಟೆ."(ಗಾಂಧಿ ಬಂದ, ಪುಟ ೨೭)

"ಕೋಣಗಳ ಈ ಪರಿಯ ಉಣ್ಣುವ ಭಾಗ್ಯ ಕಂಡು ಸ್ವತಃ ಕೂಸ ಮೈಲಿಯೇ ಅದೆಷ್ಟೋ ಬಾರಿ ಕುರುಬಿದ್ದಾನೆ. ಇವತ್ತು ಗಂಜಿ ಕುಡಿದರೆ ನಾಳೆಗಿಲ್ಲದ ದಿನಗಳನ್ನು ದೂಡುತ್ತಿರುವ ಆತ, ತಾನಾದರೂ ಈ ಕೋಣವಾಗಬಾರದಿತ್ತೇ ಎಂದು ಎಷ್ಟೋ ಬಾರಿ ಹಲುಬಿದ್ದಿದೆ."(ಗಾಂಧಿ ಬಂದ, ಪುಟ ೨೮)

ಕೋಣಗಳನ್ನು ಸಾಕುವ, ಶೃಂಗರಿಸುವ ರೀತಿ, ಸವಿಸ್ತಾರವಾಗಿ ಚಿತ್ರಿತವಾಗಿದೆ. ಅಳಿಯಕಟ್ಟಿನ ಹೆಣ್ಣಿನಂತೆ ಅವರ ಚಾಕರಿ ಎಂಬುವುದಾಗಿ ಕಾದಂಬರಿಕಾರ್ತಿ ವರ್ಣಿಸಿದ್ದಾರೆ.

ಸ್ವಾತಂತ್ರ್ಯ ಚಳುವಳಿ, ಅದರ ಪ್ರೇರಣೆಯಿಂದ ನಡೆಯುವ ಸಾಮಾಜಿಕ ಪರಿವರ್ತನೆ ಇವುಗಳಿಂದ ಕೂಡಿದ 'ಗಾಂಧಿ ಬಂದ' ತನ್ನ ಒಡಲಲ್ಲಿ ತುಳುನಾಡ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿದೆ. ಕಂಬಳದ ವರ್ಣನೆಯೊಂದಿಗೆ ಆರಂಭವಾಗುವ ಕಾದಂಬರಿ, ಅಂತ್ಯದಲ್ಲಿ ಕಂಬಳದ ಡೋಲಿನ ಸದ್ದನ್ನು ಕೇಳಿಯೇ ಮುಕ್ತಾಯವಾಗುತ್ತದೆ. ತಾನು ಹೇಳಲು ಬಯಸುವ ಕಥಾನಕಕ್ಕೆ ಡೋಲಿನ ಸದ್ದನ್ನು ಆವರಣವಾಗಿ ರೂಪಿಸಿ, ಅದರ ಮಧ್ಯೆ ಕೃತಿ ಅರಳುತ್ತದೆ. ಸ್ವಾತಂತ್ರ್ಯ ಚಳುವಳಿಯ ತೀವ್ರತರದ ಬದಲಾವಣೆಗಳಿಗೆ ಮುಖಾಮುಖಿಯಾಗುತ್ತಲೇ ಕಾದಂಬರಿ ತುಳುನಾಡ ಸಂಸ್ಕೃತಿಯ ವಿಶಿಷ್ಟತೆಯ ಚಿತ್ರಣಕ್ಕೆ ತೊಡಗುತ್ತದೆ. ತುಳುನಾಡಿನ ಸಂಸ್ಕೃತಿಯ ಮಿಳಿತದೊಂದಿಗೆ ರೂಪಿತವಾದ ಕೃತಿ ಅಪೂರ್ವವಾಗಿದೆ. ಕಾದಂಬರಿಯ ಆರಂಭದ ಕಂಬಳದ ಸಂದರ್ಭದಲ್ಲಿ ದ್ರೌಪದಿ ಅದ್ರಾಮರ ಪ್ರೇಮದ ಆರಂಭವಾದರೆ, ಅಂತ್ಯದ ಕಂಬಳದ ಡೋಲಿನ ಸದ್ದಿನಲ್ಲಿ ದ್ರೌಪದಿ ಅದ್ರಾಮನನ್ನು ಕಳೆದುಕೊಂಡಿದ್ದಾಳೆ. ಆದರೆ ಮಗ ಚಿನ್ನಣ್ಣ ದಾರಿದೀಪವಾಗಿದ್ದಾನೆ.

ಕಂಬಳವೆಂದರೆ ಸಮಾಜದ ಎಲ್ಲಾ ವರ್ಗದವರೂ ಸೇರುವ ತಾಣ. ಜಾತಿ, ವರ್ಗ ಅಂತಸ್ತುಗಳು ಮರೆಯಾಗಿ ಎಲ್ಲರೂ ಸಂಭ್ರಮಿಸುವ ತಾಣ. ಕಾದಂಬರಿಯು ಆರಂಭಕ್ಕೇ ಕಂಬಳದ ವರ್ಣನೆಯ ಅಗತ್ಯ ಏನು? ಎಂಬ ಪ್ರಶ್ನೆ ಉದಯಿಸುತ್ತದೆ. ಹೆಚ್ಚಿನಂಶ ಕಾದಂಬರಿಗೆ ಉತ್ತಮ ಚಾಲನೆ ನೀಡಲು ಇದನ್ನು ಬಳಸಿರಬೇಕು. ಕಾದಂಬರಿಯ ಪ್ರಮುಖ ಪಾತ್ರಗಳ ಪರಿಚಯವನ್ನು ಪ್ರಥಮ ಅಧ್ಯಾಯದಲ್ಲೇ ಮಾಡಲು ಉತ್ತಮವಾದ ಅವಕಾಶವನ್ನು ಕಾದಂಬರಿಕಾರ್ತಿ ಕಂಡುಕೊಂಡಿದ್ದಾರೆ. ದ್ರೌಪದಿ, ಅದ್ರಾಮರು ನಾಯಕಿ ನಾಯಕರಂತೆ ಗೋಚರಿಸಿದರೂ ಹಲವು ಪಾತ್ರಗಳಿದ್ದು ಎಲ್ಲರೂ ಮುಖ್ಯರಾಗುವ ಈ ಕಾದಂಬರಿಯಲ್ಲಿ ಕಂಬಳವೇ ಉತ್ತಮ ಆರಂಭವನ್ನು ಒದಗಿಸಿದೆ. ಪಟೇಲರ ಮನೆ, ಶೆಟ್ಟರು, ಅದ್ರಾಮ, ಒಕ್ಕಲ ಮಕ್ಕಳು, ರುಕುಣಿಯಮ್ಮನ ತವರುಮನೆ, ಮಾರಪ್ಪ ಇವರೆಲ್ಲರೂ ಮೊದಲ ಅಧ್ಯಾಯದಲ್ಲೇ ಓದುಗರಿಗೆ ಪರಿಚಿತರಾಗುತ್ತಾರೆ.

ಕೋಣಗಳ ಅಲಂಕಾರ, ರಾಜ ಮರ್ಯಾದೆ ಯಶಸ್ಸು ಗಳಿಸುವವರೆಗೆ ಮಾತ್ರ. ಸೋತ ಕೂಡಲೇ ಅವುಗಳ ಅಲಂಕಾರ ಎಲ್ಲವೂ ನಿಂತು ಗದ್ದೆ ಉಳಲು ಬಳಸಲಾಗುತ್ತದೆ. ಅವುಗಳ

ವೈಭವ, ಸೋಲು ಎಲ್ಲವನ್ನೂ ದ್ರೌಪದಿ ತನ್ನ ಬದುಕಿಗೆ ಹೋಲಿಸುತ್ತಾಳೆ. ಒಂದು ಕಾಲದಲ್ಲಿ ಮದುವೆಯ ಹೆಣ್ಣಾಗಿದ್ದು ಸಂಭ್ರಮದಲ್ಲಿದ್ದ ಆಕೆ ತನ್ನ ವೈಧವ್ಯ ಕುರಿತು ಚಿಂತಿಸುತ್ತಾ, ಕಂಬಳದ ಕೋಣಗಳಿಗೆ ತನ್ನನ್ನು ಹೋಲಿಸಿಕೊಳ್ಳುತ್ತಾಳೆ. ಕಂಬಳದ ಕೋಣಗಳನ್ನು ಪುರುಷರಿಗೆ ಹೋಲಿಸುವುದು ವಾಡಿಕೆ. ಆದರೆ ಪ್ರಸ್ತುತ ಕಾದಂಬರಿಯಲ್ಲಿ ಅಲಂಕಾರ ಹಾಗೂ ಗೆಲ್ಲುವ ಸಾಮರ್ಥ್ಯ ಕುಸಿಯುವುದನ್ನು ವಿಧವೆ ಹೆಣ್ಣಿಗೆ ಹೋಲಿಸುವುದನ್ನು ಕಾಣಬಹುದು.

ಕಂಬಳವು ಕೃಷಿ ಬದುಕಿನ ಜೊತೆ ಬೆಸೆದ ಸಂಬಂಧವನ್ನು ಗಮನಿಸಬಹುದು. ಕಂಬಳ ಮುಗಿದ ಮಾರನೆಯ ದಿವಸ ಗದ್ದೆಯ ನೇಜಿ ನೆಡುವ ಕಾರ್ಯ ಪೂರ್ಣವಾಗಬೇಕಿತ್ತು. ಕಂಬಳ ಎಲ್ಲರನ್ನೂ ಬೆಸೆಯುವ, ಮನೋರಂಜನೆಯನ್ನು ನೀಡುವ, ಕೃಷಿ ಹಾಗೂ ಧಾರ್ಮಿಕ ಆಚರಣೆಗಳ ಸಂಗಮವಾಗಿದೆ. ಸಾಮಾಜಿಕ ಜವಾಬ್ದಾರಿ, ಸಹಭಾಗಿತ್ವ ಕಾಣುತ್ತದೆ.

ನಾ.ಮೊಗಸಾಲೆ ಅವರ 'ಉಲ್ಲಂಘನೆ'ಯು ಕರ್ನಾಟಕದಲ್ಲಿ ಭೂಮಸೂದೆ ಜಾರಿಯಾಗುವ ಮೊದಲಿನ ಮೂರು ಪೀಳಿಗೆಗಳ ಕಥೆಯನ್ನು ಒಳಗೊಂಡಿದೆ. 'ಗಾಂಧಿ ಬಂದ' ಕಾದಂಬರಿಗಿಂತ ಭಿನ್ನವಾದ ಕಂಬಳದ ವರ್ಣನೆ ಗಮನಿಸಬಹುದು. ಎರಡನೆಯ ಪೀಳಿಗೆಯ ಶಾಂತಕ್ಕೆಗೆ ಕಂಬಳ ನೋಡಬೇಕೆಂಬ ಬಯಕೆ ಉಂಟಾಗುವುದು. ಆ ಹೊತ್ತಿನಲ್ಲಿ ಗುತ್ತಿನಲ್ಲಿ ಕಂಬಳ ನಡೆಯುತ್ತಿರಲಿಲ್ಲ. ಶಾಸ್ತ್ರಕ್ಕಾಗಿ ಪೂಕರೆಯನ್ನು ಹಾಕುತ್ತಿದ್ದರಷ್ಟೆ. ಶಾಂತಕ್ಕೆಯ ಗಂಡ ಕೋಚಣ್ಣ ರೈಗಳು ಗುತ್ತಿಗೆ ಬಂದಾಗ, ಕಂಬಳದ ವಿಷಯದ ಕುರಿತು ಪ್ರಸ್ತಾಪಿಸುವಾಗ, ಅವರು ಕಂಬಳ ಮಾಡಬೇಕಾದರೆ ಆಯಾ ಗುತ್ತಿಗೆ ಇರಬೇಕಾದ ನಿಲೆ ಪೂಕರೆಗಳ ಬಗ್ಗೆ ತಿಳಿಸುತ್ತಾರೆ. ಕೊನೆಗೆ ಕ್ರೀಡಾ ಮನೋಭಾವದಿಂದ ಕಂಬಳ ನಡೆಸಲು ನಿರ್ಧಾರವಾಗುತ್ತದೆ. ಕ್ರೀಡಾ ಕಂಬಳಕ್ಕೆ ಪೂಕರೆ ಹಾಕುವ ಅಗತ್ಯವಿಲ್ಲ. ಯಾರಿಗೆ ಮೊದಲ ಮರ್ಯಾದೆ ಎಂಬ ಪ್ರಶ್ನೆ ಉದ್ಭವಿಸದು. ಕೋಲ ಬಲಿ, ಪನಿ ಕುಲ್ಲುನು ಎಂಬ ಸಂಪ್ರದಾಯಗಳಿಲ್ಲ. ಆದರೆ ಗೆದ್ದವರಿಗೆ ಚಿನ್ನದ ಪವನು ಘೋಷಿಸುತ್ತಾರೆ. ಕಂಬಳ ಕುರಿತು ಚರ್ಚಿಸಲಾದ ವಿಷಯಗಳನ್ನು ಈ ಕೆಳಗಿನ ಉದ್ಧರಣಗಳ ಮೂಲಕ ಸ್ಪಷ್ಟಪಡಿಸಬಹುದು.

- "ಕಂಬಳ ಎನ್ನುವುದು ಕೇವಲ ಕ್ರೀಡೆಯಲ್ಲ. ಅದಕ್ಕೂ, ಆರಾಧನೆಗೂ ನೇರ ಸಂಬಂಧವುಂಟು ಎಂಬುವುದನ್ನು ಒಂಬತ್ತು ಕೆರೆಯವರೆಲ್ಲ ಬಲ್ಲವರಿದ್ದರು. ನಾಗಬೆರ್ಮರ ಹೆಸರಿನಲ್ಲಿ ನಡೆಯುವ ಈ ಕ್ರೀಡೆ ಒಮ್ಮೆ ಪ್ರಾರಂಭವಾದರೆ ಮತ್ತೆ ಎಂದೂ ನಿಲ್ಲಬಾರದು. ಅಷ್ಟೇ ಅಲ್ಲ, ಅದರ ಆಚರಣೆಯು, ಗ್ರಾಮದ, ಸೀಮೆಯ ಶ್ರೇಣೀಕೃತ ವ್ಯವಸ್ಥೆಗೆ ಅನುಸಾರವಾಗಿಯೇ ನಡೆಯಬೇಕೆಂಬ ನಿಯಮವೂ ಇದೆ ಎಂಬುದನ್ನು ಗುತ್ತಿನಾರ್‌ರೂ ಗುತ್ತಿನ ಯಜಮಾನಿಯೂ ಬಲ್ಲವರಿದ್ದರು."(ಉಲ್ಲಂಘನೆ, ಪುಟ ೨೩೧)
- "ಕಂಬುಲ ಮಾಡುವುದಾದರೆ–ಗ್ರಾಮ ಗುತ್ತು ಆದರೆ ೭ ನಿಲೆ ಪೂಕರೆ, ಮಾಗಣೆ ಗುತ್ತು ಆದರೆ ೯ ನಿಲೆ ಪೂಕರೆ, ಸೀಮೆಗುತ್ತು ಆದರೆ ೧೧ ನಿಲೆ ಪೂಕರೆ, ಅರಸರ ಕಂಬಳ ಆದರೆ ೧೩ ನಿಲೆ ಪೂಕರೆ, ತೋರಣ, ಹಗಲು ದೀವಟಿಕೆ, ಅರಸುಕೊಡೆ(ಸತ್ತಿಗೆ), ಡೋಲಿ, ಪಾಲಕಿ, ಕುದುರೆ, ಪಕ್ಕೆ ನಿಶಾನೆ ಹಗಲು

ಪಂಚದೀವಟಿಕೆ ಬಿರುದಾವಳಿಗಳು–ಎಲ್ಲವೂ ಬೇಕು ಎಂಬ ನಿಯಮಗಳಿವೆ. ಅಷ್ಟೇ ಅಲ್ಲ, ಗದ್ದೆಗೆ ಕೋಣಗಳು ಇಳಿಯುವಾಗಲೂ ಆಯಾ ಮನೆಗಳ ಪರಂಪರೆಯ ಅಧಿಕಾರದ ಕ್ರಮದಂತೆ ಅವುಗಳನ್ನು ಇಳಿಸಬೇಕಿದೆ."(ಉಲ್ಲಂಘನೆ, ಪುಟ ೨೩೧)

ನಾ.ಮೊಗಸಾಲೆ ಅವರ 'ಉಲ್ಲಂಘನೆ'ಯಲ್ಲಿ ಕಾಲಕ್ಕೆ ತಕ್ಕಂತೆ ಬದಲಾದ ಕಂಬಳದ ಚಿತ್ರಣವಿದೆ. ಆಚರಣೆಯ ಸಾಂಪ್ರದಾಯಿಕತೆಯಲ್ಲಿ ಇದ್ದ ಕಂಬಳವು ಕ್ರೀಡೆಯಾಗಿ ಪರಿವರ್ತನೆಯಾದ ಸಾಂದರ್ಭಿಕ ಚಿಂತನೆ ಜೊತೆಗೆ ಕಂಬಳದಲ್ಲಿ ನಡೆಯುತ್ತಿದ್ದಂತಹ ಮೋಸ, ದಬ್ಬಾಳಿಕೆ ವ್ಯಕ್ತವಾಗುತ್ತದೆ. ಹಣವುಳ್ಳವನ ಮರ್ಜಿ ನಡೆಯುತ್ತಿದ್ದುದರಿಂದ ಬಡವನಿಗಾಗುತ್ತಿದ್ದ ಅನ್ಯಾಯ, ನ್ಯಾಯ ಪಡೆಯಲು ಕೂಡ ಶ್ರೀಮಂತ–ಅಧಿಕಾರವುಳ್ಳವನನ್ನೇ ಆಶ್ರಯಿಸಬೇಕಾದ ಅನಿವಾರ್ಯತೆ, ಕಂಬಳದ ಹಿನ್ನೆಲೆಯಲ್ಲಿ ಸಾಮಾಜಿಕ ಜೀವನ ಚಿತ್ರಣ, ಮೇಲು ಕೀಳು, ಧಣಿ–ಒಕ್ಕಲು ಸಂಬಂಧ ಮುಂತಾದವು ನೈಜವಾಗಿ ಮೂಡಿಬಂದಿದೆ. ಚಾಣಾಕ್ಷಮತಿಗಳು ಕೆಲಸ ಸಾಧಿಸುತ್ತಿದ್ದ ಬಗೆ ವಿವರವಾಗಿ ಮೂಡಿಬಂದಿದೆ. ಕಂಬಳವನ್ನು ಸಂಶೋಧನಾತ್ಮಕವಾಗಿ ಪರಿಗಣಿಸುವಾಗ ಮೇಲ್ನೋಟಕ್ಕೆ ಏಕರೂಪದ ಚಿತ್ರಣ ಕಾಣಿಸುತ್ತದೆ. ಆದರೆ ಅದನ್ನೇ ಒಂದು ಸಾಂಸ್ಕೃತಿಕ ಪರಿಸರದ ಒಳಗಡೆ ಇಟ್ಟು ಪರಿಶೀಲಿಸುವಾಗ ಮಾನವನ ಸಹಜವಾದ ಸ್ವಭಾವ, ಗುಣಗಳಿಂದ ಅದು ಪ್ರತಿಸಲವೂ ಅನನ್ಯವಾಗಿ, ವಿಶಿಷ್ಟವಾಗಿ ಮೂಡಿಬರುತ್ತದೆ. ನೀಲಯ್ಯ ಹೆಗ್ಡೆ ಕಂಬಳದಲ್ಲಿ ಮಾಡುವ ಮೋಸ, ಗುತ್ತಿಗೆ ಶಿರಬಾಗುವುದು ಮಾನವನ ಸ್ವಭಾವ ಭಿನ್ನತೆಗೆ, ಅದರಿಂದ ಆಗುವ ಪರಿಣಾಮಗಳಿಗೆ ಜ್ವಲಂತ ಉದಾಹರಣೆಯಾಗಿದೆ. ಅಧಿಕಾರ ಕೇಂದ್ರ ಪ್ರಾಮಾಣಿಕವಾಗಿದ್ದಾಗ ಇಂತಹ ಕ್ಷುದ್ರಶಕ್ತಿಗಳನ್ನು ಬಡಿದುಹಾಕಬಹುದು. ಇಲ್ಲವಾದರೆ ಇಂತಹ ಅಪ್ರಾಮಾಣಿಕ ಜನರೇ ಬಲಿಷ್ಠವಾಗಿ ತಮಗೆ ಪೂರಕವಾದ ವಾತಾವರಣ ಸೃಷ್ಟಿಸುತ್ತಾ, ಬಡವರನ್ನು ಶೋಷಣೆ ಮಾಡುತ್ತಾ ಸಾಗುವುದು ಚರಿತ್ರೆಯಲ್ಲಿ ಪದೇ ಪದೇ ದಾಖಲಾಗುವ ಅಂಶ. ಮೊಗಸಾಲೆ ಅವರು ಒಂದೆಡೆ ಶಾಂತಕ್ಕೆಗಾಗಿ ನಡೆಯುವ ಕಂಬಳವನ್ನು ಅಚ್ಚುಕಟ್ಟಾಗಿ ವಿವರಿಸುತ್ತಾ ಕಂಬಳದ ಚಿತ್ರಣ ನಿಲ್ಲಿಸುತ್ತಿದ್ದರೆ ಅದು ಅಪೂರ್ಣ ಅನಿಸುತ್ತಿತ್ತು. ಆದರೆ ಕಂಬಳದ ಸ್ಪರ್ಧೆ ಏರ್ಪಡಿಸಿ ಪ್ರತಿ ಸಲವೂ ಮೋಸದಿಂದ ಗೆಲ್ಲುತ್ತಿದ್ದ ನೀಲಯ್ಯ ಹೆಗ್ಡೆಗೆ ಬುದ್ಧಿ ಕಲಿಸುವ ಮೂಲಕ ಕಂಬಳದ ಸುತ್ತ ನಡೆಯಬಲ್ಲ ವಿಭಿನ್ನ ಮುಖಗಳನ್ನು ಪ್ರಕಟಿಸುವ ಕಾಳಜಿ ತೋರಿದ್ದಾರೆ. ಜಾನಪದವನ್ನು ಅದರ ಪರಿಸರದಿಂದ ಪ್ರತ್ಯೇಕಿಸಿ ವಿಮರ್ಶಿಸಿ ಪರಿಶೀಲಿಸಿದರೆ ಅದು ಅಪೂರ್ಣವಾಗುವ ಸಂದರ್ಭಗಳು ಹೆಚ್ಚು.

ಪ್ರಭಾಕರ ನೀರ್‌ಮಾರ್ಗರ 'ಕಂಬುಲ' ಕಾದಂಬರಿ ಶೀರ್ಷಿಕೆಯ ಮೂಲಕವೇ ಅದರ ವಿಸ್ತಾರವಾದ ಹರಹನ್ನು ಪ್ರಕಟಪಡಿಸುತ್ತದೆ. ಇಡೀ ಕಾದಂಬರಿಯೇ ಕಂಬಳದ ಆವರಣದ ಒಳಗಡೆ ನಡೆದುಬಿಡುತ್ತದೆ. ಆರಂಭ ಹಾಗೂ ಅಂತ್ಯ ಕಂಬಳದ ಚಿತ್ರಣದೊಂದಿಗೆ ನೆರವೇರಿದೆ.

'ಕಂಬುಲ'ದಲ್ಲಿ ಮುಲ್ಕಿ ಸಾಮಂತ ಅರಸರು ನಡೆಸುವ ಕಂಬುಲದ ಚಿತ್ರಣವಿದೆ. ಕಂಬಳ ಇಲ್ಲಿ ಕ್ರೀಡೆಯಾಗಿ ಬದಲಾದ ಆಧುನಿಕ ಕಾಲದ ವಿವರವಿದೆ. ಬಾಕಿಮಾರು ಗದ್ದೆಯಲ್ಲಿ ಸೂರಪ್ಪನ ಕೋಣಗಳಿಗೆ ಕಂಬಳದ ತಯಾರಿ ನಡೆಸುತ್ತಿರುವ ದೃಶ್ಯದ ಮೂಲಕ ಕಾದಂಬರಿ

ಆರಂಭವಾಗಿದೆ. ಗೆಲ್ಲಲೇಬೇಕೆಂಬ ಹಠದಿಂದ ಸೂರಪ್ಪನ ಆಳು ಚೆನ್ನ ದಿನವೂ ಕೆಸರು ಗದ್ದೆಯಲ್ಲಿ ಕಂಬಳಕ್ಕೆ ಇನ್ನೂ ತಿಂಗಳು ಇರುವಾಗಲೇ ಅಭ್ಯಾಸ ಮಾಡಿಸುತ್ತಿದ್ದ.

ಕೋಣಗಳನ್ನು ಸಾಕುವ ಬಗೆಯನ್ನೂ ಕಾದಂಬರಿಯಲ್ಲಿ ವಿವರಿಸಲಾಗಿದೆ. "ಚೆನ್ನನಿಗೆ ಈಗ ಕೆಲಸಕ್ಕೆ ಹೋಗಲಿಕ್ಕಿಲ್ಲ. ಏನಿದ್ದರೂ ಕೋಣಗಳನ್ನು ಜೋಪಾನವಾಗಿ ನೋಡಿಕೊಳ್ಳುವುದು. ಅದರ ಕೊಟ್ಟಿಗೆಗೆ ಸೊಪ್ಪು ತರಗೆಲೆಗಳನ್ನು ಹಾಕುವುದು, ಬೆಳಿಗ್ಗೆ ಹುರುಳಿ ತಿನ್ನಿಸುವುದು. ಮಧ್ಯಾಹ್ನ ಪೌಷ್ಟಿಕ ಆಹಾರದ ಜೊತೆಗೆ ಬೈಹುಲ್ಲು ಹಾಕುವುದು. ಆಮೇಲೆ ಹೊಳೆಗೆ ಅಟ್ಟಿಕೊಂಡು ಹೋಗಿ ಕೋಣಗಳನ್ನು ಮೀಯಿಸುವುದು. ಸಾಯಂಕಾಲ ಅದರ ಮೈಗೆ ಎಣ್ಣೆ ಹಚ್ಚುವುದು ಇತ್ಯಾದಿ ಕೆಲಸಗಳು ಮಾತ್ರ ಚೆನ್ನನಿಗೆ ಉಳಿಯಿತು."(ಕಂಬುಲ, ಪುಟ ೪)

ಕೋಣಗಳನ್ನು ಕಂಬಳಕ್ಕಾಗಿ ಸಾಕುವುದು ಸುಲಭವಾದ ವಿಷಯವೇನಲ್ಲ. ಕೋಣಗಳಿಗೊಂದು ಆಳು ನಿಯಮಿಸಿ ಸಾಕಬೇಕೆಂದರೆ ಕೋಣಗಳ ಯಜಮಾನ ಜಮೀನುದಾರನೋ, ತುಂಬಾ ಆಸ್ತಿ ಉಳ್ಳವನೋ ಆಗಿರುತ್ತಿದ್ದ. ಕೋಣಗಳನ್ನು ಸಾಕಿ ಕಂಬಳದಲ್ಲಿ ಭಾಗಿಯಾಗುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಸೂರಪ್ಪ ದೊಡ್ಡ ಜಮೀನುದಾರನಾದರೂ ಆತನಲ್ಲಿ ಕಂಬುಲದ ಕೋಣಗಳು ಇರಲಿಲ್ಲ. ಸಭೆ ಸಮಾರಂಭಗಳಲ್ಲಿ ಜನ ಆತನನ್ನು ಗೇಲಿ ಮಾಡತೊಡಗಿದರು.

"ಏನು ಮಾರಾಯ್ರೇ, ಯಾಕೆ ಕಾಸು ಗಂಟು ಕಟ್ಟಿಡುತ್ತಿದ್ದೀರಿ. ಒಂದು ಎರಡು ಜತೆ ಕಂಬುಲದ ಕೋಣಗಳನ್ನು ಕಟ್ಟಿಬಿಡಿ. ನಿಮ್ಮಲ್ಲಿ ತಾಕತ್ತಿದೆ, ಆಸ್ತಿಯಿದೆ." ಎಂದು ಗೇಲಿ ಮಾಡಿದ್ದರು.(ಕಂಬುಲ, ಪುಟ ೬) ಇಲ್ಲಿ ಬಂಟರು ಕೋಣಗಳನ್ನು ಸಾಕುತ್ತಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ.

ಕಂಬಳದಲ್ಲಿ ಓಡುವ ಕೋಣಗಳಿಗೂ ಮಹತ್ವದವನಾಗಿ ಬಿಡುವವನು ಓಡಿಸುವಾತ. ಕೆಸರು ಗದ್ದೆಯಲ್ಲಿ ಓಡುವುದೆಂದರೆ ಅಪಾರ ಶ್ರಮ ಬೇಕು. ಸೂರಪ್ಪನ ಕೋಣಗಳನ್ನು ನೋಡಿಕೊಳ್ಳುವಲ್ಲಿ ಚೆನ್ನ ಸಮರ್ಥನಾದ. ಸೂರಪ್ಪನ ನಿಷ್ಠಾವಂತ ಆಳು ಚೆನ್ನನಿಗೆ ಮಾರಪ್ಪ ಹೆಚ್ಚಿನ ದುಡ್ಡು ಕೊಡುವ ಭರವಸೆ ನೀಡಿ, ತನ್ನ ಪರವಾಗಿ ಕೋಣಗಳನ್ನು ಓಡಿಸಲು ಆಮಿಷ ಒಡ್ಡುತ್ತಾನೆ. ಆದರೆ ಚೆನ್ನ ಒಪ್ಪುವುದಿಲ್ಲ.

ಹೊಸಂಗಡಿ ಕಂಬುಲಕ್ಕೆ ಸೂರಪ್ಪನಿಗೆ ಆಹ್ವಾನ ಬಂದಾಗ ಚೆನ್ನನು ಉತ್ಸಾಹದಿಂದ ಹೊರಟ. ಚೆನ್ನನ ಬಳಿ ಕೋಣಗಳ ಬಗ್ಗೆ ಮಾಹಿತಿ ಪಡೆಯಲು ಬಂದ ಆಗಂತುಕರು ತಿಂಡಿ ನೀಡಿದರು. ಚೆನ್ನ ನಿರಾಕರಿಸಿದರೂ ಒತ್ತಾಯದಿಂದ ಕೊಡಲು ಬಂದಾಗ, ಚೆನ್ನ ಸ್ವೀಕರಿಸಿ ಅವರು ತೆರಳಿದೊಡನೆ ಪಕ್ಕದವನಿಗೆ ನೀಡಿದ. ಆತ ತಿಂದ ಐದು ನಿಮಿಷದೊಳಗೆ ವಿಪರೀತ ಹೊಟ್ಟೆನೋವು ಆರಂಭವಾಯಿತು. ಚೆನ್ನನ ಕಟ್ಟುನಿಟ್ಟಿನ ಆಹಾರದ ಸ್ವಭಾವದಿಂದಾಗಿ ಅಂದು ಬಚಾವಾಗುತ್ತಾನೆ. ಕಂಬಳದಲ್ಲಿ ಚೆನ್ನನಿಂದ ಸೂರಪ್ಪನ ಕೋಣಗಳು ವಿಜೇತವಾದವು.

ಸೂರಪ್ಪನ ಜೊತೆ ಸೇರಿದ ಚನಿಯು ಹಣದ ಆಸೆಗಾಗಿ ಸರ್ಪಸನ್ನಿ ಸೊಪ್ಪು ತಂದು ಕೋಣಗಳ ಬೈಹುಲ್ಲಿನ ನಡುವೆ ಹಾಕುತ್ತಾನೆ. ಆದರೆ ಕೋಣಗಳು ಅದನ್ನು ಮುಟ್ಟಿರುವುದಿಲ್ಲ.

ಮಾರನೇ ದಿನ ಹಗ್ಗ ಬಿಚ್ಚಿದಾಗ ಕೋಣಗಳು ಚನಿಯನನ್ನು ದೂಡಿ ಹಾಕುತ್ತವೆ. ಮೂಕ ಪ್ರಾಣಿಗಳಿಗಿರುವ ಬುದ್ಧಿವಂತಿಕೆ, ಸಾಕುವವ ಕಲಿಸಿದ ಬುದ್ಧಿ ಇಲ್ಲಿ ವ್ಯಕ್ತವಾಗಿದೆ.

ಸೂರಪ್ಪನ ಕೋಣಗಳು ಕದ್ರಿ ಕಂಬುಲಕ್ಕೆ ಹೋಗಲು ಸಿದ್ಧವಾದವು. ಅಲ್ಲಿ ಮಾರಪ್ಪನ ಕೋಣಗಳಿಂದ ಸೂರಪ್ಪನ ಕೋಣಗಳಿಗೆ ಸೋಲುಂಟಾಗುತ್ತದೆ. ಹೀಗೆ ಸೂರಪ್ಪನ ಅಹಂಕಾರ, ದೌರ್ಜನ್ಯಗಳಿಗೆ ಮಾರಪ್ಪ ಕಂಬಳದ ಕೋಣಗಳನ್ನು ಸೋಲಿಸುವ ಮೂಲಕ ಉತ್ತರ ನೀಡುತ್ತಾನೆ.

ಪ್ರಭಾಕರ್ ನೀರ್‌ಮಾರ್ಗರು ಕಂಬಳವನ್ನು ಆಧುನಿಕ ಕಂಬಳವಾಗಿ ಚಿತ್ರಿಸಿದ್ದಾರೆ. ಕೋಣಗಳ ಸ್ಪರ್ಧೆಯಿಂದ ಉಂಟಾಗುವ ಈರ್ಷ್ಯೆ, ಸೂರಪ್ಪನ ಕೋಣಗಳನ್ನು ಸೋಲಿಸಲು ಮಾರಪ್ಪ ಹೆಣೆಯುವ ಕುತಂತ್ರಗಳು, ಸೂರಪ್ಪನ ದರ್ಪದ ಬದುಕು–ಇವೆಲ್ಲವೂ ಕಂಬಳವನ್ನು ನವೀನ ದೃಷ್ಟಿಕೋನದಿಂದ ಪ್ರಕಟಪಡಿಸುವಲ್ಲಿ ಕಾದಂಬರಿ ಸಫಲವಾಗಿದೆ. 'ಗಾಂಧಿ ಬಂದ' ಕಾದಂಬರಿಯ ಕಂಬಳದ ವರ್ಣನೆಗೂ ಇಲ್ಲಿನ ವರ್ಣನೆಗೂ ಅಗಾಧ ವ್ಯತ್ಯಾಸವಿದೆ. ಪರಂಪರೆಯನ್ನು ಮತ್ತೆ ಸದೃಢಪಡಿಸಲು ಹೆಣಗುವಂತೆ 'ಗಾಂಧಿ ಬಂದ'ದಲ್ಲಿ ಕಂಡುಬಂದರೆ, 'ಕಂಬುಲ' ಸಂಪ್ರದಾಯ ಮೀರಿ ಮನುಷ್ಯ ತೋರಬಲ್ಲ ಪ್ರಯತ್ನ, ವರ್ತನೆ, ಜಿದ್ದಾಜಿದ್ದಿ, ಮೇಲರಿಮೆ ಮುಂತಾದವುಗಳನ್ನು ವರ್ಣಿಸುತ್ತಾ ಸಾಮಾಜಿಕ ಆಯಾಮವನ್ನು ಪ್ರಕಟಪಡಿಸುತ್ತದೆ. ಕಂಬಳ ಪಡೆದ ವಿನೂತನ ರೂಪವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಎಳನೀರು ಮರ್ಯಾದೆ, ಗೆದ್ದವರು ಬ್ಯಾಂಡ್ ವಾದ್ಯದೊಂದಿಗೆ ಮಾಡುವ ಮೆರವಣಿಗೆ, ವೈಭವ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗುತ್ತದೆ.

"ಪ್ರಚಾರ ಮಾಧ್ಯಮ, ಸಂಘಟನೆಗಳ ಮೂಲಕ ಕೆಲವೊಂದು ಸಾಂಸ್ಕೃತಿಕ ರೂಪಗಳನ್ನು ಮತ್ತೆ ಜನಪ್ರಿಯಗೊಳಿಸಬಹುದೆಂಬುದಕ್ಕೆ–ಮುಖ್ಯವಾಗಿ, ಕಲೆ–ಕ್ರೀಡೆಗಳ ಸಂದರ್ಭದಲ್ಲಿ–ನಮ್ಮ ಕಂಬಳವೇ ಒಂದು ಸಾಕ್ಷಿಯಾಗಿದೆ."[೨೯]

ಎಂ. ವೀರಪ್ಪ ಮೊಯಿಲಿ ಅವರ 'ಕೊಟ್ಟ' ಕೊರಗರ ಬದುಕಿನ ಚಿತ್ರಣ ಹಾಗೂ ಅವರ ಏಳಿಗೆಗಾಗಿ ಶ್ರಮಿಸಿದ ಮಲ್ಲಯ್ಯ, ಸದಾಶಿವ, ಧೀರಜ್ ಎಂಬ ಮೂವರು ಯುವಕರ ಹೋರಾಟದ ವಿವರಗಳನ್ನು ಒಳಗೊಂಡಿದೆ. ಕೊರಗರನ್ನು ಸಾಮಾಜಿಕ ಜೀವನದ ಮುಖ್ಯವಾಹಿನಿಗೆ ಸೇರಿಸಲು ಅವಿರತ ಪ್ರಯತ್ನ ಈ ಯುವಕರಿಂದ ನಡೆಯುತ್ತದೆ. ಸದಾಶಿವ ಹಾಗೂ ಮಲ್ಲಯ್ಯನ ಸಂಭಾಷಣೆಯಲ್ಲಿ ಕದ್ರಿ ಕಂಬಳದ ವಿವರಗಳು ಬರುತ್ತವೆ. ಕಂಬಳದ ನೇರ ಚಿತ್ರಣದ ಹೊರತಾಗಿ ಪ್ರಶ್ನೋತ್ತರಗಳ ರೂಪದಲ್ಲಿ ವಿವರಗಳಿವೆ. ಎಂ. ವೀರಪ್ಪ ಮೊಯಿಲಿ ಅವರು ಹೊಸ ದೃಷ್ಟಿಕೋನದೊಂದಿಗೆ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ತುಳುನಾಡಿನ ಅಳಿಯಕಟ್ಟು ಸಂಪ್ರದಾಯಕ್ಕೆ ತಳುಕು ಹಾಕಲಾಗಿದೆ.

'ಕೊಟ್ಟ' ಮೂಲತಃ ಕೊರಗರ ಬದುಕಿನ ಸೂಕ್ಷ್ಮ ಒಳನೋಟಗಳನ್ನು ಪ್ರಸ್ತುತಪಡಿಸುತ್ತಿರುವುದರಿಂದ 'ಕಂಬಳ' ಕಾದಂಬರಿಯ ಒಳಗೆ ಸ್ಥಾನ ಪಡೆದಿದೆ. ಸಾಂಪ್ರದಾಯಿಕ ಕಂಬಳದಲ್ಲಿ ಕೊರಗರ ಭಾಗವಹಿಸುವಿಕೆ ಅನಿವಾರ್ಯ ಮತ್ತು ಮಹತ್ವದ್ದು. ಆದರೆ ಎಂ.ವೀರಪ್ಪ ಮೊಯಿಲಿ ಅವರು ಕಂಬಳವನ್ನು ಕಥೆಯ ಒಳಗೆ ಸೇರಿಸದೆ ಮಲ್ಲಯ್ಯ ಹಾಗೂ ಸದಾಶಿವರ

ಚರ್ಚೆಯ ಮೂಲಕ ವ್ಯಕ್ತಪಡಿಸುವ ಪ್ರಯತ್ನ ಮಾಡಿದ್ದಾರೆ. "ಸಂಶೋಧನೆಯಿಂದ ದೊರಕಿದ ವಿವರಗಳು ಕಾದಂಬರಿಯ ಒಡಲಿನಲ್ಲಿ ಒಂದಾಗದೆ ಅದರ ಹೊರಗಡೆಯೇ ಉಳಿಯುತ್ತವೆ. ಉದಾಹರಣೆಗೆ, ಕೃತಿಯ ಮಧ್ಯಭಾಗದಲ್ಲಿ ಬರುವ ಕಂಬಳದ ಮತ್ತು ಕಂಬಳದಲ್ಲಿ ಕೊರಗರ ಪಾತ್ರವನ್ನು ಕುರಿತಾದ ವಿವರಗಳು. ಈ ಎಲ್ಲಾ ವಿವರಗಳು ಕೇವಲ ಮಲ್ಲಯ್ಯ-ಸದಾಶಿವ ಇವರ ನಡುವಿನ ಸಂಭಾಷಣೆಯಲ್ಲಿ ಓದುಗರಿಗೆ ದೊರಕುತ್ತವೆಯೇ ಹೊರತು ಅನುಭವದ ಮೂಲಕ ಅಲ್ಲ. ಎಂದರೆ ಕೃತಿಯಲ್ಲಿ ಕಂಬಳದ ನೈಜ ವರ್ಣನೆಯ ಬದಲಿಗೆ, ಆ ಸಂದರ್ಭದಲ್ಲಿ ಕೊರಗರು ಹಾಡುವ ಹಾಡುಗಳ-ಕುಣಿತಗಳ ಬದಲಿಗೆ, ಅವುಗಳ ಬಗ್ಗೆ ಒಣ ಚರ್ಚೆಯಿದೆ."[೨೦]

ಕೊರಗರಿಗೆ ಕಂಬಳದಲ್ಲಿ ಮಹತ್ವದ ಸ್ಥಾನ ನೀಡಬೇಕು. ಆ ಸ್ಥಾನ ಬದಲಾದ ಕಾಲಘಟ್ಟದಲ್ಲಿ ಕೋಣ ಹಾಗೂ ಕೋಣದ ಮಾಲಿಕರಿಗೆ ಸಿಗುತ್ತದೆ.

"ಯಾರೇ ಬ್ರಾಹ್ಮಣರು ಕಂಬಳ ನೋಡಿದರೆ ಏಳು ದೇವಸ್ಥಾನಕ್ಕೆ ಹೋಗಿ ಪಾಪ ಪರಿಹಾರ ಮಾಡಿಕೊಳ್ಳಬೇಕಂತೆ."(ಕಂಬುಲ, ಪುಟ ೧೧೦) ಮೇಲ್ವರ್ಗದವರಿಂದ ಈ ಗಾದೆಮಾತು ಹುಟ್ಟಿರಬಹುದು. ತಳವರ್ಗದ ಆಚರಣೆಗಳು ತಮಗೆ ಸೂಕ್ತವಲ್ಲ ಎಂಬ ನಂಬಿಕೆ ಇಲ್ಲಿ ವ್ಯಕ್ತಗೊಂಡಿದೆ.

ತುಳುನಾಡಿನಲ್ಲಿ ಅಳಿಯಕಟ್ಟು ಸಂಪ್ರದಾಯದ ಪ್ರಕಾರ ಹೆಣ್ಣುಮಕ್ಕಳಿಗೆ ಅಧಿಕಾರ ಹಸ್ತಾಂತರವಾಗುತ್ತ ಸಾಗುತ್ತದೆ. ಪುರುಷರಿಗೆ ದೇಹಬಲ, ಬುದ್ಧಿಬಲವಿದ್ದರೂ ಹಲವು ಸಂದರ್ಭಗಳಲ್ಲಿ ಮಹಿಳೆಯರ ಪ್ರಾಬಲ್ಯವನ್ನು ಒಪ್ಪಿ ಮೌನವಹಿಸಬೇಕಾದ ಅನಿವಾರ್ಯತೆಯಿದೆ. ಕಂಬಳವು ಸಾಮಾಜಿಕವಾಗಿ ಪೌರುಷವನ್ನು ಸಾಕ್ಷಾತ್ಕರಿಸುವ ಮಾರ್ಗ ಎಂಬ ಭಾವನೆ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಎಂ.ವೀರಪ್ಪ ಮೊಯಿಲಿ ಅವರ 'ಕೊಟ್ಟ'ದಲ್ಲಿ ಕಂಬಳವನ್ನು ಕ್ರೀಡೆಯಾಗಿ ಗುರುತಿಸದೆ, ಅಳಿಯಕಟ್ಟು ಸಂಪ್ರದಾಯ, ನಾಗಪೂಜೆ, ಫಲವಂತಿಕೆಯ ಅಚರಣೆ, ಕೊರಗರ ಮಹತ್ವದ ಆಚರಣೆಗಳನ್ನು ಗುರುತಿಸಿ ಅವರು ಸಾಂಸ್ಕೃತಿಕ ಕೊಡುಗೆ ನೀಡಿರುವ ಬಗೆಯನ್ನು ಗುರುತಿಸಲಾಗಿದೆ.

ಕಂಬಳವು ತನ್ನ ಸುತ್ತ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮವನ್ನು ಹುಟ್ಟುಹಾಕಿದೆ. ಸಾಮಾಜಿಕ ಸಂಬಂಧಗಳಲ್ಲಿ ಏರಿಳಿತಗಳು, ಮೇಲುಕೀಳುಗಳು, ದೌರ್ಬಲ್ಯಗಳು, ಮನುಷ್ಯ ಸ್ವಭಾವಕ್ಕೆ ಸಹಜವಾದ ಮಿತಿಗಳು ಪ್ರಭಾವ ಬೀರಿದರೂ ಕೂಡ ಸಾಂಸ್ಕೃತಿಕವಾಗಿ ಅವೆಲ್ಲವನ್ನೂ ಮೀರುವ ಗುಣ ಸಮುದಾಯದಲ್ಲಿದೆ. ಇದರ ಫಲವಾಗಿ ನಮ್ಮ ಸಾಮುದಾಯಿಕ ಚಟುವಟಿಕೆಗಳು ಹಲವು ಅಡ್ಡಿ ಆತಂಕಗಳ ನಡುವೆಯು ಯಶಸ್ವಿಯಾಗುವ, ಕೆಟ್ಟ ಪರಿಸ್ಥಿತಿಗಳಲ್ಲೂ ಎದ್ದುನಿಲ್ಲುವ ಸಾಮರ್ಥ್ಯವನ್ನು ತೋರುತ್ತವೆ. ಸಾಂಸ್ಕೃತಿಕ ಚಟುವಟಿಕೆಗಳಿಗೆ ಧಾರ್ಮಿಕ ಚೌಕಟ್ಟು ದೊರೆತಾಗ ಅದರ ಯಶಸ್ಸು ದ್ವಿಗುಣಗೊಳ್ಳುತ್ತದೆ. ಕಂಬಳವು ಆರ್ಥಿಕ ಬೆಂಬಲವನ್ನೂ ಪಡೆದಾಗ ಹೆಚ್ಚಿನ ಪ್ರಗತಿ ಹಾಗೂ ಸ್ಥಿತ್ಯಂತರಗಳನ್ನು ಹೊಂದುತ್ತದೆ.

ಸ್ವಾತಂತ್ರ್ಯಾನಂತರ ಶಿಕ್ಷಣ ಪಡೆದು ವಿದ್ಯಾವಂತರಾದ ಯುವ ಸಮುದಾಯ ಪಾಶ್ಚಿಮಾತ್ಯ ಸಂಸ್ಕೃತಿ ಶ್ರೇಷ್ಠವೆಂದು, ಮಹತ್ವದ್ದೆಂದು ಅರಿಯಲು ಆರಂಭಿಸಿದಾಗ, ಸೂಕ್ಷ್ಮವಾಗಿ ತಮ್ಮ ಸಂಸ್ಕೃತಿಯನ್ನು ಕುರಿತು ಆಳವಾಗಿ ಚಿಂತನೆ ಮಾಡಲು ತೊಡಗಿತು. ತುಳುನಾಡಿಗೆ ಸಂಬಂಧಪಟ್ಟಂತೆ ಇಲ್ಲಿನ ಸಂಸ್ಕೃತಿ, ಜೀವನವಿಧಾನ ಮತ್ತೆ, ಮತ್ತೆ ಕಾಡಲು ಕಾರಣವೇನು? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಒಂದೊಂದು ಕಾದಂಬರಿಯಲ್ಲೂ ಕಂಬಳವು ವಿಭಿನ್ನವಾಗಿ ಚಿತ್ರಿತವಾಗಿದೆ. ಇಲ್ಲಿನ ಸಂಸ್ಕೃತಿ ಎಂದು ಗುರುತಿಸಿದವುಗಳನ್ನು ಜಾನಪದ ತಜ್ಞರು, ವಿದ್ವಾಂಸರು ವಿವರಗಳ, ಮಾಹಿತಿಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಈ ಮಾಹಿತಿಗಳು ಹೆಚ್ಚು ಅರ್ಥಪೂರ್ಣವಾಗುವುದು ಅವುಗಳಿಗೆ ಸಾಂಸ್ಕೃತಿಕ ಆವರಣ ಪ್ರಾಪ್ತವಾದಾಗ. ಸಾಂಸ್ಕೃತಿಕ ಆವರಣದಿಂದ ಪ್ರತ್ಯೇಕಿಸಿ ವಿವರಗಳಿಗೆ ಸೀಮಿತಗೊಂಡಾಗ ನೀರಿನಿಂದ ಹೊರತೆಗೆದ ಮೀನಿನಂತೆ ನಿರ್ಜೀವವಾಗುತ್ತದೆ. ಸಾಂಸ್ಕೃತಿಕ ಆವರಣ ಒದಗಿದಾಗ ಕಂಬಳವು ಎಂದಿಗೂ ಏಕರೂಪತೆ ಹೊಂದಲು ಸಾಧ್ಯವಿಲ್ಲ. ಪ್ರತಿವ್ಯಕ್ತಿ ಬರೆದಾಗಲೂ ಅದು ನವನವೀನ ಆಗುವ ಸಾಮರ್ಥ್ಯ ಹೊಂದಿದೆ. ಕಾದಂಬರಿಕಾರರು ಮತ್ತೆ ಮತ್ತೆ ತಮ್ಮ ಕಾದಂಬರಿಗಳಲ್ಲಿ ಆಚರಣೆಗಳನ್ನು ತರುವ ಪ್ರಯತ್ನ ಮಾಡಿದ್ದಾರೆ. ಪ್ರತಿ ಆಚರಣೆ ಪ್ರತಿಸಲ ನಡೆದಾಗಲೂ ಅದು ನವಭಾವದಿಂದ ನಡೆಯುತ್ತದೆ. ಸಾಮಾಜಿಕ ಸ್ಥಿತ್ಯಂತರ ನಿಧಾನವಾಗಿ ನಡೆಯುವಂಥದ್ದು. ಈ ಪ್ರಕ್ರಿಯೆ ಏಕಾಏಕಿ ಘಟಿಸುವುದಿಲ್ಲ. ಪರಂಪರೆ ಮತ್ತು ಆಧುನಿಕತೆಯ ಸ್ಪರ್ಶದೊಡನೆ ಸಂಘರ್ಷಗೊಳ್ಳುತ್ತಾ ಮಾರ್ಪಾಡಾಗುತ್ತಾ ಸಾಗುತ್ತದೆ. ಮನುಷ್ಯ ಹೊಸತನಕ್ಕೆ ಅನುಕ್ಷಣವೂ ತುಡಿಯುತ್ತಿರುತ್ತಾನೆ. ಪ್ರತಿ ಆಚರಣೆಯ ಸಂದರ್ಭದಲ್ಲೂ ಪರಂಪರೆಗೆ ಅಂಟಿಕೊಳ್ಳುವಷ್ಟೇ ಹೊಸತನದತ್ತ ತುಡಿತವೊಂದು ಕಂಡುಬರುತ್ತದೆ. ಈ ಸೆಳೆತಗಳಿಂದ ಪ್ರತಿ ಆಚರಣೆಯೂ ಮಹತ್ವಪೂರ್ಣದ್ದಾಗಿಯೂ, ಒಂದಕ್ಕಿಂತ ಇನ್ನೊಂದು ಭಿನ್ನವಾಗಿಯೂ ಗೋಚರಿಸುತ್ತದೆ. ಕಂಬಳಕ್ಕೆ ಭಿನ್ನ ಜಾತಿಯವರನ್ನು, ಭಿನ್ನ ಅಂತಸ್ತುಗಳನ್ನು ಸಂಘಟಿಸುವ ಶಕ್ತಿಯಿದೆ. ಅಂದರೆ ಎಲ್ಲ ಸಮುದಾಯದವರು ಆಸಕ್ತಿಯಿಂದ ಪಾಲ್ಗೊಳ್ಳುವ ಆಧುನಿಕ ಕಂಬಳ ಆಕರ್ಷಣೆಯನ್ನು ಹೊಂದಿದೆ.

೩.೩. ಜೀವನಾವರ್ತನ ಆಚರಣೆಗಳು

ಒಬ್ಬ ವ್ಯಕ್ತಿಯ ಜೀವಿತಾವಧಿಯಲ್ಲಿ ನಡೆಸಲ್ಪಡುವ ಆಚರಣೆಗಳನ್ನು ಜೀವನಾವರ್ತನ ಆಚರಣೆಗಳು ಎಂಬುದಾಗಿ ಕರೆಯುತ್ತೇವೆ. ಹುಟ್ಟು-ಸಾವಿನ ನಡುವೆ ಆಚರಿಸಲ್ಪಡುವ ವಿಧಿವಿಧಾನಗಳು ತುಳು ಸಂಸ್ಕೃತಿಯಲ್ಲಿ ವಿಶಿಷ್ಟವೆನಿಸಿವೆ. ಹಲವು ಕಾದಂಬರಿಗಳಲ್ಲಿ ಜೀವನಾವರ್ತನ ಆಚರಣೆಗಳ ಉಲ್ಲೇಖಗಳಿವೆ. ಅವುಗಳನ್ನು ಒಂದೊಂದಾಗಿ ಗಮನಿಸಬಹುದು.

೧. ಜನನ

ಜನನ ಸಂದರ್ಭದ ಆಚರಣೆಗಳು ಹಾಗೂ ತಾಯಿ ಹಾಗೂ ಮಗುವಿನ ಯೋಗಕ್ಷೇಮ ನೋಡಿಕೊಳ್ಳುವ ರೀತಿ ತುಳುನಾಡಿಗೆ ವಿಶಿಷ್ಟವಾದುದು. ಇಲ್ಲಿನ ವಾಯುಗುಣ, ಪರಿಸರಕ್ಕೆ

ಸಂಬಂಧಪಟ್ಟಂತೆ ವಿಶಿಷ್ಟವೆನಿಸುವ ಕ್ರಮಗಳು ರೂಢಿಯಲ್ಲಿವೆ. ಆಯಾ ಸಮುದಾಯಕ್ಕೆ ಹೊಂದಿಕೊಂಡು ಅಲ್ಪಸ್ವಲ್ಪ ವ್ಯತ್ಯಾಸವಾಗುತ್ತವೆ.

'ತೆಂಬರೆ' ಕಾದಂಬರಿಯು ಬಾಣಂತಿ ಆರೈಕೆ ಹಾಗೂ ಮಗುವಿನ ಲಾಲನೆಪಾಲನೆಗಳ ಬಗ್ಗೆ ವಿವರವಾಗಿ ತಿಳಿಸುತ್ತದೆ. "ತಾಯಿಯ ಹೆರಿಗೆ ಮಾಡಿಸಿದವರು ಮಗುವಿಗೆ ಮೊದಲು ಸ್ನಾನ ಮಾಡಿಸಿ, ಲೋಬಾನದ ಹೊಗೆಯಿಂದ ಮಗುವನ್ನು ನಿವಾಳಿಸಿದ್ದು. ಮೂರು ದಿವಸಗಳ ನಂತರ ಬಾಣಂತಿಗೆ ಕಾಳುಜೀರಿಗೆ ಕಷಾಯ ಕುಡಿಸಿದ್ದು. ಮಗುವಿಗೆ ಹದಿನಾರು ದಿನ ಆದಾಗ ನೆರೆಹೊರೆಯವರು ಬಂದು ಸ್ನಾನ ಮಾಡಿಸಿದ್ದು. ಮೆತ್ತೆ, ಓಮ, ಬೆಳ್ಳುಳ್ಳಿ, ಮೆಣಸು ಇದನ್ನು ಅರೆದು ಹಸಿಮದ್ದು ಮಾಡಿ ಅವಳಿಗೆ ತಿನ್ನಿಸುತ್ತಿದ್ದರು."(ತೆಂಬರೆ, ಪುಟ ೧೯)

"ಹೆರಿಗೆ ಮಾಡಿಸಿದ ಉಮ್ಮನಿಗೆ ತೆಂಗಿನಕಾಯಿ ಮತ್ತು ಬೆಲ್ಲವನ್ನು ಕೊಡುತ್ತಿದ್ದರು. ಮಗು ಹುಟ್ಟಿದ ಮೇಲೆ ಹದಿನಾರು ದಿವಸಗಳ ಪುರುಡು. ಹೆರಿಗೆ ಆದ ನಲವತ್ತು ದಿವಸಕ್ಕೆ ಬಾಣಂತಿಗೆ ಸ್ನಾನ ಮಾಡಿಸಿ ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಒಪ್ಪಿಸಿ ಬಂದರು. ಆ ದಿನವೇ ಮಗುವನ್ನು ತೊಟ್ಟಿಲಿಗೆ ಹಾಕಿದರು. ಮೂರು ತಿಂಗಳ ಬಳಿಕ ಮೈರೆಯ ತಂಗಿ ಕೊರೊಪೊಳು ಮಗುವಿಗೆ ಅನ್ನ ಉಣ್ಣಿಸಿದ್ದಳು."(ತೆಂಬರೆ, ಪುಟ ೧೯) ಹೀಗೆ ಜನನ ಸಂದರ್ಭದ ಆಚರಣೆಗಳು ಸಾಂಸ್ಕೃತಿಕವಾಗಿ ಮಹತ್ವದ್ದೆನಿಸಿವೆ.

ಕಜಂಬು

"ತುಳುನಾಡಿನ ಜನಪದ ಪದ್ಧತಿಯಲ್ಲಿ ಗಂಡು ಮಕ್ಕಳಿಗೆ ಏಳನೇ ವರ್ಷ ಪ್ರಾಯದಲ್ಲಿ ತಲೆಕೂದಲು ಕತ್ತರಿಸುವ ಧಾರ್ಮಿಕ ಆಚರಣೆಯೇ 'ಕಜಂಬು ಮದಿಮೆ' ಎನಿಸುತ್ತದೆ."[೩೧] 'ತೆಂಬರೆ' ಕಾದಂಬರಿಯಲ್ಲಿ ಲಕನ ಕಜಂಬು ಮದುವೆ ಮಾಡುವುದನ್ನು ಗಮನಿಸಿರುತ್ತಾನೆ.

೨. ಬಯಕೆ

ಹೆಣ್ಣು ಗರ್ಭಿಣಿಯಾಗುವುದು ವಿಶೇಷ ಅನುಭವ. ಆ ಸಂದರ್ಭದಲ್ಲಿ ಏಳು ತಿಂಗಳ ನಂತರ ಬಯಕೆ ಎನ್ನುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಗರ್ಭಿಣಿ ಹೆಣ್ಣುಮಗಳಿಗೆ ಹಲವು ಬಗೆಯ ಭಕ್ಷಭೋಜನಗಳಿಂದ ಖುಷಿಪಡಿಸಲಾಗುತ್ತದೆ. ಹೆಣ್ಮಕ್ಕಳ ಬಯಕೆಯನ್ನು ತೀರಿಸಬೇಕೆಂಬ ಸಂಪ್ರದಾಯ ತುಳುನಾಡಿನಲ್ಲಿದೆ. ಉಲ್ಲಂಘನೆಯಲ್ಲಿ ಶಾಂತಕ್ಕೆಯ ಬಯಕೆಯ ಪ್ರಸ್ತಾಪವಿದೆ. ಆಕೆಗೆ ಕಂಬಳ ನೋಡಬೇಕೆಂಬ ಬಯಕೆ ಉಂಟಾಗುತ್ತದೆ. ಆಕೆಗಾಗಿ ಗುತ್ತಿನಲ್ಲಿ ನಿಂತುಹೋಗಿದ್ದ ಕಂಬಳವನ್ನು ಮತ್ತೆ ಪ್ರಾರಂಭಿಸುತ್ತಾರೆ. ಸಾಂಪ್ರದಾಯಿಕ ಕಂಬಳವನ್ನು ಬಿಟ್ಟು ಕ್ರೀಡಾ ಮನೋಭಾವದಿಂದ ಆಚರಿಸುತ್ತಾರೆ.

೩. ಋತುಮತಿ ಶಾಸ್ತ್ರ

'ಇಂದಿರಾಬಾಯಿ' ಕಾದಂಬರಿಯಲ್ಲಿ ಇಂದಿರೆಯ ಬಾಲ್ಯವಿವಾಹವಾಗಿತ್ತು. ಪುಷ್ಪವತಿಯಾಗುವವರೆಗೆ ತಾಯಿಮನೆಯಲ್ಲೇ ನೋಡಲಾಗುತ್ತಿತ್ತು. ಆಕೆ ಪುಷ್ಪವತಿಯಾದಾಗ ಹೆಂಗಸರು ನಾಲ್ಕು ದಿವಸಗಳವರೆಗೆ ಬಗೆ ಬಗೆ ಭಕ್ಷಗಳಿಂದ, ಪುಷ್ಪ, ಪರಿಮಳ ದ್ರವ್ಯಗಳಿಂದ

ಉಪಚರಿಸಿದರು. ನಂತರ ಗಂಡನ ಮನೆಗೆ ಸುದ್ದಿ ತಿಳಿಸಿದರು. ಹಿಂದಿನ ಕಾಲದಲ್ಲಿ ಋತುಮತಿ ಶಾಸ್ತ್ರವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿತ್ತು. ಬಾಲ್ಯ ವಿವಾಹ ಮಾಡಿದರೂ ಗಂಡನ ಮನಗೆ ಕಳುಹಿಸಿಕೊಡುತ್ತಿರಲಿಲ್ಲ. ಋತುಮತಿ ಶಾಸ್ತ್ರದ ನಂತರ ಕಳುಹಿಸಿಕೊಡುತ್ತಿದ್ದರು. ಆದ್ದರಿಂದ ಋತುಮತಿ ಶಾಸ್ತ್ರಕ್ಕೆ ಮಹತ್ವ ಇತ್ತು.

"ಕರಪತ್ತವುನಿ(ಮಡಕೆ ಹಿಡಿಸುವುದು) ಎಂದರೆ ಆಕೆಯನ್ನು ಗೃಹಿಣಿಯನ್ನಾಗಿ ತಯಾರುಗೊಳಿಸುವುದು ಎಂದರ್ಥ."[೨]

'ಉಲ್ಲಂಘನೆ'ಯಲ್ಲಿ ಅಂಬಕ್ಕೆಯ ಋತುಮತಿ ಶಾಸ್ತ್ರದ ವಿವರವಿದೆ. ಗುತ್ತಿನ ಮಗಳು ಪುಷ್ಪವತಿಯಾದರೆ ಅದನ್ನು ರಹಸ್ಯವಾಗಿ ಇಡುವ ಕ್ರಮವಿರಲಿಲ್ಲ. ಅದನ್ನು ಕ್ರಮತಪ್ಪದಂತೆ ಆಚರಿಸುವ ಹಾಗೂ ಹರ್ಷಿಸುವ ಪರಿಪಾಠವಿತ್ತು. ಇದು ಪ್ರಮುಖವಾಗಿ ಮಹಿಳೆಯರಿಂದ ನಡೆಯುವ ಆಚರಣೆ. ಕರಪತ್ತಾವುನು ಋತುಮತಿ ಶಾಸ್ತ್ರದಲ್ಲಿ ಬರುವ ಆಚರಣೆ. ಉಲ್ಲಂಘನೆ ಕಾದಂಬರಿಯಲ್ಲಿ ಇದರ ವಿವರಗಳಿವೆ. ಹೆಣ್ಣು ಪುಷ್ಪವತಿಯಾದ ನಾಲ್ಕನೆಯ ದಿನ 'ಕರಪತ್ತಾವುನು' ಎಂಬ ಧಾರ್ಮಿಕ ಕ್ರಿಯೆ ನಡೆಸುತ್ತಿದ್ದರು. ಮಡಿವಾಳ್ತಿ ಅಂಬಕ್ಕೆಯನ್ನು ಸ್ನಾನ ಮಾಡಿಸಿದ ನಂತರ ಇತರ ಹೆಂಗಸರು ಆಕೆಯನ್ನು ಅಲಂಕರಿಸಿದರು. ಅಂಗಳದಲ್ಲಿ ಬಿಡಿಸಿದ ರಂಗೋಲಿಯ ಮೇಲೆ ಇಟ್ಟ ಅಕ್ಕಿಮುಡಿಯ ಮೇಲೆ ಕೂರಿಸಿ ಆರತಿ ಬೆಳಗಿದರು. ಶೋಭಾನೆ ಹಾಡಿದರು. ಗುತ್ತಿನಾರ್‌ನ ಹೆಂಡತಿ ಚಿನ್ನಕ್ಕೆ ಕರಿಮಣಿ ಕಟ್ಟಿದರು. ಮಂತ್ರಾಕ್ಷತೆ ಹಾಕಿ ಭೋಜನ ಮಾಡಲಾಯಿತು.

ನಿಶ್ಚಿತಾರ್ಥ

ಅಂಬಕ್ಕೆಯ ವಿವಾಹ ನಿಶ್ಚಿತಾರ್ಥದ ವಿವರಗಳು 'ಉಲ್ಲಂಘನೆ'ಯಲ್ಲಿ ಲಭ್ಯವಾಗುತ್ತವೆ. ಗಂಡಿನ ಕಡೆಯವರಿಗೆ ಬೆಲ್ಲ, ನೀರು ನೀಡಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಗುತ್ತದೆ. ಕುಡಿಯಲು ಎಳನೀರು ನೀಡುವುದು. ನಂತರ ಮೂಡು ಪಡು ದಿಕ್ಕು ಗಮನಿಸಿ ಗಂಡಿನ ಕಡೆಯವರಿಗೂ, ಹೆಣ್ಣಿನ ಕಡೆಯವರಿಗೂ ಕೂರಲು ಚಾಪೆ ಹಾಕಲಾಯಿತು. ನಡುವೆ ಕಾಲುದೀಪ ಉರಿಸಿ ಇಡಲಾಯಿತು. ಗಂಡಿನ ಮಾವ ಹೆಣ್ಣಿನ ಮಾವ ಎದುರುಬದುರಾಗಿ ಕೂತು, ಬಳಿ ತಿಳಿಸಿ, ಆಕ್ಷೇಪಣೆ ಇದ್ದರೆ ಕೇಳಲಾಯಿತು. ಎರಡೂ ಕಡೆಯವರಿಂದ ತಾಂಬೂಲ ವಿನಿಮಯ ಮಾಡಲಾಯಿತು. ವಿವಾಹದ ದಿನಾಂಕ ನಿಗದಿಪಡಿಸಿ ಮೂರು ದಿನದ ಮದುವೆ ಎಂದು ನಿಶ್ಚಯಿಸಲಾಯಿತು.

೩. ವಿವಾಹ ಪದ್ಧತಿ

ವಿವಾಹ ಎನ್ನುವುದು ಮಾನವನ ಜೀವನದ ಬಹುಮುಖ್ಯ ಅಂಗ. ವಿವಾಹ ಸಮಾಜದ ಅಂಕಿತವನ್ನು ಬೇಡುತ್ತದೆ. ತುಳುಸಂಸ್ಕೃತಿಯಲ್ಲಿ ವಿವಾಹ ಎನ್ನುವುದು ಪವಿತ್ರ ಬಂಧನವಾಗಿದ್ದು ಹಲವು ಆಚರಣೆಗಳನ್ನು ಹೊಂದಿತ್ತು. ತಳಸಮುದಾಯದವರಲ್ಲಿ ಸರಳವಾಗಿದ್ದ ವಿವಾಹ ಸಂಬಂಧಿ ಆಚರಣೆಗಳು ಮೇಲ್ವರ್ಗದವರಲ್ಲಿ ವಿಜೃಂಭಣೆಯ ಅಂಶವನ್ನೂ ಜೊತೆ ಸೇರಿಸಿಕೊಂಡು ವೈಭವಯುತವಾಗಿರುತ್ತಿತ್ತು.

ಮೂಲದಾಳುಗಳ ವಿವಾಹ

'ಉಲ್ಲಂಘನೆ' ಕಾದಂಬರಿಯಲ್ಲಿ ಮೂಲದಾಳುಗಳ ವಿವಾಹದ ನಂತರದ 'ಮೂಲೊಗು ನೀರು ಮಯಿಪ್ಪುನೆ' ಎಂಬ ಸಂಪ್ರದಾಯದ ವಿವರವಿದೆ. ಗುತ್ತಿನ ಯಜಮಾನಿ ತಮ್ಮ ಕೃಷಿ ಕಾರ್ಯಕ್ಕೆ ಅನುಕೂಲವಾಗುವಂತೆ ಮೂಲದಾಳುಗಳ ವಿವಾಹವನ್ನು ಗುತ್ತಿನ ಖರ್ಚಿನಿಂದ ಏರ್ಪಡಿಸುತ್ತಿದ್ದರು. ಇಲ್ಲಿ ವಿಧುರರಿಗೂ ವಿವಾಹವಾಗುತ್ತಿತ್ತು. ಕೃಷಿ ಕೆಲಸಕ್ಕೆ ಮೂಲದಾಳುಗಳು ಮುಖ್ಯ. ವಿವಾಹವಾಗಿ ಗುತ್ತಿನ ಮನೆಗೆ ಬಂದಾಗ ಪತ್ನಿಯನ್ನೂ ಮೂಲದಾಳಾಗಿ ಸೇರಿಸುವ ಪದ್ಧತಿ ಇತ್ತು.

"ಸ್ವತಃ ಗುತ್ತಿನ ಯಜಮಾನಿ ಶಾಂತಕ್ಕೆ ಹೆಗ್ಗಡ್ತಿಯೇ ಮುಂದೆ ಬಂದು ಒಂದು ತಂಬಿಗೆ ನೀರನ್ನು ನವದಂಪತಿಗಳ ತಲೆಗೆ ಸುರುವಿ 'ನಿನ್ನ ಪತ್ನಿ ಇನ್ನು ಮುಂದೆ ನಿನ್ನ ಹಾಗೆ ಈ ಮನೆಯ ಮೂಲದಾಳು' ಎಂದು('ಮೂಲೊಗು ನೀರು ಮಯಿಪ್ಪುನೆ' ಎನ್ನುವ ಜಾನಪದ ಪದ್ಧತಿ) ಫಿಲ್ಲುವನ್ನು ತಮ್ಮ ಗುತ್ತಿನ 'ಕುಟುಂಬ'ದೊಳಗೆ ಸೇರಿಸಿಕೊಂಡಿದ್ದರು."(ಉಲ್ಲಂಘನೆ, ಪುಟ ೧೦)

ಅಂಬಕ್ಕೆಯ ವಿವಾಹ

'ಉಲ್ಲಂಘನೆ'ಯಲ್ಲಿ ಅಂಬಕ್ಕೆಯ ವಿವಾಹದ ಪ್ರಸ್ತಾಪವಿದೆ. ಎತ್ತಿನ ಗಾಡಿಯಲ್ಲಿ ದಿಬ್ಬಣ ಹೊರಡುತ್ತದೆ. ಮದುಮಗಳನ್ನು ಮಂಚಿಲ್‌ನಲ್ಲಿ ಹೊತ್ತುಕೊಂಡು ಸಾಗಿದರು. ಧಾರೆಯ ಮಂಟಪವನ್ನು ಮಡಿವಾಳ್ತಿಯರು ಹಿಂದಿನ ದಿನವೇ ಸಿಂಗರಿಸಿದ್ದರು. ವಧುವರರ ಕಡೆಯವರು ಪರಸ್ಪರ ತಾಂಬೂಲ ವಿನಿಮಯ ಮಾಡಿಕೊಂಡರು. ಹಸೆಮಣೆಯಲ್ಲಿ ಕೂರಿಸಿ ಧಾರೆ ಎರೆದು ಕೊಟ್ಟರು. ಗಂಡು ತಾಳಿ ಕಟ್ಟುವ ಕಾರ್ಯಕ್ರಮವೂ ನಡೆಯಿತು. ಹೆಣ್ಣನ್ನು ಗಂಡಿನ ಮನೆಗೆ ಒಪ್ಪಿಸುವ ಕಾರ್ಯಕ್ರಮ ನಡೆಯಿತು. ವಿವಾಹದ ನಂತರ ಹೆಣ್ಣುಮಕ್ಕಳು ಅಂಬಕ್ಕೆಯನ್ನು ಅಡಿಗೆ ಕೋಣೆಗೆ ಕರೆದುಕೊಂಡು ಹೋಗಿ ಪಾತ್ರೆಗಳನ್ನು ಮುಟ್ಟಿಸಿದರು. ಅಡಿಗೆ ಮನೆಯ ಜವಾಬ್ದಾರಿ ಮದುವೆಯಾದ ಹೆಣ್ಣಿನದು ಎಂಬುದನ್ನು ಇದು ಸೂಚಿಸುತ್ತದೆ.

೪. ಮರಣ

'ಕುಡಿಯರ ಕೂಸು', 'ಗಾಂಧಿ ಬಂದ', 'ಉಲ್ಲಂಘನೆ' ಮೊದಲಾದ ಕಾದಂಬರಿಗಳಲ್ಲಿ ಸಾವಿನ ಆಚರಣೆಗಳ ವಿವರವಿದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ದಾರುವಿನ ತಾಯಿಯ ಮರಣದ ಸಂದರ್ಭದಸವಿಸ್ತಾರ ವಿವರವಿದೆ. ವಿವಿಧ ಸಮುದಾಯದವರು ಸೇರಿ ಆಚರಿಸುವ ವಿಧಿವಿಧಾನಗಳು ಇಲ್ಲಿನ ಸಾಮರಸ್ಯದ ಜೀವನ ಚಿತ್ರಣ ನೀಡುತ್ತವೆ. ಗುತ್ತಿನ ಅಧಿಕಾರದಲ್ಲಿ ಊರಿನ ಎಲ್ಲರೂ ಸೇರಿ ಮಾಡುವ ವಿಧಿವಿಧಾನಗಳು ಎಲ್ಲರೂ ಒಂದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಕೊರಗರ ಡೋಲಿನ ಶಬ್ದದಿಂದ ಎಲ್ಲರಿಗೂ ಸಾವಿನ ಸುದ್ದಿ ತಿಳಿಯುತ್ತದೆ. ಶವದ ಅಂತಿಮ ದರ್ಶನ ಪಡೆದ ನಂತರ ಹೆಣ ಮೀಯಿಸುವ, ಚಟ್ಟ ಕಟ್ಟುವ ಕೆಲಸಗಳು ನಡೆಯುತ್ತವೆ.

ಶೆಟ್ಟರ ಬೆಟ್ಟುಗದ್ದೆಯಲ್ಲಿ ಅಂತ್ಯಸಂಸ್ಕಾರ ನಡೆಯಿತು. ಕೊನೆಗೆ ದುಃಖದ ಗಂಜಿ ಉಂಡು ಸಾವಿನ ಐದನೇ ದಿನಕ್ಕೆ ಬೂದ್ಯೊಪ್ಪದ ಆಚರಣೆ ನಡೆಸಲಾಯಿತು.

'ಉಲ್ಲಂಘನೆ'ಯಲ್ಲಿ ಗುತ್ತಿನಾರ್ ವೆಂಕಪ್ಪನ ಸಾವಿನ ಚಿತ್ರಣವಿದೆ. ಸಾಂಕೇತಿಕವಾಗಿ ಕ್ಷೌರಿಕ ಮೃತದೇಹದ ಉಗುರುಗಳನ್ನು ಕತ್ತರಿಸುವ ಸಂಪ್ರದಾಯವಿದೆ. ಶವಕ್ಕೆ ಸ್ನಾನ ಮಾಡಿಸಿದ ನಂತರ ತುಳಸಿ ನೀರು ಬಿಡುವ ಕಾರ್ಯಕ್ರಮ ನಡೆಯುತ್ತದೆ. ಕೊರಗರು ಸಾವಿನ ಡೋಲು ಬಾರಿಸುವ ಕ್ರಿಯೆ ನಡೆಯುತ್ತದೆ. ಇದು ವಿಶಿಷ್ಟ ತಾಳವನ್ನು ಹೊಂದಿದೆ. 'ಸಾವಿನ ಡೋಲು' ಅಜಲಿನ ಕೊರಗರು ಬಾರಿಸಲು ಆರಂಭಿಸಿದರು. ಗ್ರಾಮ ಆಡಳಿತದಲ್ಲಿ ಶ್ರಮವಿಭಜನೆ ಗುರುತಿಸಲು ಸಾಧ್ಯವಿದೆ. ಅನಂತರ ಹೆಗ್ಗಡೆಯವರ ಮೃತದೇಹಕ್ಕೆ ಬೆಂಕಿ ಕೊಡುವ ವಿಧಿವಿಧಾನಗಳು ಜರುಗಿದವು.

'ಕೊಟ್ಟ' ಕಾದಂಬರಿಯಲ್ಲಿ ಕೊರಗರ ಸಾವಿನ ವಿವರಗಳಿವೆ. ಕೊರಗರಲ್ಲಿ ಸಾವು ಸಂಭವಿಸಿದ ಮನೆಯವರು ಮತ್ತೆ ಆ ಗುಡಿಸಲಿನಲ್ಲಿ ವಾಸಮಾಡುವಂತಿಲ್ಲ. ಹೊಸ ಗುಡಿಸಲು ಕಟ್ಟುವ ನಿಯಮವಿದೆ. ತೀರಿಕೊಂಡ ಕೊಡ್ತಾಯಿ ತುಕ್ರನ ಹೆಣವನ್ನು ದಕ್ಷಿಣಕ್ಕೆ ಮುಖ ಮಾಡಿ ಮಲಗಿಸಲಾಯಿತು. ಮಾರನೆ ದಿನ ಎಡೆ ಬಿಡುವ ಕ್ರಮವು ಇದೆ. ಹದಿಮೂರು ದಿನಗಳ ಸೂತಕ. ಹದಿಮೂರನೆಯ ದಿನ ಹಿರಿಯ ಕುಲೆಗಳ ಜೊತೆ ಸೇರಿಸುವ ವಿಧಾನವನ್ನು ಅನುಸರಿಸಲಾಗುವುದು. ಅನ್ನ, ಮೀನು ಜೊತೆಗೆ ಹೆಂಡವನ್ನು ಆ ದಿನ ನೀಡಲಾಗುತ್ತದೆ. ಬೊಜ್ಜದ ದಿನ ಬೊಜ್ಜದ ಟಕ್ಕು ನುಡಿಸುವ ಕ್ರಮವಿದೆ. ಕುಡಿಯರ ಕೂಸು ಕೆಂಚನ ಸಾವಿನ ಚಿತ್ರ, ತೆಂಬರೆಯಲ್ಲಿ ಸಾವಿನ ಚಿತ್ರಣವಿದೆ.

ಜಮೀನ್ದಾರಿ ಪದ್ಧತಿಯಲ್ಲಿ ಮರಣದ ವಿಧಿಗಳು

ಜಮೀನ್ದಾರಿ ಪದ್ಧತಿಯಲ್ಲಿ ಗುತ್ತು ತನ್ನದೇ ಆದ ವಿಶಿಷ್ಟ ಆಚರಣೆಗಳನ್ನು ಹೊಂದಿದ್ದು, ಮರಣ ಸಮಯದಲ್ಲೂ ಕೆಲವೊಂದು ಬಗೆಯ ನಿಯಮಗಳಿದ್ದವು. ಮರಣದ ಸಂದರ್ಭದಲ್ಲಿ ಗುತ್ತು ಮನೆ ಹಾಗೂ ಒಕ್ಕಲು ಮಕ್ಕಳ ನಡುವೆ ಇರುವ ಆತ್ಮೀಯ ಸಂಬಂಧವನ್ನು ಸೂತಕದ ಅಚರಣೆಯಲ್ಲಿ ಮನಗಾಣಬಹುದು.

'ಗುತ್ತಿನ ಮನೆಯಲ್ಲಿ ಯಾರಾದರೂ ಸತ್ತರೆ ಮೂಲದಾಳುಗಳ ಮನೆಯಲ್ಲಿ ಹದಿನಾರು ದಿನಗಳ ಸೂತಕ ಆಚರಣೆ ಇರುತ್ತಿತ್ತು. ಮೂಲದಾಳುಗಳ ಮನೆಯಲ್ಲಿ ಯಾರು ಸತ್ತರೂ ಅಷ್ಟೇ, ಗುತ್ತಿನ ಮನೆಗೂ ಸೂತಕದ ಬಾಧೆ ತಟ್ಟುತ್ತಿತ್ತು.'(ಉಲ್ಲಂಘನೆ, ಮಟ ೧೦)

೩.೩. ತುಳುನಾಡಿನ ಕುಣಿತಗಳು

ತುಳುನಾಡಿನಲ್ಲಿ ಮೂಲನಿವಾಸಿಗಳು ಕೈಗೊಳ್ಳುವ ಕುಣಿತಗಳು ಮುಖ್ಯವಾದವು. ತಳಸಮುದಾಯದವರು ಈ ಕುಣಿತಗಳನ್ನು ಕೈಗೊಳ್ಳುವುದು ರೂಢಿ. ಅವೈದಿಕರಲ್ಲಿ ಮೇಲ್ವರ್ಗದವರಾದ ಬಂಟ ಸಮುದಾಯದವರು ಇದಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ತಳಸಮುದಾಯದವರಿಗೆ ಈ ಕುಣಿತಗಳು ಆದಾಯದ ಮೂಲವಾಗಿದ್ದವು. ಮನರಂಜನೆ ಹಾಗೂ ಆರ್ಥಿಕತೆ ಎರಡೂ ಇವುಗಳಿಂದ ಸಾಧ್ಯವಾಗಿದೆ. 'ಗಾಂಧಿ ಬಂದ' ಕಾದಂಬರಿಯಲ್ಲಿ ಕುಣಿತಗಳ

ರೂಪು ರೇಷೆಗಳ ವಿವರವಿದೆ. ಪ್ರಭಾಕರ ನೀರ್‌ಮಾರ್ಗರ 'ಮಾದಿರ' ಕಾದಂಬರಿಯಲ್ಲಿ ಮಾದಿರ ಕುಣಿತದ ವಿವರಗಳಿವೆ.

ಮಾದಿರ ಕುಣಿತ

ತುಳು ಜನಪದ ಕುಣಿತಗಳಲ್ಲಿ ಮಾದಿರ ಕುಣಿತ ಕೂಡ ಮುಖ್ಯವಾದುದು. ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು ಇದನ್ನು ಕುಟುಂಬ ಸಂಬಂಧೀ ಕುಣಿತ ಎಂದು ವರ್ಗೀಕರಿಸುತ್ತಾರೆ.

'ನಲಿಕೆಯವರು ಅಥವಾ ಪಾಣಾರರು ಕಾರ್ಕಳ ಪ್ರದೇಶದಲ್ಲಿ ನಡೆಸುವ ಮಾಯಿದ ಪುರುಷೆರ್, ಇತರ ಕಡೆಗಳಲ್ಲಿ ನಡೆಸುವ ಮಾದಿರ, ಸೋಣದ ಮದಿಮಲ್, ಕೀಲು ಕುದುರೆ ಕುಣಿತವು ಕೂಡಾ ಕುಟುಂಬ ಸಂಬಂಧೀ ಕುಣಿತಗಳು.'[೩೩]

'ತುಳು ಜನಪದ ಸಾಹಿತ್ಯದ ಕುಣಿತದ ಹಾಡುಗಳು ಪ್ರಧಾನವಾಗಿ ಇಲ್ಲಿ ಮೂಲನಿವಾಸಿಗಳು ಎನ್ನಿಸಿಕೊಂಡಿರುವ ಹರಿಜನರ ಬೇರೆ ಬೇರೆ ವರ್ಗಗಳಿಗೆ ಸಂಬಂಧಿಸಿದವುಗಳು. ಇವರಲ್ಲಿ ನಲಿಕೆಯವರು ಎಂಬ ಪಂಗಡದವರು ಇದ್ದಾರೆ. ಹೆಸರೇ ಸೂಚಿಸುವಂತೆ ನಲಿಕೆ(=ಕುಣಿತ)ಯೇ ಕಸುವಾಗಿ ಉಳ್ಳವರು ನಲಿಕೆಯವರು... ನಲಿಕೆಯವರ ಹೆಣ್ಣುಗಳು ಮನೆಮನೆಗೆ ಬಂದು ಕುಣಿದು ಹಾಡಿ, ಮನೆಯವರು ಕೊಟ್ಟ ವಸ್ತು, ಹಣ-ಇವುಗಳಿಂದ ಸಂತೃಪ್ತರಾಗುತ್ತಿದ್ದರು. ಇಂದು ಇಂತಹ ಕುಣಿತ ಮತ್ತು ಅದಕ್ಕೆ ಸಂಬಂಧಿಸಿದ ಹಾಡುಗಳು ಕಾಣಸಿಗುವುದು ಬಹಳ ಅಪೂರ್ವ.'[೩೪]

"ಇಲ್ಲಿ 'ಮಾದಿರ' ಎಂಬ ಶಬ್ದದ ಅರ್ಥವನ್ನು ಮೊದಲು ವಿವೇಚಿಸಬಹುದು. ನಲಿಕೆಯ ಹೆಣ್ಣು ತನ್ನ ಒಂದು ಚಿಕ್ಕ ಹುಡುಗಿಯನ್ನು ಮಾದಿರ ಎಂದು ಸಿಂಗಾರ ಮಾಡಿ ಮನೆಮನೆಗೆ ಕೊಂಡು ಹೋಗುತ್ತಾಳೆ. ಅಲ್ಲಿ ಮನೆಮನೆಗಳಲ್ಲಿ ಸಿಕ್ಕಿದ ಅಕ್ಕಿ, ಭತ್ತ, ತೆಂಗಿನಕಾಯಿ ಮುಂತಾದವನ್ನು ತೆಗೆದುಕೊಂಡು ಊರೂರು ತಿರುಗುತ್ತಾರೆ.ಈ ರೀತಿ ನಲ್ಕೆಯವರ ಹೆಂಗಸರು ಮಾಡಿ ಕುಣಿಯುವ ಜನಪದ ಕಲೆಗೆ 'ಮಾದಿರ' ಎನ್ನುತ್ತಾರೆ. ಈ 'ಮಾದಿರ' ಎನ್ನುವ ಶಬ್ದ 'ಮಾದಿಗ ಹೆಣ್ಣು' ಅಥವಾ 'ಹೊಲೆಯ ಹೆಣ್ಣು' ಎನ್ನುವ ಅರ್ಥದಲ್ಲಿ ಬಳಕೆಯಾಗಿರಬಹುದು. ಮಾತೃ ಎನ್ನುವುದರಿಂದ ಮಾದಿರ ಬಂದಿರಬಹುದು ಎನ್ನುವುದಾದರೆ ಈ ಶಬ್ದದ ಮೂಲಾರ್ಥ 'ತಾಯಿ' ಎಂದಾಗುತ್ತದೆ. ಮಾದಿರ ಪದದ ಮೇಲಿನ ಎರಡೂ ಪಾಠಾಂತರಗಳನ್ನು ಅಧ್ಯಯನ ಮಾಡಿದಾಗ, ಇಲ್ಲಿ ವಸ್ತು ವಿಶಿಷ್ಟವಾಗಿ ಏನೂ ಇಲ್ಲ. 'ಮಾದಿರ' ಎನ್ನುವ ಹೆಣ್ಣು ಚೆಲುವೆ. ಅವಳು ಸುಂದರವಾದ ಚೆನ್ನನನ್ನು ಮದುವೆಯಾಗುತ್ತಾಳೆಯೇ? ಮದುವೆಯ ವೇಳೆ ಕಂಚಿನ ಸಟ್ಟುಗದಲ್ಲಿ ಅವನಿಗೆ ಬಡಿಸುತ್ತಾಳೆಯೇ ಎನ್ನುವ ಮಾತುಗಳಲ್ಲಿ ಮಾದಿರ ಹೆಣ್ಣಿನ ಮದುವೆಯ ಪ್ರಸ್ತಾಪವಿದೆ."[೩೫]

ಮಾದಿರ ಎಂಬವಳು ಬಲು ಚೆಲುವೆ–ಮಾದಿರ
ಬೊಳ್ಳೆರಿ ಚೆನ್ನನನ್ನು ಮದುವೆಯಾಗುವೆಯಾ ಮಾದಿರ?

ಕಂಚಿನ ಸಟ್ಟುಗದಲ್ಲಿ ಬಡಿಸಬೇಕೆಂದಿರುವೆಯಾ ಮಾದಿರ?
ನನ್ನನ್ನು ಕೊಂಡೊಯ್ಯುವ ಚೆನ್ನೆಯರ ಮಗ ಯಾರಷ್ಟು ಎತ್ತರ
ಇದ್ದಾನೆ?
ಅವನಷ್ಟು, ಇವನಷ್ಟು, ಸೊಪ್ಪಿನ ಗೂಟದಷ್ಟೆ
ಸೊಪ್ಪು ಇಳಿಸುವ ಗೂಟದಷ್ಟೆ, ಅಕ್ಕಿ ಅಳೆಯುವ ಸೇರಿನಷ್ಟೆ,
ಒಯ್ಯುವವನಾದರೆ ಒಯ್ಯಲಿ, ಈ ಹೊತ್ತೇ ಒಯ್ಯಲಿ.[೩೬]

'ಮಾದಿರೊ' ಎಂದರೆ ತುಳುವಿನಲ್ಲಿ ಸುಂದರಿ, ಚೆಲುವೆ ಎಂಬರ್ಥವಿದೆ. ಹಾಗಾಗಿ ಈ ಮಾದಿರೊ ನಲಿಕೆ ಹೆಣ್ಣೊಬ್ಬಳ ಬದುಕಿನ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ ಗೀತ ಗಾಯನ ನೃತ್ಯವಾಗಿದೆ. ಪ್ರಾಚೀನ ಕಾಲದಲ್ಲಿ ನಲ್ಕೆ ಯಾನೇ ಅಜಿಲ ಪಾಣಾರ ಜನಾಂಗದ ಮಹಿಳೆಯರು ಮಾದಿರ ಕುಣಿತವನ್ನು ಬೇಸಿಗೆ ಕಾಲದಲ್ಲಿ ಮನೆಮನೆಗೆ ಹೋಗಿ ನಡೆಸುತ್ತಿದ್ದರು. ಈ ಮಾದಿರ ನಲಿಕೆ ತಂಡದಲ್ಲಿ ಇಂತಿಷ್ಟೇ ಜನರಿರಬೇಕೆಂಬ ನಿಯಮವಿಲ್ಲ. ತಂಡದಲ್ಲಿ ಒಬ್ಬಾಕೆ ಮುಖಕ್ಕೆ ಬಿಳಿ ಅಥವಾ ಹಳದಿ ಬಣ್ಣ ಹಚ್ಚಿ, ಹಣೆಗೆ ಕೆಂಪು ಬೊಟ್ಟು, ಕಣ್ಣಿಗೆ ಕಾಡಿಗೆ, ಗಲ್ಲಕ್ಕೆ ಚುಕ್ಕಿಯನ್ನಿಟ್ಟು ತುಟಿಗೆ ಕೆಂಪು ಬಣ್ಣವನ್ನು ಹಚ್ಚಿಕೊಂಡು ತಲೆ ಬಾಚಿ ತಲೆ ಕೂದಲು ಉದ್ದ ಕಾಣಲು 'ಉದುರಿ' ಎಂಬ ಕೃತಕ ತಲೆಗೂದಲನ್ನು ನೆಯ್ದು ಇಳಿಬಿಟ್ಟಿರುತ್ತಾರೆ. ಸೀರೆಯನ್ನು ಸೊಂಟದ ಮುಂಭಾಗದಲ್ಲಿ ನೆರಿಗೆ ಬೀಳುವಂತೆ (ಭರತನಾಟ್ಯದವರು ಉಡುವ ಸೀರೆಯ ಮುಂಭಾಗ ನೆರಿಗೆ ಇರುವಂತೆ) ಉಟ್ಟು ರವಿಕೆ ತೊಟ್ಟು, ಕೈಬಳೆ, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾಳೆ. ಇವಳು ಸುಂದರಿಯಾದ ಮಾದಿರೊ ಆಗಿರುತ್ತಾಳೆ. ಈ ತಂಡದ ಉಳಿದವರೂ ಸಹಾ ಸೀರೆಯನ್ನು ಅದೇ ರೀತಿ ಉಟ್ಟುಕೊಂಡಿರುತ್ತಾದರೂ 'ಮಾದಿರೊ'ನಷ್ಟು ಅಲಂಕಾರಗೊಂಡಿರುವುದಿಲ್ಲ. ಅತ್ಯಂತ ಪ್ರಾಚೀನ ಕಾಲದಲ್ಲಿ ನಲ್ಕೆ ಯಾನೆ ಅಜಿಲ (ಪಾಣಾರ) ಜನಾಂಗದ ಮಹಿಳೆಯರ ಇಂತಹ ಕುಣಿತಗಳು ತುಳುನಾಡಿನೆಲ್ಲೆಡೆ ಪ್ರಭಾವಿತವಾಗಿತ್ತು. ಆಗಿನ ಮಾದಿರೊ ನಲಿಕೆ ತಂಡದ ಮಹಿಳೆಯರ ವೇಷಭೂಷಣವೂ ತೀರಾ ಭಿನ್ನವಾಗಿತ್ತು. ಆಗ ರವಿಕೆ ಧರಿಸದೇ ಇರುತ್ತಿದ್ದ ಮಹಿಳೆಯರು ಸೀರೆಯನ್ನು ಸೊಂಟದ ಮುಂಭಾಗ ನೆರಿಗೆ ಹಾಕಿ (ಇದನ್ನು ಕತ್ತರಿ ನೆರಿಗೆ ಎನ್ನುತ್ತಿದ್ದರು) ಅದೇ ರೀತಿ ಸೀರೆಯನ್ನು ಸೆರಗನ್ನಾಗಿಸಿಕೊಳ್ಳುತ್ತಿದ್ದರು. ಇದನ್ನು ಗೇಂಟಿ ಹಾಕುವುದು ಎಂದು ಕರೆಯಲಾಗುತ್ತಿತ್ತು.[೩೭] ಮಾದಿರ ಕುಣಿತದ ವಿವರಗಳು 'ಗಾಂಧಿ ಬಂದ', 'ಉಲ್ಲಂಘನೆ', 'ಮಾದಿರ' ಕಾದಂಬರಿಗಳಲ್ಲಿ ಲಭ್ಯವಾಗುತ್ತವೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಮಾದಿರ ಕುಣಿತ ಗುತ್ತಿನ ಮನೆಯಲ್ಲಿ ನಲಿಯುವುದು ಕಂಡುಬರುತ್ತದೆ. ಕಾರ್ಕಳದ ನಲಿಕೆಯವರು ದುಗ್ಗುವಿನ ಮುಖಂಡತ್ವದಲ್ಲಿ ಬಂದು ಮಾದಿರ ಕುಣಿತ ನಡೆಸುತ್ತಾರೆ. ಮೂವರ ತಂಡದಲ್ಲಿ ಇಬ್ಬರು ಹೆಂಗಸರು. ಒಬ್ಬ ಹೆಂಗಸರ ವೇಷ ಧರಿಸಿದ ಗಂಡು. ಒಬ್ಬ ತೆಂಬರೆ ಬಡಿಯುವವ. ತೆಂಬರೆ ಬಡಿಯುವಾತ ಹೇಳುವ ವ್ಯಂಗ್ಯೋಕ್ತಿ, ಹಾಸ್ಯ, ನೀತಿ ತುಂಬಿದ ಹಾಡುಗಳನ್ನು ಹೆಂಗಸರು ಪುನರುಚ್ಚರಿಸುತ್ತಾ ಮನದಣಿಯೆ ಕುಣಿಯುತ್ತಾರೆ. ನಂತರ ಒಬ್ಬಾಕೆ ಗೆರಸೆಯಿಂದ ಭತ್ತ ಚೆಲ್ಲದಂತೆ ಗೆರಸೆಯನ್ನು ಅಡಿಮೇಲು ಮಾಡಿ ಸುಮಾರು ಸಾರಿ ಹಿಡಿದಳು. ಒಂದೂ ಅಕ್ಕಿಕಾಳು ಚೆಲ್ಲದಂತೆ ಆಕೆ ಹಾಡಿದುದು ಪಳಗಿದ ಕೈಗಳನ್ನು

ಸೂಚಿಸುತ್ತದೆ. ಹತ್ತು ಸೇರು ಭತ್ತ, ನಾಲ್ಕು ತೆಂಗಿನಕಾಯಿ, ಎರಡು ಸೇರು ಅವಲಕ್ಕಿ ಗುತ್ತಿನ ಮನೆಯಿಂದ ತಂಡಕ್ಕೆ ಲಭಿಸಿತು.

ಆಟಿ ಕಳೆಂಜ

'ತುಳುನಾಡಿನ ನಲ್ಕೆ ಯಾನೇ ಅಜಿಲ(ಪಾಣಾರ) ಜನಾಂಗದವರ ಅತ್ಯಂತ ಪ್ರಾಚೀನ ದೈವಾರಾಧನೆಯ ಪ್ರಮುಖ ದೈವವೆಂದರೆ 'ಆಟಿಕಳೆಂಜೆ'. 'ಕಳೆಂಜೆ' ಎಂದರೆ ಊರಿನ ಮಾರಿ, ಕಷ್ಟ ಕಾರ್ಪಣ್ಯಗಳನ್ನು ಕಳೆಯುವ ಮಹಮ್ಮಾಯಿ ದೇವತೆಯ ದೂತ ಎಂದರ್ಥ. ತುಳುವಿನಲ್ಲಿ 'ಕಳೆ' ಎಂದರೆ ಮಾರಿ ಕಳೆಯುವುದು ಇಲ್ಲವೆ ತೆಗೆಯುವುದು ಎಂಬ ಅರ್ಥವಿದ್ದು, 'ಜೆ' ಎಂದರೆ ಜೇವತೆ ಎಂದರ್ಥ. ತುಳುವಿನಲ್ಲಿ ಜೇವತೆ ಎಂದರೆ ದೇವತೆ ಎಂದಾಗಿದೆ.'[೩೮]

ಆಟಿಕಳಂಜದ ಚಿತ್ರಣ 'ಗಾಂಧಿ ಬಂದ' ಕಾದಂಬರಿಯಲ್ಲಿದೆ. ಆಟಿ ತಿಂಗಳಿನ ವಿಪರೀತ ಮಳೆಯಲ್ಲಿ ತುಳುನಾಡಿನ ಜನ ಹೊಟ್ಟೆಗಿಲ್ಲದೆ ಕಂಗಾಲಾಗುತ್ತಿದ್ದರು. ರೋಗಗಳಿಗೆ ಈಡಾಗುವುದು ಇದೆ. ರೋಗ ನಿವಾರಣೆಗೆ ಆಟಿ ಮದ್ದನ್ನು ಆಟಿ ಅಮಾವಾಸ್ಯೆಯಂದು ಕುಡಿದು ರೋಗ ನಿವಾರಿಸುವುದು ಇದ್ದೇ ಇದೆ. ಊರಿನ ಮಾರಿ, ಅನಿಷ್ಟಗಳನ್ನು ಕಳೆಯುವ ಆಟಿಕಳಂಜ ಹೆಬ್ಬಾರರ ಮನೆಗೆ ಆಗಮಿಸುತ್ತಾನೆ. 'ಆಟಿ ಕಳೆಂಜೆನೋ ಮಗೆ ಮಾರಿ ಕಳೆಯನೋ... ' ಎಂಬ ಹಾಡು ತೆಂಬರೆ ಬಡಿತದೊಂದಿಗೆ ಕೇಳಿಸುತ್ತದೆ. ಆಟಿಕಳೆಂಜದ ವೇಷಧಾರಿ ಸುಮಾರು ಹನ್ನೊಂದರ ಹರೆಯದವನು. ಆತನಿಗೆ ಜೊತೆ ನೀಡಲು ಒಬ್ಬ ತೆಂಬರೆ ಬಡಿಯುವವನು. ವಿಶೇಷವಾಗಿ ಅಲಂಕರಿಸಿದ ಆಟಿಕಳೆಂಜನು ತೆಂಬರೆ ಬಡಿತಕ್ಕೆ ಸರಿಯಾಗಿ ಕುಣಿಯುವನು. ಆತನ ವಿಶೇಷ ಅಲಂಕಾರವನ್ನು ಕಾದಂಬರಿ ಬಿಡಿಬಿಡಿಯಾಗಿ ವರ್ಣಿಸುತ್ತದೆ. ಹೆಬ್ಬಾರರ ಮಾತಿನಂತೆ ದ್ರೌಪದಿ ಎರಡು ಸೇರು ಭತ್ತ, ಎರಡು ತೆಂಗಿನ ಕಾಯಿ, ಒಂದು ಮುಷ್ಟಿ ಹುಳಿ, ಅರ್ಧ ಸೇರು ಹೆಸರುಕಾಳು, ಎರಡು ಸೌತೆಕಾಯಿ ಆಟಿಕಳೆಂಜನ ಜೋಳಿಗೆಗೆ ಸುರಿದಳು. ಮಳೆಗಾಲದಲ್ಲಿ ಆಟಿಕಳೆಂಜನ ಬರುವಿಕೆ ಸಾಮಾನ್ಯ. ಆತ ಊರಿನ ಮಾರಿ ಕಳೆಯುತ್ತಾನೆಂಬ ನಂಬಿಕೆ.

ಮಾಯಿದೆ ಪುರುಷೆ ಕುಣಿತ

"ತುಳುವಿನ 'ಮಾಯಿ' ಎಂದರೆ ಮಾರ್ಚ್ ತಿಂಗಳು ಎಂದರ್ಥ. ಈ ವೇಳೆ ಹುಣ್ಣಿಮೆಯಿಂದ ಸಂಕ್ರಾಂತಿಯವರೆಗೆ ಮೂಡುಬಿದಿರೆ ಕಾರ್ಕಳ ಪ್ರದೇಶಗಳಲ್ಲಿ ನಲ್ಕೆ ಯಾನೆ ಅಜಿಲ (ಪಾಣಾರ) ಜನಾಂಗದವರು ಮಾಯಿದೆ ಪುರುಷೆ ನಲಿಕೆಯನ್ನು ರಾತ್ರಿ ಹೊತ್ತು ನಡೆಸುತ್ತಾರೆ. ಈ ಕುಣಿತಕ್ಕೆ ಇಂತಿಷ್ಟೇ ಜನರಿರಬೇಕೆಂಬ ನಿಯಮವಿಲ್ಲ. ಆದರೆ ಬೆಸ ಸಂಖ್ಯೆ ಬರುವಷ್ಟು ವೇಷಧಾರಿಗಳಿರಬೇಕಾಗಿರುವುದು ಕಡ್ಡಾಯ. ಇದರಲ್ಲಿನ ಹಾಡು ಕೂಡ ಸಂಧಿಯಾಗಿರುತ್ತದೆ. ಗಂಡಸರೇ ಇರುವ ಈ ತಂಡದಲ್ಲಿ ಒಬ್ಬ ರಾಜಕುಮಾರನ ವೇಷ ಧರಿಸಿದರೆ, ಇನ್ನೊಬ್ಬ ಯುವತಿಯ ವೇಷವನ್ನೂ, ಇನ್ನೊಬ್ಬ ಅಜ್ಜಿಯ ವೇಷವನ್ನೂ ಧರಿಸಿ, ಇನ್ನುಳಿದವರು ಬಿಳಿ ಬಟ್ಟೆಯ ಕಚ್ಚೆ ಹಾಕಿ ತಲೆಗೆ ಮುಂಡಾಸು ಕಟ್ಟಿಕೊಂಡು ಬರಿಮೈಗೆ ನಾಮ ಬಳಿದುಕೊಂಡಿರುತ್ತಾರೆ. ರಾಜಕುಮಾರನ ವೇಷಧಾರಿ ರಾಜಕುಮಾರನಂತೆ ಕಚ್ಚೆ, ಅಂಗಿ, ಕಿರೀಟ

ಧರಿಸಿ ಮುಖಕ್ಕೆ ಸಪೇತ (ಬಿಳಿ) ಬಣ್ಣ ಹಚ್ಚಿ ಹಣೆಗೆ ಅಡ್ಡ ಕೆಂಪು ನಾಮದ ಮಧ್ಯೆ ಬೊಟ್ಟುಗಳನ್ನು ಮತ್ತು ಮೀಸೆಯನ್ನು ಇಟ್ಟು ಹುಬ್ಬಿಗೆ ಕಾಡಿಗೆ ಹಾಕಿರುತ್ತಾನೆ."

ಮಾಯಿದೆ ಪುರುಷೆ ಕುಣಿತವು 'ಗಾಂಧಿ ಬಂದ' ಕಾದಂಬರಿಯಲ್ಲಿ ವಿವರಿಸಲ್ಪಟ್ಟಿದೆ. ಭೂತ ಕಟ್ಟುವ ನಲ್ಕೆ ಜಾತಿಯವರು ಮಾಯಿಯ ಹುಣ್ಣಿಮೆಯಂದು ಕೆಲವು ರಾತ್ರಿಗಳ ಕಾಲ ಒಂಬತ್ತು ಮಂದಿಯ ತಂಡ ಈ ಕುಣಿತವನ್ನು ಕುಣಿಯುತ್ತಾರೆ. ಏಳು ಮಂದಿ ಪುರುಷ ವೇಷಧಾರಿಗಳು, ಒಂದು ಹುಡುಗಿ ಹಾಗೂ ಒಬ್ಬ ಅಜ್ಜಿಯ ವೇಷಧಾರಿಗಳ ತಂಡ ಈ ಕುಣಿತದಲ್ಲಿದೆ. ಮಾಯಿದೆ ಪುರುಷೆ ಕುಣಿತದ ಕತೆಯನ್ನು ಕಾದಂಬರಿ ವಿವರಿಸಿದೆ. "ಈ ಏಳು ಮಂದಿ ಪುರುಷರಿಗೆ ಆಕೆ ಒಬ್ಬಳೇ ತಂಗಿ; ಬಹಳ ಪ್ರೀತಿಯ ತಂಗಿ. ಸಹೋದರರಿಗೆ ಅರಸನ ದಂಡಿಗೆ ಬರಬೇಕೆಂದು ಕರೆಬರುತ್ತದೆ. ತಂಗಿಯನ್ನು ತಮ್ಮ ಹೆಂಡಂದಿರ ಉಸ್ತುವಾರಿಗೆ ವಹಿಸಿ ಅಣ್ಣಂದಿರು ದಂಡಿಗೆ ಹೊರಡುತ್ತಾರೆ. ಗಂಡಂದಿರು ಮನೆಯಿಂದ ಹೊರಟೊಡನೆ ನಾದಿನಿಗೆ ದುಷ್ಟ ಅತ್ತಿಗೆಯಂದಿರು ವಿಪರೀತ ಕಷ್ಟ ಕೊಡುತ್ತಾರೆ... ಹಿಂಸಿಸುತ್ತಾರೆ. ಒಂದು ದಿನ ಅವರೆಲ್ಲರೂ ಆಕೆಯನ್ನು ಉಪಾಯದಿಂದ ಕಾಡಿಗಟ್ಟಿ, ಮರವೇರಿಸಿ ಮರಳಿ ಮನೆಗೆ ಬಂದು ಬಿಡುತ್ತಾರೆ. ನಾದಿನಿ ಮರದಲ್ಲಿಯೇ ಸುರಿಸಿದ ಕಣ್ಣೀರಿನಿಂದಲೇ ಒಂದು ಕೆರೆ ಹುಟ್ಟಿಕೊಳ್ಳುತ್ತದೆ. ಕಾಡಿನ ಹುಲಿಯೊಂದು ಆ ಕೆರೆಗೆ ನೀರು ಕುಡಿಯಲು ಬಂದಾಗ ಅದಕ್ಕೆ ಮರದ ಮೇಲಿಂದ ಅಳು ದನಿ ಕೇಳಿ, ಮರವೇರಿ ಹುಡುಗಿಯನ್ನು ಕೊಂದು ತಿನ್ನುತ್ತದೆ. ಆದರೆ ಹುಡುಗಿಯ ಕಿರುಬೆರಳೊಂದು ಹುಲಿಯ ಬಾಯಿಂದ ಜಾರಿ ಕೆಳಗೆ ಬಿದ್ದಿರುತ್ತದೆ. ಹಾಗೆ ದಾರಿಯಲ್ಲಿ ಬರುತ್ತಿದ್ದ ಅಜ್ಜಿಯೊಬ್ಬಳಿಗೆ ಆ ಬೆರಳು ಸಿಕ್ಕಿ, ಅದನ್ನಾಕೆ ಅರಸಿನದ ಕೊರಡೆಂದು ಭಾವಿಸಿ ಮನೆಗೆ ತಂದು ಹೊಸ ಮಡಿಕೆಯಲ್ಲಿ ಹಾಕಿಡುತ್ತಾಳೆ. ಆ ಕಿರುಬೆರಳಿಗೆ ನಿಧಾನಕ್ಕೆ ಜೀವ ಬಂದು ಅಜ್ಜಿ ಮನೆಯಲ್ಲಿ ಆಕೆ ಆ ಅಣ್ಣಂದಿರ ತಂಗಿಯಾಗಿ ಬೆಳೆಯುತ್ತಿರುತ್ತಾಳೆ. ಸೋದರರು ದಂಡಿನಿಂದ ಬಂದು ತಂಗಿಯನ್ನು ಕಾಣದೆ ದುಃಖಿತರಾಗುತ್ತಾರೆ. ಹೆಂಡಂದಿರನ್ನು ವಿಚಾರಿಸಿದರೆ 'ಉಮ್ಮ ಗೊತ್ತಿಲ್ಲ' ಎನ್ನುತ್ತಾರೆ. ಏಳು ಸೋದರರು ಏಳು ದಿಕ್ಕಿಗೆ ಹೋಗಿ ಶೋಕಿಸುತ್ತಾ ಹುಡುಕುತ್ತಿರುವಾಗ, ಒಬ್ಬ ಸೋದರನಿಗೆ ಆ ಅಜ್ಜಿಮನೆಯಲ್ಲಿ ಕಾಣಸಿಗುತ್ತಾಳೆ. ತಂಗಿ ಮತ್ತು ಅಜ್ಜಿಯಿಂದ ಸತ್ಯಸಂಗತಿ ತಿಳಿದುಕೊಂಡ ಅಣ್ಣಂದಿರು ತಂಗಿಗೆ ಈ ಪರಿಯಲ್ಲಿ ಹಿಂಸೆ ನೀಡಿದ ಪತ್ನಿಯನ್ನು ಮನೆ ಸಮೇತ ಜೀವಂತ ಸುಟ್ಟು ಭಸ್ಮ ಮಾಡುತ್ತಾರೆ. ತಾವು ಕದಿರೆಗೆ ಹೋಗಿ ತಂಗಿಯ ಜೊತೆಯಲ್ಲಿ ಮಾಯವಾಗುತ್ತಾರೆ." (ಗಾಂಧಿ ಬಂದ ಪುಟ, ೧೩೧-೧೩೨) ಕೊನೆಯಲ್ಲಿ ಹೆಬ್ಬಾರರ ಮನೆಯಿಂದ ಮಾಯಿದೆ ಪುರುಷ ಕುಣಿತಗಾರರಿಗೆ ಭತ್ತವನ್ನು ನೀಡಿದರು.

ಕಂಗೀಲು ಕುಣಿತ

ಕಂಗೀಲು ಕುಣಿತವು 'ಗಾಂಧಿ ಬಂದ' ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಮುಂಡಾಲರು ಮತ್ತು ಗೊಡ್ಡರು ಮಾಯಿಯ ಹುಣ್ಣಿಮೆಯಂದು ಕುಣಿಯುವ ಕುಣಿತವೇ ಕಂಗೀಲು ಕುಣಿತ. ತೆಂಗಿನ ಎಳೆತಿರಿ ಮತ್ತು ಬಿಳಿ ಬಟ್ಟೆಯನ್ನು ಕಂಗೀಲು ಕುಣಿಯುವವರು ಧರಿಸಿರುತ್ತಾರೆ. ಮಾರಿಯನ್ನು ಖುಷಿಪಡಿಸಿ ಊರಿಗೆ ತಟ್ಟಿದ ಅನಿಷ್ಟ, ರೋಗಗಳನ್ನು ದೂರ ಮಾಡುವುದಕ್ಕೆ ಕಂಗೀಲು ಕುಣಿಯುತ್ತಾರೆ. ಕುಣಿತದ ಮೊದಲು ಮಾರಿಗೆ ಪೂಜೆ ಸಲ್ಲಿಸಲಾಗುವುದು. ಊರವರು

ತಂದು ನೀಡಿದ ಹುಂಜಗಳನ್ನು ಮಾರಿಗೆ ಅರ್ಪಿಸಿ, ಮಾರಿಗೆ ಬಡಿಸುವರು. ನಂತರ ಮುಂಡಾಲರು ವೇಷ ಹಾಕಲು ಆರಂಭಿಸುವರು. ಪಂಚೆ ಉಟ್ಟು ಅಂಗಿ ಹಾಕಿ ಸೊಂಟಕ್ಕೆ ಮತ್ತು ಕುತ್ತಿಗೆಗೆ ತೆಂಗಿನ ತಿರಿಯನ್ನು ಸುತ್ತಿಕೊಳ್ಳುವರು. ಮುಂಡಾಸಿನ ಮೇಲೆ ತೆಂಗಿನ ತಿರಿಯನ್ನು ಸುತ್ತಿಕೊಳ್ಳುವರು. ಮುಕಾರಿ ಬಾಡ ಕೀಲುಕುದುರೆ ತಯಾರಿಸಿದ. ಕಂಗೀಲು ಹಾಡನ್ನು ಹಾಡುತ್ತಾ ಹೆಬ್ಬಾರರ ಮನೆಯತ್ತ ನಡೆದರು. ಹತ್ತು ಮಂದಿ ಕುಣಿತಗಾರರು ಚೆನ್ನಾಗಿ ಕುಣಿದರು. ಕೀಲು ಕುದುರೆ ವೇಷಧಾರಿ ಸಲ್ಲಿಸಿದ ಬೇಡಿಕೆಯ ಅರ್ಧಾಂಶಕ್ಕಿಂತಲೂ ಹೆಚ್ಚು ದ್ರೌಪದಿ ನೀಡಿದಳು. ಇದೇ ರೀತಿ ಬೇರೆ ಬೇರೆ ಮನೆಗಳಲ್ಲಿ ಆರು ದಿನ ಕುಣಿದು, ಕುಣಿತದ ಮುಕ್ತಾಯದ ರಾತ್ರಿ ಸಂಗ್ರಹಿಸಿದ ಧಾನ್ಯಗಳಿಂದ ರೊಟ್ಟಿಯನ್ನು ಬಡಿದು ಮಾರಿಗೆ ಬಡಿಸಿ ನಂತರ ವೇಷ ತೆಗೆಯುವರು.

ಮಾರ್ನೆಮಿ ವೇಷ

ತುಳುನಾಡಿನಲ್ಲಿ ಅಶ್ವಯುಜ ಮಾಸದಲ್ಲಿ ಮಹಾನವಮಿ ಆರಂಭವಾಗುತ್ತದೆ. ಮಾರ್ನೆಮಿ ಹರಕೆ ವೇಷಗಳನ್ನು ಹಾಕುವುದು ತುಳುನಾಡಿನಲ್ಲಿ ಮಾಮೂಲು. ಇಂಥಹ ಮಾರ್ನೆಮಿ ವೇಷದ ವಿವರಗಳು 'ಗಾಂಧಿ ಬಂದ' ಕಾದಂಬರಿಯಲ್ಲಿ ಲಭ್ಯ ಇವೆ.

ಹೆಬ್ಬಾರರ ಒಕ್ಕಲು ಮಕ್ಕಳಾದ ಅಂತಪ್ಪ, ಕೂಸ ಮೊಯಿಲಿಯವರು ಮಂಗಳಾದೇವಿಗೆ ಹರಕೆ ಹೇಳಿದ್ದರಿಂದ ಮಂಗಳೂರಿಗೆ ಹೋಗಿ ಶಾನುಭೋಗ–ಉಗ್ರಾಣಿಗಳ ವೇಷ ಹಾಕಿ ಮನೆ ಮನೆ ಸುತ್ತಿ ಕಾಸು ಮಾಡುತ್ತಾರೆ. ಗಾಂಧಿ ನೋಡಲು ಕಾತರಿಸಿ ಬಂದ ಐತುವಿಗೂ ಪಿಶಾಚಿ ವೇಷ ಹಾಕಿ ಕರೆತರುತ್ತಾರೆ.

ಯಕ್ಷಗಾನ

ತುಳುನಾಡಿನ ಸಂಸ್ಕೃತಿಯಲ್ಲಿ ಯಕ್ಷಗಾನವು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಯಕ್ಷಗಾನ ಆಧುನಿಕ ಕಾಲದಲ್ಲೂ ಜನಮನ್ನಣೆ ಪಡೆದು ಬೆಳೆಯುತ್ತಾ ಬಂದುದು ಅದರ ವೈಭವಕ್ಕೆ ಸಾಕ್ಷಿ. 'ಯಕ್ಷಗಾನ ಪ್ರಯೋಗ ಕ್ರಮಗಳಲ್ಲಿ ಆಟ, ತಾಳಮದ್ದಳೆ ಎಂಬ ಎರಡು ಮುಖ್ಯ ವಿಧಾನಗಳಿವೆ.'[೬೦] ತೆಂಕುತಿಟ್ಟು, ಬಡಗುತಿಟ್ಟು ಪ್ರಭೇದಗಳನ್ನು ಹೊಂದಿರುವ ಯಕ್ಷಗಾನವು ಭಾಗವತ, ವೇಷಧಾರಿಗಳೊಂದಿಗೆ ಮಾಯಾಲೋಕವನ್ನು ಸೃಷ್ಟಿಸಿಬಿಡುತ್ತದೆ. ಚೆಂಡೆ, ಮದ್ದಳೆಗಳು ವಿಶೇಷವಾಗಿ ಬಳಸಲ್ಪಡುವ ವಾದ್ಯಗಳು. ಯಕ್ಷಗಾನದ ವಿವರಗಳು 'ಗಾಂಧಿ ಬಂದ', 'ಉಲ್ಲಂಘನೆ', 'ಮುಖಾಂತರ', 'ತೆಂಬರೆ' ಕಾದಂಬರಿಗಳಲ್ಲಿ ಲಭ್ಯ ಇವೆ. 'ಯಕ್ಷಗಾನದ ಇನ್ನೊಂದು ಪ್ರಯೋಗರೂಪವಾಗಿರುವ 'ತಾಳಮದ್ದಳೆ'ಗೆ ನೆಲೆಗೊಂಡ ಪ್ರಾಚೀನತೆ ೧೬ನೆಯ ಶತಮಾನದಷ್ಟು ಹಿಂದೆ ಇದೆ. ಕ್ರಿ.ಶ. ೧೫೫೦ರ ಕುರುಗೋಡು ಶಾಸನದಲ್ಲಿ ಅಲ್ಲಿಯ ದೇವಾಲಯದ ಲಕ್ಷ್ಮೀನಾರಾಯಣ ದೇವರಿಗೆ 'ತಾಳಮದ್ದಳೆಯ ಸೇವೆ'ಗಾಗಿ ಉಂಬಳಿ ಬಿಟ್ಟುದನ್ನು ಹೇಳಿದೆ.'[೬೧] ಯಕ್ಷಗಾನವು ಕುಣಿತವಾದರೆ, ತಾಳಮದ್ದಲೆ ಅರ್ಥಧಾರಿಗಳಿಂದ ಮಾತಿನ ಮೂಲಕ ಪ್ರಸ್ತುತಪಡಿಸುವುದಾಗಿದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ 'ಸೇತುಬಂಧನ' ಕಥಾಪ್ರಸಂಗದ ತಾಳಮದ್ದಲೆಯ ವಿವರವಿದೆ. ಇದು ರಾಮಾಯಣದಲ್ಲಿ ಬರುವ ಒಂದು ಕಥಾಭಾಗ. ಕೂಡ್ಲು ಮತ್ತು ಈಚ್ಲಂಪಾಡಿ ಮೇಳದ ಪ್ರಸಿದ್ಧ ವೇಷಧಾರಿ, ಅರ್ಥಧಾರಿಗಳು ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿಯ ಮಹಾಶಿವರಾತ್ರಿಯ ಜಾಗರಣೆಗಾಗಿ ಈ ತಾಳಮದ್ದಲೆಯನ್ನು ಶಾನುಭೋಗರು ಆಯೋಜಿಸುತ್ತಾರೆ. ಅರ್ಥಧಾರಿಗಳನ್ನು ಕಂಡು ಅವರ ಹಿಂದೆಯೇ ಬರುವ ಉಗ್ರಾಣಿಯಿಂದ ತಾಳಮದ್ದಲೆ ಹಾಗೂ ಯಕ್ಷಗಾನದ ಜನಪ್ರಿಯತೆಯು ಗೋಚರವಾಗುತ್ತದೆ.

ಮಳೆಗಾಲದಲ್ಲಿ ಅತಿಯಾದ ಮಳೆಯಿಂದ ಬೇಸರ ಕವಿಯುವುದಿದೆ. ಇದನ್ನು ಹೋಗಲಾಡಿಸಲು ಅಲ್ಲಲ್ಲಿ ತಾಳಮದ್ದಲೆ ಹಮ್ಮಿಕೊಳ್ಳುವುದು ಸಾಮಾನ್ಯ. 'ಗಾಂಧಿ ಬಂದ' ಕಾದಂಬರಿಯಲ್ಲಿ ಹೆಬ್ಬಾರರು ತಾಳಮದ್ದಲೆ ಹಮ್ಮಿಕೊಳ್ಳುವ ವಿವರವಿದೆ. ಮಳೆಗಾಲದಲ್ಲಿ ಜಡಿಮಳೆ ಬೀಳುತ್ತಿರಲು ಕೆಲಸ ಮಾಡುವುದು ಕಠಿಣ ಹಾಗೂ ಬೇಸರ ಮೂಡುವುದೂ ಇದೆ. ಇದನ್ನು ಕಳೆಯಲು ಶ್ರೀಮಂತ ಜನರು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು.

'ಉಲ್ಲಂಘನೆ' ಕಾದಂಬರಿಯಲ್ಲಿ ಸ್ವಪ್ರಯತ್ನದಿಂದ ಪ್ರಸಿದ್ಧ ಭಾಗವತನಾಗುವ ವೆಂಕಟ್ರಮಣಯ್ಯನ ವಿವರಗಳಿವೆ. ಯಕ್ಷಗಾನಕ್ಕಾಗಿ ಹರೆಯದಲ್ಲೇ ಬಾಲಕರಿಗಿರುವ ಆಸಕ್ತಿ ಮತ್ತು ತ್ಯಾಗ ಮಾಡುವ ಮನೋಭಾವ ದಾಖಲಾಗಿದೆ. ಯಕ್ಷಗಾನ ಕಲಿಯಲು ಮನೆಬಿಟ್ಟು ಹೋಗುವ ವೆಂಕಟ್ರಮಣಯ್ಯ ಪ್ರಸಿದ್ಧ ಭಾಗವತರಾಗಿ ಗುತ್ತು ಮನೆಯಿಂದಲೇ ಗೌರವಿಸಲ್ಪಡುತ್ತಾರೆ. ಸಾಂತೇರ್ ಗುತ್ತಿನ ಗೇಣಿ ಒಕ್ಕಲಾದರೂ ಗುತ್ತಿನವರು ನೀಡುವ ಗೌರವ ನೋಡಿದರೆ ಯಕ್ಷಗಾನಕ್ಕೆ ಕರಾವಳಿಯಲ್ಲಿ ಇರುವ ಮಹತ್ವ, ಜನಾಕರ್ಷಣೆ ವ್ಯಕ್ತವಾಗುತ್ತದೆ. ಗೋವಿಂದಯ್ಯನಿಂದ ಪಂಥಾಹ್ವಾನ ಪಡೆದ ವೆಂಕಟ್ರಮಣಯ್ಯ ಸತತ ಶ್ರದ್ಧೆಯಿಂದ ಗೋವಿಂದಯ್ಯನೇ ಮೆಚ್ಚುವಂತಹ ಭಾಗವತನಾಗುತ್ತಾನೆ. ದೇವಸ್ಥಾನಗಳು ಯಕ್ಷಗಾನ ಬೆಳೆಸುವಲ್ಲಿ ಸ್ಫೂರ್ತಿಯಾಗಿದ್ದವು. ಯಕ್ಷಗಾನ ಆಸಕ್ತ ಅಭ್ಯಾಸಿಗಳಿಗಾಗಿ ಕೋಳ್ಯೂರು ದೇವಸ್ಥಾನದಲ್ಲಿ ಅಭ್ಯಾಸ ಮಾಡುವ ತಂಡವೊಂದು ಹುಟ್ಟಿಕೊಳ್ಳುತ್ತದೆ. ಗುತ್ತಿನಾರ್ ಸಂಕಪ್ಪಣ್ಣನ ತಂದೆ ಪ್ರಸಿದ್ಧ ಅರ್ಥಧಾರಿಯಾಗಿದ್ದರು. ಆದ್ದರಿಂದ ಗುತ್ತಿನಲ್ಲಿ ಅವರಿಗೆ ವಿಶೇಷ ಗೌರವವಿತ್ತು.

ಯಕ್ಷಗಾನದಲ್ಲಿ ತಾಳಕ್ಕೆ ತಕ್ಕಂತೆ ಕುಣಿಯುವುದು, ಮುಖಕ್ಕೆ ಬಣ್ಣ ಹಚ್ಚುವುದು, ಅರ್ಥಧಾರಿಯಾಗಿ ಮಾತಿನಿಂದ ಮೋಡಿ ಮಾಡುವುದು ಜನರ ಮೆಚ್ಚುಗೆಗೆ ಪಾತ್ರವಾಗುತ್ತಿತ್ತು. ಜನರು ಗೌರವವೂ ಕೊಡುತ್ತಿದ್ದರು. 'ಮುಖಾಂತರ' ಕಾದಂಬರಿಯಲ್ಲಿ ಬಚ್ಚಿರಕೋಡಿ ಭೀಮಭಟ್ಟರ ಪ್ರಸ್ತಾಪವಿದೆ. ಹದಿನೇಳು ವರ್ಷಗಳಿಂದ ಯಕ್ಷಗಾನದಲ್ಲಿ ತೊಡಗಿದರೂ ಪಕ್ವತೆ ಗಳಿಸದ ಬಗ್ಗೆ ಮಾತಿದೆ. ಆಟದ ಪೆಟ್ಟಿಗೆ ಹೊರುವವರು ಎಂದು ಜನ ಕೀಳಂದಾಜಿಸಿ ಮಾತನಾಡುವ ವಿವರಗಳಿವೆ. 'ಮುಖಾಂತರ' ಕಾದಂಬರಿಯಲ್ಲಿ ಬರುವ ಟೊಪ್ಪಿ ಶಂಭಟ್ಟರು ಕೂಡ ತನ್ನ ಬಾಲ್ಯಕಾಲದಲ್ಲಿ ತಾಳಮದ್ದಲೆಯಿಂದ ಆಕರ್ಷಿತರಾದವರು. ಫಕೀರಶೆಟ್ಟಿ ಎಂಬ ಗುತ್ತಿನ ಯಜಮಾನನಿಂದ ಹುಟ್ಟಿದ ತಾಳಮದ್ದಲೆ ಕೂಟದಲ್ಲಿ ಟೊಪ್ಪಿ ಶಂಭಟ್ಟರು ಸೇರಿ ಪುರಾಣ, ಮಹಾಕಾವ್ಯಗಳ ಅನುಭವವನ್ನು ಪಡೆದರು. ವಿಠಲಭಟ್ಟರು ಕೋಡಂಗಿ ಪಾತ್ರದ ಮೂಲಕ

ಪ್ರವೇಶ ಪಡೆದು ಒಳ್ಳೆಯ ಕಲಾವಿದರಾಗಿ ಜನಮನ್ನಣೆ ಪಡೆಯುವ ವಿವರ ಮುಖಾಂತರ ಕಾದಂಬರಿಯಲ್ಲಿ ಉಲ್ಲೇಖಿತವಾಗಿದೆ.

'ತೆಂಬರೆ' ಕಾದಂಬರಿಯಲ್ಲಿ ದಕ್ಷಾಧ್ವರ ಪ್ರಸಂಗದ ಉಲ್ಲೇಖವಿದೆ. ಶಿವ, ಪಾರ್ವತಿ, ದಕ್ಷ, ವೀರಭದ್ರ ಪಾತ್ರಗಳ ಕುಣಿತದ ವಿವರವನ್ನು ತಿಳಿಸುತ್ತಾ ಇಡೀ ಪ್ರಸಂಗವನ್ನೇ ಸಂಕ್ಷಿಪ್ತವಾಗಿ ಎಂ.ವೀರಪ್ಪ ಮೊಯಿಲಿಯವರು ನೀಡುತ್ತಾರೆ. ತುಳುನಾಡಿನ ಪ್ರಸಿದ್ಧ ಪಾತ್ರಧಾರಿಗಳಾದ ಕುರಿಯ ವಿಠಲಶಾಸ್ತ್ರಿ, ಬಣ್ಣದ ಮಾಲಿಂಗ ಮೊದಲಾದವರ ಕುಣಿತದ ವಿಶ್ಲೇಷಣೆಯಿದೆ.

ಯಕ್ಷಗಾನವನ್ನು ಇಲ್ಲಿನ ಪ್ರಾದೇಶಿಕ ಕಾದಂಬರಿಗಳು ಮತ್ತೆ ಮತ್ತೆ ಉಲ್ಲೇಖಿಸುತ್ತವೆ. ತುಳುನಾಡಿನ ಸಂಸ್ಕೃತಿಯೊಂದಿಗೆ ಯಕ್ಷಗಾನ ಬೆರೆತುಹೋಗಿರುವುದನ್ನು ಗಮನಿಸಬಹುದು. ಯುವಕರಲ್ಲಿ ಸಹಜವಾಗಿ ಮೂಡುವ ಯಕ್ಷಗಾನದ ಸೆಳೆತ, ಸೂಕ್ತ ಗುರುವಿಗಾಗಿ ಹುಡುಕಾಟ, ಗುರುವಿನ ಜತೆ ಕಲಿಕೆ, ಪ್ರಸಿದ್ಧಿ ಪಡೆಯಲು ಹರಸಾಹಸ ಪಡುವುದು ಇವೆಲ್ಲವೂ ಕಾದಂಬರಿಗಳ ಭಾಗಗಳಾಗಿವೆ.

೩.೫. ಬೇಟೆಯ ಚಿತ್ರಗಳು

ತುಳುನಾಡು ಪಶ್ಚಿಮ ಘಟ್ಟಗಳ ತಪ್ಪಲು ಪ್ರದೇಶವಾಗಿದ್ದು ಅತೀ ಮಳೆ ಹಾಗೂ ಅತೀ ಬಿಸಿಲುಗಳಿಂದ ಕೂಡಿ ದಟ್ಟ ಅರಣ್ಯದಿಂದ ಕೂಡಿತ್ತು. ಈ ದಟ್ಟ ಅರಣ್ಯದಲ್ಲಿ ಹೆಚ್ಚಿನ ಮೂಲನಿವಾಸಿಗಳು ಬೇಟೆಯನ್ನು ತಮ್ಮ ಆಹಾರಮೂಲವಾಗಿ ಬಳಸುವ ಅನಿವಾರ್ಯತೆಯಿತ್ತು. ತುಳುನಾಡಿನ ಅನನ್ಯತೆಗಳಲ್ಲಿ ಬೇಟೆ ಸಂಸ್ಕೃತಿಯೂ ಒಂದು. ಇಲ್ಲಿನ ಮೂಲನಿವಾಸಿಗಳು ಕಾಡನ್ನು ಆಶ್ರಯಿಸಿದ್ದು ಸಹಜವಾಗಿ ನಿಸರ್ಗವನ್ನೇ ತಮ್ಮ ಎಲ್ಲ ಅಗತ್ಯಗಳ ಮೂಲವಾಗಿ ಕಂಡದ್ದರಲ್ಲಿ ಆಶ್ಚರ್ಯವಿಲ್ಲ. ಇತರರ ಹಂಗು ಅವರಿಗೆ ಇರಲಿಲ್ಲ. ಅವರ ಬೇಡಿಕೆಗಳು ಕನಿಷ್ಠವಾಗಿದ್ದವು. ಕೊರಗರು, ಮಲೆಕುಡಿಯರು ತಮ್ಮ ಬದುಕಿನ ಸುಗಮ ಸಾಗಾಣಿಕೆಗೆ ಕಾಡನ್ನೇ ನೆಚ್ಚಿಕೊಂಡಿದ್ದು, ಬೇಟೆ ಅನಿವಾರ್ಯವಾಗಿತ್ತು. ಆಹಾರಕ್ಕಾಗಿ, ಕಾಡುಪ್ರಾಣಿಗಳಿಂದ ರಕ್ಷಣೆಗಾಗಿ ಬೇಟೆ ಅವರ ನಿತ್ಯ ಕಾಯಕವಾಗಿತ್ತು.

ಕಾವ್ಯಗಳಲ್ಲಿ ಬೇಟೆ

ಕಾಳಿದಾಸ ತನ್ನ ಪ್ರಸಿದ್ಧ ಕೃತಿ ಅಭಿಜ್ಞಾನ ಶಾಕುಂತಲಾದಲ್ಲಿ ಬೇಟೆಯ ಕುರಿತು ಈ ರೀತಿ ವರ್ಣಿಸಿರುವುದು ಕಂಡುಬರುತ್ತದೆ.

"ಮೇದಶ್ಚೇದ ಕೃಶೋದರಂ ಲಘುಭವುತ್ಯುತ್ಥಾನ ಯೋಗ್ಯಂವಪುಃ

ಸತ್ವಾನಾಮಪಿ ಲಕ್ಷ್ಯತೇ ವಿಕೃತಿ ಮಚ್ಚಿತ್ತಂ ಭಯ ಕ್ರೋಧಯೋಃ

ಉತ್ಕರ್ಷಃ ಸ ಚ ಧನ್ವಿನಾಂಯದಿಷವಃ ಸಿಧ್ಯಂತೀ ಲಕ್ಷ್ಯೇ ಲಚೇ

ಮಿಥ್ಯೈವ ವ್ಯಸನಂ ವದಂತಿ ಮೃಗಯಾ ಮೀದೃಗ್ವಿನೋದಃ ಕುತಃ."

'ಬೊಜ್ಜು ಕರಗಿ ಹೋಗುತ್ತದೆ; ಹೊಟ್ಟೆ ಕಿರಿದಾಗುತ್ತದೆ; ಶರೀರ ಚುರುಕುಗೊಂಡು ಲಘುವಾಗುತ್ತದೆ; ಹೆದರಿಕೆ ಅಥವಾ ಸಿಟ್ಟಿನಲ್ಲಿ ಜಂತುಗಳ ವಿಕಾರವಶವಾದ ಚಿತ್ತ ಹೇಗಿರುತ್ತದೆಂದು ಅರಿವಾಗುತ್ತದೆ. ಚಲಿಸುತ್ತಿರುವ ಸಮಯದಲ್ಲಿ ಕೂಡಾ ಬಾಣಗಳು ಸರಿಯಾಗಿ ಲಕ್ಷ್ಯಕ್ಕೇ ನಾಟುವಂತೆ ಸಿದ್ಧಿ ದೊರಕುತ್ತದೆ ಎಂಬುದು ಬಿಲ್ಲುಗಾರಿಕೆಗೆ ಬಲ್ಮೆಯಾಗಿದೆ. ಇಷ್ಟೆಲ್ಲಾ ಗುಣ ವಿಶೇಷಗಳಿದ್ದರೂ ಬೇಟೆಯನ್ನು ವ್ಯಸನಗಳಲ್ಲಿ ಒಂದು ಎನ್ನುವುದು ಕೇವಲ ಸುಳ್ಳೇ ಆಗಿದೆ. ಬೇಟೆಯಂತಹ ವಿನೋದ ಇನ್ನೆಲ್ಲಿದೆ?'[೪೨]

"೧೯೮೩ರಲ್ಲಿ ಡಾ. ಪಿ. ರಾಜೇಂದ್ರನ್ ಅವರು ನೇತ್ರಾವತಿ ನದಿ ಪ್ರದೇಶದ ಉಪ್ಪಿನಂಗಡಿ ಮತ್ತು ಮಾಣಿಯಲ್ಲಿ ಸಂಶೋಧನಾ ಕಾರ್ಯಗಳನ್ನು ಕೈಗೊಂಡಾಗ ಮಧ್ಯ ಹಾಗೂ ಅಂತ್ಯ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಶಿಲಾಯುಧಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು. ಈ ಆಧಾರದಂತೆ ಅಂತ್ಯ ಶಿಲಾಯುಗದ ಹೊತ್ತಿಗೆ ಮಾನವನು ಇಲ್ಲಿ ನೆಲೆಸಿದ್ದನೆಂದೂ ಬೇಟೆಯೇ ಆತನ ಮುಖ್ಯ ಕಸುಬಾಗಿತ್ತೆಂದೂ ಹೇಳಲು ಸಾಧ್ಯವಾಯಿತು."[೪೩] ಹೀಗೆ ಆದಿಮಾನವ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಅಂಶವು ಸ್ಪಷ್ಟವಾಗುತ್ತದೆ.

'ತುಳುವರ ಪ್ರಮುಖ ಮನರಂಜನೆಗಳಲ್ಲಿ ಬೇಟೆಯು ಒಂದಾಗಿದೆ. ತುಳುನಾಡಿನಲ್ಲಿ ಜನರು ಆಹಾರಧಾನ್ಯ, ತರಕಾರಿ ಇತ್ಯಾದಿಗಳನ್ನು ತಮ್ಮ ಅಗತ್ಯದ ಪೂರೈಕೆಗಾಗಿ ಬೆಳೆಸುತ್ತಾರೆ. ಕಾಡು ಕಡಿದು ನಾಡು ಮಾಡಿದ ಮನುಷ್ಯ ಬೆಳೆ ಹಾನಿಗೆ ಬರುವ ಕಾಡುಪ್ರಾಣಿಗಳಿಂದ ತಮ್ಮ ಬೆಳೆಗಳನ್ನು ರಕ್ಷಿಸಿಕೊಳ್ಳುವುದು ಅಗತ್ಯವಾಗಿತ್ತು. ಹಾಗಾಗಿ ಪ್ರಾದೇಶಿಕವಾಗಿ ಬೇಟೆ ಇಲ್ಲಿಯ ಜನರಿಗೆ ತಾವು ಬೆಳೆಸಿದ ಬೆಳೆಗಳ ರಕ್ಷಣೆ ಹಾಗೂ ತಮ್ಮ ಸ್ವಂತ ರಕ್ಷಣೆಗೆ ಅನಿವಾರ್ಯವೂ ಆಗಿದೆ.

'ಕುಡಿಯರ ಕೂಸು', 'ಗಾಂಧಿ ಬಂದ' ಕಾದಂಬರಿಗಳಲ್ಲಿ ಬೇಟೆಯ ಉಲ್ಲೇಖಗಳಿವೆ. 'ಕುಡಿಯರ ಕೂಸು' ಕಾದಂಬರಿಯು ಮಲೆಕುಡಿಯರ ಬದುಕಿಗೆ ಸಂಬಂಧಪಟ್ಟಿದ್ದು ಕಾಡಿನಲ್ಲಿ ವಾಸವಾಗಿರುವ ಅವರ ಪ್ರಧಾನ ಕಸುಬು ಬೇಟೆಯೇ ಆಗಿತ್ತು.

೧. ಆಹಾರ
೨. ಕಾಡು ಪ್ರಾಣಿಗಳಿಂದ ರಕ್ಷಣೆ
೩. ಮನರಂಜನೆ
೪. ತರಬೇತಿ

ಇವುಗಳಿಗಾಗಿ ಬೇಟೆ ಅಗತ್ಯವಾಗಿತ್ತು.

ಕಾಡನ್ನೇ ಮನೆಯಾಗಿ ಮಾಡಿಕೊಂಡಿರುವ ಕುಡಿಯರಿಗೆ ಆಹಾರಕ್ಕಾಗಿ ಬೇಟೆಯಾಡದೆ ವಿಧಿಯಿರಲಿಲ್ಲ. ನೀರ ಬೇಟೆ ಹಾಗೂ ಕಾಡು ಬೇಟೆ ಎರಡೂ ಅವರಿಗೆ ಮುಖ್ಯವಾಗಿದ್ದವು.

ಡಾ.ರಾಜಶ್ರೀ ಅವರ ಮಾತಿನಂತೆ: 'ಪ್ರಾಣಿ, ಪಕ್ಷಿ, ಜಲಚರಗಳನ್ನು ವಿವಿಧ ಪರಿಕರ ಹಾಗೂ ಸೂಕ್ಷ್ಮವಾದ ತಂತ್ರ ಉಪಾಯಗಳಿಂದ ಹಿಡಿಯುವ ಅಥವಾ ಹೊಡೆದು ಕೊಲ್ಲುವುದೇ ಬೇಟೆ. ಕಾಡಿನ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವುದು ಕಾಡುಬೇಟೆ. ನೀರಿನಲ್ಲಿರುವ

ಜಲಚರಗಳನ್ನು ಬೇಟೆಯಾಡುವುದು ನೀರ ಬೇಟೆ ಅಥವಾ ಮೀನು ಬೇಟೆ.'[೪೪] ಈ ಎರಡೂ ವಿಧದ ಬೇಟೆಗಳು ಕುಡಿಯರ ಬದುಕಿನಲ್ಲಿ ಪ್ರಮುಖವಾಗಿದ್ದವು.

ಆಹಾರಕ್ಕಾಗಿ ಬೇಟೆ

ಹೆಂಗಸರು ಮೀನ ಬೇಟೆಗೆ ಹೋಗಿ ಆಹಾರ ಸಂಗ್ರಹಿಸುವುದು ರೂಢಿಯಾಗಿದ್ದರೆ, ಗಂಡಸರು ತಮ್ಮ ಬಿಡುವಿನ ಅವಧಿಯಲ್ಲಿ ಪ್ರಾಣಿಗಳಿಗೆ ಉರುಳು ಇಡುವುದು ಸಾಮಾನ್ಯವಾಗಿತ್ತು. ಕುಡಿಯರು ಕೇರಿಗಳಲ್ಲಿ ವಾಸವಾಗಿದ್ದರೂ ಅವರಲ್ಲಿ ಬೇಟೆಯ ಬಗ್ಗೆ ಸ್ವಾತಂತ್ರ್ಯವಿತ್ತು. ಒಬ್ಬನ ಬೇಟೆಯನ್ನು ಇನ್ನೊಬ್ಬ ಕಸಿಯುವ ಸಂಪ್ರದಾಯ ಇರಲಿಲ್ಲ. ಪ್ರತಿಯೊಬ್ಬನೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಬೇಟೆ ಸಾಹಸಿಗಳನ್ನಾಗಿ ರೂಪಿಸುವಲ್ಲಿ, ಜಾಗ್ರತ ಮನಸ್ಥಿತಿಯನ್ನು ಹೊಂದುವಲ್ಲಿ ಸಹಕಾರಿಯಾಗಿತ್ತು. ಕಾಡಿನ ಮೂಲೆಮೂಲೆಗಳಲ್ಲಿ ಸಂಚರಿಸುವ ಕುಡಿಯರು ಸಾಹಸಿಗಳಾಗದೆ ಬೇರೆ ವಿಧಿಯಿರಲಿಲ್ಲ. ಕುಡಿಯ ಹೆಂಗಸರು ಸೋಮಾರಿಗಳಾಗಿ ಇರಲಿಲ್ಲ. ಸದಾ ಕೆಲಸಗಳಲ್ಲಿ ತೊಡಗಿರುವ ಅವರು ಬಿಡುವಿನ ವೇಳೆಯಲ್ಲಿ ನೀರಬೇಟೆಗೆ ತೊಡಗುವುದು ಸಾಮಾನ್ಯವಾಗಿತ್ತು. ಏಡಿ, ಮೀನುಗಳನ್ನು ಹಿಡಿಯುವುದಕ್ಕಾಗಿ ಗಂಟೆಗಟ್ಟಲೆ ವ್ಯಯಿಸುವುದು ಅವರಿಗೆ ಉತ್ಸಾಹ ಹಾಗೂ ಉಲ್ಲಾಸವನ್ನು ನೀಡುತ್ತಿತ್ತು. ಏಕಾಂಗಿಯಾಗಿ ಇಲ್ಲವೆ ಗುಂಪಿನಲ್ಲಿ ಈ ಕಾಯಕದಲ್ಲಿ ಅವರು ತೊಡಗಿಕೊಳ್ಳುತ್ತಿದ್ದರು.

"The meet of the pigs and deers was also dried and kept in the pots."[೪೫] ಬೇಟೆಯ ಲಭ್ಯತೆ ಕಠಿಣ. ಅಪಾರ ಪರಿಶ್ರಮ ಬೇಡುವುದರಿಂದ .ಆಹಾರಕ್ಕಾಗಿ ಸಂಗ್ರಹಿಸಿಡುವ ಪ್ರವೃತ್ತಿಯೂ ಇದ್ದಿತು ಎಂಬ ಮಾಹಿತಿ ಲಭ್ಯವಾಗುತ್ತದೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಬೇಟೆಯ ವಿವರಗಳಿವೆ. "ಏಡಿ ಹಿಡಿಯಲು ಹೋದಾಗ ಅವನ ಮಗ, ಹದಿನಾರು ವಯಸ್ಸಿನ ಕುಕ್ಕ ಜತೆಗೆ ಬರಬೇಕು."(ಕುಡಿಯರ ಕೂಸು, ಪುಟ ೨೦೮) "ಬಾಯ ಚಪಲಕ್ಕಾಗಿ ಮಿಗ, ಬರ್ಕ, ಕೆಮ್ಮ ಬೇಟೆಯಾಡುತ್ತಾರೆ."(ಕುಡಿಯರ ಕೂಸು, ಪುಟ ೨೦೬) "ಅವಳಿಗೆ ಸಿಗಡಿ, ಏಡಿ ಅಂದರೆ ಪ್ರಾಣ. ದಿನವೆಲ್ಲ ಅವಳ ಠಾವು ಠಿಕಾಣಿ ಹೊಳೆಯ ಬುಡದಲ್ಲೇ."(ಕುಡಿಯರ ಕೂಸು, ಪುಟ ೧೭೧) ಆಹಾರಕ್ಕಾಗಿ ಬೇಟೆಯನ್ನೇ ಅವಲಂಬಿಸಿದ ಕುಡಿಯರ ಬದುಕು ಸಾಹಸದಿಂದ ಕೂಡಿತ್ತು. ಗಂಡಸರು ಮಾತ್ರವಲ್ಲದೆ ಹೆಂಗಸರೂ ಆಹಾರ ಸಂಗ್ರಹಣೆಗಾಗಿ ಶ್ರಮಿಸುತ್ತಿದ್ದರು.

ಆಮೆ ಶಿಕಾರಿ

'ಅದೆಲ್ಲ ಬೂದನಿಗೆ ಒಪ್ಪಿಸಿದ ಕೆಲಸ. ಈಗ ಅವನಿಗೆ ಶಿಷ್ಯರಿಬ್ಬರು. ಒಬ್ಬ ಕರಿಯ ಮತ್ತೊಬ್ಬ ಕಾಳ. ಇಬ್ಬರೂ 'ಮಾವ' ಎಂದು ಅವನನ್ನು ಅಡಿಗಡಿಗೆ ಸಂಬೋಧಿಸುವವರು. ಅವನ ಬೆನ್ನ ಹಿಂದೆಯೇ ಕತ್ತಿ, ಕೋಲು ಹಿಡಿದು ಅವರು ಮಲೆಯನ್ನು ಸುತ್ತಾಡುತ್ತಾರೆ. ಮರದ ಈಟಿಗಳನ್ನು ಹಿಡಿದುಕೊಂಡು ನೆಲವನ್ನು ಕುಕ್ಕುತ್ತ ಒಂದೊಂದು ದಿನ ಮೂರು ಮಂದಿಯೂ

ಸೇರಿ ಶಿಕಾರಿಗೆ ಹೊರಡುತ್ತಾರೆ. ಎರಡು, ಮೂರು ಆಮೆ ಕುಟ್ಟಿಕೊಂಡು ಸಂಜೆಯ ಒಳಗೆ ಮನೆಗೆ ಬಂದು ಬರುತ್ತಾರೆ.'(ಕುಡಿಯರ ಕೂಸು, ಪುಟ ೮೨)

ಬೇಟೆಗಾಗಿ ಪ್ರಾಕೃತಿಕ ವಸ್ತುಗಳನ್ನೇ ಕುಡಿಯರು ಬಳಸುತ್ತಿದ್ದರು. ಅಪಾರ ಸೃಜನಶೀಲತೆ, ಕಲಾತ್ಮಕತೆ ಉಳ್ಳ ಅವರು ಆಮೆ ಬೇಟೆಗಾಗಿ ಮರದ ಈಟಿ, ಇತರ ಪ್ರಾಣಿಗಳಿಗೆ ಉರುಳು ಇಡಲು ಬಳ್ಳಿಯಿಂದಲೇ ತಯಾರಿಸುತ್ತಿದ್ದರು. ನಿಸರ್ಗವು ಅವರಿಗೆ ಎಲ್ಲದಕ್ಕೂ ಆಗರವಾಗಿತ್ತು. ಹಂಗಿಲ್ಲದೆ ಬದುಕಲು, ಸ್ವಂತ ಬಲದಿಂದ ಬದುಕಲು ಪ್ರೇರೇಪಣೆಯಾಗಿತ್ತು. ತಮ್ಮ ಆಹಾರ ಹೊರತುಪಡಿಸಿ ಶೋಕಿಗಾಗಿ ಕುಡಿಯರು ಬೇಟೆಯಾಡಿದವರಲ್ಲ. ಕಾಡುಪ್ರಾಣಿಗಳಿಗೆ ಅನವಶ್ಯಕವಾಗಿ ತೊಂದರೆ ಕೊಟ್ಟವರಲ್ಲ. ಅವರ ಬದುಕು ನಿಸರ್ಗದ ಜೊತೆಗೆ ಸೌಹಾರ್ದ ಜೀವನವಾಗಿತ್ತು. ಬೇಟೆ ಒಂದು ವಿದ್ಯೆಯಾಗಿತ್ತು. ನಿಸರ್ಗದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಬೇಟೆ ಲಭ್ಯವಾಗುತ್ತಿತ್ತು. ಕಾಡುಪ್ರಾಣಿಗಳ ಹೆಜ್ಜೆಗುರುತು, ಹಿಕ್ಕೆಯ ಗುರುತು, ಕಾಡಿನಲ್ಲಿ ಚಲಿಸುವ ಪ್ರದೇಶ, ನೀರು ಆಹಾರಕ್ಕಾಗಿ ಅಲೆಯುವ ತಾಣ ಮತ್ತು ಸಮಯ, ಅವು ಇರುವ ತಾಣ ಇವೆಲ್ಲವನ್ನೂ ಸೂಕ್ಷ್ಮವಾಗಿ ಅಧ್ಯಯನ ಮಾಡುವುದು ಅನಿವಾರ್ಯವಾಗಿತ್ತು. ಬೇಟೆಗೆ ಉರುಳು ಇಡುವುದಕ್ಕಾಗಿ ಯಾವ ತಾಣವೂ ಸೂಕ್ತ ಆಗುವುದಿಲ್ಲ. ಆಯಕಟ್ಟಿನ ಜಾಗದಲ್ಲಿ ಇಟ್ಟಾಗ ಮಾತ್ರ ಬೇಟೆ ಬೀಳುವುದು ಸಾಧ್ಯವಿತ್ತು. ಆಹಾರ ಮಾನವನ ಮೂಲಭೂತ ಅಗತ್ಯ. ಆಹಾರವಿಲ್ಲದೆ ದುಡಿಯಲು ಶಕ್ತಿ ಬರಲು ಸಾಧ್ಯವಿಲ್ಲ. ಕುಮರಿ ಬೇಸಾಯ ಮಾಡುವ ಕುಡಿಯರಿಗೆ ಬೇಟೆಯಿಂದ ಆಹಾರ ಪಡೆಯುವುದು ಜೀವನಾವಶ್ಯಕವಾಗಿತ್ತು. ಕ್ರೂರ ಪ್ರಾಣಿಗಳು ಮನುಷ್ಯನ ತಂಟೆಗೆ ಬರುವುದು ಅಪರೂಪ. ಅವುಗಳ ಸ್ವಾತಂತ್ರ್ಯಕ್ಕೆ, ಬದುಕಿಗೆ ಧಕ್ಕೆ ಒದಗಿದಾಗ ಮಾತ್ರ ಅವು ಮಾನವನಿಗೆ ತೊಂದರೆ ಕೊಡಲು ಸಾಧ್ಯ.

'ಗಾಂಧಿ ಬಂದ' ಕಾದಂಬರಿಯಲ್ಲಿ ಕೊರಗರ ಐತು ಆಮೆ ಶಿಕಾರಿಗೆ ಹೋಗುವ ಪ್ರಸಂಗವಿದೆ. ಸಾಗುವಳಿಗೆ ಭೂಮಿ ಇಲ್ಲದೆ ಬದುಕುವ ಕೊರಗರು ಆಹಾರಕ್ಕಾಗಿ ಪ್ರಾಣಿ ಮೂಲದ ಬೇಟೆ ಹಿಡಿಯುವುದು ಅನಿವಾರ್ಯವಾಗಿತ್ತು. ಆಮೆ ಹಿಡಿದು ಪುಟ್ಟಮ್ಮಕ್ಕನಿಂದ ಉಪ್ಪು, ಮೆಣಸು ಪಡೆದು ಮನೆಗೆ ತೆರಳುತ್ತಾನೆ. ಇನ್ನೊಮ್ಮೆ ಆಮೆ ಹಿಡಿಯಲು ಹೋದಾಗ ತಿಂಗಳಾಯರ ಉಪದೇಶದಿಂದ ಅಹಿಂಸೆ ಎಂಬ ಗಾಂಧಿ ಮೌಲ್ಯಕ್ಕಾಗಿ ಹಿಡಿದ ಆಮೆಯನ್ನು ಬಿಟ್ಟುಬಿಡುತ್ತಾನೆ.

ಮೀನು ಶಿಕಾರಿ

'ಹೊತ್ತು ಕಳೆಯುವುದಕ್ಕೆ, ವಿನೋದಕ್ಕೆ, ಎಲ್ಲಿ ಕಂಡರಲ್ಲಿ ಉರುಳು ಮಾಡಿ ಇರಿಸುತ್ತಾರೆ; ಗಳಿಗೆ, ಗಳಿಗೆ ಕಾಯುತ್ತಾರೆ. ತಾವಿಟ್ಟ ಉರುಳಿಗೆ ಬರ್ಕ, ಕೆಮ್ಮ, ಕಡವೆ, ಕಾಟಿ ಏನು ಬಿದ್ದರೂ ಬಿದ್ದೀತು ಎಂದು ಊಹಿಸುತ್ತಾರೆ. ಆದರೆ, ಆಯಕಟ್ಟಿನ ಸ್ಥಳವನ್ನು ಆರಿಸಲಾರದ ಅವರ ಉರುಳಿಗೆ ಏನು ಬಿದ್ದೀತು? ಬೇಸರ ಬಂದು–ಈಟಿ ಹಿಡಿದು, ಆಮೆ ಕುಕ್ಕುತ್ತೇವೆ–ಎಂದು ಆಟವನ್ನು ತೊಡಗುತ್ತಾರೆ. ಅದೂ ಸಾಧ್ಯವಾಗದೆ ಹೋದರೆ, ತೊರೆಯ ಬಳಿಗೆ ಓಡಿ, ಕಲ್ಲುಗಳನ್ನುರುಳಿಸಿ, ಅವುಗಳ ಕೆಳಗೆ ಅಡಗಿ ಕುಳಿತಿರುವ ಏಡಿಗಳನ್ನಾದರೂ ಸಂಪಾದಿಸುತ್ತಾರೆ.

ಗಬಕ್ಕನೆ ನೀರಿಗೆ ಕೈಯಿಕ್ಕಿ ಮೀನು ಹಿಡಿಯುವುದೂ ಉಂಟು. ಮೀನಿನ ಬದಲು ಚೊಂದ ಕಪ್ಪೆ ಕೈಗೆ ಬರುವುದೂ ಉಂಟು.'(ಕುಡಿಯರ ಕೂಸು, ಪುಟ ೯೫)

"ಅತ್ತ ಕೆರೆಯ ನೀರು ಬತ್ತಿ, ಗೂಳಿ ಹಾಕಿ ಮೀನು ಹಿಡಿಯುವ ಬೆಸ್ತರಿಗೆ ಮಾತ್ರ ಉಪಯೋಗವಾಯಿತು."(ಮರಳಿ ಮಣ್ಣಿಗೆ, ಪುಟ ೪೫)

"ಮಳೆ ಕಳೆದು, ತೊರೆ ತುಂಬಿ ಹರಿಯುವಾಗಲೂ ಕುಡಿಯರಿಗೆ ಅದರಿಂದ ಲಾಭವಿದೆ. ಯಾವುದೋ ಮದ್ದಿನ ಬೇರನ್ನು ಅರೆದು, ನೀರಲ್ಲಿ ಕಲಸಿ ತೇಲಿಬಿಟ್ಟರಾಯಿತು. ಮುಂದೆ ಹತ್ತುನೂರು ಗಜ ದೂರಗಳಲ್ಲಿ ವಿಷಗೊಂಡ ನೀರಿನಲ್ಲಿ ಬದುಕಲಾರದೆ ಸಾಯುವ ಮೀನುಗಳ ಸುಗ್ಗಿ ಅವರಿಗೆ."(ಕುಡಿಯರ ಕೂಸು, ಪುಟ ೭೬) ನಿಸರ್ಗದ ಉಪಯೋಗ ಅವರಿಗೆ ಸರಿಯಾಗಿ ತಿಳಿದಿತ್ತು. ಮೀನು ಹಿಡಿದು ಬದುಕು ಸಾಗಿಸುವ ಕಲೆ ಕರಗತವಾಗಿತ್ತು.

೨. ಕಾಡು ಪ್ರಾಣಿಗಳಿಂದ ರಕ್ಷಣೆ

ಕಾಡಿನಲ್ಲಿ ನೆಲೆಯಾಗಿರುವ ಮಲೆಕುಡಿಯರು ಕಾಡಿನ ವನ್ಯಜೀವಿಗಳ ತುಡಿತ, ಮಿಡಿತವನ್ನು ಬಲ್ಲವರು. ಪ್ರಾಣಿಗಳು ಬಿಟ್ಟು ಹೋಗಿರುವ ಗುರುತುಗಳಿಂದ ಪರಿಸ್ಥಿತಿ ಅಂದಾಜಿಸುವ ಎಚ್ಚರಿಕೆ ಹಾಗೂ ವಿವೇಚನೆ ಅಗತ್ಯವಾಗಿತ್ತು. ಸಂದರ್ಭ ಬಂದಾಗ ಹೋರಾಡಿ ಪ್ರಾಣ ರಕ್ಷಿಸುವ ಸಾಹಸಿಯಾಗದಿದ್ದರೆ ಬದುಕುಳಿಯುವ ಸಂದರ್ಭಗಳೂ ಇರಲಿಲ್ಲ. ವನ್ಯ ಜೀವಿಗಳಿಗೆ ತೊಂದರೆ ಉಂಟುಮಾಡದಿದ್ದರೆ ಅವು ಏನೂ ಮಾಡುವುದಿಲ್ಲ ಎಂಬ ನಂಬಿಕೆ ಕುಡಿಯರದಾಗಿತ್ತು. ಕುಡಿಯ ಕರಿಯ ಹಿಡಿದ ಹುಲಿ, ಚಿರತೆಗಳು ರಕ್ಷಣೆಗಾಗಿ ಆಡಿದ ಬೇಟೆಗಳಾಗಿವೆ. ತಾವು ಬೆಳೆದ ಕುಮೇರಿ ಬೆಳೆ ಉಳಿದು ಫಸಲು ಕೈಗೆ ಬರುವುದು ಸುಲಭವಿರಲಿಲ್ಲ. ಅದರ ಹಿಂದೆ ಒಂದು ಹೋರಾಟವೇ ಇತ್ತು. ಪ್ರತಿಕ್ಷಣ ತಿನ್ನಲು ಹೊಂಚುಹಾಕುವ ಪ್ರಾಣಿಗಳಿಂದ ರಕ್ಷಿಸಿ ಉಳಿಸಬೇಕಾಗಿತ್ತು. ಇಲ್ಲದಿದ್ದರೆ ಆಹಾರವಿರಲಿಲ್ಲ. ಬೆಳೆ ರಕ್ಷಣೆಗೆ ಬೇಟೆ ಅನಿವಾರ್ಯವಾಗಿತ್ತು.

ಕೆಡ್ಡಸ ಎಂಬ ಆಚರಣೆಯು ತುಳುನಾಡಿನಲ್ಲಿ ಪ್ರಸಿದ್ಧವಾಗಿದೆ. ಕೆಡ್ಡಸ ಮೂರು ದಿನಗಳಲ್ಲಿ ನಡೆಯುತ್ತದೆ. ನಡುಕೆಡ್ಡಸದಲ್ಲಿ ಬೇಟೆಯಾಡುವ ಸಂಪ್ರದಾಯವಿದೆ. ಅಂದು ಬೇಟೆಯಾಡಿ ಮಾಂಸಾಹಾರ ಸೇವನೆ ಮಾಡಲೇಬೇಕೆಂಬ ಪದ್ಧತಿ ಇದೆ. 'ಗಾಂಧಿ ಬಂದ' ಕಾದಂಬರಿಯಲ್ಲಿ ಕೆಡ್ಡಸದ ವಿವರಗಳಿವೆ.

"ಕ್ಷೇತ್ರಾಧಿಪತಿಯಾದ ಅರಸು ಉತ್ಸವ ಸಂದರ್ಭಗಳಲ್ಲಿ ಮಾತ್ರ ಅರಣ್ಯವನ್ನು ಪ್ರವೇಶಿಸಬಹುದು. ವಿದ್ಯುಕ್ತ ವಾರ್ಷಿಕ ಬೇಟೆಯೇ ಉತ್ಸವ. ಈ ದಿನ ಆತನು ಗ್ರಾಮಸ್ಥರ ಕೇಳಿಕೆಯ ಮೇರೆಗೆ ಸುವ್ಯವಸ್ಥಿತ ವಲಯವಾದ ಗ್ರಾಮಕ್ಕೆ ವನ್ಯಮೃಗಗಳಿಂದ ಒದಗುವ ಆಕ್ರಮಣಗಳನ್ನು ತಡೆದು ನಿಯಂತ್ರಿಸುವ ಉದ್ದೇಶದಿಂದ ಈ ಬೇಟೆಯನ್ನು ಕೈಗೊಳ್ಳುತ್ತಾನೆ. ಅತಿಯಾಗಿ ಸೊಕ್ಕಿ ಬೆಳೆದಿರುವ ಉತ್ಪನ್ನಶೀಲ ಪ್ರಕೃತಿಯನ್ನು ನಿಯಂತ್ರಿಸುವುದು ಹಾಗೂ ಪ್ರಕೃತಿಯ ಅತಿಶಯ ಸಮೃದ್ಧಿಯನ್ನು ಆಹಾರದ ಮೂಲವಾಗಿ ಬಳಸಿಕೊಳ್ಳುವುದು ಇಂತಹ ಬೇಟೆಯ ಉದ್ದೇಶವಾಗಿದೆ. ಹೀಗೆ ಬೇಟೆಯ ಸಂದರ್ಭದಲ್ಲಿ ಅರಸನು ಸಂರಕ್ಷಕನಾಗಿ ವ್ಯವಸ್ಥೆಯ

ಮತ್ತು ಸಮೃದ್ಧಿಯ ನಾಯಕನಾಗಿ ಹಾಗೂ ಅನ್ನ ಆಹಾರಾದಿಗಳ ಪೂರೈಕೆದಾರನಾಗಿ ಕಂಡುಬರುತ್ತಾನೆ."[೪೬]

"ತಮ್ಮ ಹೊಲ ತೋಟಗಳಿಗೆ ನುಗ್ಗಿ ಬೆಳೆಯನ್ನು ನಾಶಪಡಿಸುವ ವಿವಿಧ ಪ್ರಾಣಿಗಳನ್ನು ಸಾಮೂಹಿಕವಾಗಿ ಹಬ್ಬದ ನೆಪದಿಂದ ಬೇಟೆಯಾಡುವ ಒಂದು ಸಂದರ್ಭವೂ ಋತುಮಾನಕ್ಕನುಸರಿಸಿ ಕಲ್ಪಿತವಾಗಿರಬಹುದು."[೪೭] ಹೀಗೆ ಕೆಡ್ಡಸವು ಸಾಮಾಜಿಕ ಆಯಾಮವನ್ನು ಹೊಂದಿತ್ತು.

"ಕರಾವಳಿ ಪ್ರದೇಶವಾಗಿರುವ ತುಳುನಾಡಿನ ಪೂರ್ವದ ಗಡಿಯಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿರುವ ಪಶ್ಚಿಮ ಘಟ್ಟಗಳಿವೆ. ಈ ಪಶ್ಚಿಮ ಘಟ್ಟಗಳಿಂದ ಅರಣ್ಯಗಳ ಮೂಲಕ ಕಾಡುಹಂದಿಗಳು ಕೆಳಕ್ಕೆ ಇಳಿಯುವುದು ಹಾಗೂ ಘಟ್ಟದ ಬುಡದಲ್ಲಿರುವ ತಗ್ಗು ಪ್ರದೇಶದಲ್ಲಿ ಬೆಳೆಸಿದ ಬೆಳೆಗಳನ್ನು ತಿಂದು ಹಾಳು ಮಾಡುವುದು ಸಾಮಾನ್ಯ ಸಂಗತಿ. ಆದ್ದರಿಂದ ಈ ಪ್ರದೇಶಗಳಲ್ಲಿ ರೈತರು ಕಾಡುಹಂದಿಗಳನ್ನು ಬೇಟೆಯಾಡುವುದು ಒಂದು ದೈನಂದಿನ ಕೆಲಸ. ಕಾಡುಗಳು ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲೂ ಈ ಪರಿಸ್ಥಿತಿ ವಿಶೇಷ ಬದಲಾವಣೆಯನ್ನು ಪಡೆದಿಲ್ಲ."[೪೮] ಹೀಗೆ ಬೇಟೆಯು ಬೆಳೆ ರಕ್ಷಣೆಯಲ್ಲಿ ಅನಿವಾರ್ಯವಾಗಿತ್ತು ಎಂಬ ಅಂಶ ಬೆಳಕಿಗೆ ಬರುತ್ತದೆ.

'ಅರಣ್ಯಸಂಸ್ಕೃತಿಯಿಂದ ಕೃಷಿಸಂಸ್ಕೃತಿಗೆ ಪಲ್ಲಟಗೊಂಡಿರುವ ತುಳುವರ ಬದುಕಿನ ಅವಸ್ಥಾಂತರಗಳನ್ನು ಅರಿಯಲು ಬೇಟೆಯು ಪ್ರಮುಖವಾದ ಆಕರಸಾಮಾಗ್ರಿಯಾಗಿದೆ. ತುಳು ಸಂಸ್ಕೃತಿಯ ಅನನ್ಯತೆ ಮತ್ತು ಬೇರೆ ಬೇರೆ ಕಾಲಘಟ್ಟಗಳಲ್ಲಿ ತುಳುವರ ಬದುಕಿನ ಐತಿಹಾಸಿಕ ಪಲ್ಲಟಗಳನ್ನು ನಿರೂಪಿಸುವ ಬೇಟೆಯು ಆಹಾರ ಸಂಗ್ರಹದ ವಿಧಾನವಾಗಿ, ಹವ್ಯಾಸವಾಗಿ, ಹೋರಾಟ ಪ್ರವೃತ್ತಿಯ ಪ್ರತೀಕವಾಗಿ, ಸಾಹಸ ಪ್ರದರ್ಶನದ ಕಣವಾಗಿ, ಪ್ರಾಣಿಗಳನ್ನು ಪಳಗಿಸುವ ವಿದ್ಯೆಯಾಗಿ ಬಳಕೆಯಾಗುತ್ತಾ ಬಂದಿದೆ. ಇಂತಹ ಉದ್ದೇಶಗಳಿಗೆ ಬೇಟೆಯ ಸ್ವರೂಪ ಮತ್ತು ವಿನ್ಯಾಸಗಳಲ್ಲಿ ಬದಲಾವಣೆಗಳು ನಡೆಯುತ್ತಾ ಬಂದಿದೆ.'[೪೯] 'ಕುಡಿಯರ ಕೂಸು' ಕಾದಂಬರಿಯು ಬೇಟೆಯ ವಿವಿಧ ಸ್ವರೂಪಗಳು ಮತ್ತು ವಿನ್ಯಾಸಗಳನ್ನು ತಿಳಿಸುತ್ತದೆ. ಬೇಟೆಯ ಉದ್ದೇಶಗಳು ಹಲವಾರು. ಅದಕ್ಕೆ ತಕ್ಕಂತೆ ವಿಧಾನಗಳೂ ಬದಲಾಗಬೇಕಾಗುತ್ತದೆ. ಹಿರಿಯರ ಮಾರ್ಗದರ್ಶನದಲ್ಲಿ ಕಿರಿಯರು ಕಲಿಯುತ್ತಿದ್ದರು. ಕಾಡು ವಾಸಿಯಾದವರಿಗೆ ಬೇಟೆಯಲ್ಲಿ ಪಳಗಲೇಬೇಕಾದ ಅನಿವಾರ್ಯತೆ ಇತ್ತು. ಸ್ವರಕ್ಷಣೆ ಹಾಗೂ ಆಹಾರ ಸಂಪಾದನೆಗಾಗಿ ಬೇಟೆಯ ಒಳಹೊರಗನ್ನು ಕಲಿಯಬೇಕಾದ ಅನಿವಾರ್ಯತೆ ಇತ್ತು. ಬೇಟೆ ಯಶಸ್ವಿಯಾಗಲು ಹಲವು ತಂತ್ರಗಳು ಅವಶ್ಯಕವಾಗಿ ಬೇಕಾಗಿದ್ದವು.

೨. ಬೆಳೆಯ ರಕ್ಷಣೆ

ಕಷ್ಟಪಟ್ಟು ಬೆಳೆದ ಬೆಳೆ ಕೈಗೆ ಬರುವ ಮುನ್ನ ಕಾಡುಪ್ರಾಣಿಗಳ ಬಾಯಿಗೆ ತುತ್ತಾದರೆ ಆಹಾರಕ್ಕೆ ಕಲ್ಲು ಬಿದ್ದಂತೆ. ಬೆಳೆ ಬೆಳೆದಷ್ಟು ಅನ್ಯ ಪ್ರಾಣಿಗಳಿಂದ ರಕ್ಷಿಸುವುದು ಅಷ್ಟೇ ಮುಖ್ಯವಾಗಿತ್ತು. ಕುಡಿಯರು ಕಾಡಿನಲ್ಲೇ ಕುಮರಿ ಬೇಸಾಯದ ಸಮೀಪವೇ ಗುಡಿಸಲು

ಕಟ್ಟಿಸಿಕೊಳ್ಳುತ್ತಿದ್ದರು. ಬೆಳೆ ಕೈಗೆ ಸಿಗುವವರೆಗೆ ಕಾಡುಪ್ರಾಣಿಗಳಿಂದ ಕಾದು ಭತ್ತ ಮನೆಗೆ ತರುತ್ತಿದ್ದರು.

ಬೇಟೆಯ ಸಂಬಂಧಿ ನಿಯಮಗಳು

ಕುಡಿಯರಿಗೆ ಬೇಟೆಯೆ ಅರ್ಧ ಬದುಕೇ ಆಗಿರುವುದರಿಂದ ಒಬ್ಬ ಇಟ್ಟ ಉರುಳು, ಸಿಕ್ಕಿದ ಬೇಟೆ ಗುಟ್ಟಾಗಿಡುತ್ತಿದ್ದರು. ಬೇಟೆ ಸಿಕ್ಕಿದರೂ ಇತರರಿಗೆ ಸುಳಿವು ಕೊಡುತ್ತಿರಲಿಲ್ಲ. ಈ ಗೌಪ್ಯತೆ ಅವರ ಬದುಕಿಗೆ ಅನಿವಾರ್ಯವಾಗಿತ್ತು. ಒಬ್ಬ ಇಟ್ಟ ಉರುಳಿನ ಬೇಟೆ ಇನ್ನೊಬ್ಬ ಕಸಿಯುತ್ತಿರಲಿಲ್ಲ. ಅದು ಘೋರ ಅಪರಾಧವಾಗುತ್ತಿತ್ತು.

"ಸಂಜೆಯ ಕೆಲಸ ಬಿಟ್ಟು ಏಲಕ್ಕಿ ತೋಟದಿಂದ, ತಾನು ಉರುಳಿಟ್ಟ ಸ್ಥಳಕ್ಕೆ ಹೋಗಿ ನೋಡಿದವನು ತುಕ್ರ, ನಿಜಕ್ಕೂ ಆ ಮರಿ ಸಿಕ್ಕಿದ್ದು ಅವನ ಉರುಳಲ್ಲಿ. ಆ ಸ್ಥಳವನ್ನು ಕಂಡಾಗ ಅವನಿಗಾದ ಆಶ್ಚರ್ಯ, ಸಿಟ್ಟುಗಳು ಅಷ್ಟಿಷ್ಟಲ್ಲ. ಗಿಡವನ್ನೇ ಕಡಿದು, ಉರುಳಿಸಿ, ಬೇಟೆಯನ್ನು ಬಿಡಿಸಿಕೊಳ್ಳಬೇಕಾದರೆ ಬಲಿಷ್ಠವಾದ ಮಿಗವೋ, ಹಂದಿಯೋ ಬಿದ್ದಿರಬೇಕೆಂದು ಆತ ತರ್ಕಿಸಿದನು. ತಮ್ಮ ಕೇರಿಯವರಲ್ಲಿ ಒಬ್ಬನಿರಿಸಿದ ಉರುಳಿನಿಂದ ಇನ್ನೊಬ್ಬ ಬೇಟೆ ಕದ್ದು ಅಪಹರಿಸುವ ಧೂರ್ತತನ ಮುಂದೇನಾಗಲಾರದು ಎಂಬ ಕೋಪದಿಂದ ಅವನ ಮನ ಉದ್ವೇಗಗೊಂಡಿತು. ಅಲ್ಲಿಂದಲೇ ಶಾಪ ಕೊಡುತ್ತ ತನ್ನ ಮನೆಗೆ ಹೊರಟ. 'ನನ್ನ ಬೇಟೆಯನ್ನು ಕದ್ದು ತಿಂದವರಿಗೆ ಕಲ್ಕುಡನ ಆಣೆಯಿದೆ. ಅವರು ರಾತ್ರಿ, ಬೆಳಗಾಗುವುದರೊಳಗೆ ನೆತ್ತರು ಕಕ್ಕಿ ಸಾಯುತ್ತಾರೆ' ಎಂದು ಹುಯಿಲಿಡುತ್ತ ಮನೆಗೆ ಮರಳಿದ."(ಕುಡಿಯರ ಕೂಸು, ಪುಟ ೯೯–೧೦೦)

ಭೂತಾರಾಧನೆಯಲ್ಲಿ ಬೇಟೆ

ಆರಾಧನೆಗಳ ಸಂದರ್ಭದಲ್ಲೂ ಮೀನು ಹಿಡಿಯುವ ಸಂಪ್ರದಾಯವಿದೆ. 'ಗಾಂಧಿ ಬಂದ' ಕಾದಂಬರಿಯಲ್ಲಿ ಊರ ಕೋಡ್ದಬ್ಬು ಭೂತಕ್ಕೆ ಅರ್ಪಿಸಲು ಮೀನು ಹಿಡಿಯುವ ಹಬ್ಬವಿದೆ.(ಗಾಂಧಿ ಬಂದ, ಪುಟ ೨೩೬) ಊರ ಕೋಡ್ದಬ್ಬು ದೈವಕ್ಕೆ ಅಗೇಲು ಬಡಿಸಿದ ನಂತರ ಕುತ್ತರಿ ಬಲೆ ಹಿಡಿದು ಮೀನು ಹಿಡಿಯುವ ಉತ್ಸವ ಆರಂಭವಾಗುತ್ತದೆ. ಎಲ್ಲ ಸಮುದಾಯದವರು ಮೀನು ಹಿಡಿದು ಮನೆಗೆ ಒಯ್ಯುತ್ತಾರೆ.

ಹುಲಿ ಬೇಟೆ

'ಕುಡಿಯರ ಕೂಸು' ಕಾದಂಬರಿಯಲ್ಲಿ ಗಾಯಗೊಂಡ ಹುಲಿಯನ್ನು ಬೇಟೆಯಾಡುವ ಪ್ರಸಂಗವಿದೆ. ಗಾಯಗೊಂಡ ಹುಲಿ ಅಪಾಯಕಾರಿ. ಅದನ್ನು ಕೊಲ್ಲುವುದು ಅನಿವಾರ್ಯವಾಗುತ್ತದೆ. ಕಾಡಿನಲ್ಲಿ ಅನುಭವವಿಲ್ಲದೆ ಬೇಟೆಯಾಡಿ ಗಾಯಮಾಡಿದ ಹುಲಿ ಹಿಂಗಾಲು ಮುರಿಸಿಕೊಂಡು ತನ್ನ ಆಹಾರಕ್ಕಾಗಿ ನರಭಕ್ಷಕನಾಗುತ್ತದೆ. ಕುಡಿಯರ ಕೇರಿಯಲ್ಲಿ ಭೀತಿ ಮೂಡಿ ಕೊನೆಗೆ ಕರಿಯ ಬೇಟೆಯಾಡಿ ಕೊಲ್ಲುತ್ತಾನೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಆನೆಯನ್ನು ಜೀವಂತವಾಗಿ ಹಿಡಿದು ಪಳಗಿಸುವ ವಿವರಗಳಿವೆ. ಕರಿಯ ಆನೆಯನ್ನು ಹಿಡಿದು ಅದರ ಮೇಲೆ ಸವಾರಿ ಮಾಡುತ್ತಾನೆ.

ಪ್ರಾಣಿಗಳನ್ನು ಹಿಡಿಯಲು ಕರ್ಪು ತೋಡುವುದು ಒಂದು ಕ್ರಮ. "ಕರ್ಪು ಎಂದರೆ ಗದ್ದೆಗೆ ಕಾಡಿನಿಂದ ಸದಾ ಮೃಗಗಳು ಇಳಿಯುವ ದಾರಿಯನ್ನು ಕಂಡುಹಿಡಿದು, ಅಲ್ಲಿ ದೊಡ್ಡ ಗುಳಿತೋಡಿ ಗುಳಿಯ ತಳದಲ್ಲಿ ಬರ್ಚಿ, ಚೂಪು ಸಲಾಕೆಗಳನ್ನು ಹೂತಿಟ್ಟು ಅದನ್ನು ತೆಳುವಾದ ಬಿದಿರ ಸಲಿಕೆಗಳಿಂದ ಮುಚ್ಚಿ, ಮೇಲೆ ತೆಳು ಮಣ್ಣು, ಹಸಿಹುಲ್ಲು ಹರಡಿ ಇಡುವುದು. ಸದಾ ಗದ್ದೆಗೆ ಆ ದಾರಿಯಿಂದಲೇ ಬರುವ ಮೃಗವು ಎಂದಿನಂತೆಯೇ ಬಂದು, ದಾರಿಯಲ್ಲಿರುವ ಈ ಕೃತ್ರಿಮವನ್ನರಿಯದೆ, ಬಿದಿರ ಬಾಸಿ ಹಾಸಿದ ಜಾಗಕ್ಕೆ ಕಾಲಿಡುತ್ತದೆ. ಆಗ ಅದು ಮೃಗದ ಭಾರಕ್ಕೆ ಕುಸಿದು ಅದರೊಂದಿಗೆ ಆ ಮೃಗವೂ ಬಿದ್ದು, ಅಡಿಯಲ್ಲಿ ಹೂತಿಟ್ಟ ಬರ್ಚಿ, ಸಲಾಕೆಗಳ ಇರಿತದಿಂದ ಸಾಯುವುದು."[೫೦]

ಕಾಡುವಾಸಿಗಳಾದ ತುಳುವರಿಗೆ ಬೇಟೆ ಅನಿವಾರ್ಯವಾಗಿತ್ತು. ಆಹಾರಕ್ಕಾಗಿ, ಬೆಳೆ ಸಂರಕ್ಷಣೆಗಾಗಿ, ಕ್ರೂರ ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಬೇಟೆಯಾಡುವುದು ಮುಖ್ಯವಾಗಿತ್ತು. ಬೇಟೆಯಾಡಲು ಹಲವು ತಂತ್ರಗಳು ಬಳಕೆಯಾಗುತ್ತಿದ್ದವು. ಆಚರಣೆಯ ಸಂಬಂಧೀ ಕೆಡ್ಡಸದ ಎರಡನೆಯ ದಿನ ಬೇಟೆಯಾಡಲು ಸಾಮೂಹಿಕವಾಗಿ ಕಾಡಿಗೆ ತೆರಳುವ ಉತ್ಸವವಿತ್ತು. ಭೂತಾರಾಧನೆಯ ಸಂದರ್ಭದಲ್ಲೂ ಕೆಲವು ಕಡೆ ಬೇಟೆ ಮುಖ್ಯವಾಗಿತ್ತು.

೩.೬. ತುಳುನಾಡಿನ ಕಥನ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ

'ಒಂದು ಸಮುದಾಯದ ಪರಂಪರೆ ರೂಪುಗೊಳ್ಳುವುದೇ ಭೂತದಿಂದ ವರ್ತಮಾನಕ್ಕೆ ಹರಿದು ಬಂದ ನಂಬಿಕೆಗಳು, ಸಂಕೇತಗಳು, ಪ್ರತಿಮೆಗಳು, ಆಚರಣೆಗಳು, ಲೋಕದರ್ಶನ, ನೆನಪು ಹಾಗೂ ಸಂಸ್ಥೆಗಳ ಮೂಲಕ. ಈ ದೃಷ್ಟಿಯಿಂದ, ಪರಂಪರೆಯೊಂದಿಗೆ ಒಂದು ಸಮುದಾಯದ ಭೂತದ ಮುಂದುವರಿಕೆ.'[೫೧] 'ಇಂಗ್ಲೀಷಿನ 'modern' ಎಂಬ ಶಬ್ದ ೧೫ನೇ ಶತಮಾನದ ಲ್ಯಾಟಿನ್‌ನ 'modernu' ಎಂಬ ಪದದಿಂದ ರೂಪುಗೊಂಡಿದೆ. ಲ್ಯಾಟಿನ್‌ನಲ್ಲಿ 'ಮಾಡರ್ನಸ್' ಎಂಬ ಪದವನ್ನು ೧೫ನೇ ಶತಮಾನದ ಕ್ರಿಶ್ಚಿಯನ್ ಘಟ್ಟವನ್ನು ರೋಮನ್ನರ ಕ್ಷುದ್ರಧರ್ಮಗಳ(pagan) ಭೂತಕಾಲದಿಂದ ಪ್ರತ್ಯೇಕಿಸಲು ಬಳಸಲಾಯಿತು. ಮಧ್ಯಯುಗದಲ್ಲಿ 'ಮಾಡರ್ನ್' ಎಂಬ ಪದವನ್ನು 'ಪ್ರಾಚೀನ' ಎಂಬ ಹಂತದಿಂದ ಸಮಕಾಲೀನ ಘಟ್ಟವನ್ನು ಪ್ರತ್ಯೇಕಿಸಲು ಬಳಸಲಾಯಿತು. ಕ್ರಮೇಣ 'ಮಾಡರ್ನಿಟಿ' ಎಂಬ ಪದ ಹದಿನಾರನೆಯ ಶತಮಾನದ ಹೊತ್ತಿಗೆ ಯೂರೋಪಿನಲ್ಲಿ ಹುಟ್ಟಿದ ಸಾಮಾಜಿಕ ಸಂಸ್ಥೆಗಳನ್ನು ವಿವರಿಸಿಕೊಳ್ಳಲು ಹೆಚ್ಚು ಬಳಕೆಗೆ ಬಂತು. ಯೂರೋಪು ಭೂಮಂಡಲವನ್ನು ಹೊಸದಾಗಿ ಶೋಧಿಸುವ ಹಾಗೂ ವಸಾಹತೀಕರಿಸುವ ಕೆಲಸದಲ್ಲಿ ತೊಡಗಿದಾಗ, ಈ ಸಾಮಾಜಿಕ ಸಂಸ್ಥೆಗಳು 'ಮಾಡರ್ನಿಟಿ'ಯನ್ನು ಎಲ್ಲಡೆ ಹಬ್ಬಿಸತೊಡಗಿದವು ಎಂದು 'ಮಾಡರ್ನಿಟಿ' ಶಬ್ದದ ಚರಿತ್ರೆ ಹೇಳುತ್ತದೆ.

ಪುನರುಜ್ಜೀವನ ಯುಗ ಹಾಗೂ ಸುಧಾರಣಾ ಯುಗಗಳು ಕೂಡ 'ಆಧುನಿಕ ಯುಗ' ಹಾಗೂ 'ಮಧ್ಯ ಯುಗ' ಎಂಬ ನಿರ್ಣಾಯಾತ್ಮಕ ವರ್ಗೀಕರಣವನ್ನು ಮಾಡಿದವು. ಧರ್ಮ ಹಾಗೂ ಆಧ್ಯಾತ್ಮಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ ಘಟ್ಟ ಇದು. ಈ ದೃಷ್ಟಿಯಿಂದ, ವಿಜ್ಞಾನ ಕೇಂದ್ರರಂಗಕ್ಕೆ ಬಂದ ನಂತರ ಸ್ಥಾಪಿತಗೊಂಡ ನೋಟಕ್ರಮ 'ಆಧುನಿಕತೆ'. ಆದರೆ, ಹನ್ನೆರಡನೆಯ ಶತಮಾನದ ಚಾರ್ಲ್ಸ್ ದೊರೆಯ ಕಾಲದಲ್ಲೇ ಜನ ತಮ್ಮನ್ನು ತಾವು 'ಮಾಡರ್ನ್' ಎಂದು ಕರೆದುಕೊಂಡ ಉದಾಹರಣೆಗಳಿವೆ. ಅಂದರೆ, ಒಂದು ಕಾಲದ ಜನ ೧) ಭೂತದೊಂದಿಗೆ ತಮ್ಮ ಸಂಬಂಧವನ್ನು ಪುನರ್ ವ್ಯಾಖ್ಯಾನಿಸಿಕೊಂಡಾಗ ಅಥವಾ೨) ಭೂತದೊಂದಿಗೆ ತಮ್ಮನ್ನು ತಾವು ಕಡಿದುಕೊಂಡಾಗ ಅಥವಾ ೩) ಭೂತದೊಂದಿಗೆ ಕಡಿದುಹೋದ ತಮ್ಮ ಸಂಬಂಧವನ್ನು ಪುನರ್‌ಸ್ಥಾಪಿಸಿಕೊಳ್ಳಲೆತ್ನಿಸಿದಾಗ ಈ ಮೂರೂ ಹಂತಗಳಲ್ಲಿ 'ಆಧುನಿಕತೆ' ಎಂಬ ಪರಿಕಲ್ಪನೆ ಇತಿಹಾಸದಲ್ಲಿ ಹೆಚ್ಚು ಚಾಲ್ತಿಗೆ ಬಂದಂತಿದೆ. ಆದರೆ ಆಧುನಿಕತೆ ಒಂದು ಬಹು ದೊಡ್ಡ ಆಳುವ ಭಾಷೆಯಾಗಿ, ಸಂಕಥನವಾಗಿ, ವ್ಯವಸ್ಥೆಯಾಗಿ, ಧೋರಣೆಯಾಗಿ, ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನವಾಗಿ ಮಾನವನ ಪ್ರಜ್ಞೆ ಹಾಗೂ ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ನೋಟಕ್ರಮವಾಗಿ ಪುನರುಜ್ಜೀವನದಿಂದೀಚೆಗೆ ಬೆಳೆದು ಬಂತು ಹಾಗೂ ಇಪ್ಪತ್ತನೇ ಶತಮಾನದ ಮುಖವನ್ನೇ ಬದಲಿಸಿತು.[೨೨] ಈ ರೀತಿ ಪರಂಪರೆ ಎಂದರೆ ಹಿಂದಿನಿಂದಲೂ ನಂಬಿಕೊಂಡ ಸಿದ್ಧಾಂತಗಳಾದರೆ, ಆಧುನಿಕತೆ ವೈಜ್ಞಾನಿಕ ಯುಗದ ಪ್ರಭಾವ. ಇವುಗಳ ನಡುವಿನ ಸಂಘರ್ಷ ನಿರಂತರವಾದುದು. ಹಳೆಯ ತಲೆಮಾರಿನವರು ಪರಂಪರೆಯತ್ತ ವಾಲಿದರೆ ಹೊಸ ತಲೆಮಾರಿನವರು ಆಧುನಿಕ ಚಿಂತನೆಗಳತ್ತ ವಾಲುತ್ತಾರೆ. ಕಾದಂಬರಿಗಳಲ್ಲಿ ವಿವಿಧ ಚಿತ್ರಣಗಳ ಮೂಲಕ ಪರಂಪರೆ ಹಾಗೂ ಆಧುನಿಕ ಸಂಘರ್ಷವನ್ನು ಗುರುತಿಸಬಹುದು. ಪರಂಪರೆ ಹಾಗೂ ಆಧುನಿಕತೆಯ ಸಂಘರ್ಷವನ್ನು ಒಂದೊಂದಾಗಿ ಗುರುತಿಸಬಹುದು.

ಅ. ಆಚರಣೆಗಳು

೧.೧. ಗಡಿ ಹಿಡಿಯುವ ಪದ್ಧತಿ

'ಆ ದಿನಗಳಲ್ಲಿ ತುಳುನಾಡಿನಲ್ಲಿ ಸೀಮೆಯ ಅರಸನಾಗುವವನಿಗೆ ಇಲ್ಲವೇ ಗ್ರಾಮದ ಅಧಿಕಾರ ವಹಿಸಿಕೊಳ್ಳುವವನಿಗೆ 'ಗಡಿ ಹಿಡಿಯುವ' ಅಂದರೆ ಪಟ್ಟಾಭಿಷೇಕದ ರೀತಿಯ ಒಂದು ಧಾರ್ಮಿಕ ಆಚರಣಾ ವಿಧಾನ ರೂಢಿಯಲ್ಲಿ ಇತ್ತು. ಪಟ್ಟಾಭಿಷೇಕವಾಗಬೇಕಾದರೆ ಬ್ರಿಟಿಷ್ ಸರಕಾರದ ಪರವಾನಿಗೆ ಬೇಕು. 'ಗಡಿಹಿಡಿಯುವ' ಕ್ರಮಕ್ಕಾದರೆ ಇಂಥ ಪರವಾನಿಗೆಯ ಅವಶ್ಯಕತೆ ಇರಲಿಲ್ಲ. ಆದರೆ ಬ್ರಿಟಿಷ್ ಸರಕಾರದಿಂದ ಒಪ್ಪಿಗೆ ಪಡೆದು ಪಟ್ಟಾಭಿಷಿಕ್ತರಾದ ಅರಸರು, 'ಗಡಿಹಿಡಿಯವ' ಕಾರ್ಯಕ್ರಮದಲ್ಲಿ ವಿಧಿವತ್ತಾಗಿ ಭಾಗವಹಿಸಬೇಕಾಗುತ್ತಿತ್ತು. ಹಾಗೆ ಭಾಗವಹಿಸಿದ ಅರಸರು ಗಡಿಹಿಡಿದ ಗುತ್ತಿನವನನ್ನು 'ಇಂದಿನಿಂದ ಈತ ಗಡಿಹಿಡಿದ ಗುತ್ತಿನಾರ್' ಎಂದು ಘೋಷಿಸಬೇಕಿತ್ತು. ಸೀಮೆಗಳ ಬಹುತೇಕ ಅರಸರು, ಬಂಟ ಸಮುದಾಯದಿಂದ ಬಂದವರೇ ಆಗಿದ್ದರು. ಪಟ್ಟಾಭಿಷೇಕದ ನಂತರ ಅವರವರ ಮನೆತನಕ್ಕೆ ಸಂಬಂಧಿಸಿದ ಮೂಲ ಕುಲನಾಮಗಳಿಂದ ಅವರು ಗುರುತಿಸಲ್ಪಡದೇ, ಬಲ್ಲಾಳ, ಹೆಗ್ಗಡೆ, ಆಳ್ವ ಮೊದಲಾದ ಆಯಾ

ಗುತ್ತಿನ ಪರಂಪರೆಗೆ ಸಂಬಂಧಿಸಿದ ಬಿರುದುಗಳಿಂದ ಗೌರವಿಸಲ್ಪಡುತ್ತಿದ್ದರು. 'ಗಡಿ ಹಿಡಿಯುವುದು' ಎನ್ನುವುದು ಕೂಡಾ ಪಟ್ಟಾಭಿಷೇಕಕ್ಕೆ ತೀರ ಹತ್ತಿರದ ವಿಧಿಯಾಗಿರುತ್ತಿತ್ತು. ಬಂಟರ ಗುತ್ತುಗಳ ಪ್ರತಿಯೊಬ್ಬವನ್ನೂ ಔಪಚಾರಿಕವಾಗಿ 'ಗುತ್ತಿನಾರ್' ಎಂದು ಸಂಭೋದಿಸುವುದು ರೂಢಿಯಲ್ಲಿದ್ದರೂ, ನಿಜವಾಗಿ ಗುತ್ತಿನಾರ್ ಎಂಬ ಸಂಭೋದನೆ ಇದ್ದುದು ಗಡಿ ಹಿಡಿದವರಿಗೆ ಮಾತ್ರ. ಅರಸರು ಸೀಮೆಯ ಆಡಳಿತಾಧಿಕಾರಿಯಾಗಿರುತ್ತಿದ್ದರೆ, ಗುತ್ತಿನಾರ್ ಗ್ರಾಮದ ಆಡಳಿತಾಧಿಕಾರಿ ಮಾತ್ರವಲ್ಲದೆ ಆಯಾ ಗ್ರಾಮ ಗುತ್ತುಗಳ ದೈವ ಭೂತಗಳ ಪ್ರತಿನಿಧಿಯಾಗಿಯೂ ಇರುತ್ತಿದ್ದರು.'(ಉಲ್ಲಂಘನೆ, ಪುಟ ೯೩)ಗಡಿ ಹಿಡಿಯುವ ಸಂಪ್ರದಾಯವನ್ನು ಸಂಕಪ್ಪಣ್ಣ ಒಪ್ಪಿಕೊಳ್ಳದೆ ಗಡಿ ಹಿಡಿಯಲು ನಿರಾಕರಿಸುತ್ತಾರೆ. ಅವರಿಗೆ ಗುತ್ತು ಕೂಡ ಬ್ರಿಟಿಷ್ ಸಾಮ್ರಾಜ್ಯಷಾಹಿಯಂತೆ ಕಂಡುಬಂದು ಅದನ್ನು ಗಾಂಧೀವಾದಿಯಾದ ಅವರು ವಿರೋಧಿಸುತ್ತಾರೆ. ಇಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಗುರುತಿಸಬಹುದು.

೧.೨. ಕಂಬಳ

'ಉಲ್ಲಂಘನೆ' ಕಾದಂಬರಿಯಲ್ಲಿ ಸಂಕಪ್ಪ ಹೆಗ್ಡೆ ಗುತ್ತಿನ ಯಜಮಾನಿಕೆ ವಹಿಸಿಕೊಂಡ ಬಳಿಕ ಅದುವರೆಗೆ ವೈಭವದಿಂದ ನಡೆಯುತ್ತಿದ್ದ ಕಂಬಳವನ್ನು ಮುಂದುವರಿಸಲು ಇಷ್ಟಪಡಲಿಲ್ಲ. ಆದರೆ ಗುತ್ತಿನ ಯಜಮಾನಿ ಅಂಬಕ್ಕೆ ಅದಕ್ಕೆ ಆಸ್ಪದ ಕೊಡದೆ ಸಂಪ್ರದಾಯದ ನೆಲೆಯಲ್ಲಾದರೂ ಕೋಣಗಳನ್ನು ಓಡಿಸಲು ಇಚ್ಛಿಸುತ್ತಾಳೆ. ಅಂಬಕ್ಕೆಗೆ ರೂಢಿಗತವಾಗಿ ಬಂದ ನಂಬಿಕೆ, ಸಂಪ್ರದಾಯಗಳನ್ನು ಚಾಚುತಪ್ಪದೆ ಪಾಲಿಸಲು ಉತ್ಸುಕತೆ, ತಪ್ಪಿದರೆ ಅನಾಹುತ ಸಂಭವಿಸಬಹುದೆಂಬ ಭಯ ಕಾಡುತ್ತಿರುತ್ತದೆ. ಸಂಕಪ್ಪಣ್ಣ ವೈಭವವನ್ನು ಬಯಸದ, ಸದಾ ಸರಳತೆ ಬಯಸುವ ಗಾಂಧಿವಾದಿ. ಹೀಗೆ ಇವರಿಬ್ಬರಲ್ಲಿನ ಭಿನ್ನ ಮನಸ್ಥಿತಿಯನ್ನು ಪರಂಪರೆ ಮತ್ತು ಆಧುನಿಕತೆಯ ಸಂಘರ್ಷವಾಗಿ ಗುರುತಿಸಬಹುದು.

೧.೩. ಕೋಳಿ ಅಂಕ

'ಉಲ್ಲಂಘನೆ' ಕಾದಂಬರಿಯಲ್ಲಿ ಕೋಳಿ ಅಂಕದ ಕುರಿತು ಸಂಕಪ್ಪಣ್ಣ ಹಾಗೂ ಅಂಬಕ್ಕೆಯವರಲ್ಲಿ ಚರ್ಚೆ ನಡೆಯುತ್ತದೆ. ಗುತ್ತಿನ ಮನೆ ಎಂದಾಗ ಅಂಕದ ಕೋಳಿಗಳನ್ನು ಸಾಕುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಗುತ್ತಿನ ಕೋಳಿಗಳು ಕೋಳಿ ಅಂಕದಲ್ಲಿ ಗೆದ್ದರೆ ಅದೊಂದು ಮರ್ಯಾದೆ. ಸಂಕಪ್ಪಣ್ಣ ಸಾಂತೇರು ಗುತ್ತಿನಲ್ಲಿ ಅಂಕದ ಕೋಳಿಗಳನ್ನು ಸಾಕುವುದು, ಕೋಳಿ ಅಂಕದಲ್ಲಿ ಭಾಗವಹಿಸುವುದು ಹಾಗೂ ಮಾಂಸಾಹಾರ ನಿಷೇಧಿಸಲು ಮುಂದಾಗುತ್ತಾರೆ. ಆದರೆ ಸಂಪ್ರದಾಯವಾದಿ ಅಂಬಕ್ಕೆ ಇದನ್ನೆಲ್ಲ ಒಪ್ಪದೆ ಹೆಗ್ಗಡೆಯವರನ್ನು ಬಿಟ್ಟು ಉಳಿದವರಿಗೆ ಮಾಂಸದೂಟ, ಕೋಳಿ ಅಂಕಕ್ಕೆ ಒಬ್ಬ ಆಳು, ಎಲ್ಲವೂ ಯಥಾ ಪ್ರಕಾರ ನಡೆಯುವಂತೆ ನೋಡಿಕೊಳ್ಳುತ್ತಾರೆ.

೧.೪. ನಾಗಮಂಡಲ

'ಉಲ್ಲಂಘನೆ' ಕಾದಂಬರಿಯಲ್ಲಿ 'ನಾಗಮಂಡಲ'ವನ್ನು ಸುಂದರ ವೈಭವಯುತವಾಗಿ ಆಚರಿಸುತ್ತಾನೆ. ಪರಂಪರೆಯನ್ನು ಬಲಪಡಿಸುವ ಸ್ಥಿತಿಯನ್ನು ಇಲ್ಲಿ ಗುರುತಿಸಬಹುದು.

ಮುಂಬಯಿಯ ದುಡ್ಡಿನಿಂದ ವೈಭವೀಕರಿಸುವ ರೀತಿ ಗಮನಾರ್ಹ. ನಾಗಮಂಡಲವು ಊರಿನ ಉತ್ಸವದಂತೆ ಭರ್ಜರಿಯಾಗಿ ನಡೆಯುತ್ತದೆ. ಸುಂದರ ಆಧುನಿಕನಾದರೂ ಮತ್ತೆ ಪರಂಪರೆ ಬಲಪಡಿಸಲು ಶ್ರಮಿಸುವುದನ್ನು ಕಾಣಬಹುದು. ಸುಂದರನ ಕಾರಿಗೆ ಹಾವು ಅಡ್ಡ ಬಂದು ಎರಡು ತುಂಡಾದಾಗ ಆತ ದಿಗ್ಭ್ರಾಂತನಾಗುತ್ತಾನೆ. ನಾಗಮಂಡಲ ಮಾಡಿಯೇ ಬಿಡುತ್ತಾನೆ. ಆಧುನಿಕನಾದರೂ ಪರಂಪರೆಯನ್ನು ಇನ್ನೂ ಬಲಪಡಿಸುವ ಸುಂದರನನ್ನು ನೋಡಬಹುದು.

೧.೫. ಮಾರಿ ಪೂಜೆ

'ಮಾರಿಪೂಜೆಯೆಂದರೆ ಮಾರಪ್ಪ ಮಾರು ದೂರವೆಂದು ಎಲ್ಲರಿಗೂ ತಿಳಿದಿದೆ. ಆತ ಕೆಲವು ವರ್ಷದ ಹಿಂದೆ, ಉರ್ವ ಮಾರಿಗುಡಿಯಲ್ಲಿ ವರ್ಷಾವಧಿ ಪೂಜೆಗೆ ಕೋಣನ ಬಲಿ ಕೊಡುವ ಸಂದರ್ಭ ಕಾರ್ನಾಡರ ಜತೆ ಸೇರಿ ಅದನ್ನು ವಿರೋಧಿಸಲಿಲ್ಲವೆ? ಕೋಣನ ಬಲಿ ಕೊಡುವುದು ಮೂಢನಂಬಿಕೆ, ಮಾರಿದೇವಿ ಪ್ರಾಣಿಹಿಂಸೆಯನ್ನೆಂದೂ ಬಯಸಳು ಎಂದು ಅಲ್ಲಿನ ಮೊಕ್ತೇಸರರು ಹಾಗೂ ಸಹಸ್ರ ಭಕ್ತವೃಂದದೊಂದಿಗೆ ವಾದಿಸಿದಾಗ ಅವರ ಕೈಯಿಂದ ಇವರು ಜೀವಸಹಿತ ಪಾರಾದುದೇ ಹೆಚ್ಚೆಂದು ಎಲ್ಲರಿಗೂ ಗೊತ್ತು. ಆದರೂ ಕಾರ್ನಾಡರು ಮತ್ತು ಈ ದೇಶಭಕ್ತರೆಲ್ಲ ಸೇರಿ ಇಂತಹ ಮೂಢನಂಬಿಕೆಗಳನ್ನು ಒದ್ದೋಡಿಸಲು ಸತತ ಪ್ರಯತ್ನ ನಡೆಸುತ್ತಲೇ ಇದ್ದಾರೆ.'(ಗಾಂಧಿ ಬಂದ, ಪುಟ ೨೪೩) ತಾಯಿ ಸೂರಕ್ಕೆ ಮಾರಿಪೂಜೆಯ ಪರವಾಗಿ ನಿಂತರೆ, ಗಾಂಧಿ ಪ್ರಭಾವದಿಂದ ಮಾರಪ್ಪ ವಿರೋಧಿಸುವುದು ಕಂಡುಬರುತ್ತದೆ.

೧.೬. ವಿಧವೆಯರ ಕೇಶಮುಂಡನ

ಆಧುನಿಕತೆಯನ್ನು ಅರಗಿಸಿಕೊಳ್ಳುವುದು, ಒಪ್ಪಿಕೊಳ್ಳುವುದು ಹೇಳಿಕೊಳ್ಳುವಷ್ಟು ಸುಲಭವಲ್ಲ. ಮನಸ್ಥಿತಿ ಬದಲಾಗದೆ ಕಾರ್ಯದಲ್ಲಿ ಅದು ಗೋಚರಿಸುವುದೂ ಇಲ್ಲ. ಅದ್ರಾಮನಿಗೆ ಸೀನಪ್ಪ ಹೆಬ್ಬಾರರು ದ್ರೌಪದಿಯ ಮಂಡೆ ಬೋಳಿಸಲು ಭಂಡಾರಿಯನ್ನು ಕರೆತರಲು ತಿಳಿಸಿದಾಗ ಆತ ಕೊಡುವ ಉತ್ತರ ಅವರಿಬ್ಬರ ಸಂಬಂಧವನ್ನು ಹಾಳುಮಾಡುತ್ತದೆ.

'ತಲೆ ಬೋಳಿಸಿದರೆ ಆಕೆಯ ಹೋದ ಬದುಕು ಮರಳಿ ಬರುತ್ತಾ ಭಟ್ರೇ.... ಮೊದಲು ಆಕೆಗೊಂದು ಮದುವೆ ಮಾಡಿ ಬಿಡಿ'(ಗಾಂಧಿ ಬಂದ, ಪುಟ ೩೦) ಎಂದ ಅದ್ರಾಮನನ್ನು ಸೀನಪ್ಪಯ್ಯ ಹೆಬ್ಬಾರರು ದ್ವೇಷಿಸಲು ಆರಂಭಿಸುವುದನ್ನು ಗಮನಿಸಬಹುದು. ತನ್ನ ಅಭಿಪ್ರಾಯ, ನಂಬಿಕೆಗೆ ವ್ಯತಿರಿಕ್ತವಾದ ನಂಬಿಕೆ, ಆಲೋಚನೆಯನ್ನು ಹೊಂದಿದಾಗ ಪರಸ್ಪರ ತಿರಸ್ಕಾರ ಮೂಡುವ ಸನ್ನಿವೇಶ ನಿರ್ಮಾಣವಾಗುತ್ತದೆ. ಅದುವರೆಗಿನ ಎಲ್ಲ ನಡವಳಿಕೆಯನ್ನು ಆಧುನಿಕವಾದ ಯೋಚನೆ ಪ್ರಶ್ನಿಸುತ್ತದೆ, ಮಸುಕಾಗಿಸುತ್ತದೆ. ಅದ್ರಾಮ ಕೇಶಮುಂಡನದ ವಿರುದ್ಧವಾಗಿ ಮಾತಾಡಲು ಗಾಂಧೀ ಪ್ರಭಾವ ಕಾರಣವಾಗುತ್ತದೆ.

೧.೭ ವಿವಾಹ

'ಇಂದಿರಾಬಾಯಿ' ಕಾದಂಬರಿಯಲ್ಲಿ ಭಾಸ್ಕರ ಮತ್ತು ಇಂದಿರೆಯ ವಿವಾಹದ ಸಂದರ್ಭವನ್ನು ಗಮನಿಸಿದರೆ, ಇಲ್ಲಿ ಇಂದಿರೆ ಬಾಲವಿಧವೆ. ಆಕೆಯ ತಂದೆತಾಯಿಗೆ ಇಂದಿರೆ

ವಿಧವೆಯಾಗಿ ಕಟ್ಟುನಿಟ್ಟಾಗಿ ವಿಧಿವಿಧಾನಗಳನ್ನು ಆಚರಿಸಬೇಕೆಂಬ ಹಂಬಲವಿರುತ್ತದೆ. ಆದರೆ ಸಾಕುತಂದೆ ಅಮೃತರಾಯರು ಆಕೆಯ ವಿವಾಹವನ್ನು ಭಾಸ್ಕರನೊಂದಿಗೆ ನಿಶ್ಚಯಿಸಿಬಿಡುತ್ತಾರೆ. ಪರಂಪರೆಯನ್ನು ಬಲಪಡಿಸುವತ್ತ ವಾಲಿದ ಇಂದಿರೆಯ ತಂದೆತಾಯಿ ಕೊನೆಗೂ ಮಗಳು ಅಳಿಯನನ್ನು ಸ್ವೀಕರಿಸುತ್ತಾರೆ.

ತುಳುನಾಡಿನಲ್ಲಿ ಬಂಟರ ಮದುವೆ ಎಂದರೆ ಭಾರಿ ವೈಭವ. ಮೂರರಿಂದ ನಾಲ್ಕು ದಿನಗಳ ಕಾಲ ಮದುವೆ ನಡೆಯುತ್ತಿತ್ತು. ಮನೆಯಲ್ಲಿ ಚಪ್ಪರ, ಎತ್ತಿನಗಾಡಿಯ ದಿಬ್ಬಣ ಹೀಗೆ ಸಾಂಪ್ರದಾಯಿಕವಾಗಿ ಮದುವೆ ನೆರವೇರುತ್ತಿತ್ತು. ಪೇಟೆಯ ಹಾಲ್‌ನಲ್ಲಿ ಕೆಲವೇ ಗಂಟೆಗಳಲ್ಲಿ ನಡೆಯುವ ಮದುವೆಗೆ ಅಂಬಕ್ಕೆ ಹೋಗಿರುತ್ತಾರೆ. ಹೀಗೆಯೂ ಮದುವೆ ಮಾಡಬಹುದೆಂಬ ಕಲ್ಪನೆ ಆಕೆಗೆ ಮೂಡುತ್ತದೆ. ಕಲ್ಯಾಣ ಮಂಟಪಗಳು ಮದುವೆಯ ಚಿತ್ರಣವನ್ನೇ ಬದಲಾಯಿಸಿಬಿಟ್ಟವು.

ಒಂದು ಕಾಲದಲ್ಲಿ ತಂದೆ ತಾಯಿಯ ಒಪ್ಪಿಗೆ ಪಡೆದು ವಿವಾಹವಾಗುವುದು. ಹಿರಿಯರು ನಿಶ್ಚಯಿಸಿದ ಮದುವೆ ನಡೆಯುವುದು ಸಾಮಾನ್ಯವಾಗಿತ್ತು. ಎಷ್ಟೋ ಬಾರಿ ವಧುವಿಗೆ ವರ ಒಪ್ಪಿಗೆಯೇ ಎನ್ನುವ ಪ್ರಶ್ನೆಯೇ ಹುಟ್ಟುತ್ತಿರಲಿಲ್ಲ. ಶಿಕ್ಷಣ, ಆಧುನಿಕತೆಯ ಪ್ರವೇಶದಿಂದ ಬದಲಾದ ಪರಿಸರ ಗಮನಿಸಬಹುದು. 'ಉಲ್ಲಂಘನೆ'ಯ ರಂಜಿತ್ ತಂದೆತಾಯಿಯ ಒಪ್ಪಿಗೆಯನ್ನು ಕೇಳದೆ ತನ್ನಿಷ್ಟದಂತೆ ವಿವಾಹವಾಗುತ್ತಾನೆ. ತಂದೆತಾಯಿಯ ಅನುಪಸ್ಥಿತಿಯೂ ಆತನನ್ನು ಕಾಡಲಿಲ್ಲ. ವ್ಯಕ್ತಿಸ್ವಾತಂತ್ರ್ಯ ತೀವ್ರಗೊಂಡಂತಹ ಕಾಲವನ್ನು ಗಮನಿಸುತ್ತೇವೆ. ಹಿಂದಿನವರು ರೂಢಿಸಿಕೊಂಡ ಸಂಪ್ರದಾಯಗಳನ್ನು ತುಸುವೂ ಎಚ್ಚರತಪ್ಪದೆ ನೆನಪಿಟ್ಟುಕೊಂಡು ಅದನ್ನೇ ಪುನರಾವರ್ತಿಸುವ ಕಾಲವೊಂದು ಇದ್ದರೆ, ಪ್ರತಿ ಸಂಪ್ರದಾಯನ್ನೂ ಪ್ರಶ್ನಿಸುವ, ಒಳಿತು ಕೆಡುಕುಗಳನ್ನು ತುಲನೆ ಮಾಡುವ, ತಮ್ಮ ಹಿತ ಕಾಪಾಡುವಂತೆ ಬದಲಾಯಿಸುವ ತಲೆಮಾರನ್ನು ಗಮನಿಸುತ್ತೇವೆ. ರಂಜಿತ್ ಮದುವೆಯ ಔತಣ ಕೂಟವನ್ನು ಗುತ್ತಿನಲ್ಲಿ ಇರಿಸದೆ ದೆಹಲಿಯಲ್ಲಿ ಇಡುತ್ತಾನೆ. ತನ್ನ ಕುಟುಂಬದವರನ್ನು ಕರೆಸಿಕೊಳ್ಳುತ್ತಾನೆ. ಅಚ್ಚುಕಟ್ಟಾದ, ವೈಭವದ ವ್ಯವಸ್ಥೆ. ತಂದೆತಾಯಿ ಪರಕೀಯರಾಗುವ ಸಂದರ್ಭವಿದು. ಎಷ್ಟೋ ದಿನಗಳ ತಯಾರಿ, ಕುಟುಂಬ ವರ್ಗದವರ ಶ್ರಮ ಇವೆಲ್ಲವನ್ನು ಬಿಟ್ಟು ಮದುವೆ ಕೂಡ ಇನ್ಯಾರಿಗೋ ಸಂಪಾದನೆಯ ಮಾರ್ಗವಾಗುವ ಪಲ್ಲಟವನ್ನು ನೋಡುತ್ತೇವೆ.

'ಚಂದ್ರಗಿರಿ ತೀರದಲ್ಲಿ' ಕಾದಂಬರಿಯಲ್ಲಿ ಮುಸ್ಲಿಂ ಕುಟುಂಬಗಳಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷವನ್ನು ಉತ್ತಮವಾಗಿ ಬಿಂಬಿಸಲಾಗಿದೆ. ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ಬಂಧಿತವಾಗುವ, ಹಲವು ಸೌಲಭ್ಯಗಳಿಂದ ವಂಚಿತವಾಗುವ, ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುವ ಶಕ್ತಿಯನ್ನೇ ಕಳೆದುಕೊಂಡ ಸಂದರ್ಭಗಳನ್ನು ಗ್ರಹಿಸುತ್ತೇವೆ.

ಹೆಣ್ಣು ಮಕ್ಕಳನ್ನು ಹದಿನೆಂಟು ತುಂಬುವ ಮೊದಲೇ ವಿವಾಹ ಬಂಧನದಲ್ಲಿ ದೂಡುವುದು. ಅವರ ದೇಹ, ಮನಸ್ಸು ಜವಾಬ್ದಾರಿಗೆ ಪರಿಪಕ್ವಗೊಳ್ಳುವ ಮೊದಲೇ ವೈವಾಹಿಕ ಜವಾಬ್ದಾರಿ ಹೊರಿಸಲು ಆತುರರಾಗಿರುವುದನ್ನು ಗಮನಿಸಬಹುದು.

'ಮದುವೆಗೆ ಮೊದಲು ರಶೀದ್ ನಾದಿರಾಳನ್ನು ನೋಡಿರಲಿಲ್ಲ. ಅವನ ತಾಯಿ ಆಮಿನ ನೋಡಿದ್ದರು. ಮುಸ್ಲಿಮರಲ್ಲಿ ಮದುವೆಗೆ ಮೊದಲು ಮದುವೆಯಾಗುವ ಹೆಣ್ಣನ್ನು ನೋಡುವ ಪರಿಪಾಠವಿರಲಿಲ್ಲ. ಆಧುನಿಕತೆಯ ಪರಿಣಾಮವಾಗಿ ಇತ್ತೀಚೆಗೆ ಹುಡುಗನ ರಕ್ತಸಂಬಂಧಿಗಳಾದ ಸ್ತ್ರೀಯರು ಭಾವಿ ವಧುವನ್ನು ನೋಡುವ ಪದ್ಧತಿ ಪ್ರಾರಂಭವಾಗಿತ್ತು.'(ಚಂದ್ರಗಿರಿ ತೀರದಲ್ಲಿ, ಪುಟ ೮)

ಮುಸ್ಲಿಂ ಹುಡುಗಿಯರಿಗೆ ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುವ ಅವಕಾಶವೂ ಇರಲಿಲ್ಲ. ರಶೀದ್ ಕರೆದೊಯ್ಯಲು ಒಪ್ಪಿದರೂ, ನಾದಿರಾ ನಿಯಮಗಳಿಂದ ಹೊರಬರಲು ಬಯಸಲಿಲ್ಲ. ನಾದಿರಾಳಿಗೆ ಚಂದ್ರಗಿರಿ ದಾಟಿ ಪಾರು ಜೊತೆ ಹೋಗಲು ಸಾಧ್ಯವಾದರೂ ತಂದೆಯ ಜೊತೆ ಹೇಳದೆ ಹೋಗಲು ಆಕೆ ಒಪ್ಪುವುದಿಲ್ಲ. ಧರ್ಮದ ನಿಯಮ ಮೀರಲು, ಬಾಲ್ಯದಿಂದ ಕಲಿತ ನಿಯಮಗಳನ್ನು ಮೀರಲು ಅವಳಿಂದ ಕೊನೆಯವರೆಗೂ ಅಸಾಧ್ಯವಾಗುತ್ತದೆ.

'ಅಕ್ಕಾ, ನಿನಗೆ ಧೈರ್ಯವಿದೆಯೇ?'

'ಯಾಕೆ ಗೊಂದಲಗೊಂಡು ಕೇಳಿದಳು ನಾದಿರಾ'

'ನಿನಗೆ ಧೈರ್ಯವಿದ್ದರೆ ಈಗಿಂದೀಗಲೇ ಕಾವಳ್ಳಿಗೆ ಹೊರಟು ಹೋಗು'

'ಆಂ' ಅವಾಕ್ಕಾದಳು ನಾದಿರಾ. ಬಳಿಕ ಸಾವರಿಸಿಕೊಂಡು, 'ಅದು ಹೇಗೆ ಸಾಧ್ಯ ಜಮೀಲಾ? ಮುಸ್ಲಿಂ ಸ್ತ್ರೀಯರಿಂದ ನಿಯಮ ಮೀರಿ ನಡೆಯಲು ಸಾಧ್ಯವೇ? ನಿಯಮ ಮೀರುವವರು ಎಂದೆಂದಿಗೂ ಜಹನ್ನುಮಿನಲ್ಲಿ ಬೆಂಕಿಯಲ್ಲಿ ಸುಡಲ್ಪಡುತ್ತಾ ನರಳಬೇಕಾಗುತ್ತದೆ ಎಂದು ಮ್ಯೊಲಿಯಾರ್ ಹೇಳುವುದನ್ನು ಕೇಳಿಲ್ಲವೇ?' ಎಂದಳು. (ಚಂದ್ರಗಿರಿ ತೀರದಲ್ಲಿ, ಪುಟ ೭೫) ಧಾರ್ಮಿಕ ಭಯ ಅವಳನ್ನು ಧೈರ್ಯವಂತಳನ್ನಾಗಿ ಮಾಡಲು ಅಸಾಧ್ಯವಾಗುತ್ತದೆ. ಕೊನೆಗೂ ಆಕೆ ಪ್ರಾಣಬಿಡಬೇಕಾಗುತ್ತದೆ.

ಬಂಗಾರಣ್ಣನ ಕೃಷಿಕೆಲಸಗಳಿಗೆ ಜನರ ಕೊರತೆ ಉಂಟಾಗುತ್ತದೆ. ಹೊಸ ಕೆಲಸಗಾರರನ್ನು ಹುಡುಕಲು ಆರಂಭಿಸಿದಾಗ ವೃದ್ಧರು ಸಿಗುತ್ತಾರೆಯೇ ಹೊರತು ತರುಣರಲ್ಲ, ತರುಣರೆಲ್ಲ ಆಧುನಿಕತೆಯ ಭರಾಟೆಯಿಂದ ಅದಾಗಲೇ ಡ್ರೈವರ್, ಫಿಟ್ಟರ್ ಮೊದಲಾದ ಕೆಲಸಗಳನ್ನು ಸಂಪಾದಿಸಿ ಕೃಷಿಕೆಲಸಗಳಿಗೆ ವಿದಾಯ ಹೇಳಿದ್ದರು. ಪೇಟೆಗೆ ಹೋಗಿ ದುಡಿಯುವ ಮಂದಿ ಹೆಚ್ಚಾಗುತ್ತಾರೆ. ಪೇಟೆ ಆಕರ್ಷಿಸುವ ತಾಣವಾಗಿ ಮಾರ್ಪಡುತ್ತದೆ. ಖರ್ಚುವೆಚ್ಚಗಳು ಜಾಸ್ತಿಯಾದರೂ ತರುಣರು ಪೇಟೆಗೆ ಹೋಗಿ ದುಡಿಯುವುದನ್ನು ಕಡಿಮೆ ಮಾಡುವುದಿಲ್ಲ.

ಮದುವೆಯಾಗುವ ಗಂಡಿನಲ್ಲೂ ಹುಡುಗಿಯ ಒಪ್ಪಿಗೆ ಕುರಿತು ಪ್ರಶ್ನಿಸುವ ಮನೋಭಾವ ಇರಲಿಲ್ಲ. ಕೃಷ್ಣಯ್ಯನ ಮಗ ಶಂಕರನಿಗೆ ಹೆಣ್ಣು ನೋಡುವ ಸಂದರ್ಭದಲ್ಲಿ ಮಗನಲ್ಲಿ ವಿಚಾರಿಸುವ ಕುರಿತು ಪ್ರಸ್ತಾಪಿಸುತ್ತಾಳೆ. ಟೊಪ್ಪಿ ಶಂಭಟ್ಟರು ಆಡುವ ಮಾತುಗಳು ಬದಲಾದ ಚಿಂತನಾ ವಿಧಾನವನ್ನು ಸೂಚಿಸುತ್ತವೆ.

'ಆಗಬಹುದಯ್ಯ, ನೀವು ಈ ಕಾಲದಲ್ಲಿ ಇಷ್ಟು ಮುಂದುವರಿದಿದ್ದೀರಿ ಎಂದುಕೊಂಡಿರಲಿಲ್ಲ ನಾನು! ನನ್ನಪ್ಪನ ಕಾಲದಲ್ಲಿ ಬಿಡಿ, ಮೊನ್ನೆಮೊನ್ನೆಯ ತನಕವೂ ಮದುವೆಯಾಗುವ ಗಂಡಿನಲ್ಲಿ 'ಈ ಹುಡುಗಿ ಆದೀತಾ ನಿನಗೆ?' ಎಂದು ಕೇಳುವ ಪರಿಪಾಠವೇ ಯಾವ ಸಮುದಾಯದಲ್ಲೂ ಇರಲಿಲ್ಲ. ಹುಡುಗಿಯರನ್ನಂತೂ ದನಗಳನ್ನು 'ಬ್ಯಾರಿಗೆ ಕೊಟ್ಟ ಹಾಗೆ' (ಕಸಾಯಿಗೆ ಕೊಟ್ಟ ಹಾಗೆ) ಮದುವೆ ಮಾಡಿಕೊಟ್ಟು ಬಿಟ್ಟರೆ ಮುಗಿಯಿತು. ಮದುವೆಯಾಗಿ ಹೋದ ಮಗುವಿಗೆ ನಾವು ಏನು ಮಾಡಿದ್ದೂ ಇಲ್ಲ. ಮಾಡುವುದೂ ಇಲ್ಲ. ಅಷ್ಟೇಕೆ ನಮ್ಮಲ್ಲಿ ಹೆಣ್ಮಕ್ಕಳನ್ನು ಸ್ತ್ರೀಲಿಂಗವಾಚಕದಿಂದ ಕರೆಯುವ ಪದ್ಧತಿ ಇಲ್ಲ. 'ಅದು ಬಂತು' 'ಇದು ಹೋಯ್ತು' ಎಂದೇ ನಾವು ಹೆಣ್ಮಕ್ಕಳನ್ನು ನಪುಂಸಕದಲ್ಲಿ ಕರೆಯುವುದು!' ಎಂದರು ಗಂಭೀರವಾಗಿ.'(ಮುಖಾಂತರ, ಪುಟ ೫೪೧)

'ಐತಾಳರೇ, ನಿಮ್ಮ ಮಗನ ಜಾತಕ ಒಮ್ಮೆ ಕಳುಹಿಸಿ, ನೋಡುವ. ಅಲ್ಲದೆ ಹೋದರೆ, ನಮ್ಮ ನಾಗವೇಣಿಯ ಜಾತಕವನ್ನು ನೀವು ಕೊಂಡುಹೋಗಿ' ಎಂದರು. ಐತಾಳರಿಗೆ ಬಾಯಿಕಟ್ಟಿದಂತಾಯಿತು. ವಕೀಲರು 'ಏನು ಮಾತಿಲ್ಲ?' ಎಂದರು. 'ಅಲ್ಲ ತಮ್ಮಂಥವರಿಗೆ ವೈದಿಕ ಗೊಡ್ಡುಗಳಲ್ಲಿಂದ ಹುಡುಗನೇ?'ಎಂದರು. 'ಅದೆಲ್ಲವೂ ಹಿಂದಿನ ಕಾಲಕ್ಕಾಯಿತು. ಈಗ ಇಂಗ್ಲೀಷು ಬಂದರೆ ಆಯಿತು. ಬೇರೆ ಪುರಾಣ ಯಾರು ಕೇಳುತ್ತಾರೆ? ಈ ನಿಮ್ಮ ಹುಡುಗನಿಗೆ ನಮ್ಮ ಹುಡುಗಿಯ ಜಾತಕ ಹೊಂದಿದರೆ ಆಗಕೂಡದೆಂದಿದೆಯೇ?' ಎನ್ನಲು, ಐತಾಳರು ಹರ್ಷವನ್ನೇ ತೋರಿಸಿದರು.(ಮರಳಿ ಮಣ್ಣಿಗೆ, ಪುಟ ೧೮೬)

ವಾಸುದೇವಯ್ಯ ಹೇಳುವ ಮಾತಿನಲ್ಲಿ ಚಿಂತನೆಯ ಬದಲಾವಣೆ ಹಾಗೂ ಇಂಗ್ಲಿಷ್ ಪಾರಮ್ಯದ ಮಹತ್ವವನ್ನು ಅರಿಯಬಹುದು. ಆಧುನಿಕತೆಯ ಸಂಕೇತವಾಗಿ ಬಂದ ಇಂಗ್ಲಿಷ್ ಆರ್ಥಿಕ ಉನ್ನತಿಗೆ ದಾರಿಯಾಗಿತ್ತು. ಇಂಗ್ಲಿಷ್‌ನ ಮುಂದೆ ಜಾತಕ ದೊಡ್ಡ ಅಡ್ಡಿಯಾಗಿ ಕಾಣುವುದಿಲ್ಲ.

೧.೮. ಭೂತಾರಾಧನೆ

ಲಕನನ ಮನದಲ್ಲಿ ಭೂತಾರಾಧನೆಯ ಬಗ್ಗೆ ಹುಟ್ಟಿಕೊಂಡ ಪ್ರಶ್ನೆಗಳು ಹಲವು. ಭೂತಗಳಿಗೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲದೆ ಇರುವುದರ ಹಿಂದಿನ ಕಾರಣವೇನಿರಬಹುದು ಎಂದು ಆತ ತರ್ಕಿಸುತ್ತಾನೆ. ತನ್ನ ವಂಶಜರು ತಾವೇ ಭೂತಕಟ್ಟಲು ತೊಡಗಿದ್ದಾ ಅಥವಾ ಅಧಿಕಾರಿ ವರ್ಗದವರು ದಾಳವಾಗಿ ಬಳಸಿಕೊಂಡಿದ್ದರಾ ಎಂಬ ಜಿಜ್ಞಾಸೆ ಹುಟ್ಟುತ್ತದೆ. ತನ್ನ ಅಜ್ಜ ಮೋಂಟ ಪಂಬದ ಕೈಗಳನ್ನು ಕಳೆದುಕೊಂಡುದು, ತನ್ನ ತಂದೆಯ ಸಾವು ಎಲ್ಲವೂ ಅಧಿಕಾರ ವರ್ಗದವರ ವಿರುದ್ಧ ಸತ್ಯದ ಮದಿಪು ನೀಡಿದ ಕಾರಣ ಎಂದು ಆತ ಬಲವಾಗಿ ನಂಬುತ್ತಾನೆ.

'ಈ ಜನಪದ ಕಲೆಗಳು ಗ್ರಾಮೀಣರ ಶೋಷಣೆಯ ಉತ್ಪನ್ನಗಳು. ಮೇಲು ವರ್ಗದ ಜನರು ದಲಿತರನ್ನು ಮತ್ತು ಕೆಳವರ್ಗದವರನ್ನು ಶತಶತಮಾನಗಳಿಂದ ಶೋಷಿಸುತ್ತಾ ಬಂದಿದ್ದಾರೆ. ತಮ್ಮ ಒಟ್ಟಾರೆ ನಡವಳಿಕೆಗಳನ್ನು, ಕ್ರೌರ್ಯಗಳನ್ನು ಕಲೆ ಸಂಸ್ಕೃತಿಗಳ ಬಣ್ಣಗಾರಿಕೆ ಮತ್ತು ವೇಷಗಳನ್ನು ಮರೆಮಾಚಿ ಅವನ್ನೆ ಕುಣಿತ, ಆರಾಧನೆ, ಕಲೆ ಎಂದೆಲ್ಲಾ ಪ್ರಚಾರ

ಮಾಡುತ್ತಾ ಬಂದಿದ್ದಾರೆ. ಹಾಗಾಗಿ ಈ ಕಲೆಗಳನ್ನು ವೈಭವೀಕರಿಸುವುದು ತಪ್ಪು.'(ತೆಂಬರೆ, ಪುಟ ೧೪೦)

ಮಂಡ್ಯದ ಸಹಾಯಕ ಜಿಲ್ಲಾಧಿಕಾರಿಯಾಗಿ ಲಕನ ಹೇಳುವ ಮಾತುಗಳಿಗೆ ಪುಷ್ಟಿಯಾಗಿ ಆತನ ಜೀವನದಲ್ಲಿ ನಡೆದ ಹಲವು ಶೋಷಣೆಯ ಘಟನೆಗಳಿವೆ. ಲಕನ ಐತ ಭೂತಾರಾಧನೆಗೆ ಬಳೆ ತೊಡುವ ಕ್ರಮವನ್ನು ವಿರೋಧಿಸುತ್ತಾನೆ. ಭೂತಾರಾಧನೆಯಿಂದ ಭೂತ ಕಟ್ಟುವವನ ಶೋಷಣೆ ನಡೆಯುತ್ತದೆ ಎಂದು ಬಲವಾಗಿ ನಂಬುತ್ತಾನೆ.

ಆ. ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ

'ಚೋಮನ ದುಡಿ' ಕಾದಂಬರಿಯಲ್ಲಿ ಪರಂಪರೆಯ ಚೋಮ, ಆಧುನಿಕತೆಯ ಗುರುವನ ಮನಸ್ಥಿತಿಯನ್ನು ಗುರುತಿಸಬಹುದು. ತಾನೇ ಗದ್ದೆ ಉತ್ತು ಬೆಳೆಯಬೇಕೆಂಬ ಕನಸು ಕಂಡ ಚೋಮ ಪರಂಪರೆಯ ಮೇಲಿನ ಬಲವಾದ ನಂಬಿಕೆಯಿಂದ ಮೀರಲಾರದವನಾಗಿರುತ್ತಾನೆ. ಕೃಷಿಗಾಗಿ ಜಾತಿ ಬದಲಾಯಿಸಲು ಮುಂದಾದರೂ ಭೂತದ ಗುಡಿ ಕಂಡಾಗ ಎಚ್ಚೆತ್ತು ಹಿಂದೆ ಮರಳುತ್ತಾನೆ. ಧಣಿಯ ಮೇಲಿನ ಋಣ ಇದೆಯೆಂಬ ಬಲವಾದ ನಂಬಿಕೆ ಆತನನ್ನು ಮೀರಲು ಬಿಡುವುದಿಲ್ಲ. ಚೋಮನ ಮಗ ಗುರುವ ಧೈರ್ಯವಂತ. ಚನಿಯನಿಗೆ ಚೋಮ ಹುಡುಗಿ ನೋಡಿದ್ದಾಳೆಂಬ ಅಸೂಯೆಯಿಂದ ಮರಿಯ ಮೇಲಿನ ಪ್ರೀತಿಗೆ ಸಿಲುಕಿ ಕ್ರೈಸ್ತ ಧರ್ಮ ಅಪ್ಪಿಕೊಂಡು ಕೃಷಿಕನಾಗುತ್ತಾನೆ. ತಂದೆ ಹಾಗೂ ಕುಟುಂಬದಿಂದ ದೂರವಾಗುತ್ತಾನೆ.

ಚೋಮನಿಗೆ ಕೃಷಿ ಮಾಡಬೇಕೆಂಬ ಹಿರಿದಾಸೆಯಿದ್ದು, ಧಣಿಗಳನ್ನು ಗೇಣಿಗಾಗಿ ಕೇಳಿಕೊಂಡಾಗ ಆತನಿಗೆ ಕೊಡಬಾರದೆಂಬ ಉದ್ದೇಶ ಧಣಿಗಳಿಗೇನೂ ಇರುವುದಿಲ್ಲ. ಆದರೆ ತಾಯಿಯ ದೃಢ ಉತ್ತರದಿಂದ ಸಂಕಪ್ಪಯ್ಯ ಹಿಂಜರಿಯುತ್ತಾನೆ. ಪರಂಪರಾಗತ ನಂಬಿಕೆಗಳಿಂದ ಆತ ಎಂದೂ ಕೃಷಿಕನಾಗದೆ ಅಂತ್ಯ ಕಾಣುತ್ತಾನೆ. ಬಾಲ್ಯದಿಂದ ಬೆಳೆದು ಹೆಮ್ಮರವಾದ ನಂಬಿಕೆಯ ಕೋಟೆಯನ್ನು ಬೇಧಿಸಲಾರದೆ ಅದರೊಳಗೆ ನಲುಗಿ ಸಾಯುತ್ತಾನೆ.

ಬೆಳ್ಳಿಯೂ ಪರಂಪರೆಯನ್ನೇ ಅನುಸರಿಸುವವಳು. ಪರಂಪರೆಯನ್ನು ಮರೆತು ಆಧುನಿಕತೆಯನ್ನು ರೂಢಿಸಿಕೊಳ್ಳುವುದನ್ನು ಅವಳು ಅರಿಯಳು. ಚೋಮನಿಗೆ ಸಂಕಪ್ಪಯ್ಯ ಭೂಮಿ ಗೇಣಿಗೆ ನೀಡಲು ನಿರಾಕರಿಸಿದಾಗ ಬೆಳ್ಳಿ ಹೇಳುವ ಮಾತುಗಳು ಈ ನಿಟ್ಟಿನಲ್ಲಿ ಗಮನಾರ್ಹ.

'ಅಪ್ಪಾ, ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತೆ? ಬೇಸಾಯ ಮಾಡಬೇಕಾದರೆ, ಬ್ರಾಹ್ಮಣರಾಗಿಯೋ, ಬಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೆ? ಹಾಳಾದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು ಅಂದರೆ ಆಗುತ್ತದೆಯೇ? ಧನಿಗಳಾದರೂ ಏನು ಮಾಡುತ್ತಾರೆ? ಊರಿನ ಕಟ್ಟುಕಟ್ಟಳೆಯಿಲ್ಲವೆ? ಅದನ್ನವರು ಮಾರಿದರೆ ಅವರಿಗೆ ಯಾರೇನೆಂದಾರು?'(ಚೋಮನ ದುಡಿ, ಪುಟ ೪೪)

ಗುತ್ತಿನ ಮನೆಯ ಒಳಗಡೆ ಕೆಳವರ್ಗದ ಜನರಿಗೆ ಪ್ರವೇಶ ನಿಷಿದ್ಧವಾಗಿತ್ತು. ಮೂಲದಾಳುಗಳು ಮನೆಯ ಹೊರಗೆ ಊಟ ಮಾಡಬೇಕಾಗಿತ್ತು. 'ಉಲ್ಲಂಘನೆ' ಕಾದಂಬರಿಯಲ್ಲಿ ಸಂಕಪ್ಪ ರೈಗಳು ಅಡಿಕೆ ಮರದ ಕೊಟ್ಟಗೆಯನ್ನು ಕಟ್ಟಿದ್ದರು. ಆಳುಗಳು ಅಲ್ಲೇ ಊಟ, ವಿಶ್ರಾಂತಿ ಪಡೆಯುತ್ತಿದ್ದರು. ಸಂಕಪ್ಪಣ್ಣ ಇನ್ನೂ ಒಂದು ಹೆಜ್ಜೆ ಮುಂದುವರಿದು ಮನೆಯ ಒಳಗೆ ಊಟಕ್ಕೆ ಪ್ರವೇಶ ನೀಡುವ ಆಲೋಚನೆಯನ್ನು ಅಂಬಕ್ಕೆಯಲ್ಲಿ ಇಡುತ್ತಾರೆ. ಅಂಬಕ್ಕೆ ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸುವುದನ್ನು ಕಾಣಬಹುದು.

'ನೋಡು, ನಮಗೆ ಇನ್ನೊಂದು ಗುತ್ತಿನ ಅಥವಾ ಬೀಡಿನ ಮಾದರಿ ಬೇಡ. ನಮ್ಮ ಹಿರಿಯರು ಹೇಗೆ ಬದುಕಿ ಬಾಳಿದ್ದಾರೋ, ಆ ರೀತಿ ನಡೆದುಕೊಳ್ಳದಿದ್ದರೆ ನಮ್ಮ ದೈವ ದೇವರು, 'ಸಯಿತ್ತಿನಾಕುಳು' ಮುನಿದಾರು! ನಿನ್ನ ಗಾಂಧಿ ಸಿದ್ಧಾಂತ ಏನಿದ್ದರೂ ನಿನಗೆ ಮತ್ತು ಈ ಮನೆಯ ಹೊರಗೇ ಇರಲಿ, ಒಳಗೆ ಬೇಡ!' ಎಂದು ಕಡ್ಡಿ ತುಂಡು ಮಾಡಿದ ಹಾಗೆ ಆಡಿದ್ದರು.(ಉಲ್ಲಂಘನೆ, ಪುಟ ೨೪)

ಸಂಕಪ್ಪ ಅಂಬಕ್ಕೆಯನ್ನು ಪ್ರತಿಭಟಿಸಿ ಕೆಳವರ್ಗದವರನ್ನು ಮನೆಯ ಒಳಗೆ ಪ್ರವೇಶಿಸಲು ಸಿದ್ಧರಾದರೂ ಅಂಬಕ್ಕೆ, 'ಇದು ನನ್ನ ಮನೆ' ಎಂದಾಗ ತೀವ್ರವಾಗಿ ಕುಗ್ಗಿಹೋದರು. ಅಳಿಯಕಟ್ಟು ಸಂಪ್ರದಾಯದಲ್ಲಿ ಹೆಣ್ಣಿಗೇ ಪ್ರಧಾನ ಅಧಿಕಾರ ಇರುವ ಕಾರಣ ಗುತ್ತಿನಾರ್ ಸಂಕಪ್ಪಣ್ಣ ಮೌನವಾದರು. ಆದರೂ ಅವರು ಕೆಲವೊಂದು ಸುಧಾರಣೆಗಳನ್ನು ಗುತ್ತಿನ ಮನೆಯಲ್ಲಿ ತರುತ್ತಾರೆ. ಮೂಲದ ಆಳುಗಳು, ಕೆಲಸದಾಳುಗಳು ಗುತ್ತಿನ ಚಾವಡಿಯ ಒಳ ಪ್ರವೇಶಿಸಲು ಅನುವು ಮಾಡಿಕೊಡುತ್ತಾರೆ. ಗುತ್ತಿನ ತಾಂಬೂಲದ ಹರಿವಾಣದಿಂದ ಸುಣ್ಣ ತೆಗೆಯುವ ಅವಕಾಶ ದೊರೆಯುತ್ತದೆ. ಹಿಂದೆ ತಾಂಬೂಲದ ಹರಿವಾಣ ಸ್ಪರ್ಶಿಸುವ ಅವಕಾಶವೂ ಕೆಳಜಾತಿಯವರಿಗೆ ಇರಲಿಲ್ಲ.

ಭೂಮಸೂದೆ ಜ್ಯಾರಿಯಾದ ಮಾರನೆ ವರ್ಷ ಎಣೆಲು ಬೆಳೆಯ ಭತ್ತ ಬಡಿಯಲು ಕೆಲವೇ ಕೂಲಿಯಾಳುಗಳು ಲಭ್ಯವಾಗುವುದು. ಗುತ್ತಿನಾರ್ ಸಂಕಪ್ಪಣ್ಣ ಅವರಿಗೆ ಉದಾರತೆ ತೋರಿ ಮಾಮೂಲಿ ಗಂಜಿ, ಚಟ್ನಿಗಿಂತ, ಮೀನು ಸಾರು, ಕುಂಬಳಕಾಯಿಯ ಪಲ್ಯ, ರುಚಿಕಟ್ಟಾದ ಊಟ ನೀಡುವುದರ ಜೊತೆಗೆ ಗುತ್ತಿನ ಒಳಗೆ ಕೂರಿಸಿ ಊಟ ಹಾಕಿಸುತ್ತಾರೆ. ಅದುವರೆಗೆ ಗುತ್ತಿನ ಮನೆಯ ಒಳಗಡೆ ಕಾಲಿಡದ ಆಳುಗಳಿಗೆ ಮರ್ಯಾದೆಯ ಊಟ ನೀಡುತ್ತಾರೆ. ಸಂಕಪ್ಪಣ್ಣ ಮೇಲು-ಕೀಳು ಎಂಬ ಭಾವನೆ ಹೋಗಲಾಡಿಸಿ ಸಮಾನತೆಯ ಹಸ್ತ ಚಾಚುವುದನ್ನು ಗಮನಿಸಬಹುದು. ಅಂಬಕ್ಕೆ ಗುತ್ತಿನ ಗತ್ತನ್ನೇ ಉಳಿಸಲು ಪ್ರಯತ್ನಿಸಿದರೂ ಭೂಮಸೂದೆಯ ಹೊಡೆತದಿಂದ ಉದ್ಭವವಾದ ಕೂಲಿಯಾಳುಗಳ ಕೊರತೆಯಿಂದ ಆಕೆಗೆ ಸಂಕಪ್ಪಣ್ಣ ಮನೆಯೊಳಗೆ ಊಟ ನೀಡಿದ್ದು ಇಷ್ಟವಾಗದಿದ್ದರೂ ಆಕೆ ವಿರೋಧಿಸುವುದಿಲ್ಲ.

ಜೀವರಕ್ಷಣೆಯ ಸಂದರ್ಭದಲ್ಲಿ ಪರಂಪರಾಗತ ಮನಸ್ಸುಗಳು ಆಧುನಿಕವಾಗುವುದು ಗೋಚರವಾಗುತ್ತದೆ. ಜೀವದ ರಕ್ಷಣೆಯ ಇಕ್ಕಟ್ಟಿನ ಸಂದರ್ಭದಲ್ಲಿ ಜೀವದ ರಕ್ಷಣೆ ಮಾಡುವುದೇ ಪ್ರಧಾನ ಗುರಿಯಾಗುತ್ತದೆ. ಅದರ ಮುಂದೆ ಎಲ್ಲವೂ ಗೌಣ.

'ಪೆಲ್ಸಿಬಾಯಿಯೇ ನನ್ನಿಂದ ಸಾಧ್ಯ ಇಲ್ಲ ಎಂದು ಹೇಳಿದ ಮೇಲೆ ಆ ಮೊಗೆತ್ತಿ ಪಿಲ್ಲುವನ್ನು ಬರಹೇಳಿದೆ. ಆಕೆ 'ನಾನು ನಿಮ್ಮ ಮನೆಯೊಳಗೆ ಬರುವುದೇ ದೇವರೇ?' ಎಂದು ಮೊದಲು ಮನೆಯೊಳಗೆ ಬರಲು ಹಿಂದೇಟು ಹಾಕಿದಾಗ ನಾನು 'ಶಾಸ್ತ್ರಗೀಸ್ತ್ರ ಆಮೇಲೆ, ಜೀವ ಮುಖ್ಯ' ಎಂದು ಅವಳನ್ನು ಒತ್ತಾಯಿಸಿ ಒಳಗೆ ಕರೆಸಿಕೊಂಡೆ.'(ಮುಖಾಂತರ, ಪುಟ ೨೮೨.)

ಕೃಷ್ಣಯ್ಯನ ಮಾವ ಪರಂಪರೆಯನ್ನು ಬದಿಗಿಟ್ಟು ಕೆಳವರ್ಗದವರನ್ನು ಮನೆಯೊಳಗೆ ಕರೆಯುವ ಸಂದರ್ಭವು ಜೀವಕ್ಕಿಂತ ಯಾವುದೂ ಮುಖ್ಯವಲ್ಲ ಎಂಬ ಚಿರಸತ್ಯವನ್ನು ತಿಳಿಸುತ್ತದೆ.(ಮುಖಾಂತರ, ಪುಟ ೨೯೫) ಅಸ್ಪೃಶ್ಯತೆಯನ್ನು ಮೀರುವ ಉದಾಹರಣೆಗಳನ್ನು ಗಮನಿಸಬಹುದು.

ಇ. ಆಧುನಿಕತೆ

'ಉಲ್ಲಂಘನೆ' ಕಾದಂಬರಿಯಲ್ಲಿ ಮೂಲದಾಳುಗಳಲ್ಲಿ ಒಬ್ಬಾಕೆ 'ಬೂದೆ' ಎಂಬವಳು ರಕ್ತಕ್ಯಾನ್ಸರ್‌ನಿಂದ ಬಳಲುವಾಗ ಸಂಕಪ್ಪಣ್ಣ ರಕ್ತ ನೀಡಲು ಅಂಬಕ್ಕೆಯ ಮಗ ಸುಂದರನಲ್ಲಿ ಪ್ರಶ್ನಿಸುವಾಗ ಸುಂದರ ಒಪ್ಪುತ್ತಾನೆ. ಆದರೆ ಅಂಬಕ್ಕೆಯಲ್ಲಿ ಗೊಂದಲ ಹುಟ್ಟಿಸುತ್ತದೆ. ತಳಸಮುದಾಯದವರಿಗೆ ರಕ್ತ ಮೇಲ್ವರ್ಗದವರು ನೀಡುವುದು ಆಕೆಗೆ ಸರಿಕಾಣುವುದಿಲ್ಲ. ಆದರೆ ಆಧುನಿಕ ವಿದ್ಯಾಭ್ಯಾಸವನ್ನು ಪಡೆದ ಸುಂದರನಿಗೆ ಈ ವಿಷಯ ಗಂಭೀರವಲ್ಲ.

೧.೧. ಆಧುನಿಕ ತಂತ್ರಜ್ಞಾನ

ಜೂನ್ ೧೯೦೭ರಲ್ಲಿ ಮದ್ರಾಸಿನಿಂದ ಮಂಗಳೂರಿಗೆ ರೈಲು ಸಂಚಾರ ಆರಂಭವಾಗುತ್ತದೆ. ಉಲ್ಲಂಘನೆ ಕಾದಂಬರಿಯ ಭೋಜ ಶೆಟ್ಟಿ, ಸೀನಪ್ಪ ರೈ ಮುಂತಾದವರು ಆರಂಭದ ದಿನವೇ ರೈಲಿನಲ್ಲಿ ಪ್ರಯಾಣ ಮಾಡಿ ಹೊಸ ಅನುಭವವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಭೋಜಶೆಟ್ಟಿ ಅಡುಗೆಯ ಗೋವಿಂದಣ್ಣನಿಗೆ ಮಂಗಳೂರಿಗೆ ರೈಲಿನಲ್ಲೇ ಪ್ರಯಾಣಿಸಬಹುದೆಂಬ ಉಚಿತ ಸಲಹೆಯನ್ನು ನೀಡುತ್ತಾನೆ. ಗೋವಿಂದಣ್ಣ ಖುಷಿಯಿಂದ ರೈಲಿನಲ್ಲಿ ಹೊರಟು, ಟಿಕೆಟು ತೆಗೆಯದ ಕಾರಣ ಕುಂಡೆಗೆ ತುಳಿಸಿಕೊಂಡು ನಗೆಪಾಟಲಿಗೆ ಈಡಾಗುತ್ತಾನೆ. ಕೆಲಸ ಮುಗಿದೊಡನೆ ವಾಪಾಸು ನಡೆದುಕೊಂಡೇ ಮರಳುತ್ತಾನೆ. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲಾಗದ ಸಾಮಾನ್ಯ ಜನತೆ ಹಿಂದಿನದರಲ್ಲೇ ಭದ್ರತೆ ಕಾಣುತ್ತಾರೆ. ಹೊಸ ವ್ಯವಸ್ಥೆಯ ಹೊಸ ಸವಾಲುಗಳನ್ನು ಸುಲಭವಾಗಿ ಗ್ರಹಿಸಲು ಅವರಿಂದಾಗದೆ ಹಳೆಯ ವ್ಯವಸ್ಥೆಯೇ ತಮಗೆ ಸೂಕ್ತ ಎಂಬ ನಿರ್ಧಾರಕ್ಕೆ ಬರುತ್ತಾರೆ.

ಆಧುನಿಕತೆ ತಂದ ಸೌಲಭ್ಯಗಳು ಬಳಕೆಯಲ್ಲಿ ಸಲೀಸು; ಸೌಖ್ಯದಾಯಕ. ಅವುಗಳನ್ನು ಸ್ವೀಕರಿಸುವ ಮನಸ್ಸುಗಳು ತೊಳಲಾಟಕ್ಕೆ ಒಳಗಾಗುವುದು ಸಾಮಾನ್ಯ. ಆಧುನಿಕತೆ ರೋಮಾಂಚನ ಉಂಟುಮಾಡುವಂಥದ್ದು. ಹೊಸತನ, ದುಬಾರಿ, ಮುಂತಾದ ಹಲವು ಲಕ್ಷಣಗಳುಳ್ಳ ಆಧುನಿಕತೆ ಜನಸಾಮಾನ್ಯರಲ್ಲಿ ವಿಸ್ಮಯವನ್ನು ಉಂಟುಮಾಡುತ್ತಿದ್ದುದು ಸಾಮಾನ್ಯ, ಜೊತೆಗೆ ಇದು ನಮ್ಮ ವ್ಯಾಪ್ತಿಗೆ ಮೀರಿದ್ದು ಎಂಬ ಪ್ರಜ್ಞೆಯು ಮೂಡುತ್ತಿತ್ತು. 'ಮುಖಾಂತರ' ಕಾದಂಬರಿಯಲ್ಲಿ ಪಟೇಲ

ಮಾರಪ್ಪ ಶೆಟ್ಟರ ಕಿಸೆಗಡಿಯಾರವನ್ನು ನೋಡಲು ತವಕಿಸುವ ಭಟ್ಟರಿಗೆ ಪಟೇಲರು ಅದನ್ನು ತೋರಿಸಿ ವಿವರಿಸುತ್ತಾರೆ. ಆಧುನಿಕತೆಯು ಪರಂಪರೆಯನ್ನು ತನ್ನ ದಕ್ಷತೆಯಿಂದ ಪಲ್ಲಟಿಸುತ್ತದೆ.

'ಈ ತನಕ ನಾವೆಲ್ಲ ಗಳಿಗೆ ಲೆಕ್ಕದಲ್ಲಿ ಹಗಲು ರಾತ್ರೆಗಳನ್ನು ಅಳೆಯುತ್ತಿದ್ದವರಲ್ಲವೇ ಸ್ವಾಮಿ? ಇನ್ನು ಅದೆಲ್ಲ ಸುಲಭವಾಯಿತು ಬಿಡಿ' ಎಂದು, 'ನಮ್ಮಂಥವರಿಗೆ ಮಾತ್ರ ಇದು ಎಟಕುವುದಲ್ಲ!' ಎಂದು ನಿರಾಶೆ ತೋರಿಸಿದರು.(ಮುಖಾಂತರ, ಪುಟ ೩೦೦)

೧.೨. ಆಧುನಿಕತೆ

ತುಳುನಾಡಿಗೆ ಗಾಂಧಿ ಹಾಗೂ ಗಾಂಧಿ ವಿಚಾರಧಾರೆಗಳ ಪ್ರಭಾವದಿಂದ ಕಾಯಕ ಹಾಗೂ ಚಿಂತನೆಗಳಲ್ಲಿ ಆಧುನಿಕತೆ ಪ್ರವೇಶಿಸಿದ್ದನ್ನು 'ಗಾಂಧಿ ಬಂದ' ಕಾದಂಬರಿ ತಿಳಿಸುತ್ತದೆ. ಮಾರಪ್ಪ, ತಿಂಗಳಾಯರು, ಕಾರ್ನಾಡ್ ಸದಾಶಿವರಾವ್ ಆಧುನಿಕತೆ ಪ್ರವೇಶಿಸಲು ತೀವ್ರವಾಗಿ ಶ್ರಮಿಸಿದರು. ಇಲ್ಲಿ ಆಧುನಿಕತೆ ಎಂದಾಗ ಸಾಮಾಜಿಕ ಸುಧಾರಣೆ ಎಂಬ ಅರ್ಥ ಹುಟ್ಟಿಕೊಳ್ಳುತ್ತದೆ. ಮದ್ಯಪಾನ ನಿಷೇಧ, ಕೆಳವರ್ಗದವರಿಂದ ದೇವಸ್ಥಾನ ಪ್ರವೇಶ, ಅಸ್ಪೃಶ್ಯತಾ ನಿವಾರಣೆ, ಅಹಿಂಸೆ ಮೊದಲಾದ ಸಂದರ್ಭಗಳಲ್ಲಿ ಪರಂಪರೆ ಹಾಗೂ ಆಧುನಿಕತೆಯ ನಡುವಿನ ಸಂಘರ್ಷ ಗುರುತಿಸಲು ಸಾಧ್ಯ. ಪರಂಪರೆಯನ್ನು ಇನ್ನಷ್ಟು ಬಲಪಡಿಸುವವರಿಗೆ ಗಾಂಧಿ ರಾಕ್ಷಸನಂತೆ ಕಂಡುಬಂದರೆ ಅಚ್ಚರಿಯಿಲ್ಲ.

ಮಾರಪ್ಪ ಮಾರಿಪೂಜೆಯನ್ನು ವಿರೋಧಿಸುತ್ತಾನೆ. ಈ ವಿಷಯದಲ್ಲಿ ಸೂರಕ್ಕೆಗೂ ಮಾರಪ್ಪನಿಗೂ ಮಾತಿಗೆ ಮಾತು ಬೆಳೆದರೂ ಮಾರಪ್ಪ ಒಪ್ಪುವವನಲ್ಲ.

'ಊರಿನ ಮಾರಿಗೊಂದು ಕೋಳಿ ಕೊಡದಿದ್ದರೆ ಮಾರಿಯ ಕೆಟ್ಟ ದಿಟ್ಟಿ ನಮ್ಮತ್ತ ಬೀಳುತ್ತದೆಂದು ಸೂರಕ್ಕೆ ಮಗನಲ್ಲಿ ಗೋಗರೆದರೂ ಆತ ಕೇಳುವವನಲ್ಲ. ಆ ಪರಂಗಿಯವರೇ ನಮ್ಮನ್ನು ಕಾಡುವ ಮಾರಿಗಳು, ಅದಕ್ಕಿಂತ ದೊಡ್ಡ ಮಾರಿ ಇದೆಯಾ? ಈ ಊರ ಮಾರಿ ಓಡಿಸುವ ಬದಲು ಎಲ್ಲರೂ ಸೇರಿ ಆ ಪರಂಗಿ ಮಾರಿಯನ್ನು ಓಡಿಸಲಿ–ಎಂದು ಹೇಳಿ ಸೂರಕ್ಕೆಯ ಪಿಸುರನ್ನು ಮತ್ತಷ್ಟು ಹೆಚ್ಚಿಸುತ್ತಾನೆ.'(ಗಾಂಧಿ ಬಂದ, ಪುಟ ೨೪೨)

ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದಲ್ಲಿ ಆಧುನಿಕತೆಯೇ ಪ್ರಧಾನವಾಗಿ ಮೆರೆಯಲು ಕಾರಣವೆಂದರೆ ಅದು ನೀಡುವ ಸೌಖ್ಯ, ವೇಳೆಯ ಉಳಿತಾಯ. ವೆಂಕಪ್ಪ ಹೆಗ್ಡೆ ಪಕ್ಷಾಘಾತಕ್ಕೆ ಗುರಿಯಾಗಿ ಮಲಗಿದಾಗ, ಕೋಟೆಕ್ಕಲ್ಲಿನಿಂದ ತರಬೇಕಾದ 'ಮಹಾನಾರಾಯಣತೈಲ' ರೈಲು ಪ್ರಯಾಣದಿಂದ ಒಂದು ರಾತ್ರೆ ಬೆಳಗಾಗುವುದರೊಳಗೆ ಗುತ್ತಿನ ಮನೆಗೆ ಪ್ರವೇಶಿಸಿತ್ತು. ಇಲ್ಲವಾದರೆ ನಡೆದುಹೋಗಲು ಹದಿನೈದು ದಿನಗಳು ಬೇಕಾಗಿದ್ದವು.

ಪರಂಪರೆಯನ್ನು ಪಾಲಿಸುವಾಗ ಸಂದಿಗ್ಧ ಪರಿಸ್ಥಿತಿಗಳಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುತ್ತಿದ್ದರು. ಇಂದು ವಿದ್ಯಾವಂತರಿಗೆ ಮೊದಲ ಮಾನ್ಯತೆಯಾದರೆ, ಹಿಂದೆ ವಯಸ್ಸಿನಲ್ಲಿ ಹಿರಿಯರಿಗೆ ಮರ್ಯಾದೆ ಸಿಗುತ್ತಿತ್ತು.

ಆಧುನಿಕತೆ ಮಡಿಮೈಲಿಗೆ, ಸ್ಪೃಶ್ಯ, ಅಸ್ಪೃಶ್ಯ ಎಂಬ ಭೇದವನ್ನು ಹೊಡೆದುಹಾಕುತ್ತದೆ. ಗುತ್ತಿನ ಚಾವಡಿಯ ಒಳಗೆ ಅಸ್ಪೃಶ್ಯರು ಪ್ರವೇಶಿಸಬಾರದು ಎಂಬ ನಿಷೇಧ ಆಧುನಿಕ ಸಾಧನಗಳಾದ ಬಸ್ಸು, ರೈಲುಗಳಿಗೆ ಅನ್ವಯವಾಗುವುದಿಲ್ಲ. ಬಸ್ಸು ಪ್ರಯಾಣ, ರೈಲು ಪ್ರಯಾಣ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಶ್ರಮಿಸಿತು.

ನಾ.ಮೊಗಸಾಲೆಯವರ 'ಮುಖಾಂತರ' ಕಾದಂಬರಿಯಲ್ಲಿ ಗೋವಿಂದಾಚಾರ್ಯರ ತಂದೆ ಹಯಗ್ರೀವಾಚಾರ್ಯರು ಅಸೌಖ್ಯದಿಂದ ನರಳುತ್ತಿರುವಾಗ ಮನೆಯ ಒಳಗೆ ಶೌಚಾಲಯ ಇದ್ದರೆ ಒಳ್ಳೆಯದಿತ್ತು ಎಂಬ ಸೌಲಭ್ಯಾಕಾಂಕ್ಷೆ ಮನೆಯವರಲ್ಲಿ ಮೂಡುತ್ತದೆ. ಮಡಿ, ಹೇಸಿಗೆ ಎಂಬ ಕಾರಣ ನೀಡಿ ಮನೆಯ ಒಳಗೆ ಕಕ್ಕಸು ಕಟ್ಟುವುದನ್ನು ವಿರೋಧಿಸಿದ ಹಿರಿಯರಿಗೆ ಗೋವಿಂದಾಚಾರ್ಯರು ನೀಡುವ ಉತ್ತರ ಯಾವುದು ಮುಖ್ಯ ಎನ್ನುವುದನ್ನು ವಿವರಿಸುತ್ತದೆ.

'ಮನೆಯೊಳಗೇ ಕಕ್ಕಸು ಮಾಡಿಸೋಣ ಅಂದೆ. ನೀವೂ ಕೇಳಲಿಲ್ಲ ಅವರೂ ಕೇಳಲಿಲ್ಲ. ಅದು ಮಡಿಯಲ್ಲ; ಹೇಸಿಗೆ ಬೇರೆ ಅಂದಿರಿ. ಈಗೆಲ್ಲ ಪ್ರತಿ ಮನೆಯಲ್ಲೂ ಕಕ್ಕಸು ಎನ್ನುವುದು ಪ್ರತಿ ಕೋಣೆಗಳಲ್ಲೂ ಇರುತ್ತದೆ. ಮಿಕ್ಸಿ, ಗ್ರೈಂಡರ್‌ಗೆ ಮಡಿಮೈಲಿಗೆ ಉಂಟಾ? ಹಾಗೇ ಇಂಥ ಸೌಕರ್ಯವನ್ನೆಲ್ಲ ಬಳಸಿಕೊಳ್ಳದಿದ್ದರೆ ನಾವು ಬದುಕುವುದು ಕಷ್ಟ!' ಎಂದರು.(ಮುಖಾಂತರ, ಪುಟ ೩೮)

ಪ್ರತಿ ವ್ಯಕ್ತಿಯ ಮನದಲ್ಲೂ ಬಾಲ್ಯದ ಜೀವನ ಬಹಳ ಆಳವಾದ ಪ್ರಭಾವವನ್ನು ಬೀರಿರುತ್ತದೆ. ಬಾಲ್ಯದ ಅನುಭವಗಳು ನೈಜವಾದದ್ದು ಎಂಬ ನಂಬಿಕೆ ದೃಢವಾಗಿ ಬೇರೂರಿರುತ್ತದೆ. ಈ ಪ್ರಭಾವಗಳು ಅದೆಷ್ಟು ಗಾಢವಾಗಿರುತ್ತದೆಂದರೆ ಬದಲಾವಣೆಗಳನ್ನು ಸುಲಭದಲ್ಲಿ ಒಪ್ಪಿಕೊಳ್ಳಲು, ಒಗ್ಗಿಕೊಳ್ಳಲು ಕಷ್ಟವೆನಿಸುತ್ತದೆ. ಕೆಲವರು ಆಧುನಿಕತೆಯನ್ನು ಸುಲಭವಾಗಿ ಒಪ್ಪಿಕೊಳ್ಳುತ್ತಾ, ಅದರ ಸೌಖ್ಯವನ್ನು ತಮ್ಮದಾಗಿಸಿಕೊಂಡರೆ, ಇನ್ನು ಕೆಲವರು ಪರಂಪರೆಯೇ ಸರಿ. ಅದರಂತೆಯೇ ಬದುಕಬೇಕು ಎಂಬ ಪ್ರಜ್ಞೆ ಆಳವಾಗಿ ಮೂಡಿದ್ದು ವಿಪರೀತ ತೊಳಲಾಟವನ್ನು ಅನುಭವಿಸುವುದು ಸಾಮಾನ್ಯ. ಮುತ್ತುಭಟ್ಟರು ಆಧುನಿಕತೆಯನ್ನು ಅಪ್ಪಿಕೊಳ್ಳುವುದಕ್ಕೆ ಉದಾಹರಣೆಯಾದರೆ, ಬಂಗಾರಣ್ಣ ಪರಂಪರೆಯ ಒಲವು ಒಳ್ಳವರು.

'ನನಗೂ ಈಗ ಅರುವತ್ತೆರಡು ಆಯಿತು ನೋಡಿ, ನಿಮ್ಮ ಹಾಗೆಯೇ ನಾನು ಯೋಚಿಸುವುದಾದರೆ, ನಾನೂ ಬದುಕಿ ಮಾಡಲಿಕ್ಕೆ ಏನುಂಟು ಹೇಳಿ? ಆದರೂ ನಿಮ್ಮಂಥ ಹಿರಿಯರು ನಮ್ಮ ಕಣ್ಣ ಮುಂದೆ ಇದ್ದರೆ ನಮ್ಮ ಪರಂಪರೆಯ ಬಗ್ಗೆ, ಸಂಸ್ಕೃತಿ ಬಗ್ಗೆ ನಾವೇನಾದರೂ ಅಷ್ಟು ಇಷ್ಟು ತಿಳಿದುಕೊಳ್ಳಬೇಕೆನಿಸಿದಾಗ ಮಾಹಿತಿಯಾದರೂ ಸಿಗುತ್ತದಲ್ಲ? ಎಂದರು.'(ಮುಖಾಂತರ, ಪುಟ ೪೩೭) ಬಂಗಾರಣ್ಣ ಹಯಗ್ರೀವಾಚಾರ್ಯರಲ್ಲಿ ಹೇಳುವ ಈ ಮಾತುಗಳು ಅವರು ಪರಂಪರೆಯ ಒಲವು ಇರುವವರು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನ ಮನೆಗೆ ಕಕ್ಕಸು ಕಟ್ಟಿಸುವ ಸಂದರ್ಭ ತೀವ್ರ ಗೊಂದಲವನ್ನು ಅಂಬಕ್ಕೆಯಲ್ಲಿ ಹುಟ್ಟಿಸುತ್ತದೆ. ಮನೆಯ ಒಳಗೆ 'ಕಮೋಡು' ಮಾಡುವುದು ಸರಿಯಲ್ಲ ಎಂಬ ಭಾವನೆ. ಆದರೆ ಕೊನೆಗೂ ಗುತ್ತಿನ ಮನೆಯ ವಾಸ್ತುವಿನ ಪರಿಧಿಯ

ಹೊರಗಡೆ ಬರುವಂತೆ ಆಧುನಿಕ ಕಮೋಡು ಪ್ರವೇಶಿಸುತ್ತದೆ. ಬಾಲ್ಯದಿಂದಲೇ ರೂಢಿಗತವಾದ ಮೌಲ್ಯಗಳು ವ್ಯಕ್ತಿಯ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಪ್ರೌಢ ವಯಸ್ಕನಾದ ವ್ಯಕ್ತಿಗೆ ಸುಲಭವಾಗಿ ತಾನು ಕಲಿತ ಕೆಲಸ, ನಂಬಿದ ಮೌಲ್ಯಗಳು, ಆಚರಿಸಿದ ಆಚರಣೆಗಳನ್ನು ಮರೆಯಲು ಅಸಾಧ್ಯ ಎನಿಸುತ್ತದೆ. ಶಿಕ್ಷಿತರಾದವರು, ತಿಳುವಳಿಕಸ್ಥರು ಆಧುನಿಕತೆಯನ್ನು ನೆಚ್ಚಿಕೊಂಡರೆ ಅಶಿಕ್ಷಿತ ಸಮುದಾಯ ಪರಂಪರೆಯ ಮೇಲೆ ಹೆಚ್ಚಿನ ಒಲವು ಇರುವವರು ಅದಕ್ಕೆ ಅಂಟಿಕೊಂಡು ಬಿಡುತ್ತಾರೆ. ಪರಂಪರೆ ಹಾಗೂ ಆಧುನಿಕತೆಯ ಮನೋಸ್ಥಿತಿ ಉಳ್ಳವರ ನಡುವೆ ಸಂಘರ್ಷ ಏರ್ಪಡಿಸುತ್ತದೆ. ಒಂದೇ ಕುಟುಂಬದಲ್ಲಿದ್ದು ತೀವ್ರ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದನ್ನು ಕಾಣಬಹುದು. ಉಲ್ಲಂಘನೆಯಲ್ಲಿ ಈ ಸಂಘರ್ಷ ಹಲವು ಬಾರಿ ಅಭಿವ್ಯಕ್ತಗೊಂಡಿದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನ ಮನೆ ಸಾಂಪ್ರದಾಯಿಕವಾಗಿ ವೈಭವದಿಂದ ಕೂಡಿದ ಮನೆ. ಆಧುನಿಕತೆಯು ತೀವ್ರವಾಗಿ ಪ್ರವೇಶಿಸುತ್ತಿದ್ದ ಹಾಗೆ ಗುತ್ತಿನ ಮನೆಯ ಪರಂಪರೆಯ ಚಿತ್ರಣ ಬದಲಾಗುತ್ತಾ ಹೋಯಿತು. ಸೋಫಾ ಸೆಟ್, ಬಿದಿರಿನ ಬಿಳಲಿನ ಕುರ್ಚಿಗಳು, ಟೀಪಾಯಿ, ಗೋಡೆ ಗಡಿಯಾರ, ಮರ್ಫಿ ರೇಡಿಯೋ ಇವೆಲ್ಲವೂ ಗುತ್ತಿನ ಮನೆ ಪ್ರವೇಶಿಸುತ್ತದೆ. ಈ ಆಧುನಿಕತೆಯನ್ನು ಒಪ್ಪಿಕೊಂಡ ಅಂಬಕ್ಕೆ ನಿಧಾನವಾಗಿ ಆಧುನಿಕತೆಯನ್ನು ಅಪ್ಪಿಕೊಂಡು ಸಾಗುವುದನ್ನು ಹಲವು ಸಂದರ್ಭಗಳಲ್ಲಿ ಗಮನಿಸಬಹುದು.

ಈ. ಶಿಕ್ಷಣ ಹಾಗೂ ಆರ್ಥಿಕ ಸುಭದ್ರತೆ

ಲಚ್ಚನನ್ನು ಶಾಲೆಗೆ ಸೇರಿಸುವ ಸಂದರ್ಭದಲ್ಲಿ ಪರಂಪರೆ ಹಾಗೂ ಆಧುನಿಕತೆಯ ಸಂಘರ್ಷವನ್ನು ಕಾಣಬಹುದು. ಸರಸ್ರೋತಿ, ಶಂಕರ ಐಗಳ ಮಠಕ್ಕೆ ಸೇರಿಸುವ ಆಸಕ್ತಿ ತೋರಿದರೆ, ರಾಮ ಐತಾಳರು ಇಂಗ್ಲಿಷ್ ಶಾಲೆಗೆ ಸೇರಿಸಲು ಮನಸ್ಸು ಮಾಡುತ್ತಾರೆ. ಎಂಟು ಅಷ್ಟಕ ಅಧ್ಯಯನ ಮಾಡಿ ಪೌರೋಹಿತ್ಯ ಮಾಡಬಹುದು ಎಂದು ಸರಸೋತಿ ವಿಚಾರ ಮಂಡಿಸಿದರೆ, ರಾಮ ಐತಾಳರಿಗೆ ವಕೀಲನಾಗಿ ಮಗ ಹಣ ಮಾಡಿದರೆ? ಎಂಬ ಚಿಂತನೆ ಮನದಲ್ಲಿ ಮೂಡುತ್ತದೆ. ಕೊನೆಗೂ ಲಚ್ಚನಿಗೆ ಇಂಗ್ಲಿಷ್ ಕಲಿಯಲು ಮಾವನ ಮನೆಯಿಂದಲೂ ಭರವಸೆ ದೊರೆತು ಆತ ಶಾಲೆಗೆ ಸೇರುತ್ತಾನೆ. ಶಂಕರ ಐಗಳು ಒಬ್ಬ ಹುಡುಗ ತಪ್ಪಿದ ಸಿಟ್ಟಿನಲ್ಲಿ ಹಂಗಿಸಲು ಆರಂಭಿಸುತ್ತಾರೆ.

'ನಾನು, ಇನ್ನೂ ನಾಲ್ಕು ಹೊಡೆಮಂಚಗಳನ್ನು ತರಿಸಿ ಹಾಕಿ, ನಾಲ್ಕು ಜಾತಿಗಳನ್ನು ಒಟ್ಟಿಗೆ ಬೆರೆಸಲು ಕಲಿಯಬೇಕಾಯಿತು; ಸೆಟ್ಟರಾದರೆ ಸೆಟ್ಟರು; ಭಟ್ಟರಾದರೆ ಭಟ್ಟರು! ಸಕ್ಕೋಟ ದೊಡ್ಡಿಯನ್ನು ಮಾಡಿ, ಮಕ್ಕಳನ್ನು ಮೇಯಿಸುವುದೇ!' ಎಂಬ ನಿರಾಶೆಯ ಧ್ವನಿಯನ್ನು ಹೊರಡಿಸುತ್ತಾ ಮನೆಯ ಹಾದಿಯನ್ನು ಹಿಡಿದರು.'(ಮರಳಿ ಮಣ್ಣಿಗೆ, ಪುಟ ೧೩೬)

'ಸರಸೋತಿಯು ಅಣ್ಣಾ, ಲಚ್ಚ ಓದಿದ್ದು ಸಾಕು. ಅಲ್ಲಿ ಪಡುಮುನ್ನೂರಿನವರು ಹುಚ್ಚುಕಟ್ಟಿಸಿ ಇಂಗ್ಲೀಷು ಇಂಗ್ಲೀಷು ಅಂದರೆ-ನೀನೂ ಹಾಗೆಯೇ ಕುಣಿಯಬೇಡ. ನಾಳೆ ನಿನ್ನ ಕುಟುಂಬದ ಕೆಲಸ ಬಿಡಲಿಕ್ಕೆ ಬಂದೀತೆ! ನಿನ್ನ ಕುಲದವರನ್ನು ಪುರೋಹಿತಿಕೆಗೆ ನಂಬಿದವರ

ಗತಿಯೇನು? ಅವರಲ್ಲಿ ಒಂದು ಶ್ರಾದ್ಧ ಒಂದು ಮದುವೆಯಾದರೆ ಇನ್ನು ಮುಂದೆ ಹೋಗಬೇಕು ಯಾರು....?ಎಂದು ಗದರಿಸಿದಳು.'(ಮರಳಿ ಮಣ್ಣಿಗೆ, ಪುಟ ೧೪೦.)

ಐತಾಳರಿಗೆ ಎಲ್ಲ 'ದಕ್ಷಿಣೆ ಬ್ರಾಹ್ಮಣ' ಎಂದು ಹಿಂದಿನಿಂದ ಅಪಹಾಸ್ಯ ಮಾಡುವುದರ ಬಗ್ಗೆ ಖೇದವಿದೆ. ಶೀನಮಯ್ಯ ಮತ್ತು ಶಂಕರ ಐಗಳ ಉಪಹಾಸಗಳಿಗೆ ಉತ್ತರ ನೀಡಬೇಕೆಂಬ ಹಂಬಲವೂ ಇದೆ.

'ಕರಾವಳಿ' ಕಾದಂಬರಿಯಲ್ಲಿ ಹಡಗನ್ನು ಮೊದಲ ಬಾರಿ ಸಮುದ್ರದಲ್ಲಿ ಇಳಿಸುವ ಮುನ್ನ ರಂಪನಿ ಬಲೆಯವರು ಪ್ರಾಣಿಬಲಿ ಕೊಡುತ್ತಿದ್ದರು. ಪಾರಂಪರಿಕ ಮನೋಭಾವವಹಿರಿಯರು ಹೊಸ ಹಡಗು 'ಜಲದುರ್ಗೆ'ಗೆ ಏಳು ಕುರಿಗಳನ್ನು ಬಲಿಕೊಟ್ಟಿದ್ದರು. ಇದು ಶಿಕ್ಷಣ ಪಡೆದ ಆಧುನಿಕ ಯುವಕ ಸಂಜೀವನಿಗೆ ಸರಿಕಾಣುವುದಿಲ್ಲ.

೧.೧. ಶಿಕ್ಷಣದಿಂದ ಆರ್ಥಿಕ ಸ್ವಾವಲಂಬನೆ

'ಉಲ್ಲಂಘನೆ' ಕಾದಂಬರಿಯಲ್ಲಿ ಅಂಬಕ್ಕೆಯ ವಿವಾಹವು ಅದ್ದೂರಿಯಾಗಿ ನಡೆದಿತ್ತು. ದಿಬ್ಬಣ ಹೋಗುವುದು, ವಿಧಿವಿಧಾನಗಳು ಅದರದ್ದೇ ಸೌಂದರ್ಯ ಹೊಂದಿದ್ದವು. ಆಕೆಯ ಮಗ ರಂಜಿತ್‌ನ ಕಾಲಕ್ಕೆ ತಂದೆ ತಾಯಿ ಇಲ್ಲದೆ ಮದುವೆ ನಡೆಯುತ್ತದೆ. ತನ್ನಿಷ್ಟದ ಅನ್ಯಜಾತಿಯ ಹುಡುಗಿಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ವರದಕ್ಷಿಣೆ ಸ್ವೀಕರಿಸುವುದಿಲ್ಲ. ಇವೆಲ್ಲವೂ ಅಂಬಕ್ಕೆಯಲ್ಲಿ ಹಲವು ಪ್ರಶ್ನೆಗಳನ್ನು, ನೋವನ್ನು ಹುಟ್ಟಿಸುತ್ತದೆ.

ಶಿಕ್ಷಣದಿಂದ ಪಡೆದ ಆರ್ಥಿಕ ಸ್ವಾವಲಂಬನೆ ತಂದೆ ತಾಯಿಯ ಅನುಮತಿಯ ಅಗತ್ಯವಿಲ್ಲ ಎಂಬ ಮನೋಭಾವನೆ ಹುಟ್ಟಿಸಿರಲು ಸಾಧ್ಯ.

"ಕಾಲ ಬದಲಾಗಿದೆ ಅಂಬಾ. ಈಗ ನಿನ್ನನ್ನು ಮಂಜಿಲ್‌ನಲ್ಲಿ ಕುಳಿತುಕೋ ಅಂದರೆ ನೀನು ಸಿದ್ಧಳಿದ್ದೀಯಾ? ನಿನ್ನ ಮದುವೆಯ ದಿಬ್ಬಣವು ನಲುವತ್ತು ಎತ್ತಿನ ಗಾಡಿಯಲ್ಲಿ ನಮ್ಮ ಮನೆಗೆ ಬಂದಿತ್ತು. ಈಗ ಎತ್ತಿನ ಗಾಡಿ ಅಲ್ಲ; ನಲುವತ್ತು ಬಸ್ಸು ಮಾಡಿ ದಿಬ್ಬಣ ಮಾಡುವ ಕಾಲ."(ಮುಖಾಂತರ, ಪುಟ ೩೩೨) ಅಂಬಕ್ಕೆಯ ಗಂಡ ಸದಾಶಿವ ಹೇಳುವ ಈ ಮೇಲಿನ ಮಾತುಗಳು ಆಕೆಯಲ್ಲಿ ಚಿಂತನೆಯನ್ನು ಹುಟ್ಟಿಸುತ್ತವೆ.

೧.೨. ಶಿಕ್ಷಣ ಮಾಧ್ಯಮ

'ಉಲ್ಲಂಘನೆ' ಕಾದಂಬರಿಯಲ್ಲಿ ಶಿಕ್ಷಣ ಮಾಧ್ಯಮವಾಗಿ ಭಾಷೆಯ ಗೊಂದಲವನ್ನು ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದಲ್ಲಿ ಚರ್ಚಿಸಬಹುದು. ಸ್ವಾತಂತ್ರ್ಯಪೂರ್ವಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದ ಮಠಗಳು ಇಂಗ್ಲಿಷ್ ಭಾಷೆಯನ್ನು ಬೋಧಿಸುವುದು ಒಂದು ಮುಖವಾದರೆ, ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಾ ಇಂಗ್ಲಿಷ್ ಶಾಲೆಗಳು ರಾರಾಜಿಸುವುದು ಇನ್ನೊಂದು ಬಗೆ. ಸಿರಿಗನ್ನಡ ಶಾಲೆಗೆ ಪ್ರತಿಸ್ಪರ್ಧಿಯಾಗಿ ಬೆಳೆದ ನಿತ್ಯಾನಂದ ಎಜ್ಯುಕೇಷನ್ ಟ್ರಸ್ಟ್ ಇಂಗ್ಲಿಷ್ ಮಾಧ್ಯಮ ಶಾಲೆ ಜನರಿಂದಲೂ ಅಪಾರ ಮನ್ನಣೆಯನ್ನು ಪಡೆಯುತ್ತದೆ. ಬಂಗಾರಣ್ಣನ ಬಗ್ಗೆ ಜನರಿಗೆ ಅಪಾರ ನಂಬಿಕೆ, ಗೌರವಗಳಿದ್ದರೂ ಇಂಗ್ಲಿಷ್

ಮಾಧ್ಯಮದ ಶಾಲೆಗಳಿಂದ ಮಾತ್ರ ಮಕ್ಕಳ ಭವಿಷ್ಯ ಉಜ್ವಲವಾಗಬಹುದೆನ್ನುವ ನಂಬಿಕೆ ಮೊಳೆತಿರುತ್ತದೆ. ಸ್ವತಃ ಬಂಗಾರಣ್ಣನ ಸೊಸೆಗೆ ತನ್ನ ಮಗ ಶಂಕರನನ್ನು ಆಂಗ್ಲಮಾಧ್ಯಮದ ಶಾಲೆಗೆ ಸೇರಿಸಬೇಕೆಂಬ ಬಯಕೆ ಇರುತ್ತದೆ. ಆದರೆ ತಮ್ಮದೇ ಶಾಲೆಗೆ ಕಳುಹಿಸದೆ ಇಂಗ್ಲಿಷ್ ಶಾಲೆಗೆ ಕಳುಹಿಸಿದರೆ ಸರಿಹೋಗದು ಎಂಬ ದ್ವಂದ್ವದಿಂದ ಆಕೆ ಎದುರಾಡುವುದಿಲ್ಲ. ಆದರೆ ಆಕೆಯ ಆಲೋಚನೆಯನ್ನು ಗೋವಿಂದಾಚಾರ್ಯರಲ್ಲಿ ತೆರೆದಿಡುತ್ತಾಳೆ.

'ಗೋವಿಂದಣ್ಣ, ನಮ್ಮ ಶಂಕರನನ್ನು ಬರುವ ವರುಷ ಬೆಂಗಳೂರಿನಲ್ಲೇ ಓದಿಸಿ ಎನ್ನುತ್ತಿದ್ದಾರೆ ಮೊನ್ನೆ ನಮ್ಮಲ್ಲಿಗೆ ಬಂದ ಇವರ ಸೋದರ ಸಂಬಂಧಿ ಶ್ರೀನಿವಾಸ! ನನಗೂ ಅದು 'ಹೌದು' ಅನಿಸಿದೆ. ಕನ್ನಡ ಮೀಡಿಯಮ್ಮಿನ ಶಾಲೆ ನಮ್ಮದು ಎಂದು ನಾನು ಅವನನ್ನು ಇಲ್ಲಿ ಓದಿಸಿದ್ದು ತಪ್ಪು ಎಂದು ಈಗ ನನಗೂ ಅನಿಸಿದೆ. ನಾಳೆ ಈ ಭೂಮಿ ಈ ಕೃಷಿ ಬೇಕು ಎಂಬ ಭಾವ ನಮಗೆ ಇದ್ದರೂ ನಾಳೆ ಅವನು ಇಲ್ಲಿ ಕುಳಿತುಕೊಳ್ಳುತ್ತಾನಾ ಹೇಳಿ?'(ಮುಖಾಂತರ, ಪುಟ ೫೭೦)

ಕೃಷಿ ಮತ್ತು ಕನ್ನಡ ಮಾಧ್ಯಮವಾಗಿ ಶಿಕ್ಷಣ ಎರಡೂ, ಜನರಿಂದ ದೂರ ಸರಿಯಲ್ಪಡುವುದನ್ನು ಕಾಣಬಹುದು. ಕೃಷಿಗಿಂತ ಜನರು ಇತರ ಉದ್ಯೋಗಳನ್ನು ಹೊಟ್ಟೆ ಹೊರೆಯುವುದಕ್ಕಾಗಿ ಅವಲಂಬಿಸುತ್ತಾರೆ.

ಉ. ಕಾನೂನು

೧.೧. **ಭೂಸುಧಾರಣೆ**

ಭೂಮಸೂದೆ ಜಾರಿಯಿಂದಾಗಿ ತುಳುನಾಡಿನಲ್ಲಿ ಆಗುವ ಗೊಂದಲಗಳನ್ನು ಕಾದಂಬರಿ ಬಿಚ್ಚಿಡುತ್ತದೆ. ತುಳುನಾಡಿನಲ್ಲಿ ತಂದೆಯಿಂದ ಮಕ್ಕಳಿಗೆ ಭೂಮಿಯ ಹಕ್ಕು ಬರುವ ಸಂಪ್ರದಾಯ ತುಂಬಾ ಕಡಿಮೆ. ಆದ್ದರಿಂದ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಭೂಮಿ ಹೆಣ್ಣಿಗೆ ಅಥವಾ ಸೋದರಳಿಯನಿಗೆ ಲಭ್ಯವಾಗುತ್ತಿತ್ತು. ಕಾನೂನು ಪ್ರಕಾರ ಅಳಿಯಕಟ್ಟು ಸಂಪ್ರದಾಯ ಇಲ್ಲ. ಇದರಿಂದ ಕೆಲವು ಕುಟುಂಬಗಳಿಗೆ ಅನ್ಯಾಯವೂ ಆಗಿ ಭೂಮಿ ಲಭ್ಯವಾಗದಿರುವ ಸಂದರ್ಭವನ್ನು ಕಾದಂಬರಿ ಚಿತ್ರಿಸುತ್ತದೆ.

ಅಂಬಕ್ಕೆ ಗುತ್ತಿನ ಯಜಮಾನಿ ಎಂದು ತನ್ನನ್ನು ತಾನೇ ಒಪ್ಪಿಕೊಂಡವಳು. ತನ್ನ ಮಗಳು ಶಾರದೆಯಲ್ಲೂ ಅದನ್ನೇ ಬಯಸುತ್ತಾಳೆ. ಆದರೆ ಅಂಬಕ್ಕೆ ಈ ಪರಂಪರೆ ತೊರೆದು ಗಂಡನ ಜೊತೆ ಬೊಂಬಾಯಿಯಲ್ಲಿ ವಾಸವಿರುತ್ತಾಳೆ. ಮಾತೃಪ್ರಧಾನ ವ್ಯವಸ್ಥೆಯ ಪ್ರಕಾರ ಹೆಣ್ಣು ತನ್ನ ತವರು ಮನೆಯಲ್ಲಿ ಇರಬೇಕಾದದ್ದು ರೂಢಿ. ಆಕೆಯ ಗಂಡ ಅಲ್ಲಿ ಹೋಗಿ ಬರಬೇಕಾಗಿತ್ತು. ಶಾರದೆ ಗುತ್ತಿನ ಮನೆಯಲ್ಲಿ ಹೆಚ್ಚು ನಿಂತವಳೇ ಅಲ್ಲ.

ಊ. ಇತರ ವಿಷಯಗಳು

ಶಾರದೆ ಓದುವ ಸಂದರ್ಭದಲ್ಲೂ ಅಂಬಕ್ಕೆ ಕಾಲೇಜು ಮೆಟ್ಟಿಲು ಹತ್ತಲು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಸಂಕಪ್ಪಣ್ಣ ಶಾರದೆಯನ್ನು ಕಾಲೇಜು ಮೆಟ್ಟಿಲು ಹತ್ತಿಸಿಬಿಡುತ್ತಾರೆ.

ಅಂಬಕ್ಕೆಯ ಮಗ ರಂಜಿತ್‌ನ ಪತ್ನಿ ಸ್ಮಿತಾ ಜುಮಾದಿ ಭೂತದ ಮೊಗವಾಡವನ್ನು ಸ್ಪರ್ಶಿಸಲು ಹೋದಾಗ ಅಂಬಕ್ಕೆ ವಿರೋಧಿಸುತ್ತಾಳೆ.

"ಜುಮಾದಿ ಅಂದರೆ ಹೆಣ್ಣು ದೈವ ಅನ್ನುತ್ತೀರಿ ನೀವು. ಆದರೆ ಹೆಣ್ಮಕ್ಕಳೇ ಆಕೆಯ ಮೊಗವಾಡವನ್ನು ಮುಟ್ಟಬಾರದು ಎಂದರೆ ಏನರ್ಥ?"(ಉಲ್ಲಂಘನೆ, ಪುಟ ೪೨೫)ಎಂದು ಸ್ಮಿತಾ ಪ್ರಶ್ನಿಸಿದಾಗ ಅಂಬಕ್ಕೆಗೆ ಅದು ಸರಿಯೆನಿಸಲಿಲ್ಲ.

ಗುತ್ತಿನ ಮದುವೆಗೆ ಸಂಬಂಧ ಬಂದಾಗ ಹುಡುಗ ಚೆನ್ನಾಗಿದ್ದಾರೆ, ಮದುವೆ ಆಗಬಹುದು ಎಂದು ಭೋಜ ಶೆಟ್ಟಿ ಹೇಳಿದಾಗ, ಸಂಕಪ್ಪ ನೀಡುವ ಉತ್ತರ ಆಧುನಿಕ ಮನೋಭಾವವನ್ನು ಸೂಚಿಸುತ್ತದೆ. "ಹುಡುಗ ಒಪ್ಪಿದ ಹಾಗೆ ಹುಡುಗಿಯೂ ಒಪ್ಪಬೇಕು ಈ ಕಾಲದಲ್ಲಿ!"(ಉಲ್ಲಂಘನೆ, ಪುಟ ೪೨೯)

ಬಂಟರ ಮನೆತನದಲ್ಲಿ ಗುತ್ತಿನ ಮನೆಯ ಹುಡುಗಿಯ ವಿವಾಹಕ್ಕೆ ಗುತ್ತಿನ ಹುಡುಗರನ್ನೇ ಆರಿಸಲಾಗುತ್ತಿತ್ತು. ಶಾರದೆ ಹೋಟೆಲ್ ಉದ್ಯಮಿಯನ್ನು ವಿವಾಹವಾಗುತ್ತಾಳೆ. ಗುತ್ತಿನವರು ಮಾತ್ರ ದೊಡ್ಡವರು ಎಂಬ ಕಲ್ಪನೆಯು ನಾಶವಾಗುತ್ತಾ ಹೋಗುವ ಸ್ಥಿತಿ, ಅದು ಬದಲಾದ ಕಾಲಘಟ್ಟದಲ್ಲಿ ನವ ಉದ್ಯಮಗಳಲ್ಲಿ ತೊಡಗಿಸಿಕೊಂಡು ಶ್ರೀಮಂತರನ್ನು ವಿವಾಹವಾಗುವ ಪಲ್ಲಟ ಕಾಣಸಿಗುತ್ತದೆ. ಅಂಬಕ್ಕೆಗೆ ದಿಬ್ಬಣ ಹೊರಡಿಸಿ ಅದ್ದೂರಿಯಾಗಿ ಮದುವೆ ಮಾಡಬೇಕೆಂಬ ಆಸೆ ಇತ್ತು. ಮದುವೆ ಕಲ್ಯಾಣ ಮಂಟಪದಲ್ಲಿ ನಡೆಸುವುದು ಎಂದು ತೀರ್ಮಾನವಾಗುತ್ತದೆ.

ಗಂಡ ಹೆಂಡತಿ ಒಟ್ಟಿಗೆ ಕುಳಿತುಕೊಳ್ಳುವುದು, ನಗುನಗುತ್ತಾ ಮಾತನಾಡುವುದನ್ನು ಅಂಬಕ್ಕೆಯ ಮನಸ್ಸು ಒಪ್ಪಿಕೊಳ್ಳುವುದಿಲ್ಲ. ಸಾರ್ವಜನಿಕವಾಗಿ ಗಂಡಹೆಂಡತಿಯ ನಡುವಿನ ಮುಜುಗರ ಮಾಯವಾಗಿ ಆತ್ಮೀಯವಾಗಿ ಹರಟುವುದನ್ನು ಅಂಬಕ್ಕೆ ಗಮನಿಸುತ್ತಾಳೆ. ಮುಂಬಯಿಯಲ್ಲಿ ವಾಸಕ್ಕೆಂದು ಶಾರದೆಯ ಗಂಡ ಪ್ರತ್ಯೇಕ 'ಫ್ಲಾಟ್' ಖರೀದಿಸುತ್ತಾನೆ. ಕುಟುಂಬ ಇನ್ನೂ ವಿಭಕ್ತವಾಗುವುದನ್ನು ಗಮನಿಸಬಹುದು. ತುಳುನಾಡಿನಲ್ಲಿನ ಅವಿಭಕ್ತ ಕುಟುಂಬಗಳು ಮಾಯವಾಗಿ, ಅಲ್ಲಿಂದ ತಂದೆತಾಯಿ ಪ್ರತ್ಯೇಕವಾಗಿ ಅವರ ಮಕ್ಕಳು ಪ್ರತ್ಯೇಕವಾಗಿ ವಾಸಿಸುವ 'ವ್ಯಕ್ತಿಸ್ವಾತಂತ್ರ್ಯ'ದ ಪರಮಾವಧಿಯ ಕಾಲಘಟ್ಟವನ್ನು ಗಮನಿಸಬಹುದು.

ತುಳುನಾಡಿನಲ್ಲಿ ಮನೆಗಳಿಗೆ ಬೀಗ ಹಾಕುವ ಸಂಪ್ರದಾಯ ಇರಲಿಲ್ಲ. ಮನೆಯಲ್ಲಿ ಒಬ್ಬರಲ್ಲದಿದ್ದರೆ ಒಬ್ಬರು ಇರುವುದು ಸಾಮಾನ್ಯ. ಗುತ್ತಿನ ಮನೆಯಲ್ಲಂತೂ ಪಹರೆ ಕಾಯುವ ಪದ್ಧತಿಯೂ ಇತ್ತು. ಶಾರದೆ ಅಂಬಕ್ಕೆಯನ್ನು ಮುಂಬೈಗೆ ಕರೆದಾಗ, ಅಂಬಕ್ಕೆ "ಬೇಡ ಮಗಳೇ ಬೇಡ. ನಾನು ಇರುವಷ್ಟು ದಿವಸ ಈ ಗುತ್ತಿನ ಮನೆಗೆ ಬಾಗಿಲು ಹಾಕುವುದು ಬೇಡ. ಆಮೇಲೆ ನಿಮಗೆ ಹೇಗೆ ಸರಿ ಅನಿಸುವುದೋ ಹಾಗೇ ಮಾಡಿ ಬೇಡ ಎನ್ನಲು ನಾನಿರುವುದಿಲ್ಲ ಆಗ! ಎಂದರು." (ಉಲ್ಲಂಘನೆ, ಪುಟ ೪೪೬)

ಗುತ್ತಿನ ಮನೆಯಲ್ಲಿ ಏಕಾಂಗಿಯಾದ ಅಂಬಕ್ಕೆಯನ್ನು ಶಾರದಾ, ರಮಾನಂದ ಮುಂಬಯಿಗೆ ಆಹ್ವಾನಿಸುತ್ತಾರೆ. ಅಂಬಕ್ಕೆ ಮನೆ ಬಿಟ್ಟು ಹೋಗಲು ವಿರೋಧಿಸುತ್ತಾಳೆ. ಹಳೆಯ ತಲೆಮಾರಿನಲ್ಲಿ ಎಲ್ಲವನ್ನೂ ದೇವರು, ದೈವದ ಮೇಲೆ ಬಿಟ್ಟು ಆರಾಮವಾಗಿರುವ ಚಿತ್ರಣ

ಲಭ್ಯವಾಗುತ್ತದೆ. ಆಧುನಿಕ ಸಂದರ್ಭದಲ್ಲಿ ಮನುಷ್ಯ ಎಲ್ಲವನ್ನೂ ತನ್ನ ತಲೆಯ ಮೇಲೆ ಹೇರಿ ಒತ್ತಡವನ್ನು ಅನುಭವಿಸುವುದು ಸಾಮಾನ್ಯ

"ಇಷ್ಟು ದೊಡ್ಡ ಗುತ್ತಿನ ಮನೆ, ಅದರಲ್ಲಿರುವ ಜುಮಾದಿ ಭೂತ, ಈ ಮನೆಯ ಪರಂಪರೆ ಎಲ್ಲವನ್ನೂ ಬಿಟ್ಟು, ನಾನು ಮುಂಬಯಿಗೆ ಹೊರಡಬೇಕು ಅನ್ನುತ್ತೀರಲ್ಲ ನೀವು? ಹೇಗೆ ಹೊರಡುವುದು ಹೇಳಿ?ಎಂದರು. ನನ್ನ ನಂತರ ಏನು ಎಂದು ತಾನೆ ನಿಮ್ಮ ಪ್ರಶ್ನೆ? ಅದನ್ನು ಜುಮಾದಿಗೆ ಬಿಟ್ಟುಬಿಡಿ. ಈಗ ಅದನ್ನು ಯೋಚಿಸುವುದು ಬೇಡ ಎಂದು ಇಬ್ಬರನ್ನೂ ಸಂತೈಸಿ ಅಂಬಕ್ಕೆ ಅವರನ್ನು ಮುಂಬೈಗೆ ಕಳುಹಿಸಿಕೊಟ್ಟಿದ್ದರು."(ಉಲ್ಲಂಘನೆ, ಪುಟ ೫೨೦)

ಅಂಬಕ್ಕೆ ತನ್ನ ಇಳಿಗಾಲದಲ್ಲಿ ಬದಲಾದ ಕಾಲಕ್ಕೆ ತೀವ್ರವಾಗಿ ಬದಲಾಗುವುದನ್ನು ಕಾಣಬಹುದು. ಎಲ್ಲವನ್ನೂ ಜುಮಾದಿಯ ಮೇಲೆ ಭಾರ ಹಾಕಿ ನೆಮ್ಮದಿಯಿಂದ ಇರುವುದನ್ನು ಗಮನಿಸುತ್ತೇವೆ. ಕೊರಗ, ಕರ್ಗಿಯನ್ನು ಮನೆಯವರಂತೆ ನೋಡಿಕೊಳ್ಳುವುದು, ಕೆಳಜಾತಿಯವರಾದ ಅವರಿಂದಲೇ ಮನೆಯ ಪ್ರವೇಶ, ಎಲ್ಲವನ್ನೂ ನಿಭಾಯಿಸಲು ಬಿಟ್ಟು ಮಗ ಸೊಸೆಯರ ರೀತಿ ನೋಡಿಕೊಳ್ಳುವುದನ್ನು ಕಾಣಬಹುದು. ವಸಂತಿ ಟೀಚರಿಗೆ ಅನ್ಯಜಾತಿಯ ಹುಡುಗನನ್ನು ಮದುವೆಯಾಗಿ ಎನ್ನುವ ಸಂದರ್ಭ ಅಂಬಕ್ಕನ ಬದಲಾದ ಚಿಂತನಾಲಹರಿಯನ್ನು ಸೂಚಿಸುತ್ತದೆ. ಮಗ ರಂಜಿತ್‌ನ ವಿವಾಹ ಸಂದರ್ಭದಲ್ಲಿ ತಲ್ಲಣಗೊಂಡವಳು, ಇದೀಗ ಸಲಹೆ ಕೊಡುವಷ್ಟು ಆಧುನಿಕಳಾಗುತ್ತಾಳೆ. ತನ್ನ ಆಸ್ತಿಯನ್ನು ಮೊಮ್ಮಗ, ಮೊಮ್ಮಗಳು ಇಬ್ಬರಿಗೂ ಸಮಾನವಾಗಿ ಹಂಚುವ ತೀರ್ಮಾನ ಬದಲಾದ ಚಿಂತನೆಯನ್ನು ಸೂಚಿಸುತ್ತದೆ. ಬದಲಾದ ಕಾಲಘಟ್ಟದಲ್ಲಿ ಹೊಂದಿಕೊಳ್ಳದೆ ವಿಧಿಯಿಲ್ಲ ಎನ್ನುವುದನ್ನು ತಿಳಿಸುತ್ತದೆ. ಪ್ರಜ್ಞಾಳ ವಿವಾಹವನ್ನು ಶಾರದೆ ಆತಂಕದಿಂದ ಗಮನಿಸುತ್ತಿದ್ದರೆ, ಅಂಬಕ್ಕೆಗೆ ಬದಲಾವಣೆ ನಮ್ಮ ಕೈಯಲಿಲ್ಲ ಎಂಬುದನ್ನು ಅರಿತು ಚಲನೆಗೆ ಮುಕ್ತ ಅವಕಾಶ ನೀಡಿ ನೆಮ್ಮದಿ ಕಾಣುತ್ತಾಳೆ.

ಭೂಮಸೂದೆ ಜ್ಯಾರಿಯಾದ ಮಾರನೆ ವರ್ಷ ಎಣೆಲು ಬೆಳೆಯ ಭತ್ತ ಬಡಿಯಲು ಕೆಲವೇ ಕೂಲಿಯಾಳುಗಳು ಲಭ್ಯವಾಗುವುದು, ಗುತ್ತಿನಾರ್ ಸಂಕಪ್ಪಣ್ಣ ಅವರಿಗೆ ಉದಾರತೆ ತೋರಿ ಮಾಮೂಲಿ ಗಂಜಿ, ಚಟ್ನಿಗಿಂತ, ಮೀನುಸಾರು, ಕುಂಬಳಕಾಯಿ ಪಲ್ಯ ರುಚಿಕಟ್ಟಾದ ಊಟ ನೀಡುವುದರ ಜೊತೆಗೆ ಗುತ್ತಿನ ಮನೆಯ ಒಳಗೆ ಕೂರಿಸಿ ಊಟ ಹಾಕಿಸುತ್ತಾರೆ. ಅದುವರೆಗೆ ಗುತ್ತಿನ ಮನೆ ಒಳಗಡೆ ಕಾಲಿಡದ ಆಳುಗಳಿಗೆ ಮರ್ಯಾದೆಯ ಊಟ ನೀಡುತ್ತಾರೆ. ಸಂಕಪ್ಪಣ್ಣ ಮೇಲು-ಕೀಳು ಎಂಬ ಭಾವನೆ ಹೋಗಲಾಡಿಸಿ ಸಮಾನತೆಯ ಹಸ್ತ ಚಾಚುವುದನ್ನು ಗಮನಿಸಬಹುದು. ಅಂಬಕ್ಕೆ ಗುತ್ತಿನ ಗತ್ತನ್ನೇ ಉಳಿಸಲು ಪ್ರಯತ್ನಿಸುವವಳು. ಶ್ರೇಷ್ಠತೆಯ ಕಲ್ಪನೆಯನ್ನು ಸುಲಭವಾಗಿ ಬಿಟ್ಟು ಬಿಡಲು ಆಕೆಯಿಂದಾಗುವುದಿಲ್ಲ.

ಭೂಮಸೂದೆ ಜಾರಿಯಾದ ನಂತರದ ವರ್ಷಗಳಲ್ಲಿ ಬಾಕಿಮಾರು ಗದ್ದೆಯ ಉಳುಮೆಗೆ ಮೂಲದ ಆಳುಗಳನ್ನು ಹೊರತುಪಡಿಸಿ ಉಳಿದವರು ಒಳಗೆ ಸುಳಿಯುವುದಿಲ್ಲ. ಬಾಕಿಮಾರು ಗದ್ದೆಯ ಸಾಗುವಳಿಗೆ ಹೆಚ್ಚಿನ ಸಂಖ್ಯೆಯ ಕೂಲಿಯಾಳುಗಳ ಅಗತ್ಯವಿದೆ. ಸಾಗುವಳಿ ಮಾಡುವ ಉಪಾಯ ಯಾವುದು? ಎಂಬ ಪ್ರಶ್ನೆ ತೀವ್ರವಾಗಿ ಕಾಡಿದಾಗ ಸಂಕಪ್ಪಣ್ಣನಿಗೆ ಕೋಟೆಕಾರಿನ ಗೆಳೆಯ ಸಂಜೀವ ಪಕ್ಕಳರ ಟಿಲ್ಲರ್ ನೆನಪಿಗೆ ಬರುತ್ತದೆ. ಟಿಲ್ಲರ್‌ನಲ್ಲೇ ಉಳುಮೆ

ಮಾಡಲಾಗುತ್ತದೆ. ಪರಂಪರೆ ಬಲಪಡಿಸಲು ಆಧುನಿಕತೆಯನ್ನು ಬಳಸಿಕೊಳ್ಳುವ ವಿಪರ್ಯಾಸವನ್ನು ಗಮನಿಸಬಹುದು. ಆಧುನಿಕ ಕಾನೂನಿನಿಂದ ಕೃಷಿಗೆ ತೊಂದರೆ ಉಂಟಾದರೆ, ಆಧುನಿಕ ಸಾಧನದಿಂದ ಪರಂಪರೆ ಉಳಿಸಲು ಯತ್ನಿಸುವುದು ಸೋಜಿಗವೇ ಸರಿ.

ಗುತ್ತು ಜಾತಿ ವ್ಯವಸ್ಥೆಯನ್ನು ಪೋಷಿಸಿತ್ತು. ಕಂಬಳ, ಹುಟ್ಟು, ಸಾವು, ಹುಡುಗಿ ಪುಷ್ಪವತಿಯಾದಾಗ ಆಯಾ ಜಾತಿಯವರೇ ಆಯಾ ಕೆಲಸ ಮಾಡುವ ಬಲವಾದ ಜಾತಿವ್ಯವಸ್ಥೆ ಸುಭದ್ರವಾಗಿ ನಿಂತಿತ್ತು. ಗುತ್ತಿನ ಅವನತಿಯ ಜೊತೆ ಈ ಪದ್ಧತಿಯೂ ಕ್ಷೀಣಿಸುತ್ತಾ ಬಂತು.

'ನಮ್ಮ ರಾಜ್ಯದ ಭೂಮಸೂದೆಯಷ್ಟು ಪ್ರಗತಿಪರ ಮತ್ತು ಕ್ರಾಂತಿಕಾರಿಯಾದ ಭೂಮಸೂದೆ–ಈ ದೇಶದಲ್ಲಿ ಎಲ್ಲೂ ಜ್ಯಾರಿಯಾಗಲಿಲ್ಲ ಎಂಬುದು ನನಗೆ ಗೊತ್ತು. ಅದನ್ನು ನಾನು ಬೇರೆ ಬೇರೆ ಮೂಲಗಳಿಂದ ಓದಿ ತಿಳಿದುಕೊಂಡಿದ್ದೇನೆ. ನಿಜಕ್ಕೂ ಇದು ಒಳ್ಳೆಯ ಕಾಯಿದೆಯೇ, ಆದರೆ ಕರಾವಳಿ ಜಿಲ್ಲೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಜ್ಯಾರಿಗೊಳ್ಳುತ್ತಿರುವ ಪರಿಯಲ್ಲಿ, ಅನೇಕ ಅವಾಂತರಗಳು ಆಗುತ್ತಿವೆ. ನಮ್ಮಲ್ಲಿ, ತಂದೆಯಿಂದ ಮಕ್ಕಳಿಗೆ ಭೂಮಿಯ ಹಕ್ಕು ಬರುವ ಸಂಪ್ರದಾಯ ತೀರಾ ಕಡಿಮೆ. ತಾಯಿಯಿಂದಲೇ ಮಕ್ಕಳಿಗೆ ಹಕ್ಕು ಬರುವ ಸಂಪ್ರದಾಯವೇ ಹೆಚ್ಚಾಗಿ ಇರುವುದು. ಆದರೆ ಬದಲಾದ ವಾತಾವರಣದಲ್ಲಿ ಪ್ರತಿ ಕುಟುಂಬಗಳೂ ಈಗ ಈ ಪರಂಪರೆಯನ್ನು ತೊರೆಯುತ್ತಾ ಬರುತ್ತಿವೆ. ಕಾನೂನು ಪ್ರಕಾರವೂ ಅಳಿಯ ಸಂತಾನ ಕಟ್ಟು ಅಂದರೆ ಮಾತೃಪ್ರಧಾನ ವ್ಯವಸ್ಥೆ ಎನ್ನುವುದು ಈಗ ಇಲ್ಲ. ಹಾಗಾಗಿ ನಮ್ಮ ರಾಜ್ಯದ ಭೂಮಸೂದೆಯು ಇಲ್ಲಿ ಜ್ಯಾರಿಗೊಳ್ಳುವಾಗ ಅನೇಕ ಕುಟುಂಬಗಳಲ್ಲಿ ಘರ್ಷಣೆಗಳು ಆರಂಭವಾದವು. ಮನುಷ್ಯ ಸಂಬಂಧಗಳು ನಾಶವಾಗುವ ಸ್ಥಿತಿ ಬಂತು.'(ಉಲ್ಲಂಘನೆ, ಪುಟ ೩೬೩) ಸಂಕಪ್ಪ ಹೆಗ್ಡೆ ಭೋಜ ಬಂಗೇರನಲ್ಲಿ ಹೇಳುವ ಮಾತುಗಳು ಮಾತೃಪ್ರಧಾನ ವ್ಯವಸ್ಥೆ ಕ್ಷೀಣಿಸಿದ ಬಗ್ಗೆ ತಿಳಿಸುತ್ತವೆ.

'ಮೂರು ತಲೆಮಾರುಗಳಲ್ಲಿ ಮೊದಲ ತಲೆಮಾರನ್ನು ಸಮರ್ಥವಾಗಿ ಪ್ರತಿನಿಧಿಸುವವನೆಂದರೆ ರಾಮೈತಾಳ ಮತ್ತು ಅವನ ಸಂಸಾರ. ಅದರಲ್ಲೂ ಮುಖ್ಯವಾಗಿ ಅವನ ಹೆಂಡತಿ ಪಾರೋತಿ ಮತ್ತು ವಿಧವೆ ಅಕ್ಕ ಸರಸೋತಿ. ಪಾರೋತಿಯ ಹೊಟ್ಟೆಯಲ್ಲಿ ಮಕ್ಕಳು ಹುಟ್ಟದ್ದರಿಂದ ಎರಡನೆ ಹೆಂಡತಿಯಾಗಿ ಮನೆಗೆ ಬಂದ ಸತ್ಯಭಾಮೆ ಈ ಸಂಸಾರಕ್ಕೆ ಹೊಸ ಸೇರ್ಪಡೆಯಾದರೆ, ಈ ಕುಟುಂಬಕ್ಕೆ ಪೂರಕವಾಗಿ ಬರುವವರು ಶೀನ ಮತ್ತು ನಾರಾಣಯ್ಯನವರು. ಈ ತಲೆಮಾರಿನ ಜೀವನಶ್ರದ್ಧೆಯಲ್ಲಿ ಬಿರುಕಿಲ್ಲ. ಪರಂಪರೆಯಿಂದ ಏನು ಬಂದಿದೆಯೋ ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವ ಸರಳತೆಯೆ ಇಲ್ಲಿನ ಪ್ರಧಾನ ಗುಣ. ಹೋರಾಟ–ಸಂಘರ್ಷ ಇತ್ಯಾದಿ ಪದಗಳಿಗೆ ಇಲ್ಲಿ ಅರ್ಥವಿಲ್ಲ. ಹೆಚ್ಚೆಂದರೆ 'ಹೊಂದಾಣಿಕೆ' ಎಂಬ ಪದ ಅಷ್ಟಷ್ಟು ಬಳಕೆಯಾಗಬಹುದು.'[೫೩] ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಮನಸ್ಥಿತಿ ವ್ಯಕ್ತವಾಗಿದೆ.

'ಸತ್ಯಭಾಮೆಯ ಹೊಟ್ಟೆಯಲ್ಲಿ ಹುಟ್ಟಿದ ಲಚ್ಚನು ಎರಡನೇ ತಲೆಮಾರನ್ನು ಪ್ರತಿನಿಧಿಸುತ್ತಾನೆ. ಬಡತನದ ನಡುವೆಯೂ ರಾಮೈತಾಳರು ಲಚ್ಚನಿಗೆ ಆಧುನಿಕ ವಿದ್ಯಾಭ್ಯಾಸ

ಮಾಡಿಸುತ್ತಾರೆ. ಇಂಗ್ಲಿಷ್ ಕಲಿತ ಲಚ್ಚನು ಅದರ ಪರಿಣಾಮವೋ ಎಂಬಂತೆ ಪರಂಪರೆಯಿಂದ ಬೇರ್ಪಡುತ್ತಾನೆ. ಆದರೆ ಆಧುನಿಕ ವಿದ್ಯಾಭ್ಯಾಸ ಆತನಿಗೆ ಹೊಸ ನೆಲೆಯನ್ನು ಕಲ್ಪಿಸಿಕೊಡುವುದಿಲ್ಲ. ಹೀಗಾಗಿ ಅವನ ಬದುಕಿನಲ್ಲಿ ಬಿರುಕು ಕಾಣಿಸಿಕೊಂಡು ಆತ ಅತಂತ್ರನಾಗುತ್ತಾನೆ. ಆಧುನಿಕ ತಿಳುವಳಿಕೆಯ ಕಾರಣದಿಂದಾತ ಲೌಕಿಕ ಸುಖದ ಬೆನ್ನು ಹತ್ತುತ್ತಾನೆ. ಬಾಯಿಚಪಲ, ಹಣದಾಸೆ, ಹೆಣ್ಣಿನಾಸೆಗಳ ದಾಸನಾಗುವ ಆತ, ಇಂಥ ಕಾರಣಗಳಿಂದಾಗಿಯೇ ಪರಂಪರೆಯನ್ನು ಪ್ರತಿನಿಧಿಸುವ ರಾಮೈತಾಳರೊಂದಿಗೆ ಜಗಳವಾಡಲು ಸಿದ್ಧನಾಗುತ್ತಾನೆ. ಕಾದಂಬರಿಯಲ್ಲಿನ ಈ ಭಾಗವು ವಸ್ತುಶಃ ತಂದೆ-ಮಗನ ಜಗಳವನ್ನು ಹೇಳುವುದಿಲ್ಲ. ಬದಲು ಎರಡು ತಲೆಮಾರುಗಳ ನಡುವಣ ಸಂಘರ್ಷವನ್ನೇ ಸಂಕೇತಿಸುತ್ತದೆ.'[೫೪] 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಎರಡು ತಲೆಮಾರುಗಳ ಸಂಘರ್ಷದ ಚಿತ್ರಣವನ್ನು ಗುರುತಿಸಬಹುದು.

'ಒಂದೆಡೆ ವಸಾಹತುಶಾಹಿ ವಾದಿಸಿದಂತೆ 'ಇಂಗ್ಲಿಷ್ ಶಿಕ್ಷಣ=ಆಧುನಿಕತೆ=ಪ್ರಗತಿ'ಎಂಬ ಸಮೀಕರಣ ಭಾರತೀಯ ಸಮಾಜದ ದುರ್ಬಲ ವರ್ಗಗಳನ್ನು ಕುರಿತಂತೆ ವಾಸ್ತವವಾಗಿತ್ತು. ಅನೂಚಾನವಾಗಿ ಬಂದ ಶೋಷಣೆಯಿಂದ ಮುಕ್ತರಾಗಲು ಅವರಿಗೆ ಇಂಗ್ಲಿಷ್ ಶಿಕ್ಷಣವೊಂದೇ ಹಾದಿಯಾಗಿತ್ತು. ಆದ್ದರಿಂದಲೇ ಭಾರತೀಯ ಸಮಾಜದಲ್ಲಿ ಪಶ್ಚಿಮದ 'ಆಧುನಿಕತೆ'ಯ ಪರಿಕಲ್ಪನೆ 'ಸುಧಾರಣಾವಾದ'ವಾಗಿ ಮಾರ್ಪಟ್ಟು ಸರಿಸುಮಾರು ಎಲ್ಲರಿಂದಲೂ ಸ್ವೀಕೃತವಾಯಿತು. ಈ ಶತಮಾನದುದ್ದಕ್ಕೂ ಕನ್ನಡ ಕಾದಂಬರಿಯಲ್ಲಿ ಕಂಡುಬರುವ ಒಂದು ಪ್ರಮುಖ ಅಶಯ ಅಥವಾ ಕಥಾವಿನ್ಯಾಸವೆಂದರೆ 'ಒಳಗಿನವ' 'ಹೊರಗಿನವನಾಗಿ' ಮತ್ತೆ ಒಳಗೆ ಪ್ರವೇಶಿಸುವುದು. ಎಂದರೆ, ಒಂದು ಸಮುದಾಯದ/ವರ್ಗದ ವ್ಯಕ್ತಿ ಪರಂಪರೆಯನ್ನು ತಿರಸ್ಕರಿಸಿ, 'ಆಧುನಿಕ' ಶಿಕ್ಷಣ ಪಡೆದು, ಅನಂತರ ಮತ್ತೆ ತನ್ನ ಸಮುದಾಯಕ್ಕೆ/ವರ್ಗಕ್ಕೆ ಹಿಂದಿರುಗಿ, ಅದನ್ನು ಸುಧಾರಿಸಲು ವ್ಯಾಪಕವಾಗಿ ಪ್ರಯತ್ನಿಸುವುದು.'(ತೆಂಬರೆ, ಮುನ್ನುಡಿ)

ತುಳುನಾಡಿನ ಸಂಸ್ಕೃತಿ ಏಕಸಂಸ್ಕೃತಿ ಅಲ್ಲ. ಅದು ಬಹುತ್ವದ ಸಂಸ್ಕೃತಿ. ಹಲವು ಜಾತಿ, ಮತ, ಧರ್ಮಗಳ ಜನರು ನೆಲೆಸಿದ್ದಾರೆ. ಆಧುನಿಕತೆಯು ಮೇಲ್ವರ್ಗದ ಹಿತಾಸಕ್ತಿಗಳನ್ನು ಪೋಷಿಸುತ್ತದೆ. ಏಕಸಂಸ್ಕೃತಿಯನ್ನು ಪೋಷಿಸುತ್ತಾ ಅಧೀನ ಸಂಸ್ಕೃತಿಯನ್ನು ಮರೆಮಾಚಲು ಪ್ರಯತ್ನಿಸುತ್ತದೆ.

'ರಾಷ್ಟ್ರೀಯತೆಯ ಹೆಸರಿನಲ್ಲಿ, ಏಕತೆಯ ಹೆಸರಿನಲ್ಲಿ ಕೆಳವರ್ಗದವರ ಸಂಸ್ಕೃತಿಗಳು ಅದುಮಲ್ಪಡುತ್ತವೆ.'(ತೆಂಬರೆ, ಪುಟ ೮)

ಪಂಬದ ಪಿಜಿನನ ಮೂವರು ಮಕ್ಕಳಾದ ಲಕನ, ಐತ, ತೋಮರಲ್ಲಿ ಐತ ಪರಂಪರೆಯ ಕಡೆ ಆಸಕ್ತನಾದರೆ, ಲಕನ ಭೂತಾರಾಧನೆಯ ಹೆಸರಿನಲ್ಲಿ ಕೆಳವರ್ಗದವರ ಮೇಲಾಗುತ್ತಿರುವ ದೌರ್ಜನ್ಯ, ಶೋಷಣೆಗಳನ್ನು ತನ್ನ ಕುಟುಂಬದಲ್ಲಿಯೇ ಅನುಭವಿಸಿ ಆಧುನಿಕತೆಯತ್ತ ಸರಿದವನು. ಭೂತಾರಾಧನೆಯೆಂದರೆ ಮೇಲ್ವರ್ಗದವರಿಂದ ಕೆಳವರ್ಗದವರ ಶೋಷಣೆ ಎಂದು ನಂಬಿದವನು. ಐತನಿಗೆ ಬಳೆ ತೊಡುವ ದೀಕ್ಷೆ ನೀಡುವ ಕಾರ್ಯಕ್ರಮದ ಕುರಿತು ತಿಳಿಸಿದಾಗ, ಲಕನ ವಿರೋಧಿಸುತ್ತಾನೆ. ಐತ ಪರಂಪರೆಯನ್ನು ನಂಬಿ ಮುಂದುವರಿಯುತ್ತಾನೆ.

ಐತ, ಲಕನ ವಿವಾಹದ ಸಂದರ್ಭದಲ್ಲಿ ಮದುಮಕ್ಕಳು ಬೀಡಿಗೆ ಹೋಗಿ ಧನಿಗಳ ಕಾಲಿಗೆ ನಮಸ್ಕರಿಸುವ ಸಂಪ್ರದಾಯವು ಆ ಊರಿನಲ್ಲಿ ಇತ್ತು. ಐತ ಇದನ್ನು ಗೌರವಿಸಿ ಧನಿಗಳಿಗೆ ನಮಸ್ಕರಿಸಿದರೆ, ಲಕನ ಇದನ್ನು ವಿರೋಧಿಸಿ ಧನಿಗಳಿಗೆ ನಮಸ್ಕರಿಸಲು ಮುಂದಾಗುವುದಿಲ್ಲ. ಆತನಿಗೆ ಅದು ಶೋಷಣೆಯಂತೆ ಕಾಣಿಸುತ್ತದೆ.

ಗಂಗಾಧರ ಅಣುವಿಜ್ಞಾನಿಯಾಗಿದ್ದು, ಊರಿನಲ್ಲಿ ಮೊಕ್ತೇಸರನಾಗಿ ಭೂತಾರಾಧನೆ ನಡೆಸುವ ವಿವರಣೆ ಕಾದಂಬರಿಯಲ್ಲಿದೆ. ನಂಬಿಕೆಯ ಪ್ರಶ್ನೆ ಬಂದಾಗ ವಿಜ್ಞಾನ ದೂರಾಗುವ ಚಿಂತನೆ ಇಲ್ಲಿದೆ. ಭೂತಾರಾಧನೆಯನ್ನು ನೆರವೇರಿಸಲು ಐತ ಪಂಬದನಿಗೆ ಆಹ್ವಾನಿಸಿ ಅವಕಾಶ ನೀಡುತ್ತಾರೆ.

'೧೯೭೪ರಲ್ಲಿ ಪೋಖ್ರಾನ್‌ನಲ್ಲಿ ಭಾರತದ ಪ್ರಥಮ ಅಣುಬಾಂಬನ್ನು ಸಿಡಿಸಿದಾಗ, ಗಂಗಾಧರ ಕೂಡಾ ಒಬ್ಬ ವಿಜ್ಞಾನಿಯಾಗಿದ್ದರು.'(ತೆಂಬರೆ, ಪುಟ ೫೨)

ಚೆಲುವಯ್ಯ ಶೆಟ್ಟಿ ಏಳು ದಿನಗಳ ಕಾಲ ಕೋಲ ನೇಮ ಮಾಡಿ ಪರಂಪರೆಯ ರಕ್ಷಕನಂತೆ ಕಾಣಿಸುವುದು.

'ಚೆಲುವಯ್ಯ ಶೆಟ್ಟಿ ಮಾಡಿಸುವ ನೇಮವೆಂದರೆ ಅದೊಂದು ಸುಗ್ಗಿ. ಮೂರು ಹೊತ್ತು ಊಟ, ಕುಡಿಯುವಷ್ಟು ಗಂಗಸರ ಮತ್ತೆ ಕೋಳಿ ಅಂಕ. ಈ ವೈಭವೀಕರಣ ಒಂದು ರೀತಿಯಲ್ಲಿ ಮೈಮರೆಸುವ, ವಿಸ್ಮೃತಿಗೊಳಿಸುವ ಮಾಯಾಜಾಲದಂತೆ; ಅಕ್ರಮ ಸಂಪತ್ತನ್ನು ಶೇಖರಿಸಿ ಇಟ್ಟುಕೊಳ್ಳುವ ವ್ಯಕ್ತಿಗಳಲ್ಲಿ, ಭೂಗತ ದೊರೆಗಳಲ್ಲಿ ಅಭದ್ರತೆಯ ಭಾವನೆಯು ಇರುತ್ತದೆ. ಮಾನಸಿಕ ಅಭದ್ರತೆಯು ಉಂಟಾಗಿ ತಮ್ಮ ಅಕ್ರಮ, ಅನ್ಯಾಯಗಳಿಗೆ ರಕ್ಷಾಕವಚವನ್ನಾಗಿ ಧಾರ್ಮಿಕ ವಿಧಿಗಳ ಆಶ್ರಯ ಪಡೆಯುತ್ತಾರೆ.'(ತೆಂಬರೆ, ಪುಟ ೯೩)

ಮನುಷ್ಯ ನಂಬಿಕೆ ಮತ್ತು ಭಾವನೆಗಳ ಸಮ್ಮಿಶ್ರಿತ ಆಲೋಚನೆಗಳಿಂದ ಪ್ರಭಾವಿತನಾಗುತ್ತಾನೆ. ಹೊಸ ತಿಳುವಳಿಕೆಯು ದ್ವಂದ್ವ, ಅಪನಂಬಿಕೆ ಹುಟ್ಟಿಸುತ್ತದೆ. ಮರಳಿ ಮಣ್ಣಿಗೆ ಕಾದಂಬರಿಯೂ ಪರಂಪರಾಗತ ನಂಬಿಕೆಗಳಿಂದ ಪ್ರಭಾವಿತರಾದ ಹಾಗೂ ಆಧುನಿಕ ಮನಸ್ಥಿತಿಗೆ, ಲಾಭಗಳಿಗೆ ತೆರೆದುಕೊಳ್ಳುವ ಮನೋಭಾವವನ್ನು ಕಾಣುತ್ತೇವೆ. ಗಂಡಿಗಿಂತ ಮೊದಲು ಹೆಂಡತಿ ಯಾವುದನ್ನೂ ಸವಿಯಬಾರದೆಂಬ ನಂಬಿಕೆ ಪಾರೋತಿಯಲ್ಲಿ ನೋಡಬಹುದು. ಸರಸೋತಿ ಅದನ್ನು ತನ್ನ ಮಾತುಗಳಿಂದ ಧಿಕ್ಕರಿಸುತ್ತಾಳೆ.

'ಅತ್ತಿಗೆ, ಅವರಿಗಿಂತ ಮೊದಲು ನಾನು ಅದರ ರುಚಿ ನೋಡಬೇಕೆ?' ಎಂದಳು. 'ನಿನ್ನ ಶಾಸ್ತ್ರ ಹಾಳಾಯಿತು. ಅವನು ಎಷ್ಟು ಮನೆಗಳಲ್ಲಿ ಮಾವಿನ ಹಿಂಡಿಯ ರುಚಿ ಕಂಡಾಯಿತೊ! ಹೋಗಲಿ, ಬೇಯಿಸಿ ಹಾಕಿದ ಮಾವಿನ ಕಾಯಿಯ ಗೊಜ್ಜು ಮಾಡಲೇ?'(ಮರಳಿ ಮಣ್ಣಿಗೆ, ಪುಟ ೨೦)

'ನೋಡಿದಿರಾ ಐತಾಳರೇ, ಹಳೆಯ ಕಾಲ ಹೋಯಿತು-ಎಂಬುದಕ್ಕೆ ನಿಮ್ಮ ಮಗನೇ ಸಾಕ್ಷಿ. ಕಾಫಿ ಕುಡಿಯಲು ಶುರು ಮಾಡಿದ್ದಾನೆ. ನನಗಂತು ನಿತ್ಯ ಕಾಫಿ ಇಲ್ಲದೆ ಆಗುವುದಿಲ್ಲ' ಎಂದರು.(ಮರಳಿ ಮಣ್ಣಿಗೆ, ಪುಟ ೧೮೫)

'ನಿನ್ನ ಮಗುವಿನ ಸ್ಥಿತಿ ಏನಾಗಬೇಕು? ಹಿಂದೆ ದಿನ ಹೋದಂತೆ ಮುಂದೆಯೂ ಹೋದೀತೆ? ಅವನಿಗೆ ಏನಾದರೂ ವಿದ್ಯೆ ಕಲಿಸಿ ದೊಡ್ಡವನನ್ನಾಗಿ ಮಾಡಬೇಡವೆ? ಊರ ಮಂದಿಯನ್ನು ನೋಡು. ಅಲ್ಲಿ ಇಲ್ಲಿ ಜನರನ್ನು ನೋಡು. ಯಾವಾವ ಚಾಕರಿ ಹುಡುಕಿಕೊಂಡು ಊರೂರು ಸುತ್ತುತ್ತಾರೆ. ನಾನು ಸಣ್ಣದಿರುವಾಗ, ಇಲ್ಲಿ ಹುಟ್ಟಿದವನಿಗೆ ಇಲ್ಲೇ ಮೋಕ್ಷವಿತ್ತು. ಈಗ ಹಾಗಲ್ಲ-ಉಣ್ಣುವುದಕ್ಕೆ ಉಡುವುದಕ್ಕೆ ಹೆಚ್ಚು ಬೇಕು, ಅನಿಸುತ್ತದೆ. ಇನ್ನು ಮುಂದೆ ಪಾಣಿಪಂಚೆ ಉಟ್ಟು ದಿನ ಹೋಗುವ ಹಾಗಿಲ್ಲ' ಎಂದರು.(ಮರಳಿ ಮಣ್ಣಿಗೆ, ಪುಟ ೨೭೭)

ವಾಸುದೇವಯ್ಯ ಮಗಳು ನಾಗವೇಣಿಯಲ್ಲಿ ಹೇಳುವ ಮಾತುಗಳು ಸರಳತೆ ಮಾಯವಾಗಿರುವುದನ್ನು, ಮನುಷ್ಯ ಉಡುಗೆ ತೊಡುಗೆಗೆ ಹೆಚ್ಚು ಮಹತ್ವ ಕೊಡುವುದನ್ನು ಕಾಣಬಹುದು.

ಆಧುನಿಕ ಚಿಂತನೆಯಿಂದ ಮಹಿಳೆ ಸಬಲಳಾಗಬಲ್ಲಳು. 'ಮುಖಾಂತರ' ಕಾದಂಬರಿಯಲ್ಲಿ ಆರ್ಥಿಕ ಸ್ವಾವಲಂಬನೆ ಹೊಂದಿದಾಗ ಗೌರವ ಪ್ರಾಪ್ತವಾಗುತ್ತದೆ ಎಂಬ ಸತ್ಯ ಶಂಕರ ಕಾಂಬಕ್ಕನಿಗೆ ತಿಳಿಸುತ್ತಾನೆ. ಶಂಕರ ಗಂಡನಿಂದ ದೂರವಾಗಿ ತವರಿಗೆ ಬಂದು ತೊಂದರೆ ಅನುಭವಿಸುತ್ತಿರುವ ಕಾಂಬಕ್ಕನಿಗೆ ಅಶನಾರ್ಥ ದೊರೆಯುವಂತೆ ಮಾಡುತ್ತಾನೆ. ಅಶನಾರ್ಥದ ಕುರಿತು ಕನಿಷ್ಠ ತಿಳುವಳಿಕೆಯೂ ಕಾಂಬಕ್ಕನಿಗೆಇರುವುದಿಲ್ಲ.

ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಎಂಬ ಶೀರ್ಷಿಕೆಯಡಿ ಮೂರು ರೀತಿಯ ಮನಸತ್ವಗಳನ್ನು ಗುರುತಿಸಬಹುದು. ಪರಂಪರೆಯತ್ತ ವಾಲುವವರು, ಪರಂಪರೆ ಮತ್ತು ಆಧುನಿಕತೆಯ ಮಧ್ಯೆ ಹೊಂದಾಣಿಕೆ ಮಾಡಲಾಗದೆ ಒದ್ದಾಡುವವರು, ಆಧುನಿಕತೆಗೆ ಮಾರುಹೋದವರು. ಶಿಕ್ಷಣ, ಆಧುನಿಕ ಚಿಂತನೆ ಅಧುನಿಕತೆಯತ್ತ ಸಾಗಲು ಪ್ರೇರೇಪಿಸುತ್ತದೆ.

ಅಡಿ ಟಿಪ್ಪಣಿ

೧. ಅಭ್ಯಾಸ, ವಸಂತಕುಮಾರ ಪೆರ್ಲ, ಸಾಹಿತ್ಯ ಸಂಘ(ರಿ.), ಬದಿಯಡ್ಕ, ೧೯೯೯, ಪುಟ ೨೦.

೨. ತುಳುನಾಡು, ಡಾ। ಪಾದೂರು ಗುರುರಾಜ ಭಟ್, ಡಾ।ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್(ರಿ.) ಉಡುಪಿ, ೨೦೦೯, ಪುಟ ೨೦೧.

೩. ಮುತ್ತಿನ ಸತ್ತಿಗೆ, ಡಾ.ತಾಳ್ತಜೆ ವಸಂತಕುಮಾರ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೨೦೦೧, ಪುಟ ೨೨೮.

೪. ಬಿಲ್ಲವರು ಮತ್ತು ಬಾಸೆಲ್ ಮಿಷನ್ ಒಂದು ಅಧ್ಯಯನ, ರಮಾನಾಥ್ ಕೋಟೆಕಾರ್, ಸಾಯಿಸುಂದರಿ ಸೇವಾಟ್ರಸ್ಟ್, ಕೋಟೆಕಾರ್ ಮಂಗಳೂರು, ೨೦೧೧, ಪುಟ೧೨.

೫. ಪಳಮೆ, ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪, ಪುಟ ೧೦೨.

೬. ಅಭ್ಯಾಸ, ವಸಂತಕುಮಾರ ಪೆರ್ಲ, ಸಾಹಿತ್ಯ ಸಂಘ(ರಿ), ಬದಿಯಡ್ಕ, ೧೯೯೯, ಪುಟ ೧೯.

೭. ಜನಪದ ಆರಾಧನೆ ಮತ್ತು ರಂಗಕಲೆ, ಡಾ।ಸುಶೀಲಾ ಪಿ. ಉಪಾಧ್ಯಾಯ, ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ಪ್ರಮು. ೧೯೮೯, ಪುಟ ೯.

೮. ಭೂತಾರಾಧನೆ ಜಾನಪದೀಯ ಅಧ್ಯಯನ, ಚಿನ್ನಪ್ಪ ಗೌಡ, ಮದಿಪು ಪ್ರಕಾಶನ, ಮಂಗಳೂರು, ೧೯೯೦, ಪುಟ ೧೦೩.

೯. ತುಳುನಾಡಿನ ಪಾಣಾರರು, ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೩, ಪುಟ ೧೪೨.

೧೦. ತುಳುನಾಡಿನ ಪಾಣಾರರು, ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೩, ಮಟ ೧೪೫.

11. Malekudiyas a primitive tribe of south India, Lawrence D'souza S.J., Unesco co-action learning centre, Mangalore, 1994, page 63.

೧೨. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪, ಪುಟ ೮೨.

೧೩. ತುಳುನಾಡಿನ ಬಿಲ್ಲವರು, ರಮಾನಾಥ್ ಕೋಟೆಕಾರ್, ಸಾಯಿ ಸುಂದರಿ ಸೇವಾಟ್ರಸ್ಟ್, ಮಂಗಳೂರು, ೨೦೧೨, ಪುಟ ೮೯.

೧೪. ಅಭ್ಯಾಸ, ವಸಂತಕುಮಾರ ಪೆರ್ಲ, ಸಾಹಿತ್ಯ ಸಂಘ(ರಿ). ಬದಿಯಡ್ಕ, ೧೯೯೯, ಪುಟ ೨೦.

೧೫. ತುಳುನಾಡಿನ ಬಿಲ್ಲವರು ಒಂದು ಅಧ್ಯಯನ, ರಮಾನಾಥ್ ಕೋಟೆಕಾರ್, ಸಾಯಿ ಸುಂದರಿ ಸೇವಾ ಟ್ರಸ್ಟ್, ಮಂಗಳೂರು, ೨೦೧೨, ಪುಟ ೨೧.

೧೬. ತುಳುಸಂಸ್ಕೃತಿ ಚತುರ್ಮುಖಿ ಅಧ್ಯಯನ, ಕೆ.ಮೋಹನ್ ಕೃಷ್ಣ ರೈ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯, ಪುಟ ೨೬

೧೭. ಪಳಮೆ, ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ ೧೨೮.

೧೮. ಮುತ್ತಿನ ಸತ್ತಿಗೆ, ಡಾ. ತಾಳ್ತಜೆ ವಸಂತಕುಮಾರ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೨೦೦೧, ಪುಟ ೨೩೨.

೧೯. ಪಳಮೆ, ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ ೧೧೧.

೨೦. ತುಳುನಾಡಿನ ಬಿಲ್ಲವರು ಒಂದು ಅಧ್ಯಯನ, ರಮಾನಾಥ್ ಕೋಟೆಕಾರ್, ಸಾಯಿ ಸುಂದರಿ ಸೇವಾಟ್ರಸ್ಟ್, ಮಂಗಳೂರು, ೨೦೧೨, ಪುಟ ೩೭.

೨೧. ನನ್ನೊಳಗಿನ ನಾನು, ಬಿ.ಎ.ಮೊಹಿದೀನ್ ಆತ್ಮಕಥನ, ಭಾರತ ಪ್ರಕಾಶನ, ಜಪ್ಪು ಮಂಗಳೂರು, ೨೦೧೮, ಪುಟ ೩೫.

೨೨. ತುಳುನಾಡು, ಡಾ।ಪಾದೂರು ಗುರುರಾಜ ಭಟ್, ಡಾ।ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್, ೨೦೦೯, ಪುಟ ೨೦೩.

೨೩. ತುಳು ಸಾಹಿತ್ಯ ಚರಿತ್ರೆ, ಡಾ. ಬಿ.ಎ. ವಿವೇಕ ರೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ ೭೦೮.

೨೪. ಪೊನ್ನ ಕಂಠಿ, ಪ್ರಸಂ. ಬಿ.ಎ. ವಿವೇಕ ರೈ, ಅಖಿಲ ಭಾರತ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಂಗಳೂರು, ಪುಟ ೨೭೫.

೨೫. ಸಿರಿ, ಪುರುಷೋತ್ತಮ ಬಿಳಿಮಲೆ(ಸಂ), ಕಲಾಗಂಗೋತ್ರಿ, ಅಮೃತ ಸೋಮೇಶ್ವರ ಅಭಿನಂದನ ಸಮಿತಿ, ಉಚ್ಚಿಲ, ೧೯೯೫, ಪುಟ ೪೧೦.

೨೬. ಪಳಮೆ, ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪, ಪುಟ ೧೨೭

೨೭. ಪೊಲಿ, ಕೆನರಾ ೨೦೦, ಮುಕುಂದ ಪ್ರಭು, ೨೦೦೦, ಜಿಲ್ಲಾಧಿಕಾರಿ, ಮಂಗಳೂರು, ಪುಟ ೩೯೮.

೨೮. ಕಣ್ಮರೆಯಾಗುತ್ತಿರುವ ತುಳು ಬದುಕು, ಸಂ. ತುಕಾರಾಂ ಪೂಜಾರಿ, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ, ೧೯೯೭, ಪುಟ ೭೦.

೨೯. ತುಕಾರಾಂ ಪೂಜಾರಿ(ಸಂ.), ಕಣ್ಮರೆಯಾಗುತ್ತಿರುವ ತುಳು ಬದುಕು, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ, ೧೯೯೭, ಪುಟ ೧೧.

೩೦. ಪ್ರೊ.ಸಿ.ಎನ್.ರಾಮಚಂದ್ರನ್, ಮುಂಗಾರು, ೧೨-೯-೯೩.

೩೧. ತುಳುನಾಡಿನ ಬಿಲ್ಲವರು, ರಮಾನಾಥ್ ಕೋಟೆಕಾರ್, ಸಾಯಿ ಸುಂದರಿ ಸೇವಾಟ್ರಸ್ಟ್, ಮಂಗಳೂರು, ೨೦೧೨, ಪುಟ ೧೩೪.

೩೨. ತುಳುನಾಡಿನ ಬಿಲ್ಲವರು, ರಮಾನಾಥ್ ಕೋಟೆಕಾರ್, ಸಾಯಿ ಸುಂದರಿ ಸೇವಾಟ್ರಸ್ಟ್, ಮಂಗಳೂರು, ೨೦೧೨, ಪುಟ ೧೩೪.

೩೩. ಸಂವಹನ ಮಾಧ್ಯಮವಾಗಿ ಜನಪದ ಕುಣಿತಗಳು, ಡಾ.ಪಾಲ್ತಾಡಿ ರಾಮಕೃಷ್ಣ ಅಚಾರ್, ಶ್ರೀ ದುರ್ಗಾಪರಮೇಶ್ವರಿ ದೇವಳ ಪ್ರಥಮ ದರ್ಜೆ ಕಾಲೇಜು, ಕಟೀಲು, ೧೯೯೯.

೩೪. ತುಳು ಜನಪದ ಸಾಹಿತ್ಯ, ಡಾ.ಬಿ.ಎ.ವಿವೇಕ ರೈ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೩೫. ತುಳು ಜನಪದ ಸಾಹಿತ್ಯ ಡಾ.ಬಿ.ಎ.ವಿವೇಕ ರೈ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೩೬. ತುಳು ಜನಪದ ಸಾಹಿತ್ಯ, ಡಾ.ಬಿ.ಎ.ವಿವೇಕ ರೈ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೩೭. ತುಳುನಾಡ ಸಂಸ್ಕೃತಿಯಲ್ಲಿ ನಲ್ಕೆ ಯಾನೇ ಅಜಿಲ (ಪಾಣಾರ) ಜನಾಂಗದ ಪಾತ್ರ, ಬಿ.ಎ.ಲೋಕಯ್ಯ ಶಿಶಿಲ, ಕರ್ನಾಟಕ ಸಾಹಿತ್ಯ ತುಳು ಅಕಾಡೆಮಿ, ಮಂಗಳೂರು, ೨೦೧೬, ಪುಟ ೧೦೪-೧೦೫.

೩೮. ತುಳುನಾಡ ಸಂಸ್ಕೃತಿಯಲ್ಲಿ ನಲ್ಕೆ ಯಾನೇ ಅಜಿಲ (ಪಾಣಾರ) ಜನಾಂಗದ ಪಾತ್ರ, ಬಿ.ಎ.ಲೋಕಯ್ಯ ಶಿಶಿಲ, ಕರ್ನಾಟಕ ಸಾಹಿತ್ಯ ತುಳು ಅಕಾಡೆಮಿ, ಮಂಗಳೂರು, ೨೦೧೬, ಪುಟ ೯೦.

೩೯. ತುಳುನಾಡ ಸಂಸ್ಕೃತಿಯಲ್ಲಿ ನಲ್ಕೆ ಯಾನೇ ಅಜಿಲ (ಪಾಣಾರ) ಜನಾಂಗದ ಪಾತ್ರ, ಬಿ.ಎ.ಲೋಕಯ್ಯ ಶಿಶಿಲ, ಕರ್ನಾಟಕ ಸಾಹಿತ್ಯ ತುಳು ಅಕಾಡೆಮಿ, ಮಂಗಳೂರು, ೨೦೧೬, ಪುಟ ೧೧೧.

೪೦. ಯಕ್ಷಗಾನ ಕಲಾದರ್ಶನ, ಪ್ರೊ.ಟಿ.ಕೇಶವ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೨, ಪುಟ ೪.

೪೧. ಯಕ್ಷಗಾನ ಕಲಾದರ್ಶನ, ಪ್ರೊ.ಟಿ.ಕೇಶವ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೨, ಪುಟ ೨೨.

೪೨. ಬೇಟೆಯ ನೆನಪುಗಳು, ಕೆದಂಬಾಡಿ ಜತ್ತಪ್ಪ ರೈ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೭೮, ಮುನ್ನುಡಿ ಪುಟ ೮.

೪೩. ತುಳು ಸಾಹಿತ್ಯ ಚರಿತ್ರೆ, ಡಾ.ಬಿ.ಎ. ವಿವೇಕ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭, ಪುಟ ೪೭

೪೪. ತುಳು ಜನಪದ ಕಾವ್ಯ ಇಹಪರ ಲೋಕದೃಷ್ಟಿ, ಡಾ.ರಾಜಶ್ರೀ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೮, ಪುಟ ೧೭೬

೪೫. Malekudiyas, A primitive tribe of south India, Lawrence D'souza, Unesco co-action learning centre, Mangalore, 1994, page 26.

೪೬. ತುಳುವ ದರ್ಶನ, ಪೀಟರ್ ಜೆ.ಕ್ಲಾಸ್(ಅನುವಾದ ಎ.ವಿ. ನಾವಡ), ೧೯೮೭, ಪ್ರಾದೇಶಿಕ ವ್ಯಾಸಂಗ, ಕುಂದಾಪುರ, ಪುಟ ೪೪.

೪೭ ತುಳು ಬದುಕು, ಅಮೃತ ಸೋಮೇಶ್ವರ, ಪ್ರಕೃತಿ ಪ್ರಕಾಶನ, ಕೋಟೆಕಾರು, ೧೯೮೪, ಪುಟ ೧೧೨.

೪೮. ತುಳು ಜನಪದ ಸಾಹಿತ್ಯ, ವಿವೇಕ ರೈ ಬಿ.ಎ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫, ಪುಟ ೧೮೦.

೪೯. ತುಳು ಜನಪದ ಕಾವ್ಯ ಇಹಪರ ಲೋಕದೃಷ್ಟಿ, ಡಾ.ರಾಜಶ್ರೀ, ಚೌಟ ಪ್ರತಿಷ್ಠಾನ, ಬೆಂಗಳೂರು, ೨೦೦೮, ಪುಟ ೩೪೯.

೫೦. ಬೇಟೆಯ ನೆನಪುಗಳು, ಕೆದಂಬಾಡಿ ಜತ್ತಪ್ಪ ರೈ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಪುಟ ೪-೫.

೫೧. ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ನಟರಾಜ್ ಹುಳಿಯಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ ೧೨೯.

೫೨. ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ನಟರಾಜ್ ಹುಳಿಯಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ ೧೩೨.

೫೩. ಶತಮಾನದ ಕನ್ನಡ ಸಾಹಿತ್ಯ. ಜಿ.ಎಚ್. ನಾಯಕ್(ಸಂ.), ಬೃಂದಾವನ ಪ್ರಿಂಟರ್ಸ್, ಬೆಂಗಳೂರು, ಜನವರಿ ೨೦೦೦, ಪುಟ ೨೧೭.

೫೪. ಶತಮಾನದ ಕನ್ನಡ ಸಾಹಿತ್ಯ, ಸಂ.ಜಿ.ಎಚ್. ನಾಯಕ್, ಬೃಂದಾವನ ಪ್ರಿಂಟರ್ಸ್, ಬೆಂಗಳೂರು, ಜನವರಿ ೨೦೦೦, ಪುಟ ೨೧೮.

ಅಧ್ಯಾಯ ೪. ತುಳುನಾಡಿನ ಕಥನ ಸಾಹಿತ್ಯದಲ್ಲಿ ಇಂಗ್ಲಿಷ್ ದರ್ಶನ

೪.೧. ತುಳುನಾಡಿನ ಪರಂಪರಾಗತ ಶಿಕ್ಷಣ ಕ್ರಮ

೪.೨. ಇಂಗ್ಲಿಷ್ ಶಿಕ್ಷಣದ ಹಿನ್ನೆಲೆ ಮತ್ತು ತುಡಿತ

೪.೩. ಸಾಂಪ್ರದಾಯಿಕ ಶಿಕ್ಷಣ ಮತ್ತು ಇಂಗ್ಲಿಷ್ ಶಿಕ್ಷಣದ ನಡುವಿನ ಸಂಘರ್ಷ

೪.೪. ಇಂಗ್ಲಿಷ್ ಜ್ಞಾನದ ಕೊರತೆಯಿಂದ ಉಂಟಾದ ಆತಂಕ

೪.೫. ಇಂಗ್ಲಿಷ್ ಭಾಷೆಯ ಪ್ರಭಾವ ಮತ್ತು ಪಲ್ಲಟಗಳು

೪.೬. ದೇಸಿ ಭಾಷೆಗಳು ಎದುರಿಸುತ್ತಿರುವ ಸಮಸ್ಯೆ

ಅಧ್ಯಾಯ ೪. ತುಳುನಾಡಿನ ಕಥನ ಸಾಹಿತ್ಯದಲ್ಲಿ ಇಂಗ್ಲಿಷ್ ದರ್ಶನ

೪.೧. ತುಳುನಾಡಿನ ಪರಂಪರಾಗತ ಶಿಕ್ಷಣ ಕ್ರಮ

ಪ್ರಾಚೀನ ಕಾಲದಲ್ಲಿ ಶಿಕ್ಷಣವು ಗುರುಕುಲಗಳಲ್ಲಿ, ಬೌದ್ಧ ವಿಹಾರಗಳಲ್ಲಿ ನಡೆಯುತ್ತಿತ್ತು. ವೈದಿಕರಿಗೆ ಶಿಕ್ಷಣ ನೀಡಲು ಐಗಳ ಮಠಗಳು ಅಸ್ತಿತ್ವಕ್ಕೆ ಬಂದವು. ಭಾಗವತ, ರಾಮಾಯಣ, ಮಹಾಭಾರತ, ಮಗ್ಗಿ, ದಸ್ತಾವೇಜು, ನೋಟುಗಳ ಒಕ್ಕಣೆ, ತಾಳೆಗರಿ ಬರಹ ಮೊದಲಾದ ವಿಷಯಗಳ ಕುರಿತು ತಿಳುವಳಿಕೆ ನೀಡಲಾರಂಭಿಸಿದವು. ತನ್ನ ಸಮುದಾಯದವರಿಗೆ ಮಾತ್ರ ಶಿಕ್ಷಣ ನೀಡಲು ಸೀಮಿತಗೊಂಡಿದ್ದ ಈ ಮಠಗಳು ಆಂಗ್ಲ ಮಾಧ್ಯಮ ಶಾಲೆಗಳು ತೆರೆಯಲ್ಪಟ್ಟಾಗ ತೀವ್ರ ಸ್ಪರ್ಧೆಯನ್ನು ಎದುರಿಸಿದವು. ಕೆಳವರ್ಗದವರಿಗೆ ಶಿಕ್ಷಣ ಪಡೆಯಲು ಅವಕಾಶವಿರಲಿಲ್ಲ. ಕೇವಲ ಮೇಲ್ವರ್ಗದ ಹುಡುಗಿಯರಿಗೆ ಕನಿಷ್ಠ ವ್ಯಾಸಂಗಕ್ಕೆ ಅವಕಾಶವಿತ್ತು.

ಆಂಗ್ಲ ಮಾಧ್ಯಮದತ್ತ ವೈದಿಕರಿಗೂ ಒಲವು ತೀವ್ರವಾದುದರಿಂದ ಉಂಟಾಗುವ ಸಂಘರ್ಷವನ್ನು 'ಮರಳಿ ಮಣ್ಣಿಗೆ' ಕಾದಂಬರಿ ಚಿತ್ರಿಸಿದೆ. 'ಉಲ್ಲಂಘನೆ', 'ಮುಖಾಂತರ'ಗಳಲ್ಲಿ ಮಠಗಳ ಉಲ್ಲೇಖವಿದೆ. ಶಂಕರ ಐಗಳು ಎಲ್ಲಾ ಸಮುದಾಯದವರನ್ನು ಶಿಕ್ಷಣ ನೀಡಲು ಒಟ್ಟು ಸೇರಿಸಿದ್ದರೆ ಶ್ರೀಮಂತರಾಗಬಹುದಿತ್ತು. ಆದರೆ ಪರಂಪರೆಯನ್ನು ಮೀರಲಾಗದೆ ಬಡವರಾಗಿಯೇ ಉಳಿದರು. ಐಗಳ ಮಠಗಳನ್ನು ವಿದ್ಯಾರ್ಥಿಗಳು ನೀಡುವ ಅಕ್ಕಿಮುಡಿ, ತರಕಾರಿಗಳಿಂದ ಬದುಕು ಸಾಗಿಸುತ್ತಿದ್ದವರು. ಆಂಗ್ಲ ಮಾಧ್ಯಮಗಳ ಕಡೆಗಿನ ವೈದಿಕರ ಒಲವಿನಿಂದ ಹಸಿವಿನ ಸಮಸ್ಯೆಯನ್ನು ಎದುರಿಸಬೇಕಾಯಿತು. ಇದನ್ನು ನಿವಾರಿಸಲು ವೈದಿಕರ ಮನೆಗೆ ತೆರಳಿ ಮನವೊಲಿಸುವುದು ಅನಿವಾರ್ಯವಾಯಿತು. 'ಉಲ್ಲಂಘನೆ' ಕಾದಂಬರಿಯಲ್ಲಿ ಸಂಕಪ್ಪನ ಶಿಕ್ಷಣದ ಆಯ್ಕೆಯ ಚರ್ಚೆ ಇದೆ. ಮಠಗಳ ಶಿಕ್ಷಣ ಅಥವಾ ಸರಕಾರಿ ಶಾಲೆ ಎಂಬ ಆಯ್ಕೆ ಪ್ರಶ್ನೆ ಎದುರಾದಾಗ ಸರಕಾರಿ ಶಾಲೆಗಳ ಕಡೆ ಒಲವು ತೋರುತ್ತಾರೆ. ಮಠಗಳ ಶಿಕ್ಷಣದ ಒಲವು ಕಡಿಮೆಯಾಗುವುದು ನಿಧಾನವಾಗಿ ಜರುಗುತ್ತದೆ.

'ಅಂದಿನ ಕಾಲದ ವಿದ್ಯಾಭ್ಯಾಸದ ವಿವರಗಳು ಕಾವ್ಯ, ಶಾಸನಗಳಲ್ಲಿ ತಕ್ಕಮಟ್ಟಿಗೆ ಕಂಡುಬರುತ್ತವೆ. ಸಮಾಜದಲ್ಲಿ ಮೇಲ್ವರ್ಗದ ಬ್ರಾಹ್ಮಣ, ಜೈನ, ಶೈವರಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವಿದ್ದು, ಉಳಿದ ಕೆಳವರ್ಗದವರು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದರು. ಧಾರ್ಮಿಕ ಮಠ, ದೇವಾಲಯ, ಬಸದಿಗಳೇ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದು, ಆಯಾ ಪರಂಪರೆಯ ಧಾರ್ಮಿಕ ಶಾಸ್ತ್ರಗ್ರಂಥಗಳನ್ನು ಕಲಿಸಲಾಗುತ್ತಿತ್ತು. ಜೊತೆಗೆ ಅಂದಿನ ಕಾಲಕ್ಕೆ ಅಗತ್ಯವಾದ ನಾಟಕ, ತರ್ಕ, ಅಲಂಕಾರ, ಸಂಹಿತೆ, ನಾಟ್ಯ, ಜ್ಯೋತಿಷ್ಯ, ಮಂತ್ರ, ಶಿಲ್ಪ, ನ್ಯಾಯ, ವೇದ, ಪುರಾಣ, ವೈದ್ಯ, ಗಣಿತ, ಗಾಂಧರ್ವ, ಹಸ್ತಶ್ವ, ಸಾಮುದ್ರಿಕ, ಆಯುರ್ವೇದಗಳನ್ನೂ ಕಲಿಸಲಾಗುತ್ತಿತ್ತು.[೧] ತುಳುನಾಡಿನ ಶಿಕ್ಷಣ ವ್ಯವಸ್ಥೆಯ ಕುರಿತು ಮೇಲಿನ ಮಾತುಗಳು ಬೆಳಕು ಚೆಲ್ಲುತ್ತವೆ.

೪.೨. ಇಂಗ್ಲಿಷ್ ಶಿಕ್ಷಣದ ಹಿನ್ನೆಲೆ ಮತ್ತು ತುಡಿತ

'೧೮-೧೯ನೆಯ ಶತಮಾನದಲ್ಲಿ ಕ್ರೈಸ್ತ ಮತ ಬೋಧಕರು ದೇಶಾದ್ಯಂತ ಶಾಲೆಗಳನ್ನು ಪ್ರಾರಂಭಿಸಿದ್ದರು'.[೨] ಬ್ರಿಟಿಷ್ ಅಧಿಕಾರಿ ವಾರನ್ ಹೇಸ್ಟಿಂಗ್ ಭಾರತದಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ವಹಿಸಿ ದುಡಿದನು. ೧೮೨೩ರಲ್ಲಿ ಸಾರ್ವಜನಿಕ ಶಿಕ್ಷಣ ಸಮಿತಿ ಅಸ್ತಿತ್ವಕ್ಕೆ ಬಂದಿತು. ನಂತರ ಶಿಕ್ಷಣ ಮಾಧ್ಯಮದ ಕುರಿತು ಒಮ್ಮತವಿಲ್ಲದೆ ಎರಡು ಪಂಗಡಗಳಾಗಿ ಸಾರ್ವಜನಿಕ ಶಿಕ್ಷಣ ಸಮಿತಿ ಒಡೆದಿತ್ತು. ಓರಿಯಂಟಲಿಸ್ಟರು ದೇಸಿ ಭಾಷೆಗಳಲ್ಲಿ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿದರೆ, ಆಂಗ್ಲಿಸಿಸ್ಟ್ ಪಂಗಡದವರು ಇಂಗ್ಲಿಷ್ ಮಾಧ್ಯಮದ ಅಗತ್ಯತೆ ಕುರಿತು ಚರ್ಚಿಸಿದರು. ಮೆಕಾಲೆಯ ನೇತೃತ್ವದಲ್ಲಿ ಬೆಂಟಿಂಕ್ ಶಿಕ್ಷಣದ ಮಾಧ್ಯಮದ ಕುರಿತು ಸಮಿತಿಯನ್ನು ರಚಿಸಿದನು. ಮೆಕಾಲೆ ಇಂಗ್ಲಿಷ್ ಭಾಷೆ ಮತ್ತು ವಿಜ್ಞಾನದ ಅಗತ್ಯತೆ ಕುರಿತು ವರದಿ ಮಂಡಿಸಿದನು. 'ಭಾರತೀಯ ಶಿಕ್ಷಣ ಮಸೂದೆ'(೧೮೩೫)ಯನ್ನು ಲಾರ್ಡ್ ಮೆಕಾಲೆ ಲಂಡನ್‌ನಲ್ಲಿ ಮಂಡಿಸಿದಾಗ, ಅದು ಬ್ರಿಟಿಷ್ ಅಧಿಕಾರವನ್ನು ಒಪ್ಪುವ ಭಾರತೀಯ ಜನರನ್ನು ಸಿದ್ಧ ಮಾಡುವ ಉದ್ದೇಶ ಹೊಂದಿತ್ತು. ನೂತನ ಶಿಕ್ಷಣ ಪದ್ಧತಿಯ ಪ್ರಯೋಗ, ಭಾರತೀಯ ಭಾಷೆಗಳ ಅಭಿವೃದ್ಧಿಯನ್ನು ಸಹಗುರಿಯಾಗಿ ಹೊಂದಿತ್ತು. ೧೮೮೨ರಲ್ಲಿ ರಚಿಸಲಾದ ಹಂಟರ್ ಆಯೋಗವು ಭಾರತಲ್ಲಿ ಪ್ರಾಥಮಿಕ ಶಿಕ್ಷಣದ ಕುರಿತು ಮಂಡಿಸಿದ ವರದಿಯಿಂದ ದೇಶಾದ್ಯಂತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ತೆರೆದವು. 'ಕ್ರಿ.ಶ ೧೮೩೦ನೆಯ ದಶಕದಿಂದ, ಇಂಗ್ಲಿಷ್ ಶಿಕ್ಷಣ ಕ್ರಮವು ನಾಡಿನಲ್ಲಿ ನೆಲೆಗೊಳ್ಳತೊಡಗಿತು.'[೩] ಹೀಗೆ ಆರಂಭವಾದ ಇಂಗ್ಲಿಷ್ ಶಿಕ್ಷಣ ಇಂದಿಗೂ ಪ್ರಭಾವಿ ಮಾಧ್ಯಮವಾಗಿಯೇ ಉಳಿದುಬಿಟ್ಟಿದೆ.

ಇ. ಇಂಗ್ಲಿಷ್‌ನ ತುಡಿತ

ವಸಾಹತುಶಾಹಿ ಶಿಕ್ಷಣ ಪ್ರಭಾವಿಯಾಗುತ್ತಿದ್ದಂತೆ ಅವರ ಭಾಷೆಯನ್ನು ಕಲಿಯಬೇಕಾದ ಅನಿವಾರ್ಯತೆ ಒದಗಿತು. ಉಳ್ಳವರು ಇಂಗ್ಲಿಷ್ ಶಿಕ್ಷಣ ಹೊಂದಿ ವಕೀಲನಾಗುವ, ತಹಶೀಲ್ದಾರನಾಗುವ ಕನಸು ಕಂಡರು. ತಮ್ಮ ಮಕ್ಕಳು ಓದಿ ಮುಂದೆ ಬರಬೇಕು, ಇಂಗ್ಲಿಷ್ ಅನಿವಾರ್ಯ, ಪ್ರತಿಷ್ಠೆ, ಸ್ಥಾನಮಾನಗಳನ್ನು ಜೊತೆ ಜೊತೆಗೇ ಬೆಳೆಸುತ್ತದೆ ಎಂಬ ಪ್ರಜ್ಞೆ ತಿಳಿದವರಲ್ಲಿ ಜಾಗ್ರತವಾಗುತ್ತ ಸಾಗುತ್ತದೆ. ಉನ್ನತ ಹುದ್ದೆ ಪಡೆಯಲು ಇಂಗ್ಲಿಷ್ ಅನಿವಾರ್ಯ ಎಂಬ ಅರಿವು ಮೂಡುತ್ತದೆ.

'ಇಂದಿರಾಬಾಯಿ' ಕಾದಂಬರಿಯಲ್ಲಿ ಭಾಸ್ಕರ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ತೆರಳುವ ಸನ್ನಿವೇಶವಿದೆ. ಸಿ.ಎಸ್. ಕಲಿತು ಅಸಿಸ್ಟೆಂಟ್ ಕಲೆಕ್ಟರನಾಗಿ ಊರಿಗೆ ಮರಳುತ್ತಾನೆ. ಇಂದಿರಾಬಾಯಿ ಸತಾರಾನಗರದಲ್ಲಿ ಇಂಗ್ಲಿಷನ್ನು ಕಲಿಯುತ್ತಾಳೆ. ಆ ಕಾಲದಲ್ಲಿ ವಿದೇಶಕ್ಕೆ ತೆರಳಿದರೆ ಜಾತಿ ಕೆಡುತ್ತದೆ ಎಂಬ ನಂಬಿಕೆ ಇತ್ತು. ಇಂಗ್ಲಿಷ್ ಶಿಕ್ಷಣ ಪಡೆದರೂ ಜಾತಿ ಕೆಡುವುದೆಂಬ ನಂಬಿಕೆ ಬೇರೂರಿತ್ತು. ಆಧುನಿಕ ಮನೋಭಾವದವರು ಶಿಕ್ಷಣ, ವಿದೇಶಿ ಪ್ರವಾಸವನ್ನು ಪ್ರೋತ್ಸಾಹಿಸುತ್ತಿದ್ದರು. ಆಗಿನ ಕಾಲದಲ್ಲಿ ಅನೇಕರು ಇಂಗ್ಲಿಷ್ ಕಲಿಯುತ್ತಿದ್ದರು ಎಂಬ ತಿಳುವಳಿಕೆಯನ್ನು ಕಾದಂಬರಿ ನೀಡುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ರಾಮ ಐತಾಳರು ಹಲವು ವಿರೋಧಗಳ ನಡುವೆ ಲಚ್ಚನನ್ನು ಇಂಗ್ಲಿಷ್ ಶಾಲೆಗೆ ಸೇರಿಸುತ್ತಾರೆ. ಶಂಕರ ಐಗಳ ಪ್ರಸ್ತಾಪ, ಸರಸೋತಿಯ ಪರಂಪರೆಯ ಕುರಿತ ಕಾಳಜಿ ಎಲ್ಲವನ್ನು ಮೀರಿ ಐತಾಳರು ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಸಮ್ಮತಿ ನೀಡುತ್ತಾರೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಕೋಚಣ್ಣ ರೈಗಳು ಮಗ ಸಂಕಪ್ಪ ಹೆಗ್ಡೆ ವಕೀಲನಾಗಬೇಕೆಂದು ಆಸೆ ಪಡುವುದು ಮುಖ್ಯ ಬದಲಾವಣೆ. ಸಂಕಪ್ಪನಿಗಾಗಿ ಗುತ್ತಿನ ಸ್ಥಳದಲ್ಲಿ ಶಾಲೆಯೊಂದು ತೆರೆಯಲ್ಪಡುತ್ತದೆ. ಒಕ್ಕಲು ಮಕ್ಕಳನ್ನು ಅದೇ ಶಾಲೆಗೆ ಸೇರಲು ಪ್ರೋತ್ಸಾಹಿಸುವುದು ಸಾಮಾನ್ಯ ಮಾತಲ್ಲ. ಆಧುನಿಕ ವಿದ್ಯಾಭ್ಯಾಸವು ಸಮಾನತೆಯನ್ನು ರೂಢಿಗೊಳಿಸಲು ಒಂದು ಪ್ರಮುಖ ಕಾರಣವಾಯಿತು. ಗುತ್ತಿನ ಮನೆಯೊಳಗೆ ಪ್ರವೇಶ ಪಡೆಯದ ಕೆಲವು ಸಮುದಾಯದವರು ಶಾಲೆಯೊಳಗೆ ಪ್ರವೇಶ ಪಡೆದರು. ಗುತ್ತಿನವ ಮಾತ್ರ ಸಮರ್ಥ ಎಂಬ ರೂಢಿಗತ ನಂಬಿಕೆಯನ್ನು ಆಂಗ್ಲ ವಿದ್ಯಾಭ್ಯಾಸವು ಅಸತ್ಯ ಎಂದು ತೀರ್ಮಾನಿಸುತ್ತದೆ. ಅಧಿಕಾರಿ ವರ್ಗದವರಿಗೆ ಮೀಸಲಾಗಿರುವ ಪ್ರಧಾನ ಸ್ಥಾನವನ್ನು ಇದು ಪಲ್ಲಟಗೊಳಸುತ್ತಾ, ಕಲಿಕೆ ಒಂದು ವರ್ಗದ ಸೊತ್ತಲ್ಲ ಎಂದು ಪ್ರತಿಪಾದಿಸುತ್ತದೆ.

ಉಲ್ಲಂಘನೆಯಲ್ಲಿ ಅಂಬಕ್ಕೆ ಇಂಗ್ಲಿಷ್ ಪದಗಳಾದ ಥ್ಯಾಂಕ್ಸ್, ವೆಲ್ ಕಂ, ಗುಡ್, ಎಸ್, ನೋ, ಓಕೆ ಮೊದಲಾದವುಗಳನ್ನು ಕಲಿಯುತ್ತಾಳೆ. ಅಂಬಕ್ಕೆಯ ಮೊಮ್ಮಗಳು ಪ್ರಜ್ಞಾ ಹೇಳಿ ಉರು ಹೊಡೆಸಿ ಕಲಿಸುತ್ತಾಳೆ. ಬ್ರಿಟಿಷರು ತೆರಳಿದರೂ ಅವರ ಇಂಗ್ಲಿಷ್ ಮಾತ್ರ ಇನ್ನೂ ಆಳಕ್ಕಿಳಿದು ಜನಮಾನಸವನ್ನು ಪೂರ್ತಿಯಾಗಿ ವ್ಯಾಪಿಸಿ ಬಿಟ್ಟಿರುವುದನ್ನು ಗಮನಿಸುತ್ತೇವೆ.

'ಮುಖಾಂತರ' ಕಾದಂಬರಿಯಲ್ಲಿ ಮಾರಪ್ಪ ಶೆಟ್ಟರು ತನ್ನ ಮಗನನ್ನು ಬಂಟರ ಹಾಸ್ಟೆಲಿನಲ್ಲಿ ಸೇರಿಸಿ ಓದಲು ಕಳುಹಿಸುತ್ತಾರೆ. ವಕೀಲನಾಗಲಿ ಎಂಬ ಆಸೆ ಅವರದ್ದು. ಆದರೆ ಮಗ ಮಂಜುನಾಥ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತನಾಗಿ ವಿದ್ಯಾಭ್ಯಾಸ ನಿಲ್ಲಿಸಿದರೂ, ನಂತರದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ ವಕೀಲನಾಗುತ್ತಾನೆ. ಇಂಗ್ಲಿಷ್ ಶಿಕ್ಷಣದತ್ತ ಮಾರಪ್ಪ ಶೆಟ್ಟರು ಆಸಕ್ತಿ ತೋರಿದ್ದು ಅದರಿಂದ ಲಭ್ಯವಾಗುವ ಉದ್ಯೋಗ ಮತ್ತು ಗೌರವಕ್ಕೆ ಮಾತ್ರ.

'ನೋಡು ಉಙ್ಞಕ್ಕೆ, ಶ್ರೀಮಂತಿಕೆಯಲ್ಲಿ ನಮ್ಮ ಮನೆತನಕ್ಕಿಂತಲೂ ನಿನ್ನ ಮನೆತನ ದೊಡ್ಡದಾಗಿರಬಹುದು! ಆದರೆ ಬೆಲೆ ಇರುವುದು ದುಡ್ಡಿಗಲ್ಲ. ನಿಜವಾದ ದುಡ್ಡು ಅಂದರೆ ವಿದ್ಯೆಯೇ. ನಮ್ಮ ಮಗನನ್ನು ನಾವು ಓದಿಸಿದರೆ ಈ ಬ್ರಿಟಿಷ್ ಸರಕಾರದಲ್ಲಿ ಕೆಲಸ ಸಿಗುವುದಕ್ಕೆ ತೊಂದರೆ ಇಲ್ಲ. ಈಗ ನೋಡು, ನಮ್ಮ ಜಿಲ್ಲೆಗೆ ಶಿರಸ್ತೇದಾರರಾಗಿ ಬರುವ ಜನರೆಲ್ಲ ನಮ್ಮ ಜನವೇ. ನಿನ್ನ ಮಗನೂ ನಾಳೆ ಶಿರಸ್ತೇದಾರನೋ, ತಹಶೀಲ್ದಾರನೋ ಆದರೆ ನನ್ನಂಥ ಹತ್ತು ಪಠೇಲರು ಅವನಿಗೆ ಸಲಾಂ ಹೊಡೆಯಬೇಕು.'(ಮುಖಾಂತರ, ಪುಟ ೩೦೭) ಪಠೇಲರ ಈ ಮಾತು ಮೇಲಿನ ಅಂಶಗಳನ್ನು ಸ್ಪಷ್ಟಪಡಿಸುತ್ತದೆ. ಸರಕಾರಿ ಉದ್ಯೋಗಿಗಳೆಂದರೆ ಎಲ್ಲರಿಂದಲೂ ಗೌರವ ದೊರಕುತ್ತಿದ್ದ ಕಾಲವದು. ಮಾರಪ್ಪ ಶೆಟ್ಟರು ಪಡ್ಪುಗುತ್ತಿನಲ್ಲಿ ಮಗನಿಗೆ ಇಂಗ್ಲಿಷ್ ವಿದ್ಯಾಭ್ಯಾಸ ನೀಡುವ ಆಸೆ ವ್ಯಕ್ತಪಡಿಸಿದಾಗ ಯಾರೂ ವಿರೋಧಿಸಲಿಲ್ಲ. ಬದಲಾದ ಕಾಲಘಟ್ಟದ ಅರಿವು ಜನರಲ್ಲೂ ಇತ್ತು. ಮಂಜುನಾಥ ಮಂಗಳೂರಿನ ಬಂಟರ ಹಾಸ್ಟೆಲಿನಲ್ಲಿದ್ದು ಇಂಟರ್

ಮೀಡಿಯಟ್ ಶಿಕ್ಷಣ ಮುಂದುವರೆಸುತ್ತಾನೆ. ಪಠೇಲರ ನಿರ್ಧಾರಕ್ಕೆ ಏನೂ ಪ್ರತಿರೋಧವಿಲ್ಲದೆ ಇರುವುದನ್ನು ಗಮನಿಸಬಹುದು. ಜೊತೆಗೆ ಮನೆತನದ ಕುಲಕಸುಬು ಮುಂದುವರಿಸುವುದಕ್ಕಿಂತ ಶಿಕ್ಷಣ ಪಡೆದು ಉನ್ನತ ಹುದ್ದೆಯನ್ನು ಅಲಂಕರಿಸುವುದು ಮುಖ್ಯ ಎಂಬ ಪ್ರಜ್ಞೆ ಪ್ರಮುಖ ಪಲ್ಲಟವಾಗಿದೆ.

'ಮುಖಾಂತರ' ಕಾದಂಬರಿಯಲ್ಲಿ ಕೃಷ್ಣಯ್ಯನ ಮೊಮ್ಮಗ ಶಂಕರನ ವಿದ್ಯಾಭ್ಯಾಸ ಗುರುಕುಲ ಪದ್ಧತಿಯಲ್ಲಿ ರಾಮ ಹೊಳ್ಳರಿಂದ ಆರಂಭವಾಗುತ್ತದೆ. ತಮ್ಮ ಮನೆಯಲ್ಲೇ ಆಸಕ್ತ ಮಕ್ಕಳಿಗೆ ಅಕ್ಷರಭ್ಯಾಸ ಮಾಡಿ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯನ್ನು ಕಲಿಸಲು ಆರಂಭಿಸುತ್ತಾರೆ. ಜನರೂ ಇಂಗ್ಲಿಷ್‌ನತ್ತ ಒಲವು ತೋರಿಸುತ್ತಿದ್ದುದೇ ಇಂಗ್ಲಿಷ್ ಕಲಿಕೆಗೆ ಕಾರಣವೆಂಬುದು ಸ್ಪಷ್ಟವಾಗುತ್ತದೆ.

ಮುಂದೆ ಉಡುಪಿಯ ಮಠದಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ವಿಷ್ಣುಐತಾಳ, ಕೃಷ್ಣಯ್ಯ ಶಂಕರನನ್ನು ಉಡುಪಿಗೆ ಕರೆದುಕೊಂಡು ಹೋದರು. ಪರ್ಯಾಯದಲ್ಲಿರುವ ಮಠದ ಪಾರುಪತ್ಯಗಾರರ ಕಾಲು ಹಿಡಿದು ಶಿಕ್ಷಣದ ಅವಕಾಶಕ್ಕಾಗಿ ಬೇಡಿದಾಗ ಅವರು 'ಇವನು ಸಂಸ್ಕೃತ ಮಾತ್ರ ಓದುವುದೋ ಜೊತೆಗೆ ಇಂಗ್ಲೀಷೂ ಓದಬೇಕೆಂದುಕೊಂಡಿದ್ದಾನೋ?' ಎಂದು ಪ್ರಶ್ನೆ ಹಾಕಿದರು. (ಮುಖಾಂತರ, ಪುಟ ೩೯೩)

'ನಮ್ಮ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ವರುಷದಿಂದ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಅವಕಾಶ ಇದ್ದು ಜೊತೆಯನ್ನು ಎರಡನ್ನೂ ಓದಲು ಆಗುವುದರಿಂದ, ನಿಮ್ಮ ಮಗ ಎರಡೂ ಭಾಷೆಯನ್ನೂ ಕಲಿಯಲಿ ಎಂದರು.'(ಮುಖಾಂತರ, ಪುಟ ೩೯೪)

ಇಂಗ್ಲಿಷ್ ಅನಿವಾರ್ಯವೆಂಬ ಅಂಶ ಆಗಲೇ ಮನವರಿಕೆ ಆಗಿರುವುದನ್ನು ಕಾಣಬಹುದು. ಮಠ ಉಳಿಯಬೇಕಾದರೆ ಪರಕೀಯ ಭಾಷೆಯಾದ ಇಂಗ್ಲಿಷನ್ನು ಕಲಿಸಬೇಕಾದ ಪಲ್ಲಟ ಮುಖ್ಯ. ಅಧಿಕಾರ ಕೇಂದ್ರಕ್ಕೆ ವಿರುದ್ಧವಾಗಿ ಧಾರ್ಮಿಕ ಪರಂಪರೆಯ ಮಠಗಳೂ ಉಳಿಯಲಾರವು ಎಂಬ ಸೂಚನೆ ಇದೆ. ಅಳಿವು ಉಳಿವಿನ ಪ್ರಶ್ನೆ ಬಂದಾಗ ಹೊಂದಾಣಿಕೆ ಅನಿವಾರ್ಯ. ದುರ್ಬಲರು ಪ್ರಬಲರ ಕಾಯ್ದೆಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಬಗೆ ಸಮಾಜದ ಒಂದು ನೋಟವನ್ನು ನೀಡುತ್ತದೆ. ಅಧಿಕಾರದ ಜೊತೆಗಿನ ಅನುಸಂಧಾನ ಮಾದರಿಗೆ ಇದು ಉದಾಹರಣೆಯೂ ಹೌದು.

ಶಂಕರ ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದರಿಂದ ಅನಿವಾರ್ಯವಾಗಿ ಮಠವನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟಗಾರರ ಸಲಹೆಯಂತೆ ತಟ್ಟಿಶಾಲೆ ನಿರ್ಮಾಣಕಾರ್ಯ ಆರಂಭವಾಗುತ್ತದೆ. ಉದ್ಘಾಟನಾ ದಿನ ಕೆಲವು ಮಕ್ಕಳು ಭಾಗವಹಿಸಿದ್ದರು. 'ಒಬ್ಬಿಬ್ಬರು ಬ್ಯಾರಿಗಳು ತಮ್ಮ ಗಂಡು ಮಕ್ಕಳು ಓದಿಕೊಳ್ಳುವುದಾದರೆ ಓದಲಿ ಎಂಬಂತೆ ಮಕ್ಕಳನ್ನು ಕರೆತಂದಿದ್ದರೆ, ಕ್ರಿಶ್ಚಿಯನ್ ಸಮುದಾಯದ ಮಂದಿ ಇಂಗ್ಲೀಷ್ ಕಲಿತರೆ ಮಕ್ಕಳಿಗೆ ಉದ್ಯೋಗ ಸಿಗಬಹುದೆಂಬ ನಿರೀಕ್ಷೆಯಲ್ಲಿ ಹೆಚ್ಚು ಉತ್ಸಾಹದಲ್ಲಿ ಭಾಗವಹಿಸಿದ್ದರು.'(ಮುಖಾಂತರ, ಪುಟ ೪೩೭) ಇಲ್ಲಿ ಕಲಿಕೆಯ ಬಗ್ಗೆ ಮೂಡುವ ಎಚ್ಚರ ಗಮನಿಸಬಹುದು.

'ಮುಖಾಂತರ' ಕಾದಂಬರಿಯಲ್ಲಿ ಬಂಗಾರಣ್ಣ ರೀಡರ್ಸ್ ಡೈಜೆಸ್ಟ್ ಓದುಗ. 'ಬಹಳ ವರುಷಗಳಿಂದ ಅವರು ಕನ್ನಡದ 'ಕಸ್ತೂರಿ' ಮತ್ತು ಇಂಗ್ಲೀಷ್‌ನ 'ರೀಡರ್ಸ್ ಡೈಜೆಸ್ಟ್'ನ್ನು ತರಿಸಿಕೊಳ್ಳಲು ಹತ್ತಿದ್ದರು'.(ಮುಖಾಂತರ, ಪುಟ ೪೫೭) ದೇಸಿ ಭಾಷೆ ಜೊತೆಗೆ ಇಂಗ್ಲಿಷ್ ಮೇಲಿದ್ದ ಒಲವು ವ್ಯಕ್ತವಾಗುತ್ತದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಗಾಂಧಿ ತುಳುನಾಡಿಗೆ ಬಂದಾಗ ನೆಹರೂ ಮೈದಾನದಲ್ಲಿ ಇಂಗ್ಲಿಷ್‌ನಲ್ಲೆ ಭಾಷಣ ಮಾಡುತ್ತಾರೆ. ಅದ್ರಾಮನಿಗೆ ತೀರಾ ನಿರಾಸೆಯಾಗಿತ್ತು. ತಾನು ನಾಲ್ಕನೇ ಫಾರಂವರೆಗಾದರೂ ಓದಬೇಕಾಗಿತ್ತು ಎಂಬ ಅನಿಸಿಕೆ ಆತನಲ್ಲಿ ಮೂಡಿತ್ತು. ಆದರೆ ಭಾಷಣವನ್ನು ಭಾಷಾಂತರ ಮಾಡಿದಾಗ ಅದರ ಪೂರ್ಣ ಸಾರ ಅರಿತುಕೊಂಡು ಖುಶಿಯಾದ. ಹಲವು ಭಾಷೆಗಳಿಂದಾಗಿ ಇಂಗ್ಲಿಷ್ ಅನಿವಾರ್ಯ ಎಂಬ ಕಲ್ಪನೆ ನಂತರದ ದಿನಗಳಲ್ಲಿ ಬೆಳೆದಿರಬಹುದು.

'ಗೌಡರ ಹೆಂಡತಿ ಹೆತ್ತರು' ಎಂಬ ಸಣ್ಣಕತೆಯಲ್ಲಿ ರಾಜಣ್ಣನ ಇಂಗ್ಲಿಷ್ ತುಡಿತವನ್ನು ಗುರುತಿಸಬಹುದು. ಇಂಗ್ಲಿಷ್ ಓದಬೇಕೆಂಬ ಹುಚ್ಚು ಆತನಿಗೆ ಹಿಡಿದಿತ್ತು. ಆತನ ತಂದೆಯೂ ಮಗ ಇಂಗ್ಲಿಷ್ ಕಲಿಯುತ್ತಿದ್ದಾನೆಂದು ಕೊಚ್ಚಿಕೊಳ್ಳುತ್ತಿದ್ದರು.

ಇಂಗ್ಲಿಷ್ ಭಾಷೆಯತ್ತ ಜನರ ಮನ ಸೆಳೆಯಲು ಹಲವು ಕಾರಣಗಳು ಈ ಕೆಳಗಿನಂತಿವೆ.

೧. ಉನ್ನತ ಸ್ಥಾನಮಾನ

ಬ್ರಿಟಿಷರ ಆಡಳಿತ ಕಾಲದಲ್ಲಿ ಇಂಗ್ಲಿಷ್ ಭಾಷೆ ಪ್ರಭಾವಿಯಾಗುತ್ತಿದ್ದಂತೆ, ಇಂಗ್ಲಿಷ್ ಕಲಿತವರಿಗೂ ಮಹತ್ವದ ಸ್ಥಾನಮಾನ ಪ್ರಾಪ್ತಿಯಾಗುತ್ತದೆ. 'ಮರಳಿಮಣ್ಣಿಗೆ'ಯಲ್ಲಿ ವಕೀಲರಿಗೆ ನಡೆಯುವ ಸನ್ಮಾನ ಹಾಗೂ ಔತಣಕೂಟಗಳು ಜನರಲ್ಲಿ ಇಂಗ್ಲಿಷ್ ಕಲಿತರೆ ಗೌರವವಿದೆ ಎಂಬ ತಿಳುವಳಿಕೆಯನ್ನು ಹಬ್ಬಿಸುತ್ತವೆ. ಗುರಿಕಾರರಿಗೆ ಜನರಿಂದ ಸಿಗುವ ಮರ್ಯಾದೆ, ತಾವೂ ಪಡೆಯಬೇಕೆಂಬ ಹಂಬಲ ಹೆಚ್ಚುತ್ತದೆ. ಲಚ್ಚ ಇಂಗ್ಲಿಷ್ ಶಾಲೆಗೆ ಹೋಗಿ ತನ್ನ ಗೆಳೆಯರೊಂದಿಗೆ ಇಂಗ್ಲಿಷ್ ಮಾತನಾಡಿ ದೊಡ್ಡಸ್ತಿಕೆ ಪ್ರದರ್ಶಿಸುತ್ತಾನೆ. ಇಂಗ್ಲಿಷ್ ಬಾರದ ಸುಬ್ಬಿಯ ಗಂಡನ ಜೊತೆ ಆತ ಮಾತನಾಡಲು ಬಯಸುವುದಿಲ್ಲ.

'ರಿಸಾರ್ಟ್' ಎಂಬ ಸಣ್ಣಕತೆಯಲ್ಲಿ ಆರಂಭದಲ್ಲಿ ಒಕ್ಕಲಿನವನಾಗಿದ್ದು ಶ್ರೀಮಂತನಾದ ರಿಸಾರ್ಟ್ ಮಾಲೀಕ ತಿಮ್ಮಪ್ಪಗೌಡ ತನ್ನ ಸ್ಥಾನಮಾನ ಉಳಿಸಲು ಆಂಗ್ಲಭಾಷೆಯನ್ನೇ ಬಳಸುತ್ತಾನೆ. ಇಲ್ಲದಿದ್ದರೆ ತನ್ನ ಘನತೆಗೆ ಕುಂದು ಎಂಬುದಾಗಿ ಭಾವಿಸುತ್ತಾನೆ.

೨. ಪರಂಪರೆಯ ವೃತ್ತಿಯ ಕಡೆಗಿನ ಕುಂಠಿತ ಒಲವು

ಹಿಂದಿನ ಕಾಲದಿಂದಲೂ ತುಳುನಾಡಿನಲ್ಲಿ ವೃತ್ತಿ ಜಾತಿಯಾಧಾರಿತ ಹಾಗೂ ಪರಂಪರೆಯನ್ನು ಅನುಸರಿಸಿ ಇರುತ್ತಿತ್ತು. ತಂದೆಯ ವೃತ್ತಿಯನ್ನು ಮಗ ಅನುಸರಿಸುವುದು ಮಾಮುಲಾಗಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಉಂಟಾದ ರಾಜಕೀಯ ಪ್ರಭಾವದಿಂದ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಅವಕಾಶ ದೊರಕಿದ ನಂತರ ಜನರ ಚಿಂತನೆಗಳಲ್ಲೂ ಸಾಕಷ್ಟು

ಬದಲಾವಣೆಗಳು ಉಂಟಾದವು. ಇಂಗ್ಲಿಷ್ ಶಿಕ್ಷಣದಿಂದ ಶ್ರೀಮಂತಿಕೆ, ಸ್ಥಾನಮಾನ, ಅಧಿಕಾರ ಲಭ್ಯವಾಗುವಾಗ ಈಗಿರುವ ವೃತ್ತಿಗಿಂತ ಅದು ಆಕರ್ಷಣೀಯವಾಗಿ ಕಂಡಿತು. ಜೊತೆಗೆ ಇಂಗ್ಲಿಷ್ ಶಿಕ್ಷಣದಿಂದ ಲಭ್ಯವಿರುವ ಸರಕಾರಿ ಹುದ್ದೆಗಳಲ್ಲಿ ಜಾತಿಯ ಕಟ್ಟುಪಾಡು ಇರಲಿಲ್ಲ. ಜಾತಿಯಾಧಾರಿತ ವೃತ್ತಿಗಿಂತ ಭಿನ್ನ ವೃತ್ತಿ ಹಿಡಿಯಲು ಅವಕಾಶ ನೀಡಿತ್ತು. ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ರಾಮ ಐತಾಳರು ಮಠ ಹಾಗೂ ಸರಕಾರಿ ಶಾಲೆಗಳ ನಡುವಿನ ಆಯ್ಕೆ ಮಾಡಬೇಕಾಗಿ ಬರುತ್ತದೆ. ತನಗಿಂತ ಹೆಚ್ಚಿನ ಸ್ಥಾನಮಾನ ಸಿಗುವ ಜನರನ್ನು ಕಂಡಾಗ ಐತಾಳರು ತನ್ನ ಪರಂಪರೆಯ ಒಲವನ್ನು ತ್ಯಜಿಸುತ್ತಾರೆ. ವೈದಿಕ ವೃತ್ತಿಗಾಗಿ ಅಲೆದಾಡಲೇಬೇಕಾದ ಐತಾಳರು ಹೊರ ಜಗತ್ತಿನ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದವರು. ಆದ್ದರಿಂದಲೇ ಮಠ ಶಿಕ್ಷಣದ ಒಲವು ತೊರೆದು ಸರಕಾರಿ ಶಾಲೆಗೆ ಸೇರಿಸುವ ನಿರ್ಧಾರ ಆ ಕಾಲಘಟ್ಟದ ಜನ ಎದುರಿಸಿದ ದ್ವಂದ್ವ ಹಾಗೂ ಅದನ್ನು ಎದುರುಗೊಂಡ ಬಗೆಯನ್ನು ಚಿತ್ರಿಸುತ್ತದೆ.

೩. ನಂಬಿಕೆಗಳ ಸ್ಥಿತ್ಯಂತರ

ಇಂಗ್ಲಿಷ್ ಶಾಲೆಗೆ ಮಕ್ಕಳನ್ನು ಸೇರಿಸಲು ಹಲವು ನಂಬಿಕೆಗಳನ್ನು ಬಿಡಬೇಕಾಯಿತು. ಮೇಲ್ವರ್ಗ ಹಾಗೂ ಕೆಳವರ್ಗದ ಮಕ್ಕಳು ಒಟ್ಟಿಗೆ ವಿದ್ಯಾಭ್ಯಾಸ ಮಾಡುವುದನ್ನು ಸಹಿಸಬೇಕಾಯಿತು. ಸರಕಾರಿ ಶಾಲೆಗಳಿಗೆ ಜಾತಿಭೇದವಿರಲಿಲ್ಲ. ಜಾತಿಭೇದ ತೀವ್ರವಾಗಿದ್ದ ತುಳುನಾಡಿನಲ್ಲಿ ಜಾತೀಯತೆಯ ಪ್ರಜ್ಞೆ ಸಡಿಲಿಸುವಲ್ಲಿ ಈ ಶಾಲೆಗಳು ಸಹಕರಿಸಿದವು. ಕೆಳವರ್ಗದ ಅಧ್ಯಾಪಕರು ಮೇಲ್ವರ್ಗದವರಿಗೆ ಪಾಠ ಬೋಧಿಸುವಂತಾದುದು. ಸರಕಾರಿ ಶಾಲೆಗಳಿಗೆ ತಿಥಿ, ವಾರ ಹೀಗೆ ದಿನಗಳಲ್ಲಿ ವ್ಯತ್ಯಾಸವಿರಲಿಲ್ಲ. ಮಠದ ಶಾಲೆಗಳಿಗಿಂತ ಇಂಗ್ಲಿಷ್ ಶಾಲೆಗಳು ಭಿನ್ನವಾಗಿದ್ದವು. ಮಠದ ಶಾಲೆಗಳಿಗೆ ವರ್ಷಕ್ಕೆ ಅಕ್ಕಿಮುಡಿ, ತರಕಾರಿಗಳನ್ನು ನೀಡಿದರೆ ಇಂಗ್ಲಿಷ್ ವಿದ್ಯಾಭ್ಯಾಸವು ಹಣವನ್ನು ಆಧರಿಸಿತ್ತು. ತಾಳೆಗರಿ ಮೇಲಿನ ಬರಹ ಮಠದಲ್ಲಿದ್ದರೆ, ಸರಕಾರಿ ಶಾಲೆಗಳಲ್ಲಿ ಕಾಗದ, ಸ್ಲೇಟುಗಳು ಬಳಕೆಯಲ್ಲಿದ್ದವು. ಮಠದಲ್ಲಿ ನೆಲದ ಮೇಲೆ ಕೂತುಕೊಂಡರೆ ಇಲ್ಲಿ ಬೆಂಚುಗಳ ವ್ಯವಸ್ಥೆ ಇತ್ತು. ಹಲವು ಬದಲಾವಣೆಗಳು ಇಂಗ್ಲಿಷ್ ಶಾಲೆಗಳಿಂದ ಜಾರಿಗೆ ಬಂದವು. ಮಠಗಳ ಐಗಳಿಗೆ ಈ ಬದಲಾವಣೆಗಳು ನುಂಗಲಾರದ ತುತ್ತಾಗಿದ್ದವು. ಅವರ ನಂಬಿಕೆಗಳಿಗೆ ವಿರುದ್ಧವಾಗಿದ್ದವು.

೪.೩. ಸಾಂಪ್ರದಾಯಿಕ ಶಿಕ್ಷಣ ಹಾಗೂ ಮಠದ ನಡುವಿನ ಸಂಘರ್ಷ

ಆಧುನಿಕ ಶಿಕ್ಷಣವಾಗಿ ಇಂಗ್ಲಿಷ್ ಭಾಷೆ ತುಳುನಾಡಿನಲ್ಲಿ ಜಾರಿಗೆ ಬಂದಾಗ ಹಳೆಯ ಕ್ರಮದ ಶಿಕ್ಷಣದ ಎದುರು ಹೋರಾಡುವುದು ಅನಿವಾರ್ಯವಾಗಿತ್ತು. ಆಡಳಿತಾತ್ಮಕ ಬಲವಿದ್ದ, ಆರ್ಥಿಕವಾಗಿ ಉತ್ತಮ ಸಂಪಾದನೆ ಮಾಡಬಲ್ಲ ಶಕ್ತಿಯಿದ್ದ ಆಂಗ್ಲಭಾಷೆ ಪರಂಪರಾಗತ ಶಿಕ್ಷಣದ ಎದುರು ಸುಲಭವಾಗಿ ಜಯ ಗಳಿಸಿತು. ಆದರೆ ಐಗಳ ಮಠ ಹಾಗೂ ಇಂಗ್ಲಿಷ್ ಶಿಕ್ಷಣದ ಆಯ್ಕೆಯ ನಡುವೆ ನಡೆದ ಸಂಘರ್ಷವನ್ನು 'ಮರಳಿ ಮಣ್ಣಿಗೆ' ಕಾದಂಬರಿ ಸೂಕ್ತವಾಗಿ ಚಿತ್ರಿಸಿದೆ.

'ಮರಳಿಮಣ್ಣಿಗೆ'ಯ ರಾಮ ಐತಾಳರಲ್ಲಿ ಬದುಕಿನ ಅನುಭವವು ಇಂಗ್ಲಿಷ್ ವ್ಯಾಮೋಹವನ್ನು ಹುಟ್ಟಿಸುತ್ತದೆ. ತನ್ನ ಹಿರಿಮಗ ಲಚ್ಚನಿಗೆ ಐದು ವರ್ಷ ತುಂಬುತ್ತಲೇ

ಮನೆಯಲ್ಲಿ ಶಾಲೆಗೆ ಸೇರಿಸುವ ಕುರಿತು ಚರ್ಚೆ ನಡೆಯುತ್ತದೆ. ಪರಂಪರೆಯ ಐಗಳ ಮಠದ ಸೇರ್ಪಡೆಗಿಂತ ಇಂಗ್ಲಿಷ್ ಶಿಕ್ಷಣ ಆರ್ಥಿಕ ಲಾಭ, ಸ್ಥಾನಮಾನ, ಅಧಿಕಾರದ, ಮಿತ ಶ್ರಮದ ಕಾಯಕವಾಗಿ ಕಂಡು ಅದರತ್ತ ಸೆಳೆತ ಆರಂಭವಾಗುತ್ತದೆ. ಐತಾಳರ ಸೋದರಿ ಸರಸೋತಿ ಪರಂಪರೆಯ ಶಿಕ್ಷಣದ ಕಡೆ ಒಲವು ತೋರಿಸಿದರೆ ಐತಾಳರ ಒಲವು ಇಂಗ್ಲಿಷ್ ವಿದ್ಯಾಭ್ಯಾಸದ ಕಡೆಗೆ.

'ಪಾರಂಪಳ್ಳಿ ವಾಸ್ತೇವ ಗುರಿಕಾರರ ಮಕ್ಕಳನ್ನು ಕುಂದಾಪುರಕ್ಕೋ, ಉಡುಪಿಗೋ-ಇಂಗ್ಲೀಸಿಗೆ ಕಳುಹಿಸುತ್ತಾರಂತೆ.... ಲಚ್ಚನಿಗೆ ಇಂಗ್ಲೀಷು-ಪಂಗ್ಲೀಷು ಬೇಡ' ಒಂದು ಭಾಗವತ, ರಾಮಾಯಣ ಓದಿ ಹೇಳುವುದಕ್ಕೆ ಬಂದರೆ ಸಾಕು' ಎಂದಳು. (ಮರಳಿ ಮಣ್ಣಿಗೆ, ಪುಟ ೨೧೬) ಐತಾಳರು ತನ್ನ ಮಗನು ಇಂಗ್ಲಿಷನ್ನು ಕಲಿತು, ವಕೀಲನಾಗಿ ಊರಲ್ಲೆ ಯಾಕೆ ಹಣ ದೋಚಬಾರದು? ಎಂಬ ಕನಸನ್ನು ಕಾಣತೊಡಗಿದರು.

ಆರ್ಥಿಕತೆಯ ಲಾಭ ಜಾಸ್ತಿ ಇದ್ದಲ್ಲಿ ಮನುಷ್ಯನ ಒಲವು ಇದೆ. ವೈದಿಕನಾಗಿ ಮಠದ ಶಾಲೆಗೆ ಕಳುಹಿಸುವ ಬದಲಿಗೆ ಇಂಗ್ಲಿಷ್ ಶಾಲೆಗೆ ಕಳುಹಿಸಬೇಕೆಂಬ ಇರಾದೆ ಐತಾಳರದ್ದು. ಹಣ, ಅಧಿಕಾರ, ಪ್ರತಿಷ್ಠೆಗೆ ವ್ಯಕ್ತಿ ಒಲವು ಹೆಚ್ಚು. ಐತಾಳರ ಮಾವನೂ ಇದೇ ಅಭಿಪ್ರಾಯ ಹೊಂದಿದವನಾಗಿರುತ್ತಾನೆ. ಐತಾಳರ ಮಾವ ಅಳಿಯನೊಂದಿಗೆ, 'ಇನ್ನೇನು, ಈಗಿನ ದಿನಗಳಲ್ಲಿ ಇಂಗ್ಲೀಷ್ ನಾಲ್ಕು ಅಕ್ಷರವಾದರೂ ಬರುವವರಿಗೆ ಭರಾಮು, ಈ ಅಷ್ಟೋತ್ತರ, ಅಧ್ಯಯನ ಕಲಿತವರಿಗೆ ಎಂದೂ ಬರಲಾರದು' ಎಂದರು.(ಮರಳಿ ಮಣ್ಣಿಗೆ, ಪುಟ ೧೩೨)

ಕೃಷಿ ಕೆಲಸಕ್ಕಿಂತ ವಕೀಲ, ತಹಶೀಲ್ದಾರನಾಗುವುದು ಆಕರ್ಷಣೀಯವಾಗಿ ಕಂಡಿತು. ಜನರ ಗೌರವ ದೊರೆಯದ ಕಾಯಕಕ್ಕಿಂತ, ಬೆನ್ನುಮುರಿಯುವಂತೆ ದುಡಿಯುವ ಹೊಲದ ಕೆಲಸಕ್ಕಿಂತ ಇಂಗ್ಲಿಷ್‌ನ ಫಲ ಆಕರ್ಷಣೀಯವಾಗಿ ಕಂಡಿತು.

'ಲಚ್ಚನ ಸವಾರಿ ಒಂದಿಷ್ಟು ಇಂಗ್ಲೀಷು ಮಾಡಿದರೆ ಸಾಕಾಗಿತ್ತು. ದೇವರು ಅಷ್ಟು ನಡೆಸಿದರೆ ನಮ್ಮ ಹಾಗೆ ಅವನು ಹಗಲು ರಾತ್ರೆಯು ಸೆಟ್ಟು, ಕೆಸರು-ಎಂದು ತುಳಿಯುವುದು ಬೇಡ' ಎಂದರು.(ಮರಳಿ ಮಣ್ಣಿಗೆ, ಪುಟ ೧೩೨) ಇಲ್ಲಿ ಕೃಷಿಗಿಂತ ಇಂಗ್ಲಿಷ್ ಶಿಕ್ಷಣ ನೀಡುವ ಪ್ರತಿಫಲ ಹೆಚ್ಚು ಎನ್ನುವ ತಿಳುವಳಿಕೆಯಿದೆ.

ಶಂಕರ ಐಗಳು ತಮ್ಮ ಶಾಲೆಗೆ ಸೇರಿಸಲು ಪಣ ತೊಡುತ್ತಾರೆ. ಸರಸೋತಿ, ಪಾರೋತಿಯರಲ್ಲಿ ವಿಚಾರಿಸುತ್ತಾರೆ. ಅವರಿಗೆ ಅದು ಹೊಟ್ಟೆ ಹೊರೆಯುವ ಕಾಯಕ. ಆದರೆ ಲಚ್ಚನನ್ನು ರಾಮ ಐತಾಳರು, ಸತ್ಯ ಸೇರಿ ಅಜ್ಜನ ಊರಿನ ಇಂಗ್ಲಿಷ್ ಶಾಲೆಗೆ ಸೇರಿಸಿಯೇ ಬಿಟ್ಟರು. ಶಂಕರ ಐಗಳಿಗೂ ರಾಮ ಐತಾಳರಿಗೂ ನಡೆಯುವ ಸಂಘರ್ಷ ಗಮನಿಸಬಹುದು. ಪರಸ್ಪರ ವಿರುದ್ಧ ಧ್ರುವಗಳಲ್ಲಿ ಚಲಿಸುವ ಆಲೋಚನೆಗಳು. ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಕಾಣಬಹುದು. ಲಚ್ಚನ ಪ್ರಾಥಮಿಕ ವಿದ್ಯಾಭ್ಯಾಸ ಮುಗಿದು ಪ್ರೌಢಶಾಲಾ ವಿದ್ಯಾಭ್ಯಾಸದ ಕುರಿತು ಚರ್ಚೆ ನಡೆಯುತ್ತದೆ. 'ಈಗಿನ ಕಾಲದಲ್ಲಿ ಒಂದು ವಕೀಲನೋ, ತಹಶೀಲ್ದಾರನೋ ಆದರೆ ಬರುವ ಡೌಲು, ಗೌರವ ಇನ್ನು ಯಾವುದಕ್ಕೆ ಇದೆ? ಏನಿಲ್ಲ-ಹತ್ತು ವರ್ಷಗಳಲ್ಲಿ,

ಇಂಗ್ಲೀಷ್ ಕಲಿತದ್ದಾದರೆ ಕನಿಷ್ಠ ನಾಲ್ಕು ಕೋರ್ಜ ಹುಟ್ಟುವಳಿ ಮಾಡಬಹುದು' ರಾಮ ಐತಾಳರು ಅಂದುಕೊಳ್ಳುತ್ತಾರೆ.(ಮರಳಿ ಮಣ್ಣಿಗೆ, ಪುಟ ೧೩೩)

ಕುಟುಂಬದ ಕುಲಕಸುಬು ಮತ್ತು ಇಂಗ್ಲಿಷ್ ಇವೆರಡರ ಆಯ್ಕೆ ನಡುವೆ ಘರ್ಷಣೆ ಕಾಣಿಸುತ್ತದೆ. ಐತಾಳರು ಶ್ರಾದ್ಧ, ಮದುವೆಯನ್ನು ತನ್ನ ಕುಟುಂಬದಲ್ಲಿ ಮಾಡುತ್ತಿದ್ದವರು. ಮಗ ಲಚ್ಚ ಐತಾಳರ ತರುವಾಯ ಈ ಪರಂಪರೆಯ ವೃತ್ತಿ ಮುಂದುವರಿಸಬೇಕಾಗಿತ್ತು. ಆದರೆ ಐತಾಳರು ಇಂಗ್ಲಿಷನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಶೀನಮಯ್ಯನ ದೊಡ್ಡಸ್ತಿಕೆ, ಜನರ ನಿಂದನೆ ಅವರಿಗೆ ಪರಂಪರೆ ಮೀರಲು ಸ್ಫೂರ್ತಿ ನೀಡುತ್ತವೆ.

'ನನ್ನ ಮಗ ಅರ್ಧ ಇಂಗ್ಲೀಷು ಮಾಡಿ ಶಾಲೆ ಬಿಟ್ಟಿದ್ದೇ ನನಗೆ ಬೇಸರ. ಇವನಾದರೂ ಇಂಗ್ಲೀಷು ತಲೆತನಕ ಮುಟ್ಟಿಸಿದ್ದಾದರೆ, ಎರಡು ಮನೆಗಳಿಗೂ ಒಂದು ಮರ್ಯಾದೆ. ಈಗ ನಿಮ್ಮ ಉಪನಯನಕ್ಕೆ ಮಣೆಗಾರರು ಬಂದರಲ್ಲ. ಅವರು ಯಾವ ಊರಿಗೆ ಹೋದರೂ ಎಂಥಾ ಮರ್ಯಾದೆ ಇದೆ ಎಂಬುದು ಗೊತ್ತಿದೆಯೇ'? ಎಂದರು.(ಮರಳಿ ಮಣ್ಣಿಗೆ, ಪುಟ ೧೪೨)

ಐತಾಳರಿಗೂ ಲಚ್ಚ ತನ್ನಂತೆ ವೈದಿಕನಾಗುವುದು ಬೇಡ, ಲೌಕಿಕನಾಗಬೇಕು ಎಂಬ ಹಂಬಲದಲ್ಲೆ ಬದಲಾಗುತ್ತಿರುವ ಕಾಲದ ಪ್ರಭಾವವಿದೆ. ಅಲೌಕಿಕ ಶೀನಮಯ್ಯ ಮಯ್ಯರಾದದ್ದನ್ನು ಐತಾಳ ನೋಡಿದ್ದಾನೆ. ಊರಿನ ಗುರಿಕಾರರಿಂದ ಮದುವೆ ಮನೆಯಲ್ಲಿ ಅವಮಾನಿತನಾದ ಐತಾಳ 'ಅಂತು ಊರಿನ ಗುರಿಕಾರರ ಕೈಯಲ್ಲಿ ಇದೊಂದು ಶ್ರಾದ್ಧದ ಬ್ರಾಹ್ಮಣ ಅನಿಸಿಕೊಳ್ಳದಿದ್ದರೆ ಸಾಕು' ಎಂದು ಆಸೆ ಪಡುತ್ತಾನೆ.[೪]

ಐಗಳ ಮಠದ ಶಂಕರ ಐಗಳು ಪರಂಪರಾಗತ ನಂಬಿಕೆ ಬಿಡಲಾರದೆ ಇಂಗ್ಲಿಷನ್ನು ಅಪ್ಪಿಕೊಳ್ಳಲಾರದೆ ದ್ವಂದ್ವ ಮನಸ್ಥಿತಿಯಲ್ಲಿರುವುದು ಸ್ಪಷ್ಟವಾಗುತ್ತದೆ. ವೈದಿಕರನ್ನು ಬಿಟ್ಟು ಅನ್ಯಜಾತಿಯವರಿಗೆ ಕಲಿಸಲಾರದ ನಂಬಿಕೆ ಹಸಿವಿನ ಪ್ರಶ್ನೆ ಬಂದಾಗ ಬಂಡೇಳುತ್ತದೆ. ತನ್ನ ನಂಬಿಕೆ ಉಳಿಸಲು ರಾಮ ಐತಾಳರ ಮನೆಗೆ ತೆರಳುವ ಶಂಕರ ಐಗಳು ಸರಸೋತಿಯನ್ನು ಒಲಿಸಲು ಪ್ರಯತ್ನಿಸುತ್ತಾರೆ. ಲಚ್ಚನನ್ನು ತನ್ನ ಶಾಲೆಗೆ ಸೇರಿಸಲು ವಿಫಲವಾದಾಗ ಮೂಡುವ ಪ್ರಶ್ನೆಯಲ್ಲಿ ಬದಲಾಗಲೇಬೇಕಾದ ಕಾಲದ ಅನಿವಾರ್ಯತೆಯಿದೆ. ಪರಿಸ್ಥಿತಿ ಜೊತೆ ಹೊಂದಾಣಿಕೆ ಕಠಿಣವಾದಾಗ ಹಸಿವು, ಬಡತನ ಅನಿವಾರ್ಯ ಎಂಬ ತಿಳುವಳಿಕೆ ಇದೆ. ಅಳಿವು–ಉಳಿವಿನ ಪ್ರಶ್ನೆ ಉದ್ಭವಿಸಿದಾಗ ವ್ಯವಸ್ಥೆಗೆ ಸರಿಯಾಗಿ ಬದಲಾಗಲೇಬೇಕಾದ ಅನಿವಾರ್ಯತೆಯ ಮುನ್ಸೂಚನೆ ನೀಡುತ್ತಾ ಕಾದಂಬರಿ ಜನರ ಮನಸ್ಥಿತಿ ಬದಲಾಗುವುದನ್ನು ಸೂಚಿಸುತ್ತದೆ. ಮುಖಾಂತರ ಕಾದಂಬರಿಯಲ್ಲಿ ಕೃಷ್ಣಯ್ಯನವರ ಮೊಮ್ಮಗ ಶಂಕರನಿಗೆ ರಾಮ ಹೊಳ್ಳರಿಂದ ಮಠದಲ್ಲಿ ವಿದ್ಯಾಭ್ಯಾಸ ಆರಂಭವಾಗುತ್ತದೆ. ಇಂಗ್ಲಿಷನ್ನೂ ಭಾಷೆಯಾಗಿ ಕಲಿಸಲಾಗುತ್ತದೆ. ಉಡುಪಿ ಮಠದಲ್ಲೂ ಸಂಸ್ಕೃತದ ಜೊತೆಗೆ ಇಂಗ್ಲಿಷ್ ಕಲಿಸುವುದು ಬದಲಾಗುತ್ತಿರುವ ಪರಿಸ್ಥಿತಿಗಳೊಂದಿಗೆ ಹೊಂದಾಣಿಕೆ ಮಾಡಿ ಬದುಕಿ ಉಳಿಯುವ ಮನಸ್ಥಿತಿ ಕಂಡುಬರುತ್ತದೆ. ಇದು ಸೂಕ್ಷ್ಮವಾದ ಆದರೆ ಬದುಕಿಗೆ ಅನಿವಾರ್ಯವಾದ ಬದಲಾವಣೆ. ಅಧಿಕಾರದ ಬಲ ಇರುವ ಇಂಗ್ಲಿಷನ್ನು ತ್ಯಜಿಸಿದರೆ ಮಠಗಳು ಉಳಿಯುವುದು ಅಸಾಧ್ಯ ಎಂಬ ಸಂದರ್ಭ ಉದ್ಭವವಾದಾಗ ಅದು

ತನ್ನತನವನ್ನು ಮರೆಯದೆ ಅನ್ಯಭಾಷೆಯಾದ ಇಂಗ್ಲಿಷನ್ನು ಜೊತೆ ಸೇರಿಸಿ ಗಟ್ಟಿಗೊಳ್ಳಲು ಪ್ರಯತ್ನಿಸುತ್ತವೆ.

'ವೈದಿಕ-ಸಂಸ್ಕೃತ ಯಾಜಮಾನ್ಯ ಕೇವಲ ಧಾರ್ಮಿಕ-ಭಾಷಿಕ-ಸಾಂಸ್ಕೃತಿಕ ಯಾಜಮಾನ್ಯವಾಗಿತ್ತು. ಅದಕ್ಕೆ ನೇರ ರಾಜಕೀಯ ಬಲವಿರಲಿಲ್ಲ. ವಸಾಹತುಶಾಹಿಯಾದರೊ ಮೊದಲು ರಾಜಕೀಯ ಬಲವನ್ನಾಧರಿಸಿ, ಅನಂತರ ಸಾಂಸ್ಕೃತಿಕ ಯಾಜಮಾನ್ಯವನ್ನು ಮುಂದೊಟ್ಟಿತು. ಆದ್ದರಿಂದ ಆಧುನಿಕ ಕನ್ನಡ ಸಾಹಿತ್ಯ-ಸಂಸ್ಕೃತಿಗಳನ್ನು ಮಾರ್ಗ-ದೇಸಿ ಘರ್ಷಣೆಗಳಿಗಿಂತ ಭಿನ್ನವಾಗಿಯೇ ನೋಡಬೇಕು.'[೫] ಇಲ್ಲಿ ಇಂಗ್ಲಿಷ್ ಭಾಷೆ ರಾಜಕೀಯ ಶಕ್ತಿಯ ಕಾರಣ ಗೆಲುವು ಸಾಧಿಸಿದೆ ಎಂಬುದು ವಾಸ್ತವ ಸತ್ಯ

೪.೪. ಇಂಗ್ಲಿಷ್ ಜ್ಞಾನದ ಕೊರತೆಯಿಂದ ಉಂಟಾದ ಆತಂಕ

ಇಂಗ್ಲಿಷ್ ಭಾಷೆ ಸಾಮಾನ್ಯ ಜನರಲ್ಲಿ ಹಲವು ಬಗೆಯ ಆತಂಕಗಳನ್ನು ಸೃಷ್ಟಿಸುತ್ತದೆ. ಅದರ ಅಜ್ಞಾನವು ಕೆಲವೊಮ್ಮೆ ಆತ್ಮವಿಶ್ವಾಸ ಕುಗ್ಗಿಸಿದರೆ, ವಿಷಯ ತಿಳಿಯದೆ ಮಾರಣಾಂತಿಕ ಘಟನೆಗಳಿಗೂ ಕಾರಣವಾದುದನ್ನು ಉಲ್ಲಂಘನೆ ಸಮರ್ಥವಾಗಿ ಚಿತ್ರಿಸುತ್ತದೆ. ಐದನೆ ಈಯತ್ತೆವರೆಗೆ ಓದಿದ ಭೋಜ ಶೆಟ್ಟಿಗೆ ಇಂಗ್ಲಿಷ್ ಮೆನ್ ಎಂಬ ಗೌರವವಿತ್ತು. ಇಂಗ್ಲಿಷ್ ಸ್ವಲ್ಪ ತಿಳಿದರೂ ದೊಡ್ಡಸ್ತಿಕೆ ಪ್ರದರ್ಶಿಸುತ್ತಿದ್ದ. ಬ್ರಿಟಿಷ್ ದೊರೆ ಗೌಡ ಹೆಣ್ಣನ್ನು ತ್ಯಜಿಸಿದ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಗ್ಗೆ ಹೇಳಿದ ಸುಳ್ಳು ವದಂತಿಯಿಂದ ಗುತ್ತು ಅಲ್ಲೋಲಕಲ್ಲೋಲವಾಗುತ್ತದೆ. ವೆಂಕಪ್ಪಯ್ಯ ಹೆಗ್ಡೆಗೆ ಪಕ್ಷಾಘಾತ ಆಗುವುದರೊಂದಿಗೆ ಆರಂಭವಾದ ಸನ್ನಿವೇಶಗಳು ಆತನ ಅಂತ್ಯದಲ್ಲಿ ಪರ್ಯಾವಸನವಾಗುತ್ತದೆ. ಇಂಗ್ಲಿಷ್ ತಿಳುವಳಿಕೆಯ ಕೊರತೆ ಅಹಿತಕರ ಘಟನೆಗಳಿಗೆ ನಾಂದಿಯಾಗುತ್ತದೆ. ಇನ್ನೊಂದೆಡೆ ಕೋರ್ಟು ನೋಟಿಸು ಬಂದಾಗ ಸಾಯುವ ನಿರ್ಧಾರ ಪ್ರಕಟಿಸುವ ಸುಬ್ಬಣ್ಣ ಭಟ್ಟ ಪಡುವ ಆತಂಕ ಗಮನಾರ್ಹ. ಮುಳಿ ಹುಲ್ಲಿನ ಹಂಚಿಕೆಯಲ್ಲಿ ಆದ ಗೊಂದಲದಿಂದ ಗುತ್ತಿನಾರ್ ಬಳಿ ಕತ್ತಿ ಹಿಡಿದು ಜಗಳಾಡಿದ ಸುಬ್ಬಣ್ಣ ಕೋರ್ಟು ನೋಟಿಸು ಬಂದಾಗ ಆತಂಕಕ್ಕೆ ಒಳಗಾಗುತ್ತಾನೆ. ಪರಿಚಿತ ವ್ಯವಸ್ಥೆಯಲ್ಲಿ ಹುಲಿಯಂತೆ ಮುನ್ನುಗ್ಗುವವನು ಅಪರಿಚಿತ ವ್ಯವಸ್ಥೆಯಲ್ಲಿ ಕುರುಡನಂತೆ ವರ್ತಿಸುತ್ತಾನೆ. ಅದನ್ನು ಎದುರುಗೊಳ್ಳಲಾರದೆ ಪಲಾಯನ ಮಾಡಲು ಪ್ರಯತ್ನಿಸುತ್ತಾನೆ. ಬ್ರಿಟಿಷ್ ಸರಕಾರ ಜಾರಿಯಲ್ಲಿರುವಾಗ ಕೋರ್ಟು ನೋಟಿಸ್ ಇಂಗ್ಲಿಷ್‌ನಲ್ಲೇ ಬರುತ್ತಿದ್ದವು. ಇಂಗ್ಲಿಷ್ ಬಾರದ ಮಂದಿ ಭಯಪಡುತ್ತಿದ್ದರು. ಇಂಗ್ಲಿಷ್ ಕಲಿತವರಿಗೆ ಭಾರಿ ಗೌರವ ಇತ್ತು. ಸುಬ್ಬಣ್ಣ ಭಟ್ಟರಿಗೆ ಕೋರ್ಟುನೋಟಿಸ್ ಬಂದಿದೆ ಎಂದಾಗ ಭಯಭೀತರಾಗುತ್ತಾರೆ. ಮಂಗಳೂರಿಗೆ ಎಂದೂ ಹೋಗದ ಆತ, ಗುತ್ತಿನಾರ್ ಜೊತೆಗೆ ಮಾತ್ರ ಮಂಗಳೂರಿಗೆ ಹೋಗುತ್ತೇನೆ ಎಂಬ ಆಸೆ ವ್ಯಕ್ತಪಡಿಸುತ್ತಾನೆ.

'ನನಗೇನು ಗೊತ್ತಾಗುತ್ತದೆ ಸ್ವಾಮಿ ಇಂಗ್ಲಿಷ್? ಇವರ ಮನೆಯ ಪಕ್ಕದಲ್ಲಿ ಸಾರಸ್ವತ ಕುಟುಂಬ ಒಂದು ಉಂಟು. ಮಂಗೇಶರಾಯರು ಅಂತ ಅಲ್ಲೊಬ್ಬರು ಮಾಸ್ತು ಇದ್ದಾರೆ. ಇದನ್ನು

ಓದಿ ಹೇಳಿದ್ದು ಅವರೇ ಅನ್ನುತ್ತಾರೆ ಈ ಸುಬ್ಬಣ್ಣ ಭಟ್ಟರು' ಎಂದು ವೆಂಕಟ್ರಮಣಯ್ಯ ಸುಬ್ಬಣ್ಣ ಭಟ್ಟರ ಕಡೆಯಿಂದ ವಕಾಲತ್ತು ನಡೆಸಿದರು'.(ಉಲ್ಲಂಘನೆ, ಪುಟ ೨೧೪)

ಇಂಗ್ಲಿಷ್ ತಿಳುವಳಿಕೆ ಇಲ್ಲದಿದ್ದರೆ ಇತರರನ್ನು ಅವಲಂಬಿಸುವುದು ಅನಿವಾರ್ಯವಾಗಿತ್ತು. ಅಜ್ಞಾನ, ಆತಂಕ, ಭಯ ಉಂಟುಮಾಡುತ್ತದೆ. ಮುಖಾಮುಖಿಯಾಗದ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅಶಿಕ್ಷಿತ ಜನಸಮುದಾಯಕ್ಕೆ ಸುಲಭ ಮಾತಾಗಿರಲಿಲ್ಲ.

'ಗುತ್ತಿನಾರರು ಕೋರ್ಟಿನ ನೋಟಿಸು ಎಂದುಕೊಂಡದ್ದನ್ನು ಬಿಡಿಸಿ ನೋಡಿದರು. "ನನಗೂ ಇಂಗ್ಲೀಷ್ ಬಾರದು!" ಎಂದುಕೊಂಡು "ನಾನು ಯಾಕೆ ಬರಬೇಕು ನಿಮ್ಮ ಜೊತೆ ಕೋರ್ಟಿಗೆ?" ಎಂದು ಪ್ರಶ್ನಿಸಿದರು.'(ಉಲ್ಲಂಘನೆ, ಪುಟ ೨೧೪). ಗುತ್ತಿನಾರ್ ಜುಲ್ಮಾನೆ ಪಾವತಿ ಮಾಡಿ ಕೇಸು ವಜಾಮಾಡಬೇಕಾಗುತ್ತದೆ.

೪.೫. ಇಂಗ್ಲಿಷ್ ಭಾಷೆಯ ಪ್ರಭಾವ ಮತ್ತು ಪಲ್ಲಟಗಳು

ಇಂಗ್ಲಿಷ್ ಭಾಷೆಯ ಪ್ರಭಾವಗಳು

ಇಂಗ್ಲಿಷ್ ವಿದ್ಯಾಭ್ಯಾಸ ತುಳುನಾಡಿನ ಜನರಿಗೆ ಹೊಸ ದೃಷ್ಟಿಕೋನವನ್ನು ನೀಡಿತು. ಹೊಸ ಚಿಂತನೆಗಳು, ಇಲ್ಲಿನ ಹಾಗೂ ಪಾಶ್ಚಾತ್ಯ ಜೀವನಕ್ರಮ ಹಾಗೂ ಚಿಂತನೆಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಲು ದಾರಿಯಾಯಿತು. ಬದುಕನ್ನು ಹೊಸ ದೃಷ್ಟಿಕೋನದಿಂದ ವೀಕ್ಷಿಸಲು ಹೊಸ ಅವಕಾಶವನ್ನು ನೀಡಿತು. ಪರಂಪರೆಯ ಬದುಕಿನ ದೃಷ್ಟಿಯನ್ನು ಹೊಸ ವಿದ್ಯಾವಂತರು ವಿಮರ್ಶಿಸಲು ಪ್ರಾರಂಭಿಸಿದರು. ತಮ್ಮ ಇದುವರೆಗಿನ ಬದುಕು ವಿಚಾರ ವಿಮರ್ಶೆಗೆ ಒಳಗಾಯಿತು. ಸಮಕಾಲೀನ ಜನರಿಗಿಂತ ಭಿನ್ನ ದೃಷ್ಟಿಕೋನವನ್ನು ಹೊಂದಿದವರು ಅದನ್ನು ಸುಧಾರಿಸಲು ಪಣ ತೊಟ್ಟರು. ಸ್ವಾತಂತ್ರ್ಯ ಚಳುವಳಿಯೂ ಇದಕ್ಕೆ ಪೂರಕವಾಗಿ ಸ್ಪಂದಿಸಿದ್ದು ಯುವಕರಲ್ಲಿ ಹೊಸ ಚೈತನ್ಯವನ್ನು ಬಡಿದೆಬ್ಬಿಸಿ ಸುಧಾರಣಾ ಕ್ರಮವನ್ನು ಕೈಗೊಳ್ಳಲು ಸಹಾಯಕವಾಯಿತು. ಇಂಗ್ಲಿಷ್ ಶಿಕ್ಷಣದಿಂದ ಪಡೆದ ಅರಿವಿನ ಪ್ರಜ್ಞೆಯ ವಿಸ್ತಾರ ಬ್ರಿಟಿಷರಿಗೇ ತಿರುಗುಬಾಣವಾದದ್ದು ವಿಶೇಷ. ಕಾರಕೂನರನ್ನು ಸೃಷ್ಟಿಸಲು ಜಾರಿಗೆ ಬಂದ ಇಂಗ್ಲಿಷ್ ಶಿಕ್ಷಣ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಎಬ್ಬಿಸಿ ಹೋರಾಟಕ್ಕೆ ಸ್ಫೂರ್ತಿಯಾದದ್ದು ಸುಳ್ಳಲ್ಲ.

೧. ರಾಷ್ಟ್ರೀಯತೆಯ ಪ್ರಜ್ಞೆ

ಇಂಗ್ಲಿಷ್ ಭಾಷೆ ಅರಿವಿನ ಪರಿಧಿ ವಿಸ್ತರಿಸಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡಲು ಕಾರಣವಾಯಿತು. ಇಡೀ ಭಾರತ ಒಂದು ಎನ್ನುವ ಕಲ್ಪನೆ ಮೂಡಿತು. 'ಮರಳಿ ಮಣ್ಣಿಗೆ'ಯ ರಾಮ, 'ಉಲ್ಲಂಘನೆ'ಯ ಸಂಕಪ್ಪ ಹೆಗ್ಡೆ, 'ಮುಖಾಂತರ'ದ ಶಂಕರ, ಮಂಜುನಾಥ, 'ಔದಾರ್ಯದ ಉರುಳಲ್ಲಿ' ಕಾದಂಬರಿಯ ರಾಧಾಕೃಷ್ಣ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು, ಪ್ರೇರೇಪಣೆ ನೀಡಲು ಇಂಗ್ಲಿಷ್ ಶಿಕ್ಷಣ ಕಾರಣವಾಯಿತು. ಇವರೆಲ್ಲರೂ ಶಿಕ್ಷಣವನ್ನು ಅರ್ಧದಲ್ಲೇ ತ್ಯಜಿಸಿದವರು. ಮನೆಯವರೊಡನೆ ವಿರೋಧ ಕಟ್ಟಿಕೊಂಡು ನಿಸ್ವಾರ್ಥ ಮನಸ್ಸಿನಿಂದ ಚಳುವಳಿಯಲ್ಲಿ ಹೋರಾಡಿದವರು.

೨. ಆಧುನಿಕ ಚಿಂತನೆ

ಇಂಗ್ಲಿಷ್ ವಿದ್ಯಾಭ್ಯಾಸದಿಂದ ಚಿಂತನೆ, ತರ್ಕ, ಸರಿ ತಪ್ಪುಗಳ ವಿವೇಚನೆ ಕ್ರಮಬದ್ಧವಾಗಿ ಉಂಟಾಯಿತು. ಮಿತ ಶಿಕ್ಷಣ ಪಡೆದ ಅಂಬಕ್ಕಗೂ ಆಕೆಯ ಮಗಳು ಶಾರದೆಗೂ ಚಿಂತನಾಕ್ರಮದಲ್ಲಿ ಅಗಾಧವಾದ ವ್ಯತ್ಯಾಸವಿದೆ. ಅಂಬಕ್ಕ ಪರಂಪರಾಗತ ನಂಬಿಕೆಗಳನ್ನು ಉಳಿಸಲು, ಬೆಳೆಸಲು ಪ್ರಯತ್ನಪಟ್ಟರೆ ಶಾರದೆ ಆ ನಂಬಿಕೆಗಳನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ಪರಿಶೀಲಿಸಿ ಕಡಿಮೆ ಮಹತ್ವ ನೀಡುತ್ತಾಳೆ. ಅಂಬಕ್ಕ ತನ್ನ ಮುತ್ತಜ್ಜಿ, ತಾಯಿಯ ಬದುಕನ್ನು ಮಾದರಿಯಾಗಿ ಇಟ್ಟುಕೊಂಡರೆ, ಇಂಗ್ಲಿಷ್ ವಿದ್ಯಾಭಾಸ ಪಡೆದ ಶಾರದೆ ತಾಯಿಯ ಬದುಕನ್ನು ಅನುಸರಿಸುವುದಿಲ್ಲ. ತಾಯಿಯಂತೆ ಮಾತೃಪ್ರಧಾನ ವ್ಯವಸ್ಥೆ ಉಳಿಸುವುದು, ತವರು ಮನೆಯಲ್ಲಿ ಬಂದು ನೆಲೆಗೊಳ್ಳುವುದು ಆಕೆಗೆ ಸಮ್ಮತ ವಿಷಯಗಳಲ್ಲ. ನಿಧಾನವಾಗಿ ರೂಢಿಗತ ನಂಬಿಕೆಗಳನ್ನು ಹೊಸ ಬಗೆಯ ಚಿಂತನೆಗಳಿಂದ ಎದುರುಗೊಳ್ಳಲು ಅಂಬಕ್ಕಗೆ ಸಾಧ್ಯವಾಗುತ್ತದೆ.

೩. ಸಾಮಾಜಿಕ ಸುಧಾರಣೆ

'ಕನ್ನಡ ಕಾದಂಬರಿಯಲ್ಲಿ ಈ ಶತಮಾನದುದ್ದಕ್ಕೂ ಪುನರಾವರ್ತನೆಗೊಳ್ಳುವ ಒಂದು ಪ್ರಮುಖ ಕಥಾಶಯವೆಂದರೆ ಪರಂಪರಾಗತ ಹಿಂದೂ ಸಮಾಜದಲ್ಲಿ ಹುಟ್ಟಿ, ಆಂಗ್ಲಶಿಕ್ಷಣ ಅಧಿಕಾರಗಳನ್ನು ಪಡೆದು, ತನ್ನ ಸಮಾಜವನ್ನು ಸುಧಾರಿಸಲು ವ್ಯಕ್ತಿಯೊಬ್ಬನು ಮಾಡುವ ಪ್ರಯತ್ನ ಅರ್ಥಾತ್, ಒಂದು ಸಮಾಜದ 'ಒಳಗಿನವನು' 'ಹೊರಗಿನವನಾಗುವ' ಆಶಯ'.[೬] ಈ ಮಾದರಿಯನ್ನು ಹಲವು ಕಾದಂಬರಿಗಳಲ್ಲಿ ಗುರುತಿಸಬಹುದು.

ಕನ್ನಡದ ಪ್ರಥಮ ಕಾದಂಬರಿ 'ಇಂದಿರಾಬಾಯಿ'ಯ ಭಾಸ್ಕರರಾಯ ಇಂಗ್ಲಿಷನ್ನು ಕಲಿತು ಸಮಾಜ ಸುಧಾರಿಸುವತ್ತ ಗಮನವನ್ನು ಕೇಂದ್ರೀಕರಿಸುತ್ತಾನೆ. ವಿಧವೆ ಇಂದಿರಾಬಾಯಿಯನ್ನು ವಿವಾಹವಾಗಿ ಆಕೆಗೆ ಉತ್ತಮ ಭವಿಷ್ಯ ಕಲ್ಪಿಸುವುದು ಆತನ ಸಮಾಜ ಸುಧಾರಣೆಗೆ ಉತ್ತಮ ಉದಾಹರಣೆ. 'ಮರಳಿ ಮಣ್ಣಿಗೆ'ಯ ರಾಮ ವಿದ್ಯಾಭ್ಯಾಸ ಸ್ಥಗಿತಗೊಳಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಪಾನ ನಿರೋಧಕ್ಕಾಗಿ ಪ್ರಯತ್ನಿಸುತ್ತಾನೆ. 'ಔದಾರ್ಯದ ಉರುಳಲ್ಲಿ'ಯ ರಾಧಾಕೃಷ್ಣ ಅಸ್ಪೃಶ್ಯತಾ ನಿವಾರಣೆ, ಬಡವರ ಬಂಧುವಾಗಿ ನಿಸ್ವಾರ್ಥವಾಗಿ ದುಡಿಯುತ್ತಾನೆ. 'ಉಲ್ಲಂಘನೆ'ಯ ಸಂಕಪ್ಪ ಹೆಗ್ಡೆ ಬಂಟರ ಹಾಸ್ಟೆಲಿನಲ್ಲಿ ನಿಂತು ವಿದ್ಯಾಭ್ಯಾಸ ಪಡೆಯುತ್ತಿದ್ದಂತೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ತನ್ನ ಜೀವನವಿಡೀ ಗಾಂಧಿ ತತ್ವಗಳಿಗೆ ಬದ್ಧನಾಗಿದ್ದು ಕೆಳವರ್ಗದವರನ್ನು ಮಾನವೀಯತೆಯಿಂದ ನೋಡುವ ಉದಾರವಾದೀ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತಾನೆ. ತನ್ನ ಗುತ್ತು ಮನೆಯಲ್ಲಿ ಹಲವು ಸುಧಾರಣೆಗಳನ್ನು ಕೈಗೊಳ್ಳಲು ಕಾರಣಕರ್ತನಾಗುತ್ತಾನೆ. 'ಕೊಟ್ಟ'ದ ಮಲ್ಲಯ್ಯ ಕೊರಗರ ನಾಗರಿಕ ಜೀವನಕ್ಕಾಗಿ ಶ್ರಮಿಸಿದರೆ, 'ಮುಖಾಂತರ'ದ ಶಂಕರ ರಾಷ್ಟ್ರೀಯ ಶಾಲೆ ನಿರ್ಮಿಸಿ ಎಲ್ಲಾ ಸಮುದಾಯದ ಜನರಿಗೆ ಶಿಕ್ಷಣ ನೀಡಲು ಪ್ರಯತ್ನಿಸಿದರೂ ಆರಂಭದಲ್ಲಿ ವಿಫಲನಾಗುತ್ತಾನೆ.

'ಮುಖಾಂತರ'ದಲ್ಲಿ ಸರಕಾರಿ ಉದ್ಯೋಗಿಗಳೆಂದರೆ ಎಲ್ಲರಿಂದಲೂ ಗೌರವ ದೊರಕುತ್ತಿದ್ದ ಕಾಲವದು. ಮಾರಪ್ಪ ಶೆಟ್ಟರು ಪಡ್ಡುಗುತ್ತಿನಲ್ಲಿ ಮಗನಿಗೆ ಇಂಗ್ಲಿಷ್ ವಿದ್ಯಾಭ್ಯಾಸ ನೀಡುವ ಆಸೆ

ವ್ಯಕ್ತಪಡಿಸಿದಾಗ ಯಾರೂ ವಿರೋಧಿಸಲಿಲ್ಲ. ಬದಲಾದ ಕಾಲಘಟ್ಟದ ಅರಿವು ಜನರಲ್ಲೂ ಇತ್ತು. ಮಂಜುನಾಥ ಮಂಗಳೂರಿನ ಬಂಟರ ಹಾಸ್ಟೆಲಿನಲ್ಲಿದ್ದು ಇಂಟರ್ ಮೀಡಿಯಟ್ ಶಿಕ್ಷಣ ಮುಂದುವರೆಸುತ್ತಾನೆ. ಪಟೇಲರ ನಿರ್ಧಾರಕ್ಕೆ ಏನೂ ಪ್ರತಿರೋಧವಿಲ್ಲದೆ ಇರುವುದನ್ನು ಗಮನಿಸಬಹುದು. ಮಂಜುನಾಥ ಕುದ್ಮುಲ್ ರಂಗರಾವ್ ಪ್ರೇರಣೆಯಿಂದ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತನಾಗುತ್ತಾನೆ. ಅಸ್ಪೃಶ್ಯತಾ ನಿವಾರಣೆಯ ಕುರಿತು ಕಾರ್ನಾಡ್ ಸದಾಶಿವರಾಯರಿಂದ ತಿಳಿದು ತಾನೂ ಪಡ್ಪುಗುತ್ತಿನಲ್ಲಿ ಚಾವಡಿಯಲ್ಲೇ ದಲಿತರಿಗೂ ಊಟಬಡಿಸುವಂತೆ ಮಾಡಬೇಕು ಎಂಬ ನಿರ್ಣಯ ಕೈಗೊಳ್ಳುತ್ತಾನೆ.

'ಇದನ್ನೇನಾದರೂ ಅಜ್ಜನಲ್ಲಿ ಇಲ್ಲವೇ ಮಾವನಲ್ಲಿ ಹೇಳಹೊರಟರೆ ಅವರು, 'ಇಂಗ್ಲಿಷ್ ಓದಲು ಹೋದವರೆಲ್ಲ ಹೇಳುವುದು ಇಷ್ಟೇ' ಎನ್ನುವುದು ಖಂಡಿತ. ಆಮೇಲೆ ನಮ್ಮ ದೇಶ ನಮ್ಮ ಆ ಸಂಸ್ಕೃತಿ ನಮ್ಮ ಪರಂಪರೆಯನ್ನೆಲ್ಲ ನೀವು ನಾಶಪಡಿಸುತ್ತೀರಿ?' ಎಂದು ಅವರು ರೇಗಲೂಬಹುದು ಎಂದು ಅಳುಕಿದ.(ಮುಖಾಂತರ, ಪುಟ ೩೧೯)

ಇಂಗ್ಲಿಷ್ ಶಿಕ್ಷಣದಿಂದ ನಮ್ಮ ಸಂಸ್ಕೃತಿ ನಾಶವಾಗಬಹುದೆಂಬ ಕಲ್ಪನೆಯೂ ಜನರಲ್ಲಿ ಇದ್ದಿತು. ಮಂಜುನಾಥ ಆದರೂ ಹಠಬಿಡದೆ ಅಸ್ಪೃಶ್ಯತೆಯ ಕುರಿತು ತಾಯಿ ಉಜ್ಜಕ್ಕೆಯಲ್ಲಿ ಪ್ರಸ್ತಾಪಿಸಿದಾಗ, 'ನೋಡು ಮಂಜುನಾಥ ನೀನು ಇಂಗ್ಲೀಷ್ ಓದುವುದು ನನಗೆ ಗೊತ್ತು. ನಾನೇ ತಾನೇ ಈ ಮನೆಮಗ ಇಂಗ್ಲೀಷ್ ಓದಬೇಕು ಎಂದು ನಿನ್ನನ್ನು ಕಾಲೇಜಿಗೆ ಕಳುಹಿಸಲು ಹೇಳಿದ್ದು' ಎಂದು ಮಾತು ನಿಲ್ಲಿಸಿ' ಇದೊಳ್ಳೆ ಕತೆಯಾಯಿತಲ್ಲಾ ನಿನ್ನನ್ನು ಓದಿಸಿದ್ದಕ್ಕೆ?' ಎಂದು, 'ಅವುಗಳಿಗೆ ವಿದ್ಯೆ ಬುದ್ಧಿ ಎಲ್ಲುಂಟು ಹೇಳು? ನೀನು ಅವುಗಳಿಗೆ ಸಾಲಾಗಿ ಕೂಡಿ ಅಂದರೆ ಕುಳಿತುಕೊಳ್ಳುವವುಗಳೂ ಅಲ್ಲ ಅವು!' ಎಂದು ಹೇಳಿ, 'ನೋಡು ಯಾರನ್ನು ಎಲ್ಲಿ ಇಡಬೇಕೋ ಅಲ್ಲೇ ಇಡಬೇಕು ಎನ್ನುವುದು ನಮ್ಮ ಹಿರಿಯರಿಗೆ ಚೆನ್ನಾಗಿ ಗೊತ್ತಿತ್ತು. ನಾಯಿಯನ್ನು ಕೊಂಡಾಟ ಮಾಡಲಿಕ್ಕೆ ಹೋದರೆ ಅದು ನಮ್ಮ ಮುಸುಡನ್ನು ತಾನೇ ನಕ್ಕುವುದು?' ಎಂದರು ತುಸು ಆವೇಶದಲ್ಲಿ.(ಮುಖಾಂತರ, ಪುಟ ೩೧೯) ಆದರೆ ಮಂಜುನಾಥ ತನ್ನ ನಿಷ್ಠೆಯನ್ನು ಬಿಡದೆ ತಂದೆಯ ಪಟೇಲಿಕೆ ತ್ಯಜಿಸುವಂತೆ ಮಾಡುವುದಲ್ಲದೆ, ಒಕ್ಕಲಿನವರ ಮನಸ್ಥಿತಿಯನ್ನೂ ಬದಲಾಯಿಸಲು ಪ್ರಯತ್ನಿಸುತ್ತಾನೆ.

೪. ಕಾಯಕದಲ್ಲಿ ಅದಕ್ಷತೆ

ಆಂಗ್ಲ ವಿದ್ಯಾಭ್ಯಾಸದಿಂದ ಗೃಹಕೃತ್ಯಗಳಲ್ಲಿ ಪಕ್ವತೆ ಕಡಿಮೆಯಾಗುವುದನ್ನು ಮರಳಿ ಮಣ್ಣಿಗೆಯ ಲಚ್ಚನಲ್ಲಿ ಪ್ರಮುಖವಾಗಿ ಗುರುತಿಸಬಹುದು. ಆತ ಇಂಗ್ಲಿಷ್‌ನಲ್ಲಿ ವ್ಯವಹರಿಸಲು ಕಲಿತರೂ ಮನೆಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಆತ ಮತ್ತೆ ಮತ್ತೆ ವಿಫಲನಾಗಿ ರಾಮ ಐತಾಳರಿಂದ ಬೈಸಿಕೊಳ್ಳುತ್ತಾನೆ. ಮೈಮುರಿದು ದುಡಿಯುವ ಶಕ್ತಿ ಆತನಿಗೆ ರೂಢಿಯಾಗಿರುವುದಿಲ್ಲ. ಕೃಷಿಕ ಹಾಗೂ ವೈದಿಕ ರಾಮ ಐತಾಳರಿಗೂ ಲಚ್ಚನಿಗೂ ನಡುವೆ ವ್ಯತ್ಯಾಸ ಸ್ಪಷ್ಟವಾಗುತ್ತಾ ಸಾಗುತ್ತದೆ. ಆಂಗ್ಲ ವಿದ್ಯಾಭ್ಯಾಸ ಆತನನ್ನು ಸ್ವಾವಲಂಬಿಯಾಗಿ ಪರಿವರ್ತಿಸುವುದಿಲ್ಲ.

೫. ಕಾನೂನಿನ ಅರಿವು

ಆಸ್ತಿಯ ರಿಕಾರ್ಡುಗಳು ವಸಾಹತುಶಾಹಿ ಆಡಳಿತ ಕಾಲದಲ್ಲಿ ಆಂಗ್ಲಭಾಷೆಯಲ್ಲೇ ಇದ್ದವು. ಜನಸಾಮಾನ್ಯರು ಅವುಗಳನ್ನು ಅರ್ಥಮಾಡಿಕೊಳ್ಳಲು ಇಂಗ್ಲಿಷ್ ಬಲ್ಲವರನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಪ್ರಾಥಮಿಕ ಶಾಲೆ ಮುಗಿಸಿದ ಲಚ್ಚನ ಸಹಾಯ ಪಡೆಯುವುದು ಆಗಿನ ಕಾಲದ ಇಂಗ್ಲಿಷ್ ಬಾರದ ಜನರ ತೊಳಲಾಟವನ್ನು ಸೂಚಿಸುತ್ತದೆ.

೬. ನಿರ್ಲಕ್ಷಿತ ಸಮುದಾಯಗಳ ಉನ್ನತಿ

ಇಂಗ್ಲಿಷ್ ಭಾಷೆ ಕಲಿಯಲು ಜಾತಿಭೇದ ಇರಲಿಲ್ಲ. ಎಲ್ಲರನ್ನು ಒಳಗೊಂಡ ಸರಕಾರಿ ಶಾಲೆಗಳು ನಿರ್ಲಕ್ಷಿತ ಸಮುದಾಯದವರ ಬದುಕಿನಲ್ಲಿ ಹೊಸ ಬೆಳಕನ್ನು ತಂದವು. ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಸಬಲರಾಗಲು ವಿಪುಲ ಅವಕಾಶಗಳು ದೊರೆತವು. ಆರಂಭದಲ್ಲಿ ಕಲಿಕೆಗೆ ತೆರೆದುಕೊಂಡ ಕೆಳವರ್ಗದವರ ಸಂಖ್ಯೆ ತೀರಾ ಕಡಿಮೆ.

ಇಂಗ್ಲಿಷ್‌ನಿಂದ ಆದ ಪಲ್ಲಟಗಳು

೧. ತುಳುನಾಡು ಕೃಷಿಪ್ರಧಾನವಾದದ್ದು. ಕೃಷಿ ಹಾಗೂ ಪ್ರಾಕೃತಿಕ ಕಸುಬುಗಳೊಂದಿಗೆ ಬದುಕುವ ಕಲೆ ರೂಢಿಸಿಕೊಂಡವರಿಗೆ ಇಂಗ್ಲಿಷ್ ವಿದ್ಯಾಭ್ಯಾಸ ಬದುಕಿನ ಹೊಸ ಆಯಾಮವೊಂದನ್ನು ಸೃಷ್ಟಿಸುತ್ತದೆ. ಕೃಷಿಗಿದ್ದ ಮಹತ್ವವನ್ನು ಆಂಗ್ಲ ವಿದ್ಯಾಭ್ಯಾಸ ಪಡೆದುಕೊಳ್ಳುತ್ತದೆ. ಸಂಪ್ರದಾಯ ಮೀರುವುದು ಅನಿವಾರ್ಯವಾಗುತ್ತದೆ.

೨. ಇಂಗ್ಲಿಷ್ ವಿದ್ಯಾಭ್ಯಾಸ ಸ್ವಾವಲಂಬಿಯಾದ ಕೃಷಿ ಬದುಕಿನಿಂದ ಪರಾವಲಂಬಿಗಳನ್ನಾಗಿ ಮಾಡಿತು. ಭೂಮಿ ಇಲ್ಲದ ಕೆಳವರ್ಗದವರಿಗೆ ದುಡಿಯುವ ದಾರಿಯನ್ನು ನೀಡಿತು.

೩. ಪರಂಪರೆಯ ಜೊತೆಗೆ ಇಂಗ್ಲಿಷ್ ಅನಿವಾರ್ಯ ಎಂಬ ತಿಳುವಳಿಕೆಯನ್ನು ಉಂಟುಮಾಡುತ್ತದೆ.

೪.೬. ದೇಸಿ ಭಾಷೆಗಳು ಎದುರಿಸುತ್ತಿರುವ ಸಮಸ್ಯೆ

ಮಿಶನರಿ ಶಾಲೆಗಳು, ಮಠದ ಶಾಲೆಗಳು, ರಾಷ್ಟ್ರೀಯ ಶಾಲೆಗಳು ಈ ರೀತಿ ವಿಭಿನ್ನ ಬಗೆಯ ಶಾಲೆಗಳನ್ನು ನಮ್ಮ ಶಿಕ್ಷಣರಂಗದಲ್ಲಿ ಗುರುತಿಸಬಹುದು. ಕ್ರೈಸ್ತ ಮಿಶನರಿಗಳಿಂದ ಸ್ಥಾಪನೆಯಾದ ಶಾಲೆಗಳು ಮಿಶನರಿ ಶಾಲೆಗಳೆಂದು ಕರೆಸಿಕೊಂಡರೆ, ಮಠದ ಶಾಲೆಗಳು ವೈದಿಕರಿಗಾಗಿ ವೈದಿಕರಿಂದ ನಡೆಸುತ್ತಿದ್ದ ಶಾಲೆಗಳು. ಇಲ್ಲಿ ಇತರೆ ಸಮುದಾಯದ ವಿದ್ಯಾರ್ಥಿಗಳಿಗೆ ಅವಕಾಶವಿರಲಿಲ್ಲ. ರಾಷ್ಟ್ರೀಯ ಶಾಲೆಗಳು ಅಸಹಕಾರ ಚಳುವಳಿ ಸಂದರ್ಭದಲ್ಲಿ ಶಿಕ್ಷಣತ್ಯಾಗ ಮಾಡಿದವರಿಗೆ ಹಾಗೂ ಅಶಿಕ್ಷಿತ ಮಕ್ಕಳಿಗೆ ತೆರೆದ ಶಾಲೆಗಳು. ಬ್ರಿಟಿಷ್ ಸರಕಾರ ಸ್ಥಾಪಿಸಿದ ಶಾಲೆಗಳು ಸರಕಾರಿ ಶಾಲೆಗಳು.

ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕದ ಆಡಳಿತ ಭಾಷೆಯಾದ ಕನ್ನಡ ಇಂಗ್ಲಿಷ್ ಎದುರು ನಲುಗುವುದು, ಜನಾಕರ್ಷಣೆ ಕಳೆದುಕೊಳ್ಳುವುದು ಮುಖ್ಯ ಬದಲಾವಣೆ. ಆಂಗ್ಲ ಭಾಷೆಯ ಒಲವು ಹೆಚ್ಚುತ್ತಿದ್ದಂತೆ ಕನ್ನಡ ಇಲ್ಲವೆ ಪ್ರಾದೇಶಿಕ ಭಾಷೆಗಳು ಸ್ಪರ್ಧಿಸಲು ಹೆಣಗಾಡುತ್ತಿರುವ, ಪರದಾಡುತ್ತಿರುವ ಚಿತ್ರಣ ಮುಖಾಂತರದಲ್ಲಿ ಗುರುತಿಸಬಹುದು.

'ನಿಜ, ನಮ್ಮ ಶಿಕ್ಷಣ ಎನ್ನುವುದು ಬರೇ ವಿವರಗಳನ್ನು ತುಂಬುವುದಷ್ಟಕ್ಕೆ ಮೀಸಲಾಗಿದೆಯೇ ಹೊರತು ಮಕ್ಕಳಲ್ಲಿನ ಸೃಜನಶೀಲತೆಯನ್ನು ಅರಳಿಸುವುದಿಲ್ಲ. ಇನ್ನು ಹತ್ತು ವರುಷಗಳಲ್ಲಿ ಈ ಟೆಕ್ನಿಕಲ್ ಕೋರ್ಸ್‌ಗಳನ್ನು ಓದಬಯಸುವ ವಿದ್ಯಾರ್ಥಿಗಳಿಗೆ ಪಿ.ಯು.ಸಿ. ಕೋರ್ಸ್‌ನಲ್ಲಿ ಮೂಲವಿಜ್ಞಾನ ಮತ್ತು ಮೂಲ ಗಣಿತವನ್ನು ಬೋಧಿಸುವ ಶಿಕ್ಷಕರೇ ಇಲ್ಲ ಎಂಬ ಪರಿಸ್ಥಿತಿ ಬರಲಿದೆ. ಕನ್ನಡದಂಥ ಒಂದು ದೇಸೀಭಾಷೆ ಸತ್ತರೂ ಅದಕ್ಕಾಗಿ ಮರುಗುವ ಮಂದಿಯೇ ಇಲ್ಲ ಎಂದರು ಬಂಗಾರಣ್ಣ.'(ಮುಖಾಂತರ, ಪುಟ ೪೯೨) ಈ ಮಾತುಗಳು ದೇಸಿ ಭಾಷೆಯ ಮಹತ್ವ ಕುಗ್ಗಿ ಇಂಗ್ಲಿಷ್ ವ್ಯಾಮೋಹ ಹೆಚ್ಚುತ್ತಿರುವುದರ ಬಗ್ಗೆ ಕಳಕಳಿಯನ್ನು ಹೊಂದಿವೆ. ಜಾಗತೀಕರಣದ ಫಲವಾಗಿ ಇಂಗ್ಲಿಷ್ ಇನ್ನೂ ಬಲವಾದುದನ್ನು ತಿಳಿಸುತ್ತದೆ.

'ಬಂಗಾರಣ್ಣನ ತಂದೆ ಶಂಕರಭಟ್ಟರು ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಅಂಗಳದಲ್ಲೇ ಸ್ಥಾಪಿಸಿದ್ದ ರಾಷ್ಟ್ರೀಯ ಶಾಲೆ ಊರಮಂದಿಯ ಪ್ರೋತ್ಸಾಹ ಸಿಗದೇ ನಿಂತುಹೋಗಿದ್ದರೂ ೧೯೪೮ರ ಸುಮಾರಿಗೆ ಅದನ್ನು ಪುನರುಜ್ಜೀವನಗೊಳಿಸಬೇಕೆಂಬ ಸಂಕಲ್ಪವನ್ನು ಅವರು ಸಾಧಿಸುವಲ್ಲಿ ಸಫಲರಾಗಿದ್ದರು. ಒಂದನೇ ತರಗತಿಯಿಂದ ಪ್ರಾರಂಭವಾದ ಆ ಶಾಲೆ ೧೯೫೬ರಲ್ಲಿ ಎಂಟನೇ ತರಗತಿಯ ಎಲಿಮೆಂಟರಿ ಶಾಲೆಯಾಗಿ ರೂಪುಗೊಂಡಿತ್ತು. ಆ ಸುಮಾರಿಗೆ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದ ಕಾಸರಗೋಡು, ಕೇರಳ ರಾಜ್ಯದಲ್ಲಿ ಸೇರಿ ಹೋಗಿ ಕಾಸರಗೋಡು ತಾಲೂಕಿನ ಸೀತಾಪುರದಲ್ಲಿ ಕೇರಳ ರಾಜ್ಯದ ಭಾಗವೇ ಆಗಿಹೋಗಿತ್ತು.' (ಮುಖಾಂತರ, ಪುಟ ೪೯೮)

ಪಠೇಲ ಪುರಂದರ ರೈಗಳು ಸೀತಾಪುರದಲ್ಲಿ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ತೆರೆಯುವುದು; ಸರಕಾರದ ಅನುಮತಿ ಪಡೆದದ್ದು ಇಂಗ್ಲಿಷ್‌ನ ಪ್ರಭಾವವನ್ನು ಸೂಚಿಸುತ್ತದೆ. ಈಗಾಗಲೇ ಇದ್ದ ಕನ್ನಡ ಮಧ್ಯಮದ ಶಾಲೆಗೆ ಪ್ರತಿಸ್ಪರ್ಧಿಯಾಗಿ ಇಂಗ್ಲಿಷ್ ಶಾಲೆ ಆರಂಭವಾಗುತ್ತದೆ.

ಕನ್ನಡ ಮಾಧ್ಯಮವಾಗಿ ಬೆಳೆದ ಸೀತಾಪುರದ ಶಾಲೆ ವಿದ್ಯಾರ್ಥಿಗಳ ಕೊರತೆ ಎದುರಿಸುತ್ತದೆ. "ನಿನ್ನ ಮಗನೂ ಸೇರಿ ನಮ್ಮ ಹೈಸ್ಕೂಲಿನಲ್ಲಿ ಇರುವುದು ಕೇವಲ ಅರವತ್ತು ಮಕ್ಕಳು ಮಾತ್ರ, ಎಂಟನೆಯ ಈಯತ್ತೆಯಲ್ಲಿ, ಎಂಟೇ ಮಕ್ಕಳು ಅಂದರೆ ಮುಂದಿನ ವರುಷ ಅಷ್ಟೂ ಮಕ್ಕಳು ನಮ್ಮ ಶಾಲೆಗೆ ಬರುವುದು ಕಷ್ಟ ನಾನು ನಿವೃತ್ತನಾದ ಮೇಲೆ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಸಾಕಷ್ಟಿಲ್ಲ ಎಂದು ನನ್ನ ಸ್ಥಾನಕ್ಕೆ ಹೊಸ ನೇಮಕಕ್ಕೆ ಎಷ್ಟೇ ಪ್ರಯತ್ನಿಸಿದರೂ ಸರಕಾರ ಆಸ್ಪದ ಕೊಡಲಿಲ್ಲ."(ಮುಖಾಂತರ, ಪುಟ ೫೧೦)

ಕನ್ನಡ ಮಾಧ್ಯಮದ ಒಲವು ಇದ್ದ ಮಂದಿಯೂ ಇದ್ದರು. ಬಂಗಾರಣ್ಣನಿಗೆ ಹೈಸ್ಕೂಲು ನಿರ್ಮಿಸಲು ಅನುಮತಿ ಸಿಕ್ಕಿ, ಊರ ಮಂದಿಯ ಸಹಕಾರದಿಂದ ಸಿರಿಗನ್ನಡ ಎಜ್ಯುಕೇಶನ್ ಸೊಸೈಟಿ ಸಂಸ್ಥೆಗೆ ಶಾಲೆಯನ್ನು ವಹಿಸಿಕೊಟ್ಟರು.

ಸಿರಿಗನ್ನಡ ಹೈಸ್ಕೂಲಿನ ಪ್ರಗತಿ ಗಮನಿಸಿದ ಪುತ್ತುಭಟ್ಟರಿಗೆ ಇಂಗ್ಲಿಷ್ ಮೀಡಿಯಂ ಶಾಲೆ ಯಾಕೆ ತೆರೆಯಬಾರದು? ಎಂಬ ಪ್ರಶ್ನೆ ಎದುರಾಗಿ ಪುರಂದರ ರೈಗಳ ಜೊತೆ ಮಾತನಾಡಿ ಶಾಲೆಗೆ ಟ್ರಸ್ಟ್ ಮಾಡಲು ಆರಂಭಿಸುತ್ತಾರೆ. ಬಂಗಾರಣ್ಣನ ಮಗ ವಕೀಲ ನಾರಾಯಣನನ್ನು ಟ್ರಸ್ಟ್‌ಗೆ ಸೇರಿಸಲು ಪ್ರಯತ್ನಿಸುವಾಗ, 'ನೋಡಿ ಚಿಕ್ಕಪ್ಪ, ನಾವು ಬೇಡ ಎಂದರೂ ಕಾಸರಗೋಡು ಬಿಡಿ, ಕರ್ನಾಟಕದಲ್ಲೂ ಇನ್ನೂ ಹತ್ತು ವರುಷಗಳಲ್ಲಿ ಕನ್ನಡ ಶಾಲೆಗಳು ಮುಚ್ಚುವುದು ಖಾತ್ರಿ, ಹಾಗಾಗಿ ಇಂಗ್ಲೀಷ್ ಮೀಡಿಯಮ್ಮಿನ ಶಾಲೆಗಳಿಗೆ ಭವಿಷ್ಯ ಇರುವುದು ಖಂಡಿತ.'(ಮುಖಾಂತರ, ಪುಟ ೫೨೫)

ಕೊನೆಗೂ ಒಪ್ಪಿದ ನಾರಾಯಣ ಟ್ರಸ್ಟ್‌ಗೆ ಸೇರಲು ಒಪ್ಪಿಗೆ ಮಾತ್ರವಲ್ಲ, ೨೫ ಸಾವಿರ ರೂಪಾಯಿಗಳ ದೇಣಿಗೆ ಬರೆದು ಕೊಡುತ್ತಾರೆ. 'ನಿತ್ಯಾನಂದ ಎಜ್ಯುಕೇಶನ್ ಸೊಸೈಟಿ' ೨ ತಿಂಗಳಲ್ಲಿ ಆರಂಭಿಸಿಬಿಟ್ಟಿತು.

'ನೋಡಿ ಸಾಹುಕಾರ್ರೇ ಹೈಸ್ಕೂಲು ಅಂತ ಅಲ್ಲ. ನಾಳೆ ಕಾಲೇಜು ಮಾಡಬೇಕೆಂಬ ಆಸೆ ಇದೆ ನಮಗೆ. ನಿಮ್ಮಂಥವರು ಕನ್ನಡ ಕನ್ನಡ ಅಂತ ಬಾಯಿಬಿಡುತ್ತ ಕುಳಿತರೆ ಮಾತ್ರ ಬಜ್ಜ(ಕಷ್ಟ) ಎಂದು ಕಾಕನನ್ನು ಲೇವಡಿ ಮಾಡಿದನು.'(ಮುಖಾಂತರ, ಪುಟ ೫೨೭)

'ಹೌದು ನಾಳೆ ಶಾಲೆ ಮುಚ್ಚುತ್ತದೋ ಇಲ್ಲವೋ ಎನ್ನುವುದನ್ನು ನಾನು ಈಗ ಹೇಳುವ ಹಾಗಿಲ್ಲ. ಆದರೆ ಶಾಲೆ ಮುಚ್ಚುವ ಸ್ಥಿತಿ ಬಂದರೆ ಅದಕ್ಕೆ ಕಾರಣ ಕೇವಲ ಸರಕಾರ ಮಾತ್ರವಲ್ಲ ನಾವು ಕೂಡಾ! ಈ ಇಂಗ್ಲಿಷ್ ಮೀಡಿಯಮ್ಮಿನ ಹುಚ್ಚಿನಲ್ಲಿ ಈಗ ಕಾಸರಗೋಡಿನಲ್ಲಿ ಕನ್ನಡ ಶಾಲೆಗಳು ಮಾತ್ರವಲ್ಲ, ಕೇರಳದ ಉದ್ದಗಲಕ್ಕೂ ಮಲೆಯಾಳಿ ಶಾಲೆಗಳಿಗೂ ಬಾಗಿಲು ಹಾಕುವ ಸ್ಥಿತಿ ನಿರ್ಮಾಣವಾಗಿದೆ ಎಂದು ನಾನು ಕೇಳಿದ್ದೇನೆ.'(ಮುಖಾಂತರ, ಪುಟ ೫೩೫)

ಅಪ್ಪ ಶಂಕರನ ಕಾಲದ ಕನ್ನಡ ಶಾಲೆಯ ಕನಸು ಮಗ ಬಂಗಾರಣ್ಣನ ಕಾಲಕ್ಕೆ ಪರಿವರ್ತನೆಯಾಗಿ ಶಿಕ್ಷಣದ ದಿಕ್ಕೇ ಬದಲಾದದ್ದು ವೇಗವಾಗಿ ಬದಲಾಗುತ್ತಿರುವ ಲಕ್ಷಣಗಳನ್ನು ಸೂಚಿಸುತ್ತದೆ. ಶಂಕರ ರಾಷ್ಟ್ರೀಯ ಶಾಲೆ ನಿರ್ಮಿಸಿ ಮಕ್ಕಳನ್ನು ಶಾಲೆಗೆ ಸೇರಿಸಲು ಪ್ರಯತ್ನಪಟ್ಟರೆ ಮಗನ ಕಾಲಕ್ಕೆ ಭಿನ್ನ ಒಲವುಗಳ ವಿರುದ್ಧ ಹೋರಾಡಬೇಕಾಗಿ ಬರುತ್ತದೆ. ಜಾಗತೀಕರಣದಿಂದ ಉಂಟಾದ ನವವಸಾಹತುಶಾಹಿ ಇಂಗ್ಲಿಷ್ ಶಿಕ್ಷಣವನ್ನೇ ಓದುವ ಅನಿವಾರ್ಯವನ್ನು ತಂದೊಡ್ಡಿದ್ದು ಮಾತ್ರವಲ್ಲದೆ ಡೋನೇಷನ್ ಕೇಳಲೂ ಮುಂದಾಗುವುದು ಶಿಕ್ಷಣದ ವ್ಯಾಪಾರೀಕರಣವನ್ನು ಸೂಚಿಸುತ್ತದೆ. ಶಂಕರನ ಕಾಲದಲ್ಲಿ ಶಿಕ್ಷಣ ಅತ್ಯಗತ್ಯ ಸಾಧನವಾಗಿ, ಪ್ರತಿಫಲಾಪೇಕ್ಷೆಯಿಲ್ಲದೆ ತ್ಯಾಗದ ಮೂಲಕ ನೀಡುವಂತದ್ದಾದರೆ, ಬಂಗಾರಣ್ಣನ ಕಾಲದಲ್ಲಿ ಶಾಲೆ ಮುಚ್ಚುವ ಪರಿಸ್ಥಿತಿ ಬಂದೊದಗುತ್ತದೆ. ಬಂಗಾರಣ್ಣನ ಮಗನೂ ತಂದೆಯಂತೆ ಯೋಚಿಸದೆ ಇಂಗ್ಲಿಷ್ ಶಾಲೆಗೆ ದೇಣಿಗೆ ನೀಡುವುದು ಗಾಂಧಿ ಮೌಲ್ಯಗಳು ಬಣ್ಣ ಕಳಕೊಂಡಂತೆ. ಶಿಕ್ಷಣವೆಂದರೆ ದುಡ್ಡು

ಬಂಡವಾಳ ಹೂಡಿ ದುಪ್ಪಟ್ಟು ಗಳಿಸುವುದು ಎಂಬ ನೀತಿ ಹೊಸ ಪೀಳಿಗೆಯದಾಗುತ್ತದೆ. ಬದಲಾಗುತ್ತಿರುವ ಮನಸ್ಥಿತಿ ವಿಭಿನ್ನ ಒತ್ತಡಗಳೊಂದಿಗೆ ಮಣಿದು ಇನ್ನು ಉಳಿಯಲಾರದು ಎಂಬ ಪ್ರಜ್ಞೆಯು ಅಂತ್ಯದ ಕೇರೆಹಾವು ಗಾಂಧಿ ಭಾವಚಿತ್ರದ ಪ್ರತಿಮೆಯೊಂದಿಗೆ 'ನಾಶ ನಿಶ್ಚಿತ' ಎಂಬ ಸತ್ಯವನ್ನು ಸಾರುವಂತಿದೆ.

ಅಡಿಟಿಪ್ಪಣಿ

೧. ತುಳು ಸಾಹಿತ್ಯ ಚರಿತ್ರೆ, ಪ್ರಸಂ. ಡಾ.ಬಿ.ಎ. ವಿವೇಕ ರೈ, ಪ್ರಸಾರಾಂಗ ಕ.ವಿ.ವಿ., ಹಂಪಿ, ೨೦೦೭, ಪುಟ ೫೬.

೨. ಬಿಲ್ಲವರು ಮತ್ತು ಬಾಸೆಲ್ ಮಿಶನ್ ಒಂದು ಅಧ್ಯಯನ, ರಮಾನಾಥ್ ಕೋಟೆಕಾರ್, ಸಾಯಿಸುಂದರಿ ಸೇವಾಟ್ರಸ್ಟ್, ಕೋಟೆಕಾರ್ ಮಂಗಳೂರು, ೨೦೧೧, ಪುಟ ೨೩.

೩. ಶತಮಾನದ ಸಂಶೋಧನೆ, ಸಂ : ಎನ್.ಎಸ್. ತಾರಾನಾಥ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಅನುಭವ ಪ್ರಿಂಟರ್ಸ್, ಬೆಂಗಳೂರು, ೨೦೦೧ ಪುಟ ೯೬.

೪. ಪೂರ್ವಾಪರ, ಯು.ಆರ್.ಅನಂತಮೂರ್ತಿ, ವಸಂತ ಪ್ರಕಾಶನ, ಬೆಂಗಳೂರು ೧೯೯೦, ಪುಟ ೨೧೬.

೫. ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನೆ, ಡಾ.ಸಿ.ಎನ್. ರಾಮಚಂದ್ರನ್, ಅಂಕಿತ ಪುಸ್ತಕ, ಬೆಂಗಳೂರು, ೧೯೯೦, ಪುಟ ೨೭೪.

೬. ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನೆ, ಡಾ.ಸಿ.ಎನ್. ರಾಮಚಂದ್ರನ್, ಅಂಕಿತ ಪುಸ್ತಕ, ಬೆಂಗಳೂರು, ೧೯೯೦, ಪುಟ ೨೭೭.

ಅಧ್ಯಾಯ ೫. ತುಳುನಾಡಿನ ಕಥನ ಸಾಹಿತ್ಯದಲ್ಲಿ ಕಾಣಿಸುವ ಗಾಂಧಿ ಭೇಟಿಯ ಪ್ರಭಾವಗಳು

೫.೧. ಗಾಂಧೀಜಿಯ ಪ್ರಭಾವ

೫.೨. ಗಾಂಧೀಜಿಗೆ ನಿಧಿ ಅರ್ಪಣೆ

೫.೩. ನೂಲುವುದು ಹಾಗೂ ಕಾಂಗ್ರೆಸ್ ಸದಸ್ಯತ್ವ

೫.೪. ಖಾದಿ ಪ್ರಚಾರ ಮತ್ತು ಮಾರಾಟ

೫.೫. ವಿದೇಶಿ ವಸ್ತ್ರ ಬಹಿಷ್ಕಾರ

೫.೬. ಉಪ್ಪಿನ ಸತ್ಯಾಗ್ರಹ

ಅಧ್ಯಾಯ ೫. ತುಳುನಾಡಿನ ಕಥನ ಸಾಹಿತ್ಯದಲ್ಲಿ ಕಾಣಿಸುವ ಗಾಂಧಿ ಭೇಟಿಯ ಪ್ರಭಾವಗಳು

೫.೧. ಗಾಂಧೀಜಿಯ ಪ್ರಭಾವ

ನಾಗವೇಣಿ ಅವರ 'ಗಾಂಧಿ ಬಂದ' ಕಾದಂಬರಿಯ ಶೀರ್ಷಿಕೆಯೇ ಸ್ವಾತಂತ್ರ್ಯ ಹೋರಾಟದ ಎಳೆ ಇರುವುದನ್ನು ತಿಳಿಸುತ್ತದೆ. ಕಾರ್ನಾಡ್ ಸದಾಶಿವರಾವ್ ಒಬ್ಬ ಐತಿಹಾಸಿಕ ವ್ಯಕ್ತಿ. ಇವರು ಕಾದಂಬರಿಯಲ್ಲಿ ಒಂದು ಪಾತ್ರವಾಗುತ್ತಾರೆ. ಮಾರಪ್ಪ, ಅದ್ರಾಮ ಖಾದಿ ಪ್ರಚಾರ ಹಾಗೂ 'ಗಾಂಧಿ' ಮಂಗಳೂರಿಗೆ ಬರುವ ಕಾರ್ಯಕ್ರಮಕ್ಕೆ ತೀವ್ರ ಪ್ರಚಾರ, ಸಿದ್ಧತೆ ಕೈಗೊಳ್ಳುತ್ತಾರೆ. ಹಲವು ಸಾಮಾಜಿಕ ಸುಧಾರಣೆಗಳಾಗುತ್ತವೆ. ಸ್ವಾತಂತ್ರ್ಯ, ಸ್ವಾತಂತ್ರ್ಯ ಹೋರಾಟದ ಅಗತ್ಯತೆಯ ಗೊತ್ತುಗುರಿಯಿಲ್ಲದ ಜನ ಕೂಡ ತೀವ್ರವಾಗಿ ಸ್ಪಂದಿಸುತ್ತಾರೆ. ಬಡವರು ಸಹಾಯಹಸ್ತ ಚಾಚುತ್ತಾರೆ. ಉಳ್ಳವರು ಕುತೂಹಲದಿಂದ ಗಮನಿಸುತ್ತಾರೆ. ಸ್ವಾತಂತ್ರ್ಯ ಹೊರಾಟವನ್ನೇ ಗೇಲಿ ಮಾಡುವುದು ವಿಪರ್ಯಾಸ ಎನ್ನಬಹುದು. 'ಪಾಪ ಕಾರ್ನಾಡರು, ಸರ್ವರೂ ಕೊರಗರ ಜತೆ ದೇವರ ಕೋಣೆಯಲ್ಲಿ ಕೂತು ಉಣ್ಣಬೇಕು; ಪರದೇಶಿ ಬಟ್ಟೆ ಸುಡಬೇಕು; ತಕ್ಲಿ ಹಿಡಿದು ಕೂತು ಖಾದಿ ಬಟ್ಟೆ ನೇಯಬೇಕು-ಎಂದು ನರಿ ಬೆಕ್ಕು ನಾಯಿಗಳೆಂದು ನೋಡದೆ ಸಿಕ್ಕಸಿಕ್ಕವರಲ್ಲಿ ಗೋಗರೆಯುತ್ತಿದ್ದಾರೆಂದು ಕಡಲ ಕರೆಯಲ್ಲಿ ಅಂತಪ್ಪ ಪೂಜಾರಿಯನ್ನು ಕಂಡಾಗ ಪೂವ ಮರಕಾಲ ಹೆಮ್ಮೆಯಿಂದ ಹೇಳಿಕೊಂಡಿದ್ದನಂತೆ.(ಗಾಂಧಿ ಬಂದ, ಪುಟ ೪೬) ಇಲ್ಲಿ ಚಳುವಳಿಗಾರರ ಹೋರಾಟ ತೀವ್ರಗೊಂಡ ಬಗೆಯನ್ನು ಅರಿಯಬಹುದು.

ಗಾಂಧಿ ಮೂರು ಬಾರಿ ಮಂಗಳೂರಿಗೆ ಬಂದಿದ್ದಾರೆ. ಐತಿಹಾಸಿಕ ದಾಖಲೆಗಳ ಪ್ರಕಾರ ದಿನಾಂಕ ೧೯.೦೮.೧೯೨೦ರಂದು ಅಸಹಕಾರ ಚಳುವಳಿಯ ಕುರಿತು ಪ್ರಚಾರ ಮಾಡಲು ಗಾಂಧಿ ಪ್ರಥಮ ಬಾರಿಗೆ ಮಂಗಳೂರಿಗೆ ಬಂದಿದ್ದರು. ಆ ಬರುವಿಕೆಗಳ ನಡುವಿನ ಅವಧಿಯಲ್ಲಿ ಹಲವು ಘಟನೆಗಳು ಘಟಿಸುತ್ತವೆ. ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ ಮುಂತಾದ ಹಲವು ಹೋರಾಟದ ಘಟನೆಗಳಲ್ಲಿ ಜನ ಭಾಗಿಯಾಗುತ್ತಾರೆ. ಜನರ ಅಜ್ಞಾನದ ಪಾಲೂ ಹಿರಿದೆನ್ನಬಹುದು. ತಮ್ಮ ಅಜ್ಞಾನದಿಂದಾಗಿ ಎಷ್ಟೋ ಬಾರಿ ಗಾಂಧಿ, ಗಾಂಧಿ ವ್ಯಕ್ತಿತ್ವ, ಗಾಂಧಿ ಧೋರಣೆಗಳು ಜನರಿಗೆ ಅರ್ಥವಾಗುವುದಿಲ್ಲ. ಉಪ್ಪಿನ ಸತ್ಯಾಗ್ರಹ, ಮದ್ಯಪಾನ ನಿಷೇಧ, ಕೆಳಜಾತಿಯವರಿಂದ ದೇವಸ್ಥಾನ ಪ್ರವೇಶ ಮೊದಲಾದ ಕ್ರಾಂತಿಕಾರಿ ಚಟುವಟಿಕೆಗಳಿಗೆ ಆಹ್ವಾನ ನೀಡುತ್ತಾರೆ. ಪರ ಹಾಗೂ ವಿರೋಧ ಧೋರಣೆಗಳೂ ವ್ಯಕ್ತವಾಗುತ್ತವೆ. ಕಾರ್ನಾಡರು ಸಮಾಜ ಸುಧಾರಕರಾಗಿ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಾರೆ. ಮಾರಪ್ಪ ಹಾಗೂ ತಿಂಗಳಾಯರು ಜನರ ಬೈಗುಳ, ಅಸಹನೆ, ತಿರಸ್ಕಾರ, ಪ್ರಾಕೃತಿಕ ತೊಂದರೆಗಳು ಯಾವುದನ್ನು ಲೆಕ್ಕಿಸದೆ ಖಾದಿ ಪ್ರಚಾರ, ಗಾಂಧಿಯ ಆಗಮನದ ಸುದ್ದಿ ನೀಡುತ್ತಾ ದೇಣಿಗೆಯನ್ನು ಸಂಗ್ರಹಿಸುವ ಸನ್ನಿವೇಶ ಪರಹಿತದ ದರ್ಶನವನ್ನು ಮಾಡಿಸುತ್ತದೆ. ಸಮಾಜ ಸುಧಾರಣೆ ಸುಲಭವಾದ ಕೆಲಸವೇನಲ್ಲ, ಎಂತಹ ಪರಿಸ್ಥಿತಿಯಲ್ಲೂ ಧೃತಿಗೆಡದ, ಬೈಗಳು, ಅಸಹನೆಗಳನ್ನೆಲ್ಲ ನುಂಗಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಸುತ್ತದೆ. ಅಂತಹ ಸಲಹೆಗಳನ್ನು ಸ್ವೀಕರಿಸುವ ಹಾಗೂ

ತಿರಸ್ಕರಿಸುವ ಎರಡು ವರ್ಗಗಳು ಸೃಷ್ಟಿಯಾಗುತ್ತವೆ. ಸ್ವಾತಂತ್ರ್ಯ ಚಳುವಳಿ ಪ್ರಭಾವಗಳನ್ನು ತನ್ನೊಡಲೊಳಗೆ ಗರ್ಭೀಕರಿಸಿರುವ ಕಾದಂಬರಿ 'ಗಾಂಧಿ ಬಂದ'. ಗಾಂಧಿಯ ಬರುವಿಕೆಗೆ ಸಿದ್ಧತೆ ನಡೆಸುತ್ತಲೇ ಹಲವು ಬದಲಾವಣೆಗಳಿಗೆ ತೆರೆದುಕೊಳ್ಳುತ್ತದೆ ತುಳುನಾಡು. ಮಾರಪ್ಪ, ಅದ್ರಾಮ, ತಿಂಗಳಾಯ, ಕಾರ್ನಾಡ್ ಸದಾಶಿವರಾವ್ ಮೊದಲಾದವರು ಸುಧಾರಣೆಗೆ ಮುಂದಾಗುವುದು, ಹೋರಾಡುವುದನ್ನು ಅರಿಯಬಹುದು. ಸ್ವಾತಂತ್ರ್ಯ ಸಂದರ್ಭದಲ್ಲಿ ಬಂದಂತಹ ಸುಧಾರಣಾ ಪರ್ವವು ಸುಲಭದ್ದಾಗಿರಲಿಲ್ಲ. ಜನರಲ್ಲಿ ಅರಿವು ಮೂಡಿಸುವ ಕಾರ್ಯ ತೀವ್ರ ತಾಳ್ಮೆಯನ್ನು ಪರೀಕ್ಷಿಸುವಂಥದ್ದು. ಮಾರಪ್ಪ ತನ್ನ ಜೀವನವನ್ನೇ ಸಮಾಜಸೇವೆಗೆ ಮುಡಿಪಾಗಿಟ್ಟು ದುಡಿಯುತ್ತಾನೆ. ತನ್ನ ತಾಯಿ, ಕೃಷಿಗಿಂತ ಗಾಂಧಿ ಮೌಲ್ಯಗಳು ಆತನಿಗೆ ಪ್ರಮುಖವಾಗಿ ಬಿಡುತ್ತವೆ. ಖಾದಿ–ಚರಕದ ಶಕ್ತಿಯನ್ನು ಮನೆಮನೆಗೆ ತೆರಳಿ ಬಿತ್ತರಿಸುವ ಪ್ರಯತ್ನ ಮಾಡಿದ್ದ. ಅಸಹನೆ, ತೆಗಳಿಕೆ, ತಿರಸ್ಕಾರ, ಎಲ್ಲದಕ್ಕೂ ಸಿದ್ಧನಾಗಿದ್ದ. ಕಾರ್ನಾಡರು ದಲಿತರ ದೇವಸ್ಥಾನ ಪ್ರವೇಶ, ವಿಧವಾ ವಿವಾಹ, ಸ್ವದೇಶಿ ಚಳುವಳಿ ಮುಂತಾದವನ್ನು ಪ್ರಚಾರ ಪಡಿಸಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಿದ್ದರು. ಮಾರಪ್ಪ ಖಾದಿ ಪ್ರಚಾರ–ಮಾರಾಟದ ಜೊತೆಗೆ ಗಾಂಧಿಗೆ ಸ್ವರಾಜ್ಯಕ್ಕೆ ಅಗತ್ಯವಿರುವ ನಗ ನಾಣ್ಯಗಳನ್ನು ಪಡೆಯಲು ಉಳ್ಳವರ ಮನೆಗೂ ಹೋಗಿ ಪ್ರಚಾರಮಾಡುತ್ತಾನೆ. ಮಾರಪ್ಪ ಖಾದಿ ಪ್ರಚಾರ–ಮಾರಾಟ, ದಲಿತರ ಉದ್ಧಾರ, ಮದ್ಯಪಾನ ನಿಷೇಧ ಮುಂತಾದ ಕೆಲಸಗಳಲ್ಲಿ ವ್ಯಸ್ತನಾಗಿದ್ದ. ಸ್ವಾವಲಂಬನೆಯ ಬದುಕು ಪಡೆಯುವತ್ತ ಚಳುವಳಿ ಸಾಗಿತ್ತು. ಕಾರ್ನಾಡರ ಮಾತು ಗಮನಸೆಳೆಯುವಂಥದ್ದು. 'ಒಟ್ಟಲ್ಲಿ ನಾವು ದುಡಿಯುವುದು. ಹೀಗ್ಯಾಕೆ! ನಾವು ಬೆಳೆದುದನ್ನು ನಾವೇ ನೂತು ನಾವೇ ಧರಿಸೋಣ. ನಮ್ಮ ಮನೆಯ ಅಕ್ಕಿಯನ್ನು ನಾವೇ ಬೇಯಿಸೋಣ.'(ಗಾಂಧಿ ಬಂದ, ಪುಟ ೧೧೩)

'ಉಲ್ಲಂಘನೆ' ಕಾದಂಬರಿಯಲ್ಲಿ ಪ್ರಮುಖವಾಗಿ ಗಾಂಧಿಯ ಪ್ರಭಾವ ಕಂಡುಬರುವುದು ಗುತ್ತಿನಾರ್ ಸಂಕಪ್ಪ ರೈಗಳಲ್ಲಿ. ಸ್ವಾತಂತ್ರ್ಯ ಚಳುವಳಿಗೆ ಧುಮುಕುವುದು, ವಿದ್ಯಾಭ್ಯಾಸಕ್ಕೆ ತಿಲಾಂಜಲಿ ನೀಡುವುದು, ಇದನ್ನೆಲ್ಲಾ ಯುವ ಪ್ರಾಯದಲ್ಲಿ ಮಾಡಿದರೆ, ಮುಂದೆ ಮನೆಗೆ ಬಂದಾಗಲೂ ಹಲವು ಸುಧಾರಣೆಗಳನ್ನು ಕೈಗೊಳ್ಳುತ್ತಾರೆ. ಅಂಬಕ್ಕೆ ಸಂಪ್ರದಾಯ, ಪರಂಪರೆಯನ್ನು ಗೌರವಿಸುವ ಮಹಿಳೆ. ಶಿಕ್ಷಣವೂ ಕಡಿಮೆ. ಆದರೆ ಸಂಕಪ್ಪ ರೈ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳನ್ನು ಅರ್ಥಮಾಡಿಕೊಂಡವರು. 'ಗಡಿ ಪತ್ತುನ' ಎಂಬ ಗುತ್ತಿನ ಅಧಿಕಾರ ಹಿಡಿಯುವ ಕಾರ್ಯಕ್ರಮವನ್ನು ನಿರಾಕರಿಸುತ್ತಾರೆ. ಗಾಂಧಿ ಮೌಲ್ಯಗಳಾದ ಸರಳತೆ, ಜಾತಿ ಪ್ರಜ್ಞೆಯ ನಿರಾಕರಣೆ, ದಲಿತರ ಉದ್ಧಾರ, ಮೊದಲಾದ ಮಾನವೀಯ ಮೌಲ್ಯಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡವರು. ಗುತ್ತು ಮನೆಯಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದು ಗೌರವದ ವಿಷಯವಾಗಿತ್ತು. ಸಂಕಪ್ಪಣ್ಣ ತಮ್ಮ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯನ್ನು ವಿರೋಧಿಸುತ್ತಾರೆ. ವರದಕ್ಷಿಣೆ ತೆಗೆದುಕೊಳ್ಳುವುದಾದರೆ ಮದುವೆಯನ್ನೇ ನಿರಾಕರಿಸಲು ಮುಂದಾಗುತ್ತಾರೆ. ಹೀಗೆ ಪರಂಪರೆಯನ್ನು ಬದಲಾಯಿಸಲು ಪ್ರಯತ್ನಿಸುತ್ತಾರೆ. ಪ್ರತಿಯೊಂದು ಬದಲಾವಣೆಯನ್ನು ಅಳೆದು ತೂಗಿ ಮಾಡುವ ನಿಖರ ನಿರ್ಧಾರ ಅವರದು. ಆದರೆ ಅಂಬಕ್ಕೆ ಪ್ರತಿ ನಡೆಯನ್ನು ವಿರೋಧಿಸುತ್ತಾಳೆ. ಗುತ್ತಿನ ಚಾವಡಿಯ ನಡುಬಾಗಿಲಿನ ಮೇಲೆ ಗಾಂಧೀಜಿಯ ಫೋಟೋವನ್ನು ತೂಗುಹಾಕುವುದೇ ಕ್ರಾಂತಿಕಾರಿ ಬದಲಾವಣೆ. ಉಡುಪೂ ಸರಳ. ಖಾದಿ ಜುಬ್ಬ, ಖಾದಿ ಪಂಚೆ,

ಖಾದಿ ಚೀಲ. ತುಳು ಸಂಸ್ಕೃತಿಯಲ್ಲಿ ಕೋಳಿ ಅಂಕವು ಪ್ರಮುಖ ಆಕರ್ಷಣೆ. ಕೋಳಿ ಗುತ್ತಿನ ಮನೆಯಲ್ಲಿ ಸಾಮಾನ್ಯ. ಸಂಕಪ್ಪ ರೈ ಗುತ್ತಿನ ಮನೆಯಲ್ಲಿ ಕೋಳಿ ಅಂಕಕ್ಕೆ ಕೋಳಿ ಸಾಕುವುದನ್ನು ವಿರೋಧಿಸುತ್ತಾರೆ. ಮಾಂಸಾಹಾರ ನಿಷೇಧಕ್ಕೂ ಮುಂದಾಗುತ್ತಾರೆ. ಎಲ್ಲರ ಮೇಲೂ ಜಾರಿಗೊಳಿಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ ತಾವು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಗಾಂಧೀಜಿ ಪ್ರಥಮ ಬಾರಿಗೆ ಮಂಗಳೂರಿಗೆ ಆಗಮಿಸಿ ಮಾಡಿದ ಭಾಷಣದ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುತ್ತಾರೆ.

"ಓದು, ಪದವಿ, ಗುತ್ತು, ಗುತಿನ ಗತ್ತು ಎಲ್ಲವೂ ಸಂಕಪ್ಪ ಹೆಗ್ಡೆಯವರಿಗೆ ನಗಣ್ಯ ಎನಿಸಿತ್ತು. ಅಷ್ಟೇ ಅಲ್ಲ ಅದಕ್ಕಿಂತಲೂ ಹೆಚ್ಚು ಗುತ್ತು ಕೂಡಾ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ರೂಪಕದ ಹಾಗೆ ಅನಿಸಿತ್ತು."(ಉಲ್ಲಂಘನೆ, ಪುಟ ೫೫)

ಭೂಮಸೂದೆ ಜಾರಿಯಾದಾಗ ಗೇಣಿದಾರರು ಸ್ವತಂತ್ರರಾದಾಗ ಚಕಾರ ಎತ್ತುವುದಿಲ್ಲ. ಮುಂದೆಯೂ ಸಮಾನತೆಯ ತತ್ವ ಪಾಲಿಸುತ್ತಾರೆ. ಮೂಲದಾಳುಗಳ ಮೇಲಿನ ಕಾಳಜಿ ಗಮನಿಸುವಂಥದ್ದು. ಅವರ ಕಷ್ಟ ಸುಖಗಳಲ್ಲಿ ಹಿಂದೇಟು ಹಾಕದೆ ಸಹಾಯ ಮಾಡುತ್ತಾರೆ.

ನಾ.ಮೊಗಸಾಲೆ ಅವರ 'ಮುಖಾಂತರ' ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟದಿಂದ ತುಳು ಸಂಸ್ಕೃತಿಯಲ್ಲಾದ ಪಲ್ಲಟವನ್ನು ಗುರುತಿಸಬಹುದು. ಹಳೆ ಆಲೋಚನಾ ವಿಧಾನ, ಗಾಂಧಿ ಚಿಂತನೆ ಎರಡರ ನಡುವೆ ನಡೆಯುವ ಸಂಘರ್ಷ ಗುರುತಿಸಬಹುದು. ಅಧಿಕಾರ ಕೇಂದ್ರದ ಬದಲಾವಣೆ, ಅಧಿಕಾರ ತ್ಯಾಗ, ಶಿಕ್ಷಣ ತ್ಯಾಗ, ಶಾಲೆಯ ನಿರ್ಮಾಣ, ಸರಳತೆ, ನಿರ್ಭೀಡೆ, ಧನ ತ್ಯಾಗ, ಸಮಾಜ ಸೇವೆ ಮುಂತಾದ ಹಲವು ಪಲ್ಲಟಗಳಿಗೆ ಕಾದಂಬರಿ ಧ್ವನಿಯಾಗಿದೆ. ಸಮಾನತೆಗಾಗಿ ಮಾಡುವ ತ್ಯಾಗ, ಬಲಿದಾನಗಳ ಚಿತ್ರಣವಿದೆ. ಬ್ರಿಟಿಷ್ ಟೊಪ್ಪಿಗಳಿಗೆ ಉತ್ತರವಾಗಿ ರೂಪಿತವಾದ ಗಾಂಧಿ ಟೊಪ್ಪಿ ಬ್ರಿಟಿಷ್ ಸರಕಾರಕ್ಕೆ ವಿರೋಧವಾಗಿ ಎಂಬಂತೆ ಕಾಣಿಸುತ್ತದೆ. ಟೊಪ್ಪಿ ಶಂಭಟ್ಟ ಪಾತ್ರದ ಮೂಲಕ ಗಾಂಧಿ ಟೊಪ್ಪಿ ಜನಪ್ರಿಯವಾಗಿದೆ. ಸ್ವಾತಂತ್ರ್ಯ ಚಳುವಳಿಯನ್ನು ಕಿತ್ತೊಗೆಯುವ ಸರ್ವ ಪ್ರಯತ್ನಗಳನ್ನೂ ಅಧಿಕಾರ ಕೇಂದ್ರವಾದ ಬ್ರಿಟಿಷ್ ಸರಕಾರ ಮಾಡುತ್ತದೆ. ಬ್ರಿಟಿಷ್ ಸರಕಾರದಿಂದ ನಿಯೋಜಿತವಾದ ಶಿರಸ್ತೇದಾರ, ಪಟೇಲ, ಶಾನುಭೋಗ, ಉಗ್ರಾಣಿ ಎಲ್ಲರೂ ಸ್ವಾತಂತ್ರ್ಯ ಚಳುವಳಿಯ ದಮನಕ್ಕಾಗಿ ಪ್ರಯತ್ನಿಸುವುದು ಉಲ್ಲೇಖನೀಯ. ಸ್ವಾತಂತ್ರ್ಯ ಚಳುವಳಿಯೊಂದಿಗೆ ಬೆಳೆದು ಬಂದ ಗಾಂಧಿ ಮೌಲ್ಯಗಳು ತುಳುನಾಡಿನ ಸಮಾಜದಲ್ಲಿ ಹೊಸ ಬದಲಾವಣೆಯನ್ನು ತಂದವು. ಸಮಾನತೆ, ಸ್ವಚ್ಛತೆ, ನೂಲುವುದು ದಿನನಿತ್ಯದ ಕ್ರಿಯೆಗಳಾದವು. ಗಾಂಧಿವಾದ ಏಕಕಾಲದಲ್ಲಿ ಬಡವರನ್ನೂ, ಶ್ರೀಮಂತರನ್ನೂ, ಮೇಲ್ವರ್ಗದವರನ್ನೂ, ಕೆಳವರ್ಗದವರನ್ನೂ ಆಕರ್ಷಿಸಿತು. ಪಟೇಲರ ಉಗ್ರಾಣಿಯೂ ಶಂಭಟ್ಟರ ಹಿಂಬಾಲಕರಾಗಿ ಗಾಂಧಿಕಡೆ ಆಕರ್ಷಿತರಾಗಿ ಹೋಗುವುದು ಗಮನಾರ್ಹ ಅಂಶ. ಕಷ್ಟದಿಂದ ಬದುಕುತ್ತಿದ್ದ ಬಡವರ್ಗದವರಿಗೆ ಸ್ವಾತಂತ್ರ್ಯ ಸುಖದ ಸೋಪಾನವಾಗಿ ಕಂಡುಬಂದದ್ದು ವಿಶೇಷ. ಸ್ವಾತಂತ್ರ್ಯ ಹೋರಾಟಗಾರರು ಬಡತನದ ಬದುಕು ನಡೆಸುತ್ತಿದ್ದು ಅದೂ ಕೆಳವರ್ಗದವರನ್ನು ಆಕರ್ಷಿಸಿರಬಹುದು. ಟೊಪ್ಪಿ ಶಂಭಟ್ಟರು ಖಾದಿ

ಉಡುಗೆ, ಹಾಸಿಗೆ ತಲೆದಿಂಬು ಇಲ್ಲದೆ ಮಲಗುವುದು, ಸರಳ ಆಹಾರ, ಮಿತವ್ಯಯದ ಬದುಕನ್ನು ಗಾಂಧಿ ಪ್ರಭಾವದಿಂದ ರೂಢಿಸಿಕೊಂಡಿರುತ್ತಾರೆ.

ಮೇಲ್ವರ್ಗ ಹಾಗೂ ಕೆಳವರ್ಗದವರಿಗೂ ಅದೆಷ್ಟೋ ಬಾರಿ ಗಾಂಧಿ ಸಿದ್ಧಾಂತ ಅರ್ಥವಾಗಲೇ ಇಲ್ಲ. ಆ ಕಾಲದಲ್ಲಿ ಲಭ್ಯವಿಲ್ಲದ ಶಿಕ್ಷಣ, ಮಾಧ್ಯಮಗಳ ಕೊರತೆಯೂ ಕಾರಣ. ತಿಳುವಳಿಕೆ ಇರುವವರಲ್ಲಿಯೂ ಇದ್ದ ನಕಾರಾತ್ಮಕ ಧೋರಣೆ, ನಮ್ಮ ದಿನಗಳು ಸುಖವಾಗಿ ಕಳೆದರೆ ಸಾಕೆಂಬ ಪ್ರಜ್ಞೆ ಪ್ರಮುಖವಾಗಿ ಎದ್ದು ಕಾಣುತ್ತದೆ. ಟೊಪ್ಪಿ ಶಂಭಟ್ಟರನ್ನು ಶಿರಸ್ತೇದಾರರ ಕಛೇರಿಯಲ್ಲಿ ಬ್ರಿಟಿಷ್ ಪೋಲಿಸರು ಬಂಧಿಸಿ, ಗಾಂಧಿ ಟೊಪ್ಪಿ ಎಸೆದು ಮುಷ್ಟಿಗೆ, ಬೆನ್ನಿಗೆ ಗುದ್ದಿದ್ದು ನೋಡಿದ ಉಗ್ರಾಣಿಗೆ, ಅನಗತ್ಯವಾಗಿ ಇಂಥ ದುಃಸ್ಥಿತಿಗೆ ಏಕೆ ಒಡ್ಡಿಕೊಳ್ಳಬೇಕು? ಎಂದು ಅನಿಸುತ್ತದೆ.

ಪಟೇಲ ಮಾರಪ್ಪ ಶೆಟ್ಟಿಯ ಮಗ ಮಂಜುನಾಥನ ಕುರಿತು ಶಂಭಟ್ಟ ಹೇಳುವ ಮಾತುಗಳು ತರುಣರಲ್ಲಿ ಸ್ವಾತಂತ್ರ್ಯ ಸಿಗಲು ಇರುವ ಉತ್ಸಾಹ ಮತ್ತು ಛಲವನ್ನು ತೋರಿಸುತ್ತವೆ.

'ನಾಲ್ಕಾರು ಬಾರಿ ನಾನೂ ಅವನೂ ಪಿಕೆಟಿಂಗ್‌ನಲ್ಲಿ ಒಟ್ಟಿಗೇ ಭಾಗವಹಿಸಿದ್ದೂ ಇದೆ. ಆಗಲೇ ಅಂವ ಲಾಠಿಪೆಟ್ಟು ತಿಂದೂ ಆಗಿದೆ. ಹುಡುಗ ಮಾತ್ರ ತುಂಬ ಉತ್ಸಾಹಿ ಮತ್ತು ಛಲವಂತ. ಸತ್ತರೂ ಹಿಂದೆ ಸರಿಯುವ ಮನಸ್ಸಿನವನಲ್ಲ.'(ಮುಖಾಂತರ, ಪುಟ ೩೩೮)

'ಅಂಥಾದ್ದೇನಿದೆ ನನ್ನಲ್ಲಿ ಮಾತನಾಡುವ ವಿಷಯ?' ಎಂದು ಹೇಳುತ್ತಾ ಚೆನ್ನಪ್ಪನ ಹೆಗಲ ಮೇಲೆ ಕೈ ಇಟ್ಟರು. ಚೆನ್ನಪ್ಪನಿಗೆ ತಾನು ಪತ್ರಿಕೆಯಲ್ಲಿ ನೋಡಿದ ಗಾಂಧೀಜಿಯೇ ತನ್ನ ಹೆಗಲ ಮೇಲೆ ಕೈ ಇರಿಸಿದಷ್ಟೂ ಖುಶಿಯಾಗಿ ಆತ 'ಸ್ವಾಮಿ ನಮ್ಮ ಪಟೇಲರ ಬಾಯಿ ಮುಚ್ಚಿಸಿದ ನಿಮ್ಮ ಮಾತು ಕೇಳಿ ನನಗೆ ತುಂಬಾ ಖುಶಿಯಾಯ್ತು ನೋಡಿ. ಆ ಗಾಂಧಿ ಮಹಾತ್ಮನೂ ಹೀಗೇ ಬ್ರಿಟಿಷರ ಬಾಯಿ ಮುಚ್ಚಿಸುತ್ತಿದ್ದಾರೆ ಎಂದು ಕೇಳಿದ್ದೆ. ನಿಮ್ಮನ್ನು ನೋಡಿದ ಮೇಲೆ, ಆ ಗಾಂಧೀಜಿಯವರು ಹೇಗಿರಬಹುದು?' ಎಂದು ತರ್ಕಿಸಿಕೊಳ್ಳತೊಡಗಿದ್ದೇನೆ. 'ನನಗೆ ಈ ಸರಕಾರದ ಚಾಕರಿ ಮಾಡಿದರೆ ಲೇಸು ಎಂದು ಅನಿಸಹತ್ತಿದೆ. ಹೆಂಡ್ತಿ ಮಕ್ಕಳು ಇಲ್ಲದೇ ಇದ್ದಿದ್ದರೆ ನಾನೂ ನಿಮ್ಮ ಜೊತೆ ಹೊರಟು ಬಿಡುತ್ತಿದ್ದೆ!' ಎಂದ. ಉಗ್ರಾಣಿ ಹೊರಟುಬಿಡುತ್ತಾನೆ. (ಮುಖಾಂತರ, ಪುಟ ೩೭೬) 'ಮನುಷ್ಯ' ಎಂದು ಗೌರವದಿಂದ ಮಾತನಾಡುವುದು ಉಗ್ರಾಣಿಯಲ್ಲಿ ಬದಲಾವಣೆ ತರುತ್ತದೆ. ಟೊಪ್ಪಿ ಶಂಭಟ್ಟರು ಬ್ರಿಟಿಷ್ ಸರಕಾರದ ಕೆಳದರ್ಜೆಯ ನೌಕರನಾದ ಉಗ್ರಾಣಿಯಲ್ಲಿ ತೋರಿದ ವರ್ತನೆ, ಮಾತಿನ ರೀತಿ ಆತನನ್ನು ಗಾಂಧಿ ಕಡೆ ಆಕರ್ಷಿಸಿತು.

ಟೊಪ್ಪಿ ಶಂಭಟ್ಟರು ವಿಷ್ಣುಮೂರ್ತಿ ದೈವದ 'ಒತ್ತೆಕೋಲ' ಎಂಬ ಕೆಂಡ ಸೇವೆ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳವಳಿಯ ಮಹತ್ವ ವಿವರಿಸಲು ಹಾಗೂ ಕಾಂಗ್ರೆಸ್ ಧ್ವಜ ಹಾರಿಸುವ ನಿರ್ಧಾರ ತಿಳಿಸುತ್ತಾರೆ. ಮಾಧ್ಯಮಗಳ ಕೊರತೆ ಇದ್ದ ಆ ಕಾಲದಲ್ಲಿ ಜನ ಜಮಾಯಿಸುವಂತಹ ಸಂದರ್ಭಗಳನ್ನೇ ಸ್ವಾತಂತ್ರ್ಯ ಚಳುವಳಿಯ ಪ್ರಚಾರಕ್ಕಾಗಿ ಬಳಸುತ್ತಿದ್ದರು. ಜನಜಾಗೃತಿ ಮಾಡಲು ಪ್ರಯತ್ನಿಸುತ್ತಿದ್ದರು.

ಕೃಷ್ಣಯ್ಯನ ಮೊಮ್ಮಗ ಶಂಕರನೂ ಕೂಡ ಸ್ವಾತಂತ್ರ್ಯ ಚಳುವಳಿಗಾಗಿ ಹೋರಾಟದ ಮಾರ್ಗ ಆಯ್ದುಕೊಳ್ಳುತ್ತಾನೆ. ಉಡುಪಿ ಮಠದಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿ ಪಿಕೆಟಿಂಗ್ ನಡೆಸಿದ ಎಂಬ ಸುಳಿವು ಪೋಲಿಸರಿಗೆ ಸಿಕ್ಕಲು ತಪ್ಪಿಸಿಕೊಳ್ಳುತ್ತಾನೆ. ಮುಂದೆ ಮಂಗಳೂರಿಗೆ ಆಗಮಿಸಿದಾಗ ಆದ ಲಾಠಿ ಪ್ರಹಾರದ ಸಂದರ್ಭದಲ್ಲಿ ಉದ್ರಿಕ್ತ ಪರಿಸ್ಥಿತಿ ಎದುರಾದಾಗ ಹೊಡೆದ ಗುಂಡು ಶಂಕರನ ತೊಡೆಗೆ ಬಿದ್ದು ಆತ ಗಾಯಗೊಳ್ಳುತ್ತಾನೆ. ಮುಂದೆ ಊರಿಗೆ ಮರಳಿದ ಆತ ರಾಷ್ಟ್ರೀಯ ಶಾಲೆಯನ್ನು ತನ್ನ ಅಂಗಳದಲ್ಲೇ ತೆರೆಯುತ್ತಾನೆ.

'ಸ್ವಾತಂತ್ರ್ಯ ಅಂದರೆ ಕೇವಲ ರಾಜಕೀಯ ಸ್ವಾತಂತ್ರ್ಯ ಅಲ್ಲ ನಿಜವಾದ ಗ್ರಾಮ ಸ್ವರಾಜ್ಯವೇ ಸ್ವಾತಂತ್ರ್ಯ. ಅದಕ್ಕಾಗಿ ಮೊದಲು ಎಲ್ಲರೂ ವಿದ್ಯಾವಂತರಾಗಬೇಕು. ವಿದ್ಯೆ ಎಲ್ಲರ ಮನೆ ಬಾಗಿಲಿಗೆ ಬರಬೇಕು. ಹಾಗೆ ಅದು ಬಂದರೆ, ಅಸ್ಪೃಶ್ಯತೆ, ಅಸಮಾನತೆ, ಬಡತನ ಎಲ್ಲವನ್ನೂ ಹೊಡೆದೋಡಿಸುವುದು ಸುಲಭ ಎನ್ನುವುದು ಗಾಂಧಿ ಸಿದ್ಧಾಂತ.'(ಮುಖಾಂತರ, ಪುಟ ೪೦೭) ಇಲ್ಲಿ ಸ್ವಾತಂತ್ರ್ಯದ ಮುಖ್ಯ ಆಶಯದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

'ಔದಾರ್ಯದ ಉರುಳಲ್ಲಿ' ಕಾದಂಬರಿ ಗಾಂಧಿ ಪ್ರಭಾವ ಹಾಗೂ ಅದನ್ನು ಕುಗ್ಗಿಸುವ ಶಕ್ತಿಯ ಕುರಿತು ಚಿತ್ರಿಸುತ್ತದೆ. ಗಾಂಧಿ ಮಾರ್ಗ ಅಹಿಂಸೆ ಹಲವರಿಂದ ಒಪ್ಪಿತ ಮೌಲ್ಯವಾದರೂ ಅದಕ್ಕೆ ವಿರುದ್ಧವಾಗಿ ಹಿಂಸೆಯಿಂದ ಸಾತಂತ್ರ್ಯ ಪಡೆಯಲು ಹವಣಿಸುವ ಗುಂಪೊಂದು ಉದ್ಭವಿಸುತ್ತದೆ. ಕಾಂಗ್ರೆಸ್‌ಗೆ ವಿರುದ್ಧವಾಗಿ ಸಮತಾವಾದ ಕಾಣಿಸಿಕೊಳ್ಳುತ್ತದೆ. ರಾಧಾಕೃಷ್ಣ ಗಾಂಧಿಯ ಮೌಲ್ಯದಂತೆ ನಡೆದರೆ, ಕೆಲವರು ಗಾಂಧಿ ಹೇಳಿರದ ಮಾತುಗಳನ್ನು ಹೇಳಿ ದಾರಿ ತಪ್ಪಿಸಲು ಪ್ರಯತ್ನಿಸುತ್ತಾರೆ. ಮರದ ದಿಮ್ಮಿ ಸೌದೆಗಳಿಗೆ ಬೆಂಕಿ ಹಚ್ಚುವ, ರೈಲುಗಳಿಗೆ ಹಾನಿ ಮಾಡುವ ಪೋಸ್ಟ್ ಬಾಕ್ಸ್ ಕದ್ದೊಯ್ಯುವ ಹಿಂಸಾ ಪ್ರವೃತ್ತಿಗಳು ನಡೆದುಹೋಗುತ್ತವೆ. ಗಾಂಧಿ ಮಾರ್ಗದಿಂದ ಸ್ವರಾಜ್ಯಗಳಿಕೆ ಖಂಡಿತ ಸಾಧ್ಯವೆಂದು ಒಂದು ತಂಡ ನಂಬಿದರೆ, ಇನ್ನೊಂದು ಸಮೂಹ ಅದನ್ನು ವಿರೋಧಿಸುತ್ತದೆ.

ಗಾಂಧಿ ಪ್ರಭಾವ 'ನವಜೀವನ' ಮುಂತಾದ ಪತ್ರಿಕೆಗಳ ಮೂಲಕ ಪ್ರವಹಿಸಿದ್ದು ಅವರ ವಿಚಾರಧಾರೆಗಳನ್ನು ಪತ್ರಿಕೆಗಳಲ್ಲಿ ಓದುವುದರ ಮೂಲಕ ಅರ್ಥೈಸಿದರು. ಗಾಂಧಿ ಹಲವರಿಗೆ ದೇವತಾಸ್ವರೂಪಿಯಾದರೆ, ಇನ್ನು ಕೆಲವರಿಗೆ ಮಕ್ಕಳನ್ನು ದಾರಿ ತಪ್ಪಿಸುವಾತ. ತಮ್ಮ ಮನೆಮಕ್ಕಳನ್ನು ಗಾಂಧಿ ಹಾಳುಮಾಡುತ್ತಿದ್ದಾನೆ ಎಂಬ ನಂಬಿಕೆ ಕೆಲವರದು.

ನೂಲುವುದು, ದಲಿತರ ಉದ್ಧಾರ, ರಾಷ್ಟ್ರೀಯ ಶಾಲೆ ಮೊದಲಾದವನ್ನು ಆಚರಣೆಗೆ ತರಲು, ಪಾಲಿಸಲು ರಾಧಾಕೃಷ್ಣ ಪರಿಶ್ರಮಿಸುತ್ತಾನೆ. ರಾಧಾಕೃಷ್ಣ 'ಖಾದಿ' ವಸ್ತ್ರಗಳನ್ನೇ ಧರಿಸುತ್ತಿದ್ದ ಪಕ್ಕಾ ಗಾಂಧಿವಾದಿ. ಜ್ವರದಿಂದ ನರಳುತ್ತಿದ್ದರೂ 'ಮಿಲ್ ಖಾದಿ' ಎಂಬ ನೆಪನೀಡಿ ಒದ್ದೆಬಟ್ಟೆಯಲ್ಲೇ ಇರುತ್ತಾನೆ. ನೂಲುವುದನ್ನು ಕಲಿಸಲು ಹಾತೊರೆಯುತ್ತಾನೆ. ಬಿ.ಎ. ಮುಗಿಸಿ ಬಿ.ಎಲ್. ಮಾಡಿ ವಕೀಲನಾಗುವುದು ಬಿಟ್ಟು ಸ್ವರಾಜ್ಯ ಗಳಿಕೆಯ ಕರ್ಮಯೋಗಿ ಆಗುತ್ತಾನೆ.

'ದಿನಕ್ಕೆ ಹತ್ತೆಂಟು ಮೈಲು ಸಂಚರಿಸದ ದಿನವಿಲ್ಲ. ನಾಲ್ಕೆಂಟು ಗುಡ್ಡೆಗಳನ್ನು ತುಳಿಯದ ದಿನವಿಲ್ಲ. ಹತ್ತೆಂಟು ಮನೆಯವರನ್ನು ಭೇಟಿಯಾಗದ ದಿನವಿಲ್ಲ. ಕೇಳದ ಜನರ ಕಿವಿಗಳಿಗೆ,

ಸ್ವದೇಶಿ, ಸ್ವರಾಜ್ಯಗಳ, ಮಂತ್ರೋಪದೇಶವನ್ನು ಮಾಡದ ಕಾಲವಿಲ್ಲ'. ಈ ರೀತಿ ರಾಧಾಕೃಷ್ಣ ಅನ್ನ, ಹಸಿವು, ನೀರಡಿಕೆ ಮರೆತು ಮನೆ ತ್ಯಜಿಸಿ ಊರೂರು ಅಲೆಯುತ್ತಾ ಸ್ವರಾಜ್ಯಕ್ಕಾಗಿ ಜನರ ಮನಸ್ಸನ್ನು ಸಿದ್ಧಮಾಡುವಲ್ಲಿ ವ್ಯಸ್ತನಾಗುತ್ತಾನೆ.

ಗ್ರಾಮ ಸ್ವರಾಜ್ಯ, ಹಳ್ಳಿಗಳಿಗೆ ಹಿಂತಿರುಗಿ ಎಂಬ ಕರೆ ನೀಡಿದ ಗಾಂಧಿ ತರುಣರಾದ ಸಖಾರಾಮ, ಸದಾನಂದ, ರಾಧಾಕೃಷ್ಣರನ್ನು ಆಕರ್ಷಿಸುತ್ತಾರೆ. ಬಿ.ಎ. ಮುಗಿಸಿ ಅಧ್ಯಾಪಕರಾಗಿದ್ದ ಸಖಾರಾಮ ಅದನ್ನು ತ್ಯಜಿಸಿ ಸ್ವರಾಜ್ಯದ ಗಳಿಕೆಗೆ ಇಳಿದ. ಈ ಗಾಂಧಿ ಪ್ರಭಾವ ಕೊನೆಯವರೆಗೂ ಉಳಿಯುವುದು ರಾಧಾಕೃಷ್ಣನಲ್ಲಿ ಮಾತ್ರ, ಉಳಿದ ಈರ್ವರೂ ತಮ್ಮ ವೈಯಕ್ತಿಕ ಉನ್ನತಿಗೆ ಶ್ರಮಿಸುತ್ತಾರೆ. ಉಪನ್ಯಾಸ, ನೂಲುವುದು, ಕಾಂಗ್ರೆಸ್ ಸದಸ್ಯತ್ವ ತಿಲಕ್ ಫಂಡು ಎಂಬ ಶ್ರಮದ ಜೀವನ ನಿರಾಶದಾಯಕ ಸ್ಥಿತಿ ತಲುಪಿದಾಗ ರಾಧಾಕೃಷ್ಣ ಏಕಾಂಗಿ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಅಪ್ಪಟ ಗಾಂಧಿಪ್ರೇಮಿ ರಾಧಾಕೃಷ್ಣ ಖಾದಿ ಧರಿಸುವುದನ್ನು ಕಡ್ಡಾಯ ಮಾಡುತ್ತಾನೆ. ಸರಳಬದುಕು, ನಿಸ್ವಾರ್ಥ ಬುದ್ಧಿ, ದಲಿತರ ಉದ್ಧಾರ, ನೂಲುವುದು, ರಾಷ್ಟ್ರೀಯ ಶಾಲೆ, 'ವೀರವಾಣಿ' ಪತ್ರಿಕೆ ಮೊದಲಾದ ಕೆಲಸಗಳಿಗೆ ಮೀಸಲಿಡುತ್ತಾನೆ. ವೈವಾಹಿಕ ಬಂಧನಕ್ಕೆ ಸಿಲುಕಿದರೂ ಪತ್ನಿ ಸತ್ಯಳನ್ನೂ ತನ್ನಂತೆ ಮಾರ್ಪಡಿಸುವಲ್ಲಿ ಯಶಸ್ವಿಯಾಗುತ್ತಾನೆ. ಜನರ ಬಡತನ, ಅವಿದ್ಯೆ, ರೋಗನಿವಾರಣೆಯ ವಿರುದ್ಧ ಸಮರ ಸಾರುವ ಕನಸು ಆತನದು. ಬಡವರಿಗೆ ನಿಸ್ವಾರ್ಥವಾಗಿ ನೆರವು ನೀಡಲು ದಾರಿ ಹುಡುಕುವ ರಾಧಾಕೃಷ್ಣ ವಿದ್ಯೆಯು ಜನರ ಬದುಕಿಗೆ ಮಾರ್ಗವಾಗಬೇಕು ಎಂಬ ನಂಬಿಕೆಯವನು. ಸ್ವರಾಜ್ಯ ಗಳಿಕೆಯ ಅನಿಶ್ಚಿತತೆ ಕೆಲವೊಮ್ಮೆ ನಿರಾಸೆಗೆ ಒಡ್ಡಿದರೂ ಕೂಡಲೇ ಸ್ವತಂತ್ರರಾಗಬೇಕೆಂಬ ಹೆಬ್ಬಯಕೆ. ಊರಿನ ಕೆಲವು ಶ್ರೀಮಂತರು ಸ್ವರಾಜ್ಯ ಗಳಿಕೆಗೆ ಧನಸಹಾಯದ ಭರವಸೆ, ಈಡೇರಿಕೆಗೆ ಒಪ್ಪಿಕೊಂಡು ಕಾರ್‍ಯನಿರ್ವಹಿಸುತ್ತಾರೆ. ಮಂಗಳೂರಿನ ದಯಾನಂದರಾಯರು, ಅಲೆಮನೆಯ ಮಂಜಯ್ಯ ಪ್ರಮುಖರು. ಅಲೆಮನೆಯ ಮಂಜಯ್ಯ ರಾಧಾಕೃಷ್ಣನ ಉಪನ್ಯಾಸವನ್ನು ಊರವರಿಗೆ ಏರ್ಪಡಿಸಿದವರು. ಮನೆಯಲ್ಲಿ ರಾಷ್ಟ್ರೀಯ ಶಾಲೆ ತೆರೆದು, ಮನೆ ಮಕ್ಕಳಿಗೆ ನೂಲುವ ವಿದ್ಯೆ ಕಲಿಯಲು ಪ್ರೇರೇಪಿಸಿದವರು. ದಯಾನಂದರಾಯರು ಮಂಗಳೂರು ನಗರದಲ್ಲಿದ್ದು ತಮ್ಮ ಸ್ವಂತ ಗಳಿಕೆ, ಭೂಮಿಯಿಂದ ಧನಸಹಾಯ ಮಾಡುತ್ತಾ ಕೊನೆಗೊಮ್ಮೆ ಎಲ್ಲ ಕಳಕೊಂಡು ಊರು ಬಿಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. 'ಔದಾರ್ಯದ ಉರುಳಲ್ಲಿ' ಎಂಬ ಶೀರ್ಷಿಕೆ ದಯಾನಂದರಾಯರಿಗೆ ಸಮೀಕರಿಸಲಾಗಿದೆ.

'ಹಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಗೋಪಾಲನ ಗೆಳೆಯ ಸದಾನಂದ ಸಬರ್ಮತಿ ಆಶ್ರಮದಲ್ಲಿ ಇದ್ದು ಗಾಂಧಿಯಿಂದ ನೇರಪ್ರಭಾವ ಪಡೆದವನು. ಅಲ್ಲಿಯ ರೀತಿನೀತಿ ಆತನ ಬದುಕಿನಲ್ಲಿ ಶಿಸ್ತು, ಶ್ರಮಗೌರವ, ನಿಸ್ವಾರ್ಥಮನೋಭಾವ, ಸಮಾಜಸೇವೆಯನ್ನು ರೂಢಿಸಿತ್ತು. ಅನಾಥಾಶ್ರಮ ಕಟ್ಟಬೇಕೆಂಬ ಆಸೆ ಹೊತ್ತು, ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳಿ, ಅವಿವಾಹಿತವಾಗಿರುವೆನೆಂಬ ಪ್ರತಿಜ್ಞೆ ಕೈಗೊಂಡ. ತಕಲಿಯಿಂದ ನೂಲುವುದರಲ್ಲಿ ಆತ ಪ್ರವೀಣನಾಗಿದ್ದ. ಮುಂದೆ ಆಶ್ರಮ ಶಾಲೆ ತೆರೆದೇ ಬಿಡುತ್ತಾನೆ. ಪಾರಳ ಮೂರು ಮಕ್ಕಳಿಗೆ ಅದೇ ಆಶ್ರಯವಾಯಿತು.

ಪಾರ, ಗಂಡ ಗೋಪಾಲನಿಂದ ಆಡಳಿತಾತ್ಮಕ, ರಾಜಕೀಯ, ವಿದೇಶಿ ಸುದ್ದಿಗಳನ್ನು ಅರಿತಿದ್ದಳು. ಕೆಮ್ಮಾಡಿ ಮನೆಯ ಲಕ್ಷ್ಮೀದೇವಿಗೆ ತನ್ನ ಮನೆಯ ಆಗುಹೋಗು, ವ್ಯವಹಾರಗಳೇ ತಿಳಿಯುತ್ತಿರಲಿಲ್ಲ. ಅಡಿಗೆ ಮನೆಯಲ್ಲಿ ಕೆಲಸಮಾಡುತ್ತಿದ್ದ ಪಾರಳಿಂದ ಗಾಂಧೀಜಿ, ಸ್ವಾತಂತ್ರ್ಯಹೋರಾಟ, ಮಹಾಯುದ್ಧ, ಹಿಟ್ಲರನ ಸುದ್ದಿಗಳನ್ನೂ ತಿಳಿದಳು. ಆಕೆಯ ತಿಳುವಳಿಕೆಯ ಪರಿಧಿ ವಿಸ್ತಾರವಾಯಿತು. ಶ್ರೀಮಂತ ಮಹಿಳೆಯರೂ ವ್ಯವಹಾರ ಸಂಬಂಧಿ ಮೌನವಾಗಿ ಇರಬೇಕಾಗುತ್ತಿತ್ತು. ಅದು ಗಂಡಿನ ಲೋಕ; ಹೆಣ್ಣು ಮಕ್ಕಳು ಅಡಿಗೆ ಕೋಣೆ, ಮಕ್ಕಳು, ಮನೆಕೆಲಸ ಇಲ್ಲಿನ ವ್ಯಾಪ್ತಿಗೆ ಸೀಮಿತಗೊಂಡವರು ಎಂಬ ಚಿತ್ರಣ ಲಭಿಸುತ್ತದೆ.

ಶಿಕ್ಷಣ ಹಾಗೂ ಸ್ವಾತಂತ್ರ್ಯ ಚಳುವಳಿ ಓದಿ ವಿದ್ಯಾವಂತರಾದ ಯುವಸಮುದಾಯದಲ್ಲಿ ಸಾಮಾಜಿಕ ಪ್ರಜ್ಞೆ ಜಾಗ್ರತಗೊಂಡಿತು. ಕೃಷಿ ಕೇಂದ್ರಿತ ಚಿಂತನ ಪ್ರಧಾನವಾದ ಕುಟುಂಬಸ್ಥರಲ್ಲಿ ವಿದ್ಯೆ ಕಲಿತು ಶಾಲಾ ಮಾಸ್ತರನಾದ ಪಾರಳ ಗಂಡ ಗೋಪಾಲ ಭಿನ್ನವಾಗಿ ಆಲೋಚಿಸಲು ತೊಡಗುತ್ತಾನೆ. ರಜಾದಿನಗಳಲ್ಲಿ ಮನೆಗೆ ಬಂದಾಗಲೂ ಮೈಮುರಿದು ದುಡಿಯುವ ಚಾಕಚಕ್ಯತೆ ಆತನಿಗಿರಲಿಲ್ಲ. ಆದರೂ ಅಣ್ಣಂದಿರ ಜೊತೆ ಸೇರಿ ಕೆಲಸ ಮಾಡುವ ಪ್ರಯತ್ನ ಮಾಡುತ್ತಾನೆ. ಬೆವರು ಸುರಿಸಿ ದುಡಿವ ಶ್ರಮಸಂಸ್ಕೃತಿಗೆ ಪ್ರತಿಯಾಗಿ ವಿದ್ಯೆ ಕಲಿತು ಅರಳಿದ ಬೌದ್ಧಿಕ ಶಕ್ತಿ ಬೆಳೆಯುವುದನ್ನು ಗೋಪಾಲನಲ್ಲಿ ಕಾಣುತ್ತೇವೆ. ಗೆಳೆಯರ ಜೊತೆ ಸೇರಿ ದೇಶದ ಬಗ್ಗೆ, ಸ್ವಾತಂತ್ರ್ಯದ ಬಗ್ಗೆ, ಹೊಸಶಾಲೆಗಳ ಉದಯದ ಬಗ್ಗೆ ಮಾತುಕತೆ ನಡೆಯುತ್ತಿತ್ತು. ರಾಜಕೀಯ ಆಗುಹೋಗುಗಳ ಕುರಿತು ಕೆಲವರಲ್ಲಾದರೂ ಪ್ರಜ್ಞೆ ಮೂಡಿತ್ತು ಎನ್ನುವ ವಿಚಾರ ಸ್ಪಷ್ಟವಾಗುತ್ತದೆ.

'ಗರಡಿ ಮಜಲಿನ ಗಾಂಧಿ' ಕತೆಯ ಕಥಾನಾಯಕ ಶಿವರಾಮಯ್ಯ ತೋಡುಬಳಿ ಗಾಂಧಿ ಪ್ರಭಾವಕ್ಕೆ ಒಳಗಾದ ವ್ಯಕ್ತಿ. ಸ್ವಾತಂತ್ರ್ಯದ್ದೇ ಗೀಳು ಆತನಿಗೆ. ಸಬರ್ಮತಿ ಆಶ್ರಮದಿಂದ ಊರಿಗೆ ಬಂದು ಬ್ರಹ್ಮಚರ್ಯ ಪಾಲನೆ, ಪಾಯಖಾನೆ ಶುಚೀಕರಣ, ಪಾನ ನಿಷೇಧ, ಗ್ರಾಮ ಸ್ವರಾಜ್ಯ ಎಂದು ಊರೂರು ಸುತ್ತಿ ಜನರಿಗೆ ಬೋಧಿಸಲು ಆರಂಭಿಸಿದ. ತನ್ನ ಕಾಲದ ಜನರಿಗಿಂತ ಭಿನ್ನವಾಗಿ ವಿಚಾರವಂತನಾಗಿದ್ದ ಶಿವರಾಮಯ್ಯ 'ಹುಚ್ಚ' ಎಂದು ಕರೆಸಿಕೊಳ್ಳುತ್ತಾನೆ. ಸ್ವಾತಂತ್ರ್ಯ ನಂತರ ಜನರಿಂದ 'ಗರಡಿ ಮಜಲಿನ ಗಾಂಧಿ' ಎಂಬ ಬಿರುದನ್ನು ಪಡೆಯುತ್ತಾನೆ. ವ್ಯಕ್ತಿ ಜೊತೆಗಿದ್ದಾಗ ಆತನ ಗುಣಗಳನ್ನು, ಒಳ್ಳೆಯತನವನ್ನು ನೋಡದೆ, ಆತ ಇಲ್ಲವಾದಾಗ ಪ್ರಶಸ್ತಿ ನೀಡಿ ಗೌರವಿಸುವುದು ವಿಪರ್ಯಾಸವೇ ಸರಿ. ತಕಲಿಯಲ್ಲಿ ನೂಲುವುದು, ಮೂಲಭೂತ ಶಿಕ್ಷಣ, ವಯಸ್ಕರ ಶಿಕ್ಷಣ, ಉಪ್ಪಿನ ಸತ್ಯಾಗ್ರಹ, ಹೀಗೆ ಹತ್ತು ಹಲವು ಸಾಮಾಜಿಕ ಕೈಂಕರ್ಯಗಳಲ್ಲಿ ತೊಡಗಿದ್ದ ವ್ಯಕ್ತಿ. ಸಾಮಾಜಿಕ ಕಳಕಳಿ ತೀವ್ರತೆಯಿಂದ ತನ್ನ ಕೌಟುಂಬಿಕ ಬದುಕನ್ನು ಕಡೆಗಣಿಸುತ್ತಾನೆ. ಅಸಹಕಾರ ಚಳುವಳಿಯಲ್ಲಿ ಭಾಗವಹಿಸುತ್ತಾ ಸರಕಾರಕ್ಕೆ ತೆರಿಗೆ ನೀಡದಂತೆ ಜನರಿಗೆ ತಿಳಿಹೇಳುತ್ತಾನೆ. ಶೇಂದಿ ಅಂಗಡಿ ಎದುರು ಕೂತು ಮದ್ಯಪಾನ ನಿಷೇಧ ಮಾಡಲು ಕೇಳಿಕೊಳ್ಳುತ್ತಾನೆ. ವಂದೇ ಮಾತರಂನ ಮಹತ್ವ ತಿಳಿಸಿಕೊಡುತ್ತಾ ಗಾಂಧಿ ಮೌಲ್ಯಗಳನ್ನು ಜನರಲ್ಲಿ ಬೆಳೆಸಲು ನಿಸ್ವಾರ್ಥನಾಗಿ ದುಡಿಯುತ್ತಾನೆ. 'ಮೂಲಭೂತ ಶಿಕ್ಷಣ' ಜಾರಿಗೆ ತರಲು ತೀವ್ರವಾಗಿ ಪ್ರಯತ್ನಿಸುತ್ತಾ, ನೂಲುವ, ಕಾಗದದಿಂದ ಹೂ ತಯಾರಿಸುವ, ವನಮಹೋತ್ಸವ ಮಕ್ಕಳಿಂದ ಆಚರಿಸಲು, ಮಾಡಲು ಪ್ರಯತ್ನಿಸುತ್ತಾನೆ. ಹುರಿಹಗ್ಗ, ಗಡಿಗೆ, ಬಟ್ಟೆ ತಯಾರಿಯ ಪ್ರಾತ್ಯಕ್ಷಿಕೆಯನ್ನು ತೋರಿಸುತ್ತಾ ಕಲಿಸುವ ಶಿವರಾಮಯ್ಯನಿಗೆ ನಿರಾಸೆ ಕಾದಿತ್ತು. ಕೊನೆಗೆ ಉಳಿದ ವಿದ್ಯಾರ್ಥಿನಿ

ಆತನ ಮಗಳು ಲಾವಣ್ಯ ಮಾತ್ರ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ವಯಸ್ಕರ ಶಿಕ್ಷಣ ಪಡೆಯಲು ಜನರನ್ನು ಹುರಿದುಂಬಿಸುತ್ತಾ, 'ಸೇಡಿಮಣ್ಣು' ಇಲ್ಲವೆ ಸೀಮೆಸುಣ್ಣದಲ್ಲಿ ಅಂಗಡಿ ಗೋಡೆಗಳ ಮೇಲೆ ಬರೆದು ಜಾಹೀರಾತು ನೀಡುತ್ತಾ ಜನರಿಗೆ ಶಿಕ್ಷಣ ನೀಡಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಾನೆ. ಜನರಿಗೆ ಅದೂ ಅಪಥ್ಯವೆನಿಸುತ್ತದೆ. ಸ್ವಂತ ಮಗಳೂ ಕೂಡ ಅಪ್ಪನಿಗೆ ಹುಚ್ಚು ಹಿಡಿದಿದೆ ಎಂದಾಗ ತೀರಾ ನಿರ್ಗತಿಕರಾಗಿಬಿಡುತ್ತಾರೆ.

'ದಾಯಿತ್ವ' ಕಾದಂಬರಿಯಲ್ಲಿ ಮಾನಪ್ಪ, ಮನೇಲಾ, ಸತ್ಯ ಗಾಂಧಿ ಪ್ರಭಾವದಲ್ಲಿ ಬದುಕು ಸಾಗಿಸುವುದನ್ನು ಕಾಣಬಹುದು. ಸತ್ಯನ ಸರಳತೆ, ಪ್ರಾಮಾಣಿಕತೆ, ಸತ್ಯಸಂಧತೆಯಲ್ಲಿ ಗಾಂಧಿಯ ಮೌಲ್ಯಗಳು ಗೋಚರಿಸುತ್ತವೆ. ಸರಕಾರಿ ವೃತ್ತಿಯಲ್ಲಿದ್ದುಕೊಂಡು ಬ್ರಿಟಿಷರ ವಿರುದ್ಧವಾಗಿ ಗುಪ್ತವಾಗಿ ಕಾರ್ಯಾಚರಣೆ ಮಾಡುತ್ತಾನೆ. ಸರಕಾರಿ ಶಾಲೆಯಲ್ಲಿ ಊರಿನ ವಯಸ್ಕರಿಗೆ ತಿಳುವಳಿಕೆ ನೀಡುತ್ತಾ ರಾಷ್ಟ್ರೀಯ ಪ್ರಜ್ಞೆ ಬೆಳೆಸುವ ಮಾರ್ಗದರ್ಶಕ. ಬ್ರಿಟಿಷ್ ಕಂಪನಿ ಅಧಿಕಾರಿಗಳ ಕಪಟ, ಪೋಲಿಸರ ದೌರ್ಜನ್ಯವನ್ನು ಚಿತ್ರಿಸುವ ಭಿತ್ತಿಪತ್ರ ತಯಾರಿಯಲ್ಲಿ ತೊಡಗಿಕೊಳ್ಳುತ್ತಾನೆ. ಅದನ್ನು ಅಂಟಿಸುವ ಕಾಯಕವು ತುಂಬಾ ಎಚ್ಚರವನ್ನು ಬೇಡುವ ಕೆಲಸ. ಪೋಸ್ಟರ್ ತಯಾರಿಯಲ್ಲಿ ಸಹಾಯಹಸ್ತ ನೀಡಿ ಸಹಕಾರ ನೀಡಿದ್ದು ಸಹಶಿಕ್ಷಕಿ ಪಾರ್ವತಿ. ಸ್ಫೂರ್ತಿಯಾಗಿ ನಾಯಕತ್ವ ವಹಿಸಿದವರು ಮಾನಪ್ಪನವರು. ನೀರುಮಾರ್ಗದಲ್ಲಿ ಸ್ವಾತಂತ್ರ್ಯ ಚಳುವಳಿ ಮುಖ್ಯವಾಗಲು ಸ್ಫೂರ್ತಿಯಾದವರು. ಇವರ ನೇತೃತ್ವದಲ್ಲಿ ಸತ್ಯ ಗಾಂಧಿವಾದಿಯಾಗಿ ಬೆಳೆಯುತ್ತಾನೆ.

ಮಾನಪ್ಪ ದೊಡ್ಡ ಜಮೀನುದಾರರಾಗಿದ್ದರೂ ಸರಳ ವ್ಯಕ್ತಿ. ನೀರುಮಾರ್ಗದ ಜನ ಇವರನ್ನು ನೋಡಿ ಗಾಂಧಿಯ ಮೌಲ್ಯಗಳನ್ನು ಕಲಿತರು. ಸರಳತೆ, ಶಿಸ್ತು ಜನರು ಅರಿತುಕೊಂಡರು. ವಯಸ್ಕರಿಗಾಗಿ ರಾತ್ರಿ ಶಾಲೆ ನಡೆಸಿ ಮದ್ಯಪಾನದಿಂದ ಹೊರಬರುವಂತೆ ಮಾಡಲು ಸತ್ಯನಿಂದ ವಯಸ್ಕರಿಗಾಗಿ ಶಾಲೆಯನ್ನು ನಡೆಸಿದರು. ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡು ೮ ವರ್ಷಗಳ ಕಠಿಣ ಸಜೆಗೆ ಸತ್ಯ, ಮಾನಪ್ಪ, ಮನೇಲಾ ಒಳಗಾದರು. ಸ್ವಾತಂತ್ರ್ಯ ಲಭಿಸಿದ ಮೇಲೂ ಅಧಿಕಾರ, ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಗುವ ಜಮೀನು, ಯಾವುದನ್ನೂ ಆಶಿಸದೆ ಗಾಂಧಿ ಮೌಲ್ಯಗಳನ್ನೇ ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿದರು. ಮಾನಪ್ಪನವರು ದೊಡ್ಡ ಜಮೀನುದಾರರಾಗಿದ್ದರೂ ಮಹಾನ್ ಗಾಂಧಿ ಭಕ್ತರು. ಸರಳತೆ, ಸಜ್ಜನಿಕೆ ಅವರಲ್ಲಿತ್ತು. ಗಾಂಧೀಜಿಯ ಶಿಷ್ಯರಾಗಿದ್ದು, ಸರಳ ಬದುಕು ಬದುಕುತ್ತಿದ್ದರು. ತಮ್ಮ ಬಟ್ಟೆಯನ್ನು ತಾವೇ ನೂಲುತ್ತಿದ್ದರು. ಮಹಿಳೆಯರೂ ಗಾಂಧಿ ಪ್ರಭಾವಕ್ಕೆ ಒಳಗಾಗುತ್ತಾರೆ. 'ಶಾಂತಕ್ಕೆ' ವೇಶ್ಯಾವೃತ್ತಿಗೆ ಅಕಾರಣವಾಗಿ ಇಳಿಯಬೇಕಾದರೂ, ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಪ್ರಮುಖ ನಾಯಕಿಯಾಗಿ ನಿಸ್ವಾರ್ಥ ಸೇವೆ ನೀಡುತ್ತಾಳೆ. ಸ್ವಾತಂತ್ರ್ಯಾನಂತರದ ಬದಲಾದ ಪರಿಸ್ಥಿತಿಯಲ್ಲಿ ದೇಶಭಕ್ತರು ಬದಲಾಗುವುದಿಲ್ಲ. ನಿಸ್ವಾರ್ಥಿಗಳಾಗಿ ಚಿಂತಿಸುತ್ತಾರೆ. ಸತ್ಯರಾಜು ಎಲ್ಲಾ ಆಸ್ತಿಯನ್ನು ಕಳೆದುಕೊಳ್ಳುತ್ತಾನೆ. ಮಗಳನ್ನು ಚೆನ್ನಾಗಿ ಸಾಕಿ, ವಿದ್ಯಾಭ್ಯಾಸ ನೀಡಲಾಗದ ಪರಿಸ್ಥಿತಿ ಆತನದು. ಸನ್ಮಾನ ಸಮಾರಂಭಕ್ಕೆ ಮಾಸಲು ಬಿಳಿ ಬಟ್ಟೆ ಧರಿಸಿ ಹೊರಡುವ ಸ್ಥಿತಿ ಆತನದು. ಆತನನ್ನು ಬಡತನವೇ ಹಿಂಸಿಸುತ್ತದೆ.

'ಈ ಜಾತಿ ವ್ಯವಸ್ಥೆಯಲ್ಲಿ ಗಾಂಧೀಜಿ ಅತ್ಯಂತ ದೊಡ್ಡ ಒಳಗಿನ ವಿಮರ್ಶಕರು ಆದರು. 'ಒಳಗಿನವರು' ಎಲ್ಲವನ್ನೂ ಒಪ್ಪಿದವರಾಗಿ ಗೊಡ್ಡಾಗುತ್ತಾರೆ. 'ಟೀಕಿಸುವವರು' ಸಿನಿಕರಾಗಿ ಬಿಡಬಹುದು, ದ್ವೇಷಿಗಳಾಗಿ ಬಿಡಬಹುದು; ಅಥವಾ ತನ್ನ ಟೀಕಾ ಶಕ್ತಿಗೇ ಮರುಳಾದ ಆತ್ಮರತ ಕ್ರಾಂತಿಕಾರರಾಗಬಹುದು. ಆದರೆ ಗಾಂಧೀಜಿಯಂತಹ 'ಒಳಗಿನ ವಿಮರ್ಶಕರು' ಒಳಗಿನವನಾಗಿದ್ದೂ ನಮ್ಮನ್ನು ಬದಲು ಮಾಡಬಲ್ಲವರು. ಜನಿವಾರ ಹಾಕಿಕೊಳ್ಳದೆ ಜುಟ್ಟನ್ನು ಮಾತ್ರ ಬಿಟ್ಟಿದ್ದ ಈ ಗಾಂಧೀಜಿ ಈ ಕಾರಣದಿಂದಲೇ ಬ್ರಾಹ್ಮಣರ ಧರ್ಮದ ಬುಡವನ್ನೇ ಕತ್ತರಿಸುವಂತೆ ನಡೆದುಕೊಂಡರು. ಬುದ್ಧಿಯ ಕೆಲಸಕ್ಕಿಂತ ಕಾಯಕಕ್ಕೆ ಅವರು ಕೊಟ್ಟ ಹೆಚ್ಚಿನ ಪ್ರಾಶಸ್ತ್ಯ, ತನ್ನ ಕಕ್ಕಸನ್ನು ತಾನೇ ಎತ್ತುವುದು, ಪ್ರತಿ ಹೆಣ್ಣು ಬಳಸುವ ಅಸ್ತ್ರವಾದ ಸತ್ಯಾಗ್ರಹದ ಉಪಯೋಗ, ಹಿಂಸಾತ್ಮಕ ಶೌರ್ಯಕ್ಕಿಂತ ಸಹನಶೀಲವಾದ ಅಹಿಂಸೆಗೆ ಅವರು ಕೊಟ್ಟ ಹೆಚ್ಚಿನ ಬೆಲೆ–ಇವುಗಳಿಂದಾಗಿ ಹಿಂದೂ ದೇಶದ ಎರಡು ಪ್ರಬಲ ಶಕ್ತಿಗಳಾದ ಬ್ರಾಹ್ಮಣ್ಯ ಮತ್ತು ಕ್ಷಾತ್ರಗಳಿಗಿದ್ದ ಬೆಲೆಯನ್ನು ಅವರು ಕಳೆದು ಶೂದ್ರನ ಮತ್ತು ಹೆಣ್ಣಿನ ಜೀವನ ಕ್ರಮವನ್ನು ಎತ್ತಿ ಹಿಡಿದರು. ಮೌಲ್ಯವಾಗಿ ಮಾಡಿದರು.'[೨] ಅನಂತಮೂರ್ತಿಯವರ ಈ ಮಾತುಗಳನ್ನು ಒಪ್ಪಿಕೊಳ್ಳಬಹುದು.

ಗಾಂಧಿ ಎಂಬ ಮಾಂತ್ರಿಕ ತುಳುನಾಡಿನ ಯುವಜನತೆಯಲ್ಲಿ ಬದಲಾವಣೆಯ ಕಿಚ್ಚನ್ನು ಹಚ್ಚಿದ್ದು ಸುಳ್ಳಲ್ಲ. ಶಿಕ್ಷಣ ಗಾಂಧಿಯನ್ನು ಅರಿಯಲು ಸಾಧ್ಯವಾಯಿತು. ಗಾಂಧಿಯಿಂದ ಪ್ರಭಾವಿಸಲ್ಪಟ್ಟ ಯುವಜನತೆ ಸಾಮಾಜಿಕ ಸುಧಾರಣೆಗೆ ಪ್ರಯತ್ನಿಸಿದರು. ಪತ್ರಿಕೆಗಳ ಪ್ರಭಾವ ಕೂಡ ಮಹತ್ವದ್ದು. ಗಾಂಧಿಯ ಪ್ರಭಾವಕ್ಕೆ ಒಳಗಾದವರು ತಮ್ಮ ನಡೆನುಡಿ ರೀತಿ ನೀತಿಗಳನ್ನು ಮಾರ್ಪಡಿಸಿಕೊಂಡರು. ಅಸ್ಪೃಶ್ಯತೆ, ಮದ್ಯಪಾನ ನಿಷೇಧ, ಕೆಳವರ್ಗದವರಿಂದ ದೇವಸ್ಥಾನ ಪ್ರವೇಶ ಮೊದಲಾದವುಗಳಿಗೆ ಹೋರಾಡಿದರು. ಸಾಮಾನ್ಯ ಜನತೆ ಕೂಡ ಗಾಂಧಿಯ ಹೆಸರನ್ನು ತಿಳಿದಿದ್ದರು. ಇದರಲ್ಲೇ ಗಾಂಧಿಯ ಪ್ರಭಾವವನ್ನು ಅರಿಯಬಹುದು.

೫.೨. ಗಾಂಧೀಜಿಗೆ ನಿಧಿ ಸಮರ್ಪಣೆ

ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಹಣಕಾಸಿನ ಅಗತ್ಯವು ಬಹಳವಿತ್ತು. ನಗನಾಣ್ಯಗಳ ದಾನವನ್ನು ಇತಿಹಾಸದಲ್ಲಿ ಓದಿ ಕೇಳಿ ತಿಳಿದಿದ್ದೇವೆ. ಮಂಗಳೂರಿಗೆ ಗಾಂಧಿ ಬಂದ ಮೂರು ಸಂದರ್ಭಗಳಲ್ಲೂ ನಗನಾಣ್ಯಗಳ ಅರ್ಪಣೆ 'ಗಾಂಧಿ ಬಂದ' ಕಾದಂಬರಿಯಲ್ಲಿ ನಡೆಯುತ್ತದೆ. ಸ್ವರಾಜ್ಯ ಗಳಿಕೆಯಲ್ಲಿ ಲಾಭ ಕಾಣದೆ ಮೌನಿಯಾಗಿದ್ದ ಕೆಲವರನ್ನು ಹೊರತುಪಡಿಸಿದರೆ ಪ್ರತಿಯೋರ್ವನೂ ತನ್ನ ಕೈಲಾದ ವಂತಿಗೆ, ನಗ ನೀಡಲು ಕಾತರ ತಾಳುತ್ತಾನೆ.

ವಿಧವೆ ದ್ರೌಪದಿ ತನ್ನ ಗಂಡನ ಕೋಟಿನ ಚಿನ್ನದ ಗುಂಡಿಗಳನ್ನು ಮಾರಪ್ಪನ ಮೂಲಕ ಅರ್ಪಿಸುತ್ತಾರೆ. ಪಿಜಿನ ಬೆಳ್ಳಿಮುರುವನ್ನು ನೀಡಿದರೂ, ಮಾರಪ್ಪ ನೀನು ಕುಡಿತ ಬಿಟ್ಟರೆ ಸಾಕು ಎಂದು ಹಿಂದಿರುಗಿಸುತ್ತಾನೆ. ಅದ್ರಾಮನ ವಿಧವೆಯಾದ ದ್ರೌಪದಿ ತನ್ನ ಬಳಿ ಇರುವ ಚಿನ್ನವನ್ನೆಲ್ಲ ಗಾಂಧಿಗೆ ಅರ್ಪಿಸುವುದನ್ನು ಕಾಣಬಹುದು. ಗುತ್ತಿನ ಮನೆಯ ಅಪೂರ್ವ ಆಭರಣಗಳು

ಹೆಬ್ಬಾರರಿಂದ ಪುಟ್ಟಮ್ಮಕ್ಕನ್ನು ಸೇರಿದರೂ ಗಾಂಧಿ ನಿಧಿಗೆ ಸೇರುತ್ತವೆ. ಬಡಸೋದರರಿಗೆ ಊಟದ ಅಗತ್ಯಕ್ಕಾಗಿ ಗಾಂಧಿ ನಿಧಿ ಎಂಬ ಮನವರಿಕೆಯನ್ನು ಮಾಡಿರುತ್ತಾರೆ.

'ಹಾಗೇ ಅಂಗಳವಿಳಿದವರು ಇಡೀ ಕುಳ್ಯಾ, ಪೊಸೊಡಿ ಗ್ರಾಮ ಸುತ್ತಿದರು. ಕುಳ್ಯಾಗುತ್ತಿನ ಪಾಂಡುಶೆಟ್ಟರು ಗಾಂಧಿಯವರ ನಿಧಿಗೆ ನೂರೊಂದು ರೂಪಾಯಿ ಕೊಟ್ಟರೆ, ಪೊಸೊಡಿ ಗುತ್ತಿನ ತೌಡಶೆಟ್ಟರು ಐವತ್ತೊಂದು ರೂಪಾಯಿ, ಜಾರಿಗೆ ಬೆಟ್ಟಿನ ಸುಬ್ಬಯ್ಯಶೆಟ್ಟರು ಇಪ್ಪತ್ತೈದು ರೂಪಾಯಿ, ಕಿಟ್ಟಭಟ್ಟರು ಮೂರು ವರಹ ಕೊಟ್ಟರು. ಎಲ್ಲರೂ ಅವರವರ ಸಾಮರ್ಥ್ಯ, ಅನುಕೂಲ, ಅಂತಸ್ತಿಗೆ ತಕ್ಕಂತೆ ಗಾಂಧಿನಿಧಿಗೆ ತಮ್ಮ ವಂತಿಗೆ ನೀಡಿ ಗಾಂಧಿಯವರಿಗಾಗಿ ಎದುರು ನೋಡತೊಡಗಿದರು.'(ಗಾಂಧಿ ಬಂದ, ಪುಟ ೧೬೪)

ಅಶಿಕ್ಷಿತ ಕೆಳಸಮುದಾಯದವರು ಗಾಂಧಿಯವರ ಕುರಿತು ಸ್ಪಷ್ಟ ಚಿತ್ರಣ ಇಲ್ಲದಿದ್ದರೂ ಗಾಂಧಿ ನಿಧಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಪಿಜಿನ ಬೆಳ್ಳಿ ಮುರು ನೀಡಲು ಮುಂದಾದಾಗ, ಮಾರಪ್ಪ ತಡೆದು ಕಳ್ಳು, ಗಂಗಸರ ಕಮ್ಮಿ ಮಾಡು ಎನ್ನುತ್ತಾ ಅದನ್ನು ಹಿಂದಿರುಗಿಸುತ್ತಾನೆ. ಅಂತಪ್ಪ, ಕೂಸಮ್ಮೈಲಿ, ಅಂಗರ ಮೂಲ್ಯನವರು ತಲಾ ಎರಡೆರಡು ಚಕ್ರಗಳಂತೆ ಒಟ್ಟು ಒಂದೂವರೆ ಕಾಸನ್ನು ನೀಡುತ್ತಾರೆ. ಒಂದು ತಿಂಗಳು ಕಳ್ಳು ಕುಡಿಯದೆ ಇಟ್ಟ ಹಣವನ್ನು ಗಾಂಧಿನಿಧಿಗೆ ಅರ್ಪಿಸುತ್ತಾರೆ. ಬಡವರು ಕಷ್ಟಪಟ್ಟು ಉಳಿಸಿ ಅದನ್ನು ಗಾಂಧಿಗೆ ನೀಡಲು ಮುಂದಾದರೆ, ಹೆಬ್ಬಾರರು ಪುಟ್ಟಮ್ಮಕ್ಕ ನೀಡಿದ ಇಪ್ಪತ್ತು ರೂಪಾಯಿಯಲ್ಲೇ ಅರ್ಧ ತನ್ನ ಪಾಲು ಎನ್ನುತ್ತಾ ಮಾರಪ್ಪನಿಗೆ ಕಳುಹಿಸಿಕೊಡುತ್ತಾರೆ. ಉಳ್ಳವರ ಜಿಪುಣತನ, ಇಲ್ಲದವರ ಧಾರಾಳತನ ವ್ಯಕ್ತವಾಗಿದೆ.

ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ನಿಧಿ ಸಂಗ್ರಹಣೆ ಮುಖ್ಯ ಕಾರ್ಯಕ್ರಮವಾಗಿತ್ತು. ತಮ್ಮಲ್ಲಿ ಹೆಚ್ಚಾಗಿರುವುದನ್ನು ಹಂಚಿಕೊಂಡಾಗ ಬಡವರಿಗೂ ಕೊಡಲು ಸಾಧ್ಯವಿದೆ. ಅನೇಕರು ನಿಸ್ವಾರ್ಥರೀತಿಯಲ್ಲಿ ಪಾಲ್ಗೊಂಡಿರುವುದನ್ನು ಕಾದಂಬರಿಗಳು ಚಿತ್ರಿಸುತ್ತವೆ. ತುಳುನಾಡಿನ ಜನ ಸಾಮಾಜಿಕ ಕಳಕಳಿ ಹೊಂದಿ ವಿಶಾಲ ಮನೋಭಾವನೆ ಬೆಳೆಸಿಕೊಳ್ಳಲು ಗಾಂಧೀಜಿಯ ಪ್ರಭಾವ ಕಾರಣವಾಯಿತು.

೫.೩. ನೂಲುವುದು ಹಾಗೂ ಕಾಂಗ್ರೆಸ್ ಸದಸ್ಯತ್ವ

೧೯೧೯ರಲ್ಲಿ ಅಮೃತಸರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಕೈ ಮಗ್ಗದ ಬಟ್ಟೆ' ಹಾಗೂ 'ಕೈ ಮಗ್ಗದ ಮೇಲೆ ನೇಯ್ದ ಬಟ್ಟೆಗೆ' ಮಹತ್ವ ನೀಡಬೇಕೆಂಬ ನಿರ್ಣಯಕ್ಕೆ ಬರಲಾಯಿತು. ೧೯೨೦ರಲ್ಲಿ ಗಾಂಧೀಜಿಯವರ ಸಲಹೆಯಂತೆ ಅಸಹಕಾರ ಚಳುವಳಿ ಕೈಗೊಂಡಾಗ ಭಾರತೀಯ ಗ್ರಾಮೋದ್ಯೋಗ ಬಲಪಡಿಸುವ ಹಾಗೂ ವಿದೇಶಿ ವಸ್ತ್ರ ಬಹಿಷ್ಕಾರದ ಉದ್ದೇಶಕ್ಕಾಗಿ ನೂಲುವಿಕೆ ಅವಶ್ಯವಾಯಿತು. ಹಳ್ಳಿಹಳ್ಳಿಯಲ್ಲೂ ಗಾಂಧೀಜಿ ಪ್ರಭಾವಕ್ಕೆ ಒಳಗಾದ ಜನ ಇದನ್ನು ಬೆಂಬಲಿಸಿದರು.

ತುಳುನಾಡಿನ ಜನತೆ ಪ್ರಧಾನವಾಗಿ ಕೃಷಿಕರು. ಪರಂಪರೆಯ ಕುಲಕಸುಬುಗಳಾದ ಮೀನುಗಾರಿಕೆ, ಕುಂಬಾರಿಕೆ, ನೇಕಾರಿಕೆ ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡವರು. ಬ್ರಾಹ್ಮಣರು ಜನಿವಾರಕ್ಕಾಗಿ, ಕೆಳವರ್ಗದವರು ಸೆಣಬಿನ ಬಲೆ ನೇಯಲು ತಿಳಿದಿದ್ದರು. ಖಾದಿ ಬಟ್ಟೆಗಾಗಿ ನೂಲುವುದು ಹೊಸತು.

'ಮರಳಿ ಮಣ್ಣಿಗೆ'ಯ 'ರಾಮ' ಸ್ವಾತಂತ್ರ್ಯ ಚಳುವಳಿಯಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾಗಿ ಸೆರೆಮನೆ ವಾಸಕ್ಕೆ ಗುರಿಯಾಗುತ್ತಾನೆ. ಬಿ.ಎ. ವಿದ್ಯಾಭ್ಯಾಸ ಸ್ಥಗಿತವಾಗುತ್ತದೆ. ಸೆರೆಮನೆಯಿಂದ ಬಿಡುಗಡೆಯಾದ ನಂತರ ರಾಮನಿಗೆ ಮತ್ತೆ ವಿದ್ಯಾಭ್ಯಾಸ ಮುಂದುವರಿಸಲಾಗದೆ ಮನೆಯಲ್ಲೇ ಉಳಿಯಬೇಕಾದ ಪ್ರಸಂಗ ನಿರ್ಮಾಣವಾಗುತ್ತದೆ. ಕಾಂಗ್ರೆಸ್ ಪಕ್ಷದ ಸಂಘ ಸ್ಥಾಪನೆ ಮಾಡಿ ನೂಲುವಿಕೆ ಭರ್ಜರಿಯಿಂದ ನಡೆಯುತ್ತದೆ. ತಕಲಿ ತಂದು ನೂಲುತ್ತಾನೆ. ನೂಲುವುದನ್ನು ಮಾರಾಟಮಾಡಲು ಅಪಾರ ಶ್ರಮ ಪಡುತ್ತಾನೆ. ಜನರಿಂದ ಅಪಾರ ಟೀಕೆಗಳು ಎದುರಾಗುತ್ತವೆ. ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಗಾಂಧಿ ನೀಡಿದ ಕರೆಯಿಂದ ಹಲವು ಯುವಕರು ಶಿಕ್ಷಣ ತ್ಯಜಿಸಿ ಚಳುವಳಿಗೆ ಧುಮುಕಿದ್ದರು.

'ಔದಾರ್ಯದ ಉರುಳಲ್ಲಿ' ಕಾದಂಬರಿ ನೂಲುವುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಸ್ವರಾಜ್ಯ ಗಳಿಕೆಗಾಗಿ ರಾಧಾಕೃಷ್ಣ ಶಿಕ್ಷಣ ತೊರೆದು, ಮನೆ ತೊರೆದು ಊರಿನ ಸುತ್ತಾಟ ಆರಂಭಿಸುತ್ತಾನೆ. ಸದಾನಂದ, ಸಖಾನಂದರ ಜೊತೆ ಸೇರಿ ಸ್ವರಾಜ್ಯ ಗಳಿಸುವುದಕ್ಕಾಗಿ ಪೂರ್ತಿ ವ್ಯಸ್ತನಾಗಿ ಬಿಡುತ್ತಾನೆ. ಸದಾನಂದ, ಸಖಾನಂದ ಇಬ್ಬರೂ ರಾಧಾಕೃಷ್ಣನಿಗೆ ಕೈಕೊಟ್ಟು ರಸೀತಿ ಪುಸ್ತಕ, ಫಂಡು ಎಲ್ಲ ತಗೊಂಡು ಹೇಳದೆ ಕೇಳದೆ ನಿರ್ಗಮಿಸುತ್ತಾರೆ. ಆದರೂ ರಾಧಾಕೃಷ್ಣ ದಿನಕ್ಕೆ ಸ್ವಲ್ಪ ಹೊತ್ತಾದರೂ ಜಪದಂತೆ ನೂಲುವುದು ಬಿಟ್ಟಿಲ್ಲ. ಅಲೆಮನೆ ಮಂಜಯ್ಯನವರ ಮನೆಯಲ್ಲಿ ಬಿದಿರಿನ ಸಹಾಯದಿಂದ ರಾಟೆ ಮಾಡಿ ನೂಲುವ ಅಭ್ಯಾಸ ಮಾಡಿಸುತ್ತಾನೆ. ಸಂಘಟಿತ ವ್ಯವಸ್ಥೆ ಇಲ್ಲದೆ ಇದು ಯಶಸ್ವಿಯಾಗುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಹತ್ತಿಯ ಅಲಭ್ಯತೆ, ರಾಟೆ, ತಕಲಿಗಳ ಕೊರತೆ, ಜೊತೆಗೆ ಅದನ್ನು ನೇಯುವ, ಮಾರುವ ಅರ್ಥವ್ಯವಸ್ಥೆಯೊಂದು ಹುಟ್ಟದೆ ಇದ್ದ ಕಾರಣ ಉತ್ಸಾಹಿ ತರುಣ ರಾಧಾಕೃಷ್ಣ ನಿರಾಶನಾಗಬೇಕಾಗುತ್ತದೆ. ಪ್ರತಿ ಮನುಷ್ಯನೂ ಸ್ವಾರ್ಥಿಯಾಗಿದ್ದು ತನ್ನ ಹಿತಚಿಂತನೆ ಮಾಡುವುದರಿಂದ ಯಶಸ್ವಿಯಾಗುವುದಿಲ್ಲ. ಮಂಜಯ್ಯ ತನ್ನ ಮೂಲನಕ್ಷತ್ರದ ಮಗಳ ಮದುವೆಗಾಗಿ ವರಾನ್ವೇಷಣೆ ಮಾಡಿ ಸೋತು ರಾಧಾಕೃಷ್ಣನಿಗೆ ಮದುವೆ ಮಾಡಿಸುವ ಸಲುವಾಗಿ ನೂಲುವ ತರಗತಿ ಮಾಡುತ್ತಾರೆ. ಉಳಿದವರು ಕುತೂಹಲದಿಂದ ನೋಡುತ್ತಾರೆ. ರಾಧಾಕೃಷ್ಣನನ್ನು ವಿವಾಹವಾದ ಸತ್ಯ ಗಂಡನನ್ನು ಮೆಚ್ಚಿಸಲು ನೂಲುತ್ತಾಳೆ. ರಾಧಾಕೃಷ್ಣನಿಗೂ ನೂಲುವುದು 'ಹೆಣ್ಣಿನ' ಕೆಲಸ ಅನಿಸತೊಡಗಿದಾಗ ರಾಷ್ಟ್ರಸೇವೆ ಬೇರೆ ರೀತಿಯಲ್ಲಿ ಮಾಡಬೇಕು ಎನ್ನುವ ಆಸೆ ತೀವ್ರವಾಗಿ ಕಾಡುತ್ತದೆ.

ಕಾಂಗ್ರೆಸ್ ಸದಸ್ಯರನ್ನು ಮಾಡುವ ಕ್ರಿಯೆ ಕಠಿಣದ್ದೇ ಆಗಿದೆ. 'ನಾಲ್ಕಣೆಯನ್ನಾದರೂ ಕೊಡುತ್ತೇವೆ. ಆದರೆ ನಮ್ಮ ಹೆಸರನ್ನು ಪಟ್ಟಿಯಲ್ಲಿ ಬರೆದು ನಾವು ಜೈಲಿಗೆ ಹೋಗುವ ಹಾಗೆ ಮಾಡಬೇಡಿ. ನಾವು ಸಂಸಾರಿಗರು, ಹೆಂಡತಿ ಮಕ್ಕಳು ಇದ್ದವರು ನೀವೆಲ್ಲ ಒಬ್ಬಂಟಿಗರು ಏನು ಮಾಡಿದರೂ ಚಂದವೇ.'(ಔದಾರ್ಯದ ಉರುಳಲ್ಲಿ, ಪುಟ ೧೨) ಸಾಮಾನ್ಯ ಜನತೆ ಸಂಸಾರಕ್ಕೆ

ಪೆಟ್ಟು ಬೀಳುತ್ತದೆ ಎಂಬ ಭಯದಿಂದ ತಮ್ಮ ಹೆಸರನ್ನು ಬರೆದು ಪ್ರಚಾರ ಮಾಡಿಸಲು ಇಷ್ಟಪಡುವುದಿಲ್ಲ. ಬ್ರಿಟಿಷ್ ಸರಕಾರದ ವಿರುದ್ಧ ದುಡಿಯುವವರಿಗೆ, ಬಂಡೇಳುವವರನ್ನು ಸದೆಬಡಿಯಲು ವಿವಿಧ ಶಿಕ್ಷೆಗಳನ್ನು ನೀಡುವುದು, ಜೈಲಿಗೆ ಹಾಕಿ ಬೆದರಿಸುವುದು ಸಾಮಾನ್ಯವಾಗಿತ್ತು.

ರಾಧಾಕೃಷ್ಣ ಕುಡುಬಿಯ ಬಳಿ ಹೇಳುವ ಮಾತುಗಳು ಗಮನಾರ್ಹ. 'ನೋಡು, ಹೀಗೆ ನಾವೇ ನೂಲು ಮಾಡಿ, ನಾವೇ ಬಟ್ಟೆ ನೆಯಿದು, ನಾವೇ ಉಟ್ಟುಕೊಂಡರೆ ಸ್ವರಾಜ್ಯ ಖಂಡಿತ.' (ಔದಾರ್ಯದ ಉರುಳಲ್ಲಿ, ಪುಟ ೨೦)

ಮಂಜಯ್ಯನವರ ಮನೆಯಲ್ಲಿ ನೂಲುವ ಕ್ರಿಯೆ ಕಲಿಸುವ ಜವಾಬ್ದಾರಿ ರಾಧಾಕೃಷ್ಣನ ಮೇಲೆ ಬೀಳುತ್ತದೆ. "ಬಿದಿರ ಬಿಲ್ಲಿನಿಂದ ಹತ್ತಿ ಹಿಂಜುವ ಪಾಠವನ್ನು ಹೇಳುತ್ತಿದ್ದಾರೆ. ಮಂಜಯ್ಯನವರನ್ನು ಆಗ್ರಹಪಡಿಸಿ ಊರ ಬಡಗಿಗೆ ನಾಲ್ಕು ದಿನ ಶ್ರಮ ಕೊಟ್ಟು, ಎರಡು ರಾಟಗಳನ್ನು ತಯಾರಿಸಿದ್ದಾಯಿತು. ಅದನ್ನು ನೋಡಲು ಊರಿಂದೂರೇ ಮಂಜಯ್ಯನವರ ಮನೆಯಲ್ಲಿ ಕಲೆಯಿತು. ಎಲ್ಲರೂ ನೂಲು ಮಾಡುವುದರಲ್ಲಿ ಒಂದು ಕೈ ನೋಡುವವರೆ!"(ಔದಾರ್ಯದ ಉರುಳಲ್ಲಿ, ಪುಟ ೭೧)

ಮುಂದೆ ಸತ್ಯಳನ್ನು ವಿವಾಹವಾಗಿ ಕಿರಿಪದವನ್ನು ಸೇರಿ ರಾಷ್ಟ್ರೀಯ ಶಾಲೆ ಆರಂಭಿಸುತ್ತಾನೆ. ಇಲ್ಲಿನ ಅವರ ಬದುಕು ಕಠಿಣವಾಗಿದ್ದು ಆದರ್ಶಕ್ಕೂ ವಾಸ್ತವಕ್ಕೂ ಇರುವ ಸಂಘರ್ಷ ಸ್ಪಷ್ಟವಾಗಿ ಗೋಚರಿಸುತ್ತದೆ. ದಯಾನಂದರು ಗೇಣಿಗಾಗಿ ಆ ಜಾಗವನ್ನು ನೀಡಿರುತ್ತಾರೆ. ವಿಚಾರ ಮಾಡದೆ ತುಂಬಿಸಿದ ಗುರುಗಳು, ಮಕ್ಕಳಿಂದಾಗಿ ರಾಧಾಕೃಷ್ಣ, ಸತ್ಯ ತೊಂದರೆಗೊಳಗಾಗುತ್ತಾರೆ. ನೂಲುವುದು, ಶಿಕ್ಷಣವನ್ನು ಮರೆತು ಹೊಟ್ಟೆ ತುಂಬಿಸುವ ಕಾರ್ಯ ಮುಖ್ಯವಾಗುತ್ತದೆ. ಮನೆಮನೆಗೆ ಹೋಗಿ ಬೇಡಿ ತಂದು ಅಲ್ಲಿನ ವಿದ್ಯಾರ್ಥಿಗಳನ್ನು ಸಾಕುವ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ವ್ಯಕ್ತಿಗಳ ನಡುವಿನ ಅಭಿಪ್ರಾಯ ಬೇಧಗಳು, ತಿಕ್ಕಾಟ, ಗುರಿಸಾಧನೆಗಾಗಿ ಭಿನ್ನ ನಿಲುವು ಅಲ್ಲಿನ ಗುರುಗಳಲ್ಲಿ ಸಂಘರ್ಷ ಏರ್ಪಡಿಸುತ್ತದೆ. ಶಿಕ್ಷಕರೂ ಅಲ್ಲಿಂದ ನಿರ್ಗಮಿಸುತ್ತಾರೆ. ಕೊನೆಗೂ ಉಳಿದವರು ರಾಧಾಕೃಷ್ಣ, ಸತ್ಯ, ಶ್ಯಾಮಾ ಮಾತ್ರ.

ಸ್ವಾತಂತ್ರ್ಯಪೂರ್ವಕಾಲದ ತುಳುನಾಡಿನ ಕಥಾವಿನ್ಯಾಸವನ್ನು ಹೊಂದಿ 'ಗಾಂಧಿ ಬಂದ' ಕಾದಂಬರಿ ವಿಶಿಷ್ಟವಾಗಿ ರೂಪುಗೊಂಡಿದೆ. ನೂಲುವುದು, ಖಾದಿಬಟ್ಟೆ ನೇಯುವುದು, ಖಾದಿ ಮಾರಾಟ, ಪ್ರಚಾರ, ದಲಿತರ ಉದ್ಧಾರ, ಅಸ್ಪೃಶ್ಯತಾ ನಿವಾರಣೆ, ದೇವಸ್ಥಾನದೊಳಗೆ ಕೆಳಜಾತಿಯವರ ಪ್ರವೇಶ, ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ಮದ್ಯಪಾನ ನಿಷೇಧ, ಪರದೇಶಿ ವಸ್ತ್ರಗಳ ಬಹಿಷ್ಕಾರ, ಗಾಂಧಿಗೆ ನಗನಾಣ್ಯಗಳ ದಾನ, ವಿಧವಾ ವಿವಾಹ ಮುಂತಾದವುಗಳನ್ನು ಒಳಗೊಂಡಿದೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಮಾರಪ್ಪ, ತಿಂಗಳಾಯರು, ಕಾರ್ನಾಡ್ ಸದಾಶಿವರಾಯರು ತಕ್ಲಿಯಿಂದ ನೂಲುವ ಕಾರ್ಯ ಭರದಿಂದ ಮಾಡುತ್ತಿರುತ್ತಾರೆ. ದ್ರೌಪದಿ, ದಾರು, ತಕಲಿ ಹಿಡಿದು ನೂತು ಜಾರು ಸೆಟ್ಟಿಗಾರನು ನೇಯುತ್ತಾನೆ. ಗುತ್ತಿನ ಮನೆಯಲ್ಲಿ ಖಾದಿಸೀರೆ ಬಗ್ಗೆ

ತಿರಸ್ಕಾರ ಎದ್ದು ಕಾಣುತ್ತದೆ. ರೇಷ್ಮೆ ಸೀರೆ ಬಿಟ್ಟು ಇನ್ಯಾವ ಸೀರೆ ಉಡದವರಿಗೆ ಅದು ಬಡತನದ ಸಂಕೇತದಂತೆ ಕಾಣಿಸಿರಬಹುದು. ಮಾರಪ್ಪನು ಸ್ವಾತಂತ್ರ್ಯಕ್ಕಾಗಿ ನಿಷ್ಠೆಯಿಂದ ದುಡಿಯುತ್ತಾನೆ. ಸ್ವಾತಂತ್ರ್ಯದ ಪೂರ್ಣಪ್ರಮಾಣದ ಹರಿಕಾರನಾಗಿ ದುಡಿಯುವ ಮಾರಪ್ಪ ಎಂದೂ ಸ್ವಾರ್ಥಿಯಾಗುವುದಿಲ್ಲ. ಅಪಾರ ಅವಮಾನ, ತಿರಸ್ಕಾರ, ನಿಂದನೆಗಳನ್ನು ಸಹಿಸುತ್ತಾ, ಗಾಂಧಿತತ್ವಗಳಿಗಾಗಿ ಹೋರಾಡುವ ಛಲ ತೋರುತ್ತಾನೆ. ತಾಯಿ ಸೂರಕ್ಕೆಯ ತಿರಸ್ಕಾರದ ಮಾತುಗಳನ್ನು ನುಂಗಿಕೊಂಡು ಗಾಂಧಿ ಮೌಲ್ಯಗಳಿಗಾಗಿ ಹೋರಾಡುವ ನಿಜವಾದ ಹೋರಾಟಗಾರ. ಊರಿಡೀ ದಣಿವರಿಯದೆ ಪ್ರಚಾರ ಮಾಡುತ್ತಾ ಗಾಂಧಿಯ ಮೌಲ್ಯಗಳನ್ನು ಮನದಲ್ಲಿ ಮೂಡಿಸಲು ಪ್ರಯತ್ನಿಸುತ್ತಾನೆ. ಸ್ವಾತಂತ್ರ್ಯ ಚಳುವಳಿಯ ಹಲವು ಹೋರಾಟ, ಸಮಾಜ ಸುಧಾರಣೆಗಳನ್ನು ಕೊನೆಯವರೆಗೂ ಎಡೆಬಿಡದೆ ಮುಂದುವರಿಸುತ್ತಾನೆ. ಆತನ ಇಚ್ಛಾಶಕ್ತಿ ಬೆರಗು ಮೂಡಿಸುತ್ತದೆ. 'ಮನೆಗೆ ಮಾರಿ ಊರಿಗೆ ಉಪಕಾರಿ'ಯಂತೆ ಕಂಡುಬಂದರೂ ಸ್ವಾತಂತ್ರ್ಯ ಕಾಲಘಟ್ಟದಲ್ಲಿ ಇಂಥಹ ನಿಸ್ವಾರ್ಥ ವ್ಯಕ್ತಿಗಳು ಅಗತ್ಯವಾಗಿ ಬೇಕಾಗಿದ್ದರು. ಮಾರಪ್ಪನ ಮೂಲಚೇತನ ಶಕ್ತಿ ಕಾರ್ನಾಡ್ ಸದಾಶಿವರಾವ್ ಹಾಗೂ ತಿಂಗಳಾಯರು.

ಕಾರ್ನಾಡರು ಐತಿಹಾಸಿಕ ವ್ಯಕ್ತಿ. ಕಾರ್ನಾಡರು ತಣ್ಣೀರು ಬಾವಿ, ಪಣಂಬೂರುಗಳಲ್ಲಿ ಸ್ವರಾಜ್ಯ ಗಳಿಕೆಯ ಅನಿವಾರ್ಯತೆ ಬಗ್ಗೆ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸುತ್ತಿದ್ದರು. ಖಾದಿಯ ನೂಲುವಿಕೆಯ ಮಹತ್ವದ ಅಗತ್ಯವನ್ನು ಜನರಲ್ಲಿ ಬಿತ್ತುತ್ತಿದ್ದರು.

'ಹತ್ತಿ ಬೆಳೆವವರು ನಾವು, ಅದನ್ನು ಪರದೇಶಕ್ಕೆ ಸಾಗಿಸಿ ಯಂತ್ರದ ಬಾಯೊಳಗಿಟ್ಟು ತೆಳುಬಟ್ಟೆ ಮಾಡಿ ಅದನ್ನು ಮತ್ತೆ ನಮಗೆ ಮಾರುವವರು ಇವರು.'(ಗಾಂಧಿ ಬಂದ, ಪುಟ ೧೧೪) ಬ್ರಿಟಿಷರು ಕಚ್ಚಾವಸ್ತುಗಳನ್ನು ರಫ್ತುಮಾಡಿ ಸಿದ್ಧವಸ್ತುಗಳಾಗಿ ಮಾಡಿ ನಮಗೇ ಮತ್ತೆ ಮಾರುವ ಕುರಿತು ಜನರ ಮನಸ್ಸಿಗೆ ನಾಟುವಂತೆ ಮನನಗೊಳಿಸಲು ಪ್ರಯತ್ನಿಸುವರು. ಸ್ವರಾಜ್ಯ ಗಳಿಕೆ, ಸ್ವಾವಲಂಬಿ ಬದುಕಿನ ಅಗತ್ಯತೆಯ ಮಹತ್ವವನ್ನು ಮನಗಾಣಿಸುವರು.

ಮಾರಪ್ಪ, ದಾರು, ದ್ರೌಪದಿ ತಮ್ಮ ಚಿಂತೆಗಳನ್ನು ಹೊಡೆದೋಡಿಸಲು ಚರಕದಲ್ಲಿ ಹತ್ತಿಯಿಂದ ನೂಲು ನೂತವರು. ಅದ್ರಾಮನ ಸಾವಿನ ನಂತರ ದ್ರೌಪದಿಗೆ ನೂಲುವುದು ಕಾಯಕವಾಯಿತು.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯು ತಕಲಿಯಲ್ಲಿ ನೂಲುವ ಚಿತ್ರಣವನ್ನು ಹೊಂದಿದೆ. ಸದಾನಂದ ಸಬರಮತಿ ಆಶ್ರಮದಲ್ಲಿ ಇದ್ದು ನೂಲುವ ಪರಿಯನ್ನು ಕಲಿತವನು. ಪಾರಳ ಮನೆಗೆ ಬಂದಾಗ ಸಮಯದ ಮಹತ್ವ ಅರಿತ ಆತ ಕ್ಷಣ ಹೊತ್ತು ಹಾಳುಮಾಡದೆ, ನೀರು ತುಂಬಿಸುವ ಕೆಲಸ, ನೂಲುವ ಕೆಲಸ ಚಾಕಚಕ್ಯತೆಯಿಂದ ಮಾಡುತ್ತಾನೆ.

ಖಾದಿ ನೂಲುವುದು ಸ್ವಾವಲಂಬನೆಯ ಸಂಕೇತವಾಗಿತ್ತು. ಸರಳವಾದ, ಸುಲಭವಾಗಿ ಮಾಡಬಹುದಾದ ಕೆಲಸವಾಗಿದ್ದು ಜನರನ್ನು ಕಾರ್ಯಮಗ್ನಗೊಳಿಸುವಲ್ಲಿ ಸಫಲವಾಯಿತು. ಗಾಂಧಿಯಿಂದ ಪ್ರಭಾವಿತರಾದವರು ಖಾದಿ ನೂಲುವುದನ್ನು ಅಭ್ಯಾಸವಾಗಿಸಿಕೊಂಡರು. ಕೆಳವರ್ಗದವರು ದಿನವಿಡೀ ದುಡಿದು ದಣಿಯುವವರು. ಮೂಲದಾಳುಗಳಾಗಿ ಇಲ್ಲವೆ

ಗೇಣಿದಾರರಾಗಿ ಬದುಕುವವರಿಗೆ ನೂಲಲು ಸಮಯ ಇದ್ದಂತೆ ಕಾಣುವುದಿಲ್ಲ. ಮೇಲ್ವರ್ಗದ ಮಹಿಳೆಯರು ಮನೆಯೊಳಗೆ ಕೂತು ದಿನಕಳೆಯಬೇಕಾಗುತ್ತಿತ್ತು. ಶಾಲೆಗೆ ಹೋಗುವ ಅವಕಾಶವೂ ಮಹಿಳೆಯರಿಗೆ ಇದ್ದದ್ದು ಕಡಿಮೆ. ಹೀಗಾಗಿ ಗಾಂಧಿ ಪ್ರಭಾವಕ್ಕೆ ಒಳಗಾದವರು ನೂಲುವುದನ್ನು ರೂಢಿಸಿಕೊಂಡರು. ಶ್ರೀಮಂತ ಮಹಿಳೆಯರು ತೆಳ್ಳನೆಯ ವಿದೇಶಿ ವಸ್ತ್ರಗಳಿಗೆ ಮಾರುಹೋದವರು ಖಾದಿ ನೂಲುವ ಕಡೆ ಮನಸ್ಸು ಮಾಡಲಿಲ್ಲ. ಗಾಂಧಿ ಮಾತನ್ನು ನೆರಳಿನಂತೆ ಪಾಲಿಸುವ ಆದರ್ಶವಾದಿ ಗಂಡಸರು ನೂತರು. ತಕಲಿಯಲ್ಲಿ ನೂಲುವ ಮೂಲಕ ಖಾಲಿ ಕುಳಿತ ಮಹಿಳೆಯರಿಗೆ, ವಿಧವೆಯರಿಗೆ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಮನೆ ಬಿಟ್ಟು ಬೇಕಾಬಿಟ್ಟಿ ಸುತ್ತಲಾರದ ಮಹಿಳೆಯರಿಗೆ ತಕಲಿ ಕಾಯಕದ ರುಚಿ ಹತ್ತಿಸಿತು. ಕೆಲವರ ತಿರಸ್ಕಾರದ ನಡುವೆಯೇ ಹಲವರು ಮನಸ್ಸು ಕೊಟ್ಟು ನೂಲುವುದರಲ್ಲಿ ತೊಡಗಿಸಿಕೊಂಡರು. ಗಾಂಧಿ ಸ್ವಾತಂತ್ರ್ಯ ಕಾಲಘಟ್ಟದ ಸುಧಾರಣಾ ಕ್ರಿಯೆಗಳಿಗೆ ಅತ್ಯಂತ ಸರಳವಾದ ಮಾರ್ಗಗಳನ್ನೇ ಆಯ್ದುಕೊಂಡರು. ಜಾತಿಭೇದ, ಲಿಂಗಭೇದ, ಬಡವ–ಬಲ್ಲಿದ ಎಂಬ ಅಂತರವಿಲ್ಲದೆ, ಬೇಕೆಂದರಲ್ಲಿ ಪ್ರತಿಯೊಬ್ಬನೂ ಹೆಚ್ಚು ಮಾರ್ಗದರ್ಶನವಿಲ್ಲದೆ ಮಗ್ನನಾಗುವ ತಕಲಿಯಿಂದ ನೂಲುವಿಕೆ ಅತ್ಯಂತ ಸರಳತೆಯಿಂದ ಕೂಡಿದ್ದು ಹೆಚ್ಚಿನವರನ್ನು ಆಕರ್ಷಿಸಿತ್ತು. ನಿಸ್ವಾರ್ಥಿ ಕಾರ್ಯಕರ್ತರ ಶ್ರಮವನ್ನೂ ಕಡೆಗಣಿಸುವಂತಿಲ್ಲ. ನೂಲುವಿಕೆ ಪರಂಪರೆಯಿಂದ ಬಂದ ವೃತ್ತಿಗಳನ್ನೇ ಮುಂದುವರಿಸಿಕೊಂಡು ಹೋಗಬೇಕೆಂಬ ಭ್ರಮೆಯನ್ನು ಕಿತ್ತೆಸೆಯುತ್ತದೆ.

'ಕೃತಿ ಒಂದು ಆಕಾರವನ್ನು ಪಡೆದಿರುತ್ತದೆ. ಆಕಾರದಲ್ಲಿ ಒಂದು ಅರ್ಥ ಅಡಗಿರುತ್ತದೆಂದು ನಾವು ತಿಳಿದಿದ್ದೇವೆ. ಅಂದರೆ ಆಕಾರವುಳ್ಳ ಎಲ್ಲವೂ ನಮಗೆ ಸಂಕೇತಗಳಾಗಿ ತೋರುತ್ತಿವೆ. ಸಂಕೇತದ ಆಕಾರ ಮತ್ತು ಸಂಕೇತದ ಅರ್ಥ ಇವೆರಡು ಬೆಸೆದುಕೊಳ್ಳುವ ಬಗೆ ನಮಗೆ ಮುಖ್ಯವಾಗಿಲ್ಲ. ಅದರ ಬದಲು ಕೃತಿಯ ಆಕಾರವು ಅಡಗಿಸಿಟ್ಟುಕೊಂಡಿರುವ ಅರ್ಥವನ್ನು ಹುಡುಕುತ್ತಿದ್ದೇವೆ. ಮೌಖಿಕ ಸಂಪ್ರದಾಯದ ಅತ್ಯುನ್ನತ ಸೃಷ್ಟಿಗಳೂ ಕಾಲ ದೇಶಗಳ ಆಯಾಮವುಳ್ಳ ಆಕೃತಿಗಳಾಗಿ ದಾಖಲಾದ ಕೂಡಲೇ ಅವುಗಳ ಅರ್ಥವನ್ನು ತಿಳಿಯುವ ಪ್ರಯತ್ನ ಮಾಡಲಾಗುತ್ತದೆ. ಆ ಅರ್ಥಾನ್ವೇಷಣೆಯ ಭರದಲ್ಲಿ ನಾವು ಮರೆತಿರುವುದೇನೆಂದರೆ ಒಂದು ಸಂಸ್ಕೃತಿ, ಆಕೃತಿಯ ಆಕಾರವನ್ನು ಸ್ವಯಂಪೂರ್ಣವೆಂದು ತಿಳಿದಿರುವುದು ಸಾಧ್ಯವೆಂಬ ಸತ್ಯವನ್ನು, ಅಂದರೆ ನಮ್ಮ ನೂರಾರು ಆಚರಣೆಗಳು ಯಾವುದೋ ಸಾಂಸ್ಕೃತಿಕ ಅಂಶವನ್ನು ಪ್ರತಿನಿಧಿಸುತ್ತವೆ ಇಲ್ಲವೇ ಸಂಕೇತಿಸುತ್ತವೆ ಎಂದು ಎಷ್ಟು ಗಾಢವಾಗಿ ನಂಬತೊಡಗಿದ್ದೇವೆಂದರೆ ಆ ಆಚರಣೆಗಳು ಸಂಸ್ಕೃತಿಯ ಜೀವನಕ್ರಮದಲ್ಲಿ ತಂತಾನೇ ಪೂರ್ಣ ಘಟನೆಗಳಾಗಿರಬಹುದೆಂದು ತಿಳಿಯಲು ನಾವೀಗ ಸಿದ್ಧರಿಲ್ಲ. ಆಚರಣೆಗಳು ಸ್ವಯಂಪೂರ್ಣವಾಗಬಹುದೆಂಬ ಸಾಧ್ಯತೆಯನ್ನು ಈ ಶತಮಾನದಲ್ಲಿ ತೋರಿಸಿಕೊಟ್ಟವರು ಗಾಂಧೀಜಿ. ಅವರ ಹತ್ತಾರು ಕಾರ್ಯಕ್ರಮಗಳು ಬೇರೇನೋ ಉದ್ದೇಶವನ್ನು ಪ್ರತಿನಿಧಿಸುವ ಬದಲು ಅಥವಾ ಪ್ರತಿನಿಧಿಸುವ ಜತೆಗೆ ತಮಗೆ ತಾವೇ ಮಹತ್ವವನ್ನು ಪಡೆದಿರುತ್ತಿದ್ದವು. ನೂಲುವಿಕೆಯನ್ನು ಕುರಿತ ಅವರ ಕಾರ್ಯಕ್ರಮ ಇದಕ್ಕೊಂದು ನಿದರ್ಶನ. ನೂಲುವುದು ನಾಡಿನ ಬಟ್ಟೆಯ ಸಮಸ್ಯೆಯನ್ನು ಪರಿಹರಿಸುವುದೆಂದು ಗಾಂಧೀಜಿ ನಂಬಿದರು ಎನ್ನಲಾಗದು. ಆದರೆ ಅವರಿಗೆ ನೂಲುವಿಕೆ ವ್ಯಕ್ತಿಯ ತೊಡಗುವಿಕೆ ಮಾತ್ರವಾಗಿತ್ತು.'[3]

ಎಂಬ ಮಾತು ನೂಲುವಿಕೆಯ ಹಿಂದಿನ ಗಾಂಧಿಯವರ ಉದ್ದೇಶದ ಒಂದು ಮುಖವನ್ನು ಸೂಚಿಸುತ್ತದೆ.

ಗಾಂಧಿ ಪ್ರಭಾವದಿಂದ ನೂಲುವಿಕೆಯ ಕಾಯಕ ತುಳುನಾಡಿನಲ್ಲಿ ಆರಂಭವಾಯಿತು. ಇದು ತುಳುನಾಡಿಗೆ ಹೊಸತು. ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಅನೇಕರು ನೂಲುವಿಕೆಯಲ್ಲಿ ತೊಡಗಿಸಿಕೊಂಡರು. ಸಮಯ ಕಳೆಯಲು ತಕಲಿ ಒಂದು ಸಾಧನವಾಯಿತು. ಕಾಂಗ್ರೆಸ್ ಸದಸ್ಯತ್ವಕ್ಕಾಗಿ ಮನವೊಲಿಸುವುದು ಸ್ವಾತಂತ್ರ್ಯ ಚಳುವಳಿಯ ದೃಷ್ಟಿಯಿಂದ ಮುಖ್ಯವಾಯಿತು.

೫.೪. ಖಾದಿ ಪ್ರಚಾರ ಹಾಗೂ ಮಾರಾಟ

ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾಜಿಕ ಸುಧಾರಣೆಗಳೂ ನಡೆದವು. ಸ್ವಾತಂತ್ರ್ಯ ಹೋರಾಟವು ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸುವ ಒಂದೇ ಉದ್ದೇಶವಲ್ಲದೆ, ನಮ್ಮ ಸಮಾಜದಲ್ಲಿರುವ ಹಲವು ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಪಟ್ಟಿತ್ತು ಎಂಬುದು ಸ್ಪಷ್ಟವಾಗುತ್ತದೆ. ಖಾದಿ ಮಾರಾಟ ಹಾಗೂ ಪ್ರಚಾರ ಬ್ರಿಟಿಷರ ದಬ್ಬಾಳಿಕೆ, ಲಾಭಕೋರತನದ ವಿರುದ್ಧ ಕೈಗೊಂಡ ಅಸ್ತ್ರವಾಗಿದೆ. ವಿದೇಶಿ ವಸ್ತ್ರ ನಮ್ಮ ನಾಡಿನಲ್ಲಿ ಮಾರಾಟಕ್ಕೆ ಬಂದಾಗ ಇಲ್ಲಿನ ಗ್ರಾಮೋದ್ಯೋಗ ನರಳುವಂತೆ ಮಾಡಿತು. ಕೊಳ್ಳುವವರಿಲ್ಲದೆ ನಷ್ಟ ಅನುಭವಿಸುವುದು, ಜೀವನಮಾರ್ಗ ಕೆಡಿಸಿ, ಬದುಕು ದುಸ್ತರವೆನಿಸಿತ್ತು.

ಖಾದಿ ಧಾರಣೆಗೆ ಮಹತ್ವದ ಸ್ಥಾನ ಕೊಟ್ಟಿದ್ದರು ಗಾಂಧೀಜಿ. ಪ್ರತಿದಿನ ರಾಟೆಯಿಂದ ನೂಲು ತೆಗೆಯಬೇಕು. ತಾನು ಬೆಳೆಸಿದ ಹತ್ತಿಯನ್ನು ಹೆಕ್ಕಿ, ಕಾಳು ಬಿಡಿಸಿ ಹಂಜಿ ಮಾಡಿ, ನೂಲು ತೆಗೆದು, ನೇಕಾರರಿಗೆ ಕೊಟ್ಟು ಕೈಮಗ್ಗದಲ್ಲಿ ಬಟ್ಟೆ ನೇಯಿಸಿ ತೊಡುವುದು ಶ್ರೇಷ್ಠ ಖಾದಿ. ಇದು ಸಾಧ್ಯವಿಲ್ಲದಿದ್ದಾಗ ಕೈರಾಟೆಯಲ್ಲಿ ನೂತ ಕೈಮಗ್ಗದಲ್ಲಿ ನೇಯ್ದ ಖಾದಿ, ಅಧಿಕೃತ ಮಾರಾಟಗಾರರಿಂದ ಕೊಂಡು ಧರಿಸುವುದು ಎಲ್ಲರಿಗೂ ತೆರೆದ ಮಾರ್ಗ. ವಕೀಲ, ವೈದ್ಯ, ಸರ್ಕಾರಿ ನೌಕರ, ಶ್ರಮಜೀವಿ, ವಿದ್ಯಾರ್ಥಿ, ಯಾರೇ ಆಗಲಿ ಪ್ರತಿಯೊಬ್ಬ ಭಾರತೀಯನೂ ಖಾದಿ ಧರಿಸಬೇಕೆಂದು ಮಹಾತ್ಮರ ಸದಾಶಯ.

'ಆಗಿನ ಕಾಲದಲ್ಲಿ ನಮ್ಮ ದೇಶದಲ್ಲಿ ಹತ್ತಿಯಿಂದ ನೂಲು ತೆಗೆದು ಬಟ್ಟೆ ತಯಾರಿಸುವ ಹಲವು ಗಿರಣಿಗಳಿದ್ದವು. ಅಲ್ಲದೆ ಬೆಳೆದ ಹತ್ತಿಯನ್ನು ಇಂಗ್ಲೆಂಡಿನ ಮ್ಯಾಂಚೆಸ್ಟರಿಗೆ ಕಳುಹಿಸುತ್ತಿದ್ದೆವು. ಅಲ್ಲಿ ಬಟ್ಟೆ ತಯಾರಾಗಿ ಭಾರತಕ್ಕೆ ಬರುತ್ತಿತ್ತು. ಈ ವಿದೇಶಿ ಬಟ್ಟೆ ತೊಡುವುದರಲ್ಲಿ ನಮ್ಮ ಜನ ಹೆಮ್ಮೆ ಪಡುತ್ತಿದ್ದರು. ನಮ್ಮ ದೇಶದಲ್ಲಿ ಹತ್ತಿ ಬೆಳೆದು ಇಂಗ್ಲೆಂಡಿಗೆ ಕಳುಹಿಸಿ ಅಲ್ಲಿಂದ ಬಟ್ಟೆ ಮಾಡಿ ತರಿಸುವುದು ನಾಚಿಕೆಕೇಡು. ದೇಶ ದ್ರೋಹ ಇದರಿಂದ ಎಷ್ಟೊಂದು ಹಣ ವಿದೇಶಕ್ಕೆ ಹರಿದು ಹೋಗುತ್ತದೆ. ನಮ್ಮ ದೇಶದ ನಿರುದ್ಯೋಗಕ್ಕೆ, ಬಡತನಕ್ಕೆ, ಇದೊಂದು ಪ್ರಮುಖ ಕಾರಣ. ಇದೇ ಹತ್ತಿಯನ್ನು ಇಲ್ಲಿ ಉಳಿಸಿಕೊಂಡರೆ ನದಿಯಂತೆ ವಿದೇಶಕ್ಕೆ ಹರಿದು ಹೋಗುತ್ತಿದ್ದ ಹಣ ಇಲ್ಲಿಯೇ ಉಳಿಯುತ್ತದೆ.'[೫] ಎಂಬ ಆಶಯವು ಖಾದಿಯ ಹಿಂದಿದೆ.

'ಬಡತನವೇ ತಾಂಡವವಾಡುತ್ತಿರುವ ಬೆಸ್ತರಕೇರಿಯಲ್ಲಿ ಪರದೇಶಿ ವಸ್ತ್ರದ ಉಸಿರಿಲ್ಲದಿದ್ದರೂ, ಹಾಗೆಯೆ ಖಾದಿ ಬಟ್ಟೆಯನ್ನು ಕೊಳ್ಳುವ ತಾಕತ್ತಿಲ್ಲದಿದ್ದರೂ, ಖಾದಿ-ಚರಕದ ಶಕ್ತಿಯೇನೆಂಬುದನ್ನು ಮನಸ್ಸು ಮನಸ್ಸಿನೊಳಗೆ ಬಿತ್ತುವ ಅನಿವಾರ್ಯತೆ ಮಾರಪ್ಪನಿಗಿತ್ತು. ಆ ಅನಿವಾರ್ಯತೆಯಿಂದಾಗಿ ಇದೀಗ ಬಡತನದಿಂದ ಕಂಗೆಟ್ಟ ಮನದೊಳಗಿಂದ ಉದುರುವ ಬೈಗಳು, ಅಸಹನೆಗಳನ್ನೆಲ್ಲ ಆತ ನುಂಗಿಕೊಳ್ಳುತ್ತಾ ತನ್ನ ಕಾಯಕವನ್ನು ಮುಂದುವರಿಸಿದ್ದ.'(ಗಾಂಧಿ ಬಂದ, ಪುಟ ೪೬)

ಜನರ ಮನೋಭಾವವನ್ನು ಬದಲಿಸುವುದು ಕಷ್ಟದ ಕೆಲಸ. ಮಾರಪ್ಪ ನಿಸ್ವಾರ್ಥದಿಂದ ಗಾಂಧಿಯ ಮೌಲ್ಯಗಳನ್ನು ಬಿತ್ತುವುದರಲ್ಲಿ ಕಾಲಕಳೆಯುವುದು; ಇದರಿಂದ ಹಲವರ ಬೈಗಳು, ಅಸಹನೆಗೆ ತುತ್ತಾಗುವುದು, ಸ್ವಾತಂತ್ರ್ಯ ಹೋರಾಟ ಹಾಗೂ ಸಮಾಜ ಸುಧಾರಣೆಯ ಹಿಂದಿನ ತ್ಯಾಗ, ಬಲಿದಾನ ಅರಿವಾಗುತ್ತದೆ. ಎಲ್ಲ ಅವಮಾನಗಳನ್ನು ನುಂಗಿಕೊಂಡು ನಿಸ್ವಾರ್ಥವಾಗಿ ಕಾರ್ಯ ಮಾಡಿದಾಗ ಮಾತ್ರ ನಾಯಕನಾಗುವುದು ಸಾಧ್ಯ. ಮಾರಪ್ಪ ಖಾದಿ ಪ್ರಚಾರವನ್ನು ತನ್ನ ಉಸಿರಿನಂತೆ ನಿರ್ವಹಿಸುತ್ತಿರುತ್ತಾನೆ.

ಮಾರಪ್ಪ, ತಿಂಗಳಾಯ, ಕಾರ್ನಾಡರು ಊರಿಡೀ ಸುತ್ತಿ ಖಾದಿ ಪ್ರಚಾರ ಕೈಗೊಂಡರೆ, ಬೆಸ್ತರ ತಿಂಗಳಾಯರು ಜಾರಂದಾಯ ನೇಮವನ್ನು ಖಾದಿ ಮಾರಾಟದ ನೆಲೆಯಾಗಿ ಪರಿವರ್ತಿಸುತ್ತಾರೆ. ಗಾಂಧಿ ಟೊಪ್ಪಿ, ಖಾದಿ ಪಂಚೆ, ಖಾದಿ ಜುಬ್ಬ, ಖಾದಿಸೀರೆ ಮಾರಾಟ ಭರ್ಜರಿಯಿಂದ ನಡೆಯುತ್ತದೆ. ಗಾಂಧಿ ಟೊಪ್ಪಿಗಳು ಭರ್ಜರಿಯಾಗಿ ಮಾರಾಟವಾದವು.

ಬೆಸ್ತರ ತಿಂಗಳಾಯರು ಜಾರಂದಾಯ ನೇಮದಲ್ಲಿ ತೆರೆದ ಖಾದಿ ಅಂಗಡಿ ಪಲ್ಲಟವನ್ನು ಸೂಚಿಸುತ್ತದೆ. ಬದಲಾವಣೆಯನ್ನು ಮನಃಪೂರ್ವಕವಾಗಿ ಸ್ವೀಕರಿಸುವ ತಳಸಮುದಾಯ, ಗುತ್ತಿನ ಪಾಂಡುಶೆಟ್ಟರು ಸಾಮಾಜಿಕ ಪರಿವರ್ತನೆಯನ್ನು ಸ್ವೀಕರಿಸುವವರು. ಗಾಂಧಿ ಟೊಪ್ಪಿ ಇಂದ್ರಜಾಲದಂತೆ ಎಲ್ಲರನ್ನೂ ತನ್ನೆಡೆ ಸೆಳೆಯುತ್ತದೆ. ಪಟೇಲ ಹೆಬ್ಬಾರರು ಹಾಗೂ ಕೆಲವರನ್ನು ಹೊರತುಪಡಿಸಿ ಇಡೀ ಜನಸಮುದಾಯ ಗಾಂಧಿ ಟೊಪ್ಪಿ ಸ್ವೀಕರಿಸಿದ ಬಗೆ ನಿಬ್ಬೆರಗುಗೊಳಿಸುವಂಥದ್ದು.

'ಖಾದಿಯನ್ನು ವ್ಯಾಪಕಗೊಳಿಸುವ ಉದ್ದೇಶವೆಂದರೆ ಅನೇಕ ಬಡವರಿಗೆ ಊಟ ಮತ್ತು ಬಟ್ಟೆಯನ್ನು ಕೊಡುವುದು. ಸ್ವರಾಜ್ಯದ ಅಗತ್ಯಕ್ಕಿಂತ ಬಡತನದ ನಿರ್ಮೂಲನವೇ ಪ್ರಮುಖವಾದ ಅಂಶವಾಗಿತ್ತು. ಖಾದಿಯನ್ನು ವ್ಯಾಪಕವಾಗಿ ಬಳಸುವುದರಿಂದ ಮಾತ್ರ ಸ್ವರಾಜ್ಯವು ಸಾಧ್ಯವಾಗಿತ್ತು. ಭಾರತೀಯ ಕುಶಲತೆ ಹಾಗೂ ಪರಿಸ್ಥಿತಿಗೆ ಒಗ್ಗುವಂಥ ತಂತ್ರಗಾರಿಕೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಗಾಂಧೀಜಿ ಖಾದಿಗೆ ಅಷ್ಟು ಒತ್ತುಕೊಟ್ಟರು. ರಾಷ್ಟ್ರೀಯ ಹೋರಾಟದಲ್ಲಿ ಖಾದಿ ಚಳುವಳಿಯ ಸೇರ್ಪಡೆಯಾದಂತೆ ಆರ್ಥಿಕತೆಯನ್ನು ಪುನಃನಿರ್ಮಾಣ ಮಾಡುವುದು ಕೂಡ ಗಾಂಧೀಜಿಯವರ ದೃಷ್ಟಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿತ್ತು.'[2] ಖಾದಿಗಾಗಿ ನೂತರೆ ಮಾತ್ರ ಪ್ರಯೋಜನವಿಲ್ಲ. ಅದನ್ನು ವಿಕ್ರಯಿಸುವುದು ಕೂಡ ಮುಖ್ಯವಾಗಿತ್ತು. ಕಾಂಗ್ರೆಸ್ ಸದಸ್ಯರು ಖಾದಿಯ ಕುರಿತು ಒಲವು ಮೂಡಿಸಲು ಶ್ರಮಿಸುತ್ತಾರೆ.

೫.೫. ವಿದೇಶಿ ವಸ್ತ್ರ ಬಹಿಷ್ಕಾರ

ಸ್ವಾತಂತ್ರ್ಯ ಚಳುವಳಿಯಲ್ಲಿ ಅಸಹಕಾರ ಚಳುವಳಿಯ ಭಾಗವಾಗಿ ಬಂದ ವಿದೇಶಿ ವಸ್ತ್ರ ಬಹಿಷ್ಕಾರವು ಸ್ವದೇಶಿ ಬಳಕೆ ಹೆಚ್ಚಿಸುವುದಕ್ಕೆ ಒತ್ತುಕೊಟ್ಟಿತು. ವಿದೇಶಕ್ಕೆ ಹರಿದುಹೋಗುತ್ತಿದ್ದ ಆದಾಯ ತಡೆಯಲು ಪ್ರಯತ್ನಿಸಿತು.

'ಗಾಂಧಿ ಬಂದ' ಕಾದಂಬರಿಯಲ್ಲಿ ಮಾರಪ್ಪ ಪ್ರಧಾನವಾಗಿ ಪರದೇಶಿ ಬಟ್ಟೆಗಳ ವರ್ಜನೆ ಹಾಗೂ ಖಾದಿ ಬಟ್ಟೆಗಳನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿದ್ದ. ರಾಟೆಯಲ್ಲಿ ನೂಲು ತೆಗೆಯಲು ಇನ್ನಿಲ್ಲದಂತೆ ಪ್ರೋತ್ಸಾಹಿಸುತ್ತಿದ್ದ. ಮಾರಪ್ಪನ ಪ್ರಚಾರದಿಂದ ದ್ರೌಪದಿ ತನ್ನ ಬಟ್ಟೆ ತಾನೇ ನೂಲುತ್ತಾಳೆ.

ಖಾದಿ ಪ್ರಚಾರ ಮತ್ತು ಮಾರಾಟ ಭರದಿಂದ ಸಾಗುತ್ತಿದ್ದರೂ, ಪರದೇಶಿ ವಸ್ತ್ರ ಬಹಿಷ್ಕಾರ ಚಳುವಳಿ ಹುಟ್ಟಿಕೊಂಡು ಸ್ವಾತಂತ್ರ್ಯ ಹೋರಾಟ ಇನ್ನಷ್ಟು ಕಾವು ಪಡೆದಿತ್ತು. ಮಾರಪ್ಪ, ತಿಂಗಳಾಯ, ಅದ್ರಾಮರು ತಮ್ಮನ್ನು ತಾವೇ ಈ ದೇಶಭಕ್ತಿಯ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಮಾರಪ್ಪ ಮನೆಯಿಂದಲೇ ಪರದೇಶಿ ವಸ್ತ್ರ ಬಹಿಷ್ಕಾರಕ್ಕೆ ಶುಭಾರಂಭವನ್ನು ನೀಡುತ್ತಾನೆ. ಹೆಂಡತಿ ದಾರುವಿನ ತಂದೆ ಸುಬ್ಬಯ್ಯ ಶೆಟ್ಟರ ಕೊಡುಗೆಯಾದ ಹಲವು ಸೀರೆಗಳನ್ನು ಅಮ್ಮನ ವಿರೋಧದ ನಡುವೆಯೇ ಗಂಟುಕಟ್ಟಿ ಮಂಗಳೂರು ಪೇಟೆಯ ಕೇಂದ್ರದಲ್ಲಿನ ದಹನದ ಕಾರ್ಯಕ್ರಮಕ್ಕೆ ಹೊರಟ. ಸತ್ಯಾಗ್ರಹಿಗಳ ಆರ್ಭಟ ತಾರಕಕ್ಕೇರಿತ್ತು. ತಾವು ತಂದ ಪರದೇಶಿ ವಸ್ತ್ರಗಳನ್ನು ಬೆಂಕಿಗೆ ಅರ್ಪಿಸುತ್ತ ಗಟ್ಟಿ ಹಾಡಿದರು.

"ಏಕೆ ಧರಿಸುವೆ ಸಾಕು ಬಿಡು ಪರದೇಶಿ ಜನರ ವಸ್ತ್ರವಾ॥

ಹಾಕು ಬೆಂಕಿಲಿ ಉರಿಲಿ ಧಗಧಗ ಧರಿಸು ಖಾದಿ ಪವಿತ್ರವ॥" (ಗಾಂಧಿ ಬಂದ, ಪುಟ ೩೧೪)

ಪೊಲೀಸರ ಲಾಠಿ ಏಟಗೆ ಹಲವರ ತಲೆಬುರುಡೆಗಳು ಉರುಳಿದವು. ಅದ್ರಾಮನೂ ಇದೇ ಚಳುವಳಿಯಲ್ಲಿ ತಲೆಯೊಡೆದುಕೊಂಡು ಪ್ರಾಣ ಕಳೆದುಕೊಂಡ.

ಸ್ವದೇಶಿ ಚಳುವಳಿ ವಿದೇಶಿ ವಸ್ತುಗಳನ್ನು ತಿರಸ್ಕರಿಸುತ್ತಾ, ಅದೇ ಕಾಲದಲ್ಲಿ ತನ್ನದೇ ಆದ ಪರ್ಯಾಯ ವಸ್ತುಗಳ ತಯಾರಿಕೆಯತ್ತ ಮನಸ್ಸು ಕೊಟ್ಟಿತು. ವ್ಯಕ್ತಿಗೆ ಒಂದು ದಾರಿ ಮುಚ್ಚಲ್ಪಟ್ಟಾಗ ಆತ ಸಾಧ್ಯವಿರುವ ಇತರ ದಾರಿಗಳ ಕುರಿತು ತೀವ್ರವಾಗಿ ಶೋಧಿಸಲು ಆರಂಭಿಸುತ್ತಾನೆ. ಸ್ವಸಾಮರ್ಥ್ಯ ಇಂಥ ಸಂದರ್ಭಗಳಲ್ಲಿ ಅರಿವಿಗೆ ಬರುತ್ತದೆ.

೫.೬. ಉಪ್ಪಿನ ಸತ್ಯಾಗ್ರಹ

ಅಸಹಕಾರ ಹಾಗೂ ಕರನಿರಾಕರಣ ಚಳುವಳಿಯ ಒಂದು ಅಂಗವಾಗಿ ಪ್ರಸಿದ್ಧಿ ಪಡೆದ ಉಪ್ಪಿನ ಸತ್ಯಾಗ್ರಹ ಬ್ರಿಟಿಷರ ಆಡಳಿತ ವಿರೋಧಿಯಾಗಿ ಜಾರಿಗೆ ಬಂತು. ಭಾರತದ ಕರಾವಳಿ ತೀರದಲ್ಲಿ ವಿಪುಲವಾಗಿ ಸಿಗುವ ಉಪ್ಪುನೀರನ್ನು ಬಳಸಿ ಉಪ್ಪು ತಯಾರಿಸುವುದು ಸುಲಭವಿತ್ತು. ಬ್ರಿಟಿಷರು ಉಪ್ಪಿಗೂ ಅಧಿಕ ತೆರಿಗೆ ದರ ವಿಧಿಸಿದ್ದು, ಸಮುದ್ರದಿಂದ ಉಪ್ಪು ತಯಾರಿಸುವುದನ್ನು

ನಿಷೇಧಿಸುವ ಕಾನೂನು ಜಾರಿಗೆ ಬಂದಿತ್ತು. ಅದನ್ನು ವಿರೋಧಿಸಲು ಈ ಪ್ರತಿಭಟನೆ ಮುನ್ನೆಲೆಗೆ ಬಂತು.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ 'ಉಪ್ಪಿನ ಸತ್ಯಾಗ್ರಹ'ದ ವಿವರಗಳು ದಾಖಲಿತವಾಗಿವೆ. ಸ್ವಾತಂತ್ರ್ಯದ ಹಂಬಲದಿಂದ ಸೃಷ್ಟಿಗೊಂಡ ಜನರ ಏಕತೆಯು ಉಪ್ಪು ಮಾಡಲುತೊಡಗಿತು. ಸತ್ಯ, ಅಹಿಂಸೆ, ತಕಲಿ ಎಲ್ಲರ ಮಂತ್ರಗಳಾದವು. ಸಮಾಜವು ಗಾಂಧಿ ಮೌಲ್ಯಗಳಿಂದ ಪ್ರೇರಿತವಾಯಿತು. 'ಇಂಕ್ವಿಲಾಬ್ ಜಿಂದಾಬಾದ್', ಮಹಾತ್ಮ ಗಾಂಧಿಕೀ ಜೈ ಎಂಬ ಘೋಷಣೆಗಳು ಸಾಮಾನ್ಯವಾದವು. ಉಪ್ಪಿನ ಸತ್ಯಾಗ್ರಹದಿಂದ ರಾಮನಿಗೆ ಆರು ತಿಂಗಳು ಸೆರೆವಾಸ ಅನಿವಾರ್ಯವಾಯಿತು. ಸತ್ಯಾಗ್ರಹಿಗಳ ಭಾಷಣ, ಸಂಗದಿಂದ ರಾಷ್ಟ್ರಾಭಿಮಾನ ಹೆಚ್ಚಳವಾಯಿತು. ಗಾಂಧಿ ಇರ್ವಿನ್ ಸಂಧಾನದ ಫಲವಾಗಿ ಬಿಡುಗಡೆಯಾಯಿತು. ಸೆರೆಯಿಂದ ಬಿಡುಗಡೆಯಾದ ರಾಮ ಬಿ.ಎ. ಯಿಂದ ಅನರ್ಹನಾದ. ಹತ್ತು ತಿಂಗಳು ಊರಿನಲ್ಲೇ ಇರಬೇಕಾದ ಅನಿವಾರ್ಯತೆ. ಸಮಾನವಯಸ್ಕರ ಜೊತೆಯ ಚರ್ಚೆಯಿಂದ ಚರಕಾ ಸಂಘ, ಕಾಂಗ್ರೆಸ್ ಕಮಿಟಿ ಸ್ಥಾಪನೆಯಾಯಿತು. ಉಡುಪಿಯಿಂದ ತಕಲಿ ತರಿಸಿ ನೂಲುವ ಕಾರ್ಯ ಆರಂಭವಾಯಿತು. ಬಡತನ, ಹರಿಜನ ಪ್ರಶ್ನೆ, ನೂಲುವ ಸಮಸ್ಯೆ, ರಾಷ್ಟ್ರೋದ್ಧಾರ, ಗ್ರಾಮೋದ್ಧಾರಗಳ ಕುರಿತು ತರ್ಕಗಳಾದವು.

ಉಪ್ಪಿನ ಅನಿವಾರ್ಯತೆ ಜನಸಾಮಾನ್ಯರನ್ನು ಕಂಗೆಡಿಸಿದ ಬಗೆಯನ್ನು ಗುರುತಿಸಬಹುದು. 'ಪಾರೋತಿಯ ಮನಸ್ಸು ಒಂದು ಪ್ರಶ್ನೆಯ ತೀರ್ಮಾನಕ್ಕೆ ಕಾದಿತ್ತು. 'ಉಪ್ಪಿನಕಾಯಿಗೆ ಉಪ್ಪು ಅಂಗಡಿಯಿಂದ ತಂದಾಗಬೇಕೇ, ಹೊಳೆನೀರನ್ನು ಕಾಯಿಸಿ ಕದ್ದು ಮಾಡಬೇಕೇ? ಎಂದು.'(ಮರಳಿ ಮಣ್ಣಿಗೆ, ಪುಟ ೪೪) ಸ್ವಾತಂತ್ರ್ಯ ಚಳುವಳಿಯಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಮುಖ ಘಟನೆಯಾದರೂ, ಜನಸಾಮಾನ್ಯರು ದೇಶಭಕ್ತಿಯ ಉದ್ದೇಶಕ್ಕಲ್ಲದೆ, ತಮ್ಮ ದಿನನಿತ್ಯದ ಖರ್ಚಿಲ್ಲದ ವಸ್ತುವಾಗಿ ಪಡೆಯಲು ಪ್ರಯತ್ನಿಸುತ್ತಾರೆ.

'ಔದಾರ್ಯದ ಉರುಳಲ್ಲಿ' ಕಾದಂಬರಿ ಉಪ್ಪಿನ ಸತ್ಯಾಗ್ರಹದ ತೀವ್ರತೆಯನ್ನು ಚಿತ್ರಿಸಿದೆ. ಉಪ್ಪಿನ ಸತ್ಯಾಗ್ರಹ ೧೯೩೦ರಲ್ಲಿ ನಡೆದ ಐತಿಹಾಸಿಕ ಘಟನೆ. ಗಾಂಧೀಜಿಯ ದಂಡಿ ಸತ್ಯಾಗ್ರಹ ಮನೆಮಾತಾಗಿದೆ. ಇದರ ಪ್ರಭಾವವು ಎಲ್ಲೆಡೆ ಹರಡಿತು. ಕರಾವಳಿಯಲ್ಲಿ ಪ್ರತಿಧ್ವನಿಸಿದಾಗ ರಾಧಾಕೃಷ್ಣ ತನ್ನದೇ ಮಾರ್ಗ ಕೈಗೊಂಡ. 'ವೀರವಾಣಿ' ಎಂಬ ಪತ್ರಿಕೆ ಆರಂಭಿಸಿ ಗುಪ್ತವಾಗಿ ಸಾಗಿಸುತ್ತಾ ಜನರನ್ನು ಎಚ್ಚರಗೊಳಿಸುವ, ಧೈರ್ಯ ತುಂಬುವ ಪ್ರಯತ್ನ ನಡೆಯುತ್ತ ಹೋಯಿತು. ಡುಪ್ಲಿಕೇಟರ್ ಯಂತ್ರಕ್ಕಾಗಿ ಸತ್ಯಳ ಒಡವೆಗಳನ್ನು ಒತ್ತೆ ಇರಿಸಬೇಕಾಯಿತು. ಬಹಳ ಕಾಲ ಸಾಗಿದ ಈ ಕೆಲಸ ಮುಂದೆ ಸಾಗಲಿಲ್ಲ. ರಾಧಾಕೃಷ್ಣ ಯಂತ್ರ ಸ್ಥಳಾಂತರಿಸಿ ಗುಪ್ತವಾಗಿ ಕೆಲಸ ನಿರ್ವಹಿಸಿದ. ಆದರೆ ಆತ ಊರಿಗೆ ಬಂದಾಗ ಆ ಯಂತ್ರವೂ, ಮಿತ್ರನೂ ಜೈಲಿಗೆ ತಳ್ಳಲ್ಪಟ್ಟರು.

ಉಪ್ಪಿನ ಸತ್ಯಾಗ್ರಹದಿಂದ ಮಂಗಳೂರಿನ ಬೀದಿಗಳು ನೆತ್ತರುಮಯವಾದವು. ಖಾದಿ ಧರಿಸಿದವರ ಮೇಲೆಲ್ಲ ಪೋಲಿಸರು ಹಲ್ಲೆ ನಡೆಸಿದರು. ಶಾಮನಿಗೂ ಪೆಟ್ಟಾಗಿ ಆರು ತಿಂಗಳ ಕಾಲ ಸೆರೆಮನೆ ಸೇರಿದ. ಮಂಗಳೂರು ಪ್ರಕ್ಷುಬ್ಧವಾಯಿತು. ಹಲವರ ಬಂಧನವಾಯ್ತು. ಮಂಗಳೂರಿನಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಚಳುವಳಿ ಹಳ್ಳಿಗಳಿಗೆ ವಿಸ್ತರಿಸದ ಕಾರಣ ಕ್ಷೀಣಿಸಿತು.

'ಚಳುವಳವನ್ನು ನಾಲ್ಕು ಮೂಲೆಗಳಲ್ಲಿಯೂ ವಿಸ್ತರಿಸಿ, ಜೀವ ಹಿಡಿಯುವಂತೆ ಮಾಡುವುದರ ಬದಲು, ಮುಖ್ಯ ನಗರವಾದ ಮಂಗಳೂರಿನಲ್ಲಿ ಕೇಂದ್ರೀಕರಿಸಿ ವೈರಿಯ ಪೆಟ್ಟಿಗೆ ಸೋಲುವಂತೆ ಮಾಡಿದರು. ಇನ್ನು ನನ್ನ ಜಿಲ್ಲೆಯೇ ಪ್ರಯೋಜನವಿಲ್ಲ' ಎಂದೆನಿಸಿತು ರಾಧಾಕೃಷ್ಣನಿಗೆ. (ಔದಾರ್ಯದ ಉರುಳಲ್ಲಿ, ಪುಟ ೨೧೪) ಇದರಿಂದ ನೊಂದ ರಾಧಾಕೃಷ್ಣ ಉತ್ತರಕನ್ನಡ, ಸಿದ್ಧಾಪುರ, ನಾಗೇನಹಳ್ಳಿಗೆ ತೆರಳಿ ಅಲ್ಲಿ ತನ್ನ ಕಾಯಕ ಮುಂದುವರೆಸುತ್ತಾನೆ.

'ಗಾಂಧಿ ಬಂದ' ಕಾದಂಬರಿಯು 'ಉಪ್ಪಿನ ಸತ್ಯಾಗ್ರಹ' ಕಥಾನಕವನ್ನು ತನ್ನೊಡಲೊಳಗೆ ಗರ್ಭೀಕರಿಸಿಕೊಂಡಿದೆ. ಉಪ್ಪಿಗೆ ತೆರಿಗೆ ವಿಧಿಸಿ ಹುಟ್ಟುಹಾಕಿದ ಸಂಘರ್ಷವು ಪರ ವಿರೋಧಗಳಿಂದ ಮುಂದುವರಿಯುವ ಪರಿ ಬದುಕಿನ ನೈಜತೆಯ ಮುಖವೊಂದನ್ನು ಪರಿಚಯಿಸುತ್ತದೆ. ಸೂರಕ್ಕೆ ಪ್ರತಿಕ್ಷಣವೂ ಉಪ್ಪಿನ ಸತ್ಯಾಗ್ರಹವನ್ನು ಟೀಕಿಸುತ್ತಾರೆ. ಆಕೆಗೆ ಕಮ್ಮಿ ಬೆಲೆಗೆ ಸಿಗುವ ಉಪ್ಪಿಗಾಗಿ ಆಗುವ ಗಲಾಟೆ, ಕದನಗಳ ಒಳಗುಟ್ಟು ಅರಿಯದು. ಕಾರ್ನಾಡರು ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹಗೈದರೆ, ಮಾರಪ್ಪ ಪೊಸೊಡಿಯ ಕಡಲಕೆರೆಯಲ್ಲಿ ಮಣ್ಣಿನ ಹಂಡೆಯಲ್ಲಿ ನೀರು ಕುದಿಸಿ ಉಪ್ಪು ತಯಾರಿಕೆಯಲ್ಲಿ ಮಗ್ನನಾಗಿದ್ದ. ಬ್ರಿಟಿಷರು ವಿಧಿಸಿದ ತೆರಿಗೆ ವಿರೋಧಿಸಿ ಭಾರಿ ಪ್ರಮಾಣದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯುತ್ತದೆ. ಜನಸಾಮಾನ್ಯರು ತಮ್ಮ ಕೆಲಸಕಾರ್ಯಗಳಿಗೆ ವಿರಾಮ ನೀಡಿ ಉಪ್ಪು ತಯಾರಿಯಲ್ಲಿ ತೊಡಗಿಕೊಳ್ಳುತ್ತಾರೆ.

'ಇವತ್ತು ಮಂಗಳೂರು ಬಂದರಲ್ಲಿ ಸತ್ಯಾಗ್ರಹಿಗಳ ಗುಂಪೊಂದು ಮೆರವಣಿಗೆಯಲ್ಲಿ ಕಡಲ ನೀರನ್ನು ತಂದು ಕುದಿಸಿ ಉಪ್ಪು ಮಾಡಿತಂತೆ.'(ಗಾಂಧಿ ಬಂದ, ಪುಟ ೩೦೭)

'ಪೊಲೀಸ್ ಇನ್ಸ್‌ಭಟ್ರು ಬಂದು ಉಪ್ಪು ನೀರು ಕುದಿಸಿದ ಪಾತ್ರೆಯನ್ನೂ, ಉರಿಸಿ ಉಳಿದ ಕಟ್ಟಿಗೆ, ಬೂದಿಯನ್ನು ಕೊಂಡೊಯ್ದರಂತೆ.'(ಗಾಂಧಿ ಬಂದ, ಪುಟ ೩೦೭)

'ಪತ್ತು ಮುಡಿ ವಾಸುದೇವ್ರಾಯರು, ಉಳ್ಳಾಲ ತುಕ್ರಪ್ಪನವರು ಕೇಂದ್ರ ಮೈದಾನದಲ್ಲಿ ಅಂದು ತಾವು ಮಾಡಿದ್ದ ಉಪ್ಪನ್ನು ಏಲಂ ಮಾಡಿದರಂತೆ. ಪಗಡಿ ಪೊಲೀಸರು ಬಂದು ಒದ್ದು ಉಪ್ಪನ್ನು ಸೆಳೆದುಕೊಂಡರಂತೆ.'(ಗಾಂಧಿ ಬಂದ, ಪುಟ ೩೦೭)

'ಕಾರ್ಕಳದಲ್ಲಿ ಹತ್ತಿಪ್ಪತ್ತು ಮಂದಿ ಬಂದು ಪಡುಬಿದ್ರಿಯಲ್ಲಿ ಉಪ್ಪಿನ ಕಾಯಿದೆ ಮುರಿದರಂತೆ. ಪೊಲೀಸರು ಬರುವಾಗ ಹೆದರಿ ಪದ್ರಾಡಂತೆ...!'(ಮರಳಿ ಮಣ್ಣಿಗೆ, ಪುಟ ೩೦೭)

'ಕಾರ್ನಾಡರು ಅಂಕೋಲೆಗೆ ಉಪ್ಪು ಮಾಡಲು ಹೋದವರು ಮರಳಿ ಬಂದರಂತೆ....'(ಮರಳಿ ಮಣ್ಣಿಗೆ, ಪುಟ ೩೦೭)

ಉಪ್ಪಿನ ಸತ್ಯಾಗ್ರಹಕ್ಕೆ ಸಂಬಂಧಪಟ್ಟ ಮೇಲಿನ ಸುದ್ದಿಗಳು ಆ ಕಾಲಘಟ್ಟದ ಚಿತ್ರಣವನ್ನು ನೈಜತೆಯೊಂದಿಗೆ ಕಟ್ಟಿಕೊಡುತ್ತವೆ. ಉಪ್ಪಿನ ಸತ್ಯಾಗ್ರಹ ನಡೆಸುತ್ತಿದ್ದ ಮಾರಪ್ಪ ಹಾಗೂ ತಿಂಗಳಾಯರ ಬಂಧನವಾಗುತ್ತದೆ. ಊರಿಡೀ ಉಪ್ಪಿನ ಸತ್ಯಾಗ್ರಹದ ಪ್ರಚಾರ ಮಾಡಿದರೂ ಮಾರಪ್ಪನು ತಾಯಿ ಸೂರಕ್ಕೆಯ ಮನವನ್ನು ಒಲಿಸಲಾರದೆ ಹೋಗುತ್ತಾನೆ. ಮಾರಪ್ಪನ ಸ್ವರಾಜ್ಯದ ಗಳಿಕೆಯ ಅತಿಯಾದ ಒಲವೇ ಸೂರಕ್ಕೆಯನ್ನು ಪರಮ ವಿರೋಧಿಯಾಗುವಂತೆ ರೂಪಿಸಿದೆ.

ತುಳುನಾಡಿನಲ್ಲಿ ಕಡಲತೀರವೇ ಇರುವುದರಿಂದ ಉಪ್ಪು ಅಗ್ಗವಾದ ವಸ್ತು. ಉಪ್ಪನ್ನು ಕದ್ದು ಮಾಡುವ ಅಗತ್ಯವೇ ಎಂದೂ ಉದ್ಭವವಾಗಿರಲಿಲ್ಲ. ಆದ್ದರಿಂದಲೇ ಸೂರಕ್ಕೆಗೆ ಅದೊಂದು ಅಚ್ಚರಿಯ ವಿಷಯ. ಜನಸಾಮಾನ್ಯರೂ ಆಚರಣೆಗೆ ತರುವಲ್ಲಿ ತೊಡಕನ್ನು ಉಂಟುಮಾಡುವುದಿಲ್ಲ. ಸ್ವಾತಂತ್ರ್ಯಕ್ಕಾಗಿ ಗಾಂಧಿ ತುಂಬಾ ಸರಳ ತಂತ್ರಗಳನ್ನೇ ಪರಿಣಾಮಕಾರಿಯಾಗಿ ರೂಪಿಸಿದರು. ಆದ್ದರಿಂದಲೇ ಬಡವ ಬಲ್ಲಿದ, ಶಿಕ್ಷಿತ, ಅಶಿಕ್ಷಿತ, ಮೇಲುಕೀಳು ಎಂಬ ಬೇಧಭಾವವಿಲ್ಲದೆ ತಿಳುವಳಿಕೆ ಪಡೆದ ಮನಸ್ಸು ಇದ್ದಂತ ಹಲವರ ಪಾಲ್ಗೊಳ್ಳುವಿಕೆ ಸಾಧ್ಯವಾಯಿತು. ಕ್ಷಣಾರ್ಧದಲ್ಲಿ ತಾಜಾ ಸುದ್ದಿ ರವಾನಿಸಬಲ್ಲ ಸಶಕ್ತ ಮಾಧ್ಯಮಗಳಿರುವ ಈ ಕಾಲದಲ್ಲಿ ಸ್ವಾತಂತ್ರ್ಯ ಪೂರ್ವದ ಜನರ ತ್ಯಾಗ ಬಲಿದಾನಗಳು, ಅವರ ಸುದ್ದಿ ಸಾಗಿಸುವಲ್ಲಿನ ಶ್ರಮ, ಮನವರಿಕೆ ಮಾಡಲು ಪಡುವ ಒದ್ದಾಟ, ಎಲ್ಲವೂ ಹುಬ್ಬೇರಿಸುವಂತೆ ಮಾಡುತ್ತವೆ. ವ್ಯಾಪಕವಾಗಿ ತುಳುನಾಡಿನ ಜನತೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾಗಿರುವುದು ಸ್ವಾತಂತ್ರ್ಯ ಹೋರಾಟದ ಅಗತ್ಯವೂ ಆಗಿತ್ತು. ಕಡಲತೀರದ ಜನವಾಗಿ ಭಾಗಿಯಾಗದೇ ಹೋದರೆ ಚಳುವಳಿ ನೆಲಕಚ್ಚುವ ಅಪಾಯವೂ ಇತ್ತು. ಅಧಿಕ ಆಸೆಯಿಂದ ಉಪ್ಪಿಗೆ ತೆರಿಗೆ ವಿಧಿಸುವ ಬ್ರಿಟಿಷರ ರೀತಿಯು ಶೋಷಣೆಯ ಪರಮಾವಧಿ ಎನ್ನಬಹುದು.

'ಗರಡಿ ಮಜಲಿನ ಗಾಂಧಿ' ಕತೆಯ ನಾಯಕನಾದ ಶಿವರಾಮಯ್ಯನಿಗೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗಿಯಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದರೂ, ಆಗ ತಾನೇ ಹುಟ್ಟಿದ ಕೂಸಿನ ಕಾರಣ ಹೋಗಲಾಗದಿದ್ದರೂ, ಮಗುವಿಗೆ 'ಲವಣ'ದ ಗುರುತಿಗಾಗಿ ಲಾವಣ್ಯ ಎಂಬ ಹೆಸರಿಟ್ಟು ಮನೆಯಲ್ಲಿ ಉಪ್ಪು ತಯಾರಿಸಿ ಸೆರೆಮನೆ ಸೇರಿಕೊಳ್ಳುತ್ತಾನೆ. ಚಿಂತನೆ, ನಂಬಿಕೆಗಳು ವ್ಯಕ್ತಿಗಳನ್ನು ಆಳವಾಗಿ ಆಕರ್ಷಿಸುವ ಮಾದರಿಯನ್ನು ಶಿವರಾಮಯ್ಯನಲ್ಲಿ ನೋಡಬಹುದು.

ಗೋಪಾಲಕೃಷ್ಣ ಅಡಿಗರ 'ಹುಲಿರಾಯ' ಕತೆಯು ಈ ನಿಟ್ಟಿನಲ್ಲಿ ಗಮನಿಸಬಹುದು. 'ಗಾಂಧೀಜಿ ನಡೆಸಿದ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಕ್ಕೆ ತನ್ನ ಸ್ವಂತ ಅಸ್ತಿತ್ವದ ನೆಲೆಯಲ್ಲೇ ಪ್ರತಿಮೆಯಾಗಿ ನಿಲ್ಲುವ ಹುಲಿರಾಯ, ಅರ್ಥೈಕೆಯ ಅನೇಕ ಸಾಧ್ಯತೆಗಳನ್ನು ಒಳಗೊಂಡಿದೆ. ಈ ಕತೆಯ ನಿಜವಾದ ಗೆಲುವು ಇರುವುದು ಭಟ್ಟರ ಸಾತ್ವಿಕ ಶಕ್ತಿಯ ವಿಜಯದಲ್ಲಿ ಅಲ್ಲ; ಬುಡೇನ್ ಸಾಬಿಯ ಕಠೋರ ಮನೋಭೂಮಿಕೆಯಿಂದ ಮನುಷ್ಯತ್ವದ ಚಿಲುಮೆ ಚಿಮ್ಮಿಸುವುದರಲ್ಲಿ. 'ಗೋವಿನ ಕತೆ'ಯಂಥ ನಮ್ಮ ಜಾನಪದ ಕೃತಿಯಲ್ಲಿಯೇ ಕಾಣುವ ಈ ಆರ್ಷ ಪ್ರತಿಮೆ ಇಲ್ಲಿ ಆಧುನೀಕರಣಗೊಂಡಿರುವ ರೀತಿ ಅದ್ಭುತವಾಗಿದೆ.'[20]

ಗಾಂಧಿ ಪ್ರಭಾವವನ್ನು ಪ್ರಸ್ತುತ ಅಧ್ಯಾಯವು ಕಟ್ಟಿಕೊಡುತ್ತದೆ. ಗಾಂಧಿ ನಿಧಿ ಸಂಗ್ರಹಣೆ, ನೂಲುವುದು ಹಾಗೂ ಕಾಂಗ್ರೆಸ್ ಸದಸ್ಯತ್ವ, ಖಾದಿ ಪ್ರಚಾರ ಮತ್ತು ಮಾರಾಟ, ವಿದೇಶಿ ವಸ್ತ್ರ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ ಮೊದಲಾದವು ಗಾಂಧಿ ಪ್ರಭಾವದಿಂದ ತುಳುನಾಡಿನಲ್ಲಿ ಸಾಧ್ಯವಾಯಿತು. ಗಾಂಧಿಯ ಅನುಯಾಯಿಗಳು ಇವುಗಳನ್ನು ಪ್ರಚುರಪಡಿಸುವಲ್ಲಿ ಇನ್ನಿಲ್ಲದಂತೆ ಶ್ರಮಿಸಿದರು. ತುಳುನಾಡಿನ ಬದುಕಿನಲ್ಲಿ ಹೊಸ ಬಗೆಯ ಪಲ್ಲಟವು ಕಾಣಿಸಿಕೊಂಡಿತು. ನೂಲುವಿಕೆ ತುಳುನಾಡಿಗೆ ಹೊಸತು. ಸತ್ಯಾಗ್ರಹ ಹೋರಾಟವು ಜನರ ಬದುಕಿನಲ್ಲಿ ಇನ್ನಿಲ್ಲದ ಬದಲಾವಣೆಗಳನ್ನು ತಂದಿತು.

ಅಡಿಟಿಪ್ಪಣಿ

೧. ಪೂರ್ವಾಪರ, ಯು.ಆರ್.ಅನಂತಮೂರ್ತಿ, ಅಕ್ಷರ ಪ್ರಕಾಶನ, ಹೆಗ್ಗೋಡು, ದ್ವಿತೀಯ ಮುದ್ರಣ ೧೯೯೬, ಪುಟ ೨೯೫.

೨. ಶತಮಾನದ ಸಾಹಿತ್ಯ ವಿಮರ್ಶೆ, ಸಂ. ಎಚ್.ಎಸ್.ರಾಘವೇಂದ್ರರಾವ್, ಇಳಾ ಪ್ರಿಂಟರ್ಸ್, ಬೆಂಗಳೂರು, ೨೦೦೧, ಪುಟ ೭೩೫-೭೩೬.

೩. ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ, ವಿ.ಎಸ್.ನಾರಾಯಣ ರಾವ್, ಗಾಂಧೀಯಾನ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೧೯೮೦, ಪುಟ ೧೫-೧೬.

೪. ಕರ್ನಾಟಕ ಚರಿತ್ರೆ (ಕ್ರಿ.ಶ. ೧೯೦೦-೧೯೫೬) ಸಂಪುಟ ೭, ಪ್ರ, ಸಂ. ಪ್ರೊ.ಬಿ.ಷೇಕ್ ಅಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ ೪೫.

೫. ದಕ್ಷಿಣ ಕನ್ನಡದ ಶತಮಾನದ ಕತೆಗಳು, ಸಂ. ಬಿ.ಜನಾರ್ಧನ ಭಟ್, ಕರ್ನಾಟಕ ಸಂಘ, ಪುತ್ತೂರು, ೨೦೦೩, ಪುಟ ೧೫೧.

ಅಧ್ಯಾಯ ೬. ತುಳುನಾಡಿಗೆ ಗಾಂಧೀಜಿಯ ಭೇಟಿಯ ಪರಿಣಾಮಗಳು

೬.೧. ಮದ್ಯಪಾನ ನಿಷೇಧ

೬.೨. ವಿಧವಾ ವಿವಾಹ ಮತ್ತು ಸರಳ ವಿವಾಹ

೬.೩. ಅಸ್ಪೃಶ್ಯತಾ ನಿವಾರಣೆ

೬.೪. ಏಕರೂಪಿ ಸಂಸ್ಕೃತಿಯ ಹೇರಿಕೆ

೬.೫. ಪತ್ರಿಕೆ ಮತ್ತು ಪುಸ್ತಕಗಳ ಪ್ರಭಾವ

೬.೬. ರಾಷ್ಟ್ರೀಯ ಶಾಲೆ

ಅಧ್ಯಾಯ ೬. ತುಳುನಾಡಿಗೆ ಗಾಂಧೀಜಿಯ ಭೇಟಿಯ ಪರಿಣಾಮಗಳು

೬.೧. ಮದ್ಯಪಾನ ನಿಷೇಧ

ತುಳುನಾಡಿಗೆ ಗಾಂಧಿ ಭೇಟಿಯಿಂದ ಹಲವಾರು ಪರಿಣಾಮಗಳು ಉಂಟಾದವು. ಅವುಗಳಲ್ಲಿ ಮದ್ಯಪಾನ ನಿಷೇಧವೂ ಒಂದು. ಅಸಹಕಾರ ಚಳುವಳಿಯ ಭಾಗವಾಗಿ ಬಂದ ಮದ್ಯಪಾನ ನಿಷೇಧ ಜಾಗೃತಿ ಜನರಲ್ಲಿ ಸ್ವನಿಯಂತ್ರಣ, ಮನೋಸಾಮರ್ಥ್ಯ ಹೆಚ್ಚಿಸಲು ಪ್ರಯತ್ನಿಸಿತು. ಕುಟುಂಬಗಳು ಈ ಚಟಕ್ಕೆ ಬಲಿಯಾಗದೆ ಆರ್ಥಿಕ ಸದೃಢತೆ ಪಡೆಯಲು ಉದ್ದೇಶಿಸಿತ್ತು.

ತುಳುನಾಡಿನಲ್ಲಿ ಮೂಲನಿವಾಸಿಗಳಾದ ಮಲೆಕುಡಿಯರಲ್ಲಿ ಬಯನಿ ಮರದ ಹೆಂಡ ಕುಡಿಯುವುದು ಸಾಮಾನ್ಯ ವಿಷಯವಾಗಿತ್ತು. ಹೆಂಗಸರೂ ದೊನ್ನೆ ಹಿಡಿದು ಕುಡಿಯುತ್ತಿದ್ದರು. ಬಿಲ್ಲವರಲ್ಲಿ ಮೂರ್ತೆಗಾರಿಕೆ ಕುಲಕಸುಬು. ಹೀಗಿರುವಾಗ ಹೆಂಡ ಕುಡಿಯುವುದು ಅಪರಾಧವೆನಿಸಿರಲಿಲ್ಲ. 'ಚೋಮನ ದುಡಿ' ಕಾದಂಬರಿಯಲ್ಲಿ ಚೋಮನ ಕುಡಿತದ ದೆಸೆಯಿಂದ ಕುಟುಂಬ ಹಾಳಾಗುತ್ತದೆ. ಆತನ ಗಂಡು ಮಕ್ಕಳು ಅದೇ ಚಟಕ್ಕೆ ಬಲಿಯಾಗುತ್ತಾರೆ. 'ಗಾಂಧಿ ಬಂದ' ಕಾದಂಬರಿಯಲ್ಲಿಯೂ ಕಳ್ಳು ಕುಡಿಯುವ ಮೂಲಗೇಣಿಯವರ ವಿವರಗಳಿವೆ. ಕಳ್ಳ ಭಟ್ಟಿಯ ತೋಮಸನ ಶರಾಬನ್ನು ಕದ್ದು ಕುಡಿಯುತ್ತಿದ್ದರು. 'ಉಲ್ಲಂಘನೆ' ಕಾದಂಬರಿಯಲ್ಲಿಯೂ ಮೂರ್ತೆಗಾರಿಕೆ ಮಾಡುತ್ತಿದ್ದ ಮರಗಳಿಂದ ಕಳ್ಳು ಕದ್ದು ಕುಡಿದು ತೌಡ ಮೃತನಾಗುತ್ತಾನೆ. ಗಾಂಧಿ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟಗಾರರು ಮದ್ಯ ಕುಡಿಯುವುದು ಬಿಡಬೇಕೆಂದು ಆಗ್ರಹಿಸುತ್ತಾರೆ.

'ಮರಳಿ ಮಣ್ಣಿಗೆ' ಕಾದಂಬರಿಯ 'ರಾಮ' ಮದ್ಯಪಾನ ನಿಷೇಧಕ್ಕಾಗಿ ಹೋರಾಡಿದ ಸನ್ನಿವೇಶವು ಮನಸೆಳೆಯುತ್ತದೆ. ಇದಕ್ಕಾಗಿ ಆತ ಮೊಗವೀರ ಸಮುದಾಯವನ್ನು ಆಯ್ದುಕೊಳ್ಳುತ್ತಾನೆ. ಅವರ ಮನಸ್ಸನ್ನು ಸೆಳೆಯಲು ಪ್ರಯತ್ನಿಸುತ್ತಾನೆ. ಆದರೆ ಯಶಸ್ಸೆನ್ನುವುದು ಮರೀಚಿಕೆಯಾಗುತ್ತದೆ. ಮದ್ಯಪಾನ ನಿಷೇಧ ಸಮಾಜ ಸುಧಾರಣಾ ಪ್ರಕ್ರಿಯೆಯಾಗಿ ಗುರುತಿಸಲ್ಪಟ್ಟರೂ ಪ್ರಧಾನವಾಗಿ ಬ್ರಿಟಿಷ್ ಸರಕಾರಕ್ಕೆ ದುಡ್ಡು ಹೋಗುವುದನ್ನು ತಪ್ಪಿಸುವ ಪ್ರಧಾನ ಆಶಯ ಹೊತ್ತಂತೆ ಕಂಡುಬರುತ್ತದೆ. 'ನಿಮ್ಮ ಬಲೆಯವರಿಂದ ಕಳ್ಳಿಗೆ, ಶರಾಬಿಗೆ ಎಂದು ಸರಕಾರಕ್ಕೆ ಎಷ್ಟು ದುಡ್ಡು ಹೋಗುತ್ತದೆ ಈಗ? ಗೊತ್ತೇ? ಎಂದನು.'(ಮರಳಿ ಮಣ್ಣಿಗೆ, ಪುಟ ೩೪೫)

ಬಯಲಾಟದ ಮಧ್ಯದಲ್ಲಿ ಮದ್ಯಪಾನ ನಿಷೇಧ ಚಳುವಳಿ ರೂಪುಗೊಂಡದ್ದನ್ನು ಪ್ರಧಾನವಾಗಿ ಗಮನಿಸಬಹುದು. ತುಳುನಾಡಿನ ಸಂಸ್ಕೃತಿಯಲ್ಲಿ ಪ್ರಮುಖ ಧಾರೆಯಾಗಿ ಗುರುತಿಸಬಲ್ಲ ಬಯಲಾಟದಲ್ಲಿ ಮೂವರು ದೇಶಭಕ್ತರ ಉಪನ್ಯಾಸ ಏರ್ಪಡಿಸಿ, ಪ್ರಮಾಣ ಮಾಡಿದುದು ಪ್ರಮುಖ ಅಂಶ. ಸ್ವಾತಂತ್ರ್ಯ ಚಳುವಳಿಯಿಂದ ಉಂಟಾದ ಮನಃಪರಿವರ್ತನೆ ಕ್ಷಣಿಕವಾಗುವುದು. ಜನರ ಬಲಹೀನತೆ, ದೃಢಚಿತ್ತತೆಯ ಕೊರತೆ ಎದ್ದು ಕಾಣುತ್ತದೆ. ಮದ್ಯಪಾನ ಬಿಟ್ಟುಬಿಡುವ ಮಾತು ಕೊಟ್ಟ ಆರು ತಿಂಗಳಿನಲ್ಲಿ ಮಾರಿಬಲೆಯವರು ಕುಡಿದು, ಗಲಾಟೆ ಮಾಡಿ

ಬಡಿದಾಡಿಕೊಂಡದ್ದು ಮನುಷ್ಯನ ಮಿತಿಗಳಿಗೆ ಸಾಕ್ಷಿಯಾಗುತ್ತದೆ. ಮನಃಪರಿವರ್ತನೆಗೆ ಮನುಷ್ಯನ ದೌರ್ಬಲ್ಯಗಳು ತಡೆಯೊಡ್ಡುತ್ತವೆ. ಕನಸುಗಳು ಬತ್ತಿಹೋಗುತ್ತವೆ ಎಂಬ ಚಿರಕಾಲದ ಸತ್ಯವನ್ನು ಕಾದಂಬರಿ ಧ್ವನಿಸುತ್ತದೆ.

'ಗಾಂಧಿ ಬಂದ' ಕಾದಂಬರಿ ಮದ್ಯಪಾನ ನಿಷೇಧದ ಸಂದರ್ಭವನ್ನು ಕತೆಯ ಚಲನೆಗೆ ತಡೆಯಾಗದಂತೆ ಚಿತ್ರಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಪರಿವರ್ತನೆಯ ಸರಣಿಯಲ್ಲಿ ಹುಟ್ಟಿಕೊಂಡ ಸುಧಾರಣೆ ಮದ್ಯಪಾನ ನಿಷೇಧ ಕಾರ್ಯಕ್ರಮ. ಮದ್ಯಪಾನ ನಿಷೇಧ ಚಳುವಳಿ ಮುನ್ನಲೆಗೆ ಬಂದಾಗ, ಸುರಾಪಾನ ನಿಷೇಧದ ಮಹತ್ವದ ಪ್ರಚಾರವನ್ನು ಚಳುವಳಿಗಾರರು ಮಾಡಿದರು.

'ಊರಲ್ಲಿರುವ ತಾಳೆ ಮರಗಳನ್ನು ಯಾರೊಬ್ಬರೂ ಗುತ್ತಿಗೆಗೆ ಕೊಡಬಾರದೆಂದೂ, ಪರಂಗಿ ಸರ್ಕಾರದ ಸೇಂದಿ-ಶರಾಬು ಅಂಗಡಿಗಳ ಗುತ್ತಿಗೆ ಯಾರೊಬ್ಬರೂ ನಿಲ್ಲಬಾರದೆಂದು ಮನವಿ ಮಾಡತೊಡಗಿದರು.'(ಗಾಂಧಿ ಬಂದ, ಪುಟ ೩೦೮)

ಸಮಸ್ಯೆಯ ಮೂಲಕ್ಕೆ ಲಗ್ಗೆ ಇಟ್ಟು ಹೋರಾಟ ಆರಂಭವಾಗುತ್ತದೆ. ಹೆಬ್ಬಾರರ ಆಳು ಮಕ್ಕಳು ಕಳ್ಳಭಟ್ಟಿ, ಸೇಂದಿ ಬಿಡುವಂತೆ ಮನವೊಲಿಕೆ ಆರಂಭವಾಗುತ್ತದೆ. ಬೆಸ್ತರ ಕೇರಿಯೂ ತಿಂಗಳಾಯರ ಆಣತಿಯಂತೆ ಎಲ್ಲಾ ಬೆಸ್ತರೂ ಜಾರಂದಾಯನ ಮೇಲೆ ಆಣೆ ಇಟ್ಟರು. ಗಿರಾಕಿಗಳೇ ಇಲ್ಲದೆ ಈರಪ್ಪ ಪೂಜಾರಿಯ ಕಳ್ಳಿಗೆ ಬೇಡಿಕೆ ನಿಂತೇ ಹೋಯಿತು. ಈರಪ್ಪ ಪೂಜಾರಿಯ ಸೇಂದಿ ಅಂಗಡಿನೂ ಧ್ವಂಸವಾಗುತ್ತದೆ. ಆತ ಕಳ್ಳು ಹೊತ್ತೊಯ್ಯುವ ಮಡಿಕೆಯನ್ನು ಅಂತಪ್ಪ, ಕೂಸ ಮೊಯಿಲಿಯವರು ಒಡೆದುಹಾಕುತ್ತಾರೆ.

ಮಾರಪ್ಪ, ತಿಂಗಳಾಯರು ಪೇಟೆಯಲ್ಲಿ ಸೇಂದಿ-ಶರಾಬು ಅಂಗಡಿಗಳ ಮುಂದೆ ಛಲಬಿಡದೆ ಸತ್ಯಾಗ್ರಹವನ್ನು ನಡೆಸಿದ್ದರು. ಪ್ರತಿಯೊಂದು ಕ್ರಿಯೆಗೂ ಸಮ ಮತ್ತು ವಿರುದ್ಧದ ಕ್ರಿಯೆ ಇರುತ್ತದೆ ಎನ್ನುವ ನಿಯಮದಂತೆ ಚಳುವಳಿಯನ್ನು ದಮನಗೊಳಿಸುವ ಕಾರ್ಯ ಸದ್ದಿಲ್ಲದೆ ಗುತ್ತಿಗೆಯವರಿಂದ ಆರಂಭವಾಗುತ್ತದೆ. ಸತ್ಯಾಗ್ರಹಿಗಳ ಮೇಲೆ ನಾರುವ ಮೀನಿನ ನೀರಿನ ಎಸೆತ, ಮೆಣಸಿನ ನೀರಿನ ಹೊಯ್ಯುವಿಕೆ ಮುಂತಾದ ಕಾಟಗಳು ನಿರಂತರ ನಡೆದವು. ಚಳುವಳಿ ಕೊನೆಗೊಂಡದ್ದು ಪೋಲಿಸರ ಲಾಠಿ ಛಾರ್ಜು ಹಾಗೂ ಚಳುವಳಿಗಾರರ ಬಂಧನದಿಂದ. ಅಂತಪ್ಪ ಪೂಜಾರಿ, ಕೂಸ ಮೊಯಿಲಿ ಕಳ್ಳ ಭಟ್ಟಿ ತೋಮಸನ ಪರಿಕರಗಳನ್ನೆಲ್ಲ ಸುಟ್ಟು ಹಾಕುತ್ತಾರೆ.

೬.೨. ವಿಧವಾ ವಿವಾಹ ಮತ್ತು ಸರಳ ವಿವಾಹ

ವಿವಾಹ ಎನ್ನುವುದು ಗಂಡು ಹೆಣ್ಣಿನ ಪವಿತ್ರ ಬಂಧನ. ವಿವಾಹ ಸ್ವರ್ಗದಲ್ಲಿಯೇ ನಡೆಯುತ್ತದೆ ಎಂಬ ಮಾತಿದೆ. ವಿವಾಹವಾಗುವಾಗ ಆಸ್ತಿ, ಸ್ಥಾನಮಾನ, ರೂಪ ಮೊದಲಾದವನ್ನು ಗಮನಿಸಲಾಗುತ್ತದೆ. ತುಳುನಾಡಿನಲ್ಲಿ ಶ್ರೀಮಂತ ಮನೆತನಗಳ ವೈಭವ ಹಿರಿದು. ಸ್ವಾತಂತ್ರ್ಯ ಹೋರಾಟದ ಕಾಲಮಾನದಲ್ಲಿ ಸಮಾಜದಲ್ಲಿದ್ದ ಅಂಧಶ್ರದ್ಧೆಗಳ ಬಗ್ಗೆ ಸೂಕ್ತ ಚಿಂತನೆ ನಡೆದು ಹೊಸ ರೀತಿಯ ಆಲೋಚನೆಗಳನ್ನು ಗಾಂಧೀಜಿಯ ಸಂಪರ್ಕಕ್ಕೆ ಬಂದವರು

ತಿಳಿದುಕೊಳ್ಳುತ್ತಿದ್ದರು. ಬ್ರಾಹ್ಮಣ ಸಮುದಾಯದಲ್ಲಿ ಮರುಮದುವೆಗೆ ಪರಿಹಾರ ಇಲ್ಲ. ವಿಧವೆಯ ಕೇಶಮುಂಡನ ಮಾಡಿಸುವ ಪದ್ಧತಿ ಜೊತೆಗೆ ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗುತ್ತಿತ್ತು. ಆದರೆ ತಳಸಮುದಾಯದಲ್ಲಿ ಮರುಮದುವೆಗೆ ಅವಕಾಶವಿತ್ತು.

'ಇಂದಿರಾಬಾಯಿ' ಕಾದಂಬರಿಯಲ್ಲಿ ಭಾಸ್ಕರ ವಿಧವೆ ಇಂದಿರಾಳನ್ನು ಮದುವೆಯಾಗುವ ಸಂದರ್ಭವಿದೆ. ಕನ್ನಡದ ಪ್ರಥಮ ಕಾದಂಬರಿಯಲ್ಲಿ ವಿಧವಾ ವಿವಾಹದ ಪ್ರಸ್ತಾಪ ಇರುವುದು ಶಿಕ್ಷಣ ಹಾಗೂ ಗಾಂಧಿ ಪ್ರಭಾವದಿಂದ ಬದಲಾದ ಚಿಂತನೆಗಳಿಂದ ಮಾತ್ರ ಸಾಧ್ಯ.

'ಔದಾರ್ಯದ ಉರುಳಲ್ಲಿ' ಕಾದಂಬರಿ ಗಾಂಧಿಯ ಆದರ್ಶಗಳನ್ನು ಪೂರ್ಣ ಮನಸ್ಸಿನಿಂದ ಪಾಲಿಸುತ್ತಿದ್ದ ರಾಧಾಕೃಷ್ಣನ ದೃಢತೆ ಅರ್ಥವಾಗುವುದು ಆತನ ವಿವಾಹದ ಸಂದರ್ಭದಲ್ಲಿ, ವಿವಾಹ ಪೂರ್ವದಲ್ಲಿ ವಧುವಿನೊಡನೆ ತನ್ನ ಯೋಜನೆಗಳನ್ನು, ಬಡತನದ ಬದುಕನ್ನು ತಿಳಿಸಿ ಒಪ್ಪಿಗೆ ಕೇಳುತ್ತಾನೆ. 'ಇನ್ನು ಲಗ್ನದ ವಿಚಾರ. ಅದನ್ನು ಎಷ್ಟು ಸುಲಭದಲ್ಲಿ, ಎಷ್ಟು ಕಡಿಮೆ ಖರ್ಚಿನಲ್ಲಿ ಮಾಡುತ್ತೀರೋ ಮಾಡಬೇಕು. ಹಾಗೆ ಮಾಡಿ ಆದ ಉಳಿತಾಯವನ್ನೆಲ್ಲ ಗಾಂಧೀ ಫಂಡಿಗೆ ಕೊಡಬೇಕು. ಮದುವೆಯ ಮನೆಗೆ ಸಕ್ಕರೆ ಬರಕೂಡದು. ಮದುವಣಗಿತ್ತಿಗೆ ಖಾದಿ ಉಡಿಸಬೇಕು' ಎಂದು ಒಂದೊಂದಾಗಿ ಗಾಂಧಿ ಕರಾರುಗಳನ್ನು ಹಾಕಿದನು.(ಔದಾರ್ಯದ ಉರುಳಲ್ಲಿ, ಪುಟ ೭೬)

ಮಂಜಯ್ಯನ ಮಗಳನ್ನು ವಿವಾಹವಾಗಿ ಬಾಳಪೂರ್ತಿ ಸ್ವರಾಜ್ಯ, ದಲಿತರ ಉದ್ಧಾರ, ರಾಷ್ಟ್ರೀಯ ಶಾಲೆ, ಪತ್ರಿಕೆ, ಕಷ್ಟದಲ್ಲಿರುವವರಿಗೆ ಸಹಾಯ ಹೀಗೆ ತನ್ನದಲ್ಲದ ತಾಪತ್ರಯಗಳನ್ನು ತಾನೂ ಹೆಗಲೊಡ್ಡಿ, ಮಡದಿಯ ಮೇಲೂ ಹಾಕಿದಾಗ, ಸತ್ಯ ಮನಸ್ಫೂರ್ತಿಯಾಗಿ ಆ ಎಲ್ಲಾ ಕೆಲಸಗಳನ್ನು ನಿಭಾಯಿಸಿದ್ದು ವಿಶೇಷ. ರಾಧಾಕೃಷ್ಣ ಭಿಕ್ಷಾವೃತ್ತಿಯನ್ನೂ ಮಾಡಬೇಕಾಯಿತು. ಮುಂದಾಲೋಚನೆ, ದಣಿವರಿಯದ ದುಡಿತ, ಆರ್ಥಿಕ ಯೋಜನೆಗಳಿಂದ ಹಲವು ಕೆಲಸಗಳು ಸಾಧ್ಯವಾದವು. ಶ್ರಮಸಂಸ್ಕೃತಿಯ ಮಹತ್ವ ವ್ಯಕ್ತವಾಗಿದೆ.

'ಗಾಂಧಿ ಬಂದ' ಕಾದಂಬರಿ ವಿವಾಹಗಳು ಗಾಂಧಿ ತತ್ವಗಳ ಪ್ರಭಾವದಿಂದ ನೆರವೇರಿದುದನ್ನು ವಿವರಿಸುತ್ತದೆ. ಗಾಂಧಿ ತತ್ವಗಳು ಸ್ವಾತಂತ್ರ್ಯ ಹೋರಾಟದ ಜೊತೆಗೆ ಬೆಳೆದು ಬಂದವು. ಸಮಾಜದ ರೂಢಿಗತ ಮೂಢನಂಬಿಕೆಗಳ ವಿರುದ್ಧ ಗಾಂಧಿ ಅನುಯಾಯಿಗಳ ಶ್ರಮ ಮೆಚ್ಚತಕ್ಕದ್ದು. ಮಾರಪ್ಪ–ದಾರುವಿನ ವಿವಾಹ, ಹಾಗೂ ಅದ್ರಾಮ–ದ್ರೌಪದಿಯ ವಿವಾಹದ ಹಿಂದೆ ಗಾಂಧಿ ಮೌಲ್ಯಗಳು ಕೆಲಸ ಮಾಡುತ್ತವೆ. ಮಾರಪ್ಪ, ದಾರು 'ಶಿಖಂಡಿ' ಎಂಬ ಸುದ್ದಿ ತಿಳಿಯುತ್ತಿದ್ದಂತೆ, ಆಕೆಯ ಮೇಲೆ ತೀವ್ರ ಕನಿಕರಗೊಂಡು, ಬದುಕು ಕಲ್ಪಿಸಿಕೊಡುವ ತೀವ್ರ ಆದರ್ಶದಿಂದ ವಿವಾಹವಾಗುತ್ತಾನೆ. ಅದ್ರಾಮ ವಿಧವೆ ದ್ರೌಪದಿಯನ್ನು ವಿವಾಹವಾಗುವುದು ಗಾಂಧಿ ಮೌಲ್ಯಗಳಿಂದ ಪ್ರೇರಿತವಾದವು. ಜಾತಿ ಧರ್ಮದ ಗೋಡೆಯನ್ನು ಕೆಡವಿ ಹಾಕುವ ಗಾಂಧಿ ಮೌಲ್ಯಗಳು ಇಲ್ಲಿ ಪ್ರಭಾವ ಬೀರಿವೆ. ಬ್ರಾಹ್ಮಣ ವಿಧವೆ ದ್ರೌಪದಿಗೆ ಅದ್ರಾಮ ತನ್ನ ಜಾತಿಯವರನ್ನೂ ವಿರೋಧಿಸಿ ವಿವಾಹವಾಗಿ, ಆಕೆಗೊಂದು ಸಮಾಧಾನದ ಬಾಳು ನೀಡಲು ಪ್ರಯತ್ನಿಸುತ್ತಾನೆ. ಗುತ್ತಿನ ಸಹಕಾರದಿಂದ ಅದೂ ಸುಲಭಸಾಧ್ಯವೆನಿಸುತ್ತದೆ. ತುಳುನಾಡಿನಲ್ಲಿ

ಕಾರ್ನಾಡ್ ಸದಾಶಿವರಾವ್, ಕುದ್ಮುಲ್ ರಂಗರಾವ್ ವಿಧವಾ ವಿವಾಹ, ಅನ್ಯಜಾತಿ ವಿವಾಹ ಮೊದಲಾವನ್ನು ಪ್ರೋತ್ಸಾಹಿಸಿದವರು. ಅವರ ಪ್ರಭಾವ ವಲಯದಲ್ಲೇ ಇದ್ದ ಅದ್ರಾಮ ದ್ರೌಪದಿಯನ್ನು ಬೋಳು ಮಂಡೆಯವಳಾಗಿ ಕಾಣಲು ಬಯಸುವುದಿಲ್ಲ.

ಪರದೇಶಿ ವಸ್ತ್ರ ಬಹಿಷ್ಕಾರದಲ್ಲಿ ಅದ್ರಾಮನನ್ನು ಕಳೆದುಕೊಂಡು ಮಗದೊಮ್ಮೆ ವಿಧವೆಯಾಗುವ ದ್ರೌಪದಿ ಸ್ವ ಇಚ್ಛೆಯಿಂದ ಬೋಳಾಗುತ್ತಾಳೆ. ಗಾಂಧಿ ಮಂಗಳೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ದ್ರೌಪದಿ ನಗನಾಣ್ಯಗಳನ್ನು ಗಾಂಧಿಗೆ ಅರ್ಪಿಸಿದಾಗ, ಮನಕರಗಿದ ಗಾಂಧಿ ಅದರಿಂದ ಆಭರಣಗಳನ್ನು ತೆಗೆದು ದ್ರೌಪದಿಗೆ ಧರಿಸಲು ನೀಡಿ, ಹಣೆಗೆ ಕುಂಕುಮ, ಮುಡಿಗೆ ಸೇವಂತಿ ನೀಡುವುದು ಹೊಸ ಮನ್ವಂತರವನ್ನು ಸೂಚಿಸುತ್ತದೆ. ಸಮಾಜದ ಬದಲಾವಣೆಯ ಗುರುತಾಗುತ್ತದೆ.

ನಾ.ಮೊಗಸಾಲೆ ಅವರ 'ಮುಖಾಂತರ' ಕಾದಂಬರಿಯಲ್ಲಿ ಶಂಕರ ಭಾಗೀರಥಿಯನ್ನು ವಿವಾಹವಾಗುತ್ತಾನೆ. ಭಾಗೀರಥಿ ಹುಟ್ಟುವಾಗಲೇ ಮೆಳ್ಳೆಗಣ್ಣು, ಸಿರಿಬಾಯಿಯ ಜೊತೆಗೆ ಕಪ್ಪು ಬಣ್ಣವನ್ನೂ ಪಡೆದು ವಿವಾಹದಿಂದ ವಂಚಿತಳಾಗಿದ್ದಳು. ಶಂಕರ ಬಾಹ್ಯಸೌಂದರ್ಯ ಕಡೆಗಣಿಸಿ ವಿವಾಹವಾಗುವುದು ಗಾಂಧಿಮೌಲ್ಯಗಳಿಂದ ಸಾಧ್ಯವಾಗುತ್ತದೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ, ಗೋಪಾಲ ಹಾಗೂ ಪಾರಳ ನಡುವಿನ ಮಾತುಕತೆಯಲ್ಲಿ ವಿಧವೆಗಿರುವ ಸ್ವಾತಂತ್ರ್ಯ ಹಾಗೂ ಮರುವಿವಾಹದ ಕುರಿತು ಚರ್ಚೆ ನಡೆಯುತ್ತದೆ. ವಿಧವಾ ವಿವಾಹ ಹಾಗೂ ಸಕೇಶಿಯಾಗುವ ಬಗ್ಗೆ ಜನರ ಮನಸ್ಥಿತಿಯಲ್ಲಿ ಆಗಬೇಕಾದ ಬದಲಾವಣೆಯ ಅನಿವಾರ್ಯತೆ ಹಾಗೂ ಅಗತ್ಯತೆಯ ಕುರಿತು ಗೋಪಾಲನ ಮಾತುಗಳನ್ನು ಅರಗಿಸಿಕೊಳ್ಳಲು ಪಾರಳಿಂದ ಆಗುವುದಿಲ್ಲ. ಮಾಸ್ತರನಾದ, ಪತ್ರಿಕೆಗಳನ್ನು ಓದುವ, ಆಧುನಿಕ ಬದಲಾವಣೆಗಳನ್ನು ಗಮನಿಸುತ್ತಿದ್ದ ಹಾಗೂ ಆಚರಣೆ, ಸಂಪ್ರದಾಯಗಳ ಕುರಿತು ವಿಶ್ಲೇಷಣೆ ಮಾಡುತ್ತಿದ್ದ ಗೋಪಾಲನಿಗೂ, ಗೃಹಿಣಿಯಾಗಿ ಮನೆಯನ್ನು ಸಂಭಾಳಿಸುತ್ತಿರುವ ಪಾರಳ ಚಿಂತನೆಗಳಲ್ಲೂ ವ್ಯತ್ಯಾಸವಿರುವುದನ್ನು ಕಾಣಬಹುದು. ವಿಧವೆಯರು ವಿವಾಹವಾಗುವ, ಸಕೇಶಿಯಾಗುವ ಪ್ರಗತಿಪರ ಚಿಂತನೆಯನ್ನು ಗೋಪಾಲ ಒಪ್ಪಿಕೊಂಡಿದ್ದರೆ, ಪಾರ ಅದನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ತನ್ನ ತಾಯಿ ಮತ್ತೆ ಸಕೇಶಿಯಾಗುವುದನ್ನು ಒಪ್ಪಿಕೊಳ್ಳಲು ಅವಳಿಂದ ಆಗಲಿಲ್ಲ. ಮರುವಿವಾಹದ ಬಗ್ಗೆ ಯೊಚಿಸುವುದೂ ಆಕೆಗೆ ಕಷ್ಟವಾಯಿತು. ಮನುಷ್ಯನ ವಿಚಾರಗಳಲ್ಲಿ ಬದಲಾವಣೆ ತರುವ ಕೆಲಸ ಪತ್ರಿಕೆಯಲ್ಲಿ ವಿಚಾರಗಳನ್ನು ಓದಿದಷ್ಟು ಸುಲಭವಲ್ಲ ಎಂದು ಗೋಪಾಲನಿಗೆ ಅನಿಸಿತು. ಆದರೆ ಮುಂದೆ ಗೋಪಾಲ ಸರ್ಪ ಕಡಿದು ಮೃತನಾದಾಗ ಪಾರ ಕರಿಮಣಿ ತೆಗೆದರೂ ತಲೆಬೋಳಿಸುವುದಿಲ್ಲ. ಪಂಡಿತರು ಎಚ್ಚರಿಸಿದರೂ ಮನೆಯವರು ಒತ್ತಾಯ ಮಾಡುವುದಿಲ್ಲ. ನಿಧಾನಗತಿಯಲ್ಲಿ ವಿಧವೆಯರ ಕುರಿತ ಜನರ ಮನೋಭಾವ ಬದಲಾಗುವುದನ್ನು ಕಾಣಬಹುದು. ತಾಯಿ ಮನೆ, ಗಂಡನ ಮನೆ ಎರಡೂ ಕಡೆ ನೆಲೆ ತಪ್ಪಿದ ಪಾರ ಅಡಿಗೆ ಕೆಲಸಕ್ಕೆ ಸಹಾಯಕಿಯಾಗಿ ಜೀವನ ಸಾಗಿಸುತ್ತಾಳೆ. ಮಾಧವನ ಮನೆಗೆ ಹೋದಾಗ ಅಡಿಗೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ. ವಿಧವೆ ಎಂಬ ದೂಷಣೆಯ ಅನುಭವ ಆಕೆಗೆ ಆಗುವುದಿಲ್ಲ.

೬.೩. ಅಸ್ಪೃಶ್ಯತಾ ನಿವಾರಣೆ

ದಲಿತರ ಉದ್ಧಾರ ತುಳುನಾಡಿನಲ್ಲಿ ಕುದ್ಮಲ್ ರಂಗರಾಯರಿಂದ ಆರಂಭವಾಗಿತ್ತು. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಕೆಳವರ್ಗದವರ ಸ್ಥಾನಮಾನ ಹೆಚ್ಚಿಸಲು ಪ್ರಯತ್ನಿಸಿದರು.

ಶಿವರಾಮಕಾರಂತರ 'ಚೋಮನ ದುಡಿ' ಕಾದಂಬರಿ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ರಚಿತವಾದರೂ ಸ್ವಾತಂತ್ರ್ಯ ಹೋರಾಟದ ಕುರಿತು ಯಾವ ಮಾಹಿತಿಯನ್ನೂ ನೀಡುವುದಿಲ್ಲ. ಆದರೆ ಚೋಮನ ಕನಸುಗಳನ್ನು ಕಂಡಾಗ ಆ ಕನಸುಗಳ ಹಿಂದೆ ಸ್ವಾತಂತ್ರ್ಯ ಹೋರಾಟದ ಪ್ರಭಾವ ಇರುವ ಮುನ್ಸೂಚನೆ ಲಭ್ಯವಾಗುತ್ತದೆ. ಎಂದೂ ಕೃಷಿಕನಾಗಲಾರ ಎಂಬ ತಳ ಸಮುದಾಯದಲ್ಲಿ ಬೆಳೆದ ಚೋಮ ಎತ್ತುಗಳನ್ನು ಸಾಕಿ ಒಂದು ಗೇಣಾದರೂ ಗದ್ದೆಯನ್ನು ಉಳುವ ಕನಸು ಕಾಣುತ್ತಾನೆ. ಅದಕ್ಕಾಗಿ ಮತ್ತೆ ಮತ್ತೆ ಪ್ರಯತ್ನ ಪಡುತ್ತಾನೆ. ರಾಷ್ಟ್ರೀಯ ಸ್ವಾತಂತ್ರ್ಯದ ಕಲ್ಪನೆ ಇಲ್ಲಿ ಇಲ್ಲವಾದರೂ ತಳಸಮುದಾಯದ ಚೋಮ ಸ್ವತಂತ್ರನಾಗುವ ಹಂಬಲ ವ್ಯಕ್ತಪಡಿಸುತ್ತಾನೆ. ತಾನು ಗೇಣಿಗೆ ಜಾಗ ಪಡೆದು ಗದ್ದೆ ಉಳಲು ಆಸೆಪಡುತ್ತಾ ಧಣಿಗಳಲ್ಲಿ ಆ ಬೇಡಿಕೆಯನ್ನು ಇಡುತ್ತಾನೆ. ಧಣಿ ಸಂಕಪ್ಪಯ್ಯ ಅದರ ವಿರೋಧಿ ಅಲ್ಲವಾದರೂ ತಾಯಿಯ ಒಪ್ಪಿಗೆ ದೊರೆಯದೆ ನಕಾರಾತ್ಮಕ ಉತ್ತರ ನೀಡಬೇಕಾಗುತ್ತದೆ. ಚೋಮ ಮಗದೊಮ್ಮೆ ಬೇಡಿಕೆ ಇತ್ತಾಗಲೂ ಸಂಕಪ್ಪಯ್ಯ ಒಪ್ಪುವುದಿಲ್ಲ. ಕೊನೆಗೂ ಚೋಮ ಕೃಷಿಕನಾಗದೆ ಪ್ರಾಣ ಬಿಡುತ್ತಾನೆ.

'ಅತ್ಯಂತ ಸುಖವಾದ ಕನಸು. ಸ್ವಾತಂತ್ರ್ಯ ಕಲ್ಪನೆಯ ಉತ್ಸಾಹದಿಂದ ಇಂದು ಬೆಳಗಿಗೇ ಚೋಮ ದುಡಿಯನ್ನು ಹಿಡಿದಿದ್ದಾನೆ.'(ಚೋಮನ ದುಡಿ, ಪುಟ ೩೬) ಗೇಣಿಗೆ ಗದ್ದೆ ನೀಡಲು ನಿರಾಕರಿಸಿದ ಧಣಿಯ ಮನೆಗೆ ಕೆಲಸ ತಪ್ಪಿಸಿ ಚೋಮ ದುಡಿ ಬಾರಿಸುತ್ತಿದ್ದಾನೆ.

ಜಾತಿಯನ್ನು ಬದಲಾಯಿಸಿ ಕ್ರೈಸ್ತನಾಗಿ ಬೇಸಾಯಗಾರನಾಗುವ ಸುಖವನ್ನೂ ಕಾಣುತ್ತಾನೆ. ಮಗ ಗುರುವ ಜಾತಿ ಕೆಟ್ಟರೂ ಬೇಸಾಯಗಾರನಾದ. ಆದರೆ ಚೋಮ ತಾನು ನಂಬಿದ ದೈವವನ್ನು ಮೀರಿ ಹೋಗಲಾಗದೆ ಜಾತಿ ಬಿಡದೆ ಹೋಗುತ್ತಾನೆ. ಕೊನೆಗೂ ಸ್ವತಂತ್ರನಾಗದೆ ಕಮರಿಹೋಗುವ ದುರಂತ ಇದೆ.

'ಔದಾರ್ಯದ ಉರುಳಲ್ಲಿ' ಕಾದಂಬರಿ ಅಸ್ಪೃಶ್ಯತಾ ನಿವಾರಣೆಯ ಮೇಲೆ ಬೆಳಕು ಚೆಲ್ಲುತ್ತದೆ. ರಾಧಾಕೃಷ್ಣ ಗಾಂಧಿ ಆದರ್ಶದಂತೆ 'ಪಂಚಮರ ಉನ್ನತಿ'ಗಾಗಿ ಶ್ರಮಿಸುತ್ತಾನೆ. ಅವರನ್ನು ಒಟ್ಟು ಸೇರಿಸಿ ಮದ್ಯಪಾನ ನಿಷೇಧದ ಕುರಿತು ಮಾತಾಡಿಸಲು ಪ್ರಯತ್ನಿಸುತ್ತಾನೆ. ನೆರೆಪ್ರವಾಹದ ಸಂದರ್ಭದಲ್ಲಿ 'ಹೊಲೆಯ' ಗಂಡುಮಗುವೊಂದನ್ನು ಸಾಕಿ ಸಲಹುವುದು ಆತನ ಉನ್ನತ ಆದರ್ಶಕ್ಕೆ ಒಂದು ಸಂಕೇತ. ಕೊನೆಗೆ ಆ ಮಗುವೂ ಚೇತರಿಸದೆ ಅಸುನೀಗುವುದು ದುರಂತ. ಅದರ ಸಾವನ್ನು ರಾಧಾಕೃಷ್ಣ ಕೊನೆಯವರೆಗೂ ಮರೆಯದೆ ಇರುವುದು ಆತನ ಗಾಂಧಿತತ್ವಗಳ ಅನುಸರಣೆಗೆ ಸಾಕ್ಷಿ. ಮಂಜಯ್ಯನವರ ಮನೆಯಲ್ಲಿ ದಲಿತರ ಉದ್ಧಾರಕ್ಕಾಗಿ ರಾಧಾಕೃಷ್ಣನಿಂದ ಭಾಷಣವನ್ನು ಏರ್ಪಡಿಸಲಾಗುತ್ತದೆ. ಹೊಲೆಯವರು ದೂರದ ಗದ್ದೆ ಅಂಚಿನಲ್ಲಿ ಕುಳಿತು ಆಲಿಸುತ್ತಾರೆ. ಅವರಿಗೆ ಏನೂ ಅರ್ಥವಾಗುವುದಿಲ್ಲ.

'ಇನ್ನೂ ದೂರದಲ್ಲಿ ....ಗದ್ದೆ ಅಂಚಿನಲ್ಲಿ ಕುಳಿತು, ಬೆಳುದಿಂಗಳಿನಲ್ಲಿ ಕಣ್ಣು ಬಾಡಿಸುತ್ತಿದ್ದ ಕೆಲವು ಹೊಲೆಯರು "ಅವರೇನು ಅಂದದ್ದು" ಎಂದು ಉಳಿದವರನ್ನು ವಿಚಾರಿಸಿದರು.'

ಅಸ್ಪೃಶ್ಯತೆ, ವಿಚಾರದ ಕೊರತೆ ಹೊಲೆಯರನ್ನೂ ಇನ್ನೂ ಗುಲಾಮತನದಲ್ಲಿ ಬದುಕುವಂತೆ ಮಾಡಿರುವುದನ್ನು ಗಮನಿಸಬಹುದು. ರಾಧಾಕೃಷ್ಣನ ಪ್ರಯತ್ನವು ಅವರನ್ನು ಮುಟ್ಟುವುದಿಲ್ಲ. ವಿಷಯ ಅರಿವಾಗದೆ ಬದಲಾವಣೆ ಹೇಗೆ ಸಾಧ್ಯ?

ಬ್ರಾಹ್ಮಣನಾದ ರಾಧಾಕೃಷ್ಣ, ಸಿರ್ಸಿಯ ನಾಗೇನಹಳ್ಳಿಯಲ್ಲಿ ಆಸ್ತಿ, ಮನೆಮಠ ಕಳೆದುಕೊಂಡು ಜೈಲು ಪಾಲಾದವರ ಮಕ್ಕಳನ್ನು ಜಾತಿಬೇಧವಿಲ್ಲದೆ ತನ್ನ ಮನೆಯಲ್ಲಿ ಸಾಕಲು ನೀಡುವುದು ಜಾತಿಯ ಪ್ರಜ್ಞೆಯನ್ನು ರಾಧಾಕೃಷ್ಣ ಬಿಟ್ಟಿದ್ದನೆಂಬುದಕ್ಕೆ ಸಾಕ್ಷಿ. ಸುಮಾರು ವರುಷಗಳ ಕಾಲ ಅವರನ್ನು ಮನೆಮಕ್ಕಳಂತೆ ನೋಡಿಕೊಳ್ಳುತ್ತಾರೆ.

'ಪಂಚಮರ ಉನ್ನತಿ ರಾಧಾಕೃಷ್ಣನ ಕನಸುಗಳಲ್ಲೊಂದಾಗಿತ್ತು. ಈ ನೋಟವನ್ನು ನೋಡಿದ ಆತನು 'ಇವರ ಕಾಯಿಲೆಗೆ ಮದ್ದೇ? ಅಜ್ಞಾನಕ್ಕೆ ಮದ್ದೇ? ಬಡತನಕ್ಕೆ ಮದ್ದೇ?' ಎಂಬ ವಿಚಾರತರಂಗಕ್ಕೆ ಗುರಿಯಾದ.'(ಔದಾರ್ಯದ ಉರುಳಲ್ಲಿ, ಪುಟ ೩೫)

ಪಂಚಮರ ಉದ್ಧಾರ ಎನ್ನುವುದು ಮೂಲದಿಂದ ಆಗಬೇಕಾದ ತುಂಬಾ ತಾಳ್ಮೆ ತಂದು ಮಾಡಬೇಕಾದ ಕೆಲಸ. ಸ್ವರಾಜ್ಯ ಗಳಿಕೆಯ ಹೋರಾಟಕ್ಕಿಂತ ಪೂರ್ವ ಅವರ ಜ್ಞಾನ, ಬಡತನ, ಕಾಯಿಲೆಯಂತಹ ಸಮಸ್ಯೆಗಳನ್ನು ಪರಿಹರಿಸುವ ಆಶಯ ರಾಧಾಕೃಷ್ಣ ವ್ಯಕ್ತಪಡಿಸುತ್ತಾನೆ. ಮದ್ಯಪಾನ ಬಿಟ್ಟರೆ ಸರಿಯಾಗಬಹುದು ಎಂದು ತರ್ಕಿಸುತ್ತಾನೆ.

'ಗಾಂಧಿ ಬಂದ' ಕಾದಂಬರಿಯು ಅಸ್ಪೃಶ್ಯತಾ ನಿವಾರಣೆ ಕುರಿತ ಮಹತ್ವದ ಒಳನೋಟಗಳನ್ನು ಹೊಂದಿದೆ. ಹಕ್ಕಿಗಾಗಿ ಎಂದೂ ಹೋರಾಟ ಮಾಡದ, ಅನ್ಯಾಯ ನಡೆದರೂ ಎದುರು ಮಾತಾಡದ ತಳಸಮುದಾಯದವರಿಗೆ ಗಾಂಧಿ ಬಿಡುಗಡೆಯ ಸಂಕೇತದಂತೆ ಗೋಚರಿಸುತ್ತಾನೆ. ಕೊರಗರ ಐತು ಗಾಂಧಿಗಾಗಿ ಹಂಬಲಿಸುವ ಪರಿ ಗಮನಾರ್ಹ. ತಮ್ಮ ಆಹಾರವಾದ ಆಮೆಯನ್ನು ಕಷ್ಟದಲ್ಲಿ ಹಿಡಿದು ತಿಂಗಳಾಯರ ಬೋಧನೆಯಂತೆ ಬಿಡುವ ಐತು ಅದರಂತೆ ನಡೆಯುತ್ತಾನೆ. ಕಷ್ಟಪಟ್ಟು ಹಿಡಿದ ಆಮೆಯನ್ನು ಬಿಟ್ಟು ಬಿಡುತ್ತಾನೆ. 'ಅಹಿಂಸೆ'ಯ ಮೌಲ್ಯ ಕೆಲಸ ಮಾಡಿಬಿಡುತ್ತದೆ.

ತುಳುನಾಡಿನಲ್ಲಿ ಜಾತಿವ್ಯವಸ್ಥೆ ನಿರ್ಮೂಲನೆ ತುಂಬಾ ಜಟಿಲವಾದ ಕಾರ್ಯ ಎಂಬುವುದನ್ನು ಕಾದಂಬರಿ ಕೆಲವು ಘಟನೆಗಳ ಮೂಲಕ ಧ್ವನಿಸುತ್ತದೆ. ದಾರುವಿನ ತಾಯಿಯ ಬೊಜ್ಜದೂಟ, ದೇವಸ್ಥಾನದೊಳಗೆ ಶೂದ್ರರ ಪ್ರವೇಶ ಈ ಎರಡೂ ಸಂದರ್ಭಗಳು ಕ್ಷಕಿರಣ ಚೆಲ್ಲುತ್ತವೆ. ಬ್ರಾಹ್ಮಣ-ಅಬ್ರಾಹ್ಮಣರ ಪಂಕ್ತಿಬೇಧ ವ್ಯತ್ಯಾಸವನ್ನು ನಿಲ್ಲಿಸುವಂತೆ ಮಾರಪ್ಪ, ತಿಂಗಳಾಯರೂ ಅಬ್ರಾಹ್ಮಣರ ನಡುವಿನ ಅಸ್ಪೃಶ್ಯತೆಯ ಗಲಾಟೆ, ಕಾಪಾಡುವ ಮಡಿವಂತಿಕೆ ಇವೆರಡೂ ಬಸವಳಿಯುವಂತೆ ಮಾಡುತ್ತವೆ.

'ಜಾರಿಗೆ ಬೆಟ್ಟಲ್ಲಿ ನಿನ್ನೆಯೇ ಐತು ಕೊರಗನ ಸಂತಾನ ಬೀಡುಬಿಟ್ಟಿತ್ತು. ಕೊಳಲು ಮತ್ತು ಡೋಲು ಸೇವೆಗಾಗಿ ನಿನ್ನೆ ಬೆಳಿಗ್ಗೆಯೇ ಆತ ಕಟ್ಟಹುಣಿ ಏರಿದ್ದ. ಈಗ ಬಂದಿರುವ ಕೊರಗರು ಆತನ ಪಕ್ಕಕ್ಕೆ ಕುಳಿತುಕೊಂಡರೆ, ಕೊರಗರಿಗಿಂತ ಸ್ವಲ್ಪ ಮೇಲೆಂದು ಭಾವಿಸುವ ಮನ್ಸರು, ಮುಂಡಾಲರು ಅವರಿಗಿಂತ ಬಹಳಷ್ಟು ದೂರದಲ್ಲೇ ಕೂತು, ತಮ್ಮ ಅಂತರ ಮಡಿವಂತಿಕೆ ಕಾಪಾಡಿಕೊಂಡರು. ಕೊರಗ–ಮನ್ಸ–ಮುಂಡಾಲರಿಗಿಂತ ತಾವು ಬಹಳಷ್ಟು ಎತ್ತರದಲ್ಲಿರುವವರೆಂದು ಹೆಬ್ಬಾರರಷ್ಟೇ ಅಸ್ಪೃಶ್ಯತೆ ತೋರುತ್ತಿರುವ ಮುಗೇರರು ಆ ಕಟ್ಟಹುಣಿಯಲ್ಲೇ ಕೂರದೆ ಅದಕ್ಕಿಂತ ಸ್ವಲ್ಪ ದೂರವಿರುವ ಬೆಟ್ಟುಗದ್ದೆಯಲ್ಲಿ ಕೂತರು.'(ಗಾಂಧಿ ಬಂದ, ಪುಟ ೨೧೯)

ಪಣಂಬೂರು ಜಾತ್ರೆಯಂದು ಬ್ರಾಹ್ಮಣರ ಊಟದ ಪಂಕ್ತಿಯಲ್ಲೇ ಊಟ ಬಡಿಸುವ ಒತ್ತಡದಿಂದ ಶೂದ್ರರಿಗೆ ಜೊತೆಗೆ ಊಟ ಲಭ್ಯವಾಗುತ್ತದೆ. ಬ್ರಾಹ್ಮಣರು ಒಳಕೋಣೆಯಲ್ಲಿ ಊಟ ಮುಗಿಸಿ ಎದ್ದಿರುತ್ತಾರೆ. ಅಬ್ರಾಹ್ಮಣರ ನಡುವೆ ನಡೆಯುವ ಮಾತಿನ ಸಮರ ತುಳುನಾಡಿನಲ್ಲಿ ಅಸ್ಪೃಶ್ಯತಾ ನಿವಾರಣೆ ಸಾಧ್ಯವೇ? ಎಂಬ ಪ್ರಶ್ನೆ ರೂಪ ತಾಳುತ್ತದೆ.

'ತಮಗಿಂತ ಕೆಳಸ್ತರದವರಾದ ಕೊರಗರ ಐತುವಿನ ಜನರು ತಮ್ಮೊಡನೆ ಊಟಕ್ಕೆ ಕೂತಿದ್ದು ಸರಿಯಲ್ಲವೆಂದು ಮತ್ತೊಂದು ಅಸ್ಪೃಶ್ಯ ಕುಲದವರಾದ ಮುಂಡಾಲರು ನ್ಯಾಯ ತೆಗೆದರು. ಮುಂಡಾಲರೊಂದಿಗೆ ತಮಗೆ ಊಟ ಇಕ್ಕಿದ್ದೇ! ಎಂದು ಇನ್ನೊಂದು ಅಸ್ಪೃಶ್ಯ ಕುಲದ ಮುಗೇರರು ಸಿಟ್ಟಾದರು. ಹಾಗೆಯೇ ತೀರಾ ಹೀನ ಕುಲದವರಾದ ಕೊರಗರು, ಮುಂಡಾಲ, ಮುಗೇರರನ್ನೆಲ್ಲ ತಮ್ಮೊಡನೆ ಊಟಕ್ಕೆ ಯಾಕೆ ಕೂರಿಸಬೇಕಿತ್ತೆಂದು ಮೊಯಿಲಿ, ಮೂಲ್ಯ, ಪೂಜಾರಿ, ಬೆಸ್ತರು, ಶೆಟ್ರು, ಆಚಾರಿಗಳೆಲ್ಲ ಗಲಭೆ ಎಬ್ಬಿಸಿದರು. ಕಳ್ಳು ಮೂರ್ತೆ ಮಾಡುವ ಬಿಲ್ಲವರಿಗೆ ದೇವಸ್ಥಾನದೊಳಗೆ ಪ್ರವೇಶವೇ ಇಲ್ಲ. ಅಂತಹ ಜಾತಿಯನ್ನು ಒಳನುಗ್ಗಿಸಿ, ಅವರ ಜತೆ ನಮ್ಮನ್ನು ಕೂರಿಸಿ ಉಣಿಸಿದ್ಯಾಕೆ ಎಂದು ಕೆಲವು ಮೂಲ್ಯರು, ಬೆಸ್ತರು ಹಾಗೂ ಶೆಟ್ರುಗಳು ಮತ್ತೊಂದು ತಗಾದೆ ತೆಗೆದು ಮುಖ ಊದಿಸಿಕೊಂಡರು. ಇದೆಲ್ಲದರ ಮಧ್ಯೆ ಮರ ಕೆತ್ತುವ ಚಿನ್ನ, ಕಬ್ಬಿಣ ಗುದ್ದುವ ಆಚಾರಿಗಳದ್ದು ಮತ್ತೊಂದು ಕಿರಿಕಿರಿ ಆರಂಭವಾಗಿತ್ತು.'

'ನಾವು ನೂಲು ಹಾಕಿದವರು ವಿಶ್ವಕರ್ಮ ಬ್ರಾಂಮಣರು, ನಮ್ಮನ್ಯಾಕೆ ಈ ನೂಲು ಇಲ್ಲದವರ ಜತೆ ಕೂರಿಸಿ ಕುಲ ಕೆಡಿಸಿದಿರಿ' ಎಂಬ ಬಿರುಸಿನ ಮಾತು ಬೀಸಿ ಬಂದರೆ, ತಟ್ಟನೆ ನೂಲಿಲ್ಲದ ಶೂದ್ರರೆಲ್ಲ ಇರುವೆಗಳಂತೆ ಒಂದಾಗಿ, 'ಅರೆ ! ನೀವೆಂಥ ನೂಲು ಬ್ರಾಂಮಣರು ಮಾರಾಯ..! ನೀವು ನಮ್ಮಂತೇ ಮೀನು ಮಾಂಸ ತಿನ್ನುವವರು. ನಮಗಿಂತಲೂ ಯಾವುದರಲ್ಲಿ ನೀವು ಹೆಚ್ಚಿನವರು? ಕೊಳಕಲ್ಲೇ....? ಆಸ್ತಿಯಲ್ಲೇ....? ಅಂತಸ್ತಲ್ಲೇ....? ಸಂಸ್ಕಾರದಲ್ಲೇ...? ಎಂದು ಕೊಂಕು ಮಾತಿನಿಂದ ಕುಕ್ಕಲಾರಂಭಿಸಿದ್ದರು.'(ಗಾಂಧಿ ಬಂದ, ಪುಟ ೧೮೮)

ಯಥಾವತ್ತಾದ ಪಠ್ಯದ ಈ ಮೇಲಿನ ಮಾತುಗಳಿಂದ ಅಸ್ಪೃಶ್ಯತೆ ಹೊಡೆದೋಡಿಸಲು ಅದೆಷ್ಟು ಕಷ್ಟ ಎಂಬ ಅಂಶ ದೃಢಗೊಳ್ಳುತ್ತದೆ. ವಿಪರೀತ ಟೀಕೆಗೆ ಗುರಿಯಾದರೂ ಮಾರಪ್ಪ, ತಿಂಗಳಾಯರೂ ಸಾಮಾಜಿಕ ಜಾಗೃತಿ ಮಾಡುವ ಪಣ ತೊಡುತ್ತಾರೆ.

'ಸನಾತನ ಹಿಂದೂ ಧರ್ಮದ ಪಂಚಾಂಗದಲ್ಲೇ ಕೆಲವು ಮೂಲ ದೋಷಗಳಿವೆ. ನಮ್ಮ ತಾಯಿ ಭಾರತೀಯ ಮುಕ್ತಿ ಪಡೆಯಬೇಕಾದರೆ, ಪರಂಗಿಯರ ದಾಸ್ಯದಿಂದ ಹೊರ ಬರಬೇಕಾದರೆ ಈ ಮುಖ್ಯ ದೋಷವನ್ನೇ ನಿರ್ಮೂಲನ ಮಾಡಬೇಕಾದುದು ಪ್ರತಿಯೊಬ್ಬ ಹಿಂದುವಿನ ಆದ್ಯ ಕರ್ತವ್ಯ' (ಗಾಂಧಿ ಬಂದ, ಪುಟ ೨೦೩)

ಕಾದಂಬರಿಯ ಅಂತ್ಯದ ವೇಳೆಗೆ ಶಿಸ್ತು ಮತ್ತು ಸ್ವಚ್ಛತೆ ಕಲಿಯುವ ಕೊರಗರನ್ನು ಕಂಡು ಹೆಬ್ಬಾರರೇ ಹುಬ್ಬೇರಿಸುತ್ತಾರೆ. ಪರಂಪರೆಯನ್ನು ಯಥಾವತ್ತಾಗಿ ಅನುಸರಿಸದೆ ಸ್ವಲ್ಪ ಸಡಿಲಿಕೆ ತೋರುವುದನ್ನು ಈ ಸಂದರ್ಭದಲ್ಲಿ ಕೊರಗರು ಕಲಿಯುವುದು ಗಾಂಧಿ ಪ್ರಭಾವ.

ನಾ.ಮೊಗಸಾಲೆ ಅವರ 'ಮುಖಾಂತರ' ಕಾದಂಬರಿಯು ಅಸ್ಪೃಶ್ಯತೆ ಹಾಗೂ ಅದನ್ನು ನಿವಾರಿಸಲು ಮಾಡಿದ ಪ್ರಯತ್ನಗಳ ಮೇಲೆ ಬೆಳಕು ಚೆಲ್ಲುತ್ತದೆ. ಸ್ವಾತಂತ್ರ್ಯ ಹೋರಾಟವು ಹಲವು ಶತಮಾನಗಳ ಕಾಲ ಶೋಷಣೆಗೆ ಒಳಗಾದ ಕೆಳವರ್ಗವನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸುತ್ತದೆ. ಕೆಳವರ್ಗದವರಿಗೆ ಚಿಂತನೆ ಮಾಡಲು, ಅಧಿಕಾರ ನಡೆಸಲು ಸಾಧ್ಯವಿಲ್ಲ ಎಂಬ ಪಾರಂಪರಿಕ ನಂಬಿಕೆಯನ್ನು ಕಾದಂಬರಿ ಪ್ರಶ್ನಿಸುತ್ತದೆ. ಸ್ವಾತಂತ್ರ್ಯ ಹೋರಾಟ ದಲಿತರ ಮನಸ್ಸನ್ನು ಒಲಿಸಿ, ಶಿಕ್ಷಣ ನೀಡಿ ಸಮಾನತೆಯ ಸಮಾಜಕ್ಕೆ ಮುನ್ನುಡಿಯಿಡುತ್ತದೆ. ಅಸ್ಪೃಶ್ಯತೆಯ ಮೂಲಕ್ಕೆ ಪೆಟ್ಟು ನೀಡುತ್ತದೆ. ಸಮಾಜ ಸುಧಾರಣೆಯನ್ನು ಮಾಡುತ್ತದೆ. ಕುದ್ಮುಲ್ ರಂಗರಾವ್, ಕಾರ್ನಾಡ್ ಸದಾಶಿವರಾವ್ ಸ್ವಾತಂತ್ರ್ಯ ಪೂರ್ವ ಸಂದರ್ಭದಲ್ಲಿ ಸಮಾಜ ಸುಧಾರಣೆಗೆ ಬಲವಾದ ಪಂಚಾಂಗ ನಿರ್ಮಿಸಿದವರು. ಕುದ್ಮುಲ್ ರಂಗರಾವ್ ತಂದ ಸುಧಾರಣೆ ಶಿಕ್ಷಣ ಕ್ರಾಂತಿಯದ್ದು. ಹಾಗೆಯೇ ದಲಿತರನ್ನು ಸ್ವಾವಲಂಬಿಗಳಾಗಿ ಮಾಡುವತ್ತ ಅವರ ಚಿತ್ತ ಹರಿಯಿತು. ಬಡಗಿ ಕೆಲಸ, ನೇಯ್ಗೆ ಕೆಲಸ, ಕಸೂತಿ ಕೆಲಸ, ರೇಶ್ಮೆ ಸಾಕಾಣಿಕೆ, ತೋಟಗಾರಿಕೆ ಕೆಲಸಗಳಿಗೆ ತರಬೇತಿ ನೀಡುತ್ತಾ ದಲಿತರಿಗೆ ಅನ್ಯ ಉದ್ಯೋಗದ ಮಾರ್ಗಗಳನ್ನು ಹುಡುಕಿಕೊಟ್ಟರು. ಮನುಷ್ಯನ ಎಲ್ಲಾ ಬದಲಾವಣೆಗಳು ಆರ್ಥಿಕತೆಯ ಮೇಲೆ ಅವಲಂಬಿತವಾಗಿವೆ. ಎಂಜಲೆಲೆಯನ್ನು ಉಣ್ಣುವ ಅಸ್ಪೃಶ್ಯರ ಮನಸ್ಥಿತಿಯ ಬದಲಾವಣೆಗೆ ಅಪಾರ ಶ್ರಮ ಅಗತ್ಯ. ಕಾರ್ನಾಡ್ ಸದಾಶಿವರಾಯರ ಇಂಥಹ ಪ್ರಯತ್ನ ಗುತ್ತಿನ ಪಟೇಲನ ಮಗ ಮಂಜುನಾಥನಲ್ಲೂ ಪ್ರತಿಧ್ವನಿಸುತ್ತದೆ. ದಲಿತ ವ್ಯಕ್ತಿ ಕೂಡ ಅಸಾಧ್ಯವಾದದ್ದನ್ನು ಸಾಧಿಸಬಹುದು. ಅವರಿಗೆ ಸಮಾನತೆಯ ಅಗತ್ಯವಿದೆ ಎಂಬ ಧೋರಣೆಯನ್ನು ಮಂಜುನಾಥ ಪಡ್ಡುಗುತ್ತಿನಲ್ಲಿ ವ್ಯಕ್ತಪಡಿಸುತ್ತಾನೆ. ದಲಿತರನ್ನು ಜಗಲಿಯಲ್ಲಿ ಕೂರಿಸಿ ಉಣಬಡಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತಾನೆ. ಉಜ್ಞಕ್ಕೆ ಗಂಡನಲ್ಲಿ ಈ ವಿಷಯ ತಿಳಿಸಿದಾಗ ಆತ ಕ್ರುದ್ಧನಾಗುತ್ತಾನೆ.

'ಮಂಜುನಾಥ, ಪಟೇಲಿಕೆ ಹೋದರೆ ಹೋಗಲಿ ಅಪ್ಪಯ್ಯ, ಆ ಬ್ರಿಟಿಷರ ಗುಲಾಮರಾಗಿ ಪಟೇಲಿಕೆ ನಡೆಸುವುದಕ್ಕಿಂತ ನೀವು ನಿಮ್ಮ ತೋಟಕ್ಕೆ ಗೊಬ್ಬರ ಹೊರುವುದು ಮೇಲು.'(ಮುಖಾಂತರ, ಪುಟ ೩೨೭)

ತಂದೆಯ ಪಟೇಲಿಕೆ ತ್ಯಜಿಸುವಲ್ಲಿ ಮಂಜುನಾಥನ ಪಾತ್ರ ದೊಡ್ಡದು. ಒಟ್ಟಿನಲ್ಲಿ ಸ್ವಾತಂತ್ರ್ಯ ಹೋರಾಟವು ಕೆಳಹಂತದವರಿಗೆ ವಿಮೋಚನೆಯ ದಾರಿಯಾಗಿ ಕಂಡಿತು. ಮಂಜುನಾಥ ಗುತ್ತಿನ ಮನೆಯಿಂದಲೇ ಅಸ್ಪೃಶ್ಯತೆಯ ವಿರುದ್ಧ ಸಮರ ಸಾರುತ್ತಾನೆ. ಪಡ್ಡುಗುತ್ತಿನ ಹಿರಿಯರಿಗೂ

ಮನವರಿಕೆ ಮಾಡಿಸುತ್ತಾನೆ. ಅಸ್ಪೃಶ್ಯತಾ ನಿವಾರಣೆಯ ಕುರಿತು ಪ್ರಧಾನವಾಗಿ ಕಾದಂಬರಿ ಧ್ವನಿ ಎತ್ತಿದೆ. ಸ್ವಾತಂತ್ರ್ಯಕ್ಕಿಂತ ಅಸ್ಪೃಶ್ಯತಾ ನಿವಾರಣೆ ಮುಖ್ಯ; ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಪ್ರಮುಖವಾಗಿ ಹೋರಾಡಿದವರು ಕುದ್ಮುಲ್ ರಂಗರಾವ್ ಮತ್ತು ಕಾರ್ನಾಡ್ ಸದಾಶಿವರಾವ್. ವೆಂಕಟ್ರಮಣ ದೇವಸ್ಥಾನ ಜಾತ್ರಾ ಮಹೋತ್ಸವದ ಸಂದರ್ಭ ಪ್ರಮುಖವಾಗಿ ಗಮನ ಸೆಳೆಯುತ್ತದೆ. ಎಂಜಲೆಲೆ ಎತ್ತಿ ಅದನ್ನು ಉಣ್ಣುವುದನ್ನು ವಿರೋಧಿಸುವ ಸದಾಶಿವರಾಯರು ಮಂಜುನಾಥ, ವೆಂಕಪ್ಪ, ಶ್ರೀನಿವಾಸ ಎಂಬ ತರುಣರ ಜೊತೆ ಸೇರಿ ತಡೆಯಲು ಪ್ರಯತ್ನಿಸುವುದೇ ಅಲ್ಲದೆ ಮನೆಗೆ ಊಟಕ್ಕೂ ಆಹ್ವಾನಿಸುತ್ತಾರೆ. ಆದರೆ ದಲಿತರು ಎಂಜಲೆಲೆಯನ್ನು ಕೊಂಡೊಯ್ಯುವುದನ್ನು ಬಿಡಲಿಲ್ಲ. 'ನಮ್ಮನ್ನು ಯಾಕೆ ಮುಟ್ಟುತ್ತೀರಿ?'(ಮುಖಾಂತರ, ಪುಟ ೩೧೭) ಎಂದೂ ಪ್ರಶ್ನಿಸುತ್ತಾರೆ. ತಲೆತಲಾಂತರದಿಂದ ನಡೆದುಕೊಂಡು ಬಂದ ಈ ಪದ್ಧತಿ ತ್ಯಜಿಸಲು ಏಕಕಾಲದಲ್ಲಿ ಮೇಲ್ವರ್ಗದವರೂ, ಕೆಳವರ್ಗದವರೂ ಸಿದ್ಧರಿರಲಿಲ್ಲ.

'ಮಂಜುನಾಥ ಊರಿಗೆ ಹೋದವನೇ ತಮ್ಮ ಅಂಗಳಕ್ಕೆ ಬರುವ ಅಸ್ಪೃಶ್ಯರನ್ನೆಲ್ಲ ಹೊಸತಾಗಿ ನೋಡುವಂತೆ ನೋಡತೊಡಗಿ ಪ್ರತಿಯೊಬ್ಬನ ಹಿಂದೆ ಎಂಥ ಅಮಾನವೀಯ ಮತ್ತು ಕ್ರೌರ್ಯದ ಅನುಭವಗಳು ಸಮುದ್ರದ ಹಾಗೆ ಇರಬಹುದು ಎಂದು ತರ್ಕಿಸ ಹೊರಟ. ಇದನ್ನೇನಾದರೂ ಅಜ್ಜನಲ್ಲಿ ಇಲ್ಲವೇ ಮಾವನಲ್ಲಿ ಹೇಳಹೊರಟರೆ ಅವರು 'ಇಂಗ್ಲಿಷ್ ಓದಲು ಹೋದವರೆಲ್ಲ ಹೇಳುವುದು ಇಷ್ಟೇ' ಎನ್ನುವುದು ಖಂಡಿತ. ಆಮೇಲೆ ನಮ್ಮ ದೇಶ ನಮ್ಮ ಸಂಸ್ಕೃತಿ ನಮ್ಮ ಪರಂಪರೆಯನ್ನೆಲ್ಲ ನೀವು ನಾಶಪಡಿಸುತ್ತೀರಿ! ಎಂದು ಅವರು ರೇಗಲೂಬಹುದು ಎಂದು ಅಳುಕಿದ.(ಮುಖಾಂತರ, ಪುಟ ೩೧೯) ಆದರೂ ಮಂಜುನಾಥ ತನ್ನ ಮನೆಯಲ್ಲೇ ಬದಲಾವಣೆ ತರುವ ಧೈರ್ಯ ತೋರುತ್ತಾನೆ. 'ನಮ್ಮ ಕೂಲಿಯಾಳುಗಳೆಲ್ಲ ಅಂಗಳದಲ್ಲಿ ಕುಳಿತು ಊಟ ಮಾಡ್ತಿದ್ದಾರಲ್ಲ? ಅವರಿಗೆ ನಮ್ಮ ಚಾವಡಿಯ ಕೆಳಗೆ ಸೂರಿನ ಅಡಿಯಲ್ಲಿ ಊಟ ಬಡಿಸಬಹುದಲ್ಲಾ' ಎಂದ.(ಮುಖಾಂತರ, ಪುಟ ೩೧೯) ಉಜ್ಜಕ್ಕೆ ಈ ಬದಲಾವಣೆಯನ್ನು ವಿರೋಧಿಸುತ್ತಾರೆ. ಮಂಜುನಾಥ ಪಡ್ಡುಗುತ್ತಿನಲ್ಲಿ ಅದೇ ರೀತಿ ತಂದೆಯಲ್ಲೂ ಬದಲಾವಣೆ ತರಲು ಪ್ರಯತ್ನಿಸುತ್ತಾನೆ.

ಟೊಪ್ಪಿ ಶಂಭಟ್ಟರು ಬ್ರಾಹ್ಮಣರಾಗಿದ್ದು ಅಸ್ಪೃಶ್ಯತಾ ನಿವಾರಣೆಯಲ್ಲಿ ದುಡಿದ ಪ್ರಮುಖ ವ್ಯಕ್ತಿ. ಪ್ರಮುಖ ಗಾಂಧಿವಾದಿ. ನಡೆನುಡಿಯಲ್ಲೂ ಪಾಲಿಸಿಕೊಂಡು ಬಂದ ವ್ಯಕ್ತಿ. ಉಗ್ರಾಣಿ ಚೆನ್ನಪ್ಪ ಪಟೇಲ ಮಾರಪ್ಪರ ಆಣತಿಯಂತೆ ತನ್ನೂರಿಗೆ ಶಂಭಟ್ಟ ಬಂದಿರುವನೋ ಎಂದು ಹುಡುಕ ಹೊರಟಾಗ ಎದುರಿಗೆ ಸಿಕ್ಕ ಅಂತು ನಲ್ಕೆಯಿಂದ ಈಶ್ವರಿ ಮೂಲೆಗೆ ಹೋದ ಸುದ್ದಿ ಸಂಗ್ರಹಿಸಿದ.

'ಹೌದು ಒಡೆಯ, ನಾನೂ ಈಗ ತಾನೆ ಅವರಿಗೆ ದಾರಿ ಬಿಟ್ಟು ನಿಂತು ಮುಂದೆ ಹೋಗಿ ಎಂದೆ. ಅದಕ್ಕೆ ಅವರು 'ಅಷ್ಟು ಯಾಕೋ ದೂರ ಹೋಗುತ್ತೀ? ದಾರಿ ಬಿಟ್ಟು ಇಳಿಯಬೇಡ.' ಎಂದು ನನಗೇ ಹೇಳಿದರು ನೋಡಿ. ನಾನು ಹೆದರಿ 'ಇದೇನಿದು?; ತಮಾಷೆ ಯಾಕೆ ಸ್ವಾಮಿ! ನೀವು ಮುಂದೆ ಹೋಗಿ' ಎಂದು ದಾರಿಯಿಂದ ಕೆಳಗಿಳಿಯುತ್ತಿದ್ದ ಹಾಗೆ ಅವರು ನನ್ನ ಹಿಡಿದು

ಮೇಲೆತ್ತಿ 'ಈಶ್ವರಿಮೂಲೆಗೆ ದಾರಿ ಎಲ್ಲಿ ಹೇಳು?' ಎಂದು ಕೇಳಿದರು. ನಾನು ಸಂಕೋಚದಿಂದಲೇ ಅವರ ಜೊತೆ ನಾಲ್ಕು ಹೆಜ್ಜೆ ಹೋಗಿ ದಾರಿ ತೋರಿಸಿ ಬಂದೆ.'(ಮುಖಾಂತರ, ಪುಟ ೩೩೨)

ಶಂಭಟ್ಟರ ಮುಟ್ಟುವಿಕೆ ಉಗ್ರಾಣಿ ಚೆನ್ನಪ್ಪನ ಮನದಲ್ಲಿ ಉಂಟು ಮಾಡಿದ ಪರಿಣಾಮ ತೀವ್ರತರದ್ದು. ಮೇಲ್ವರ್ಗದವರಿಗೆ ದಾರಿ ಬಿಟ್ಟೇ ಅಭ್ಯಾಸವಿದ್ದ ಚೆನ್ನಪ್ಪನಿಗೆ ಗಾಂಧಿಯನ್ನು ನೋಡಬೇಕೆಂಬ ಕಾತರ ಜಾಸ್ತಿಯಾಗುವುದು ಅವನನ್ನೂ ಮನುಷ್ಯನೆಂಬ ಗೌರವದಿಂದ ಕಂಡಾಗಲೇ. ಗಾಂಧಿಯನ್ನು ಕಾಣಬೇಕೆಂಬ ಪ್ರಜ್ಞೆ ತೀವ್ರವಾಗಿ ಹೆಂಡತಿ ಮಕ್ಕಳನ್ನು ಬಿಟ್ಟು ಶಂಭಟ್ಟರೊಂದಿಗೆ ಸಬರ್ಮತಿ ಆಶ್ರಮಕ್ಕೆ ಹೊರಟುಬಿಡುತ್ತಾನೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿ ಅಸ್ಪೃಶ್ಯತಾ ನಿವಾರಣೆಗಾಗಿ ತನ್ನ ಮನೆಯಲ್ಲಿ ಶ್ರಮಿಸುವ ಗೋಪಾಲನ ಬದುಕನ್ನು ವಿವರಿಸುತ್ತದೆ. ಬ್ರಾಹ್ಮಣರಾದ ಪಾರಳಿಗೆ ಗೋಪಾಲ ಅನ್ಯಜಾತಿಯ ಉಪಾಧ್ಯಾಯರ ಜೊತೆ ಊಟಕ್ಕೆ ಕೂರುವುದು ಅಸಂಬದ್ಧವೆನಿಸಿತು. ಸೌದೆ ಕಡಿಯಲು ಬಂದ ಸುಬ್ಬನ ಜೊತೆಗೆ ಕೂತು ಊಟ ಮಾಡಿದ್ದು ಪಾರಳಿಗೆ ನುಂಗಲಾರದ ತುತ್ತಾಗಿತ್ತು. ಗೋಪಾಲನ ಆತ್ಮೀಯತೆ, ತನ್ನ ಜತೆ ಕೂತು ಊಟ ಮಾಡಿದ್ದು ಸುಬ್ಬನಲ್ಲೂ ತೀವ್ರ ಮುಜುಗುರ ಉಂಟು ಮಾಡಿ ಅರೆಹೊಟ್ಟೆಯಲ್ಲಿ ಎದ್ದು ಬಿಟ್ಟ. ಅಸ್ಪೃಶ್ಯತೆ, ವರ್ಗವ್ಯವಸ್ಥೆ ಒಬ್ಬ ವ್ಯಕ್ತಿ ಬದಲಾದ ಕೂಡಲೇ ಪರಿಸ್ಥಿತಿ ಬದಲಾಗದು. ಮಾನಸಿಕವಾಗಿ ವ್ಯಕ್ತಿ ಬದಲಾವಣೆ ಒಪ್ಪಿಕೊಳ್ಳಲು ದೀರ್ಘಕಾಲೀನ ಸಮಯ ತೆಗೆದುಕೊಳ್ಳುತ್ತಾನೆ ಎಂಬ ಅಂಶ ಗಮನಿಸಬಹುದು. ವ್ಯಕ್ತಿ ತನ್ನ ಕಾಲದ ರೀತಿ ರಿವಾಜುಗಳನ್ನು ಬಾಲ್ಯದಿಂದ ಗಮನಿಸುತ್ತಾ ಬಂದವನು. ಬದಲಾವಣೆ ನಿಧಾನಗತಿಯಲ್ಲಿ ಸಂಭವಿಸುವುದರಿಂದ ಒಪ್ಪಿಕೊಳ್ಳಲು ಸಾಧ್ಯ ಎಂಬ ಚಿಂತನೆ ವ್ಯಕ್ತವಾಗಿದೆ.

೬.೪. ಏಕರೂಪಿ ಸಂಸ್ಕೃತಿ ಹೇರಿಕೆ

ತೆಂಬರೆ ಕಾದಂಬರಿಯಲ್ಲಿ ಕೆಳವರ್ಗದವರ ಸಂಸ್ಕೃತಿ ನಾಶದ ಕುರಿತ ಅಭಿಪ್ರಾಯ ವ್ಯಕ್ತವಾಗಿದೆ. ಸ್ವಾತಂತ್ರ್ಯ ಚಳುವಳಿಯು ಹಲವು ಸುಧಾರಣೆಗಳನ್ನು ತರಲು ಹೋರಾಡಿತು ಎನ್ನುವುದಕ್ಕೆ ಸಂಶಯವೇ ಇಲ್ಲ. 'ಅನೇಕತೆಯಲ್ಲಿ ಏಕತೆ' ಎಂಬುದು ಮೂಲಮಂತ್ರವಾಯಿತು. ರಾಷ್ಟ್ರೀಯತೆಯ ಜಪ ಮೂಲಮಂತ್ರವಾಯಿತು.

ರಾಷ್ಟ್ರೀಯತೆಯ ಪ್ರಜ್ಞೆಯು ಹಲವು ಆಶಾದಾಯಕ ಬೆಳವಣಿಗೆಗೆ ದಾರಿದೀಪವಾದರೂ, ಕೆಲವೊಂದು ಹಿನ್ನಡೆಯೂ ನಡೆದಿದೆ ಎಂಬುದು ಲಕನ ಮತ್ತು ತಳವಾರರ ಸಂಸ್ಕೃತಿ ಚರ್ಚೆಯ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತದೆ. ಲಕನನ ಪ್ರಕಾರ ರಾಷ್ಟ್ರೀಯತೆಯು ಅನೇಕತೆಯಲ್ಲಿ ಏಕತೆಯನ್ನು ಪ್ರತಿಪಾದಿಸುತ್ತದೆ. ಇದರಿಂದಾಗಿ ಅದು ಬಹುಸಂಸ್ಕೃತಿಯ ನಾಶಕ್ಕೆ ಕಾರಣವಾಗಿದೆ. ತುಳು ಸಂಸ್ಕೃತಿ ಎಂದಾಗ ಹಲವು ಆಚರಣೆಗಳು, ನಂಬಿಕೆಗಳು ನೆಲೆಗೊಂಡಿದ್ದವು. ಏಕರೂಪಿ ಸಂಸ್ಕೃತಿ ಎಂದಾಗ ಅವು ನಿಧಾನಕ್ಕೆ ಮರೆಯಾಗುತ್ತವೆ. ಅಥವಾ ತಮ್ಮ ಜನಸಮುದಾಯದೊಳಗೆ ಮಾತ್ರ ಅಸ್ಥಿತ್ವದಲ್ಲಿದ್ದು, ಸಮಾಜದ ಎದುರು ಮರೆಗೆ ಸರಿಯಲ್ಪಡುತ್ತದೆ.

'ರಾಷ್ಟ್ರೀಯತೆಯ ಹೆಸರಿನಲ್ಲಿ, ಏಕತೆಯ ಹೆಸರಿನಲ್ಲಿ ಕೆಳವರ್ಗದವರ ಸಂಸ್ಕೃತಿಗಳು ಅದುಮಲ್ಪಡುತ್ತಿವೆ. ಜನಪದ ಸಂಸ್ಕೃತಿಯನ್ನು ಸರಕು ಸಂಸ್ಕೃತಿಯನ್ನಾಗಿ ಮಾಡಲಾಗುತ್ತದೆ.' (ತೆಂಬರೆ, ಪುಟ ೮)

೬.೫. ಪತ್ರಿಕೆ ಹಾಗೂ ಪುಸ್ತಕಗಳ ಪ್ರಭಾವ

ಸ್ವಾತಂತ್ರ್ಯ ಹೋರಾಟದ ಚಳುವಳಿಯು ಹಲವು ಜಾತಿ, ಮತಗಳ ಬೇಧವಿಲ್ಲದೆ ಜನ ಚಳುವಳಿಯಲ್ಲಿ ಭಾಗಿಯಾದರು. ಸ್ವಾತಂತ್ರ್ಯ ಹೋರಾಟದ ಕಾವು ವಿದ್ಯಾರ್ಥಿಗಳನ್ನು, ಸಾಮಾನ್ಯ ಜನರನ್ನೂ ಸೆಳೆದ ಸಂಗತಿಯನ್ನು ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಗಮನಿಸಬಹುದು. ರಾಮನಿಗೆ ವೈಯಕ್ತಿಕ ಸಮಸ್ಯೆಗಳನ್ನು ಮೀರಿ ಸಾಮಾಜಿಕ ಕಾಳಜಿ ಮುಖ್ಯವಾಗಿ ತೋರುತ್ತದೆ. ಪ್ರತಿಕ್ಷಣ ಬದುಕು ಕಟ್ಟಿಕೊಳ್ಳಲು ಹೆಣಗುವ ಆತನಿಗೆ ಗೆಳೆಯನಿಂದ 'India in bondage' ಕೃತಿ ದೊರಕಿದ ಕೂಡಲೇ ಆತನಲ್ಲಿ ಸಾಮಾಜಿಕ ಕಾಳಜಿ ಹುಟ್ಟಿಕೊಳ್ಳುತ್ತದೆ. ಸ್ವಾತಂತ್ರ್ಯ ಪಡೆಯಲು ಸ್ವಂತ ಬದುಕಿನ ಕಾಳಜಿ ಮರೆಯುವುದನ್ನು ಕಾಣಬಹುದು. ರಾಮನಲ್ಲಿ ಉಂಟಾದ ಕ್ರಾಂತಿಕಾರಿ, ತ್ಯಾಗದ ಮನೋಭಾವಗಳಿಗೆ 'ಹಿಂದೂ' ಪತ್ರಿಕೆ ಹಾಗೂ ದೇಶಭಕ್ತರ ಉಪನ್ಯಾಸವೇ ಕಾರಣ.

ಸ್ವಾತಂತ್ರ್ಯ ಹೋರಾಟದ ಸ್ಪಷ್ಟ ತಿಳಿವು ಜನರಿಗೆ ತಿಳಿಯಲು ಶಿಕ್ಷಣವು ಮೂಲ ಕಾರಣವಾಯಿತು. ಅಕ್ಷರಸ್ಥ ಯುವ ಸಮೂಹ ಓದುವ ಕ್ರಿಯೆಯಿಂದ ಸ್ಪಷ್ಟ ರೂಪ ಪಡೆಯಲು ಸಾಧ್ಯವಾಯಿತು. ಬಹಿಷ್ಕೃತ ಪುಸ್ತಕ ಓದುವುದರಿಂದ ರಾಮನ ಆಲೋಚನೆ, ಗುರಿ ಬದಲಾಯಿತು. ಕೌಟುಂಬಿಕ ಸಮಸ್ಯೆ, ಬಡತನಗಳಲ್ಲಿ ತೊಳಲಾಡುತ್ತಿರುವ ರಾಮನೂ, ಸುಮಾರು ಒಂದು ವರುಷ ಅದನ್ನು ಮರೆತು ದೇಶಭಕ್ತಿ ಮೆರೆಯಲು ಸ್ಫೂರ್ತಿಯ ಮೂಲವಾಯಿತು. 'ಹೇಗಿದೆ ಎನ್ನಲಿ? ಹೊರಗಿನವನೊಬ್ಬ ನಮ್ಮ ದೇಶದ ಬಂಧನಕ್ಕಾಗಿ ಅಷ್ಟು ಅತ್ತರೆ, ನಮಗೆ ಮಾತ್ರ ಆ ಬಂಧನ ಇದ್ದ ಹಾಗೆ ಅನಿಸಬಾರದೇ? ಸೆರೆಯಲ್ಲಿ ಬೆಳೆದ ಹುಲಿಮರಿಗಳ ಹಾಗೆ ನಾವು ಸೆರೆಯೇ ನಮ್ಮ ಮನೆಯೆಂದು ತಿಳಿದಿರಬೇಕೇ?' ಎಂದನು.(ಮರಳಿ ಮಣ್ಣಿಗೆ, ಪುಟ ೩೩೨)

'ದಾಯಿತ್ವ' ಕಾದಂಬರಿ ಭಿತ್ತಿಪತ್ರದಿಂದ ನಡೆದ ಚಳುವಳಿಯ ಕುರಿತು ಚಿತ್ರಿಸುತ್ತದೆ. ನೀರುಮಾರ್ಗದ ಸ್ವಾತಂತ್ರ್ಯ ಚಳುವಳಿ ಶಾಖೆಯ ಕಾರ್ಯದರ್ಶಿಯ ಜವಾಬ್ದಾರಿ ಸತ್ಯನಿಗೆ ಲಭಿಸಿತು. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಭಿತ್ತಿಪತ್ರ ತಯಾರಿಸಿ ಕಲೆಕ್ಟರ್ ಕಛೇರಿ ಎದುರು ಅಂಟಿಸುವ ಕೆಲಸ ಸತ್ಯನದು. ಭಿತ್ತಿಪತ್ರಗಳ ಮೂಲಕ ದೇಶಸೇವೆ ನಡೆಯುತ್ತಿತ್ತು. ಪರೋಕ್ಷ ಚಳುವಳಿಯನ್ನು ಕಾಣಬಹುದು. ಸರಕಾರಿ ನೌಕರಿಯಲ್ಲಿದ್ದು ಮರೆಯಿಂದ ಹೋರಾಡುವ ಪ್ರಕ್ರಿಯೆ ಆತನದು. ಸೆರೆಯಾಗುವ ಅಪಾಯವಿದ್ದರೂ ದೇಶಪ್ರೇಮದ ಉತ್ಕಟತೆಯಿಂದ ಸತ್ಯ, ಪಾರ್ವತಿಯ ಜೊತೆ ಸೇರಿ ರಾತ್ರಿ ವೇಳೆ ಈ ಕಾಯಕದಲ್ಲಿ ತೊಡಗಿದ್ದ. ಸ್ವಾತಂತ್ರ್ಯ ಬಂದ ಅನಂತರದ ದಿನಗಳಲ್ಲಿ ಬೆಳೆದ ಸ್ವಾರ್ಥ, ಪ್ರಶಸ್ತಿ, ಅಧಿಕಾರದ ಆಸೆ, ವಂಚನೆ ಸತ್ಯನಲ್ಲಿ ಜುಗುಪ್ಸೆ ಮೂಡಿಸುತ್ತದೆ.

ಪತ್ರಿಕೆಗಳು, ಪುಸ್ತಕಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಮಾನಪ್ಪ, ಮನೇಲಾ, ಸೆರೆಮನೆಯಲ್ಲಿದ್ದಾಗ ಸಮಯ ಕಳೆಯಲು ಲಭ್ಯವಾದದ್ದು ಪುಸ್ತಕಗಳು.

ಜೈಲಿನಲ್ಲಿ ದೊರೆತ ಅಪಾರ ಪುಸ್ತಕದ ರಾಶಿ ಜ್ಞಾನದ ಹೆಬ್ಬಾಗಿಲನ್ನೇ ತೆರೆಯುತ್ತದೆ. ಪ್ರಪಂಚ, ದೇಶದ ಎಲ್ಲಾ ಪ್ರಮುಖ ಸುದ್ದಿಗಳೂ ಪತ್ರಿಕೆಗಳ ಮೂಲಕ ಲಭಿಸುತ್ತವೆ. ಪತ್ರಿಕಾ ಪ್ರಪಂಚ ಹೊಸ ಆಲೋಚನೆ, ಹೊಸ ಅರಿವು, ಬದುಕಿಗೊಂದು ಹೊಸ ಆಯಾಮವನ್ನು ಒದಗಿಸಿಕೊಡುತ್ತದೆ. ತಿಳುವಳಿಕಾ ಪರಿಧಿಯನ್ನು ಹೆಚ್ಚಿಸುತ್ತವೆ. ಜನರನ್ನು ಒಗ್ಗೂಡಿಸಲು ಮತ್ತು ಮುಂದಿನ ಗುರಿ ನಿರ್ಧರಿಸಲು ಪತ್ರಿಕೆಗಳು ಸಾಕಷ್ಟು ನೆರವಾದವು.

'ಮುಖಾಂತರ' ಕಾದಂಬರಿಯಲ್ಲೂ ಪತ್ರಿಕೆಗಳ ಪ್ರಭಾವದ ಉಲ್ಲೇಖವಿದೆ. ಕೆ.ಕೆ. ಶೆಟ್ಟರ ನವಯುಗ, ರಾಷ್ಟ್ರಬಂಧು, ಸ್ವದೇಶಿ ಪ್ರಚಾರಕ, ಸ್ವಾತಂತ್ರ್ಯ ಭಾರತ, ಶಕ್ತಿ(ಮುಖಾಂತರ, ಪುಟ ೪೧೭) ಮೊದಲಾದ ಪತ್ರಿಕೆಗಳ ಉಲ್ಲೇಖವಿದೆ. ಸಮಾಜದ ಬದಲಾವಣೆಗಾಗಿ ಹಠ ಹಿಡಿದು ದೃಢಚಿತ್ತದಿಂದ ಎದ್ದು ನಿಂತ ಮಂದಿ ಆರಿಸಿದ್ದು ಮಾತ್ರ ತರುಣರನ್ನು. ತರುಣರ ಎಳೆಯ ಮನಸ್ಸಿನಿಂದ ಬದಲಾವಣೆಯನ್ನು ತರಲು ಸಾಧ್ಯ ಎಂಬ ನಂಬಿಕೆ ಅವರದು. ಟೊಪ್ಪಿ ಶಂಭಟ್ಟರ ಈ ಕೆಳಗಿನ ಮಾತು ಗಮನಿಸಬಹುದು.

'ಈಗ ನನ್ನ ಕೆಲಸ ಅಂದರೆ ನಮ್ಮ ಪತ್ರಿಕೆಯನ್ನು ಪ್ರತಿ ಊರಿಗೂ ತಲುಪಿಸುವುದು ಶಾಲೆ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಗಾಂಧಿ ಸಿದ್ಧಾಂತವನ್ನು ಬೋಧಿಸುವುದು ಅಷ್ಟೇ!'(ಮುಖಾಂತರ, ಪುಟ ೩೩೫)

'ಔದಾರ್ಯದ ಉರುಳಲ್ಲಿ' ಕಾದಂಬರಿಯು ಸ್ವಾತಂತ್ರ್ಯ ಹೋರಾಟ ಚಳುವಳಿಯಲ್ಲಿ ಪ್ರಭಾವ ಬೀರಿದ ಹಲವು ಪತ್ರಿಕೆಗಳ ಉಲ್ಲೇಖಮಾಡಿದೆ. ಗಾಂಧೀಜಿಯರ ನವಜೀವನ ತುಂಬಾ ಪ್ರಭಾವಶಾಲಿಯಾಗಿತ್ತು. ಪ್ರಭುದೇವ ಸ್ಥಾಪಿಸಿದ 'ಮಂಗಳೂರು ಮಿರರ್' ಪತ್ರಿಕೆ ಸ್ವರಾಜ್ಯ ಗಳಿಕೆಗೆ ಜನರನ್ನು ಬೆಸೆಯುವುದಕ್ಕಿಂತ ಹೆಚ್ಚಾಗಿ ರಾಜಕಿಯ, ಪ್ರಶಂಸೆ, ಸ್ವಹಿತಾಸಕ್ತಿ ಮೊದಲಾದ ವಿಭಿನ್ನ ಮಾರ್ಗಗಳಲ್ಲಿ ಪ್ರವಹಿಸುತ್ತ ತನ್ನ ನೇರದಾರಿ ಕಳಕೊಂಡಿತು. ಅದಕ್ಕಿಂತ ರಾಧಾಕೃಷ್ಣ ಹೊರಡಿಸುತ್ತಿದ್ದ 'ವೀರವಾಣಿ' ಪತ್ರಿಕೆ ಜನತೆಯನ್ನು ಸತ್ಯಾಗ್ರಹಕ್ಕೆ ಸಿದ್ಧಗೊಳಿಸಿತು.

'ತೀರ ಚಿಕ್ಕಪ್ರಮಾಣದ ಪತ್ರಿಕೆಯೊಂದನ್ನು ಹೊರಡಿಸಿದನು. ಮುಷ್ಟಿಯೊಳಗೆ ಹಿಡಿಯುವಷ್ಟು ಚಿಕ್ಕ ಆಯ. ಜನತೆಯನ್ನು ಸತ್ಯಾಗ್ರಹಕ್ಕೆ ಸಿದ್ಧ ಮಾಡುವುದು ಅದರ ಗುರಿ. 'ವೀರವಾಣಿ' ಎಂಬುದು ಹೆಸರು. ರಾತ್ರಿಯೇ ಅದರ ಮುದ್ರಣ. ಮನೆಯ ಅಟ್ಟವೇ ಅದರ ಛಾಪಖಾನೆ. ಹಾಳೆಬೆಲ್ಲದ ಹೊರೆಗಳಲ್ಲಿ ಅದರ ಸಂಚಾರ. ಪೇಟೆ, ಶಹರುಗಳ ಮುಖ್ಯ ಬೀದಿಗಳಲ್ಲಿ ಅದರ ಲೇಪನ, ಪ್ರಸಾರ.'(ಔದಾರ್ಯದ ಉರುಳಲ್ಲಿ, ಪುಟ ೨೧೧)

ಪತ್ರಿಕೆಗಳ ಪ್ರಸರಣ ಸುಲಭ ಸಾಧ್ಯವಾಗಿರಲಿಲ್ಲ. ಸರಕಾರ ಪತ್ರಿಕೆಗಳ ಪ್ರಸರಣ ನಿಲ್ಲಿಸಿತ್ತು. ಗಾಂಧಿಯ ಪತ್ರಿಕೆಗಳನ್ನೂ ಸರಕಾರ ನಿಲ್ಲಿಸಿತ್ತು. ಅಂಥಹ ಸಮಯದಲ್ಲಿ ರಾಧಾಕೃಷ್ಣ ಎಚ್ಚರಿಕೆಯಿಂದ ಕಾರ್ಯಪ್ರವೃತ್ತನಾಗಿ ಸರಕಾರವನ್ನು ಎದುರಿಸುವ ಸೂತ್ರಗಳನ್ನು ಜನತೆಯೆದುರು ತೆರೆದಿಡುತ್ತಾ ಹೋದ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯು ಪತ್ರಿಕೆಗಳ ಪ್ರಭಾವವನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ. ಗೋಪಾಲನ ಬದುಕಿನಲ್ಲಿ ಪತ್ರಿಕೆಗಳ ಪಾತ್ರ ಅಗಾಧವಾಗಿತ್ತು. ದೇಶಿ,

ವಿದೇಶಿ ಸುದ್ದಿಗಳನ್ನು ಜನರಲ್ಲಿ ಬಿತ್ತರಿಸುವಲ್ಲಿ ಪತ್ರಿಕೆಗಳೇ ಪ್ರಧಾನ ಪಾತ್ರವಹಿಸುತ್ತಿದ್ದವು. ರಾಷ್ಟ್ರಬಂಧು, ಪ್ರಭಾತ, ನವಭಾರತ ಪತ್ರಿಕೆಗಳು ಗೋಪಾಲ, ಪಾರಳಲ್ಲಿ ಹೊಸ ಸಂಚಲನವನ್ನು ಮೂಡಿಸುತ್ತಿದ್ದವು. ಬ್ರಿಟಿಷರ ಹಾಗೆ ಆಡಳಿತ ನಡೆಸಲು ನಮ್ಮ ದೇಶದವರಿಂದ ಸಾಧ್ಯವೇ ಎಂಬ ಮೂಲಭೂತ ಪ್ರಶ್ನೆ ಹೆಬ್ಬಾರರಲ್ಲಿ ಮೂಡುತ್ತದೆ.

'ನಂಗ್ ಯಾಕ ಸಂಶಯ ಕಾಣಿ. ಅಲ್ಲ, ಇಂಗ್ಲೀಷ್ ಜನ ಹೋದ್ರೆ ನಮ್ಮ್ ಜನಕ್ಕೆ ಸುದಾರ್ಸ್‌ಕಂಬುಕೆ ಆಪ್ದ ಹೋಪ್ದ?' ಎಂದು ಹೆಬ್ಬಾರರು ಸಂದೇಹ ವ್ಯಕ್ತಪಡಿಸಿದರೆ, 'ಯಾಕೆ ಆತ್ತಿಲ್ಲ ಹೆಬ್ಬಾರ್ರೇ? ಎಲ್ಲ ಆತ್ತು. ಮದ್ರಾಸಲ್ಲಿ ಚುನಾವಣೆ ಆಯಿ ಬಂತಲ್ಲ ಈಗ ಸರಕಾರ. ಇನ್ನು ಎಲ್ಲ ಕಡೆ ಸಹ ನೋಡಿ. ತಲೆ ಮೇಲೆ ಭಾರ ಬಿದ್ರೆ ಜವಾಬ್ದಾರಿ ಬಂದೇ ಬರ್‌ತ್ತ್, ಕಾಣ್ತಾ ಇರಿ' ಎನ್ನುತ್ತಿದ್ದ ಗೋಪಾಲ.'(ಪಾಚಿ ಕಟ್ಟಿದ ಪಾಗಾರ, ಪುಟ ೬೦). ಆಡಳಿತದ ಜವಾಬ್ದಾರಿ ವಹಿಸಿಕೊಳ್ಳುವುದು ಭಾರತೀಯರಿಂದ ಸಾಧ್ಯವೇ? ಎಂಬ ಗೊಂದಲ ಜನರಲ್ಲಿ ಇರುವುದನ್ನು ಕಾಣಬಹುದು.

ಪತ್ರಿಕೆಗಳು ಇಡೀ ಭಾರತದಾದ್ಯಂತ ಎಚ್ಚೆತ್ತ ಜನರನ್ನು ಬೆಸೆಯಲು ಸಹಾಯಕವಾದವು. ಚಳವಳಿಗಳ ನಡೆ, ಪ್ರಪಂಚದ ಆಗುಹೋಗುಗಳು ತಿಳಿದು ವಿಚಾರಪರರಾದ ಜನ ಇತರರಲ್ಲೂ ತಿಳುವಳಿ ಮೂಡಿಸಲು ಸಫಲವಾದವು. ಅನಕ್ಷರಸ್ಥ ಮಂದಿಗೆ ಗಾಂಧಿ ಎನ್ನುವ ಹೆಸರು ಚಿರಪರಿಚಿತನಾದರೂ ಸ್ಪಷ್ಟ ಕಲ್ಪನೆ ಇರಲಿಲ್ಲ. ಕೆಳವರ್ಗದವರಿಗಂತೂ ಅಜ್ಞಾನದಿಂದ ಸುತ್ತಲಿನ ಸ್ವಾತಂತ್ರ್ಯ ಚಳುವಳಿಯ ಉದ್ದೇಶ ಅರ್ಥವಾಗಲು ತುಂಬಾ ಸಮಯ ಹಿಡಿಯಿತು.

೬.೬. ರಾಷ್ಟ್ರೀಯ ಶಾಲೆ

'ಔದಾರ್ಯದ ಉರುಳಲ್ಲಿ' ಕಾದಂಬರಿ ರಾಷ್ಟ್ರೀಯ ಶಾಲೆಯ ಉಗಮ, ಪತನ ಎರಡನ್ನೂ ಚಿತ್ರಿಸುವ ಪ್ರಯತ್ನ ಮಾಡಿದೆ. 'ದಲಿತರ ಆಶ್ರಮ' ಉತ್ಸಾಹದಿಂದ ಆರಂಭವಾಗಿ ಆರ್ಥಿಕ ಬಲದ ಕೊರತೆಯಿಂದ ಎಲ್ಲಾ ಬಾಲಕರನ್ನು ಕಳಕೊಂಡರೆ, ಮಂಗಳೂರಿನಲ್ಲಿ ಆರಂಭಿಸಿದ ಶಾಲೆಯೂ ವಿದ್ಯಾರ್ಥಿಗಳಿಂದ ಕಿಕ್ಕಿರಿದು, ಅಚ್ಚುಕಟ್ಟಾಗಿ ನಡೆದು ಉಳ್ಳವರ ಸ್ವಾರ್ಥದಿಂದ ಅದೂ ಮುಚ್ಚಿ ಹೋಗುವುದು ಮಾನವನ ಸ್ವಾರ್ಥಪರ ಮನಸ್ಸಿಗೆ ಸಾಕ್ಷಿ. ಸಾತ್ವಿಕರು ಅದೆಷ್ಟು ಶ್ರಮದಿಂದ ದುಡಿದರೂ ಸ್ವಾರ್ಥಪರ ವ್ಯಕ್ತಿಗಳು ಅದರ ನಾಶಕ್ಕೆ ಕಾರಣಕರ್ತರಾಗುತ್ತಾರೆ. ಒಳ್ಳೆಯತನ, ಹಾಗೂ ಕೆಟ್ಟತನದ ಸಂಘರ್ಷ, ಒಳ್ಳೆಯದು ನಾಶವಾಗಿ ಹಿಂಜರಿದು ಸ್ವಾರ್ಥವೇ ಮೇಲುಗೈ ಸಾಧಿಸುವುದನ್ನು ಕಾದಂಬರಿ ಮತ್ತೆ ಮತ್ತೆ ಚಿತ್ರಿಸುತ್ತದೆ. ಸ್ವಾತಂತ್ರ್ಯ ಸುಲಭವಾಗಿ ಲಭಿಸಿಲ್ಲ. ಅದರ ಹಿಂದೆ ಹಲವರ ಬೆವರು, ನೆತ್ತರು ಇದೆ ಎಂಬ ಸಂದೇಶ. ಜೊತೆಗೇ ಹೊರಶತ್ರುಗಳ ಕಾಟ ಒಂದು ಬಗೆಯಾದರೆ, ಆಂತರಿಕ ಶತ್ರಗಳ ಹಿಂಸೆ ಇನ್ನೊಂದು ರೀತಿ. ಸ್ವರಾಜ್ಯ ಗಳಿಕೆಯು ಬಾಹ್ಯ ಹಾಗೂ ಆಂತರಿಕ ಎರಡೂ ಕಡೆಯ ಶತ್ರುಗಳ ವಿರುದ್ಧ ಹೋರಾಟವಾಗಿತ್ತು ಎಂಬ ಸೂಕ್ಷ್ಮ ಒಳನೋಟವನ್ನು ಧ್ವನಿಸಿದೆ.

ರಾಷ್ಟ್ರೀಯ ಶಾಲೆ ಸೇರಿ ನೂಲುವುದು ಪ್ರಮುಖ ಕಾರ್ಯ ಅನಿಸಿದರೂ, ಜನರ ಮನೋಭಾವ ಪೂರ್ತಿಯಾಗಿ ಬದಲಾಗುವುದಿಲ್ಲ. ಬ್ರಾಹ್ಮಣರು, ಹೊಲೆಯರು ಒಟ್ಟಿಗೆ ಓದುವುದು

ಸಮನಲ್ಲ ಎಂಬ ನಂಬಿಕೆ. ಒಕ್ಕಲು ಮಕ್ಕಳು ಧಣಿ ಮಕ್ಕಳೊಂದಿಗೆ ಓದುವುದು ಸಮವಲ್ಲ. ಮುಂದೆ ಕೈಕಟ್ಟಿ ನಿಲ್ಲಬೇಕಾದ ಆಳುಗಳು ಧಣಿ ಮಕ್ಕಳೊಂದಿಗೆ ವಿದ್ಯೆ ಕಲಿಯಬಾರದು ಎಂಬ ಆಲೋಚನೆಗಳಿಂದಲೇ ಮಂಜಯ್ಯನವರ ಶಾಲೆ ಅವರ ಕುಟುಂಬಕ್ಕೆ ಮೀಸಲಿತ್ತು. ರಾಧಾಕೃಷ್ಣ ಹೊಲೆಯನನ್ನು ಸೇರಿಸಿ ಓದುವ ಅಪೇಕ್ಷೆ ವ್ಯಕ್ತಪಡಿಸುತ್ತಾನೆ.

'ಪಂಚಮರ ಸಲುವಾಗಿ ಬೇರೆಯೇ ಕಟ್ಟಡ ಬೇಕೇ? ನಿಮಗೆ ಮರುಳು ನಾವು ಹಾಗೆ ಶಾಲೆ ತೆರೆದರೂ ಅವು ಬಂದಾವೇ? ವಂಡಸೆ ಊರಲ್ಲಿ ಒತ್ತಾಯದಿಂದ ಬೋರ್ಡು ಶಾಲೆಗೆ ಬಿಲ್ಲವರು ಬಂದ ಕತೆ ಕೇಳಲಿಲ್ಲವೇ ನೀವು? ಉಳಿದವರು ಅವರು ಬರುತ್ತಾರೆಂದು ಬರಲಿಲ್ಲ. ಇವು ಶಾಲೆ ಬೇಡಾಗಿ ಬರಲಿಲ್ಲ. ನೀವು ಹೊಲೆಯರ ಮಕ್ಕಳ ಕತೆಯನ್ನು ಹೇಳುತ್ತೀರಿ. ಶಾಲೆ, ಬರಹ, ಓದು ಬೇಕೆಂದು ಅವಕ್ಕೆ ತಲೆಗೆ ಹೋಗಲು ಇನ್ನೂ ಒಂದು ಯುಗ ಬೇಕು. ಅವು ಓದಿ ಮಾಡುವುದಾದರೂ ಏನು?'(ಔದಾರ್ಯದ ಉರುಳಲ್ಲಿ, ಪುಟ ೬೭)

'ದಾಯಿತ್ವ' ಕಾದಂಬರಿಯಲ್ಲಿ ವಯಸ್ಕರ ಶಾಲೆಯ ವಿವರವಿದೆ. ತುಳುನಾಡಿನಲ್ಲಿ ವಿದ್ಯಾಭ್ಯಾಸದ ಹೊಣೆ ಹೊತ್ತದ್ದು ಮಠದ ಶಾಲೆಗಳು. ಸಂಸ್ಕೃತ ಪಾಠ, ವೇದ ಮಂತ್ರಗಳನ್ನು ಕಲಿಯಬೇಕಾಗಿತ್ತು. ಮಕ್ಕಳನ್ನು ಮನೆಯಿಂದ ದೂರ ಉಡುಪಿಗೋ, ಶೃಂಗೇರಿಗೋ ಓದಿಗಾಗಿ ಕಳುಹಿಸುತ್ತಿದ್ದರು. ನೀರ್‌ಮಾರ್ಗದಲ್ಲಿಯೇ ಸರಕಾರಿ ಶಾಲೆ ಆರಂಭವಾದಾಗ ವಿದ್ಯಾರ್ಥಿಗಳು ಜಾತಿಬೇಧವಿಲ್ಲದೆ ಕಲಿಯಲು ಬರಲಾರಂಭಿಸಿದರು. ಇದೊಂದು ಪ್ರಮುಖ ಸ್ಥಿತ್ಯಂತರ. ಮಕ್ಕಳಿಗೆ ಕೃಷಿ ಸಾಕು ಎಂದವರೂ ಶಾಲೆಗೆ ಕಳುಹಿಸಲಾರಂಭಿಸಿದರು. ಶಿಕ್ಷಣ ಸಾರ್ವತ್ರಿಕವಾದದ್ದು ಪ್ರಮುಖ ಪಲ್ಲಟ. ಸ್ವಾತಂತ್ರ್ಯ ಚಳುವಳಿಯ ಕಾವಿನಲ್ಲಿ ವಯಸ್ಕರಿಗೆ ರಾತ್ರಿ ಶಾಲೆ ಆರಂಭವಾದದ್ದು ನಿರ್ಣಾಯಕ ಘಟ್ಟ. ಅಕ್ಷರದ ಅರಿವು, ಸಂಸ್ಕೃತಿಯ ಅರಿವು, ಗುಲಾಮತನ, ಸ್ವಾತಂತ್ರ್ಯದ ಅಗತ್ಯತೆ ಮುಂತಾದ ಸೂಕ್ಷ್ಮ ವಿಷಯಗಳನ್ನು ಜನರು ಅರಿತರು. ಸತ್ಯ ಹಾಗೂ ಪಾರ್ವತಿಯ ನೇತೃತ್ವದಲ್ಲಿ ಅವರಿಗೆ ಸರಿ ತಪ್ಪುಗಳ ವಿವೇಚನೆ ನೀಡಲಾಯಿತು. ಸರಕಾರಿ ಶಾಲೆ ತನ್ನ ಕಾರ್ಯಚಟುವಟಿಕೆಯನ್ನು ಸತ್ಯ ಹಾಗೂ ಪಾರ್ವತಿ ನೇತೃತ್ವದಲ್ಲಿ ವಿಸ್ತರಿಸುತ್ತಾ ವಯಸ್ಕರ ರಾತ್ರಿ ಶಾಲೆಯಾಗಿ, ಸ್ವಾತಂತ್ರ್ಯ ಚಳುವಳಿಯ ಪ್ರಮುಖ ರೂಪುರೇಷೆಗಳನ್ನು ರೂಪಿಸುವಲ್ಲಿ ಸಹಾಯಕವಾಯಿತು. ಸ್ವಾತಂತ್ರ್ಯ ಚಳುವಳಿಯು ರಾಷ್ಟ್ರೀಯ ಶಾಲೆಗಳನ್ನು ತನ್ನ ಜೊತೆಗೆ ಬೆಳೆಸಿತು.

ನಾ.ಮೊಗಸಾಲೆ ಅವರ 'ಮುಖಾಂತರ' ರಾಷ್ಟ್ರೀಯ ಶಾಲೆಗಳ ಕಟ್ಟುವಿಕೆ, ಅದರ ಹಿಂದಿರುವ ನಿಸ್ವಾರ್ಥ ತ್ಯಾಗಗಳ ಮೇಲೆ ಬೆಳಕು ಚೆಲ್ಲುತ್ತದೆ. ರಾಷ್ಟ್ರೀಯ ಶಾಲೆಗಳು ಗಾಂಧೀಜಿಯ ಕಲ್ಪನೆಯ ಕೂಸು. ಎಲ್ಲಾ ಜಾತಿಯವರು ಸಮಾನವೆಂದು ಪರಿಗಣಿಸಿ ವಿದ್ಯಾದಾನ ಮಾಡುವ ಉದ್ದೇಶವನ್ನು ಹೊಂದಿದ್ದವು. ಎಲ್ಲರೂ ಶಿಕ್ಷಣ ಪಡೆದಾಗ ಸಹಜವಾಗಿ ಪರಂಪರೆಯಿಂದ ಬಂದ ಕುಲಕಸುಬು ಮಾಯವಾಗುವ ಸಂದರ್ಭ ಒದಗಿಬರುತ್ತದೆ. ಆದ್ದರಿಂದಲೇ ಗಾಂಧೀಜಿ ಗುಡಿಕೈಗಾರಿಕೆಯ ಅನುಭವ ಪ್ರತಿಯೊಬ್ಬರಲ್ಲೂ ಇರಬೇಕಾದದ್ದು ಎಂಬ ಆಶಯವಿಟ್ಟುಕೊಂಡಿದ್ದರು. ಸ್ವಾತಂತ್ರ್ಯ ಚಳುವಳಿಯು ತಲೆತಲಾಂತರದಿಂದ ಬಂದ ನಂಬಿಕೆಗಳನ್ನು ಬುಡಮೇಲು ಮಾಡಿತು. ಕೃಷ್ಣಯ್ಯನ ಮೊಮ್ಮಗ ಶಂಕರನೂ ಕೂಡ ಸ್ವಾತಂತ್ರ್ಯ ಚಳುವಳಿಗಾಗಿ ಹೋರಾಟದ ಮಾರ್ಗ ಆಯ್ದುಕೊಳ್ಳುತ್ತಾನೆ. ಉಡುಪಿ ಮಠದಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿ

ಪಿಕೆಟಿಂಗ್ ನಡೆಸಿದ ಎಂಬ ಸುಳಿವು ಪೋಲೀಸರಿಗೆ ಸಿಕ್ಕಲು ತಪ್ಪಿಸಿಕೊಳ್ಳುತ್ತಾನೆ. ಮುಂದೆ ನೆಹರೂ ಮಂಗಳೂರಿಗೆ ಆಗಮಿಸಿದಾಗ ಆದ ಲಾಠಿ ಪ್ರಹಾರದ ಸಂದರ್ಭದಲ್ಲಿ ಉದ್ರಿಕ್ತ ಪರಿಸ್ಥಿತಿ ಎದುರಾದಾಗ ಹೊಡೆದ ಗುಂಡು ಶಂಕರನ ತೊಡೆಗೆ ಬಿದ್ದು ಆತ ಗಾಯಗೊಳ್ಳುತ್ತಾನೆ. ಮುಂದೆ ಊರಿಗೆ ಮರಳಿದ ಆತ ರಾಷ್ಟ್ರೀಯ ಶಾಲೆಯನ್ನು ತನ್ನ ಅಂಗಳದಲ್ಲೇ ತೆರೆಯುತ್ತಾನೆ. 'ಸ್ವಾತಂತ್ರ್ಯ ಅಂದರೆ ಕೇವಲ ರಾಜಕೀಯ ಸ್ವಾತಂತ್ರ್ಯ ಅಲ್ಲ ನಿಜವಾದ ಗ್ರಾಮ ಸ್ವರಾಜ್ಯವೇ ಸ್ವಾತಂತ್ರ್ಯ. ಅದಕ್ಕಾಗಿ ಮೊದಲು ಎಲ್ಲರೂ ವಿದ್ಯಾವಂತರಾಗಬೇಕು. ವಿದ್ಯೆ ಎಲ್ಲರ ಮನೆಬಾಗಿಲಿಗೆ ಬರಬೇಕು. ಹಾಗೆ ಅದು ಬಂದರೆ, ಅಸ್ಪೃಶ್ಯತೆ, ಅಸಮಾನತೆ ಬಡತನ ಎಲ್ಲವನ್ನೂ ಹೊಡೆದೋಡಿಸುವುದು ಸುಲಭ ಎನ್ನುವುದು ಗಾಂಧೀಸಿದ್ಧಾಂತ.'(ಮುಖಾಂತರ, ಪುಟ ೪೦೭) ಶಂಕರ ರಾಷ್ಟ್ರೀಯ ಶಾಲೆ ತೆರೆದರೂ ದಲಿತರು ತಮ್ಮ ಮಕ್ಕಳನ್ನು ಕಳುಹಿಸುವಲ್ಲಿ ತೀವ್ರ ಹಿಂದೇಟು ಹಾಕುತ್ತಾರೆ. ಪಾರಂಪರಿಕ ನಂಬಿಕೆಯನ್ನು ಬದಲಿಸುವುದು ದುಸ್ತರವೆನಿಸಿತು. ಶಾಲೆಗೆ ಬಾರದಿರಲು ಕಾರಣ ಕೇಳಿದಾಗ ಚೇಂಕ್ರ ಹೇಳುವ ಮಾತು ಗಮನಾರ್ಹ. 'ಮೇಲ್ಜಾತಿಯನ್ನು ಮುಟ್ಟುವುದು ದೇವರು ಮೆಚ್ಚುವ ಕೆಲಸ ಅಲ್ಲ ಎಂದು ನಕ್ರ ಹೇಳುತ್ತಿದ್ದ.'ಎಂದ(ಮುಖಾಂತರ, ಪುಟ ೪೩೪) ಇಂಥಹ ನಂಬಿಕೆಗಳನ್ನು ಜೊತೆಗೆ ಆರ್ಥಿಕವಾಗಿ ದುರ್ಬಲವಾಗಿದ್ದ ಕೆಳವರ್ಗದವರನ್ನು ಶಿಕ್ಷಣದೆಡೆಗೆ ಒಲವು ತೋರುವಂತೆ ಮಾಡುವುದು ಶ್ರಮದ ಕೆಲಸವಾಗಿತ್ತು. ಶಂಕರನ ಕನಸು ತಕ್ಷಣಕ್ಕೆ ಅಲ್ಲವಾದರೂ ಸ್ವಾತಂತ್ರ್ಯ ನಂತರ ನನಸಾಗುತ್ತದೆ.

'ರಾಷ್ಟ್ರೀಯ ಸಮಸ್ಯೆಗಳನ್ನು ಭಾವುಕವಾಗಿ ಮಂಡಿಸುವ ಅನೇಕ ಕಾದಂಬರಿಕಾರರಿಗಿಂತ ಶಿವರಾಮಕಾರಂತರು ಬೇರೆಯಾಗಿ ನಿಲ್ಲುತ್ತಾರೆ. ಇದನ್ನು ಸ್ಪಷ್ಟಪಡಿಸಿಕೊಳ್ಳಲು ಮೇಲೆ ಉಲ್ಲೇಖಿಸಲಾದ ಕಾದಂಬರಿಗಳನ್ನು ಕಾರಂತರ 'ಮುಗಿದ ಯುದ್ಧ'(೧೯೪೫) ಮತ್ತು 'ಔದಾರ್ಯದ ಉರುಳಲ್ಲಿ'(೧೯೪೭) ಕಾದಂಬರಿಗಳೊಡನೆ ಹೋಲಿಸಿ ನೋಡಬೇಕು. ರಾಷ್ಟ್ರೀಯವಾದಿ ಕಾದಂಬರಿಕಾರರು ಅತ್ಯುತ್ಸಾಹದಲ್ಲಿ ಬರೆಯುತ್ತಿರುವಾಗಲೇ ಕಾರಂತರು ಭಾರತೀಯ ಬದುಕಿನ ಮೂಲಭೂತ ಸತ್ಯಗಳತ್ತ ಮುಖ ಮಾಡಿ ತಣ್ಣಗೆ ಯೋಚಿಸುತ್ತಿದ್ದರು. ಸ್ವಾತಂತ್ರ್ಯ ಹೋರಾಟವು ಪರಕೀಯರನ್ನು ಈ ದೇಶದಿಂದ ಓಡಿಸಬಲ್ಲುದಾದರೂ, ಅದು ಜನರ ನಿಜವಾದ ಸಮಸ್ಯೆಗಳನ್ನು ಪರಿಹರಿಸಲಾರದು ಎಂದು ಕಾರಂತರು ಗಟ್ಟಿಯಾಗಿ ನಂಬಿದ್ದರು. ಈ ಅರ್ಥದಲ್ಲಿ ಶಿವರಾಮಕಾರಂತರು ನಿಜವಾದ ವಾಸ್ತವವಾದಿ ಕಾದಂಬರಿಕಾರರಾಗಿದ್ದಾರೆ. ಅವರಲ್ಲಿದ್ದ ವೈಚಾರಿಕತೆಯಿಂದ ಅವರು ಸಂದೇಹವಾದಿಯಾಗಿದ್ದರು. ಅವರು ಸಂದೇಹವಾದಿಯಾಗಿದ್ದರಿಂದ, ವಾಸ್ತವವನ್ನು ಸಮರ್ಪಕವಾಗಿ ಗ್ರಹಿಸುವ, ಪರೀಕ್ಷಿಸುವ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದರು.'[೧]

ಗಾಂಧಿ ಭೇಟಿಯಿಂದ ತುಳುನಾಡಿನಲ್ಲಿ ಹಲವು ಬದಲಾವಣೆಗಳು ಸಂಭವಿಸಿದವು. ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಹೊಸ ಮೌಲ್ಯಗಳು ಜನರಲ್ಲಿ ಸಮಾನತೆಯ ಬೀಜ ಬಿತ್ತಲು ಸಹಾಯಕವಾದವು. ಕೆಳವರ್ಗದವರ ದೇವಸ್ಥಾನ ಪ್ರವೇಶಕ್ಕೆ ಸಂಘರ್ಷ ನಡೆದರೆ, ಕೆಲವೆಡೆ ಪಂಕ್ತಿಭೇದವಿಲ್ಲದೆ ಭೋಜನ ನೀಡುವ ಸುಧಾರಣೆ ನಡೆಯಿತು. ಕೆಳವರ್ಗದವರಲ್ಲಿ ಶಿಸ್ತು, ಸ್ವಚ್ಛತೆ ಬೆಳೆಯಲು ಗಾಂಧಿ ಭೇಟಿ ಕಾರಣವಾಯಿತು. ತ್ಯಾಗ ಮನೋಭಾವ ವಿಜೃಂಭಿಸಿ ಸಮಾಜ ಸ್ಥಿತ್ಯಂತರಗಳಿಗೆ ಒಳಗಾಯಿತು. ಅದರಲ್ಲಿ ವಿಧವಾ ವಿವಾಹ

ಮುಖ್ಯವಾದದ್ದು. ಅವರಿಗೂ ಮರುಮದುವೆ ಮಾಡಿಸಬಹುದು ಎಂಬ ಚಿಂತನೆ ಬೆಳೆಯಿತು. ಸರಳ ವಿವಾಹಗಳು ರೂಢಿಗೆ ಬಂದವು. ಮುಖ್ಯವಾಗಿ ತುಳುನಾಡಿನ ಜನತೆ ರಾಷ್ಟ್ರೀಯತೆಗೆ ತೆರೆದುಕೊಂಡರು. ಪತ್ರಿಕೆಗಳು, ಪುಸ್ತಕಗಳು, ರಾಷ್ಟ್ರೀಯ ಶಾಲೆಗಳು ಜನರಲ್ಲಿ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದವು.

ಅಡಿಟಿಪ್ಪಣಿ

೧. ಶತಮಾನದ ಕನ್ನಡ ಸಾಹಿತ್ಯ, ಜಿ.ಎಚ್.ನಾಯಕ್(ಸಂ.), ಬೃಂದಾವನ ಪ್ರಿಂಟರ್ಸ್, ಬೆಂಗಳೂರು, ಜನವರಿ ೨೦೦೦, ಪುಟ ೨೧೯.

ಅಧ್ಯಾಯ ೭. ತುಳುನಾಡಿನ ಕಥನ ಸಾಹಿತ್ಯ ಮತ್ತು ಭೂಸುಧಾರಣೆ

೭.೧. ಆರಂಭಕಾಲೀನ ಧನಿ–ಒಕ್ಕಲು ಸಂಬಂಧ

೭.೨. ಭೂಸುಧಾರಣೆ ಕಾನೂನಿನ ಅನುಷ್ಠಾನ

೭.೩. ಭೂಸುಧಾರಣೆ ಕಾನೂನು ಸೃಷ್ಟಿಸಿದ ಬದಲಾವಣೆಗಳು

೭.೩.೧. ಧನಿ ಮತ್ತು ಒಕ್ಕಲುಗಳ ಸಂಬಂಧ

೭.೩.೨. ಹೊಂದಾಣಿಕೆ ಮತ್ತು ಸಹಬಾಳ್ವೆ

೭.೩.೩. ಕೃಷಿ ಮತ್ತು ಗುತ್ತಿನ ಮನೆಯ ಮೇಲಾದ ಪರಿಣಾಮಗಳು

೭.೩.೪. ಭೂಸುಧಾರಣೆ ಕಾನೂನು ಮತ್ತು ಹೋರಾಟ

೭.೩.೫. ಭೂಸುಧಾರಣೆ ಕಾನೂನು ಪಡೆದ ಧಾರ್ಮಿಕ ಆಯಾಮ

೭.೩.೬. ಭೂಸುಧಾರಣೆ ಕಾನೂನು ಮತ್ತು ಪಟ್ಟಭದ್ರರ ಕ್ರೌರ್ಯ

೭.೪. ಕೃಷಿ ಸಂಸ್ಕೃತಿ ಮತ್ತು ಆಧುನಿಕತೆಯ ತಲ್ಲಣಗಳು

ಅಧ್ಯಾಯ ೭. ತುಳುನಾಡಿನ ಕಥನ ಸಾಹಿತ್ಯ ಮತ್ತು ಭೂಸುಧಾರಣೆ

೭.೧. ಆರಂಭಕಾಲೀನ ಧನಿ-ಒಕ್ಕಲು ಸಂಬಂಧ

ಪ್ರಾಚೀನ ತುಳುನಾಡಿನಲ್ಲಿ, ರಾಜರ ಕಾಲದಿಂದಲೂ ಜಮೀನ್ದಾರಿ ಪದ್ಧತಿ ಜಾರಿಯಲ್ಲಿತ್ತು. ಬ್ರಿಟಿಷರ ಕಾಲದಲ್ಲಿ ಒಕ್ಕಲು ವ್ಯವಸ್ಥೆ ಹೆಚ್ಚು ಬಲಿಷ್ಠವಾಗಿ ಮುಂದುವರಿದಿತ್ತು. ಒಂದು ಗ್ರಾಮದಲ್ಲಿ ಕನಿಷ್ಠ ಮೂರು ನಾಲ್ಕು ಮಂದಿಯಾದರೂ ಗೇಣಿಗೆ ಭೂಮಿ ನೀಡುವ ಶ್ರೀಮಂತರು ಇರುತ್ತಿದ್ದರು. ಇವರು ತಾವು ದುಡಿಯದೆ ಮೂಲದಾಳುಗಳಿಂದ ದುಡಿಸಿಕೊಳ್ಳುತ್ತಿದ್ದರು. ಇವರಿಗೆ ಭೂಮಿ ಇಲ್ಲದೆ ಪ್ರತಿಯೊಂದಕ್ಕೂ ಜಮೀನ್ದಾರನನ್ನು ನಂಬಿಕೊಂಡಿದ್ದರು. ಜಮೀನ್ದಾರರು ಹೆಚ್ಚಿನ ಭೂಮಿಯನ್ನು ಮೂಲಗೇಣಿಗೆ ಅಥವಾ ಚಾಲಗೇಣಿಗೆ ನೀಡುತ್ತಾ ಆದಾಯ ಹೆಚ್ಚಿಸಿಕೊಳ್ಳುತ್ತಿದ್ದರು.

ಆರಂಭಕಾಲೀನ ಧನಿ-ಒಕ್ಕಲು ಸಂಬಂಧ ಕ್ರೌರ್ಯದಿಂದ ಕೂಡಿತ್ತು.'ಗಾಂಧಿ ಬಂದ' ಕಾದಂಬರಿ ಪಟೇಲ ಶೀನಪ್ಪಯ್ಯ ಹೆಬ್ಬಾರರು ಹಾಗೂ ಕುಳಾಯಿ ಗುತ್ತಿನ ಪಾಂಡು ಶೆಟ್ಟರ ಒಕ್ಕಲು ಮಕ್ಕಳೊಂದಿಗಿನ ಸಂಬಂಧವನ್ನು ಚಿತ್ರಿಸುತ್ತದೆ. ಮೂಲದಾಳುಗಳು, ಮೂಲಗೇಣಿ ಒಕ್ಕಲು, ಚಾಲಗೇಣಿ ಒಕ್ಕಲು ಎಂಬ ಮೂರು ರೀತಿಯ ಒಕ್ಕಲುಗಳನ್ನು ಕಾಣಬಹುದು. ಮೂಲದಾಳುಗಳು ಜೀತದಾಳಿನಂತೆ ದುಡಿಯುವವರು. ಮೂಲಗೇಣಿ ಒಕ್ಕಲಿನವರು ತಮ್ಮ ಭೂಮಿಯ ಮೇಲಿನ ಅರ್ಧ ಒಡೆತನ ಹೊಂದಿದ್ದು ಗೇಣಿ ನೀಡಬೇಕಾಗಿತ್ತು. ಚಾಲಗೇಣಿ ಒಕ್ಕಲಿನವರಿಗೆ ಭೂಮಿಯ ಮೇಲೆ ಅಧಿಕಾರ ಇರದೆ ಹೆಚ್ಚಿನ ಗೇಣಿ ನೀಡುವುದು ಕಡ್ಡಾಯವಾಗಿತ್ತು. ಈ ಕಾದಂಬರಿ ಧನಿ ಹಾಗೂ ಮೂಲದಾಳುಗಳ ಸಂಬಂಧವನ್ನು ಮುತುವರ್ಜಿಯಿಂದ ಚಿತ್ರಿಸಿದೆ.

ಸೂರ್ಯ ಮೂಡುವ ಮೊದಲೇ ಆರಂಭವಾಗುವ ಮೂಲದಾಳುಗಳ ಕೆಲಸಗಳು ಸೂರ್ಯ ಕಂತುವವರೆಗೂ ಮುಂದುವರಿಯುತ್ತವೆ. ಮೂಲದಾಳುಗಳ ಬೆಂಬಲವಿಲ್ಲದೆ ಧನಿಗಳ ಮನೆಯ ಯಾವ ಕೆಲಸವೂ ಸಾಗದು. ದಿನನಿತ್ಯದ ಕೆಲಸ ಕಾರ್ಯಗಳು ಸುಗಮವಾಗಿ ಸಾಗಲು ಮೂಲದಾಳುಗಳು ಧನಿಗಳು ಒಪ್ಪಿಸುವ ಕೆಲಸಗಳನ್ನು ಚಾಚೂತಪ್ಪದಂತೆ ಪಾಲಿಸುವುದು ಅನಿವಾರ್ಯ. ಹೆಬ್ಬಾರರು ನಡೆಸುವ ಊರ ಕಂಬಳದ ಮಾರನೇ ದಿನ ಕಾಣದ ಮೂಲದಾಳುಗಳನ್ನು ಗಮನಿಸಿ ರುಕುಣಿಯಮ್ಮ 'ಈ ಶೂದ್ರ ಬಿಕನಾಸಿಗಳು ತಮಗೆ ಎಷ್ಟು ಮುಖ್ಯವೆಂದರೆ-ರಕ್ತನಾಳದಷ್ಟೆ'(ಗಾಂಧಿ ಬಂದ, ಪುಟ ೫೪) ಎಂದು ಅಂದುಕೊಳ್ಳುವುದು ಗಮನಿಸಬೇಕಾದ ಅಂಶ. ಮೂಲದಾಳುಗಳು ತಮ್ಮ ಕಾರ್ಯ ಸಾಧಿಸಲು ನೇರವಾಗಿ ಧನಿಗಳ ಜೊತೆ ಸೆಣಸಾಡಲು ಅಸಾಧ್ಯವಾದ್ದರಿಂದ ಚಾಣಕ್ಷರಾಗಿ ನಿಭಾಯಿಸುತ್ತಾರೆ. ಸುಳ್ಳು ಹೇಳುವುದು, ತಪ್ಪಿಸಿಕೊಳ್ಳುವುದು ಅವರು ಪ್ರಧಾನವಾಗಿ ಬಳಸುವ ತಂತ್ರಗಳು. ಕಂಬಳ ಗದ್ದೆಯ ನಾಟಿ ಮಾಡಲು ಕಂಬಳದ ಮಾರನೆ ದಿನ ಹೆಬ್ಬಾರರು ಮೂಲದಾಳುಗಳ ಕೇರಿಯ ಬಳಿ ಸಮೀಪಿಸಿದಾಗ ಅಂತಪ್ಪ ಹೆಂಡತಿಗೆ ವಾಚಾಮಗೋಚರವಾಗಿ ಬಯ್ದು ಹೆಬ್ಬಾರರ ಕೋಪವನ್ನು ತಣಿಸುವ ಪ್ರಸಂಗ ಈ ನಿಟ್ಟಿನಲ್ಲಿ ಗಮನಿಸಬಹುದು.

'ಒಂದು ಕಾಳ್ಗಿಚ್ಚು ನಂದಿಸಲು, ಮತ್ತೊಂದು ಕಾಳ್ಗಿಚ್ಚು ಹಚ್ಚು; ಎರಡೂ ನಂದುತ್ತೆ' ಎಂದು ಗುತ್ತಿನ ಪಾಂಡು ಶೆಟ್ಟರು ಲೋಕಾರೂಢಿಯಾಗಿ ಮಾತನಾಡುತ್ತಾ ಯಾವತ್ತೂ ಹೇಳುವುದಿದೆ.(ಗಾಂಧಿ ಬಂದ, ಪುಟ ೬೨)

ಈ ತಂತ್ರವನ್ನು ಅಂತಪ್ಪ ಬಳಸಿ ಹೆಬ್ಬಾರರ ಕೋಪಾಗ್ನಿಯಿಂದ ಪಾರಾಗುವುದಲ್ಲದೆ, ಮುಟ್ಟಾದ ಹೆಂಗಸರಿಗೆ ನೇಜಿ ನೆಡಲು ಬಯ್ಯುವುದಾಗಿ ಹೆಬ್ಬಾರರ ಪಕ್ಷ ವಹಿಸಿದವನಂತೆ ವರ್ತಿಸುತ್ತಾನೆ. ಹೆಬ್ಬಾರರು ಮುಟ್ಟಾದ ಹೆಂಗಸರು ಗದ್ದೆಯತ್ತ ಸುಳಿಯದಂತೆ ತಾಕೀತು ಮಾಡುವುದರಿಂದ ಅಂತಪ್ಪ ಕಾರ್ಯ ಸಾಧಿಸುವಲ್ಲಿ ಸಫಲತೆ ಪಡೆಯುತ್ತಾನೆ.

ಒಕ್ಕಲು ಮಕ್ಕಳ ಬಡತನದ ಸ್ಥಿತಿ ಅಂತಪ್ಪನ ವಿವರಣೆಯಲ್ಲಿದೆ.ಅದ್ರಾಮನನ್ನು ಮಟ್ಟ ಹಾಕಲು ಮಾರಪ್ಪನನ್ನು ಕರೆತರುವಂತೆ ಹೆಬ್ಬಾರರನ್ನು ಕಳುಹಿಸಿದ ಅಂತಪ್ಪ ಕೋಳಿ ಕಟ್ಟದ ಆಸೆಯಿಂದ ಸುಳ್ಳು ಹೇಳಿ ತನ್ನ ಇಂಗಿತವನ್ನು ಪೂರೈಸಿಕೊಳ್ಳುತ್ತಾನೆ. ಮಾರನೇ ದಿನ ಮತ್ತೆ ಮಾರಪ್ಪನನ್ನು ಕರೆತರಲು ಅನುಮತಿ ಕೇಳಿ ಹೊರಡುವ ಅಂತಪ್ಪನ ವರ್ಣನೆ ಆತನ ಸ್ಥಿತಿ ತಿಳಿಸುತ್ತದೆ. ಬಡವರು, ಗುಲಾಮತನ ಇದ್ದರೂ ಚಾಣಾಕ್ಷರಾಗಿ ಬದುಕುತ್ತಿದ್ದ ಮೂಲದಾಳುಗಳ ಸ್ಥಿತಿ ಗಮನಿಸಬಹುದು.

'ಸೊಂಟದಲ್ಲೊಂದು ಚೌಕುಳಿಯ ಅಡ್ಡ ಪಂಚೆ, ತಲೆಯಲ್ಲೊಂದು ನಾಕು ಮಣ ಕೊಳೆ ಹಿಡಿದ ಕಮಟು ವಾಸನೆಯ ಅಂಗವಸ್ತ್ರ, ಕೈಯಲ್ಲೊಂದು ಪೈರು ಬಡಿಯುವ ಬೈತಡ್ ಬಿಟ್ಟರೆ ಬೇರೇನಿಲ್ಲದ ಅಂತಪ್ಪನನ್ನು ನೂರು ಗಜ ದೂರದಿಂದಲೇ ಮಾರಪ್ಪ ಶೆಟ್ಟಿಯ ನಾಯಿ ದಡ್ಡನೇ 'ಕೊಂಬು ವಾದ್ಯ'ಗಳಿಂದ ಊಳಿಡುತ್ತಾ ಎದುರುಗೊಂಡ.'(ಗಾಂಧಿ ಬಂದ, ಪುಟ ೮೨) ದಿನವಿಡೀ ದುಡಿದರೂ ಬಡತನದ ಜೀವನಕ್ಕೆ ಕೊನೆ ಇರಲಿಲ್ಲ. ಅತಿ ಕನಿಷ್ಠ ಸೌಲಭ್ಯಗಳ ಜೊತೆ ಬದುಕುವ ಛಲ ಅವರಲ್ಲಿತ್ತು.

ತನ್ನ ತಂದೆಯ ಕಾಲದಿಂದಲೂ ಜೀತದಾಳುಗಳಾಗಿ ಬದುಕುತ್ತಿದ್ದ ಮೂಲದಾಳುಗಳು ಬಿಸಿಲು, ಮಳೆ, ಚಳಿಯೆನ್ನದೆ ಕೆಲಸ ಮಾಡುತ್ತಿದ್ದರು. ಮುಡಿ ಕಟ್ಟುವ ಕಲಾತ್ಮಕತೆ, ಕೋಳಿ ಕಟ್ಟದಲ್ಲಿನ ಪರಿಣತಿ, ಕಂಬಳ ಕೋಣಗಳ ಅಲಂಕಾರ, ಇತರರ ಮನಸ್ಸನ್ನು ಅರಿಯುವ ಬುದ್ಧಿವಂತಿಕೆ ಇವೆಲ್ಲವೂ ಮೂಲದಾಳುಗಳ ಬದುಕಿನ ರೀತಿಯಲ್ಲಿ ಸೇರಿಹೋಗಿತ್ತು. ಜೀವನಪರ್ಯಂತ ಜೀತದಾಳುಗಳ ಹಾಗೆ ಬದುಕುವ ಅನಿವಾರ್ಯತೆ, ಅಸಹಾಯಕತೆಗೆ ಒಳಗಾದ ಅವರಿಗೆ 'ಗಾಂಧಿ' ವಿಮೋಚನೆಯ ಸಂಕೇತದಂತೆ ಭಾಸವಾಗುವುದು ಅವರಲ್ಲಿ ಆಗತಾನೇ ಮೂಡಿದ ಎಚ್ಚರವನ್ನು ಸೂಚಿಸುತ್ತದೆ. ಕಳ್ಳು ಕುಡಿಯುವುದನ್ನು ಒಂದು ತಿಂಗಳು ನಿಲ್ಲಿಸಿ ಗಾಂಧಿ ನಿಧಿಗೆ ದೇಣಿಗೆ ನೀಡುವುದು ಅವರ ಈ ಎಚ್ಚರದ ಪ್ರಜ್ಞೆಯನ್ನು ಸಾಕ್ಷೀಕರಿಸುತ್ತದೆ.

ಧನಿ ಬಲಶಾಲಿ, ಬಲಾಢ್ಯ, ಶ್ರೀಮಂತ ಹಾಗೂ ಒಕ್ಕಲಿನವ ಅಸಹಾಯಕ, ಬಡವ, ದುರ್ಬಲನಾದುದರಿಂದ ಧನಿಗೆ ವಿಧೇಯತೆ ತೋರುವುದು ಹಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿತ್ತು. ಒಕ್ಕಲಿನವನಿಗೆ ಅಥವಾ ಮೂಲದಾಳಿಗೆ ಕೆಲವು ಸಂದರ್ಭಗಳ ಸುಳ್ಳುಗಳು

ಹಾಗೂ ತಮಾಷೆಗಳು ಮಾತ್ರ ಸ್ವಲ್ಪ ಸಮಾಧಾನ ನೀಡುತ್ತಿದ್ದವು. ಯುಗಾದಿ ಹಬ್ಬದ ಸಂದರ್ಭದಲ್ಲಿ ಗೇಣಿ ಸಂಗ್ರಹಿಸುವುದು ತುಳುನಾಡಿನ ಸಾಮಾನ್ಯ ಪದ್ಧತಿಯಾಗಿತ್ತು.

'ಗಾಂಧಿ ಬಂದ' ಕಾದಂಬರಿಯ ಸೀನಪ್ಪಯ್ಯ ಹೆಬ್ಬಾರರು ಜಮೀನ್ದಾರ ಹಾಗೂ ಊರಿನ ಪಟೇಲ. ಇವರ ಕೈಕೆಳಗೆ ಮೂಲದಾಳುಗಳು, ಮೂಲಗೇಣಿ ಒಕ್ಕಲಿನವರು, ಚಾಲಗೇಣಿ ಒಕ್ಕಲಿನವರು ದುಡಿಯುತ್ತಿದ್ದರು. ಯುಗಾದಿಯಂದು ಗೇಣಿ ಸಂಗ್ರಹಿಸುವ ಸಂಪ್ರದಾಯವನ್ನು ಹೆಬ್ಬಾರರು ಇಟ್ಟುಕೊಂಡಿದ್ದರು. ಎಷ್ಟೋ ಬಾರಿ ಕೆಲವು ಕಾರಣಗಳಿಂದ ಚಾಲಗೇಣಿ ಒಕ್ಕಲಿನವರು ಗೇಣಿ ಕೊಡಲಾಗದ ಸಂದರ್ಭಗಳು ಉಂಟಾಗುತ್ತಿದ್ದವು. ಬೆಳೆ ನಾಶವಾಯಿತೆಂಬ ನೆವನ ಸಾಮಾನ್ಯ. ಇಂತಹ ಸಂದರ್ಭಗಳಲ್ಲಿ ತೋಳ್ಬಲದ ಅಗತ್ಯ ಬಿದ್ದಾಗ ಕಡಲಕೇರಿಯ ಬೆಸ್ತರನ್ನು ಹೆಬ್ಬಾರರು ಬಳಸುತ್ತಿದ್ದರು. ಹೆಬ್ಬಾರರಿಗೆ ಹತ್ತು ಮುಡಿ ಗೇಣಿ ಒಕ್ಕಲಿನ ಐದು ಮನೆಗಳಿದ್ದವು. ತೀರಾ ಅಗತ್ಯ ಎನಿಸಿದಾಗ ಗದ್ದೆ ಕೆಲಸಕ್ಕೆ ಬರುತ್ತಿದ್ದರು. ಸೌರಮಾನ ಯುಗಾದಿಯಂದು ಹೆಬ್ಬಾರರು ಗೇಣಿ ವಸೂಲಿ ಮಾಡುವ ಸಂಪ್ರದಾಯವಿರಿಸಿದ್ದರು.

'ಮೂಲಗೇಣಿಯವರು, ತಾವು ಗೇಣಿ ಕೊಡಬೇಕಾದ ಆಸ್ತಿಯ ಹಕ್ಕಿನ ಅರ್ಧವನ್ನು ಅಗಲೇ ಹಣ ಕೊಟ್ಟು ಧಣಿಯವರಿಂದ ಖರೀದಿಸಿದ್ದು ಇನ್ನರ್ಧ ಆಸ್ತಿಯ ಹಕ್ಕಿಗಾಗಿ ವರ್ಷಂಪ್ರತಿ ಇಂತಿಷ್ಟು ಗೇಣಿ ಹಣ ತೆರಬೇಕಾಗುತ್ತದೆ. ಆದರೆ ಚಾಲಗೇಣಿ ಒಕ್ಕಲಿನವರ ಸ್ಥಿತಿ ಹಾಗಲ್ಲ. ಅವರು ದುಡಿಯುವ ಭೂಮಿಯ ಸಂಪೂರ್ಣ ಒಡೆತನ ಧಣಿಯದ್ದಾದ್ದರಿಂದ, ವರ್ಷಕ್ಕೆ ಇಂತಿಷ್ಟು ಅಕ್ಕಿಮುಡಿಗಳನ್ನು ಗೇಣಿಯಾಗಿ ಆತ ಧಣಿಗೆ ಸಲ್ಲಿಸಬೇಕಾಗುತ್ತದೆ.'(ಗಾಂಧಿ ಬಂದ, ಪುಟ ೨೬೨-೨೬೩)

ಮೂಲಗೇಣಿದಾರರು ತಮ್ಮ ನಿಗದಿತ ಗೇಣಿ ಜೊತೆಗೆ ತರಕಾರಿಗಳನ್ನು ಪಾವತಿಸುತ್ತಾರೆ. ಚಾಲಗೇಣಿಯವರು ಅಕ್ಕಿಮುಡಿಗಳನ್ನು, ತರಕಾರಿಗಳನ್ನು ನೀಡುತ್ತಾರೆ. ದೇವು ಪೂಜಾರಿ ಬೆಳೆನಷ್ಟವಾಗಿ ಗೇಣಿ ಕೊಡಲಾಗದೆ ಅಳುತ್ತಾ ಅಸಹಾಯಕನಾಗಿ ನಿಂತಾಗ, 'ನೀನು ಸಾವಿರ ನೆವನ ಹೇಳಬೇಡಾಂತ ಎಷ್ಟು ಸರ್ತಿ ಹೇಳಬೇಕೋ ಬಿಕನಾಸಿ; ನಿನ್ನ ಗದ್ದೆಗೆ ಬೊಂಬುಚ್ಚಿ ಬೀಳಲಿ ಅಥವಾ ನೀನೇ ಬಿದ್ದು ಲಗಾಡಿ ಹೋಗು ಆದರೆ ನನ್ನ ಬರುವ ಗೇಣಿ ಮಾತ್ರ ಸರಿಯಾಗಿ ಬರಬೇಕು. ... ಇಲ್ಲದಿದ್ದರೆ ಗೇಣಿಗದ್ದೆ ಬಿಟ್ಟುಕೊಡು.'(ಗಾಂಧಿ ಬಂದ, ಪುಟ ೨೬೫) ಜಮೀನ್ದಾರರ ಕ್ರೌರ್ಯ ಕಂಡು ಚಾಲಗೇಣಿಯವನ ದುಃಖಕ್ಕೆ ಮೂಲಗೇಣಿ ಒಕ್ಕಲುಗಳೇ ಆತನ ಅಕ್ಕಿಮುಡಿ ನೀಡುವುದಾಗಿ ಸಹಾಯಕ್ಕೆ ಬಂದರು. ಬಡವರೇ ಬಡವರಿಗೆ ಸಹಾಯ ಹಸ್ತ ನೀಡುವರೆಂಬ ಮಾತು ಸಾಬೀತಾಗುತ್ತದೆ.

ಗೇಣಿದಾರರು ಗೇಣಿಯ ದುಡ್ಡು ಜೊತೆಗೆ ಬೆಳೆದ ತರಕಾರಿಗಳನ್ನು ನೀಡುವುದು ಸಾಮಾನ್ಯವಾಗಿತ್ತು. ನೀರಿಲ್ಲದೆ, ಪ್ರಾಣಿಗಳ ಹಾವಳಿಯಿಂದ ತರಕಾರಿಗಳನ್ನು ಬೆಳೆಯುವುದು ದುಸ್ಸಾಹಸದ ಕೆಲಸವಾದರೂ ಧನಿಪತ್ನಿಯ ಬೈಗುಳಗಳಿಗೆ ಹೆದರಿ ಅತ್ಯುತ್ತಮವಾದುದನ್ನು ನೀಡಲು ಹೆಣಗಾಡುತ್ತಿದ್ದರು. ಬೊಂಬುಚ್ಚಿ ಬಂದು ಬೆಳೆ ಹಾಳಾದ ದೇವು ಪೂಜಾರಿಗೆ ಹೆಬ್ಬಾರರು ಗೇಣಿ ವಿನಾಯಿತಿ ನೀಡದಾಗ ಮೂಲಗೇಣಿ ಒಕ್ಕಲಿನವರಾದ ಅಣ್ಣು ಶೆಟ್ಟಿ, ಅಚ್ಚು ಶೆಟ್ಟಿ ಆ ಗೇಣಿ ತಾವು ನೀಡುವುದಾಗಿ ಭರವಸೆ ನೀಡುತ್ತಾರೆ.

ಒಕ್ಕಲುಗಳು ದೀನನಾಗಲು ಧನಿ ಕ್ರೌರ್ಯವನ್ನು ಹೊಂದಿರುವುದೇ ಪ್ರಮುಖ ಕಾರಣ. ತಪ್ಪಿಗೆ ನೀಡುತ್ತಿದ್ದ ಶಿಕ್ಷೆಗಳೂ ಮೂಲದಾಳುಗಳನ್ನು ಬೆದರಿಸಿ ಹದ್ದುಬಸ್ತಿನಲ್ಲಿಡಲು ಬಳಕೆಯಾಗುತ್ತಿದ್ದವು.

ಕುಳ್ಯಾಗುತ್ತಿನ ಪಾಂಡು ಶೆಟ್ಟರು ಕೋಳಿ ಅಂಕದಲ್ಲಿ ಸೋತು ಬಂದ ಮೂಲದಾಳುಗಳಿಗೆ ನೂರು ಮರಿಗೆ ಹೆಚ್ಚಿಗೆ ನೀರನ್ನು ತೋಟಕ್ಕೆ ಮಗುಚುವ ಶಿಕ್ಷೆ ನೀಡುವರು. ಈ ಶಿಕ್ಷೆಗಳು ಹಾಗೂ ಬೈಗಳು ಅವರನ್ನು ಮಿತಿಮೀರಿ ನಡೆಯದಂತೆ ವಿಧೇಯತೆಯೇ ಮೈವೆತ್ತಂತೆ ನಡೆಯಲು ಕಾರಣವಾಗಿದ್ದವು. ಆದರೂ ಸುಳ್ಳು, ವಂಚನೆ, ತಪ್ಪನ್ನು ಇನ್ನೊಬ್ಬರ ಮೇಲೆ ಹಾಕುವುದು ಮೊದಲಾದ ಒಳದಾರಿಗಳಿಂದ ತಮ್ಮನ್ನು ತಾವು ರಕ್ಷಿಸಲು ಹೆಣಗಾಡುತ್ತಿದ್ದರು.

'ಸುಳಿಗಾಳಿ' ಕಾದಂಬರಿಯಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದರೂ ಪ್ರಜೆಗಳಿಗೆ ಮರೀಚಿಕೆಯಾದ ಸ್ವಾತಂತ್ರ್ಯದ ಕುರಿತ ಸ್ಪಷ್ಟ ಚಿತ್ರಣವಿದೆ. ನಾಭಿರಾಜಯ್ಯನ ಒಕ್ಕಲಾದ ರಾಮಪ್ಪ ಸಾತ್ವಿಕ ಮನುಷ್ಯ. ರಾಮಪ್ಪನ ಹೆಂಡತಿ ಕೆಂಚಮ್ಮನ ಅತ್ಯಾಚಾರ ಮಾಡಲು ಬಂದ ಧನಿ ಆಕೆಯಿಂದ ಅವಮಾನಕ್ಕೆ ಗುರಿಯಾಗುತ್ತಾನೆ. ನಾಭಿರಾಜಯ್ಯ ದುಷ್ಟ ಸಹಪಾಠಿಗಳ ಸಹವಾಸದಿಂದ ಓದುವ ಕಾಲಕ್ಕೆ ಕೆಟ್ಟವನಾಗಿರುತ್ತಾನೆ. ಧನಿಯಾದ ಮೇಲೂ ಕ್ರೌರ್ಯವನ್ನೇ ಮೆರೆಯುವುದನ್ನು ಕಾಣಬಹುದು.

ರಾಮಪ್ಪ ಮದುವೆಯಾದ ಹೊಸತರಲ್ಲಿ ಧನಿಗಳ ಮನೆಗೆ ಹೆಂಡತಿಯೊಂದಿಗೆ ಹೋಗಿದ್ದನು. ನಾಭಿರಾಜಯ್ಯನ ದೃಷ್ಟಿ ಅದಾಗಲೇ ಕೆಂಚಮ್ಮನ ಮೇಲೆ ಬಿದ್ದಿತ್ತು. ರಾಮಪ್ಪ ಮನೆಯಲ್ಲಿ ಇಲ್ಲದಾಗ ಮನೆಗೆ ನುಗ್ಗಿದ ಧನಿಗಳನ್ನು ನೋಡಿ ಆಕೆ ದಿಗ್ಭ್ರಮೆಗೊಂಡಳು. ಕೈಯಲ್ಲಿದ್ದ ಮಗು ಆಕೆಯ ಅರಿವಿಲ್ಲದಂತೆಯೇ ಕೆಳಗೆ ಬಿದ್ದಿತ್ತು. ರಕ್ಷಣೆಗಾಗಿ ಕುಡುಗೋಲನ್ನೇ ಕೈಯಲ್ಲಿ ಹಿಡಿದು ನಿಂತಾಗ ಧನಿ ಹೆದರಿ ತನ್ನ ಮನೆಯ ಹೊಸ್ತಿಲು ತುಳಿದಿದ್ದ. ಭಯಭೀತಳಾದ ಕೆಂಚಮ್ಮ ಗಂಡನಲ್ಲೂ ಈ ವಿಚಾರ ಬಯಲುಮಾಡುವುದಿಲ್ಲ. ಈ ವಿಚಾರ ಧನಿ ಹಾಗೂ ಕೆಂಚಮ್ಮರಲ್ಲಿ ಉಳಿದುಬಿಡುತ್ತದೆ. ಒಕ್ಕಲು ಮಕ್ಕಳ ಹೆಣ್ಣುಮಕ್ಕಳು ಮಾನರಕ್ಷಣೆಗಾಗಿ ಪಡುವ ಕಳವಳ, ಆತಂಕವನ್ನು ಇಲ್ಲಿ ಗುರುತಿಸಬಹುದು. ಜಮೀನ್ದಾರಿ ವ್ಯವಸ್ಥೆಯಲ್ಲಿ ಬಡಮಹಿಳೆಯರ ಶೋಷಣೆಯು ನಿರಂತರವಾಗಿ ನಡೆಯುತ್ತಿತ್ತು.

ರಾಮಪ್ಪ ಕೆಂಚಮ್ಮರಿಗೆ ಮೂವರು ಮಕ್ಕಳು. ದೇವಪ್ಪ, ಶೇಖರ, ಮಾಧವ. ದೇವಪ್ಪ ಅದಾಗಲೇ ವಿವಾಹವಾಗಿ ಕುಟುಂಬದಿಂದ ದೂರವಾಗಿದ್ದ. ಪ್ರಕೃತಿಯ ಮುನಿಸಿಗೆ ಬಲಿಯಾದ ರಾಮಪ್ಪನ ಮನೆಯ ಮಾಡು ಕುಸಿಯಿತು ಹಾಗೂ ಹಟ್ಟಿ ನೆಲಸಮವಾಗುತ್ತದೆ. ಧನಿಗಳ ಬಳಿ ಕಷ್ಟ ತೋಡಿಕೊಂಡಾಗ ಪರಿಹಾರ ಶೂನ್ಯವಾಗುತ್ತದೆ.

'ಮನೆಯನ್ನು ಸರಿಪಡಿಸಲು ನಿಮ್ಗೆ ಸಂಕಟ. ಈಗ ಮನೆ ಹೋಯ್ತು ಅಂತ ಇಲ್ಲಿ ಗೋಳಿಟ್ಟರೆ ನಾನೇನು ಮಾಡಬೇಕು! ನೀವು ದಿನಕ್ಕೊಂದು ಮನೆಯನ್ನು ಉರುಳಿಸಿಬಿಡಿ. ಹಾಗೆಲ್ಲ ಕಟ್ಟಿಸಿಕೊಡೋಕೆ ನಿಮ್ಮ ಅಪ್ಪನ ಗಂಟು ಇಲ್ಲಿಲ್ಲ. ನನ್ನಿಂದ ಒಂದು ಬಿಡಿಗಾಸೂ ಸಿಗುವ ಹಾಗಿಲ್ಲ. ಕಳೆದ ಬಾರಿಯೂ ಗೇಣಿ ಅರ್ಧಕ್ಕರ್ಧ ಕೊಟ್ಟಿಲ್ಲ, ಈ ಸಾರಿಯೂ ಕೊಡದಿದ್ದರೆ ಪಾತ್ರೆ ಪರಡಿ ಸಮೇತ ಹೊರಹಾಕಿಬಿಡುತ್ತೇನೆ. ದಾರಿಯಲ್ಲಿ ಹೋಗೋ ನಾಯಿಗೆ ಆಶ್ರಯ ಕೊಟ್ರೆ ಇದೇ

ಗತಿ.'(ಸುಳಿಗಾಳಿ, ಪುಟ ೧೨) ಸ್ವಾತಂತ್ರ್ಯ ಲಭ್ಯವಾದರೂ ದೇಶದೊಳಗೆ ಇರುವ ದೌರ್ಜನ್ಯ, ಶ್ರೀಮಂತರಿಂದ ಬಡವರು ತುಳಿತಕ್ಕೆ ಒಳಗಾಗುವುದು, ಸ್ವಾತಂತ್ರ್ಯ ಎನ್ನುವುದು ಗೇಣಿದಾರರ ಪಾಲಿಗೆ ಇಲ್ಲವಾಗಿರುವುದು ಧನಿಗಳ ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಆ ವರ್ಷ ಎಣೆಲು ಬೆಳೆ ಕೊಯಿಲಿಗೆ ಸಿದ್ಧವಾದಾಗ ಧನಿಗಳ ಆಳುಗಳೇ ಕೊಯ್ದು ಸಾಗಿಸಿದ್ದರು. ರಾಮಪ್ಪನಿಗೆ ಬೆಳೆದ ಬೆಳೆ ಕೈಗೆ ಸಿಗದೆ ತುಂಬಾ ತೊಂದರೆಗೆ ಒಳಗಾಗುತ್ತಾನೆ. ಹಸಿವು, ನಿಶ್ಶಕ್ತಿ ಆತನನ್ನೂ, ಆತನ ಕುಟುಂಬದವರನ್ನೂ ಬಾಧಿಸುತ್ತದೆ. ಆದರೂ ಧನಿಗಳನ್ನು ವಿರೋಧಿಸುವಂತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಹಕ್ಕು ಲಭ್ಯವಾದರೂ ರಾಮಪ್ಪ ಪ್ರತಿಭಟಿಸುವ ಗೋಜಿಗೂ ಹೋಗದೆ ಧನಿಗಳ ಬಿಟ್ಟಿಗೆ ಹೋಗುವುದನ್ನು ಮುಂದುವರಿಸುತ್ತಾನೆ. ಪ್ರತಿಭಟಿಸಿದರೆ ಮನೆ ಕಳೆದುಕೊಳ್ಳುವ ಭಯ. ದೌರ್ಜನ್ಯಗಳನ್ನು ಸಹಿಸುತ್ತಾ ರಾಮಪ್ಪ ಧನಿಗಳ ಬಿಟ್ಟಿ ಚಾಕರಿಗೆ ತೆರಳಿರುತ್ತಾನೆ. ಬವಳಿ ಬರುವಂತಾದಾಗ ಧನಿಯ ಮನೆಯ ಬೋದಿಗೆ ಕಂಬಕ್ಕೆ ಒರಗಿ ನಿದ್ರೆ ಹೋದನು. ಧನಿ ನಾಭಿರಾಜಯ್ಯ ಕೋಪದ ಭರದಲ್ಲಿ ರಾಮಪ್ಪನಿಗೆ ಒದ್ದೇ ಬಿಟ್ಟರು. ಈ ಬಾರಿ ಮಾತ್ರ ರಾಮಪ್ಪ ತೀವ್ರವಾಗಿ ಸಿಟ್ಟುಗೊಂಡು ಧನಿಯ ಕೆನ್ನೆಗೆ ಬಾರಿಸಿದ.

'ಖಾವಂದರೇ, ನಿಮ್ಮ ಹಣದ ಮದ ನಿಮಗೇ ಅಪಾಯ. ವಯಸ್ಸಾದವನೆಂಬುದನ್ನೂ ಲಕ್ಷಿಸದೇ ಒದೆದಿರಿ. ಬಡವರಿಗೆ ಹೃದಯವೇ ಇಲ್ಲವೆಂದು ತಿಳಿದಿರಾ? ನಿಮ್ಮ ಸಿರಿತನ ನಿಮಗಾಯಿತು. ಇಡೀ ದಿನ ದುಡಿಸಿ ತಿಳಿಗಂಜಿ ಕೊಟ್ಟರಿ. ವಯಸ್ಸಾದವ ಬಳಲಿ ಮಲಗಿದಾಗ ಕನಿಕರಿಸದೆ ಒದೆದಿರಿ. ಇದಾವ ನ್ಯಾಯ? ಇದಾವ ಹಿರಿತನ? ನನ್ನ ಸ್ಥಾನದಲ್ಲಿ ನಿಮ್ಮ ತಂದೆಯವರು ಇರುತ್ತಿದ್ದರೆ ಅವರಿಗೂ ಒದೆಯುತ್ತಿದ್ದೀರಾ?'(ಸುಳಿಗಾಳಿ, ಪುಟ ೧೪)

ಬಡವ ರಾಮಪ್ಪ ಪ್ರತಿಭಟನೆಗೆ ದೊಡ್ಡ ಬೆಲೆ ತೆರಬೇಕಾಗುತ್ತದೆ. ನಾಭಿರಾಜಯ್ಯ ಮಾರನೇ ದಿನವೇ ಮನೆಯಿಂದ ಆತನ ಕುಟುಂಬವನ್ನೇ ಹೊರಹಾಕುವ ಪಣವನ್ನು ತೊಡುತ್ತಾನೆ. ಮಾರನೇ ದಿನ ಪೋಲಿಸರು ಧನಿಯ ಜೊತೆ ರಾಮಪ್ಪನ ಮನೆಯ ಬಳಿ ಹಾಜರಾದರು. ಉಪಯುಕ್ತ ಸಲಕರಣೆಗಳೆಲ್ಲಾ ಧಣಿಯ ಪಾಲಾದವು. ಅಕ್ಷರಶಃ ರಾಮಪ್ಪ ಹಾಗೂ ಆತನ ಕುಟುಂಬವನ್ನು ಬೀದಿಗೆ ತಳ್ಳಲಾಯಿತು. ಸ್ವಾತಂತ್ರ್ಯಾನಂತರದ ದಿನಗಳಲ್ಲೂ ಪ್ರಜಾಪ್ರಭುತ್ವದ ದುಃಸ್ಥಿತಿಯನ್ನು ಬಣ್ಣಿಸುತ್ತದೆ. ರಕ್ಷಕರೇ ಭಕ್ಷಕರಾಗುವ, ಉಳ್ಳವರ ಪರ ವಹಿಸುವ ಶೋಚನೀಯ ಪರಿಸ್ಥಿತಿಯನ್ನು ವಿವರಿಸುತ್ತದೆ. ಪ್ರಜಾಪ್ರಭುತ್ವದ ಕಾನೂನು ವ್ಯವಸ್ಥೆಯಡಿ ಕಾಪಾಡಬೇಕಾದ ಪೋಲಿಸರು, ಇತರ ಅಧಿಕಾರಿಗಳೇ ಬಡತನವನ್ನು ಇನ್ನೂ ಶೋಷಿಸಲು ಅಧಿಕಾರ ಬಳಕೆ ಮಾಡುವ ಬಗೆ ವಿವರಿಸುತ್ತಾ ಪ್ರಜಾಪ್ರಭುತ್ವದ ಹುಳುಕುಗಳನ್ನು ಬಿಚ್ಚಿಡುತ್ತದೆ.

'ನಲವತ್ತು ರೂಪಾಯಿ ಸಂಬಳದಲ್ಲಿ ಅವರು ಹೇಗೆ ಹೊಟ್ಟೆ ಹೊರೆದುಕೊಂಡಾರು? ಪಾನ ನಿಷೇಧ ಕಾನೂನೇನೋ ಜಾರಿಯಲ್ಲಿದೆ. ಶಾಂತಿಪಾಲಕರು ಇದರಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರ ಶಿಸ್ತಾದರೋ ಅಸಾಧಾರಣ. ತಿಂಗಳ ಮೂವತ್ತನೇ ತಾರೀಖಿನ ಒಳಗೆ ಶರಾಬು ತಯಾರಕರು ಅವರಿಗೆ ಕೊಡಬೇಕಾದ ಬಹುಮಾನ ಕೊಡದೇ ಇದ್ದರೆ ಮರುದಿವಸವೇ ಪೋಲಿಸರ ತಂಡ ಅವನ ಮನೆಯ ಮುಂದೆ ಹಾಜರಾಗುತ್ತದೆ. ಯಾವನು ತಮ್ಮ ಹೆಂಡತಿ ಮಕ್ಕಳಿಗೆ ಅರೆಹೊಟ್ಟೆ ಉಣಿಸುವನೋ ಅವನಿಗೆ ಬೇಡಿ ತೊಡಿಸಿ ಪೇಟೆಯಲ್ಲಿ ಮೆರವಣಿಗೆ

ಮಾಡಿಸಲಂಜುವುದಿಲ್ಲ ಈ ಶಾಂತಿಪಾಲಕರು! ಈ ಬಗ್ಗೆ ಅವರಲ್ಲಿರುವ ಒಗ್ಗಟ್ಟು ಜೇನುನೊಣಗಳಲ್ಲಿಯೂ ಇರಲಾರದು. ಮಾಧವ ಹಲ್ಲು ಕಡಿಯುತ್ತಿದ್ದ. ಆದರೆ ಸರಕಾರವೇ ಅವರಿಗೆ ಬೆಂಬಲವಾಗಿ ಇರುವಾಗ ಯಾರೇನು ಮಾಡಲು ಸಾಧ್ಯ?'(ಸುಳಿಗಾಳಿ, ಪುಟ ೧೬)

ಶಾಂತಿಪಾಲಕರಾದ, ಕಾನೂನುಪಾಲಕರಾದ ಪೋಲಿಸರು ಶ್ರೀಮಂತರೊಂದಿಗೆ ಸೇರಿ ಬಡವನನ್ನು ದೋಚುವ, ಅನ್ಯಾಯದ ಹಾದಿ ತುಳಿಯುವ ರೀತಿಯ ವಿಶ್ಲೇಷಣೆ ಮಾಡಲಾಗಿದೆ. ಭೂಸುಧಾರಣೆ ಕಾನೂನು ಜಾರಿಯಾಗುವ ಪೂರ್ವದ ಧನಿ–ಒಕ್ಕಲಿನ ಕ್ರೌರ್ಯ ಸಂಬಂಧ ಇಲ್ಲಿ ದಾಖಲಾಗಿದೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯ ಧನಿ ಮಾಧವ ಮತ್ತು ಒಕ್ಕಲುಗಳ ಸಂಬಂಧ ಕ್ರೌರ್ಯದ್ದು. ಮಾಧವ ಅಧಿಕಾರದ ರುಚಿ ಹತ್ತಿಸಿಕೊಂಡವನು. ತಂದೆಯ ಅನಾರೋಗ್ಯ ಹಾಗೂ ಸಾವಿನ ನಂತರ ಪ್ರಬಲನಾಗುತ್ತಾ ಕ್ರೌರ್ಯ, ದಬ್ಬಾಳಿಕೆ, ಕಾವಲಿಗೆ ದಾಂಡಿಗರು, ಲಂಚ ಇವುಗಳಿಂದ ಇಡೀ ಕೆಮ್ಮಾಯಿಯನ್ನೇ ತನ್ನ ವಶದಲ್ಲಿಡುತ್ತಾನೆ. ಆತನ ವಿರುದ್ಧ ನಿಂತವರು ಕೊಲೆಯಾಗುವುದು ಇಲ್ಲವೆ ಕಣ್ಮರೆಯಾಗುವುದು ಅಕ್ಷರಶಃ ಸತ್ಯ. ತಂದೆ ಕೃಷ್ಣದೇವರಾಯ ಅನಾರೋಗ್ಯದಲ್ಲಿ ನರಳುತ್ತಿರುವಾಗಲೇ ಶಾನುಭೋಗರನ್ನು ಕರೆಸಿ ಆಸ್ತಿಯ ಸುತ್ತಲೂ ಗಡಿ ಹಾಕಿ ಭದ್ರ ಬೇಲಿ, ಕೆಲವು ಕಡೆ ಪಾಗಾರ ನಿರ್ಮಿಸುತ್ತಾನೆ. ಪಕ್ಕದ ಹಾಡಿಯ ಗಂಗಮ್ಮನ ಜಮೀನಿನ ಸ್ವಲ್ಪ ಭಾಗವನ್ನು ಗಡಿಯ ಒಳಗೆ ಸೇರಿಸಿಬಿಡುತ್ತಾನೆ. ಗೇಣಿ ನೂರಕ್ಕೆ ನೂರ ಇಪ್ಪತ್ತರಷ್ಟು ಸಂಗ್ರಹವಾಗುತ್ತದೆ. ತನ್ನ ವಿರುದ್ಧ ನಿಂತವರನ್ನು ಒಬ್ಬರನ್ನೂ ಬದುಕಲು ಬಿಡದೆ ತನ್ನ ತಾಳಕ್ಕೆ ತಕ್ಕಂತೆ ಕುಣಿಸುತ್ತಾನೆ. ಸಾಮ, ದಾನ, ಭೇದ, ದಂಡ ನಾಲ್ಕು ಅಸ್ತ್ರಗಳನ್ನು ಬಳಸಿ ತನ್ನ ಕೆಲಸಗಳನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಒಕ್ಕಲಿಗ ತನಿಯನನ್ನು ದೂಡಿ ಹಾಕಿದ ರಭಸಕ್ಕೆ ಕಲ್ಲಿಗೆ ತಲೆ ಬಡಿದು ಹತನಾಗುವುದು, ತುಕ್ರನನ್ನು ಒಕ್ಕಲೆಬ್ಬಿಸಿದ್ದು ಹೀಗೆ ಒಕ್ಕಲಿಗರಲ್ಲಿ ಭೀತಿ ಹಬ್ಬಿಸಿ ಗೇಣಿ ವಸೂಲಿಯಲ್ಲಿ ತೀವ್ರಗತಿಯ ಹೆಚ್ಚಳ ಕಂಡುಬರುತ್ತದೆ. ತನ್ನ ಕ್ರೌರ್ಯದ ಸುಳಿವು ತಂದೆ, ತಾಯಿ ಮನೆಯವರಿಗೆ ತಿಳಿಯದಂತೆ ಎಚ್ಚರವಹಿಸುವುದು ಕಾಣಬಹುದು. ಆದರೆ ತಂದೆಯ ಸಾವಿನ ನಂತರ ಆತನ ವರ್ತನೆಗೆ ಯಾರ ಕಡಿವಾಣವೂ ಇಲ್ಲದೆ ಬೇಕಾಬಿಟ್ಟಿಯಾಗಿ ಬದುಕು ಸಾಗುತ್ತದೆ. ಮನೆಯ ಒಳಗಿನವರಿಗೆ ಉದಾರಿಯಾಗುವ ಆತ ತಮ್ಮ ಸೀತಾರಾಮನನ್ನು ಬಾಲ್ಯದಿಂದಲೇ ಬೆದರಿಸಿ ವಿಧೇಯನಾಗಿರುವಂತೆ ಮಾಡುವುದು ವಿಪರ್ಯಾಸ. ಶಾನುಭೋಗ ವೆಂಕಯ್ಯನವರು ಊರು ಬಿಟ್ಟದ್ದು, ಚೀಂಕ್ರನನ್ನು ದನಕ್ಕೆ ಬಡಿವಂತೆ ಬಡಿದಿದ್ದು. ಲಚ್ಚನ ಕೊಲೆ ನಿರಂಕುಶವಾಗಿ ಆಳ್ವಿಕೆ ನಡೆಸುವ ಮಾಧವ ಭೂಸುಧಾರಣೆ ಕಾನೂನು ಜಾರಿಗೆ ತರಲು ಹೋರಾಟ ನಡೆಸುವವರನ್ನು ಕಂಡರೆ ಸಿಡಿದೇಳುತ್ತಿದ್ದ. ಜಮೀನ್ದಾರಿ ಪದ್ಧತಿಯ ಉತ್ತುಂಗತೆಗೆ ರಾಯರ ಮಗ ಮಾಧವನ ಕಾಲಕ್ಕೆ ಧಕ್ಕೆ ಒದಗುತ್ತದೆ. ಜಮೀನ್ದಾರಿ ಪದ್ಧತಿಯ ಬುಡ ಅಲ್ಲಾಡಲು ಆರಂಭಿಸಿದುದು ಮಾಧವನ ತಲೆಬಿಸಿಗೆ ಕಾರಣವಾಗುತ್ತದೆ. ತನ್ನಂತೆ ಗೇಣಿದಾರರು ಬದುಕಬೇಕು ಎಂಬ ಆಶಯ ಮಾಧವನಲ್ಲಿ ಕಾಣದು. ಕೇರಳದಲ್ಲಿ ಚುನಾವಣೆಯಾಗಿ ಕಮ್ಯೂನಿಸ್ಟ್ ಸರಕಾರ ಜಾರಿಗೆ ಬಂದಿತ್ತು. ಆ ಸಮಯದಲ್ಲಿ 'ಉಳುವವನೇ ಹೊಲದೊಡೆಯ' ಎಂಬ ಮಾತು ರೇಡಿಯೋ, ಪ್ರಚಾರ ಮಾಧ್ಯಮಗಳಲ್ಲಿ ಪ್ರಚಾರದಲ್ಲಿತ್ತು. ಮಾಧವನು ಇದರಿಂದ ತೀವ್ರ ಅಸಮಾಧಾನಕ್ಕೆ ಒಳಗಾಗಿದ್ದ. ರೋಷಕ್ಕೆ ತುತ್ತಾಗುತ್ತಿದ್ದ. ತನ್ನ ಆಸ್ತಿಯಲ್ಲಿ ಗೇಣಿದಾರರಿಗೆ ಪಾಲು

ನೀಡಲು ಆತನಿಗೆ ಇಷ್ಟವಿರಲಿಲ್ಲ. ಲಚ್ಚನ ಕಣ್ಮರೆಯಿಂದ ಕಂಗೆಟ್ಟ ತಾಯಿ ಪಾರು ಅರೆಹುಚ್ಚಿಯಾಗುತ್ತಾಳೆ. ಅಕ್ರಮ ಆಯುಧ ಸಂಗ್ರಹಣೆ, ದಾಂಡಿಗರನ್ನು ಇಟ್ಟುಕೊಂಡು ತನಗೇ ಸವಾಲು ಹಾಕುತ್ತಿದ್ದ ಹಸನಬ್ಬನ ತಂತ್ರಗಳನ್ನು ಮೋಸದಿಂದಲೇ ನಾಶಮಾಡುತ್ತಿದ್ದ. ಹಸನಬ್ಬನ ಕೊಲೆ ಅನಿರೀಕ್ಷಿತವಾಗಿ ಸಂಭವಿಸಿದ್ದು, ಮಾಧವ ಆ ಘಟನೆಯಲ್ಲಿ ನಿರಪರಾಧಿಯಾದರೂ ಅಕ್ರಮ ಆಯುಧ ಸಾಗಣೆಯ ಕೇಸಿನಲ್ಲಿ ಸಿಕ್ಕಿ ಹಾಕಿ ಜೈಲುವಾಸ ಅನುಭವಿಸುವುದು ಆತನ ನಿರಂಕುಶ ಅಧಿಕಾರ ಸಡಿಲಿಸಿಬಿಡುತ್ತದೆ. ತೀರಾ ಅನಾರೋಗ್ಯಕ್ಕೆ ತುತ್ತಾದ ಮಾಧವ ಕೊನೆಯುಸಿರೆಳೆಯುತ್ತಾನೆ. ಮುಂದೆ ಎರಡೇ ವರ್ಷಕ್ಕೆ ಭೂಸುಧಾರಣೆ ಕಾನೂನು ಜಾರಿಯಗಿ ಕೆಮ್ಮಾಡಿ ಮನೆ ಸಾಮಾನ್ಯ ಕೃಷಿ ಮನೆಯಾಗುತ್ತದೆ.

'ಕೊರಡ್ಕಲ್ ಶ್ರೀನಿವಾಸ' ಬರೆದ 'ಧನಿಯರ ಸತ್ಯನಾರಾಯಣ' ಕತೆಯಲ್ಲಿ ಧನಿಯ ಕ್ರೌರ್ಯ, ತನ್ನ ನೆಲದಲ್ಲಿ ಬೆಳೆದ ಎಲ್ಲವೂ ತನ್ನದು ಎನ್ನುವ ಹಕ್ಕುಸಾಧಿಸುವ ಪ್ರವೃತ್ತಿಯನ್ನು ಗುರುತಿಸಬಹುದು.

ತೌಡ ಬಡವನಾಗಿದ್ದು ಕೋಟೆಮನೆ ನಾಗಪ್ಪನವರ ತೆಂಗಿನ ಪಾಳುತೋಟದ ಗುಡಿಸಲಿನಲ್ಲಿ ತನ್ನ ಮಡದಿ ಹಾಗೂ ಮೂರುಮಕ್ಕಳೊಂದಿಗೆ ವಾಸವಾಗಿದ್ದು, ಆರು ರೂಪಾಯಿ ಗೇಣಿ ವರ್ಷಂಪ್ರತಿ ಗುಡಿಸಲು ಚಾವಣಿ ಮಾಡಲು ನೀಡಬೇಕಾಗಿತ್ತು. ದಿನಕೂಲಿ ಮಾಡಿ ದಿನದೂಡುವ ಹಾಗೂ ಧನಿಯ ಬಿಟ್ಟಿ ಚಾಕರಿ ಮಾಡುತ್ತಿದ್ದ ತೌಡನಿಗೆ ಪೂರ್ತಿ ಗೇಣಿ ನೀಡಲು ಆಗದ ಅಸಹಾಯಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಎರಡು ರೂಪಾಯಿ ಬಾಕಿ ಗೇಣಿ ಕೇಳಲು ಬಂದ ಧನಿ ಬಾಳೆಗೊನೆ ಬಿಟ್ಟದ್ದು ಗಮನಿಸಿ ಸತ್ಯನಾರಾಯಣ ಪೂಜೆಗೆ ನೀಡಲು ಆದೇಶಿಸುತ್ತಾನೆ. ಇತರರ ಮನಸ್ಥಿತಿ, ದುಡಿಮೆ, ಶ್ರಮ ಯಾವುದನ್ನೂ ಪರಿಗಣಿಸದ ಧನಿ ಕಡ್ಡಾಯವಾಗಿ ಬಾಳೆಗೊನೆ ನೀಡಲು ತಿಳಿಸುತ್ತಾನೆ. ಮಕ್ಕಳಿಗಾಗಿ ಒಂದೆರಡು ಬಾಳೆಹಣ್ಣು ತೆಗೆಯಲು ಒಪ್ಪದೆ ತನ್ನ ದಾಷ್ಟ್ಯ, ಕ್ರೌರ್ಯವನ್ನು ಮೆರೆಯುತ್ತಾನೆ.

ಶಿವರಾಮ ಕಾರಂತರ 'ಹೋಳಿಗೆ' ಸಣ್ಣಕತೆಯು ಧನಿಯ ಕ್ರೌರ್ಯವನ್ನು ಪ್ರಚುರಪಡಿಸುತ್ತದೆ. ಭೂಮಾಲೀಕ ಸುಬ್ಬರಾಯರು ಶ್ರೀಮಂತ ವ್ಯಕ್ತಿ. ಆತನ ಮನೆಗೆ ಭೇಟಿ ನೀಡದೆ ಪಾಣೂರಿಗೆ ಆಗಮಿಸಿದ ಯಾವ ಸರಕಾರಿ ಅಧಿಕಾರಿಯೂ ತೆರಳುವುದಿಲ್ಲ. ತೆರಳಿದರೂ ಅವರ ಗಾಡಿ ಹಾಳಾಗಿ ನಿಂತುಬಿಡುವುದು ಮಾಮೂಲು. ಬಂದವರಿಗೆ ಅಡುಗೆ ಸಣ್ಣಪ್ಪನ ಹೋಳಿಗೆ ಸವಿಯಲು ನೀಡುವುದು ಪರಿಪಾಠವಾಗಿತ್ತು. ಮಧುಮೇಹ ಕಾಯಿಲೆಯ ಬಡ ಸಣ್ಣಪ್ಪ ತಾನು ರುಚಿ ನೋಡಲು ಆಗದಿದ್ದರೂ ಹೋಳಿಗೆ ರುಚಿಯಾಗಿ ಮಾಡುವನು. ಧನಿ ರುಚಿ ನೋಡಲು ಹೇಳಿದರೂ ಮನೆಗೆ ಕೊಂಡು ಹೋಗಲು ಧನಿಯ ಅನುಮತಿ ಇರಲಿಲ್ಲ. ಆಕಸ್ಮಾತ್ತಾಗಿ ಆತನ ಮಡದಿ ಅಸುನೀಗಿ ಮೂರು ವರ್ಷದ ಸಣ್ಣ ಪ್ರಾಯದ ಮಗಳನ್ನು ಜೊತೆಗೇ ಕರೆದುಕೊಂಡು ಹೋಗಬೇಕಾದ ಸಂದಿಗ್ಧ ಪರಿಸ್ಥಿತಿ ಸಣ್ಣಪ್ಪನದು. ಧನಿಗೆ ಮಕ್ಕಳನ್ನು ಕಟ್ಟಿಕೊಂಡು ಬರುವುದು ಆಗದ ವಿಚಾರ. ಸುಬ್ಬರಾಯರ ಅಳಿಯ ಬರುವನೆಂದು ಹೋಳಿಗೆ ಮಾಡಲು ತಿಳಿಸುವನು. ಸಣ್ಣಪ್ಪ ಮಗುವನ್ನು ಬೇರೆ ಕೆಲಸಗಾರರ ಬಳಿ ಬಿಟ್ಟು ಹೋಳಿಗೆಯನ್ನು ಮಾಡಿ ಬಡಿಸಲು ತೊಡಗುವಾಗ ಓಡಿ ಬಂದ ಮಗು 'ಅಪ್ಪಾ ಅಪ್ಪಚ್ಚೀ' ಎಂದು ಕೂಗಿದಾಗ 'ಯಾವ ಪ್ರೇತವಿದು?'

ಎಂಬ ತೀಕ್ಷ್ಣ ನುಡಿಗಳು ಧನಿ ಬಾಯಿಂದ ಹೊರಗೆ ಬಂದವು. ಮಗಳನ್ನು ಅಡಿಗೆ ಕೋಣೆಗೆ ಒಯ್ದು ಸಣ್ಣಪ್ಪ ಎರಡು ಪೆಟ್ಟು ನೀಡುತ್ತಾನೆ. ಒಬ್ಬರಿಗೆ ನಾಲ್ಕರಂತೆ ಬಡಿಸಿದ ಹೋಳಿಗೆಯನ್ನು ಪೂರ್ತಿ ತಿನ್ನಲಾಗದಿದ್ದರೂ ಧನಿ, ಮಗಳು, ಅಳಿಯ ಮಗುವಿಗೆ ನೀಡಲು ಹೋಗುವುದಿಲ್ಲ. "ಸಣ್ಣಪ್ಪ, ಇಷ್ಟು ವಯಸ್ಸಾದರೂ ನಿನಗೆ ಜ್ಞಾನವಿಲ್ಲವೆ?" ಎಂಬ ಮಾತುಗಳು ಧನಿ ಬಾಯಿಯಿಂದ ಕೇಳಿ ಸಣ್ಣಪ್ಪ ತೀವ್ರ ಘಾಸಿಗೊಳಗಾಗಿ ಮನೆಗೆ ಬಂದು ಸಿಟ್ಟಿನಲ್ಲಿ ಮಗುವನ್ನು ನೆಲಕ್ಕೆ ಅಪ್ಪಳಿಸುತ್ತಾನೆ. ಮಗು ಪ್ರಾಣಬಿಡುತ್ತದೆ. ಜಮೀನ್ದಾರರ ತೀವ್ರ ದಬ್ಬಾಳಿಕೆ, ಹೊಟ್ಟೆ ತುಂಬಿದವರಿಗೆ ಮಾತ್ರ ಹೋಳಿಗೆ ನೀಡುವ ಪರಿ, ಕೆಲಸದವರಿಗೆ ಇಲ್ಲದ ಕನಿಷ್ಠ ಸೌಲಭ್ಯಗಳು ಇತ್ಯಾದಿಗಳನ್ನು ಗಮನಿಸಬಹುದು. ಮಗುವಿನ ಬಗ್ಗೆಯೂ ಕನಿಕರ ಉಕ್ಕದ ಧನಿ ಜೀತದಾಳುಗಳೊಂದಿಗೆ ಇದ್ದ ಪರಿ ಊಹಿಸುವುದು ಕಷ್ಟ ಬಡತನ, ಹಸಿವಿನ ಹೃದಯವಿದ್ರಾವಕ ಸನ್ನಿವೇಶ ಇಲ್ಲಿದೆ.

ಧನಿ–ಒಕ್ಕಲು ನಡುವೆ ಕ್ರೌರ್ಯಯುತ ಸಂಬಂಧವಿತ್ತು. ಒಕ್ಕಲು ಮಕ್ಕಳಿಗೆ ಸ್ವಾತಂತ್ರ್ಯ, ಕನಿಷ್ಠ ಸೌಲಭ್ಯಗಳಿರಲಿಲ್ಲ. ಧನಿಯ ಆಣತಿಯಂತೆ ನಡೆಯುವುದು ಕಡ್ಡಾಯವಾಗಿತ್ತು. ಹಗಲು ರಾತ್ರಿಯೆನ್ನದೆ ಧನಿ ಮನೆಯ ಏಳಿಗೆಗೆ ದುಡಿಯಬೇಕಾಗಿತ್ತು. ಕಠಿಣ ಬದುಕು ಒಕ್ಕಲು ಮಕ್ಕಳದ್ದಾಗಿತ್ತು.

೭.೨. ಭೂಸುಧಾರಣೆ ಕಾನೂನಿನ ಅನುಷ್ಠಾನ

ಆದಿಮಾನವನು ಭೂಮಿಯಲ್ಲಿ ಬೆಳೆದ ಹಣ್ಣುಹಂಪಲು, ಗೆಡ್ಡೆಗೆಣಸುಗಳ ಬಳಕೆಗೆ ತನ್ನ ಆಸೆಯನ್ನು ಸೀಮಿತಗೊಳಿಸಿದ್ದ. ಜನಸಂಖ್ಯೆ ವೃದ್ಧಿಸುತ್ತ ಬಂದಂತೆಲ್ಲ ಭೂಮಿಯ ಮೇಲೆ ಹಕ್ಕು ಸ್ಥಾಪನೆ ಆರಂಭವಾಯಿತು. ಬಲಿಷ್ಠನಾದವನು ರಾಜನಾದ. ನಿರ್ದಿಷ್ಟ ಭೂಭಾಗದ ಒಡೆಯನಾದ ರಾಜ ಕಂದಾಯ ವಸೂಲಿ ಮಾಡುವ ಕಾಯಕವನ್ನು ಗ್ರಾಮಪಂಚಾಯತಿಗಳಿಗೆ ನೀಡಿದ.

'ಪ್ರಾಚೀನ ಭಾರತದಲ್ಲಿ ಭೂ ಕಂದಾಯವನ್ನು ವಸೂಲು ಮಾಡುವುದು ಗ್ರಾಮ ಪಂಚಾಯತಿಯ ಜವಾಬ್ದಾರಿಯಾಗಿತ್ತು. ಆದರೆ ಮೊಘಲರ ಕಾಲದಲ್ಲಿ ಕಂದಾಯ ವಸೂಲಿ ಮಾಡುವುದು ಗ್ರಾಮ ಪಂಚಾಯತಿಗಳ ಬದಲಾಗಿ ವೈಯಕ್ತಿಕವಾಗಿ ವ್ಯಕ್ತಿಗಳಿಗೆ ಅಧಿಕಾರ ಕೊಡಮಾಡಲಾಯಿತು.'[೧]

ಬ್ರಿಟಿಷರ ಕಾಲದಲ್ಲಿ ಕಂದಾಯ ವಸೂಲಿ ಮಾಡುವ ಅಗತ್ಯ ಉಂಟಾಗಿ ಜಮೀನ್ದಾರರ ನೇಮಕವಾಯಿತು. ಬ್ರಿಟಿಷರಿಗೆ ಜಮೀನುಗಳ ಲೆಕ್ಕಪತ್ರಗಳನ್ನಿಡಲು ಮತ್ತು ಕಾಲದಿಂದ ಕಾಲಕ್ಕೆ ಕಂದಾಯ ವಸೂಲಿ ಮಾಡಲು ಪಟೇಲ, ಶಾನುಭೋಗ, ಉಗ್ರಾಣಿ ಮೊದಲಾದ ಅಧಿಕಾರಿಗಳಿರುತ್ತಿದ್ದರು. ಜಮೀನುದಾರರು ಭೂಮಿಯಲ್ಲಿ ತಾವೇ ವ್ಯವಸಾಯ ಮಾಡದೆ, ಅದನ್ನು ಬೇರೆ ಬೇರೆ ಒಪ್ಪಂದಗಳಿಗೆ ಅನುಗುಣವಾಗಿ ವ್ಯವಸಾಯ ಮಾಡುವವರಿಗೆ ನೀಡುತ್ತಿದ್ದರು. ಈ ರೀತಿ ಭೂಮಾಲೀಕರು ಹಾಗೂ ಗೇಣಿದಾರರು ಎಂಬ ಎರಡು ವರ್ಗಗಳು ರೂಪಿತವಾದವು. ಈ ಮಧ್ಯವರ್ತಿಗಳು ಭೂಮಾಲೀಕರಾದರು. ಸಾಮಾನ್ಯ ಜನತೆ ಗೇಣಿಗೆ ಭೂಮಿ ಪಡೆದು ದುಡಿಯುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯ ಲಭ್ಯವಾದರೂ ಜಮೀನ್ದಾರಿ ಪದ್ಧತಿ ನಶಿಸಲಿಲ್ಲ. ಗೇಣಿದಾರ ಗೇಣಿಯನ್ನು ಭೂಮಾಲೀಕನಿಗೆ ಸಲ್ಲಿಸುತ್ತಾ ಜೀವನ ಸಾಗಿಸುತ್ತಿದ್ದುದು

ಸಾಮಾನ್ಯವಾಗಿತ್ತು. ದೇಶದ ಅಭಿವೃದ್ಧಿಗಾಗಿ ಗೇಣಿದಾರನಿಗೆ ಭೂಮಿಯ ಮೇಲಿನ ಒಡೆತನ ನೀಡುವುದು ಅನಿವಾರ್ಯವಾಯಿತು. ಜಮೀನನ್ನು ಗೇಣಿಗೆ ಪಡೆದಿದ್ದ ಬಡ ಗೇಣಿದಾರ ಅದನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗದಷ್ಟು ಬಡವನಾಗಿದ್ದ. ಭೂಮಿ ತನ್ನದಲ್ಲವೆಂಬ ಸತ್ಯ ಅದನ್ನು ಅಭಿವೃದ್ಧಿಪಡಿಸಲು ಬಿಡುತ್ತಿರಲಿಲ್ಲ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಕಮ್ಯೂನಿಸ್ಟರಿಂದ ಉಳುವವನಿಗೆ ಭೂಮಿ ನೀಡಬೇಕೆಂಬ ಹೋರಾಟ ಬಲವಾಯಿತು. ತನ್ನ ಹೆಸರಲ್ಲಿ ಭೂಮಿ ಇಲ್ಲದ ಕಾರಣ ರೈತ ಸಾಲ ಮಾಡಲು ಇಲ್ಲವೆ ಅಭಿವೃದ್ಧಿ ಪಡಿಸಲು ಹಿಂಜರಿಯುತ್ತಿದ್ದ. ಭೂಮಿ ಅಭಿವೃದ್ಧಿಪಡಿಸಲು ಸ್ವಂತ ಒಡೆತನವಿರಬೇಕೆಂಬ ಪ್ರಜ್ಞೆ ಆಳುವ ವರ್ಗವನ್ನು ಕಾಡಿತ್ತು. ಈ ನಿಟ್ಟಿನಲ್ಲಿ ಚಿಂತನೆ ಆರಂಭವಾಯಿತು. ಇದರಿಂದ ಭೂಸುಧಾರಣಾ ಕಾನೂನು ಜಾರಿಗೆ ತರುವ ಅನಿವಾರ್ಯತೆ ಸರಕಾರಕ್ಕೆ ಉಂಟಾಯಿತು.

'ಇದನ್ನು ಸಾಧಿಸುವುದಕ್ಕಾಗಿ ಆಗಿನ ಮೈಸೂರು ಸರಕಾರವು ೧೯೫೭ರಲ್ಲಿ ಶ್ರೀ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ 'ಮೈಸೂರು ಗೇಣಿ ಮತ್ತು ಕೃಷಿ ಭೂಮಿ ಕಾಯ್ದೆ ಸಮಿತಿ' ಯನ್ನು ರಚಿಸಿತು. ರಾಜ್ಯದ ಭೂಹಿಡುವಳಿಗಳ ಬಗ್ಗೆ ಚರ್ಚಿಸುವಾಗ 'ಜತ್ತಿ ಸಮಿತಿಯ' ಪ್ರಸ್ತಾಪ ಪ್ರಮುಖವಾಯಿತು. ೧೯೫೭ರ ಮೇ ತಿಂಗಳಿನಲ್ಲಿ ಕಾರ್ಯಾರಂಭ ಮಾಡಿದ ಈ ಸಮಿತಿಯು ಅತ್ಯಂತ ಶೀಘ್ರವಾಗಿ ಅದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ ೧೯೬೧ರಲ್ಲಿ ಒಂದು ಮಸೂದೆಯನ್ನು ತಯಾರಿಸಿ ವಿಧಾನಮಂಡಲದ ಒಪ್ಪಿಗೆಯನ್ನು ಪಡೆಯಲಾಯಿತು. ಅನೇಕ ಅಡೆತಡೆಗಳನ್ನು ಎದುರಿಸಿ ಅಂತಿಮವಾಗಿ ಈ ಮಸೂದೆಯು ೦೨.೧೦.೧೯೬೫ರಂದು 'ಮೈಸೂರು ಭೂಸುಧಾರಣಾ ಕಾಯಿದೆ–೧೯೬೧' ಎಂಬ ಹೆಸರಿನಲ್ಲಿ ಜಾರಿಗೆ ಬಂತು.[೨]

ಈ ಕಾಯಿದೆ ಭೂಮಾಲೀಕರು ಗೇಣಿದಾರರನ್ನು ಬೇಕೆಂದಾಗ ಕಿತ್ತುಹಾಕುವುದನ್ನು ತಡೆಯುವಲ್ಲಿ ಸಫಲವಾಯಿತಾದರೂ ಉದ್ದೇಶಿತ ಗುರಿಯನ್ನು ಮುಟ್ಟಲಿಲ್ಲ. ಭೂಮಾಲೀಕನೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದುದರಿಂದ ಗೇಣಿದಾರನಿಗೆ ನ್ಯಾಯ ಸಿಗುವುದು ವಿಳಂಬವಾಯಿತು. ಕೇಂದ್ರ ಸರ್ಕಾರದ ಸೂಚನೆಯಂತೆ ಈ ಕಾಯ್ದೆಯನ್ನು ಸಮಗ್ರವಾಗಿ ಪರಿಶೀಲಿಸಿ ೧೯೭೪ರಲ್ಲಿ ಭೂಸುಧಾರಣಾ ಕಾಯಿದೆಯು ಆಗಿನ ಮುಖ್ಯಮಂತ್ರಿ ದೇವರಾಜು ಅರಸು ಅವರ ಕಾಲದಲ್ಲಿ ಜಾರಿಗೆ ಬಂದಿತು. ಕರ್ನಾಟಕ ಭೂಸುಧಾರಣಾ ಕಾಯ್ದೆಯು ನಮ್ಮ ಸಂವಿಧಾನದ ೯ನೆಯ ಪರಿಶಿಷ್ಟದಲ್ಲಿ ಸೇರಿದೆ. ಉಳುವವನನ್ನೇ ಹೊಲದೊಡೆಯನನ್ನಾಗಿ ರೂಪಿಸಿದ ಈ ಕಾಯಿದೆ ಬಡಜನರ ಜೀವನದಲ್ಲಿ ಆಶಾಕಿರಣವಾಯಿತು. ಭೂಮಾಲೀಕರಲ್ಲಿ ಭಯ, ಆತಂಕ, ಕೋಪವನ್ನು ಹುಟ್ಟಿಸಿತು.

'ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವ ಈ ಪುರೋಗಾಮಿ ಶಾಸನದಿಂದ ಭೂಮಾಲೀಕತ್ವದ ವಿಸರ್ಜನೆ ಬಲು ಸುಲಭವಾಯಿತು. ಭೂಮಾಲೀಕತ್ವದಿಂದಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮೇಲಂತಸ್ತಿನಲ್ಲಿ ಇರುವ ಭೂ ಒಡೆಯರಿಗೆಲ್ಲ ಈ ಪುರೋಗಾಮಿ ಶಾಸನವನ್ನು ಪ್ರತಿಗಾಮಿಯಾಗಿ ಪರಿವರ್ತಿಸುವ ಸಾಮರ್ಥ್ಯ ಇದೆ ಎಂದು ಯೋಚಿಸಿದ ಸರಕಾರ, ಈ ಭೂಸುಧಾರಣಾ ಶಾಸನವನ್ನು ಪರಿಣಾಮಕಾರಿಯಾಗಿ

ಪ್ರಯೋಗಿಸುವಂತೆ ಭೂಪಂಚಾಯ್ತಿಗಳೆಂಬ ಕಮ್ಯೂನಿಸ್ಟ್ ಕಲ್ಪನೆಯಾಗಿರುವ ಜನತಾ ನ್ಯಾಯಾಲಯಗಳನ್ನು ಆರಂಭಿಸಿತು.[೨]

'ಆದರೆ ಭೂಸುಧಾರಣೆಯೆಂದರೆ ಅದರ ನಿಜವಾದ ಅರ್ಥದಲ್ಲಿ ಈ ಮೇಲಿನ ಗುರಿಯನ್ನು ಕಾಯಿದೆಗಳ ಮೂಲಕ ತಲುಪುವುದಷ್ಟಕ್ಕೆ ಸೀಮಿತವಾಗುವುದಿಲ್ಲ. ಅವುಗಳೊಂದಿಗೆ ಕೃಷಿ ಜಮೀನುಗಳನ್ನು ಅಭಿವೃದ್ಧಿಪಡಿಸಿ, ಅವುಗಳಿಂದ ಪರಮಾವಧಿ ಬೆಳೆಯನ್ನು ತೆಗೆಯುವುದು 'ಭೂಸುಧಾರಣೆ' ಎನ್ನಿಸಿಕೊಳ್ಳುತ್ತದೆ. ಹಾಗೆ ಭೂಮಿಯ ಗುಣಮಟ್ಟವನ್ನು ಹೆಚ್ಚಿಸಬೇಕಾದರೆ ಭೂಮಿಯ ಕೃಷಿಕನಿಗೆ ಅದರ ಒಡೆತನವನ್ನು ನೀಡುವುದು, ಜಮೀನ್ದಾರರಲ್ಲಿ ನಿರ್ದಿಷ್ಟ ಮಿತಿಗಿಂತ ಹೆಚ್ಚಿರುವ ಭೂಮಿಯನ್ನು ವಶಪಡಿಸಿಕೊಂಡು ಭೂರಹಿತರಿಗೆ ವಿತರಿಸುವುದು ಮುಂತಾದವುಗಳು ಮೂಲಭೂತ ಅವಶ್ಯಕತೆಗಳಾಗಿರುತ್ತವೆ. ಆದ್ದರಿಂದ ಕೇವಲ ಮಾಲೀಕತ್ವ ನೀಡುವುದು, ಮಿತಿಯನ್ನು ಹೇರುವುದು ಅಂತಿಮ ಗುರಿಯಾಗುವುದಿಲ್ಲ. ಅವುಗಳು ಅಂತಿಮ ಗುರಿಯಾದ 'ಭೂಮಿಯ ಸುಧಾರಣೆ'ಯನ್ನು ಮಾಡಲು ಕೇವಲ ಮಾರ್ಗಗಳಾಗಿವೆ. ಭೂಸುಧಾರಣೆಯಲ್ಲಿ ಮುಖ್ಯವಾಗಿ ವೈಜ್ಞಾನಿಕ ವ್ಯವಸಾಯ ಪದ್ಧತಿ, ಕೃಷಿ ಅಭಿವೃದ್ಧಿ ಬ್ಯಾಂಕುಗಳ ಸ್ಥಾಪನೆ, ಕೃಷಿ ಮಾರುಕಟ್ಟೆಗಳ ಅಭಿವೃದ್ಧಿ, ಕೃಷಿ ಜಮೀನುಗಳಿಗೆ ಸರ್ವಋತು ರಸ್ತೆಗಳ ನಿರ್ಮಾಣ ಮುಂತಾದುವುಗಳೂ ಸಹ ಭೂಸುಧಾರಣಾ ಕಾನೂನುಗಳಷ್ಟೇ ಮಹತ್ವದ ಅಂಶಗಳಾಗುತ್ತವೆ.'[೪] ಭೂಸುಧಾರಣಾ ಕಾನೂನು ಹಲವು ಮಹತ್ವದ ಅಂಶಗಳನ್ನು ಒಳಗೊಂಡಿದೆ.

೧. ೧೯೭೪ರ ಭೂಸುಧಾರಣಾ ಕಾಯಿದೆಯು ಸೈನಿಕರು ಮತ್ತು ನಾವಿಕರನ್ನು ಹೊರತುಪಡಿಸಿ ಇತರರು ತಮ್ಮ ಜಮೀನನ್ನು ಗೇಣಿಗೆ ನೀಡುವುದನ್ನು ನಿಷೇಧಿಸಿತು.

೨. ಕೃಷಿಭೂಮಿಯನ್ನು ಸ್ವಂತವಾಗಿ ಬೇಸಾಯ ಮಾಡುವವನಿಗೆ ನೀಡಲು ತೀರ್ಮಾನಿಸಿತು.

೩. ೦೧.೦೩.೧೯೭೪ರ ನಂತರ ಜಮೀನನ್ನು ಗೇಣಿಗೆ ನೀಡುವುದನ್ನು ನಿಷೇಧಿಸಿತು. ಒಂದು ವೇಳೆ ಗೇಣಿಗೆ ನೀಡಿದರೂ ಆ ಜಮೀನು ಸರಕಾರದ ವಶವಾಗುವ ಸೂಚನೆಯನ್ನು ನೀಡಿತ್ತು.

೪. ಕುಟುಂಬ ಎಂದರೆ ಕುಟುಂಬದ ಯಜಮಾನ, ಆತನ ಹೆಂಡತಿ,(ಯಜಮಾನಿ ಆಗಿದ್ದರೆ ಆಕೆಯ ಗಂಡ) ಅಪ್ರಾಪ್ತ ವಯಸ್ಸಿನ ಗಂಡುಮಕ್ಕಳು ಮತ್ತು ಅವಿವಾಹಿತ ಹೆಣ್ಣುಮಕ್ಕಳು ಎಂಬ ಸೀಮಿತ ವ್ಯಾಖ್ಯೆ ನೀಡಲಾಯಿತು.

೫. ಭೂಮಾಲೀಕರಿಗೆ ಆತ ಕಳಕೊಂಡ ಜಮೀನಿಗೆ ಅನುಗುಣವಾಗಿ ಗರಿಷ್ಠ ೨ಲಕ್ಷದವರೆಗೆ ಪರಿಹಾರಧನವನ್ನು ನೀಡಲಾಯಿತು.

೬. ಭೂನ್ಯಾಯಮಂಡಳಿಗಳನ್ನು ಗೇಣಿದಾರರಿಗೆ ಭೂಮಿ ಒದಗಿಸಲು ಸ್ಥಾಪಿಸಲಾಯಿತು.

೭. ಭೂಮಿಯ ಒಡೆತನವನ್ನು ಪರಿಶೀಲಿಸಿ ಗೇಣಿದಾರನಿಗೆ ನೀಡಿ, ಉಳಿದ ಹೆಚ್ಚುವರಿ ಜಮೀನನ್ನು ಗುರುತಿಸಿ, ಅವುಗಳನ್ನು ಭೂರಹಿತರಿಗೆ ವಿತರಿಸುವ ಕಾಯಕವನ್ನು ನೆರವೇರಿಸಲು ಭೂನ್ಯಾಯಮಂಡಳಿಗಳನ್ನು ಸ್ಥಾಪಿಸಲಾಯಿತು.

೮. ಭೂನ್ಯಾಯಮಂಡಳಿಯಲ್ಲಿ ಕಕ್ಷಿದಾರರ ಪರವಾಗಿ ವಾದಿಸಲು ವಕೀಲರನ್ನು ನೇಮಿಸಲು ಅವಕಾಶ ನೀಡಲಿಲ್ಲ. ಭೂಮಾಲೀಕರು ಒಳ್ಳೆಯ ವಕೀಲರನ್ನು ನೇಮಿಸಿ ತೀರ್ಪು ತಮ್ಮ ಪರ ಮಾಡಬಹುದೆಂಬ ಆತಂಕ ಇತ್ತು. ಇದರಿಂದ ಗೇಣಿದಾರರಿಗೆ ಅನ್ಯಾಯವಾಗಬಹುದೆಂಬ ದೂರದೃಷ್ಟಿಯೂ ಸೇರಿತ್ತು.

ಭೂನ್ಯಾಯಮಂಡಳಿಯ ತೀರ್ಪು ಅಂತಿಮವಾಗಿದ್ದು ಮೇಲ್ಮನವಿಗೆ ಅವಕಾಶವಿರದ ಕಾರಣ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿ ೧೯೮೯ನೆಯ ಇಸವಿಯಲ್ಲಿ ಪ್ರತಿ ಜಿಲ್ಲೆಗೊಂದು ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು. ೧೯೯೦ರಲ್ಲಿ ಸರ್ಕಾರವು ಈ ಪ್ರಾಧಿಕಾರವನ್ನು ರದ್ದುಗೊಳಿಸಿತು.

'೧೯೮೦ರ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ೫೨ ಭೂನ್ಯಾಯ ಮಂಡಳಿಗಳು ಕೆಲಸ ಮಾಡುತ್ತಿದ್ದುವೆಂದರೆ, ಈ ಕೆಲಸದ ಅಗಾಧತೆಯನ್ನು ಊಹಿಸಬಹುದು. ಹೀಗೆ ಪ್ರತಿಯೊಂದು ಭೂನ್ಯಾಯಮಂಡಳಿಗೂ ಒಬ್ಬರು ಸಹಾಯಕ ಕಮೀಷನರ್ ಶ್ರೇಣಿಯ ಅಧಿಕಾರಿಯು ಅಧ್ಯಕ್ಷರಾಗಿಯೂ ಸಾಮಾನ್ಯವಾಗಿ ಶಾಸಕರನ್ನು ಒಳಗೊಂಡಂತೆ, ೪ ಜನ ಅಧಿಕಾರೇತರ ಸದಸ್ಯರುಗಳು, ತಹಸೀಲ್ದಾರ್ ದರ್ಜೆಯ ಒಬ್ಬರು ಕಾರ್ಯದರ್ಶಿಗಳು ಇರುತ್ತಿದ್ದರು. ಒಂದು ಮತ ಕ್ಷೇತ್ರದಲ್ಲಿ ಹೆಚ್ಚು ಭೂನ್ಯಾಯಮಂಡಳಿಗಳು ಇದ್ದಲ್ಲಿ ಶಾಸಕರನ್ನು ಒಂದು ಭೂಮಂಡಳಿಗೆ ನೇಮಿಸಿ, ಇತರ ಭೂನ್ಯಾಯಮಂಡಳಿಗಳಿಗೆ ೪ ಜನ ಅಧಿಕಾರೇತರ, ಸದಸ್ಯರುಗಳನ್ನು ನೇಮಿಸಲಾಗುತ್ತದೆ. ಇದರಲ್ಲಿ ಒಬ್ಬರು ಪರಿಶಿಷ್ಟ ಜಾತಿ, ಪಂಗಡದವರು ಇರುವುದು ಅವಶ್ಯವಾಗಿದೆ.(ಸೆಕ್ಷನ್ ೪೮) ಸದಸ್ಯರುಗಳಿಗೆ ಯಾವುದೇ ವಿದ್ಯಾರ್ಹತೆಯನ್ನು ನಿಗದಿಗೊಳಿಸದೇ ಇದ್ದರೂ ಸಹ, ಅವರಿಗೆ ಇರಬಹುದಾದ ಸ್ಥಳೀಯ ಜ್ಞಾನ ಹಾಗೂ ಮಾಹಿತಿಗಳಿಂದ ವಿವಾದಿತ ಜಮೀನಿನ ಭೂಮಾಲೀಕರು ಮತ್ತು ಗೇಣಿದಾರರು ಯಾರೆಂಬುದನ್ನು ನಿರ್ಣಯಿಸಲು ಹೆಚ್ಚಿನ ಪ್ರಯೋಜನ ಉಂಟಾಗುತ್ತದೆ ಎಂಬುವುದು ನಿಸ್ಸಂದೇಹ.'[೫]

'ಕೃಷಿ ಗಣತಿಯ ಪ್ರಕಾರ ೧೯೭೧ರಲ್ಲಿ ಕರ್ನಾಟಕದ ಒಟ್ಟು ೩೫,೫೧,೨೩೦ ಕೃಷಿ ಗುತ್ತಿಗೆಗಳಲ್ಲಿ, ೪,೮೫,೪೪೬ ಗೇಣಿದಾರರು ೧೯೭೪ರ ಭೂಸುಧಾರಣಾ ಕಾಯಿದೆಯ ಸಹಾಯದಿಂದ ಭೂಮಿಯ ಹಕ್ಕುಗಳನ್ನು ಪಡೆಯಲು ಸಾಧ್ಯವಾಯಿತು.'[೬]

'ಭೂಸುಧಾರಣೆಗಳ ಕಾರಣದಿಂದ ಹಳ್ಳಿಗಾಡಿನ ಕಡೆಗಳಲ್ಲಿ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳು ಕಾಲಿಡಲು ಸಾಧ್ಯವಾಯಿತು. ಪಟ್ಟಣಗಳು, ಕೈಗಾರಿಕೆಗಳು ಮತ್ತು ಸಾಲದ ವ್ಯವಹಾರಗಳು ರೈತರ ಜನಜೀವನಕ್ಕೆ ಸೇರ್ಪಡೆಯಾಗತೊಡಗಿದವು.'[೭]

'ಕರ್ನಾಟಕದ ಭೂಸುಧಾರಣೆಗಳು ಬಂಡವಾಳದ ವಹಿವಾಟಿಗೆ ಬಹಳ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡುವುದರ ಜತೆಗೆ, ಕೆಳವರ್ಗದ ಜನರಿಗೆ ದೊರಕಿಸಿದ ಕೆಲವು ಲಾಭಗಳು ಸರ್ಕಾರಕ್ಕೆ ಬೆಂಬಲ ಹೆಚ್ಚಿಸುವ ಉದ್ದೇಶದಿಂದ ಬಹಳ ಮುಖ್ಯವಾಗಿದ್ದವು. ಈ ಸುಧಾರಣೆಗಳನ್ನು ಸರ್ಕಾರವು ರೈತರು ಯಾವುದೇ ರೀತಿಯಲ್ಲಿ ಸಂಘಟಿತ ಒತ್ತಾಯ ಮಾಡದೇ ಇದ್ದರೂ ಕೈಗೊಂಡಿತ್ತು. ಇದರಿಂದ ಕೃಷಿ ಸಮಾಜದಲ್ಲಿ ಬೆಳೆಯಬಹುದಾದ ವರ್ಗ

ಸಂಬಂಧಗಳು ಸಡಿಲಗೊಂಡವು. ಕಾಯಿದೆಯಿಂದ ಸಮಾಜದ ಬಲಿಷ್ಠ ವರ್ಗಗಳ ಅಸ್ತಿತ್ವಕ್ಕೆ ಧಕ್ಕೆ ಬರದಿದ್ದರೂ, ಒಂದು ಸಣ್ಣ ಆಘಾತವಾದರೂ ಆಯಿತು.[೮]

'ಉಲ್ಲಂಘನೆ' ಕಾದಂಬರಿಯಲ್ಲಿ ಭೂನ್ಯಾಯಮಂಡಳಿಗೆ ಸಂಕಪ್ಪ ರೈಗಳನ್ನು ನೇಮಿಸುವ ಆದರೆ ಅವರು ಅದನ್ನು ತಿರಸ್ಕರಿಸುವ ಚಿತ್ರಣವಿದೆ. ಕಾಂಗ್ರೆಸ್ ಪಕ್ಷದ ಜಿಲ್ಲಾ ಮಟ್ಟದ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಗುತ್ತಿನ ಮನೆಗೆ ಆಗಮಿಸಿ ಸಂಕಪ್ಪಣ್ಣ ಭೂನ್ಯಾಯ ಮಂಡಳಿಗೆ ಸೇರಲು ಅಂಬಕ್ಕೆಯ ಮೂಲಕ ಪ್ರಯತ್ನಿಸಲು ಬಂದಿರುತ್ತಾರೆ. ಭೂನ್ಯಾಯಮಂಡಳಿಗೆ ಒಬ್ಬ ತಹಶೀಲ್ದಾರ್ ಹಾಗೂ ಮೂವರು ಸದಸ್ಯರ ಅಗತ್ಯವಿದೆ. ಸಂಕಪ್ಪಣ್ಣ ಸದಸ್ಯನಾಗಲೂ ಸರಕಾರದ ಮಂಜೂರಾತಿಯೂ ಬಂದಿದ್ದು, ಅವರನ್ನು ಈ ಹುದ್ದೆ ಸ್ವೀಕರಿಸಲು ಮನವಿ ಮಾಡಲು ಅಂಬಕ್ಕೆಯ ಬಳಿ ದುಂಬಾಲು ಬೀಳುವುದನ್ನು ಗಮನಿಸಬಹುದು. ಸಂಕಪ್ಪಣ್ಣ ಅಂಬಕ್ಕೆಯ ಬಳಿ ಮಾತನಾಡುತ್ತಾ ಸದಸ್ಯತ್ವ ತಿರಸ್ಕರಿಸಿದ ಕಾರಣ ಬಿಚ್ಚಿಡುವಾಗ ಆ ಕಾಲದ ನೈಜದರ್ಶನವಾಗುತ್ತದೆ.

'ಮಂಗಳೂರು ನಗರದಲ್ಲೇ ತಾನೇ ನಮ್ಮ ಕುಟುಂಬದವರು, ನಂಟರು ಇಷ್ಟರು ಹೆಚ್ಚು ಇರುವುದು ಎಂಬುವುದು ನಿನಗೆ ಗೊತ್ತಲ್ಲ? ನಮ್ಮ ಬಂಧುಗಳಲ್ಲೂ ಅನೇಕರು ತಮ್ಮ ಗೇಣಿದಾರರಿಗೆ ಯಾವತ್ತೂ ಗೇಣಿಚೀಟಿ ಬಿಡು, ಗೇಣಿ ರಶೀದಿಯೂ ಕೊಟ್ಟದ್ದು ಕಡಿಮೆ. ಭೂನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ ಗೇಣಿದಾರರಿಗೆಲ್ಲ, ಇಂಥ ನಮ್ಮವರೆಲ್ಲ ಹೇಗೆ ಭೂಮಿ ದಕ್ಕುತ್ತದೆ ಎಂದುಕೊಳ್ಳುತ್ತಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ನಿಜವಾಗಿಯೂ ಹತ್ತೈವತ್ತು ವರುಷಗಳಿಂದ ಗೇಣಿದಾರರಾಗಿದ್ದವರಲ್ಲಿ ಯಾವ ದಾಖಲೆ ಇಲ್ಲದವರು ಅನೇಕರು ಈಗಲೂ ಇದ್ದಾರೆ. ಇಂಥವರಿಗೆಲ್ಲ ಈ ಕಾನೂನಿನ ಸದುಪಯೋಗ ಪಡೆದುಕೊಳ್ಳುವುದು ಖಂಡಿತ ಕಷ್ಟ. ಆದರೆ ನಾನು ಸಮಿತಿಯಲ್ಲಿದ್ದರೆ ನಿಜವಾಗಿ ಇಂಥ ಗೇಣಿದಾರರ ಪರವಾಗಿ ನ್ಯಾಯ ನೀಡಬೇಕಾಗುತ್ತದೆ. ಆದರೆ ಯಾವ ಪುರಾವೆಯೂ ಇಲ್ಲದೆ ಹೇಗೆ ನಾನು ನ್ಯಾಯ ನೀಡಲು ಸಾಧ್ಯ? ಎನ್ನುವುದೇ ನನ್ನ ಸಂಕಷ್ಟ. ಅಥವಾ ಇದನ್ನೆಲ್ಲ ಮೀರಿ, ಗೇಣಿದಾರರ ಪರವಾಗಿ ತೀರ್ಪು ನೀಡಿದೆ ಅಂತಲೇ ಇಟ್ಟುಕೋ. ಆಗ ನಮ್ಮ ಬಂಧುಗಳು ಕಾನೂನನ್ನು ಮೀರಿ ನಮಗೇ ಅನ್ಯಾಯ ಮಾಡಿದ ಅನ್ನುವುದಿಲ್ಲವೇ ನನ್ನನ್ನು?' (ಉಲ್ಲಂಘನೆ, ಪುಟ ೩೨೯)

ಗೇಣಿ ಚೀಟಿ ಹಾಗೂ ರಶೀದಿ ಇಲ್ಲದೆ ಅನೇಕ ಗೇಣಿದಾರರನ್ನು ಭೂಮಸೂದೆ ಜಾರಿಯಾದ ಸಂದರ್ಭದಲ್ಲಿ ಒಕ್ಕಲೆಬ್ಬಿಸಿರಬಹುದು ಎಂಬ ಸತ್ಯ ವ್ಯಕ್ತವಾಗುತ್ತದೆ. "ದ.ಕ. ಜಿಲ್ಲೆ ಮದ್ರಾಸು ಪ್ರಾಂತದ ಭಾಗವಾಗಿದ್ದಾಗ ಈ ಜಿಲ್ಲೆಯಲ್ಲಿ ಭೂದಾಖಲೆಗಳು ಸರಿಯಾಗಿರಲಿಲ್ಲ"[೯] ಉಳ್ಳವರ ಬಲದಿಂದ ಭೂಮಸೂದೆ ಕೆಲವು ಗೇಣಿದಾರರಿಗೆ ಖಂಡಿತ ಪ್ರಯೋಜನವಾಗಿರಲಿಕ್ಕಿಲ್ಲ. ಸತ್ಯಾಂಶ ಅರಿತಿದ್ದ ಸಂಕಪ್ಪನಂಥವರು ಪುರಾವೆ ಇಲ್ಲದೆ ಸಾಕ್ಷಿ ನೀಡಲಾಗದ, ನೀಡಿದರೂ ಬಂಧುಗಳ ಟೀಕೆಗೆ ತುತ್ತಾಗುವ ಅಂಶ ಬೆಳಕಿಗೆ ಬರುತ್ತದೆ. ನ್ಯಾಯದ ಪರ, ಬಂಧುತ್ವದ ಪರ ಎಂಬ ಎರಡು ಆಯ್ಕೆಗಳಲ್ಲಿ ನ್ಯಾಯ ಒದಗಿಸಲಾಗದ ಸಂದರ್ಭ ಅರಿತು ಸಂಕಪ್ಪಣ್ಣ ಭೂನ್ಯಾಯಮಂಡಳಿಯ ಸದಸ್ಯತ್ವ ನಿರಾಕರಿಸುವುದು ಹಲವು ಅರ್ಥಗಳನ್ನು ತೆರೆದಿಡುತ್ತದೆ. ಸಜ್ಜನರು ಮೌನವಹಿಸಬೇಕಾದ ಅನಿವಾರ್ಯತೆ ವ್ಯಕ್ತವಾಗುತ್ತದೆ.

ಭೂಸುಧಾರಣಾ ಕಾನೂನು ೧೯೭೪ರಲ್ಲಿ ಜಾರಿಗೆ ಬಂತು. ಅಂಬಕ್ಕೆ, ಸಂಕಪ್ಪಣ್ಣ ಗೇಣಿದಾರರಿಗೆ ಅಡೆತಡೆ ಒಡ್ಡದ ಕಾರಣ ಮೂಲಗೇಣಿ, ಚಾಲಗೇಣಿ ಒಕ್ಕಲಿನವರು ಶೀಘ್ರವೇ ಸ್ವತಂತ್ರರಾಗುತ್ತಾರೆ. ಆದರೆ ಕೆಲವು ಕಡೆ ಧನಿ-ಒಕ್ಕಲುಗಳ ಮಧ್ಯೆ ತೀವ್ರ ಘರ್ಷಣೆ ನಡೆದು ಭೂಒಡತಿಯ ಹತ್ಯೆಗೂ ಪ್ರಯತ್ನಿಸಿದ ವಿವರವೂ ಇದೆ. ತಮಗೆಂದೇ ಸ್ವಲ್ಪ ಭೂಮಿಯನ್ನೂ ಇಟ್ಟುಕೊಳ್ಳದೆ ಎಲ್ಲವನ್ನೂ ಗೇಣಿಗೆ ನೀಡಿದವರು ಈ ಕಾನೂನಿಂದ ಕಳೆದುಕೊಂಡ ಪ್ರಕರಣಗಳೂ ಇವೆ. ಒಕ್ಕಲುಗಳಿಂದ ಅಕ್ರಮವಾಗಿ ಭೂಮಿಯನ್ನು ವಶಪಡಿಸಿಕೊಂಡ ಪ್ರಕರಣಗಳೂ ಇವೆ. ಕಾನೂನು ಏನೇ ತಿಳಿಸಿದರೂ ಮನುಷ್ಯನ ಸ್ವಭಾವಕ್ಕೆ ಅನುಗುಣವಾಗಿ ಭಿನ್ನ ಬಗೆಯ ಘಟನೆಗಳು ಸಂಭವಿಸುತ್ತವೆ. ಭೂಸುಧಾರಣೆ ಕಾನೂನು ಹಲವು ಸಂಘರ್ಷಗಳನ್ನು ಉಂಟುಮಾಡಿದ್ದು ಸುಳ್ಳಲ್ಲ. ಸರಿ-ತಪ್ಪುಗಳ ಗೊಂದಲದಲ್ಲಿ ಒದ್ದಾಡುತ್ತಲೇ ಗೇಣಿದಾರರು ಕಾನೂನಿನ ಪ್ರಯೋಜನ ಪಡೆದದ್ದೂ ಸುಳ್ಳಲ್ಲ.

೭.೩. ಭೂಸುಧಾರಣೆ ಕಾನೂನು ಸೃಷ್ಟಿಸಿದ ಬದಲಾವಣೆಗಳು

೭.೩.೧. ಧನಿ ಮತ್ತು ಒಕ್ಕಲುಗಳ ಸಂಬಂಧ

ಗೇಣಿದಾರ ಮತ್ತು ಒಕ್ಕಲು ಮಕ್ಕಳ ನಡುವಿನ ಸೌಹಾರ್ದ ಸಂಬಂಧವನ್ನು ನಾ.ಮೊಗಸಾಲೆ ಅವರ 'ಪ್ರಭು ಸಮ್ಮಿತ' ಕತೆ ಚಿತ್ರಿಸುತ್ತದೆ. ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಲೂ ಹಿಂಜರಿಯುವ ರಂಗಣ್ಣಾಚಾರ್ಯರು, ರಾಜು ಶೆಟ್ಟಿಗೆ ಪ್ರಭುಗಳು ಧೈರ್ಯ ತುಂಬುತ್ತಾರೆ. ಭೂಮಸೂದೆಯಿಂದಾಗಿ ಹಲವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರೂ, ಪ್ರಭುಗಳು ಹಾಗೂ ರಂಗಣ್ಣಾಚಾರ್ಯ ಹಾಗೂ ರಾಜು ಶೆಟ್ಟಿಯ ನಡುವಿನ ಧಣಿ-ಒಕ್ಕಲು ಸಂಬಂಧ ಮಾನವೀಯ ನೆಲೆಯದ್ದು.

ಭೂಮಸೂದೆ ಜ್ಯಾರಿಯಾಗುವ ಸಂದರ್ಭದಲ್ಲಿ ಚತುರರಾದವರ ಬುದ್ಧಿವಂತಿಕೆ ಕೂಡಾ ದಾಖಲಾಗಿದೆ. ಬದಲಾಗುತ್ತಿರುವ ಸಂದರ್ಭಗಳನ್ನು ಕೂಡಲೇ ಅರಿತವರು ಲಾಭ ಗಳಿಸುತ್ತಾರೆ. ನಿಧಾನಿಸಿದವರು ನಷ್ಟಕ್ಕೆ ಗುರಿಯಾಗುತ್ತಾರೆ. ಭೂಮಸೂದೆಯ ಸೂಚನೆ ದೊರೆತ ಹಲಮಂದಿ ವ್ಯಾಪಾರೀವರ್ಗದವರು ತಮ್ಮ ತಮ್ಮ ಗೇಣಿಗೆ ಕೊಟ್ಟ ಜಮೀನನ್ನು ವಿಕ್ರಯಿಸುತ್ತಾ ಲಾಭ ಪಡೆದರು. ಆದರೆ ಅಧಿಕಾರದ, ಭದ್ರತೆಯ ಅಮಲಿನಲ್ಲೇ ಇದ್ದಂತಹ ಗುತ್ತಿನ ಬಂಟರ ಮನೆತನಗಳ, ಜೈನರ ಬೀಡಿನ ಮಂದಿ ಭೂಮಸೂದೆ ಜಾರಿಯಾಗದು ಎಂಬ ನಂಬಿಕೆಯಿಂದ ವಿಕ್ರಯಿಸಿದ ಜಮೀನನ್ನು ಕೊಂಡುಕೊಂಡರು.

ಕತೆಯೊಳಗೊಂದು ಕತೆಯ ಮಾದರಿಯಲ್ಲಿ ದಾಖಲಾದ ಕತೆ ಮಾನವೀಯ ಮುಖವುಳ್ಳ ಧಣಿಯ ಬದುಕನ್ನು ಬಿಂಬಿಸುತ್ತದೆ. ರಾಜುಶೆಟ್ಟಿಯ ತಂಗಿ ಒಬ್ಬಳೇ ಇರುವ ಸಂದರ್ಭದಲ್ಲಿ ಒಕ್ಕಲುಮಕ್ಕಳ ಕಷ್ಟ ಸುಖ ವಿಚಾರಿಸಲು ಬಂದ ಧಣಿ ಭತ್ತವನ್ನು ಚಪ್ಪಲಿನಲ್ಲಿ ತುಳಿಯುವುದು ಭೂಮಿಯ ಒಡೆಯನಾಗಿದ್ದು ಕೃಷಿ ಮೇಲೆ ಇಲ್ಲದ ಕಾಳಜಿ ತೋರುತ್ತದೆ. ಕರ್ಗಿ ಬಯ್ದು ಕಳುಹಿಸುತ್ತಾಳೆ. ಕೃಷಿ ಹಾಗೂ ಕೃಷಿ ಸಂಬಂಧಿ ವಸ್ತುಗಳ ಜೊತೆ ಇದ್ದ ಭಾವನಾತ್ಮಕ ಸಂಬಂಧ, ಪ್ರೀತಿ ವ್ಯಕ್ತವಾಗಿದೆ. ಅಂತಹ ಸನ್ನಿವೇಶದಲ್ಲೂ ಪ್ರಭುಗಳು ಮಾನವೀಯತೆಯಿಂದ ತಮ್ಮ ತಪ್ಪನ್ನು

ಒಪ್ಪಿಕೊಳ್ಳುತ್ತಾರೆ. ಕರ್ಗಿಯನ್ನು ತಂಗಿಯೆಂದು ಭಾವಿಸುವುದು ಮಾತ್ರವಲ್ಲದೆ, ಅದನ್ನು ನೆನಪಿಸುತ್ತಾ ಮುಂದಿನ ಪೀಳಿಗೆಯಲ್ಲೂ ಮೌಲ್ಯ ಬೆಳೆಯಲು ಕಾರಣಕರ್ತರಾಗುತ್ತಾರೆ.

ಎರಡು ಮೂರು ವರ್ಷಗಳಿಗೊಮ್ಮೆ ಧಣಿಗಳು ಒಕ್ಕಲುಗಳ ಮನೆಗೆ ಬಂದು ಕಷ್ಟ ಸುಖ ವಿಚಾರಿಸುವುದು ಈ ಕತೆಗೆ ಭಿನ್ನ ಮುಖ ಒದಗಿಸಿದೆ. ಗೇಣಿದಾರರ ಸಂಪತ್ತನ್ನೇ ಕೊಳ್ಳೆ ಹೊಡೆಯುವ 'ಸುಳಿಗಾಳಿ'ಯ ಜಮೀನ್ದಾರನಿಗಿಂತ ಭಿನ್ನವಾಗಿ ರೂಪಿಸಿದೆ. ಉದಾತ್ತ ಸಂಬಂಧವನ್ನು ಚಿತ್ರಿಸುತ್ತದೆ.

ಭೂಮಾಲಕರಾದ ಮೇಲೂ ಬೆಳೆ ಫಸಲನ್ನು ವರ್ಷಕ್ಕೊಂದಾವರ್ತಿ ನೀಡುವುದನ್ನು ಬಿಡುವುದಿಲ್ಲ. ಪ್ರಭುತ್ವ ಉದಾತ್ತವಾದರೆ ಪ್ರತಿಭಟನೆ ನಗಣ್ಯವಾಗುತ್ತದೆ. ಒಳ್ಳೆಯತನಕ್ಕೆ ಒಳ್ಳೆಯತನ ಮುಖಾಮುಖಿಯಾಗುವ ಕಲ್ಪನೆ ಇಲ್ಲಿದೆ. ಬಾಲ್ಯದ ಪ್ರಭಾವಗಳು, ಕತೆಗಳು ಮುಂದಿನ ಪೀಳಿಗೆಯಲ್ಲಿ ಅನುರಣಿಸುವ ಪರಿಯನ್ನು ಈ ಕತೆ ವಿಶ್ಲೇಷಿಸುತ್ತದೆ. ಪ್ರಭುಗಳ ಮಗ ಕರ್ಗಿಯ ಮೊಮ್ಮಗಳನ್ನು ನೋಡಿರದಿದ್ದರೂ, ತಂದೆಯ ಪ್ರಭಾವದಿಂದ ಉಡುಗೊರೆ ನೀಡಲು ಮುಂದಾಗುತ್ತಾರೆ. ಧಣಿ–ಒಕ್ಕಲು ಸಂಬಂಧದ ಇತ್ಯಾತ್ಮಕ ಚಿತ್ರಣ ಇಲ್ಲಿದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನಾರ್ ಸಂಕಪ್ಪ ಹಾಗೂ ಗುತ್ತಿನ ಯಜಮಾನಿ ಅಂಬಕ್ಕೆ ಕಾಲದಲ್ಲಿ ಭೂಮಸೂದೆ ಜಾರಿಯಾಗಿ ವ್ಯಾಪಕ ಬದಲಾವಣೆಗಳಿಗೆ ಎದುರುಗೊಳ್ಳಬೇಕಾಗುತ್ತದೆ. ಭೂಮಸೂದೆ ಜಾರಿಯಾದ ಆರಂಭದಲ್ಲಿ ಮೂಲದ ಒಕ್ಕಲುಗಳಿಗೆ ಅರಿವಿಲ್ಲದೆ ಎಂದಿನಂತೆ ತಮ್ಮ ಕಾಯಕವನ್ನು ಸಾಗಿಸುತ್ತಿರುತ್ತಾರೆ. ಮೂಲದಾಳುಗಳಿಗೆ ತಿಳಿಸುವ ಪ್ರಯತ್ನ ಮಾಡುತ್ತಾನೆ. ನಿಧಾನವಾಗಿ ಗೇಣಿದಾರರು ತಮ್ಮ ಜಮೀನಿಗೆ ತಾವೇ ಒಡೆಯರಾಗುವ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾರೆ. ಈ ಒಡೆತನ ಹಾಗೂ ಅರಿವಿನ ಪರಿಧಿ ವಿಸ್ತರಿಸಿದ್ದರಿಂದ ಗೇಣಿದಾರರು ಧನಿಗಳ ಕೃಷಿ ಚಟುವಟಿಕೆಗಳಿಗೆ ಹೆಗಲೊಡ್ಡುವುದು ಕಮ್ಮಿಯಾದರೆ, ಮೂಲದಾಳುಗಳು ತಮ್ಮ ಕೆಲಸ ಹಾಗೂ ಶ್ರಮದ ಅರಿವನ್ನು ಹೊಂದುವುದು ಕಾಣಬಹುದು. ನಿಗದಿತ ದುಡಿಮೆಗೆ ನಿಶ್ಚಿತ ಗಳಿಕೆ ಎಂಬ ಮನೋಭಾವ ಅವರಲ್ಲೂ ಮೂಡಿ ಆಯಾ ದಿನದ ಕೆಲಸದ ಸಮಯದ ಮಿತಿಯ ಒಳಗೆ ಕೆಲಸ ಮಾಡುತ್ತಾರೆ. ಕೆಲಸ ಮುಗಿಯದಿದ್ದಾಗ ಮುಂದಿನ ದಿನಕ್ಕೆ ಹಾಕಿ ಹೊರಡಲು ಅನುವಾಗುವುದು ಬದಲಾದ ಮನೋಸ್ಥಿತಿಗೆ ದ್ಯೋತಕ. ಸಂಕಪ್ಪಣ್ಣ ಹೆಚ್ಚುವರಿ ವೇತನ ನೀಡಿ ಮನವೊಲಿಸಿ ಭತ್ತ ಬಡಿಯುವ ಬಲು ಮಹತ್ವದ ಕೆಲಸವನ್ನು ಸೂಕ್ತವಾಗಿ ಪೂರ್ತಿಗೊಳ್ಳುವಂತೆ ಗಮನಹರಿಸುತ್ತಾರೆ. ಹಿಂದೆಂದಿಗಿಂತಲೂ ಉದಾರವಾದ ಧನಿಯನ್ನು ಗಮನಿಸಬಹುದು. ಉತ್ತಮ ಭೋಜನ, ಸೂಕ್ತ ವೇತನ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಿ ಕೃಷಿ ಕೆಲಸ ನಿರ್ವಹಿಸುತ್ತಾರೆ. ಧನಿ ಆದಷ್ಟು ಉತ್ತಮ ಸಂಬಂಧ ಇರಿಸಿದರೂ ಸೃಷ್ಟಿಯಾದ ನೂತನ ಉದ್ದಿಮೆಗಳು ಕೃಷಿ ಕಾರ್ಮಿಕರಿಗೆ ಹೊಸ ಆರ್ಥಿಕ ಭದ್ರತೆಯನ್ನು ಒದಗಿಸುವಲ್ಲಿ ಸಫಲವಾಗುತ್ತವೆ. ಕೇವಲ ಕೆಲವೇ ಮೂಲದಾಳುಗಳನ್ನು ಜೊತೆ ಸೇರಿಸಿ ಕೃಷಿ ಮಾಡಬೇಕಾದ ಅನಿವಾರ್ಯತೆ ಯಂತ್ರದ ಆಗಮನಕ್ಕೆ ದಾರಿಯಾಗುತ್ತದೆ. ಮುಂದೆ ಕಂಗಿನ ಬೆಳೆ ಬೆಳೆಸುವ ಯೋಚನೆಗೆ ಈ ಸಂಕಷ್ಟಗಳು ನಾಂದಿಯಾಗುತ್ತವೆ.

ಮೂಲದಾಳು ಬೂದೆಗೆ ರಕ್ತ ಕ್ಯಾನ್ಸರ್ ಎಂಬ ಸುದ್ದಿ ದೊರೆತಾಗ ಧನಿ ಸಂಕಪ್ಪ ತಾವೇ ರಕ್ತ ನೀಡಲು ಅಳಿಯ ಸುಂದರನಲ್ಲಿ ವಿನಂತಿಸುತ್ತಾರೆ. ಮಾನವೀಯ ಮುಖವನ್ನು ಹಾಗೂ ಕಷ್ಟಗಳಿಗೆ ಸ್ಪಂದಿಸುವ ಮನೋಭಾವವನ್ನು ಕಾಣಬಹುದು. ಬದಲಾದ ಪರಿಸ್ಥಿತಿಯು ಅಂಬಕ್ಕೆಯನ್ನು ಮತ್ತಷ್ಟು ಮಾನವೀಯಗೊಳಿಸುತ್ತದೆ. ಗುತ್ತಿನ ವೈಭವದ ಕ್ಷೀಣಿಸುವಿಕೆ, ಕೂಲಿಯಾಳುಗಳ ಕೊರತೆ ಆಕೆಯನ್ನು ಮೆತ್ತಗಾಗಿಸುತ್ತಾ, ಆಕೆ ಮೂಲದಾಳುಗಳನ್ನು ತನ್ನ ಕುಟುಂಬದವರಲ್ಲಿ ಒಬ್ಬರಂತೆ ಸ್ವೀಕರಿಸುವುದು ಮಾತ್ರವಲ್ಲದೆ ಕಷ್ಟ ಸುಖದಲ್ಲಿ ಸ್ಪಂದಿಸುತ್ತಾಳೆ. ಕರ್ಗಿ ವಿವಾಹವಾಗದೆ ಕೊರಗನ ಮಗುವಿನ ತಾಯಿಯಾದಾಗ ಅಂಬಕ್ಕೆ ಸ್ಥೈರ್ಯ ನೀಡಿ ಹೆರುವಂತೆ ಮಾಡುತ್ತಾಳೆ. ಬೂದೆಯ ಅನಾರೋಗ್ಯ ಹಾಗೂ ಸಾವಿನ ಸಂದರ್ಭದಲ್ಲಿ ಆದ ಎಲ್ಲಾ ಖರ್ಚು ಗುತ್ತು ಮನೆಯವರೇ ನೀಡುವುದು. ಗುತ್ತಿನ ವೈಭವದ ದಿನಗಳಲ್ಲಿ ಚಾವಡಿ ಏರುವ ಅರ್ಹತೆ ಇಲ್ಲದವರು ಅಂಬಕ್ಕೆಯ ಆತ್ಮೀಯರಾಗುವುದು ಮಾತ್ರವಲ್ಲದೆ ಅಂಬಕ್ಕೆ ಅವರ ನೋವುಗಳನ್ನು ಅರ್ಥಮಾಡಿಕೊಳ್ಳಲು ಕಲಿಯುವುದು ದೊಡ್ಡ ಪಲ್ಲಟವೇ ಸರಿ.

ರಾಮಚಂದ್ರದೇವ ರಚಿಸಿದ 'ರಿಸಾರ್ಟ್' ಸಣ್ಣಕತೆಯು ಭೂಸುಧಾರಣಾ ಮಸೂದೆ ಜಾರಿಯಾದ ತರುವಾಯ ಧನಿ ಮನೆಯ ದುರವಸ್ಥೆಯನ್ನು ಚಿತ್ರಿಸುತ್ತದೆ. ಸುಬ್ರಾಯ ಭೂಮಸೂದೆಯಿಂದಾಗಿ ನೂರೈವತ್ತು ಖಂಡಿ ಅಡಿಕೆ ತೋಟ, ಹತ್ತು ಸಾವಿರ ತೆಂಗಿನಕಾಯಿ ಬರುವ ತೋಟ ಎಲ್ಲ ಕಳೆದುಕೊಂಡು ಕೇವಲ ಮನೆ ಹಾಗೂ ಅರ್ಧ ಎಕರೆ ಅಂಗಳದ ಒಡೆಯನಾಗಿ ಮಾರ್ಪಡುತ್ತಾನೆ. ನಿರಂತರ ಭೇಟಿ ನೀಡುವ ಜನ, ಆಳುಕಾಳುಗಳಿಂದ ತುಂಬಿತುಳುಕುತ್ತಿದ್ದ ಮನೆ ಖಾಲಿಯಾಗಿ ಮೂವರಿಗೇ ಸೀಮಿತವಾದಾಗ ಕೆಲಸ ನಿರ್ವಹಣೆ ಮಾಡಲಾಗದೆ ದೊಡ್ಡಮನೆಯ ಕೆಲವೇ ಕೊಠಡಿಗಳನ್ನು ಬಳಸಿ ಉಳಿದವುಗಳಿಗೆ ಬೀಗ ಜಡಿಯುವ ಅನಿವಾರ್ಯತೆ ಉಂಟಾಗುತ್ತದೆ. ಸಂಪತ್ತಿನ ಅಭಾವ, ಅನ್ಯಸಂಪಾದನೆಯ ಮಾರ್ಗವಿಲ್ಲದೆ ಮನೆ ಹಾಳು ಸುರಿಯುತ್ತದೆ. ಒಬ್ಬಳೇ ಮಗಳು ಪಿ.ಯು.ಸಿ ಮಾತ್ರ ಓದಿದ್ದು ಅನಾಥ ಹುಡುಗ ಗಂಗಾಧರನಿಗೆ ವಿವಾಹ ಮಾಡಿಕೊಡಬೇಕಾದ ಸಂದರ್ಭ ಸೃಷ್ಟಿಯಾಗುತ್ತದೆ. ಸುಬ್ರಾಯನಿಗೆ ಭೂಮಸೂದೆಯ ನಂತರ ಇದ್ದ ಆಸ್ತಿಪಾಸ್ತಿ ಕಳೆದುಕೊಂಡ ದುಃಖದಲ್ಲಿ ಅರೆಹುಚ್ಚು ಸಂಭವಿಸಿ ಜಮೀನ್ದಾರನಂತೆ ವೇಷಹಾಕಿ ನಟಿಸುವುದೂ ಇದೆ; ಬ್ರಿಟಿಷ್ ರಾಣಿಗೆ, ಅಮೆರಿಕಾದ ಅಧ್ಯಕ್ಷರಿಗೆ ಊರಿನ ಅಧಿಕಾರ ವಹಿಸಲು ಆಹ್ವಾನಿಸುವ ಪತ್ರ ಬರೆದದ್ದೂ ನಡೆಯಿತು. ಮಗಳ ವಿವಾಹವಾಗಿ ದುಬೈನಲ್ಲಿ ನೆಲೆ ಕಂಡರೂ ಕೆಲಸ ಕಳೆದುಕೊಂಡು ತಂದೆ ಸುಬ್ರಾಯರ ಮನೆ ಮಾರಿ ಮುಂಬೈನಲ್ಲಿ ನೆಲೆ ಕಂಡುಕೊಂಡರೂ ಆರ್ಥಿಕವಾಗಿ ಸಾಧಾರಣ ಪರಿಸ್ಥಿತಿ. ಸುಬ್ರಾಯರ ತಂಗಿ ಚಾಮಕ್ಕನಿಗೆ ಆಸ್ಪತ್ರೆಯಲ್ಲಿ ನೀಡಿದ ರಕ್ತದಿಂದ ಏಡ್ಸ್ ತಗುಲಿದರೂ ಆಸ್ಪತ್ರೆಯ ಸೂಪರಿಂಡೆಂಟ್ ವೇಶ್ಯಾವಾಟಿಕೆ ನಡೆಸುತ್ತಿದ್ದಳೆಂದು ಕೇಸು ದಾಖಲಿಸಿದಾಗ, ಹಳೆಮನೆ ಕೊಂಡ ತಿಮ್ಮಪ್ಪಗೌಡನ ವಶೀಲಿಯಿಂದ ಪಾರಾಗುತ್ತಾರೆ. ಒಂದು ಕಾಲದಲ್ಲಿ ಸುಬ್ರಾಯರ ಒಕ್ಕಲಾಗಿದ್ದ ತಿಮ್ಮಪ್ಪಗೌಡ ಅದೇ ಮನೆ ಕೊಂಡು ರಿಸಾರ್ಟ್ ಆಗಿ ಪರಿವರ್ತಿಸಿ ಸಮಾಜದಲ್ಲಿ ಉನ್ನತ ಸ್ಥಾನಮಾನ ಸಂಪಾದಿಸುತ್ತಾನೆ. ಕಾಲಚಕ್ರ ಉರುಳಿ ಧನಿ ದೀನಸ್ಥಿತಿಗೆ ಬರುವ, ಒಕ್ಕಲು ಅಧಿಕಾರದ, ಶ್ರೀಮಂತಿಕೆಯ ತುತ್ತತುದಿಗೇರುವ ಪಲ್ಲಟವನ್ನು ಗಮನಿಸಬಹುದು.

ಭೂಸುಧಾರಣೆಯ ಕಾನೂನು ಜಾರಿಯಾದ ನಂತರ ಬದಲಾದ ಧನಿ-ಒಕ್ಕಲು ಸಂಬಂಧವನ್ನು ಗುರುತಿಸಬಹುದು. ಮೊದಲಿನ ಕ್ರೌರ್ಯ ಮಾಯವಾಗಿ ಧನಿ ಉದಾರನಾಗುತ್ತನೆ. ಒಕ್ಕಲುಗಳಲ್ಲಿ ತಿಳುವಳಿಕೆ ಮೂಡಿ ಸ್ವಾವಲಂಬನೆಯ ಹಾದಿಯಲ್ಲಿ ನಡೆಯುತ್ತಾರೆ. ತಮ್ಮ ಬದುಕಿನ ಹಿಡಿತ ತಮ್ಮ ಕೈಯಲ್ಲೇ ಇರುವಂತೆ ನೋಡಿಕೊಳ್ಳುತ್ತಾರೆ.

೭.೩.೨. ಹೊಂದಾಣಿಕೆ ಮತ್ತು ಸಹಬಾಳ್ವೆ

'ಉಲ್ಲಂಘನೆ' ಕಾದಂಬರಿ ಭೂಸುಧಾರಣೆ ಕಾನೂನು ಜಾರಿಗೆ ಬಂದ ನಂತರದ ಪಲ್ಲಟಗಳನ್ನು ಬಿಡಿಸಿಡುತ್ತಾ 'ಹೊಂದಾಣಿಕೆ'ಯೆಂಬ ಮೂಲಮಂತ್ರದ ಅನಿವಾರ್ಯತೆ ಸೃಷ್ಟಿಸಿದ ಸಂದರ್ಭಗಳನ್ನು ವಿವರಿಸುತ್ತದೆ. ಗುತ್ತಿನ ಯಜಮಾನಿ ಅಂಬಕ್ಕೆಯ ಇಳಿಗಾಲದಲ್ಲಿ ವ್ಯವಸ್ಥೆಯ ಚಿತ್ರಣವೇ ಬದಲಾಗುವುದರ ಜೊತೆಗೆ ಆಕೆಯ ಚಿಂತನಾ ಕ್ರಮದಲ್ಲೂ ಪಲ್ಲಟಗಳು ಸಂಭವಿಸುತ್ತವೆ. ಆಕೆಯ ಮಗಳು ಶಾರದೆ ಆಧುನಿಕ ಶಿಕ್ಷಣ ಪಡೆದು ಮುಂಬಯಿನಲ್ಲಿ ಬದುಕು ಕಟ್ಟಿಕೊಳ್ಳುತ್ತಾಳೆ. ಮಾತೃಪ್ರಧಾನ ವ್ಯವಸ್ಥೆಯ ಪ್ರಕಾರ ತವರು ಮನೆಯಲ್ಲಿ ಇರಬೇಕೆಂಬ ಮನೋಭಾವ ಅವಳು ಹೊಂದಿರದೆ ಗಂಡನ ಜೊತೆ ಇರುವುದನ್ನು ಒಪ್ಪಿಕೊಳ್ಳುತ್ತಾಳೆ. ಗುತ್ತಿನ ಮನೆಯಲ್ಲಿ ಇರಬೇಕಾದ ಸಂಪ್ರದಾಯ ತ್ಯಜಿಸುತ್ತಾಳೆ. ಹಿರಿಯ ಮಗ ರಂಜಿತ್ ಉನ್ನತ ವಿದ್ಯಾಭ್ಯಾಸ ಪಡೆದು ಅಂತರ್ಜಾತೀಯ ವಿವಾಹವಾಗಿ ಸರ್ಕಾರದ ಉನ್ನತ ಅಧಿಕಾರಿಯಾಗಿ ಗುತ್ತಿನ ಮನೆಯಿಂದ ದೂರವೇ ಉಳಿದುಬಿಡುತ್ತಾನೆ. ಗುತ್ತಿನ ಮನೆಯ ಆಸ್ತಿಯ ಆಸೆಯೂ ಆತನಿಗೆ ಇರುವುದಿಲ್ಲ. ಕಿರಿಯ ಮಗ ಸುಂದರ ಗುತ್ತಿನ ಮೇಲೆ ಅಪಾರ ಪ್ರೀತಿ ಹೊಂದಿದ್ದರೂ ಕೆಲವು ಘರ್ಷಣೆಗಳಿಂದ ಊರು ತ್ಯಜಿಸಿ ಮುಂಬಯಿ ಸೇರಿ ದೊಡ್ಡ ಹೋಟೆಲ್ ಉದ್ಯಮಿಯಾಗಿ ಬಲಾಢ್ಯನಾಗಿ ಶೀಘ್ರವೇ ಪತನಾಗುತ್ತಾನೆ. ಗುತ್ತಿನಾರ್ ಸಂಕಪ್ಪಣ್ಣ ಹೃದಯಾಘಾತದಿಂದ ಅಸುನೀಗುವುದು ಈ ಎಲ್ಲಾ ಆಘಾತಗಳಿಂದ ಅಂಬಕ್ಕೆ ವಯಸ್ಸಿನ ಆಘಾತವೂ ಸೇರಿ ಇದೀಗ ೮೪ರ ವಯಸ್ಸಿನಲ್ಲಿ ತನ್ನ ಮೂಲದಾಳುಗಳಾದ ಕೊರಗ ಹಾಗೂ ಕರ್ಗಿಯನ್ನೇ ಸಂಪೂರ್ಣವಾಗಿ ಆಶ್ರಯಿಸಿದ್ದಾಳೆ. ಕೆಲಸಕ್ಕೆ ಜನರ ಕೊರತೆಯಾಗಿ, ಮನೆಯಲ್ಲಿ ಇರಲು ಅಡಿಗೆಗೆ ಸಹಾಯ ಮಾಡಲು ಜನರ ಕೊರತೆ ಉಂಟಾದಾಗ ಸಂಕಪ್ಪ ರೈಗಳು ಕೊರಗ ಹಾಗೂ ಕರ್ಗಿಗೆ ಗುತ್ತುಮನೆಯೊಳಗೆ ಪ್ರವೇಶ ನೀಡುತ್ತಾರೆ. ಅಂಬಕ್ಕೆಯೂ ಇದನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತಾಳೆ. ಕೊರಗ ಕರ್ಗಿಯರನ್ನು ತನ್ನ ಮನೆ ಮಕ್ಕಳಂತೆ ಭಾವಿಸುತ್ತಾಳೆ.

ಯೌವನ ಕಾಲದಲ್ಲಿ ಅಸ್ಪೃಶ್ಯರನ್ನು ಮನೆಯೊಳಗೆ ಸೇರಿಸದ, ಸಂಕಪ್ಪಣ್ಣನ ಪರಿವರ್ತನೆಗಳಿಗೆ ತೀವ್ರ ವಿರೋಧಿಯಾಗಿದ್ದ ಅಂಬಕ್ಕೆ, ಗುತ್ತು ಸಂಸ್ಕೃತಿ ನಾಶವಾಗುತ್ತದೆಂಬ ಮನಸ್ಥಿತಿಯಿಂದ ಇದೀಗ ಹೊಂದಾಣಿಕೆಯ ಮನಸ್ಥಿತಿ ರೂಪಿಸಿರುವುದನ್ನು ಕಾಣಬಹುದು. ಸಾಮಾಜಿಕ, ರಾಜಕೀಯ, ವಯೋಸಹಜ ಬದಲಾವಣೆಗಳೇ ಆಕೆಯ ಮನಪರಿವರ್ತನೆಗೆ ಕಾರಣವಾಗುತ್ತವೆ. ಶಿಕ್ಷಣ, ವ್ಯಕ್ತಿಸ್ವಾತಂತ್ರ್ಯದ ತೀವ್ರ ಕಾಳಜಿ, ಆಧುನಿಕತೆ ಇವೆಲ್ಲದರ ಹೊಡೆತದಿಂದ ಅಂಬಕ್ಕೆ ಗುತ್ತಿನ ಮನೆಯಲ್ಲಿ ಒಂಟಿಯಾಗುವುದು ವಿಶೇಷ. ಆದರೆ ಅಂಬಕ್ಕೆ ಇಳಿವಯಸ್ಸಿನಲ್ಲೂ ಕುಗ್ಗದೆ ಗಟ್ಟಿಗಿತ್ತಿಯಾಗಿ ಹೊಂದಾಣಿಕೆ ಮಾಡುತ್ತಾ ಗುತ್ತು ಮನೆಯಲ್ಲೇ ಉಳಿಯಲು ನಿರ್ಧರಿಸುವಲ್ಲಿ ತೋರುವ ದೃಢತೆ ಗಮನಾರ್ಹ. ಕೊರಗ ಕರ್ಗಿಯರು ಅಶಿಕ್ಷಿತರು, ಶ್ರಮಿಕರು

ಆಗಿದ್ದರೂ ಅಂಬಕ್ಕೆಯ ಅಸಹಾಯಕತೆಯಿಂದ ಲಾಭಪಡೆಯಲು ಪ್ರಯತ್ನಿಸದೆ ಗುತ್ತಿನ ಯಜಮಾನಿ ಎಂಬ ಗೌರವದಿಂದಲೇ ತಾಯಿಯಂತೆ ನೋಡಿಕೊಳ್ಳುವುದು ವಿಶೇಷ. ಆಧುನಿಕ ವಿದ್ಯಾಭಾಸ ಪಡೆದ ರಂಜಿತನಲ್ಲಿಲ್ಲದ ಕಾಳಜಿ ಅಶಿಕ್ಷಿತ ಒಕ್ಕಲು ಮಕ್ಕಳಲ್ಲಿದೆ ಎಂಬ ಸತ್ಯವನ್ನು ಕಾದಂಬರಿ ಪ್ರಕಟಪಡಿಸುತ್ತದೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಭೂಮಸೂದೆ ಕಾನೂನು ಜಾರಿಯಾದ ನಂತರ ಹೆಚ್ಚಿನ ಒಕ್ಕಲುಗಳು ಸ್ವತಂತ್ರರಾಗುತ್ತಾರೆ. ಕೆಮ್ಮಾಡಿ ಬದುಕು, ವ್ಯಕ್ತಿ ಸಂಬಂಧಗಳಲ್ಲಿ, ಸಾಮಾಜಿಕ ನಡೆನುಡಿ ವ್ಯವಸ್ಥೆಗಳಲ್ಲಿ ತೀವ್ರವಾದ ಬದಲಾವಣೆಗಳು ಸಂಭವಿಸುತ್ತವೆ. ಮಾಧವನ ಚಾಣಾಕ್ಷತೆಯಿಂದ ಕೆಲವು ಜಮೀನು ಸ್ವಂತಕ್ಕೆ ಮಾಡಿದ್ದರಿಂದ ಕಮಲಿ ಹಾಗೂ ಕುಟುಂಬಕ್ಕೆ ಸಾಗುವಳಿ ಮಾಡಿ ದಿನದೂಡಲು ತೊಂದರೆಯಾಗುವುದಿಲ್ಲ. ಕೆಲವು ನಂಬಿಗಸ್ಥ ಆಳುಗಳಿಂದ ಕೃಷಿಕಾರ್ಯಗಳು ಸಾಗುತ್ತಿದ್ದವು. ಕೆಮ್ಮಾಡಿ ಮನೆ ಜಮೀನ್ದಾರಿ ಪದ್ಧತಿ ಇದ್ದಾಗ ತುಂಬಾ ಜನರಿಗೆ ಆಶ್ರಯತಾಣವಾಗಿತ್ತು. ದೂರದೂರಿನಿಂದ ಬಂದವರೂ ತಿಂಗಳುಗಟ್ಟಲೆ ಇದ್ದು ಹೋದರೂ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು. ಆಗಿನಿಂದ ಮನೆಯ ಊಳಿಗದವನಂತೆ ಇದ್ದ ಕುಪ್ಪ ಇದೀಗ ಯುವಕನಾಗಿ ಮನೆಯ ಮಗನಂತೆ ಕೆಲಸ ನಿರ್ವಹಿಸುತ್ತಿದ್ದ. ಉಪ್ಪು ತಿಂದ ಮನೆಯ ಋಣ ತೀರಿಸುತ್ತಿದ್ದ.

ಭೂಸುಧಾರಣೆ ಕಾನೂನು ತಂದ ಅಸಹಾಯಕತೆಯು ಧನಿಗಳು ಒಕ್ಕಲುಗಳೊಂದಿಗೆ ಹೊಂದಾಣಿಕೆ ಮಾಡಲೇಬೇಕಾದ ಸಂದರ್ಭಗಳನ್ನು ಸೃಷ್ಟಿಸುತ್ತದೆ. ಕೃಷಿ ಕಾರ್ಯಗಳಿಗೆ ಹಿಂದಿನಿಂದಲೂ ಮೂಲದಾಳುಗಳನ್ನೇ ಅವಲಂಬಿಸಿದ ಧನಿಗಳು ಈಗಲೂ ಅವಲಂಬಿಸಲೇಬೇಕಾಗುತ್ತದೆ.

೭.೩.೩ ಕೃಷಿ ಮತ್ತು ಗುತ್ತಿನ ಮನೆಯ ಮೇಲಾದ ಪರಿಣಾಮಗಳು

ಕೃಷಿಯ ಮೇಲಾದ ಪರಿಣಾಮಗಳು

'ಉಲ್ಲಂಘನೆ' ಕಾದಂಬರಿಯು ಭೂಮಸೂದೆಯ ನಂತರದ ಕೃಷಿ ಪಲ್ಲಟಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದೆ. ಭೂಮಸೂದೆಯಿಂದ ದಿಢೀರನೆ ಭೂಮಾಲಕತ್ವ ಪಡೆದ ಗೇಣಿದಾರರಿಗೆ 'ಮಂಗನ ಕೈಗೆ ಮಾಣಿಕ್ಯ' ಲಭಿಸಿದಂತಾಯಿತು. ಭೂಮಿಯನ್ನು ವಶಪಡಿಸಿಕೊಳ್ಳಲು ಹಲವು ಆಮಿಷಗಳು ಎದುರಾದವು. ದೊಡ್ಡ ದೊಡ್ಡ ಕಂಪನಿಗಳು ಹಣದ ಆಮಿಷವೊಡ್ಡಿ ಭೂಮಿ ಖರೀದಿಸಲು ಮುಂದಾದವು. ಪ್ರಕೃತಿ ನಾಶವೂ ಅವ್ಯಾಹತವಾಗಿ ಸಾಗಿತು. ಎಷ್ಟೋ ವರುಷಗಳಿಂದ ಹುಲುಸಾಗಿ, ಬೃಹದಾಕಾರವಾಗಿ ಬೆಳೆದ ಮರಗಳು ನೆಲಕ್ಕುರುಳಿದವು. ಕಾಡು ನಾಶವಾಯಿತು. ಭೂಮಸೂದೆ ಹಲವು ಸ್ಥಿತ್ಯಂತರಗಳಿಗೆ ಕಾರಣೀಭೂತವಾಯಿತು. ಆಗ ತಾನೇ ಹುಟ್ಟಿದ ಹೊಸ ಉದ್ಯಮಗಳು ಇದರ ಜೊತೆ ಸೇರಿದವು. ಮರದ ವ್ಯಾಪಾರದಿಂದ ಹಲವು ಮರಗಳು ನಾಶವಾದವು. ಹೆಂಗಳೆಯರಿಗೆ ಬೀಡಿ ಆಕರ್ಷಕವೆನಿಸಿತು. ದಿಢೀರನೆ ಆಸ್ತಿಯ ಹಕ್ಕುದಾರರಾದ ಗೇಣಿದಾರರು ಹೆಚ್ಚಿನ ಆಮಿಷಗಳಿಗೆ ಬಲಿಯಾಗಿ ಅದನ್ನು ಮಾರಿಕೊಂಡರು.

ಭೂಮಸೂದೆ ಗೇಣಿದಾರರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿತು. ಹಿಂದೆಲ್ಲಾ ತಾವು ಬೆವರು ಸುರಿಸಿ ದುಡಿದ ಜಮೀನಿನಲ್ಲಿ ಬೆಳೆದದ್ದನ್ನೂ ಮಾಲೀಕನಿಗೆ ಕೊಡಬೇಕಾಗಿತ್ತು. ಈಗ ಸ್ವವಿಶ್ವಾಸ ಬೆಳೆದು, ನಿರ್ಧಾರಗಳನ್ನು ತೆಗೆದುಕೊಳ್ಳುವ ಜಾಣ್ಮೆ, ತರ್ಕ ಮಾಡುವ ಸಾಮರ್ಥ್ಯ ಎಲ್ಲವನ್ನೂ ಕಲಿತರು. ಗುಲಾಮರಂತೆ ಆಜ್ಞೆ ಪಾಲಿಸುವುದರಿಂದ ಚಿಂತನಾ ಶಕ್ತಿಯೇ ಕ್ಷಯಿಸಿಬಿಡುತ್ತದೆ. ಭೂಮಸೂದೆ ತರ್ಕಿಸುವ, ಚಿಂತಿಸುವ ಹಕ್ಕು ಸಾಧಿಸುವ ಸಾಮರ್ಥ್ಯ ನೀಡಿತು. ಗುತ್ತಿನಾರ್‌ನ ಆಜ್ಞೆಗಾಗಿ ಕಾಯುವವರಿಗೆ ಈಗ ಅದರ ಅವಶ್ಯಕತೆ ಇಲ್ಲ.

ಭತ್ತದ ಕೃಷಿ ಮಾಡುವುದು ದುಸ್ತರವೆನಿಸಿದಾಗ ಗುತ್ತಿನ ಮನೆಯಲ್ಲಿ ಕಂಗಿನ ತೋಟ ಮೇಲೇಳುತ್ತದೆ. ಕಂಗಿನ ತೋಟಕ್ಕೆ ದನಕರುಗಳ ಅಗತ್ಯ ಅಷ್ಟಾಗಿಲ್ಲ. ಕಾರ್ಮಿಕರ ಅವಶ್ಯಕತೆಯೂ ಕಡಿಮೆ. ಬಾಕಿಮಾರು ಗದ್ದೆ ಹೊಸತೋಟವೆಂದು ನಾಮಾಂಕಿತವಾಯಿತು.

ಅವಿಭಕ್ತ ಕುಟುಂಬಗಳು ಒಡೆದು ವಿಘಟನೆ ಆಗಿರುವುದು ಭೂಮಸೂದೆಯ ಮತ್ತೊಂದು ಪರಿಣಾಮ. ಕೂಡುಕುಟುಂಬವಿದ್ದಾಗ ಕೃಷಿಗೆ ಪರಸ್ಪರ ಸಹಕಾರವಿತ್ತು. ಮನೆ ನಿಭಾಯಿಸುವುದು ಸುಲಭವಿತ್ತು. ವಿಘಟಿತ ಕುಟುಂಬದ ದೆಸೆಯಿಂದ ಕೃಷಿಸಾಲ ಮಾಡಬೇಕಾಯಿತು. ಸಾಲ ತೀರಿಸಲಾಗದೆ ಜಮೀನು ಮಾರುವ ದುಸ್ಥಿತಿ ಒದಗಿತು. ಶಾಂತಕ್ಕೆ ಗುತ್ತಿನ ಯಜಮಾನಿ ಆಗಿರುವಾಗ ತುಂಬಿದ ಮನೆಯು ಅಂಬಕ್ಕೆಯ ಕಾಲಕ್ಕೆ ಆಕೆ ಏಕಾಂಗಿಯಾಗಿಬಿಟ್ಟದ್ದು ಹಲವು ಒಳನೋಟಗಳನ್ನು ನಮ್ಮೆದುರು ತೆರೆದಿಡುತ್ತದೆ. ಕೃಷಿ ಅವಲಂಬಿತರಾಗಿದ್ದಾಗ ಮನೆಮಂದಿ ಒಟ್ಟಿಗಿರುತ್ತಿದ್ದರು. ಆಧುನಿಕ ಗಾಳಿ ಬೀಸುತ್ತಿದ್ದಂತೆ, ಶಿಕ್ಷಣ, ಇನ್ನಿತರ ಉದ್ಯಮ ಎಂದು ಮನೆಮಂದಿ ದೂರದೂರವಾದರು. ಅದರ ಜೊತೆ ಆಚರಣೆಗಳೂ, ಸಂಸ್ಕೃತಿಯೂ ರೂಪಾಂತರವಾಯಿತು. ಗುತ್ತಿನಲ್ಲಿ ವರುಷಕ್ಕೊಮ್ಮೆ ಬೆಳೆದ ಬೆಳೆಯನ್ನು ಗೇಣಿ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಪೊಲಿ ಎಂದು ಸಂಭ್ರಮಿಸುವ ಆಚರಣೆ ಇತ್ತು. ಜಮೀನುದಾರನ ಮನೆ ತುಂಬಿಸುವ ಈ ಕಾರ್ಯ ಮಾಯವಾಯಿತು. ಗದ್ದೆ ಉಳುವ, ನೇಜಿ ನೆಡುವ ಕೃಷಿಕಾರ್ಯಕ್ಕೆ ಕೊನೆ ಬಿದ್ದಂತೆ ಮಂಜೊಟ್ಟಿ, ಓಬೇಲೆಗಳು ಜನಮಾನಸದಿಂದ ಮಾಯವಾದವು. ಜಮೀನುದಾರಿ ಪದ್ಧತಿ ಒಂದು ಸಂಸ್ಕೃತಿಯನ್ನೇ ನಿರ್ಮಿಸಿತ್ತು. ಭೂಮಸೂದೆಯ ಪ್ರಹಾರ ಬಿದ್ದು ಅದು ವಿಘಟಿತವಾದಾಗ ಕೃಷಿ ಜೊತೆ ಸೇರಿಕೊಂಡಿದ್ದ ಹಲವು ಆಚರಣೆಗಳು ಮಾಯವಾಗುತ್ತಾ ಸಾಗಿದವು. ಗುತ್ತಿನ ಮನೆಯ ಸುತ್ತ ನಿರ್ಮಿತವಾದ ವ್ಯವಸ್ಥೆ ಅಂಬಕ್ಕೆ ಏಕಾಂಗಿಯಾದಾಗ, ಎಂಬತ್ತನಾಲ್ಕು ವರ್ಷದ ವೃದ್ಧೆಯ ಕಾಲಾನಂತರ ಅದೂ ಒಡೆದುಹೋಗುವ ಮುನ್ಸೂಚನೆಯನ್ನು ನೀಡುತ್ತದೆ.

ಸಮುದಾಯವು ಒಂದು ಸನ್ನಿವೇಶ ಎದುರಿಸಲು ಹಲವು ಸಾಧ್ಯತೆಗಳ ಕುರಿತು ಯೋಚಿಸುತ್ತದೆ; ತರ್ಕಿಸುತ್ತದೆ. ಸಂಕಪ್ಪ ಹೆಗ್ಡೆಯವರಿಗೆ ಹೊಳೆದ ಇನ್ನೊಂದು ಉಪಾಯವೆಂದರೆ ಪರಸ್ಪರ ಸಹಕಾರದಿಂದ ಕೃಷಿ ಮಾಡುವ 'ಸಹಕಾರ ಪದ್ಧತಿ'. ಧಣಿಯ ಗತ್ತಿನ ಬದುಕಿನಿಂದ ಕೆಳಗೆ ಇಳಿದು ಆಳುಗಳ ಜೊತೆ ಕೈಸೇರಿಸಿ ಇಳಿಯಲು ಮನಸ್ಸನ್ನು ಪಕ್ವಗೊಳಿಸುತ್ತಾರೆ. ನಮ್ಮ ಪರವಾಗಿ ದುಡಿಯಲು ಮೂಲದಾಳುಗಳನ್ನು ಬಳಸಿಕೊಳ್ಳಬಹುದು ಎಂದುಕೊಳ್ಳುತ್ತಾರೆ. ಕೃಷಿ ಮೇಲಿನ ಮಮತೆ ಈ ಸ್ಥಾನಪಲ್ಲಟವನ್ನು ಮಾಡಲು ಸಿದ್ಧಗೊಳಿಸುತ್ತದೆ. ಮೇಲುಕೀಳು ಭಾವ ಕಿತ್ತೆಸೆದು ಸಮಾನತೆಯ ಭಾವ ಮುನ್ನೆಲೆಗೆ ಬರುತ್ತದೆ.

"ನಾವು ಉಳುವ, ನಾಟಿ ಮಾಡುವ ಕುಟುಂಬದಿಂದಲೇ ಬಂದವರು. ಒಕ್ಕಲುತನ ಮಾಡುವುದರಿಂದಲೇ ನಾವು ಒಕ್ಕಲಿಗರು. ಒಕ್ಕಲುತನಕ್ಕೆ ಅವರ ಗದ್ದೆ ಇವರ ಗದ್ದೆ ಎಂಬ ಭೇದ ಇಲ್ಲ. ನಾನು ಅವರ ಗದ್ದೆ ಉಳುಮೆ ಮಾಡುತ್ತೇನೆ. ನೀನು ನಾಟಿ ಮಾಡು ಅಂದದ್ದಲ್ಲ. ಪರಸ್ಪರ ಒಬ್ಬರಿಗೊಬ್ಬರು ಸಹಕರಿಸಿದರೆ ಈ ಭೂಮಿಯಲ್ಲಿ ಒಕ್ಕಲುತನ ಸದಾ ಇರುತ್ತದೆ."(ಉಲ್ಲಂಘನೆ, ಪುಟ ೩೬) ಸಂಕಪ್ಪ ಅಂಬಕ್ಕಗೆ ಹೇಳುವ ಈ ಮಾತು ಪ್ರೀತಿಯ ಕೃಷಿ ಉಳಿಸಲು ಕೆಳಹಂತಕ್ಕೆ ಇಳಿಯಲು ಸಿದ್ಧವಾದ ಸಂದರ್ಭವಾಗಿದೆ.

'ಕರ್ನಾಟಕದ ಭೂಸುಧಾರಣೆಗಳು ಬಂಡವಾಳದ ವಹಿವಾಟಿಗೆ ಬಹಳ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡುವುದರ ಜತೆಗೆ, ಕೆಳವರ್ಗದ ಜನರಿಗೆ ದೊರಕಿಸಿದ ಕೆಲವು ಲಾಭಗಳು ಸರ್ಕಾರಕ್ಕೆ ಬೆಂಬಲ ಹೆಚ್ಚಿಸುವ ಉದ್ದೇಶದಿಂದ ಬಹಳ ಮುಖ್ಯವಾಗಿದ್ದವು. ಈ ಸುಧಾರಣೆಗಳನ್ನು ಸರ್ಕಾರವು ರೈತರು ಯಾವುದೇ ರೀತಿಯಲ್ಲಿ ಸಂಘಟಿತ ಒತ್ತಾಯ ಮಾಡದೇ ಇದ್ದರೂ ಕೈಗೊಂಡಿತ್ತು. ಇದರಿಂದ ಕೃಷಿ ಸಮಾಜದಲ್ಲಿ ಬೆಳೆಯಬಹುದಾದ ವರ್ಗ ಸಂಬಂಧಗಳು ಸಡಿಲಗೊಂಡವು. ಕಾಯಿದೆಯಿಂದ ಸಮಾಜದ ಬಲಿಷ್ಠ ವರ್ಗಗಳ ಅಸ್ತಿತ್ವಕ್ಕೆ ಧಕ್ಕೆ ಬರದಿದ್ದರೂ, ಒಂದು ಸಣ್ಣ ಆಘಾತವಾದರೂ ಆಯಿತು.'[೧೦] ಜಾತಿಶ್ರೇಣೀಕರಣ ಪದ್ಧತಿ ದುರ್ಬಲವಾಗಲು ಭೂಸುಧಾರಣೆ ಕಾನೂನು ಸ್ವಲ್ಪಮಟ್ಟಿಗೆ ಕಾರಣವಾಯಿತು.

'ಭೂಸುಧಾರಣೆಗಳ ಕಾರಣದಿಂದ ಹಳ್ಳಿಗಾಡಿನ ಕಡೆಗಳಲ್ಲಿ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳು ಕಾಲಿಡಲು ಸಾಧ್ಯವಾಯಿತು. ಪಟ್ಟಣಗಳು, ಕೈಗಾರಿಕೆಗಳು ಮತ್ತು ಸಾಲದ ವ್ಯವಹಾರಗಳು ರೈತರ ಜನಜೀವನಕ್ಕೆ ಸೇರ್ಪಡೆಯಾಗತೊಡಗಿದವು.'[೧೧] ರೈತರ ಬದುಕು ಆಧುನಿಕ ಸೌಲಭ್ಯಗಳಿಗೆ ತೆರೆಯುವುದು ಅನಿವಾರ್ಯವಾಯಿತು.

'ನಮ್ಮ ಸಂಸ್ಕೃತಿ, ನಮ್ಮ ಭಾಷೆ–ಅಷ್ಟು ಸುಲಭದಲ್ಲಿ ಯಾವತ್ತೂ ಸಾಯುವಂಥದಲ್ಲ ಎಂಬ ಧೈರ್ಯ ನನಗೆ ಇದೆ. ಒಂದು ವೇಳೆ ಸಾಯುವಾಗಲೂ ಅದು ಇನ್ನೊಂದು ಸಂಸ್ಕೃತಿಯನ್ನು ಹುಟ್ಟುಹಾಕಿ ಅದರೊಳಗೇ ಇರುತ್ತದೆ ಅಂತ ನನಗೆ ಅನಿಸುತ್ತದೆ.'(ಉಲ್ಲಂಘನೆ, ಪುಟ ೫೬೭) ಶಾಂತಿರಾಜ ಅಂಬಕ್ಕೆಯ ಮೊಮ್ಮಗಳಾದ ಪ್ರಜ್ಞಾಳ ಬಳಿ ಹೇಳುವ ಈ ಮಾತುಗಳು ಸಂಸ್ಕೃತಿಯ ಪಲ್ಲಟದ ಕುರಿತ ಮಹತ್ವದ ಮಾತುಗಳು.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಭೂಮಸೂದೆ ಜಾರಿಯಾದ ನಂತರದ ಕೃಷಿಯಲ್ಲಾದ ಪಲ್ಲಟಗಳನ್ನು ಚಿತ್ರಿಸಲಾಗಿದೆ. ಕೆಮ್ಮಾಡಿ ಮನೆಯ ಮಾಧವನಿಗೆ ೮೦೦ ಮುಡಿ ಗದ್ದೆಗಳಿದ್ದವು. ಮಾಧವ ಸತ್ತ ಎರಡು ವರ್ಷಗಳಲ್ಲೇ ಭೂಮಸೂದೆ ಕಾನೂನು ಜಾರಿಗೆ ಬಂದು ಹೆಚ್ಚಿನ ಭೂಮಿಯೆಲ್ಲಾ ಒಕ್ಕಲಿನವರ ಪಾಲಾಗಿತ್ತು. ಮಾಧವನ ಬುದ್ಧಿವಂತಿಕೆಯಿಂದ ಸ್ವಂತಕ್ಕೆ ಮಾಡಿಕೊಂಡ ಜಮೀನಿನಿಂದಾಗಿ ಕೆಲವು ಗದ್ದೆ, ಜಮೀನು ಉಳಿದು ಬದುಕು ನಡೆಸಲು ಆಧಾರವಾಗಿತ್ತು. ಜಮೀನ್ದಾರಿಕೆ ಕಳಚಿ ಮನೆಯವರೇ ಕೂಲಿಯಾಳುಗಳಾಗುವ ಪ್ರಸಂಗ ಉದ್ಭವಿಸಿತು. ಮಾಧವನ ತಮ್ಮ ಸೀತಾರಾಮನ ಮಡದಿ ಕಮಲಿನಿ ಕೃಷಿಯ ಜವಾಬ್ದಾರಿ ವಹಿಸಬೇಕಾಯಿತು. ಸೀತಾರಾಮ ಅಣ್ಣನ ಛಾಯೆಯಿಂದ ಹೊರಬರಲೇ ಇಲ್ಲ. ಕೃಷಿ ಕೆಲಸಗಳಲ್ಲಿ

ಆದುವರೆಗೆ ಭಾಗಿಯಾಗದ ಕಮಲಿನಿ ಧಾನ್ಯಗಳ ಮಾರಾಟ, ಮಿಲ್ಲುಗಳ ವ್ಯವಹಾರ, ಬೇಸಾಯಕ್ಕೆ ಬೇಕಾದ ಗೊಬ್ಬರ, ಕೀಟನಾಶಕಗಳ ಖರೀದಿ ಎಲ್ಲವನ್ನೂ ನಿರ್ವಹಿಸಬೇಕಾಯಿತು.

'ಸಾಗುವಳಿ ಮಾಡಿಸುವುದೆಂದರೆ ಮಾತ್ರ ಈಗೀಗ ಅವಳಿಗೆ ಮೂಗಿನವರೆಗೆ ಬರುತ್ತಿತ್ತು. ಉಳುವವನೇ ಭೂಮಿಗೊಡೆಯನೆಂಬ ಕಾನೂನು ಬಂದ ಮೇಲಿನ ಈ ವರ್ಷಗಳಲ್ಲಿ ಬೇಸಾಯವೆಂದರೆ ಮೈಚಳಿ ಬರುವಂತಾಗಿತ್ತು. ಕೆಲಸಕ್ಕೆ ಜನ ಸಿಕ್ಕುವುದೆಂದರೆ ಸಾಕುಬೇಕಾಗುತ್ತಿತ್ತು. ದೂರದ ಬೊಂಬಾಯಿಯ ಹೋಟೆಲುಗಳಲ್ಲಿ ಪಾತ್ರೆ ತಿಕ್ಕಿಯಾರು, ಇಲ್ಲವೆ ಬೀಡಿ ತಯಾರಿಸಲು ಕಂಪೆನಿಗಳಿಗೆ ಬೀಡಿ ಕಟ್ಟಿಕೊಟ್ಟಾರು. ಇನ್ನು ಕೆಲವರು ಗೇರುಬೀಜದ ಕಾರ್ಖಾನೆಯಲ್ಲಿ ದುಡಿಯಲು ಹೋದರೆ, ಇನ್ನೂ ಕೆಲ ಅದೃಷ್ಟವಂತರು ದುಬೈ, ಅಬುದಾಬಿಗಳಿಗೆ ಹೋಗಿ ಊರಲ್ಲೊಂದು ಮನೆ ಕಟ್ಟಿಸಿಟ್ಟು, ರಜೆ ಬಂದಾಗ ಟೂ–ಇನ್–ಒನ್ ಹಿಡಿದು ತಿರುಗಿಯಾರು. ಬೇಸಾಯದ ಕೆಲಸ ಮಾತ್ರ ಯಾರಿಗೂ ಬೇಡ. ಇನ್ನು ಬರುವ ಕೆಲಸಗಾರರಿಗಾದರೋ ಎಷ್ಟು ಮಜೂರಿ ತೆತ್ತರೂ ತೃಪ್ತಿ ಇಲ್ಲದಂತಹ ಪರಿಸ್ಥಿತಿ.'(ಪಾಚಿ ಕಟ್ಟಿದ ಪಾಗಾರ, ಪುಟ ೩೬೦)

ಕೃಷಿ ಮಾಲೀಕರ ದುಸ್ಥಿತಿ, ಕಾರ್ಮಿಕರ ಕೊರತೆ, ಕಡಿಮೆ ದಕ್ಷತೆ ಇವುಗಳಿಂದ ಕೃಷಿ ಕೆಲಸ ನಿರ್ವಹಿಸುವುದು ತ್ರಾಸದಾಯಕವಾಗಿದ್ದರೂ ಕಮಲಿನಿ ಸಾಮ, ದಾನ ಬಳಸಿ ಕೆಲಸ ನಿರ್ವಹಿಸುತ್ತಿದ್ದಳು. ಹಿರಿಯರ ಭೂಮಿ ಹಡೀಲು ಬಿಡಲಾರದೆ ಉತ್ಪಾದನೆ ಕಡಿಮೆಯಾದರೂ ಶ್ರಮಪಟ್ಟು ಅವರೊಂದಿಗೆ ಒಂದಾಗಿ ರೈತಾಪಿ ಮಹಿಳೆಯೇ ಆಗಿಬಿಟ್ಟಳು. ಕೆಲವು ನಂಬಿಗಸ್ಥ ಆಳುಗಳಿಂದ ಹಾಗೂ ತಂದೆ, ದೊಡ್ಡಪ್ಪನ ಸಲಹೆ, ನೆರವುಗಳಿಂದ ಆಕೆಯ ಕೆಲಸಗಳು ಸಾಗುತ್ತಿದ್ದವು. ಕಷ್ಟಪಟ್ಟು ಮಾಡಿದ ತರಕಾರಿ ತೋಟಗಳಿಂದ ಕಳ್ಳತನ ನಡೆಯುವುದು ಮಾಮೂಲಾಗಿತ್ತು.

ಗುತ್ತಿನ ಮನೆಯ ಮೇಲಾದ ಪರಿಣಾಮಗಳು

'ಉಲ್ಲಂಘನೆ' ಕಾದಂಬರಿ ಅಧಿಕಾರ ಕೇಂದ್ರವಾದ ಗುತ್ತುಮನೆ ಅಧಿಕಾರ ಕಳೆದುಕೊಂಡು ದುರ್ಬಲಗೊಳ್ಳುವುದನ್ನು ಸ್ಪಷ್ಟವಾಗಿ ಚಿತ್ರಿಸಿದೆ. ಭೂಮಸೂದೆ ಜಾರಿಯಾದ ಫಲವಾಗಿ ತಿಳುವಳಿಕೆ ಪಡೆದು ಗುತ್ತಿನ ಒಕ್ಕಲುಗಳು ಸ್ವತಂತ್ರರಾಗುತ್ತಾ ಸಾಗುತ್ತಾರೆ. ಸಂಕಪ್ಪಯ್ಯನವರ ಉದಾರವಾದೀ ನಡವಳಿಕೆ ಮೂಲದಾಳುಗಳು ಹಾಗೂ ಗೇಣಿದಾರರು ಸ್ವತಂತ್ರರಾಗಲು ಸೂಕ್ತ ಸಂದರ್ಭವನ್ನು ಹುಟ್ಟುಹಾಕುತ್ತದೆ. ಪ್ರತಿರೋಧವಿಲ್ಲದೆ ಅವರು ಸ್ವತಂತ್ರರಾಗುತ್ತಾರೆ. ಮೊದಲಿನಂತೆ ಬಿಟ್ಟಿ ಚಾಕರಿ ಮಾಡಲು ಅವರು ಸಿದ್ಧರಿಲ್ಲ. ಪ್ರತಿ ಪಲ್ಲಟವೂ ಹೊಸ ಸಮಸ್ಯೆಯನ್ನು ಹುಟ್ಟುಹಾಕುತ್ತಿರುತ್ತದೆ. ಅದನ್ನು ಎದುರಿಸುವ ಸಂದರ್ಭದಲ್ಲಿ ಹೊಸ ಆಲೋಚನೆಗಳು, ಹೊಸ ಉಪಾಯಗಳು ಅನಿವಾರ್ಯವಾಗುತ್ತವೆ.

ಭೂಸುಧಾರಣಾ ಕಾನೂನು ಹಲವು ಸ್ಥಿತ್ಯಂತರಗಳಿಗೆ ಕಾರಣವಾಗುತ್ತದೆ. ಒಕ್ಕಲುಗಳಲ್ಲಿ ಮೂಡಿದ ಎಚ್ಚರ, ತಮ್ಮ ಗುಲಾಮತನದ ಜೀವನದ ಅರಿವು, ಸ್ವತಂತ್ರರಾಗಿ ಬದುಕಲು ಹವಣಿಸುವ ಪ್ರಯತ್ನಕ್ಕೆ ನಾಂದಿಯಾಗುತ್ತದೆ. ಸಮಯ ಸಂದರ್ಭಗಳ ನೆಪ ಒಡ್ಡದೆ ದಿನದ ಇಪ್ಪತ್ತನಾಲ್ಕು ಗಂಟೆಯೂ ಬೆವರು ಸುರಿಸಿ ದುಡಿದ ಆಳುಗಳು ಭೂಸುಧಾರಣಾ ಕಾನೂನು

ಜಾರಿಯಾಗಿ ಸ್ವತಂತ್ರರಾದ ಮೇಲೆ ಕೆಲಸವನ್ನು ಅರ್ಧದಲ್ಲಿ ನಿಲ್ಲಿಸಿ ಹೊರಡಲು ಸನ್ನದ್ಧರಾಗುತ್ತಾರೆ. ಕೂಲಿ ಕೇಳಲು ದಾಕ್ಷಿಣ್ಯ ಕಟ್ಟಿ ಹಾಕುತ್ತದೆ. ಕಾನೂನಿನ ಮೂಲಕ ಭೌತಿಕ ದಾಸ್ಯದಿಂದ ಹೊರಬಂದರೂ ಮಾನಸಿಕ ದಾಸ್ಯದಿಂದ ಹೊರಬರುವುದು ಸುಲಭವಲ್ಲ. ಸಂಕಪ್ಪ ಹೆಗ್ಡೆ ಹೆಚ್ಚುವರಿ ಸಂಬಳ ನೀಡಲು ಒಪ್ಪಿದ ತರುವಾಯ ಎಲ್ಲರೂ ಮನಃಪೂರ್ವಕವಾಗಿ ಕೆಲಸ ಮುಗಿಸುತ್ತಾರೆ.

ಭೂಮಸೂದೆಯ ಫಲವಾಗಿ ಕೆಲಸಗಾರರ ದುಡಿಯುವ ಅವಧಿ ಹಾಗೂ ಅವರ ಆಹಾರದಲ್ಲಿ ಪ್ರಮುಖ ಬದಲಾವಣೆಗಳು ಕಂಡುಬರುತ್ತವೆ. ಭೂಮಸೂದೆ ಜಾರಿಯಾಗುವ ಮುನ್ನ ಸೂರ್ಯೋದಯದ ಸಮಯದಲ್ಲಿ ಆಗಮಿಸುವ ಕೂಲಿಯಾಳುಗಳು ನಂತರದ ದಿನಗಳಲ್ಲಿ ಗಂಟೆ ಒಂಬತ್ತಾದರೂ ಅಂಗಳದ ಮೆಟ್ಟಿಲು ಹತ್ತುವುದಿಲ್ಲ. ಸಂಜೆ ಬೇಗನೇ ಮನೆಗೆ ತೆರಳಲು ಉತ್ಸಾಹ ತೋರುತ್ತಾರೆ. ನಮ್ಮ ದುಡಿಮೆ ಇಷ್ಟೇ ಸಮಯಕ್ಕೆ ಮೀಸಲು ಎಂಬ ಪ್ರಜ್ಞೆ ಬಂದಿರುತ್ತದೆ. ಭೂಮಸೂದೆ ಜಾರಿಯಾಗಿ ಗೇಣಿದಾರರು ಸ್ವತಂತ್ರರಾದ ಮೇಲೆ ಗುತ್ತಿನವರು ಅಧಿಕಾರಯುತವಾಗಿ ವರ್ತಿಸುವುದಿಲ್ಲ. ಬದಲಿಗೆ ಅನೇಕ ಸೌಲಭ್ಯಗಳನ್ನು ಕೆಲಸಗಾರರಿಗೆ ನೀಡಲು ಮುಂದಾಗುತ್ತಾರೆ. ಮೊದಲು ಕೆಲಸಗಾರರಿಗೆ ಗಂಜಿ ಚಟ್ನಿ ನೀಡುವ ಪರಿಪಾಠವಿತ್ತು. ಸ್ವತಂತ್ರರಾದ ತರುವಾಯ ವಿವಿಧ ಬಗೆಯ ವ್ಯಂಜನಗಳು ಹಾಗೂ ಮೀನು ಸಾರು ಊಟಕ್ಕೆ ಸಿದ್ಧವಾಗಿರುತ್ತದೆ. ಗಾಂಧಿವಾದಿ ಸಂಕಪ್ಪಣ್ಣ ಕೆಲಸಗಾರರನ್ನು ಗುತ್ತಿನ ಮನೆಯ ಒಳಗೆ ಆಹ್ವಾನಿಸಿ ಅಂಬಕ್ಕೆಯ ವಿರೋಧದ ನಡುವೆಯೂ ಊಟದ ವ್ಯವಸ್ಥೆ ಮಾಡುತ್ತಾರೆ. ಧನಿ ಒಕ್ಕಲು ಎಂಬ ವ್ಯವಸ್ಥೆ ನಾಶವಾಗುವುದರ ಜೊತೆಗೆ ಹಲವು ಸುಧಾರಣೆಗಳು ಬಂದವು.

ಸಾಂತೇರ್ ಗುತ್ತಿನ ಮೂರನೇ ತಲೆಮಾರಿನವರಾದ ಅಂಬಕ್ಕ ಹಾಗೂ ಸಂಕಪ್ಪ ಹೆಗ್ಡೆಯವರಲ್ಲಿ, ಎರಡನೆಯವರು ಗಾಂಧಿವಾದಿ. ಗಾಂಧಿತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡವರು. ಆದ್ದರಿಂದ ಹೆಚ್ಚಿನ ಘರ್ಷಣೆಗೆ ಕಾರಣವಾಗದೆ ಮೂಲದಾಳುಗಳು ಸ್ವತಂತ್ರರಾಗುತ್ತಾರೆ. ಅಂಬಕ್ಕನ ವಿರೋಧಗಳಿಗೂ ಸಂಕಪ್ಪ ಹೆಗ್ಡೆ ಸೂಕ್ತ ಉತ್ತರವನ್ನು ನೀಡುತ್ತಾ ಬದಲಾದ ಸನ್ನಿವೇಶ, ಧೋರಣೆಗಳನ್ನು ಎದುರಿಸುತ್ತಾರೆ. ಕೂಲಿಗೆ ಸರಿಯಾದ ಮಜೂರಿ ನೀಡುವ ಅಭ್ಯಾಸ ಮಾಡುತ್ತಾರೆ. ಹೆಚ್ಚುವರಿ ದುಡಿಮೆಗೆ ಎರಡರಷ್ಟು ವೇತನ ನೀಡಲು ಅನುವಾಗುತ್ತಾರೆ. ಬದಲಾದ ಸಂದರ್ಭದಲ್ಲಿ ಶೀಘ್ರವಾಗಿ ಸ್ಪಂದಿಸಿ, ಮಾರ್ಪಾಡು ಮಾಡುವವರು ಬದುಕಿಕೊಳ್ಳುತ್ತಾರೆ. ಪ್ರತಿ ಕ್ಷಣವೂ ಹೊಸ ಸವಾಲುಗಳು, ಹೊಸ ಸಾಧ್ಯತೆಗಳು, ಆಲೋಚನೆ, ವಿಚಾರಗಳೂ ಪ್ರತಿ ಕ್ಷಣವೂ ಒಡೆದು ಕಟ್ಟುವ ನಿರಂತರವಾದ ಪ್ರಕ್ರಿಯೆಯನ್ನು ಗಮನಿಸಬಹುದು.

ಬೀಡಿ, ಕಲ್ಲುಕೋರೆ ಮುಂತಾದ ಹಲವು ವೃತ್ತಿಗಳು ಜನಪ್ರಿಯವಾಗುತ್ತಿದ್ದಂತೆ ಕೃಷಿಗೆ ಕಾರ್ಮಿಕರ ಸಂಖ್ಯೆಯು ಗಣನೀಯ ಇಳಿಮುಖ ಕಂಡಿತು. ಬಾಕಿಮಾರು ಗದ್ದೆ ಉಳಲು ಗುತ್ತಿನ ನಾಲ್ಕು ಜೊತೆ ಕೋಣಗಳು ಬಿಟ್ಟರೆ ಬೇರೆ ಕೋಣಗಳ ಸುಳಿವಿಲ್ಲ. ಕೃಷಿ ಮಾಡುವುದಾದರೂ ಹೇಗೆ? ಎಂಬ ಹೊಸ ಸಮಸ್ಯೆ ಹುಟ್ಟಿಕೊಂಡಿತು. ಅಂಬಕ್ಕೆ ಚಿಂತಿತರಾದಾಗ ಸಂಕಪ್ಪ ಹೆಗ್ಡೆ ಟಿಲ್ಲರ್ ತಂದು ಉಳುಮೆ ಮಾಡುವುದರ ಕುರಿತು ತೀರ್ಮಾನಿಸುತ್ತಾರೆ. ಹಾಗೇ ಉಳುಮೆಯೂ ಯಾವುದೇ ಆತಂಕವಿಲ್ಲದೆ ನೆರವೇರುತ್ತದೆ. ಮಾನವಶ್ರಮಕ್ಕೆ ಪರ್ಯಾಯವಾಗಿ ಆಧುನಿಕ

ವಿಜ್ಞಾನದ ಕೂಸಾದ ಯಂತ್ರ ಪ್ರವೇಶಿಸುತ್ತದೆ. ಭಾವನೆಗಳ ಘರ್ಷಣೆಯಿಲ್ಲದೆ ಯಂತ್ರ ಕೆಲಸ ಮಾಡಿ ಮುಗಿಸುತ್ತದೆ.

ಉಳುವ ಸಮಸ್ಯೆ ಈ ವರುಷದ್ದು ಮಾತ್ರವಲ್ಲ, ಮುಂದಿನ ವರುಷಗಳದ್ದೂ ಕೂಡ. ಸನ್ನಿವೇಶ, ಸಂದರ್ಭಗಳ ಒತ್ತಡದಿಂದ ಕಂಗು ನೆಡುವ ತೀರ್ಮಾನವಾಗುತ್ತದೆ. ಆಹಾರ ಬೆಳೆಗಳಿಂದ ವಾಣಿಜ್ಯ ಬೆಳೆ ಬೆಳೆಯುವಲ್ಲಿ ಸ್ಥಿತ್ಯಂತರವಾಗುತ್ತದೆ. ಮನುಷ್ಯನ ಇಚ್ಛೆಗೆ ಮೀರಿ, ಅಳಿವು ಉಳಿವಿನ ಪ್ರಶ್ನೆ ಬಂದಾಗ ಬದಲಾವಣೆಗಳನ್ನು ಅಪ್ಪಿಕೊಳ್ಳಬೇಕಾಗುತ್ತದೆ. ಭೂಸುಧಾರಣಾ ಕಾನೂನು ಒಕ್ಕಲುಗಳಿಗೆ ಧಣಿಯಿಂದ ಭೂಮಿ ಒದಗಿಸುವವರೆಗೆ ಸೀಮಿತವಾಗುವುದಿಲ್ಲ; ಅದರ ಪರಿಣಾಮಗಳನ್ನು ಧಣಿ ಹಾಗೂ ಒಕ್ಕಲು ಮಕ್ಕಳು ಇಬ್ಬರೂ ಅರಗಿಸಿಕೊಳ್ಳಬೇಕಾಗುತ್ತದೆ. ಅರಿತೋ ಅರಿಯದೆಯೋ ನಡೆಯುವ ಇಂತಹ ಬದಲಾವಣೆಗಳು ಒಂದು ಸಮುದಾಯದ ಜೀವನಕ್ರಮವನ್ನೇ ಬೆರಗುಗೊಳಿಸುವಷ್ಟರಮಟ್ಟಕ್ಕೆ ಪರಿವರ್ತಿಸಿ ಬಿಡುತ್ತದೆ.

ಆರ್ಥಿಕವಾಗಿ, ರಾಜಕೀಯವಾಗಿ ಪ್ರಾಬಲ್ಯ ಮೆರೆದ ಗುತ್ತು ಸ್ವಾತಂತ್ರ್ಯನಂತರ ದುರ್ಬಲಗೊಂಡವು. ಇಲ್ಲವೆ ಇತರೆ ಉದ್ಯಮಗಳಿಂದ ಶ್ರೀಮಂತಿಕೆ ಉಳಿಸಿಕೊಂಡವು. ಗುತ್ತಿನ ಗೇಣಿದಾರರು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು, ತಂತ್ರಗಳನ್ನು ಹೆಣೆಯುವುದು ಹೊಸ ಅಧಿಕಾರದ ಆರಂಭದ ಸಂಕೇತ. ಗೇಣಿದಾರರು ಚುನಾವಣೆಯಲ್ಲಿ ಗೆಲ್ಲುವುದು; ಅವರಿಗೆ ಲಭಿಸಿದ ಅಧಿಕಾರವನ್ನು ಬಳಸಿಕೊಳ್ಳಲು ಕಲಿಯುವುದು ಸಾಮಾಜಿಕ ಸ್ಥಿತ್ಯಂತರವನ್ನು ಉಂಟುಮಾಡುತ್ತದೆ.

ಭೂಮಸೂದೆಯಿಂದ ಆದ ಪ್ರಮುಖ ಬದಲಾವಣೆ ಎಂದರೆ ಧಣಿಯೂ ದುಡಿಯುವಂತಾದುದು. ದುಡಿದರೆ ಮಾತ್ರ ದಿನ ಕಳೆಯುವಂತಹ ಪರಿಸ್ಥಿತಿ ನಿರ್ಮಾಣವಾಯ್ತು.

೭.೩.೪. ಭೂಸುಧಾರಣೆ ಕಾನೂನು ಮತ್ತು ಹೋರಾಟ

ತೆಂಬರೆ ಪ್ರಧಾನವಾಗಿ ಭೂತಾರಾಧನೆಯ ಪ್ರಮುಖರಾದ ಪಂಬದರ ಜೀವನದ ನೋವು ನಲಿವುಗಳನ್ನು, ಸತ್ಯದ ಪರವಾಗಿ ಅವರ ನಿಷ್ಠೆಯನ್ನು ಕುರಿತು ದಾಖಲಿಸುತ್ತದೆ. ಪಿಜಿನ ಪಂಬದನ ಮಕ್ಕಳಾದ ಲಕನ, ಐತ, ತೋಮು ಇವರ ಸತ್ಯನಿಷ್ಠೆಯ ದಾರಿಯನ್ನು ಪ್ರತಿಪಾದಿಸುತ್ತದೆ. ಲಕನ ಆಧುನಿಕ ಶಿಕ್ಷಣ ಪಡೆದು ಆಧುನಿಕ ಜೀವನದ ಹೋರಾಟಕ್ಕೆ ಮುನ್ನುಡಿ ಬರೆದರೆ, ಐತ ಪರಂಪರೆಯನ್ನು ಅಪ್ಪಿಕೊಂಡು ಸತ್ಯದ ಮಾರ್ಗ ಹಿಡಿಯುತ್ತಾನೆ. ತೋಮು ವೈಚಾರಿಕ ಮಾರ್ಗವನ್ನು ಅಪ್ಪಿ ನ್ಯಾಯ ನೀಡಲು ಸಹಾಯಹಸ್ತ ಚಾಚುವ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾಳೆ.

ಭೂಮಸೂದೆಯ ಕಾನೂನು ಜಾರಿಯಿಂದಾಗಿ ಧನಿ-ಒಕ್ಕಲುಗಳ ಮಧ್ಯೆ ನಡೆದ ಸಂಘರ್ಷವನ್ನು ಭೂತಾರಾಧನೆಯ ಹಿನ್ನೆಲೆಯಲ್ಲಿ ಗಮನಿಸುವ ದಾರಿ ತೋರಿದ್ದಾರೆ. ತೋಮು ವಕೀಲಳಾಗಿ ಭೂಮಸೂದೆಯ ಹಲವು ಕೇಸುಗಳನ್ನು ಪಡೆದು ಬಡವರ ವಕೀಲಳಾಗಿ ಹೋರಾಡುತ್ತಾಳೆ. ಭೂತಾರಾಧನೆ ಸಂದರ್ಭದಲ್ಲಿ ಸತ್ಯ ನುಡಿಯುವುದು, ಮದಿಪು ನೀಡುವುದು ಪ್ರಮುಖ ಹಂತ. ಭೂತ ಕಟ್ಟುವವನು ಮನ ಬಂದಂತೆ ಸುಳ್ಳಾಡನು. ಆತ ವಿಚಾರಿಸಿ, ಪರಿಶೀಲಿಸಿ, ಮಂಥನ ಮಾಡಿ, ಸತ್ಯದ ನುಡಿ ಹೇಳುವವನು. ಐತ ಪರಂಪರೆಯಲ್ಲೇ ಇದ್ದು

ಇದನ್ನು ಮುಂದುವರಿಸಿದರೆ, ತೋಮು ಆಧುನಿಕ ಕಾಲದಲ್ಲಿ, ವಕೀಲ ವೃತ್ತಿ ಪಡೆದು ಅದೇ ಸತ್ಯದ ನುಡಿಗಾಗಿ ಹೋರಾಟ ಮಾಡುವುದನ್ನು ಗಮನಿಸಬಹುದು.

ಭೂತಗಳನ್ನು ಕೋಲ, ನೇಮಗಳನ್ನು ಗುತ್ತಿನವರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡ ಅನೇಕ ಘಟನೆಗಳನ್ನು ಐತ ಕಂಡವನು. ಆದರೆ ಆತನದ್ದು ಸತ್ಯದ ಹಾದಿ. ಇಂಥಹ ಐತನ ಬದುಕಿನಲ್ಲಿಯೂ ಸುಳ್ಳು ಹೇಳಬೇಕಾದ ಘಟನೆ ಸಂಭವಿಸುತ್ತದೆ. ಐತ ಸತ್ಯವೇ ನುಡಿಯುತ್ತಾನೆ. ಆದರೆ ಅದರ ಪರಿಣಾಮ ಮಾತ್ರ ಘನಘೋರ. ಗೇಣಿದಾರ ಬೂದಮೂಲ್ಯ ಮಾರಣಾಂತಿಕವಾಗಿ ಗಾಯಗೊಂಡರೆ, ಐತನ ತಾಯಿ ಜೀವಂತ ಸುಟ್ಟು ಕರಕಲಾಗುತ್ತಾಳೆ.

ಬೂದಮೂಲ್ಯನ ಧಣಿಗಳಿಂದ ಹಣಕ್ಕೆ ಚೆಲುವಯ್ಯ ಶೆಟ್ಟಿ ಆಸ್ತಿಯನ್ನು ತನ್ನದಾಗಿ ಮಾಡಿಕೊಂಡು ಬೂದನು ಗೇಣಿಗೆ ಪಡೆದ ಜಾಗವನ್ನು ಕಮ್ಮಿ ಬೆಲೆಗೆ ತನ್ನದನ್ನಾಗಿಸಲು ಪ್ರಯತ್ನಿಸುತ್ತಾನೆ. ಆದರೆ ಬೂದ ಟ್ರಿಬ್ಯೂನಲ್ ಮೊರೆ ಹೋಗಿದ್ದ. ಚೆಲುವಯ್ಯ ಶೆಟ್ಟಿ ತನ್ನ ದುಡ್ಡಿನ ಬಲ ಹಾಗೂ ಶಕ್ತಿಯಿಂದ ಬೆದರಿಸಿ ಕಾರ್ಯ ಸಾಧಿಸಲು ಪ್ರಯತ್ನಿಸುತ್ತಾನೆ. ಅಲ್ಲಿ ಸೋತಾಗ ಕೋಲದ ಮುಖಾಂತರ ಐತನಿಂದ ನುಡಿ ಹೇಳಿಸಿ ಭೂಮಿ ಪಡೆಯಲು ಯತ್ನಿಸುತ್ತಾನೆ. ಅಲ್ಲಿ ಸೋತಾಗ ತನ್ನ ಕ್ರೌರ್ಯದ ಮುಖಾಂತರ ಬೂದನ ಕುಟುಂಬಕ್ಕೆ ಅನ್ಯಾಯ ಮಾಡಿ, ಐತನ ಮನೆಗೆ ಬೆಂಕಿ ಹಾಕಿಸುತ್ತಾನೆ. ತೋಮು ವ್ಯವಸ್ಥೆಯ ವಿರುದ್ಧ ತಿರುಗಿ ನಿಂತು ಸಿಆರ್‌ಪಿಸಿ೨೦೦ ಪ್ರಕಾರ ಎರಡು ಕಂಪ್ಲೈಂಟ್ ಹಾಕಿದಳು. ಕಾನೂನಿನ ಸಮರದಲ್ಲಿ ತೋಮು ವಿಜಯ ಸಾಧಿಸುತ್ತಾಳೆ. ಆದರೆ ಅದರ ನಡುವೆ ನಡೆದ ಹಲವು ಘಟನೆಗಳು ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಲು ಸಹಾಯ ಮಾಡುತ್ತವೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸತ್ಯ, ಪ್ರಾಮಾಣಿಕತೆಗೆ ಬೆಲೆ ಇರದೆ ಸುಳ್ಳು, ಪ್ರತಿಷ್ಠೆಗಳೇ ರಾರಾಜಿಸುತ್ತಿರುವುದು. ಬಡವರಿಗೆ ನ್ಯಾಯ ಮರೀಚಿಕೆಯಾಗುತ್ತಿರುವುದು, ಕಾನೂನು ಪಾಲಕರು, ಮಾಧ್ಯಮಗಳು, ವಕೀಲರು ಕೂಡ ಅನ್ಯಾಯ, ದಬ್ಬಾಳಿಕೆಗೆ ಪ್ರೋತ್ಸಾಹ ಕೊಡುವುದು, ರಾಚುವಂತೆ ಕಣ್ಣಿಗೆ ಬೀಳುತ್ತದೆ.

ಭೂಮಸೂದೆಯಿಂದ ಇಲ್ಲದವನಿಗೆ ಭೂಮಿ ಸಿಗುವ ಬದಲು ಉಳ್ಳವನಿಗೇ ದೊರೆಯಲು ಸಹಕರಿಸುವ ಕಾನೂನು ರಕ್ಷಕರು, ಭೂಮಸೂದೆಯ ಮೂಲ ಆಶಯಕ್ಕೇ ಕೊಳ್ಳಿ ಇಟ್ಟಂತಹ ಚಿತ್ರಣ ದೊರೆಯುತ್ತದೆ. ಸತ್ಯದ, ಪ್ರಾಮಾಣಿಕ ಹಾದಿಯಲ್ಲಿರುವವರು ಅಸ್ಪೃಶ್ಯರಾಗಿ ಬಿಡುವ ಹೊಸ ವಿದ್ಯಮಾನವೊಂದು ಗೋಚರಿಸುತ್ತದೆ. ಬಡವರು ತಮ್ಮ ಹಕ್ಕನ್ನು ಪಡೆಯಲು, ತಮ್ಮ ನಡುವಿನವನನ್ನು ಉನ್ನತಿಗೆ ಏರಿಸಬೇಕಾಗುತ್ತದೆ. ಬಡವ-ಬಡವನನ್ನು ಅರ್ಥಮಾಡಿಕೊಳ್ಳಬಲ್ಲ ಎಂಬ ಅರ್ಥಗಳನ್ನು ಧ್ವನಿಸಿಬಿಡುತ್ತದೆ. ದುರ್ಬಲರು ಜಯಶಾಲಿಗಳಾಗಲು ಬಡವನನ್ನೇ ಬಲಶಾಲಿಯಾಗಿಸಬೇಕಾದ ಅನಿವಾರ್ಯತೆ. ಆಧುನಿಕ ಶಿಕ್ಷಣ, ಮೌಲ್ಯಗಳು ಒಂದು ಮಟ್ಟಿಗೆ ಇದಕ್ಕೆ ಪೂರಕವಾಗಬಲ್ಲವು. ಭೂಮಸೂದೆಯ ಪ್ರಭಾವವನ್ನು ಹೋರಾಟ, ಪ್ರಾಣಹತ್ಯೆ, ತನ್ನ ಒಳಿತಿಗಾಗಿ ತನಗೆ ಎದುರಾದ ಸರ್ವರನ್ನೂ ಸದೆಬಡಿಯುವ, ತನ್ನ ದಾರಿಯ ಮುಳ್ಳನ್ನು ಬದಿಗೆ ಸರಿಸುವ ಜಾಣ್ಮೆ, ಕುತಂತ್ರ ದಾಖಲಿಸುತ್ತದೆ. ಮನುಷ್ಯ ಮನುಷ್ಯನ ರಕ್ತ ಹೀರಬಲ್ಲ ಕ್ರೌರ್ಯ ಇಲ್ಲಿ ದಾಖಲಾಗಿದೆ. ಸತ್ಯ ಪರವಾದ ಹೋರಾಟ ಏಕಾಂಗಿಯಾದ ಹೋರಾಟ. ಎಲ್ಲರೂ ಕೈಬಿಟ್ಟಾಗಲೂ

ಧೃತಿಗೆಡದೆ ಹೋರಾಡುವ ಛಾತಿ ಬೆಳೆಸಿಕೊಳ್ಳುವ ಮಾರ್ಗವನ್ನು ಗುರುತಿಸಬಹುದು. ನ್ಯಾಯ ತೀರ್ಮಾನ ನೀಡುವವರು ಆಮಿಷಗಳಿಗೆ ಬಲಿಯಾಗಬಾರದೆನ್ನುವ ಕಾಳಜಿ ಕಾದಂಬರಿ ತೋರಿದೆ. ಪರಂಪರೆಯ ನ್ಯಾಯವ್ಯವಸ್ಥೆಯಲ್ಲಿ ಐತ ಎಲ್ಲ ಆಮಿಷಗಳಿಗೂ, ಬೆದರಿಕೆಗೂ ಕುಗ್ಗದೆ ಸತ್ಯದ ಮದಿಪು ನೀಡುತ್ತಾನೆ. ಆಧುನಿಕ ನ್ಯಾಯವ್ಯವಸ್ಥೆಯಾದ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟ್ ಆಮಿಷಕ್ಕೆ, ಬೆದರಿಕೆಗೆ ಜಗ್ಗದೆ, ಪ್ರಾಣಭಯವನ್ನು ಲೆಕ್ಕಿಸದೆ ಸತ್ಯದ ಅಭಯ ನೀಡುತ್ತಾನೆ. ಇಂಥಹ ವ್ಯಕಿಗಳು ಮಾತ್ರ ಸಮಾಜದ ಹಿತರಕ್ಷಣೆಗೆ ಸೂಕ್ತರು ಎಂಬ ಸತ್ಯ ಕಾದಂಬರಿಯದು.

ಭೂತಾರಾಧನೆಯಲ್ಲಿ ಭೂತ ಕಟ್ಟುವವರು ಸತ್ಯದ ನುಡಿ ನೀಡುವ ಮಹತ್ವದ ಸಂಗತಿಯಿದೆ. ಈ ನುಡಿಯನ್ನು ಸಮಸ್ತ ಜನತೆ ಭಕ್ತಿ ಗೌರವಾದರಗಳಿಂದ ಸ್ವೀಕರಿಸುತ್ತಿದ್ದರು. ಧಣಿಗಳು ಈ ಮಹತ್ವಪೂರ್ಣ ಅಂಶವನ್ನೇ ಬಳಸಿಕೊಂಡು ತಮ್ಮ ಬೇಳೆ ಬೇಯಿಸುತ್ತಿದ್ದರು. ಭೂಮಸೂದೆ ಜ್ಯಾರಿಯಾದ ನಂತರ ಭೂಮಿಯನ್ನು ಕಿತ್ತುಕೊಳ್ಳಲು ಭೂತಕೋಲ ಏರ್ಪಡಿಸಿ ಭೂತಕಟ್ಟುವವನನ್ನು ಮುಂಚಿತವಾಗಿ ತನ್ನ ವಶಕ್ಕೆ ತಗೊಂಡು ಮೋಸ ಮಾಡುತ್ತಿದ್ದರು. ಐತ ಭೂಒಡೆಯರ ಕೈಗೆ ಸಿಗಲಾರೆ ಎಂಬಂತೆ ಇದ್ದಾಗಲೂ ಆತನ ಪಾಲಿಗೆ ಮಹತ್ವದ ನಿರ್ಣಯ ನೀಡುವಂತಹ ಗಳಿಗೆ ಎದುರಾಗುತ್ತದೆ.

ಬೂದಮೂಲ್ಯ ಹಾಗೂ ಆತನ ಕುಟುಂಬ ಆತನ ಅಜ್ಜನ ಕಾಲದಿಂದಲೂ ಹತ್ತು ಮುಡಿ ಗೇಣಿ ಸ್ಥಳದಲ್ಲಿ ಕೃಷಿ ಮಾಡುತ್ತಿದ್ದರು. ಭೂಮಸೂದೆ ಜ್ಯಾರಿಯಾದಾಗ ಡಿಕ್ಲರೇಶನ್ ಗಾಗಿ ಅರ್ಜಿಯೂ ಸಲ್ಲಿಸಿದ. ಚೆಲುವಯ್ಯ ಶೆಟ್ಟಿಗೆ ಬೂದನ ಭೂಮಿಯ ಮೇಲೆ ಕಣ್ಣುಬಿದ್ದು, ಆ ಭೂಮಿಯನ್ನು ೫ ಲಕ್ಷಕ್ಕೆ ಧನಿ ವೆಂಕಪ್ಪ ಶೆಟ್ಟಿಯಿಂದ ತಗೆದುಕೊಳ್ಳುತ್ತಾನೆ. ಬೂದ ಮೂಲ್ಯನಲ್ಲಿ ಜಮೀನು ಬಿಟ್ಟು ಹೋಗಲು ಆಜ್ಞಾಪಿಸುತ್ತಾನೆ. ಬೂದ ಮೂಲ್ಯನನ್ನು ಬಂಧಿಸಲಾಗುತ್ತದೆ. ಐತನ ತಂಗಿ ತೋಮು ಬೂದನನ್ನು ಬಿಡುಗಡೆಗೊಳಿಸುತ್ತಾಳೆ. ಚೆಲುವಯ್ಯ ಶೆಟ್ಟಿ ಐತನಿಂದ ಭೂತ ಕೋಲ ಏರ್ಪಡಿಸುತ್ತಾನೆ. ಭೂತ ಬೂದನಿಗೆ ಅಭಯ ನೀಡುತ್ತದೆ. ಸಿಟ್ಟಿಗೆದ್ದ ಚೆಲುವಯ್ಯ ಶೆಟ್ಟಿಯ ಚೇಲಾಗಳು ಬೂದ ಮೂಲ್ಯನ ಮೇಲೆ ಪ್ರಹಾರ ಮಾಡಿ, ಹೆಂಡತಿಯ ಕೈ ತಟ್ಟನ್ನೇ ತುಂಡರಿಸಿ ಮಾರಣಾಂತಿಕ ಹಲ್ಲೆ ನಡೆಸುತ್ತಾರೆ. ಅದೇ ಸಂಜೆ ಭೂತ ಕಟ್ಟಿದ ಐತನ ಮನೆಗೂ ತೆರಳಿ ಹೊರಗಿನಿಂದ ಚಿಲಕ ಹಾಕಿ ಬೆಂಕಿ ಹಾಕುತ್ತಾರೆ. ತೋಮು ಏಕಾಂಗಿಯಾಗಿ ಹೋರಾಡಿ ಚೆಲುವಯ್ಯ ಶೆಟ್ಟಿಯನ್ನು ವಾರಂಟ್ ರಹಿತವಾಗಿ ಬಂಧಿಸುವಲ್ಲಿ ಯಶಸ್ವಿಯಾಗುತ್ತಾಳೆ. ಭೂಮಸೂದೆ ಕಾನೂನಿನ ಪ್ರಕಾರ ಭೂಮಿ ಪಡೆಯಲು ಬಡವರು ಕಷ್ಟಪಡುತ್ತಿದ್ದ ರೀತಿ, ಜೀವನ್ಮರಣ ಹೋರಾಟ, ಭೂಮಾಲೀಕರ ಭಯದಿಂದಲೇ ಭೂಮಿಯ ಹಕ್ಕನ್ನು ಕಳೆದುಕೊಳ್ಳುವುದನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ. ಎಂಥ ಸಮಾಜದಲ್ಲೂ ಬಲಾಢ್ಯರು ಮಾತ್ರ ಬದುಕಬಲ್ಲರು ಎಂಬ ಚಿರಸತ್ಯವನ್ನು ಸ್ಪಷ್ಟಪಡಿಸುತ್ತಾರೆ.

೭.೩.೫. ಭೂಸುಧಾರಣೆ ಕಾನೂನು ಪಡೆದ ಧಾರ್ಮಿಕ ಆಯಾಮ

ಗುತ್ತು ಮನೆ ತನ್ನ ಯಜಮಾನಿಕೆಯಲ್ಲಿ ಭೂತದ ಭಂಡಾರವನ್ನು ಇಟ್ಟು ವರ್ಷಂಪ್ರತಿ ಕೋಲ ನೀಡುವ ಸಂಪ್ರದಾಯ ಇತ್ತಲ್ಲದೆ, ದಿನವೂ ಹೂ ನೀರು ಇಡುವ ಆಚರಣೆಯನ್ನು ಆಚರಿಸಿಕೊಂಡು ಬಂದಿತ್ತು. 'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನಾರ್ ಸಂಕಪ್ಪಣ್ಣ ಈ

ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೆ ಭೂಸುಧಾರಣೆ ಜಾರಿಯಾದ ನಂತರ ಭೂಮಿ ಹರಿದುಹಂಚಿ ಹೋಗಿ ಗುತ್ತಿನ ಆಸ್ತಿ ಕಿರಿದಾಯಿತು. ಆಧುನಿಕ ಶಿಕ್ಷಣದಿಂದ ಹೊಸ ತಲೆಮಾರು ಗುತ್ತಿನಿಂದ ಉದ್ಯೋಗಕ್ಕಾಗಿ ದೂರ ಸಾಗಿತ್ತು. ಭೂತಕ್ಕೆ ಹೂ ನೀರು ಇಡಲು ಅಂಬಕ್ಕೆ ಗುತ್ತಿನ ದೂರದ ಸಂಬಂಧಿಯಲ್ಲಿ ವಿಚಾರಿಸುತ್ತಾರೆ. ಆತ ಪ್ರತಿ ಸಂಕ್ರಾಂತಿಗೆ ಬಂದು ಹೂ ನೀರು ಇಡುತ್ತಾರೆ. ಈ ರೀತಿ ಧಾರ್ಮಿಕ ಪದ್ಧತಿಯನ್ನು ಮಾರ್ಪಡಿಬೇಕಾದ ಅನಿವಾರ್ಯತೆ ಬದಲಾದ ವ್ಯವಸ್ಥೆ ಸೃಷ್ಟಿಸುತ್ತದೆ.

೭.೩.೬. ಭೂಸುಧಾರಣೆ ಕಾನೂನು ಮತ್ತು ಪಟ್ಟಭದ್ರರ ಕ್ರೌರ್ಯ

'ಸುಳಿಗಾಳಿ' ಕಾದಂಬರಿಯ ಧರ್ಮಪಾಲರ ಮಗ ನಾಭಿರಾಜಯ್ಯ ಸ್ತ್ರೀಮೋಹಿ; ತಂದೆಯಷ್ಟು ಸಂಭಾವಿತನಲ್ಲ. ರಾಮಪ್ಪ ಕಷ್ಟದಿಂದ ದುಡಿದ ಜಮೀನಿನ ಬೆಳೆ ಕೆಲಸಗಾರರಿಂದ ಧಣಿಗೇ ಹೋಗುತ್ತಿತ್ತು. ಸ್ವಾತಂತ್ರ್ಯಾನಂತರದ ಭೂಸುಧಾರಣಾ ಕಾನೂನು ಜಾರಿಯಾದ ಮೇಲೂ ಜೀತದಿಂದ ರಾಮಪ್ಪ ಮುಕ್ತನಾಗುವುದಿಲ್ಲ.

ಹಿಂದಿನ ಕಾಲದಲ್ಲಿ ಮಾತು ಕೊಟ್ಟರೆ ಮುಗಿಯಿತು. ಮಾತಿಗೆ ಗೌರವವಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಜಾರಿಯಾದ ಮೇಲೆ ಬರಹಕ್ಕೆ ಪ್ರಾಧಾನ್ಯತೆ ಬಂತು. ವಸಾಹತುಶಾಹಿ ವ್ಯವಸ್ಥೆಯ ಫಲ ಇದು. ಪ್ರತಿಯೊಂದಕ್ಕೂ ದಾಖಲೆ ಅನಿವಾರ್ಯ. ದಾಖಲೆ ಇಲ್ಲದಾಗ ಗೇಣಿದಾರ ಸೋತುಬಿಡುತ್ತಾನೆ. ಧರ್ಮಪಾಲ ಚಾಲಗೇಣಿ ಚೀಟಿ ಅಥವಾ ಇತರ ದಾಖಲೆಗಳನ್ನು ರಾಮಪ್ಪನ ತಂದೆಗೆ ನೀಡಿರಲಿಲ್ಲ. ಧಣಿಗಳ ಮಾತಿನ ಮೇಲೆ ವಿಶ್ವಾಸವಿಡಬೇಕಾಗಿತ್ತು. ಒಕ್ಕಲು ಮಾತನಾಡುವ, ಪ್ರಶ್ನಿಸುವ ಸಾಮರ್ಥ್ಯ ಕಳೆದುಕೊಂಡಿದ್ದ. ಭೂಸುಧಾರಣಾ ಕಾನೂನು ಜಾರಿಯಾದ ಮೇಲೂ ರಾಮಪ್ಪ ಆಸ್ತಿಯಿಂದ, ಅಧಿಕಾರದಿಂದ ವಂಚಿತನಾದ. ಕಾನೂನು ಹಾಗೂ ವಾಸ್ತವ ವಿರುದ್ಧ ದಿಕ್ಕಿನಲ್ಲಿ ಚಲಿಸುವುದನ್ನು ಗಮನಿಸಬಹುದು. ಕಾನೂನು ದಾಖಲೆಯನ್ನು ಮಾತ್ರ ನಂಬುತ್ತದೆ; ವಿಶ್ವಾಸವನ್ನಲ್ಲ. ವಾಸ್ತವವು ಕಾನೂನಿನ ನೀತಿನಿಯಮಾವಳಿಗಿಂತ ಭಿನ್ನವಾಗಿರುತ್ತದೆ. ಅಸಹಾಯಕತೆ, ಅಭದ್ರತೆ, ಎಲ್ಲವನ್ನೂ ಕಳಕೊಳ್ಳುವ ಭೀತಿ ಇದ್ದ ಸ್ಥಿತಿಯನ್ನೇ ಇನ್ನೂ ಗಟ್ಟಿಯಾಗಿ ಅಪ್ಪಿಕೊಳ್ಳಲು ಪ್ರೇರೇಪಿಸುತ್ತದೆ.

ಧಣಿ–ಒಕ್ಕಲು ಸಂಬಂಧ, ವ್ಯಕ್ತಿಗಳು ಬದಲಾದ ಹಾಗೆ ಬದಲಾಗುವುದನ್ನು ಗಮನಿಸಬಹುದು. ವ್ಯಕ್ತಿಯ ಸ್ವಭಾವ ಗುಣಗಳಿಗೆ ಅನುಗುಣವಾಗಿ ಪರಿಸ್ಥಿತಿ ಬದಲಾಗುತ್ತದೆ. ಬದಲಾದ ಪರಿಸ್ಥಿತಿ ಭಿನ್ನವಾದ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ. ಕಾನೂನು ನ್ಯಾಯ ಒದಗಿಸುವುದರಲ್ಲಿ ವಿಫಲವಾದ ಬಗೆಯನ್ನು ದಾಖಲಿಸಲಾಗಿದೆ. ಸದಾಶಯ ಹೊಂದಿದ ಕಾನೂನು ಕೂಡ ವ್ಯವಸ್ಥೆಯ ಲೋಪದಿಂದ ಅಧರ್ಮಿಗಳ ಎದುರು ತಲೆಬಾಗುತ್ತದೆ. ಕಾನೂನುಪಾಲಕರಾದ ಪೋಲಿಸರು ಅಧರ್ಮಿಗಳ ಜೊತೆ ಬೆರೆಯುವುದು ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಂತಿದೆ.

ಬಡವನ ಪ್ರತಿಭಟನೆ ಆತನನ್ನೇ ಕಷ್ಟಗಳಿಗೆ ಗುರಿಯಾಗಿಸುತ್ತದೆ. ರಾಮಪ್ಪ ಧಣಿಯ ಮನೆಯ ಚಾಕರಿಯನ್ನು ಗತ್ಯಂತರವಿಲ್ಲದೆ ಮಾಡುತ್ತಿದ್ದ. ಪ್ರಜಾಪ್ರಭುತ್ವ ಲೋಕದಲ್ಲಿ ರಾಮಪ್ಪನ

ಸ್ಥಿತಿ ಬದಲಾಗಲಿಲ್ಲ. ಜೀತದಾಳಿನ ಹಾಗೇ ಕೆಲಸ ಮಾಡುತ್ತಿದ್ದ ಧನಿಯ ಮನೆಯ ಬೋದಿಗೆ ಕಂಬಕ್ಕಾನಿಸಿ ನಿದ್ದೆಹೋದ. ನಾಭಿರಾಜಯ್ಯ ವಯಸ್ಸಾದವನನ್ನೂ ಲೆಕ್ಕಿಸದೆ ಒದೆಯುವುದು; ಅದಕ್ಕೆ ಪ್ರತಿಯಾಗಿ ರಾಮಪ್ಪ ನಾಭಿರಾಜಯ್ಯನ ಕೆನ್ನೆಗೆ ಫಟೀರೆಂದು ಬಿಗಿಯುವುದು ಅಸಹಾಯಕರ ರೋಷವನ್ನು ಪ್ರಕಟಿಸುತ್ತದೆ. ಆದರೆ ಆ ರೋಷ ಆತನನ್ನೇ ಸುಡುವಂತೆ ಧಣಿ ಜಪ್ತಿ ಮಾಡಿಸಿಯೇ ಬಿಡುತ್ತಾನೆ. ದಯಾದಾಕ್ಷಿಣ್ಯವಿಲ್ಲದೆ ಬಡವನನ್ನು ಹೊರಹಾಕಲಾಗುತ್ತದೆ.

ದಬ್ಬಾಳಿಕೆಯ ತೀವ್ರತೆಯನ್ನು ಅಸಹಾಯಕನೂ ಸಹಿಸಲಾರ. ನಾಭಿರಾಜಯ್ಯನ ಕಾಲದಲ್ಲಿ ರಾಮಪ್ಪ ಹಾಗೂ ಆತನ ಪತ್ನಿ ಇಬ್ಬರೂ ಪ್ರತಿಭಟಿಸುವುದನ್ನು ಗಮನಿಸಬಹುದು. ಕೆಂಚಮ್ಮ ತನ್ನ ಮಾನ ಕಾಪಾಡಲು ಧಣಿಯ ವಿರುದ್ಧ ತಿರುಗಿಬಿದ್ದು, ಕುಡುಗೋಲು ಕೈಯಲ್ಲಿ ಹಿಡಿದು ಹೋರಾಡಿದರೆ, ವೃದ್ಧ ರಾಮಪ್ಪ ಕೆಲಸ ಮಾಡಿ ಸುಸ್ತಾಗಿ ನಿತ್ರಾಣದಿಂದ ನಿದ್ದೆಗೆ ಜಾರಿದಾಗ ಧಣಿಗಳ ತುಳಿತಕ್ಕೊಳಗಾಗಿ ಪ್ರತಿಭಟಿಸುತ್ತಾನೆ. ಪರಿಣಾಮ ಮಾತ್ರ ಘೋರ. ಮನೆಯಲ್ಲಿದ್ದ ಅಲ್ಪಸ್ವಲ್ಪ ಒಳ್ಳೆಯ ಪಾತ್ರೆಗಳನ್ನು ಪೋಲಿಸರ ಸುರಕ್ಷತೆಯಲ್ಲಿ ಲಪಟಾಯಿಸಿ ಹರಕುಮುರುಕು ಪಾತ್ರೆಗಳ ಜೊತೆ ರಾಮಪ್ಪನ ಕುಟುಂಬವನ್ನು ಹೊರಹಾಕಲಾಗುತ್ತದೆ. ಕ್ಷಣ ಮಾತ್ರದಲ್ಲಿ ಕುಟುಂಬವೇ ನಿರ್ಗತಿಕವಾಗುತ್ತದೆ.

ಪೊಲೀಸರೂ ಕೂಡ ಬಡ ರಾಮಪ್ಪನನ್ನು ರಕ್ಷಿಸದೆ ಧಣಿ ನಾಭಿರಾಜಯ್ಯನ ನಿರೀಕ್ಷೆಗೆ ತಕ್ಕಂತೆ ವರ್ತಿಸುವುದು ವಿಪರ್ಯಾಸ. ಸ್ವಾತಂತ್ರ್ಯ, ಸುಧಾರಣೆ ಕಾನೂನಿನಿಂದ ಮಾತ್ರ ಸಾಧ್ಯವಿಲ್ಲ ಎಂಬ ಕಟುಸತ್ಯ ತಿಳಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯೂ ಕೂಡ ಬಡವರನ್ನು ದೂರತಳ್ಳುತ್ತದೆ. ಉಳ್ಳವರ ಜೊತೆಗೂಡಿ ಕಾನೂನಿನ ರಕ್ಷೆಯನ್ನು ಉಳ್ಳವರಿಗೆ ನೀಡುವುದು ವ್ಯವಸ್ಥೆಯ ಘೋರಚಿತ್ರಣವಾಗಿದೆ.

ಪ್ರಜಾಪ್ರಭುತ್ವ ಜಾರಿಗೆ ಬಂದ ಮೇಲೂ, ಸ್ವತಂತ್ರ ಭಾರತದ ಪ್ರಜೆಗಳಾದ ಮೇಲೂ ಬಡವನಿಗೆ ಲಭಿಸದ ಸ್ವಾತಂತ್ರ್ಯದ ಕುರಿತು ಕಾದಂಬರಿಕಾರರು ದಾಖಲಿಸಿದ್ದಾರೆ. ಅಸತ್ಯದ, ದಬ್ಬಾಳಿಕೆಯ ದೌರ್ಜನ್ಯದ ಲೋಕವನ್ನು ಚಿತ್ರಿಸಿದ್ದಾರೆ.

ಗೇಣಿದಾರರು ಅನುಭವಿಸುವ ನೈಜ ಚಿತ್ರಣ ಕಾದಂಬರಿ ದಾಖಲಿಸುತ್ತದೆ. ಧಣಿ ನಿರಂಕುಶನಾದಾಗ ಶೋಷಣೆಯು ಬಡವನನ್ನು, ಗೇಣಿದಾರರನ್ನು ನಿಯಂತ್ರಿಸುವ ಅಂಕುಶವಾಗಿ ಬಿಡುತ್ತದೆ. ಸ್ವಾತಂತ್ರ್ಯ ಲಭಿಸಿದ ನಂತರವೂ ಗೇಣಿದಾರ ಜೀತ ಮಾಡಬೇಕಾಗುತ್ತದೆ. ತನ್ನ ಮನೆಯಲ್ಲಿ ಮಾತ್ರವಲ್ಲ ಧಣಿಯ ಸಾಗುವಳಿಯನ್ನು ಮಾಡುವ ಅನಿವಾರ್ಯತೆ ಧಣಿಯಾದವನ ಅಭಿಪ್ರಾಯಕ್ಕೆ ಎದುರು ನಿಂತವನಿಗೆ ಛಡಿ ಏಟು ಅನಿವಾರ್ಯವಾಗಿತ್ತು. ಬೆನ್ನ ಮೇಲೆ ಕಲ್ಲು ಹೊರಿಸಿ ಶಿಕ್ಷೆ ನೀಡಲಾಗುತ್ತಿತ್ತು.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಪೋಲಿಸರ ಲಂಚಗುಳಿತನ ಹಾಗೂ ಶ್ರೀಮಂತ ಜಮೀನ್ದಾರರ ವಿರುದ್ಧ ನಿಲ್ಲಲು ಅಂಜುವ ಪ್ರವೃತ್ತಿಯನ್ನು ಕಾಣಬಹುದು. ಚೀಂಕ್ರನ ಮೇಲೆ ಆದ ದಬ್ಬಾಳಿಕೆ, ತುಳಿತ, ಮಾಧವನ ಚಾಟಿಯೇಟಿನಿಂದ ಬಿದ್ದ ಪೆಟ್ಟುಗಳ ಸುಳಿವು ಪೋಲಿಸರಿಗೂ ಸಿಕ್ಕಿ ಮಾಧವನನ್ನು ವಿಚಾರಿಸಲು ಕೆಮ್ಮಾಡಿ ಮನೆಗೆ ಬಂದಿರುತ್ತಾರೆ. ಮಾಧವನ

ದರ್ಪ, ಗಾಂಭೀರ್ಯ, ನಿರಾಳವಾದ ಮುಖಭಾವ, ಮನೆಯಲ್ಲಿ ಎದ್ದು ಕಾಣುವ ವೈಭವ ಗಮನಿಸುತ್ತಿದ್ದಂತೆ ಪೋಲಿಸ್ ಇನ್ಸ್‌ಪೆಕ್ಟರ್‌ನ ಬಾಯಿಯಿಂದ ಸರಿಯಾಗಿ ಮಾತುಗಳೇ ಹೊರಡುವುದಿಲ್ಲ. ಆದರೂ ಜಾಗ್ರತೆಯಿಂದ ಮಾತುಗಳನ್ನು ಹೆಕ್ಕುತ್ತಾ ದೂರು ಬಂದಿರುವ ಕುರಿತು ವಿಚಾರಿಸಿದಾಗ ಮಾಧವ, ಚೇಂಕ್ರ ಅಮಟೆ ಮರದಿಂದ ಬಿದ್ದಿರುವುದಾಗಿಯೂ, ಆಸ್ಪತ್ರೆಗೆ ಸೇರಿಸಿದ್ದಾಗಿಯೂ ಉತ್ತರಿಸುತ್ತಾನೆ. ಮಾತುಕತೆ ಮುಂದುವರಿಯುತ್ತಿರುವಾಗ ಮಾಧವನ ಕೈಯಿಂದ ದಪ್ಪ ಕವರನ್ನು ಪಡೆದ ಇನ್ಸ್‌ಪೆಕ್ಟರ್ ಮರುಮಾತಾಡದೆ ಜಾಗ ಖಾಲಿಮಾಡುತ್ತಾರೆ. ಅನ್ಯಾಯವನ್ನು ಪರಿಶೀಲಿಸಿ ವಿಚಾರಣೆಗೂ ಮುಂದಾಗದೆ ಹೋಗುವುದು ಪ್ರಜಾಪ್ರಭುತ್ವದ ಹುಳುಕುಗಳನ್ನು ಎತ್ತಿತೋರಿಸುತ್ತದೆ.

ಸೋಮ ಹಾಗೂ ಆತನ ಸೋದರರ ಗುಡಿಸಲುಗಳು ಬೆಂಕಿಗೆ ಆಹುತಿ ಆದ ಪ್ರಕರಣದಲ್ಲಿ ಪೋಲಿಸರು ಮಾಧವನ ಬಳಿ ಬಂದರೂ ಆತನ ಗಂಭೀರ ವರ್ತನೆ ಹಾಗೂ ಸೋಮನ ಮಗ ಕುಪ್ಪನನ್ನು ಪೋಷಿಸುವ ಜವಾಬ್ದಾರಿ ವಹಿಸಿರುವುದನ್ನು ನೋಡಿ ಮೌನವಾಗುತ್ತಾರೆ.

ಪೋಲಿಸರು ಉಳ್ಳವರ ವಿರುದ್ಧ ಚಕಾರ ಎತ್ತದೆ ಅನ್ಯಾಯಗಳು ನಡೆಯಲು ಅವಕಾಶಗಳನ್ನು ನೀಡುವಂತಹ ಸಂದರ್ಭಗಳು ಸೃಷ್ಟಿಯಾಗುತ್ತವೆ.

೭.೪. ಕೃಷಿ ಸಂಸ್ಕೃತಿ ಮತ್ತು ಆಧುನಿಕತೆಯ ತಲ್ಲಣಗಳು

ತುಳುನಾಡಿನ ಕೃಷಿ ಸಂಸ್ಕೃತಿಯು ಊಳಿಗಮಾನ್ಯ ವ್ಯವಸ್ಥೆಯಡಿ ನಲುಗಿತ್ತು. ಜಮೀನ್ದಾರಿ ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಬಂಟರ ಇಲ್ಲವೆ ಬಲಿಷ್ಠ ಜಮೀನ್ದಾರರ ಹಿಡಿತದಲ್ಲಿ ಅವರ ಆಚರಣೆಗಳು ಸಾಗುತ್ತಿದ್ದವು. ತಳಸಮುದಾಯದವರು ಭೂಮಿಯ ಹಕ್ಕು ಪಡೆದಿರಲಿಲ್ಲ. ಅವರು ಮೂಲದಾಳುಗಳಾಗಿ ಗುಲಾಮರಂತೆ ದುಡಿಯುತ್ತಿದ್ದರು. ಅವರ ಆಚರಣೆಗಳು ಕೂಡ ಜಮೀನ್ದಾರಿ ವ್ಯವಸ್ಥೆಯಿಂದ ನಿಯಂತ್ರಣಕ್ಕೆ ಒಳಪಟ್ಟಿತು. ಜಮೀನ್ದಾರರು ಆಚರಿಸುವ ಆಚರಣೆಗಳಿಗೆ ಸಹಕಾರ ನೀಡುವುದು, ಅದನ್ನು ನೆನಪಿಟ್ಟುಕೊಂಡು ಚ್ಯುತಿ ಬಾರದಂತೆ ನಿರ್ವಹಿಸುವುದು ಮಾತ್ರ ತಳಸಮುದಾಯದವರ ಕೆಲಸವಾಗಿತ್ತು. ಭಕ್ತಿಯ ನೆಲೆಯಲ್ಲಿ ತಳಸಮುದಾಯದವರ ಆಚರಣೆಗಳಿಗೆ ಮನ್ನಣೆ ಇತ್ತು. ವರ್ಷಕ್ಕೆ ಒಂದಾವರ್ತಿ ನಡೆಯುವ ಮಾಯಿದೆ ಪುರುಷೆ ಕುಣಿತ, ಕಂಗೀಲು ಕುಣಿತ, ಮಾದಿರ ಕುಣಿತ ಇವುಗಳಿಗೆ ಸ್ವಾಗತವಿತ್ತು. ೧೯೭೪ರಲ್ಲಿ ಜಾರಿಗೆ ಬಂದ ಭೂಮಸೂದೆ ಕಾನೂನು ತುಳುನಾಡಿನ ಊಳಿಗಮಾನ್ಯ ಕೃಷಿ ವ್ಯವಸ್ಥೆಯನ್ನು ತೀವ್ರವಾಗಿ ಬದಲಾಯಿಸಿತು. ಭೂಮಸೂದೆಯ ಜಾರಿಯಿಂದ ಕೃಷಿ ಕಾರ್ಮಿಕರ ಕೊರತೆಯಿಂದಾಗಿ ವಾಣಿಜ್ಯ ಬೆಳೆಗಳು ಬೆಳೆಯಲ್ಪಟ್ಟವು. ಆಹಾರಕ್ಕಿಂತ ಆದಾಯ ಮುಖ್ಯವೆನಿಸಿತು. ಇದು ಜಮೀನ್ದಾರಿ ಪದ್ಧತಿಯ ಕಾಲದಲ್ಲಿ ಕೆಳಗಿದ್ದ ಗೇಣಿದಾರರನ್ನು ಹಾಗೂ ಪ್ರಭಾವಶಾಲಿಯಾಗಿದ್ದವರನ್ನು ಸಮಾನ ದರ್ಜೆಗೆ ಏರಿಸಿತು. ಕೆಲವು ಹಂತಗಳಲ್ಲಿ ಗೇಣಿದಾರನೇ ಪ್ರಭಾವಶಾಲಿಯಾದ ಉದಾಹರಣೆಗಳು ಲಭ್ಯವಾದವು.

ಆ. ವಸಾಹತುಶಾಹಿ ಪಲ್ಲಟಗಳು

ಬ್ರಿಟಿಷರ ಆಗಮನದೊಂದಿಗೆ ತುಳು ಸಂಸ್ಕೃತಿಯಲ್ಲಿ ಕೆಲವು ಬದಲಾವಣೆಗಳು ಉಂಟಾದವು. ಅದುವರೆಗೆ ಕಾಡು ನಮ್ಮದೆಂದು ಭಾವನಾತ್ಮಕವಾಗಿ ಪ್ರೀತಿಸಿದ ಜನರ ಬದುಕಿನಲ್ಲಿ ಬ್ರಿಟಿಷರ ಇಲ್ಲವೆ ಜಮೀನ್ದಾರರ ಪ್ರವೇಶವಾಯಿತು. ಕಾಡಿನ ಲಾಭದಾಯಕ ಉತ್ಪನ್ನಗಳಿಗಾಗಿ ಬಂದವರು ಬುಡಕಟ್ಟು ಜನಾಂಗದ ಬದುಕಿನ ಮೇಲೂ ಪ್ರಭಾವ ಬೀರಿದರು. ನಾಗರಿಕ ಸಂಸ್ಕೃತಿಯ ಮುಖಾಮುಖಿಯಾದಾಗ ಬುಡಕಟ್ಟು ಜನಾಂಗದ ಬದುಕಿನಲ್ಲಿ ನಿಧಾನವಾಗಿ ಬದಲಾವಣೆಗಳು ತೋರಿದವು. ಉಪ್ಪು, ಬಟ್ಟೆ, ಬೆಂಕಿಕಡ್ಡಿಗಾಗಿ ಅವರು ಧನಿಗಳನ್ನು ಅವಲಂಬಿಸಿದರು.

ಕುಮರಿ ಬೇಸಾಯ

ಕುಮರಿ ಬೇಸಾಯವು ಇಂದು ನಶಿಸಿದೆ. ಕಾಡುವಾಸಿಗಳಾಗಿದ್ದವರನ್ನು ನಾಡುವಾಸಿಗಳನ್ನಾಗಿ ಮಾಡಲಾಗಿದೆ. ಕಾಡುಗಳ ನಾಶದಿಂದ ಸರಕಾರ ಅಭಯಾರಣ್ಯಗಳನ್ನು ರಕ್ಷಿಸಿ ಪೊಷಿಸುತ್ತಿದೆ. ರಾಷ್ಟ್ರೀಯ ಉದ್ಯಾನಗಳೆಂದು ಗುರುತಿಸುವಾಗ ಕಾಡನ್ನು ತಮ್ಮದೆಂದು ನಂಬಿ ಬಾಳುತ್ತಿರುವವರು ಒತ್ತಾಯದಿಂದ ನಾಗರಿಕರಾಗಲು ಸರ್ವಪ್ರಯತ್ನ ನಡೆದಿದೆ. ಪುನರ್ವಸತಿ ಕಲ್ಪಿಸುತ್ತಾ ಕಾಡಿನಿಂದ ನಾಡಿಗೆ ಬಂದ ಅವರು ಕುಮೇರು ಬೇಸಾಯ ಮಾಡಲಾರದ ಸ್ಥಿತಿ ತಲುಪಿದ್ದಾರೆ.

ಪ್ರಭಾಕರ ಶಿಶಿಲ ಬರೆದ 'ಕಪಿಲಳ್ಳಿಯ ಕತೆಗಳು' ಕಥಾಸಂಕಲನದಿಂದ ಆಯ್ದ ಕತೆ ಮಲೆಕುಡಿಯರ ಬದಲಾದ ಜೀವನದ ಕುರಿತು ಸ್ಪಷ್ಟಪಡಿಸುತ್ತದೆ. ನಾಗರಿಕ ಪ್ರಪಂಚಕ್ಕೆ ಇಳಿದರೂ, ಅದರ ಪೂರ್ಣ ಅರಿವು ಅವರಿಗಾಗಿಲ್ಲ. ಕಾಡಿನ ಉತ್ಪನ್ನಗಳನ್ನು ತಂದು ಬದುಕು ಸಾಗಿಸುವುದೂ ಅವರು ಬಿಟ್ಟಿಲ್ಲ. ನಾಗರಿಕ ಪ್ರಪಂಚವನ್ನು ಅರ್ಥಮಾಡಿಕೊಳ್ಳಲಾರದೆ, ಕಾಡನ್ನು ಬಿಡಲಾರದೆ ಬಳಲುವ ಹಾಗೂ ಕಳೆದುಕೊಳ್ಳುವ ದಾರುಣ ಅವಸ್ಥೆಯನ್ನು ಸಣ್ಣಕತೆ ಚಿತ್ರಿಸುತ್ತದೆ.

ಕುಮರಿ ಬೇಸಾಯವು ಬುಡಕಟ್ಟು ಜನಾಂಗದವರ ಬೇಸಾಯವಾಗಿದ್ದು ಸ್ಥಳಾಂತರಗೊಳ್ಳುತ್ತಾ ಸಾಗುತ್ತಿದ್ದು ಕಾಡು ನಶಿಸಿರುವುದರಿಂದ ಇಂದು ಅದು ಅಸ್ತಿತ್ವದಲ್ಲಿ ಇಲ್ಲ ಎಂದು ಪಾಲ್ತಾಡಿ ರಾಮಕೃಷ್ಣ ಆಚಾರ್ ಅಭಿಪ್ರಾಯ ಪಡುತ್ತಾರೆ.[೧] ಭೂಮಿ ಇಲ್ಲದ ಬುಡಕಟ್ಟಿನವರು ಜಮೀನ್ದಾರಿ ಪದ್ಧತಿಯಲ್ಲಿ ಮೂಲದಾಳುಗಳಾಗಿ ಸೇರಿರಬಹುದು.

ಕಂಗು, ವಾಣಿಜ್ಯ ಬೆಳೆಗಳು

ಭತ್ತದ ಬೇಸಾಯದ ಕೆಲಸಮಾಡಲು ಬಹಳ ಜನರ ಅಗತ್ಯವಿತ್ತು. ಕುಮೇರಿ ಬೇಸಾಯದಲ್ಲಿ ಮಲೆಕುಡಿಯರು ಸಾಮೂಹಿಕವಾಗಿ ಕೃಷಿ ಮಾಡಿ ಭತ್ತವನ್ನು ಹಂಚಿಕೊಳ್ಳುತ್ತಿದ್ದರು. ಜಮೀನ್ದಾರಿ ಪದ್ಧತಿಯಲ್ಲಿ ಕೂಡ ಹೆಚ್ಚಿನ ಕೆಲಸಗಳನ್ನು ಕನಿಷ್ಠ ಕೂಲಿಗೆ ಅಂದರೆ ದಿನಕ್ಕೆ ಎರಡು ಪಾವು ಅಕ್ಕಿಗೆ ಗುಲಾಮರಂತೆ ಮೂಲದಾಳುಗಳು ಎಂದು ಕರೆಸಿಕೊಂಡಿರುವ ವರ್ಗ ಮಾಡುತ್ತಿತ್ತು. ಭೂಮಿಯೂ ಇಲ್ಲದೆ ಅನಿವಾರ್ಯವಾಗಿ ಈ ಪದ್ಧತಿಯನ್ನು ಒಪ್ಪಿಕೊಂಡಿದ್ದರು.

ಆದರೆ ಭೂಮಸೂದೆ ಕಾನೂನು ಜಾರಿಗೆ ಬರುವ ಪೂರ್ವದಲ್ಲಿಯೇ ಅಲ್ಲಲ್ಲಿ ಕಂಗು ಕೃಷಿ ಮಾಡುವುದರ ಪ್ರಸ್ತಾಪ 'ಉಲ್ಲಂಘನೆ' ಮುಂತಾದ ಕಾದಂಬರಿಗಳಲ್ಲಿ ಬಂದಿದೆ. ಭತ್ತದ ಕೃಷಿ ವಾಣಿಜ್ಯ ಬೆಳೆಯಾದ ಕಂಗಿಗೆ ವ್ಯತ್ಯಾಸಗೊಳ್ಳುವುದನ್ನು ಗಮನಿಸಬಹುದು. ಕಂಗು ಕೃಷಿ ಲಾಭದಾಯಕವಾಗಿ ಪರಿಣಮಿಸುವ ಬದಲಾವಣೆಯನ್ನು ಗಮನಿಸಬಹುದು.

ವಸಾಹತುಶಾಹಿ ಕಾಲದಲ್ಲಿ ಕೃಷಿ ಬೆಳೆಯುವುದರಲ್ಲಿ ವ್ಯಾಪಕ ಬದಲಾವಣೆಗಳು ಆರಂಭವಾದವು. ಭತ್ತದ ಕೃಷಿಗೆ ಹೆಚ್ಚಿನ ಪರಿಶ್ರಮ ಅಗತ್ಯವಿತ್ತು. ಕೃಷಿ ಲಾಭದಾಯಕವಾಗಲು ದುಡಿಮೆಗೆ ಹೆಚ್ಚಿನ ಜನರ ಅಗತ್ಯವಿತ್ತು. ಭತ್ತದ ಕೃಷಿಗಿಂತ ಇತರ ವಾಣಿಜ್ಯ ಬೆಳೆಗಳು ಲಾಭದಾಯಕ ಎಂಬ ಅಂಶ ಗಮನಕ್ಕೆ ಬಂದಾಗ ಇತರೆ ಬೆಳೆಗಳ ಕೃಷಿಗೆ ತೊಡಗುತ್ತಾರೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಭತ್ತದ ಕೃಷಿ ಬದಲಿಗೆ ಹೊಗೆಸೊಪ್ಪು ಕೃಷಿ ಮಾಡಿ ಲಾಭಗಳಿಸುವ ವಿವರವಿದೆ. ಹೊಗೆಸೊಪ್ಪಿನ ಬೆಳೆಗೆ ಭತ್ತಕ್ಕಿಂತ ಹೆಚ್ಚಿನ ಬೆಲೆ ದೊರೆಯುತ್ತಿತ್ತು. ವಾಣಿಜ್ಯ ಬೆಳೆಯ ಕಡೆ ಮನಸ್ಸು ಒಲಿಯುವುದು ಗಮನಿಸಬಹುದು. ಗೋವೆ ಬೀಜದ(ಗೋಡಂಬಿ) ಕೃಷಿ ಹೆಚ್ಚಿನ ಲಾಭ ತರುತ್ತಿತ್ತು. ಹೀಗೆ ಶಿಕ್ಷಿತ ಯುವಕರು ಆರ್ಥಿಕ ಸ್ಥಿರತೆ ಸಂಪಾದಿಸಲು ಪಾರಂಪರಿಕ ಕೃಷಿಗಿಂತ ಭಿನ್ನ ಮಾರ್ಗ ತುಳಿಯಲು ಇಚ್ಛಿಸುವುದನ್ನು ಕಾಣಬಹುದು.

"ಅದಕ್ಕೇನೆ ಮನೆಯ ಹಿಂದಿನ ಅರಾಲಿಗೆಲ್ಲ ಗೋವೆ ಬೀಜ ಹಾಕಿದ್ದಾನೆ. ಮೂರು ಎಕ್ರೆಯ ಗುಡ್ಡದ ಮೇಲೆ ಗೋವೆ ಬೀಜವೇ ಇದೆ. ಗಿಡ ಮೇಲಕ್ಕೆ ಬಂದಾಯಿತು. ಇನ್ನು ಎರಡು ವರ್ಷ ಹೋದರೆ ಹಣ್ಣಾದೀತು. ಇನ್ನೆರಡು ಮೂರು ಎಕ್ರೆ ಗಾಳಿಮರ ಹಾಕಿದೆ; ಅದಾವುದೂ ಕಷ್ಟವಿಲ್ಲ. ಆದರೆ ಈ ನೀರು ಹೊರುವ ಕೆಲಸ ಮಾತ್ರ ಸ್ವಲ್ಪ ಕಷ್ಟವೇ. ಹೊಗೆಸೊಪ್ಪು ನೀರು ಹ್ಯಾಗೆ ಕುಡಿಯುತ್ತದೆ ಬಲ್ಲೆಯಾ? ಪ್ರತಿ ದಿನ ನೀರು ತಪ್ಪಕೂಡದು. ಆದರೆ ಅದರಲ್ಲಿದ್ದ ಫಾಯಿದೆ ಇನ್ನು ಯಾವುದರಲ್ಲೂ ಇಲ್ಲ."(ಮರಳಿ ಮಣ್ಣಿಗೆ, ಪುಟ ೪೦೪)

ಸ್ವಾತಂತ್ರ್ಯ ಚಳುವಳಿಯು ತುಳು ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವ ಗಮನಾರ್ಹ. ಸಂಸ್ಕೃತಿಯು ನಿಂತ ನೀರಲ್ಲ, ಚಲನಶೀಲವಾದುದು. ಕಾಲದ ಪ್ರಭಾವಕ್ಕೆ ಸಿಕ್ಕಿ, ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳಿಂದಾಗಿ ಪ್ರತಿ ಕ್ಷಣವೂ ಹಲವು ಬದಲಾವಣೆಗಳನ್ನು ಹೊಂದುತ್ತದೆ. ಉಲ್ಲಂಘನೆ ಕಾದಂಬರಿಯು ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಗುತ್ತು ಮನೆಯಲ್ಲಾದ ಸ್ಥಿತ್ಯಂತರಗಳನ್ನು ದಾಖಲಿಸುತ್ತದೆ. ಸಾಂತೇರ್ ಗುತ್ತಿನ ಸಂಕಪ್ಪ ಹೆಗ್ಗಡೆಯವರು ಸ್ವಾತಂತ್ರ್ಯ ಚಳುವಳಿಯಿಂದ ಪ್ರಭಾವಿತರಾದರು. "ಈ ಶತಮಾನದ ಬೆಳವಣಿಗೆ ಬ್ರಿಟೀಷರ ಆಗಮನದಿಂದಾಗಿ ಸಂಪೂರ್ಣ ಔದ್ಯಮಿಕ ರೂಪದ ಕಡೆಗೆ ತಿರುಗಿದೆ."[೩] ಎಂಬ ಮಾತನ್ನು ಒಪ್ಪಬಹುದು.

ಆ. ವಸಾಹತೋತ್ತರ ಕಾಲದ ಪಲ್ಲಟ

೧೯೯೦ರ ನಂತರ ಹೊಸದಾಗಿ ಭೂಮಾಲೀಕರಾದವರಿಗೂ ಕೃಷಿ ಬದುಕು ಕಷ್ಟವೆನಿಸಿತು. ನಗರಜೀವನ ಪ್ರಿಯವಾಯಿತು. ಊಳಿಗಮಾನ್ಯ ವ್ಯವಸ್ಥೆಯ ಶಿಥಿಲತೆಯಿಂದ ಕೃಷಿಕಾರ್ಮಿಕರು

ಸಿಗುವುದು ಕಠಿಣವೆನಿಸಿತು. ಸರ್ವವ್ಯಾಪಿಯಾದ ಶಿಕ್ಷಣದಿಂದ ಹೊಸಪೀಳಿಗೆ ಕೃಷಿ ಬದುಕಿನಿಂದ ದೂರ ಸರಿಯಿತು. ಕೈಗಾರೀಕರಣದಿಂದ ಹೊಸ ಹೊಸ ಉದ್ಯಮಗಳು ಸೃಷ್ಟಿಯಾಗಿದ್ದವು. ವ್ಯಾಪಾರಿ ಸಂಸ್ಕೃತಿಯ ಬೆಳವಣಿಗೆಯಿಂದ ಪ್ರತಿಯೊಬ್ಬರೂ ವಲಸೆ ಇಲ್ಲವೆ, ಕೃಷಿ ಬದುಕಿನಿಂದ ದೂರ ಸರಿಯಲು ಕಾರಣವಾಯಿತು.

'ಅದುವರೆಗೂ ಕೇವಲ ಸಾಗುವಳಿ ಕೆಲಸ, ಮೀನುಗಾರಿಕೆ ಕೆಲಸ, ಜಾತಿಸಂಬಂಧಿ ವೃತ್ತಿ ಕೆಲಸಗಳನ್ನಷ್ಟೇ ನಂಬಿಕೊಂಡಿದ್ದ ನಮ್ಮೂರಿಗರಿಗೆ ಈ ಕಾರ್ಖಾನೆಗಳು ಒಂದು ಹೊಸದಾದ ಅನ್ನದ ದಾರಿಯನ್ನು ತೋರಿಸಿದ್ದರಿಂದ ಹಳ್ಳಿಗಳಿಂದ ಪೇಟೆಗೆ ವಲಸೆ ಹೊರಡುವವರ ಸಂಖ್ಯೆ ವೃದ್ಧಿಸತೊಡಗಿತ್ತು."[೧೪] ಈ ಮಾತುಗಳನ್ನು ಗಮನಿಸಿದಾಗ ತುಳುನಾಡಿನಲ್ಲಿ ಅನ್ಯ ಉದ್ದಿಮೆಗಳು ಕಣ್ತೆರೆಯುವವರೆಗೂ ಸಾಗುವಳಿ ಕೆಲಸ ಪ್ರಧಾನ ಅನ್ನದ ದಾರಿಯಾಗಿತ್ತು ಎಂಬ ಮಾತು ಸ್ಪಷ್ಟವಾಗುತ್ತದೆ.

ಜಾನುವಾರುಗಳೊಂದಿಗಿನ ಸಂಬಂಧ ಕಡಿಮೆಯಾಗಿದೆ. ಆಚರಣೆ, ಹಬ್ಬಗಳ ಸಂದರ್ಭದಲ್ಲಿ ಸಹಭೋಜನ ಇಂದು ಇಲ್ಲವಾಗಿದೆ. ಎಲ್ಲರೂ ಸೇರಿ ಸಂತೋಷಪಡುವುದು ಇಂದು ಕಡಿಮೆಯಾಗಿ ವೈಯಕ್ತಿಕ ಸಂತೋಷ ಕಾಣುವುದು ಹೆಚ್ಚಾಗಿದೆ. ಹಬ್ಬಗಳನ್ನು ಒಟ್ಟು ಸೇರಿ ಆಚರಿಸುವ ಗ್ರಾಮ ಸಾಮರಸ್ಯ ಇಂದು ಕಡಿಮೆಯಾಗಿದೆ.

"ಗದ್ದೆ ಬೇಸಾಯ ಜನಕೇಂದ್ರಿತ. ಸಾಂಘಿಕ ಶ್ರಮ ಆಧಾರಿತ. ನಾಟಿಗೆ, ಕೊಯ್ಲಿಗೆ ಕೂಡುವ ಸಾಲು ಜಾತ್ಯತೀತ. ಆ ಸಾಲಲ್ಲಿ ಫಾತುಮ್ಮಕ್ಕನೂ ಪಾಡ್ದನ ಹೇಳುತ್ತಿದ್ದರು. ಬಾಯಮ್ಮನಿಗೂ ಸಂಧಿ ಗೊತ್ತಿತ್ತು. ಶ್ರಮವನ್ನು ಮರೆಯುವ ಹುತ್ತರಿಗೆ, ರಾಶಿಪೂಜೆಗೆ ಯಾವ ಜಾತಿಯೂ ಗೊತ್ತಿರಲಿಲ್ಲ. ಸಾಲು ಸಾಲು ಎತ್ತು ಹೂಡಿ, ಕೆಸರಿಗೆ ಕಾಲಿಟ್ಟು ಹೊಡೆಯುವ ಉರಲ್‌ಗೆ ಯಾವ ಮತೀಯ ರಾಗಗಳೂ ಇರಲಿಲ್ಲ. ಎಲ್ಲರೂ ಹಾಡುವ ಗೇಯಕ್ಕೆ ಇನ್ನೂ ಬೇರು ಬಿಡದ ನೇಜಿ ಅಲ್ಲಿ ನಳನಳಿಸುತ್ತಿತ್ತು."[೧೫] ಎಂದು ನರೇಂದ್ರ ರೈ ದೇರ್ಲ ಅಭಿಪ್ರಾಯಪಡುತ್ತಾರೆ.

ಭೂಮಸೂದೆ ಕೃಷಿ ಸಂಸ್ಕೃತಿಯ ಮೇಲೆ ದೊಡ್ಡ ಹೊಡೆತ ನೀಡಿದ್ದು ಸುಳ್ಳಲ್ಲ. ಜಮೀನ್ದಾರಿ ಪದ್ಧತಿ ನಶಿಸುವುದರೊಂದಿಗೆ ಉಳುವವನೇ ಹೊಲದೊಡೆಯನಾದ. ಕೃಷಿಗೆ ನಿಯಮಿತ ಕೆಲಸ ಹಾಗೂ ತುಂಬಾ ಶ್ರಮಿಕರ ಅಗತ್ಯವಿದೆ. ಕೃಷಿ ಕಾರ್ಮಿಕರ ಕೊರತೆಯಿಂದ ಕೃಷಿ ನಡೆಸುವುದು ಕಠಿಣವಾಯಿತು. ಕೃಷಿಭೂಮಿಗಳು ಮಾರಲ್ಪಟ್ಟವು. ಕುಲಕಸುಬುಗಳನ್ನಷ್ಟೇ ನೋಡಿಕೊಂಡಿದ್ದ ಜನರಿಗೆ ಅನ್ಯ ಉದ್ದಿಮೆಗಳು ಹಲವು ಆಕರ್ಷಕ ದಾರಿಗಳನ್ನು ತೋರಿಸಿದವು. ಶಿಕ್ಷಣ ಪಡೆದವರಿಗೆ ಕೃಷಿ ಬಡವಾಯಿತು. ಉನ್ನತ ವಿದ್ಯಾಭ್ಯಾಸವು ಜನರನ್ನು ವಲಸೆಗೆ ಪ್ರೇರೇಪಿಸಿತು. ಕೃಷಿ ತನ್ನ ಆಕರ್ಷಣೆಯನ್ನು ಕಳಕೊಂಡಿತು.

ಭೂಮಸೂದೆಯ ನಂತರದ ಸ್ಥಿತ್ಯಂತರಗಳನ್ನು 'ಉಲ್ಲಂಘನೆ', 'ಪಾಚಿ ಕಟ್ಟಿದ ಪಾಗಾರ', 'ಮುಖಾಂತರ', 'ತೆಂಬರೆ' ಮುಂತಾದ ಕಾದಂಬರಿಗಳು ವಿವೇಚಿಸಿವೆ. ನಂಬಿಕೆ ಉಳಿಸಲು ಭತ್ತದ ಕೃಷಿ ಮುಂದುವರಿಸಲು ಪ್ರಯತ್ನಿಸಿದರೂ ಅದು ಲಾಭದಾಯಕವಾಗುವುದಿಲ್ಲ. ಯಂತ್ರ ಪ್ರವೇಶಿಸುತ್ತದೆ. ಅದೂ ಸಾಧ್ಯವಿಲ್ಲದೆ ವಾಣಿಜ್ಯ ಬೆಳೆಗಳು ಪ್ರವೇಶ ಪಡೆಯುತ್ತವೆ. ಆಹಾರ ಬೆಳೆಗಳ

ಬದಲಿಗೆ ಆರ್ಥಿಕ ಭದ್ರತೆ ಕಲ್ಪಿಸುವ ವಾಣಿಜ್ಯ ಬೆಳೆಗಳು, ಸ್ವಾವಲಂಬಿ ಬದುಕಿನ ಬದಲಿಗೆ ಪಾರತಂತ್ರ್ಯದ ಬದುಕು ಮುಂಚೂಣಿಗೆ ಬರುತ್ತದೆ.

ಭೂಮಸೂದೆ ಕಾನೂನು ಎಲ್ಲರೂ ದುಡಿದು ಉಣ್ಣಬೇಕಾದ ಪರಿಸ್ಥಿತಿ ತಂದೊಡ್ಡಿತು. ಒಂದು ವರ್ಗ ಕೂತು ಉಣ್ಣುವುದು ಇನ್ನೊಂದು ವರ್ಗ ದುಡಿಯುವುದು ಈ ಬದುಕಿನ ರೀತಿಯನ್ನು ಬದಲಾಯಿಸಿತು. ಪ್ರತಿಯೊಬ್ಬರೂ ಉಂಡರೆ ಮಾತ್ರ ಬದುಕುವ ಹೊಸ ಬದುಕಿಗೆ ಮುನ್ನುಡಿಯಿಟ್ಟಿತು. ಜಮೀನ್ದಾರನ ಕೈಯಲ್ಲಿದ್ದ ಭೂಮಿ ಉಳುವವನ ಕೈಗೆ ಹಸ್ತಾಂತರಗೊಂಡದ್ದು ಪ್ರಮುಖವಾಗಿ ಗುರುತಿಸುವಂಥ ಬದಲಾವಣೆ.

ಇ. ನವವಸಾಹತುಶಾಹಿ ಪಲ್ಲಟಗಳು

ತೀವ್ರಗೊಂಡ ಕೈಗಾರೀಕರಣ, ನಗರೀಕರಣ, ಉದ್ಯಮಗಳು, ಶಿಕ್ಷಣದಿಂದ ಲಭ್ಯವಾದ ಹೊಸ ಉದ್ಯೋಗಗಳು ತೀವ್ರವಾಗಿ ಬದಲಾವಣೆಗೆ ಪ್ರೋತ್ಸಾಹಿಸುತ್ತವೆ. ಕೃಷಿ ಇಂದು ತನ್ನ ಮಹತ್ವವನ್ನು ಕಳಕೊಂಡಿದೆ. ಸಾಂಪ್ರದಾಯಿಕ ಕೃಷಿ ನಶಿಸಿ ರಾಸಾಯನಿಕ ಗೊಬ್ಬರ ಹಾಗೂ ಯಾಂತ್ರೀಕೃತ ಕೃಷಿ ಮಾತ್ರ ಉಳಿದಿದೆ. ಕೃಷಿ ಕಾರ್ಮಿಕರ ಕೊರತೆ ಇಂದು ತೀವ್ರತರವಾಗಿದೆ. ದುಬಾರಿ ಕೂಲಿ ನೀಡಿ ಕೃಷಿ ಮಾಡುವುದು ಅಸಾಧ್ಯ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿ ಕೃಷಿ ಭೂಮಿ ಮಾರಾಟ ಸಾಮಾನ್ಯವಾಗಿದೆ. ಶಿಕ್ಷಣ ಪಡೆದ ಹೊಸ ತಲೆಮಾರಿಗೆ ಕೃಷಿ ಬೇಡವಾಗಿದೆ.

"೧೯೯೧ರ ಹೊಸ ಆರ್ಥಿಕ ನೀತಿಯ ನಂತರ ಭೂಮಿ ಮತ್ತು ಕೃಷಿ, ಸ್ಥಳೀಯ ಮಾರುಕಟ್ಟೆಯ ನಿಯಂತ್ರಣದಿಂದ ಜಾಗತಿಕ ಮಾರುಕಟ್ಟೆಯ ವ್ಯವಹಾರವಾಗಿ ರೂಪಾಂತರಗೊಂಡಿದೆ. ಈ ರೂಪಾಂತರವು ಭೂಮಿ ಮತ್ತು ಕೃಷಿಯನ್ನು ಬಹುರಾಷ್ಟ್ರೀಯ ಕಂಪನಿಗಳ ನಿಯಂತ್ರಣಕ್ಕೆ ಒಳಪಡುತ್ತಿರುವುದು ಒಂದು ಕ್ರಮವಾಗಿದೆ. ಇತ್ತೀಚಿನ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದರೆ ಭೂಮಿ ಕೇವಲ ಭೂಮಿಯ ಪ್ರಶ್ನೆಯಾಗದೆ ಅದು ಜಾಗತಿಕ ಮಾರುಕಟ್ಟೆಯಾಗುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದು."[೧೬] ಮುಖಾಂತರ ಕಾದಂಬರಿಯು ಕೃಷಿ ಬದುಕು ಸಂಕಷ್ಟದಾಯಕ ಎಂಬುದನ್ನು ನೇರವಾಗಿ ಧ್ವನಿಸುತ್ತದೆ. ಕೃಷಿ ಲಾಭದಾಯಕವಲ್ಲ ಎಂಬ ಅಂಶ ಹಳೆಯ ಪೀಳಿಗೆಗೆ ಮನದಟ್ಟಾಗುವ ಜೊತೆಗೆ, ಹೊಸ ಪೀಳಿಗೆ ಆಧುನಿಕ ಶಿಕ್ಷಣ ಪಡೆದು ಕೃಷಿಯಿಂದ ದೂರವೇ ಉಳಿದದ್ದು ಕೂಡ ಅಷ್ಟೇ ಸತ್ಯ. ಮುಖಾಂತರ ಕಾದಂಬರಿಯಲ್ಲಿ ಉಲ್ಲೇಖಗೊಂಡ ಈ ಸಾಲುಗಳು ಕೃಷಿ ಬದುಕಿನ ಒಳಗಿನ ತಲ್ಲಣಗಳನ್ನು ಸೆರೆಹಿಡಿಯುತ್ತವೆ.

'ನನಗೆ ಈಗ ಅರವತ್ತೈದು ವರ್ಷ ಆಗಿದೆ ಸ್ವಾಮಿ. ಈ ಸಮಿತಿಯಲ್ಲಿ ನಾನಿದ್ದು ಮಾಡಲಿಕ್ಕೆ ಏನುಂಟು?' ಎಂದು ನಗುತ್ತಾ 'ಸಮಿತಿಯಲ್ಲಿ ಯಾರಿದ್ದೂ ಏನು ಮಾಡಲಿಕ್ಕೆ ಆಗುತ್ತದೆ ಹೇಳಿ? ಎಲ್ಲರಿಗೂ ಈಗ ಬೇಕಾದ್ದು ಇಂಗ್ಲೀಷ್ ಅಲ್ಲವಾ?' ಎಂದು ಹೇಳಿ 'ನನ್ನ ಮಗ ಈಗ ದುಬೈಯಲ್ಲಿದ್ದಾನೆ. ಅವನ ಹೆಂಡತಿಯೂ ಅಲ್ಲೇ ಮಗಳು ಇರುವುದು ಮುಂಬೈಯಲ್ಲಿ ಊರಲ್ಲಿ ಇರುವುದು ನಾನು ಮತ್ತು ನನ್ನ ಹೆಂಡತಿ ಮಾತ್ರ. ಮೊನ್ನೆ ನಮ್ಮ ಪುರಂದರ ರೈಗಳು ನನ್ನ ಮಗನಿಗೆ ಫೋನು ಮಾಡಿ ಜಮೀನಿಗೆ ಒಳ್ಳೆಯ ಗಿರಾಕಿ ಮಾಡಿಕೊಡುತ್ತೇನೆ ಎಂದು

ಹೇಳಿದ್ದಾರಂತೆ, ನಾನು ಸಾಯುವ ತನಕ ಎತ್ತಿನ ಬಾಲ ಹಿಡಿದುಕೊಂಡು ಇಲ್ಲೇ ಕುಳಿತುಕೊಳ್ಳಬೇಕು ಎಂದುಕೊಂಡಿದ್ದರೂ ಈಗ ಕೃಷಿ ಕಸುಬಿಗೆ ಬಂದ ಸಂಕಷ್ಟ ನೋಡಿದರೆ, ಯಾರಿಗೆ ಬೇಕು ಎಂದು ಊರಿಗೇ ನಮಸ್ಕಾರ ಹೇಳಬೇಕು ಎಂದುಕೊಂಡಿದ್ದೇನೆ' ಎಂದರು. (ಮುಖಾಂತರ, ಪುಟ ೫೭೩) ಈ ಸಂಭಾಷಣೆ ಹಲವು ಸತ್ಯಗಳನ್ನು ತೆರೆದಿಟ್ಟು ಕೃಷಿಯ ದಯನೀಯ ಸ್ಥಿತಿ, ವೃದ್ಧರಿಗೆ ಕೃಷಿ ಮಾಡಲು ದೈಹಿಕ ಅಸಮರ್ಥತೆ ಕಾಡಿದಾಗ ಊರು ಬಿಟ್ಟು ವಲಸೆ ಹೋಗುವ ಅಸಹಾಯಕತೆ ಗೋಚರಿಸುತ್ತದೆ. ಇಂದಿನ ಪೀಳಿಗೆಗೆ ಶಿಕ್ಷಣದಿಂದ ಪಡೆದ ಹೊಸ ಉದ್ಯೋಗಾವಕಾಶಗಳು ಲಭ್ಯವಾಗಿದ್ದು ಊರಿಂದ ಅನಿವಾರ್ಯವಾಗಿ ದೂರ ಸಾಗುವಂತೆ ಮಾಡಿವೆ. ಹೊಸ ಬಗೆಯ ಸಮಸ್ಯೆಗಳು ಸೃಷ್ಟಿಯಾಗಿವೆ. ಇದನ್ನು ಪರಿಹರಿಸುವ ಗೊಂದಲದಲ್ಲಿ ಹಿರಿಯರನ್ನು ವಯಸ್ಸು ಕಾಡುತ್ತದೆ. ಹೊಸ ಪೀಳಿಗೆ ಅದನ್ನು ಸ್ವೀಕರಿಸಲು ಸಿದ್ಧರಿಲ್ಲ. ಅವರು ನವ ಬಗೆಯಲ್ಲಿ ಬದುಕು ಕಟ್ಟಿಕೊಂಡಾಗಿದೆ. ಕೃಷಿ ಅನಾಥವಾಗಿದೆ.

ಕೃಷಿ ಬದುಕು ಹಲವಾರು ತಲ್ಲಣಗಳನ್ನು ಎದುರಿಸುತ್ತಿದೆ. ಕೃಷಿಗೆ ಕೂಲಿಕಾರ್ಮಿಕರ ಕೊರತೆ ಇದೆ. ಶಿಕ್ಷಿತ ಯುವಜನತೆ ಕೃಷಿಯಿಂದ ದೂರಸಾಗುತ್ತಿದ್ದಾರೆ. ಉದ್ಯೋಗಕ್ಕಾಗಿ ಕೃಷಿ ಬದುಕು ತ್ಯಜಿಸಿ ದೂರದ ಊರುಗಳಿಗೆ ಸಾಗುವುದು ಇಂದು ಮಾಮೂಲಾಗಿದೆ. ಕೃಷಿ ವೃದ್ಧರಿಗೆ ಮೀಸಲಾಗಿದೆ. ತಮ್ಮ ನಂತರ ಕೃಷಿ ಬದುಕು ಕೊನೆಗೊಳ್ಳುವ ಮುನ್ಸೂಚನೆಗಳು ಈಗಾಗಲೇ ಕಾಣುತ್ತಿವೆ. ಈ ಅಂಶಗಳನ್ನು ಕಾದಂಬರಿಗಳು ಸ್ಪಷ್ಟವಾಗಿ ಬಿಡಿಸಿಟ್ಟಿವೆ.

ಅಡಿಟಿಪ್ಪಣಿ

೧. ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಜಿ.ಎಲ್.ಬಡಿಗೇರ, ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ, ೧೯೯೮, ಪುಟ ೫೫.

೨. ಕರ್ನಾಟಕ ಸಂಗಾತಿ, ಪ್ರಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ ೬೮೪.

೩. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೭೧.

೪. ಕರ್ನಾಟಕ ಸಂಗಾತಿ, ಪ್ರಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ ೬೮೩.

೫. ಕರ್ನಾಟಕ ಸಂಗಾತಿ, ಪ್ರಸಂ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ ೬೯೪.

೬. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ ೫೧೫.

೭. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ ೫೧೭.

೮. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ ೫೧೭.

೯. ದಕ್ಷಿಣ ಕನ್ನಡ ಜಿಲ್ಲೆಯ ರೈತ ಹೋರಾಟ, ಡಾ.ಜಿ.ವಿ.ಜೋಶಿ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ೧೯೯೯, ಪುಟ ೨೨.

೧೦. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦, ಪುಟ ೫೧೭.

೧೧. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಂ. ವಿಜಯ್ ಪೂಣಚ್ಚ ತಂಬಂಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ ೫೧೭.

೧೨. ತುಳುನಾಡಿನ ಪಾಣಾರರು, ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೩.

೧೩. ಪೊನ್ನ ಕಂಠಿ, ಪ್ರಸಂ. ಬಿ.ಎ.ವಿವೇಕ ರೈ, ಅಖಿಲ ಭಾರತ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಂಗಳೂರು, ಪುಟ ೨೭೮.

೧೪. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೬೧.

೧೫. ಹಸಿರು–ಉಸಿರು, ನರೇಂದ್ರ ರೈ ದೇರ್ಲ, ಕನಸು ಪ್ರಕಾಶನ, ಪುತ್ತೂರು, ೨೦೧೪, ಪುಟ ೧೫೬.

೧೬. ಶೋಧ, ಸಂಪುಟ ೩ ಸಂಚಿಕೆ ೨, ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ, ಜನವರಿ ೨೦೧೪.

ಅಧ್ಯಾಯ ೮. ತುಳುನಾಡಿನ ಕಥನ ಸಾಹಿತ್ಯ ಚಿತ್ರಿಸುವ ವಲಸೆಯ ವಿನ್ಯಾಸಗಳು

೮.೧. ತುಳುನಾಡಿನಿಂದ ವಲಸೆ–ಶೈಕ್ಷಣಿಕ ವಲಸೆ–ಔದ್ಯೋಗಿಕ ವಲಸೆ ಇತ್ಯಾದಿ.

೮.೨. ತುಳುನಾಡಿಗೆ ವಲಸೆ

೮.೩. ವಲಸೆಯಿಂದ ತುಳುನಾಡಿನ ಮೇಲಾದ ಪರಿಣಾಮಗಳು

ಅಧ್ಯಾಯ ೮. ತುಳುನಾಡಿನ ಕಥನ ಸಾಹಿತ್ಯ ಚಿತ್ರಿಸುವ ವಲಸೆಯ ವಿನ್ಯಾಸಗಳು

೮.೧. ತುಳುನಾಡಿನಿಂದ ವಲಸೆ-ಶೈಕ್ಷಣಿಕ ವಲಸೆ-ಔದ್ಯೋಗಿಕ ವಲಸೆ ಇತ್ಯಾದಿ.

ತುಳುನಾಡಿನಿಂದ ವಲಸೆ

ಆರ್ಥಿಕ, ಸಾಮಾಜಿಕ ಕಾರಣಗಳಿಂದಾಗಿ ಮಾನವ ಒಂದೆಡೆಯಿಂದ ಇನ್ನೊಂದೆಡೆ ಸ್ಥಳಾಂತರಗೊಳ್ಳುತ್ತಾನೆ. ಕೃಷಿ ಪ್ರಧಾನವಾಗಿದ್ದ ತುಳುನಾಡು ಶಿಕ್ಷಣದಿಂದ, ಹೊಸ ತಂತ್ರಜ್ಞಾನದ ಆಗಮನದಿಂದ ಉಂಟಾದ ಸ್ಥಿತ್ಯಂತರಗಳಿಂದ ವಲಸೆಯತ್ತ ಮುಖ ಮಾಡಲು ಜನರನ್ನು ಪ್ರೇರೇಪಿಸುತ್ತದೆ. ಹೋಟೆಲ್ ಉದ್ಯಮ, ಶಿಕ್ಷಣ, ಗಾಂಧಿಯ ಪ್ರಭಾವ ಮುಂತಾದ ಹಲವು ಕಾರಣಗಳಿಂದ ಜನ ಮುಂಬೈ, ಕೇರಳಕ್ಕೆ ವಲಸೆ ಹೋಗುವ ಚಿತ್ರಣ ಕಂಡುಬರುತ್ತದೆ. ವಲಸೆಯಿಂದ ಆರ್ಥಿಕವಾಗಿ ಸಬಲರಾದ ಜನ ತುಳು ಸಂಸ್ಕೃತಿಯನ್ನು ಮತ್ತೆ ಬಲಪಡಿಸುವ ಕಾಯಕವನ್ನು ಕೈಗೊಳ್ಳುವುದನ್ನು ಕಾಣಬಹುದು. ದುಡ್ಡು ಗಳಿಸಿ ಮನೆಯ ನವೀಕರಣ, ಹಂಚು ಹೊದೆಸುವ ಪ್ರಕ್ರಿಯೆ ಗಮನಿಸಬಹುದು. ವಲಸೆಯು ನವಶ್ರೀಮಂತರನ್ನು ರೂಪಿಸುತ್ತದೆ. ಮಹಾನಗರಗಳಿಗೆ ವಲಸೆ ಹೋದವರು ಹೊಸ ಸನ್ನಿವೇಶಗಳಿಗೆ, ಪ್ರಭಾವಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಾರೆ. ಆಧುನಿಕ ಶಿಕ್ಷಣ, ಉದ್ಯೋಗಗಳಿಂದ ತುಳುನಾಡಿನಿಂದ ವಲಸೆ ಹೋಗುವ ಜನರ ಸಂಖ್ಯೆ ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಹೆಚ್ಚುತ್ತಾ ಬಂದಿದೆ. ಭಾರತದ ಮಹಾನಗರಗಳಾದ ಮುಂಬೈ, ಕೇರಳಗಳಿಗೆ ಸೀಮಿತವಾದ ವಲಸೆ, ನಂತರದ ದಿನಗಳಲ್ಲಿ ವಿದೇಶಿ ನೆಲದವರೆಗೂ ಹರಡಿದೆ. ಕುಟುಂಬಗಳು ಜನರಹಿತ ಪರಿಸ್ಥಿತಿಗೆ ತಲುಪಿವೆ. ನೆಲದ ಒಡನಾಟದಿಂದ ಜನ ದೂರ ಸರಿದು, ಕೃಷಿ ಭೂಮಿ ಹಡೀಲು ಬಿಡಬೇಕಾದ ಸ್ಥಿತಿ ನಿರ್ಮಾಣಗೊಂಡು ತಲ್ಲಣಗಳು ಎಲ್ಲೆಡೆ ಉದಯಿಸಿವೆ.

೧. ಶೈಕ್ಷಣಿಕ ವಲಸೆ

ಶಿಕ್ಷಣದ ಆಕಾಂಕ್ಷಿಯಾಗಿ ಪರವೂರಿಗೆ ತೆರಳುವುದನ್ನು ಶೈಕ್ಷಣಿಕ ವಲಸೆ ಎನ್ನುವರು. ಮೊದಲ ಕಾದಂಬರಿ 'ಇಂದಿರಾಬಾಯಿ'ಯಲ್ಲಿ ಭಾಸ್ಕರ ಮದ್ರಾಸ್ ಹಾಗೂ ವಿದೇಶಕ್ಕೆ ಬಿ.ಎ. ಹಾಗೂ ಸಿ.ಎಸ್. ಕಲಿಯಲು ತೆರಳುತ್ತಾನೆ. ಅಲ್ಲಿಯ ಮೋಹಕ್ಕೆ ತುತ್ತಾಗದೆ ಭಾರತಕ್ಕೆ ಮರಳಿ ಬಂದು ತನ್ನ ಆತ್ಮೀಯರೊಡನೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳುತ್ತಾನೆ. ಅಮೃತರಾಯರ ಸಹಾಯ ಹಾಗೂ ಸ್ವಪ್ರಯತ್ನದಿಂದ ಕಲೆಕ್ಟರ್ ಅಗಿ ಮರಳಿ ಊರಿಗೆ ಬಂದು ಖ್ಯಾತಿ ಪಡೆಯುವುದನ್ನು ಕಾದಂಬರಿ ಚಿತ್ರಿಸಿದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ರಾಮನ ಶೈಕ್ಷಣಿಕ ವಲಸೆಯನ್ನು ಗುರುತಿಸಬಹುದು. ತನ್ನ ತಾಯಿಯ ತವರು ಮನೆಯಲ್ಲಿ ನೊಂದ ರಾಮ ಯಾರ ಸಹಾಯವೂ ಪಡೆಯದೆ ಮದ್ರಾಸಿಗೆ ಧಾವಿಸುತ್ತಾನೆ. ಆಧುನಿಕತೆಯ ಪ್ರಭಾವದಿಂದ ಬಂದ ರೈಲು ಇದನ್ನು ಸುಲಭವಾಗಿಸುತ್ತದೆ. ಹಂಗಿಲ್ಲದೆ ತಾನೇ ಕಲಿಯಬೇಕೆಂಬ ಹಠ ಬಲವಾಗಿದೆ. ಯಾರೂ ಪರಿಚಿತರಿಲ್ಲದೆ, ನಿಲ್ಲಲು ನೆಲೆಯಿಲ್ಲದೆ ಬಿಡದ ಛಲದೊಂದಿಗೆ ಮುಂದಿನ ದಾರಿಗಾಗಿ

ಕಾಯುತ್ತಿದ್ದಂತೆ ಚಿಕ್ಕಪ್ಪ 'ಮಾಧವ' ಆಪತ್ಬಾಂಧವನಂತೆ ಸಿಗುತ್ತಾನೆ. ರಾಮನ ಅರಿವೆ ಹಾಗೂ ಹಾಸಿಗೆ ಸುರುಳಿ ಕಾಣೆಯಾಗುವುದು ಪರವೂರಿಗೆ ಹೋದಾಗ ಆಗುವ ಅಹಿತಕರ ಘಟನೆಗೆ ಸಾಕ್ಷಿ. ಮಾಧವನ ಮನೆಗೆ ಹೋದ ಕಾರಣ ರಾಮನ ಬದುಕು ಸಹನೀಯವಾಗುತ್ತದೆ. ಹಂಗಿಗೆ ಬೀಳಲು ಇಚ್ಛಿಸದೆ ಎರಡು-ಮೂರು ಕಡೆ ಟ್ಯೂಷನ್ ನೀಡಿ ಹಣ ಗಳಿಸುತ್ತಾನೆ. ಬಾಲ್ಯದ ಪಾರತಂತ್ರ್ಯದ ಬದುಕು ರಾಮನನ್ನು ಸ್ವಾವಲಂಬಿಯನ್ನಾಗಿ ನಿಲ್ಲಿಸುತ್ತದೆ. ಎರಡು ವರ್ಷಗಳ ಅಧ್ಯಯನದ ನಂತರ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಜೈಲುಪಾಲಾಗಿ ಶೈಕ್ಷಣಿಕವಾಗಿ ತೊಂದರೆಗೆ ಗುರಿಯಾಗುತ್ತಾನೆ. ಇದು ಯೌವನದ ಆದರ್ಶಪ್ರಿಯತೆಯನ್ನು ಸೂಚಿಸುತ್ತದೆ. ಮುಂದೆ ಬದಲಾದ ಪಠ್ಯಗಳೊಂದಿಗೆ ವಿಷಮ ಪರಿಸ್ಥಿತಿಯಲ್ಲಿ ಬಿ.ಎ. ಪದವಿ ಲಭಿಸುತ್ತದೆ. ರಾಮನ ಧೈರ್ಯ, ಶ್ರದ್ಧೆ, ಹಂಗಿಗೆ ಬಲಿಯಾಗಬಾರದೆಂಬ ಛಲ ಎದ್ದು ಕಾಣುತ್ತದೆ. ಸ್ವನಿಯಂತ್ರಣವುಳ್ಳ, ಮಾಗಿದ ವ್ಯಕ್ತಿತ್ವವನ್ನು ರಾಮನಲ್ಲಿ ಕಂಡುಕೊಳ್ಳಬಹುದು. ನಾಗವೇಣಿಯ ತ್ಯಾಗ, ಧೈರ್ಯ, ಬದುಕುವ ಛಲ ಮೆಚ್ಚುವಂಥದ್ದು.

'ಸಾಗರದೀಪ'ದ ಕುಮಾರ ಸಮುದಾಯದ ಒಳಗಿನ ಶೋಷಣೆಗೆ ಬಲಿಯಾಗುವ ಬದಲು ಮುಂಬೈಗೆ ತೆರಳಿ ಉತ್ತಮ ಭವಿಷ್ಯದ ಕನಸು ಕಾಣುತ್ತಾನೆ. ರಾತ್ರಿ ಶಾಲೆಯಲ್ಲಿ ಓದುತ್ತಾ ಬಿ.ಎ. ಪದವಿ ಪಡೆದು ಬ್ಯಾಂಕಿನಲ್ಲಿ ಉದ್ಯೋಗ ಸಂಪಾದಿಸಿದ್ದಲ್ಲದೆ ವಕೀಲನೂ ಆಗುತ್ತಾನೆ. ಪರಂಪರೆಯಿಂದ ಬಂದ ಮೊಗವೀರರ ವೃತ್ತಿ ತ್ಯಜಿಸಿ ಬೇರೊಂದು ಉದ್ಯೋಗ ಕಂಡುಕೊಳ್ಳಬಹುದಾದ ಮನಸ್ಥಿತಿ ಆಗಲೇ ರೂಪಿತವಾಗಿತ್ತು. ವಿದ್ಯೆ ಎಲ್ಲಾ ವರ್ಗದವರಿಗೆ ಹೊಸ ಜೀವನದ ದಾರಿದೀಪವಾಗಿತ್ತು. ತನ್ನ ಉನ್ನತಿಗೆ ಶ್ರಮ ಮತ್ತು ಸಮಯವನ್ನು ಬಂಡವಾಳವನ್ನಾಗಿಸಿ ಉತ್ತಮ ಜೀವನ ಮಾರ್ಗ ರೂಪಿಸಿಕೊಳ್ಳುವ ಚಿಂತನೆಯನ್ನು ಗುರುತಿಸಬಹುದು.

ಕರಾವಳಿ ಕಾದಂಬರಿಯ ಸಂಜೀವ ಮುಂಬೈಗೆ ತೆರಳಿ ಉದ್ಯೋಗ ಮಾಡುತ್ತಾ ಕಲಿತು ಉನ್ನತ ಸ್ಥಾನಮಾನವನ್ನು ಗಳಿಸುತ್ತಾನೆ. ತನ್ನ ಮೊಗವೀರ ವೃತ್ತಿಯನ್ನು ಬಿಟ್ಟು ಮುಂಬೈಯಲ್ಲಿ ಹೊಸ ಬದುಕು ರೂಪಿಸಿಕೊಳ್ಳುತ್ತಾನೆ.

ನಗರಗಳಿಗೆ ಆರ್ಥಿಕ ಕಾರಣಗಳಿಂದ ಉಂಟಾದ ವಲಸೆಯಿಂದ ಉನ್ನತ ಶಿಕ್ಷಣ ಪಡೆಯಲು ಸೂಕ್ತ ಅವಕಾಶಗಳು ಲಭ್ಯವಾದವು. ಶಿಕ್ಷಣ ಪಡೆಯಲು ನಿದ್ರೆ, ಸುಖ ತ್ಯಾಗ ಮಾಡಿ ಹೊಸ ಮಜಲನ್ನು ಮುಟ್ಟಿ ತಮ್ಮ ಜಾತಿಯ ಕುಲಕಸುಬಿನಿಂದ ಭಿನ್ನವಾದ ಮಾರ್ಗ ಹಿಡಿದದ್ದು ದೊಡ್ಡ ಪಲ್ಲಟವೆನಿಸಿದೆ. ಸಾಂಪ್ರದಾಯಿಕ ಬದುಕಿನಿಂದ ಭಿನ್ನವಾಗಿ ಆಲೋಚಿಸಲು ವಲಸೆ ಪ್ರೇರಣೆಯಾಯಿತು. ಉತ್ತಮ ಅವಕಾಶ, ಉದ್ಯೋಗ, ವಿಭಿನ್ನ ಅನುಭವಗಳು, ತುಳುನಾಡಿನಲ್ಲಿ ಗೌರವ ಶೈಕ್ಷಣಿಕ ವಲಸೆಯಿಂದ ಸಾಧ್ಯವಾಯಿತು.

೨. ಔದ್ಯೋಗಿಕ ವಲಸೆ

ಉದ್ಯೋಗನಿಮಿತ್ತ ತುಳುನಾಡಿನಿಂದ ಅನ್ಯಪ್ರದೇಶಗಳಿಗೆ ಉತ್ತಮ ಅವಕಾಶಗಳನ್ನು ಅರಸುತ್ತಾ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುವುದೇ ಔದ್ಯೋಗಿಕ ವಲಸೆ. ಔದ್ಯೋಗಿಕ ವಲಸೆಯು ತಾತ್ಕಾಲಿಕವಾಗಿರಬಹುದು. ಕೆಲವು ತಿಂಗಳುಗಳಿಂದ ಕೆಲವು ವರ್ಷಗಳು ಇಲ್ಲವೆ ಕುಟುಂಬ

ಸಮೇತ ಖಾಯಂ ವಲಸೆಯೂ ಆಗಿರಬಹುದು. ಶಿಕ್ಷಣ ಹಾಗೂ ಕೃಷಿ ಕಾರ್ಯಗಳ ಮೇಲಿನ ಸಮಸ್ಯೆಯು ವಲಸೆಗೆ ಪ್ರೋತ್ಸಾಹವನ್ನು ನೀಡುತ್ತದೆ. ಪೇಟೆ ಹಲವು ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ.

'ಚೋಮನ ದುಡಿ' ಕಾದಂಬರಿ ಕೆಳವರ್ಗದವರ ವಲಸೆಯ ಒಂದು ಮುಖವನ್ನು ವಿವರಿಸುತ್ತದೆ. "೨೦ನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ಜಿಲ್ಲೆಯ ಜನರು ಪಶ್ಚಿಮ ಘಟ್ಟಗಳ ಕಾಫಿ, ರಬ್ಬರ್ ತೋಟಗಳಿಗೆ ಕೂಲಿಕಾರರಾಗಿ, ಕೂಲಿಯಾಳುಗಳನ್ನು ಒದಗಿಸುವ ಸೇರೆಗಾರರಾಗಿ ಹೋಗುತ್ತಿದ್ದರು."[7] ತುಳುನಾಡಿನಲ್ಲಿ ತನ್ನ ಮನೆ, ಊರು ಬಿಟ್ಟು ದೂರ ಹೋಗುವುದು ಆರ್ಥಿಕತೆಯನ್ನು ಬಲಪಡಿಸಲು ಎಂಬುದು ಸ್ಪಷ್ಟ. ಆರಂಭದಲ್ಲಿ ಘಟ್ಟದ ಮೇಲೆ ಕಾಫಿ ತೋಟಗಳಲ್ಲಿ ಕೂಲಿಯಾಳುಗಳಾಗಿ ವಲಸೆ ಹೋಗುವುದನ್ನು ಕಾಣಬಹುದು. ಅಲ್ಲಿ ಸೇರಿದ ಮೇಲೆ ಹಲವು ಕಾರಣಗಳಿಂದ ತಾವು ಬಂದ ಉದ್ದೇಶ ಮರೆಯುವುದು ಸಂಭವಿಸುತ್ತದೆ. ಅಲ್ಲಿನ ಚಳಿ, ಮನೆಯ ಸ್ಮೃತಿ, ಮನೋರಂಜನೆ ಇಲ್ಲದ ದುಡಿತ, ಜ್ವರ ನಿಧಾನವಾಗಿ ಉದ್ದೇಶ ಮರೆಯಲು ಕಾರಣವಾಗುತ್ತವೆ. 'ಚೋಮನ ದುಡಿ' ಕಾದಂಬರಿಯಲ್ಲಿ ವಲಸಿಗರ ಮೇಲಿನ ಶೋಷಣೆ, ಸೌಲಭ್ಯಗಳ ಕೊರತೆ, ಪ್ರತಿಕೂಲ ಹವಾಮಾನ, ಸಂದರ್ಭಗಳಿಗೆ ಹೊಂದಾಣಿಕೆ ಮಾಡಬೇಕಾದ ಅನಿವಾರ್ಯತೆ ಉದ್ದೇಶ ಈಡೇರುವಲ್ಲಿ ವಿಫಲವಾಗುತ್ತದೆ. ತುಳುನಾಡಿನಿಂದ ಸುಭದ್ರ ಬದುಕನ್ನು ಕಟ್ಟಿಕೊಳ್ಳುವ ಆಸೆಯಿಂದ ಘಟ್ಟಕ್ಕೆ ತೆರಳುವ ಇಲ್ಲಿನ ಕೆಳವರ್ಗದವರು ಉಳ್ಳವರು ಹೆಣೆದ ಬಲೆಗೆ ಸುಲಭವಾಗಿ ಬೀಳುತ್ತಾರೆ. ಬಡವ, ಅಸಹಾಯಕ, ಸಾಮಾಜಿಕವಾಗಿ ಹಿಂದುಳಿದವನನ್ನು ಬಲೆಗೆ ಬೀಳಿಸುವ ಸುಲಭ ವ್ಯವಸ್ಥೆಯೇ ಇಲ್ಲಿದೆ. ಹೆಂಡ ಹಾಗೂ ಸಾಲ ಇವೆರಡರಿಂದ ದಾಸ್ಯ ಜೀವನ ಎಂದಿಗೂ ಮುಕ್ತಿಯಾಗದು. ಸಾಲ ಮುಕ್ತಿಯಾಗದೆ ಅದರಿಂದ ಪಾರಾಗುವುದು ಸುಲಭಸಾಧ್ಯವಿಲ್ಲ. ಚೋಮನ ಬದುಕಿನ ದುರಂತಗಳ ಸರಮಾಲೆಗಳಿಗೆ ಕುಡಿತದ ಜೊತೆಗೆ ಘಟ್ಟದ ಮೇಲಿನ ವಲಸೆಯೇ ಪ್ರಮುಖ ಕಾರಣ. ಚೋಮ ಆ ಘಟನೆ ಮರೆತುಬಿಟ್ಟರೂ, ಆತನ ಬದುಕಿನಲ್ಲಿ ಹಲವು ಪರಿಣಾಮಗಳು ಉಂಟಾಗಲು ಹಾಗೂ ದುರಂತಕ್ಕೆ ಕಾರಣವಾಗುತ್ತವೆ. ಚೋಮನಿಗೆ ತಾನು ಸಾಲಗಾರನಲ್ಲವೆಂಬ ಅಭಿಮಾನವಿತ್ತು. ಆದರೆ ಚೋಮ ವಲಸೆಯಿಂದ ಸಾಲಗಾರನಾಗುತ್ತಾನೆ. ಉಳ್ಳವರು ಬಡವರ ಮೇಲೆ ಎಸಗುವ ಶೋಷಣೆಯನ್ನು ಇದು ಚಿತ್ರಿಸುತ್ತದೆ. ಚೋಮನ ಮಗ ಗುರುವನ ಪಲಾಯನ, ಅನ್ಯಜಾತಿಯವರೊಂದಿಗೆ ವಿವಾಹ, ಬೆಳ್ಳಿಯ ಬದುಕಿನ ದುರಂತ, ಚೋಮನ ಸಾವು ಸಂಭವಿಸಲು ವಲಸೆ ಪರೋಕ್ಷವಾಗಿ ಕಾರಣವಾಗುತ್ತದೆ. ಘಟ್ಟಕ್ಕೆ ತೆರಳಿದ ಚೋಮ ಸಾಲಗಾರನಾಗಿ ಹಿಂದಿರುಗುವುದು ಹಾಗೂ ಮರೆತುಬಿಡುವುದು ಆತನಲ್ಲಿರುವ ಎಚ್ಚರದ ಕೊರತೆಯನ್ನು ಸೂಚಿಸುತ್ತದೆ. ಈ ಪ್ರಜ್ಞಾಶೂನ್ಯತೆ ಆತನ ಕುಟುಂಬದ ಮೇಲಿನ ದುರಂತಗಳ ಸರಮಾಲೆಗೆ ಸಾಕ್ಷಿಯಾಗುತ್ತದೆ. ಚೋಮನ ಸಾಲ ತೀರಿಸಲು ಹೊರಟ ಗುರುವ ಚನಿಯರಿಗೆ ಘಟ್ಟಕ್ಕೆ ತೆರಳುವುದು ಆಕರ್ಷಕವಾಗಿದೆ. ಇಲ್ಲಿನ ಎರಡು ಪಾವು ಭತ್ತಕ್ಕಿಂತ ಸಿಗುವ ೮–೧೦ ರೂಪಾಯಿ ವಲಸೆಗೆ ತೆರಳಲು ಪ್ರೇರೇಪಿಸುತ್ತದೆ. ಘಟ್ಟಕ್ಕೆ ನಡೆದು ಸಾಗಬೇಕಾದ ನಿರಂತರ ಪಯಣ ಹಾಗೂ ಮೊಮ್ಮನೆಂಬ ಮುದುಕನ ಮೊಮ್ಮಗಳ ಸಾವು ಕಂಗೆಡಿಸುತ್ತದೆ. ಮಗ ಚನಿಯ, ಗುರುವ ದುಡಿದರೂ ಹೆಂಡದ ದಾಸರಾಗಿ ಮತ್ತೆ ಹೆಚ್ಚಳವಾಗುವ ಸಾಲ, ಗುರುವನ ಪಲಾಯನ, ಚನಿಯನ ಸಾವು ಹೀಗೆ ಆಕಸ್ಮಿಕವಾಗಿ

ನಡೆಯುವ ಬದುಕಿನ ನಿಗೂಢತೆ ಸಮಸ್ಯೆಯನ್ನು ಜಟಿಲಗೊಳಿಸುತ್ತದೆ. ಶಿಕ್ಷಣ, ತಿಳುವಳಿಕೆಯ ಕೊರತೆ, ಬಡತನ, ತಿರಸ್ಕಾರ, ಇವುಗಳಿಂದ ನ್ಯಾಯ ಅನ್ಯಾಯಗಳ ಪ್ರಶ್ನೆಯೂ ಇವರಲ್ಲಿ ಏಳದು. ಗುರುವ ಚನಿಯನ ನಂತರ ಘಟ್ಟಕ್ಕೆ ಹೋಗಲೇಬೇಕಾದ ಬೆಳ್ಳಿ ಹೆಣ್ಣಾದ ಕಾರಣ ಹಲವು ಸೌಲಭ್ಯಗಳನ್ನು ಅನಾಯಾಸವಾಗಿ ಪಡೆಯುತ್ತಾಳೆ. ಇದರಿಂದಲೇ ಆಕೆಗೆ ಅರಿವಾಗುವ ಮೊದಲೇ ಸೇರೆಗಾರನ ಕಾಮದ ದಾಸಿಯಾಗುತ್ತಾಳೆ. ಮಿಂಗೇಲ ದೊರೆಗಳ ದಾಳಿಗೂ ತುತ್ತಾಗಿ ತಲ್ಲಣಗೊಂಡು ಅಲ್ಲಿಂದ ಪಲಾಯನಗೈಯುತ್ತಾ ಆ ಸಂದರ್ಭದಿಂದ ಪಾರಾದರೂ ಸಾಲ ತೀರಿಸಿದ ತೃಪ್ತಿ ತಂದೆಯ ಮನದಲ್ಲಿ ಮೂಡಲು ಕಾರಣೀಭೂತಳಾಗುತ್ತಾಳೆ. ಬೆಳ್ಳಿಯಲ್ಲಿ ದುಡಿಯುವ ಛಲ, ಮುಂದಾಲೋಚನೆ ಇದ್ದರೂ, ಆಕೆ ದಲಿತ ವರ್ಗಕ್ಕೆ ಸೇರಿದವಳು. ಆಕೆಯ ಅಸಹಾಯಕತೆ, ಆರ್ಥಿಕ ದುಸ್ಥಿತಿ, ಚೋಮನ ವ್ಯಕ್ತಿತ್ವದ ಹಲವು ಮಿತಿಗಳು ಅವಳನ್ನು ಬಲಿಪಶುವನ್ನಾಗಿ ಮಾಡುತ್ತವೆ. ಇಂತಹ ವಿಷವರ್ತುಲದಲ್ಲಿ ಒಮ್ಮೆ ಸಿಲುಕಿದರೆ ಹೊರಬರುವುದು ಕಷ್ಟ ಎನ್ನುವ ವಾಸ್ತವ ಸತ್ಯ ತಿಳಿಯುತ್ತದೆ. ತುಳುನಾಡಿನಿಂದ ವಲಸೆ ಹೋದ ಜನರಲ್ಲಿ ಬದುಕಿಗೆ ಲಾಭವಾಗಬಹುದೆಂಬ ಆಸೆ ತೀವ್ರವಾಗಿದೆ. ಸೇರೆಗಾರರು, ಮಿಂಗೇಲ ಪ್ರಭುಗಳು ತಮ್ಮ ಲಾಭದ ಮೇಲೆ ಆಸೆ ಇರಿಸಿಕೊಂಡವರು. ಕೆಳವರ್ಗದವರ ನೋವು, ನಲಿವು ಅವರಿಗೆ ಮುಖ್ಯವೆನಿಸಲಿಲ್ಲ. ತೀವ್ರ ಚಳಿಯ, ಜ್ವರದ ಪ್ರತಿಕೂಲ ಪರಿಸ್ಥಿತಿಯು ವಲಸಿಗರನ್ನು ಕಂಗೆಡಿಸುತ್ತದೆ. ದುಡಿಮೆಗಾಗಿ ತೆರಳುವ ಜನರ ಮೇಲಿನ ಕ್ರೌರ್ಯ ಹಾಗೂ ಅವರು ಎದುರಿಸುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಕಾಫಿ ತೋಟದ ವಲಸೆ ಆಕರ್ಷಕವಾಗಿಲ್ಲ. ಆದರೆ ಮುಗಿಯದ ಸಾಲ ಮಿಂಗೇಲ ಪ್ರಭುಗಳಿಗೆ ಕೂಲಿಯಾಳುಗಳನ್ನು ಕಮ್ಮಿ ಹಣಕ್ಕೆ ಒದಗಿಸುತ್ತಿತ್ತು. ಸಾಲದ ವಿಷವರ್ತುಲದಲ್ಲಿ ಒಮ್ಮೆ ಸಿಕ್ಕವರು ಪಾರಾಗುವ ಪ್ರಶ್ನೆಯೇ ಇರಲಿಲ್ಲ. ಹೆಂಡ ಮತ್ತು ಅಲ್ಲಿನ ಪ್ರತಿಕೂಲ ವಾತಾವರಣ ಅವರ ಯಶಸ್ಸಿಗೆ ಮಾರಕವಾಗಿತ್ತು. ಅಲಕ್ಷಿತರಾದ ಅವರಿಗೆ ಆರೋಗ್ಯದ ಕನಿಷ್ಠ ತಿಳುವಳಿಕೆಯೂ ಇರದೆ ಹೋದುದು ಗಮನಿಸಬೇಕಾದ ಅಂಶ. ಅನಾರೋಗ್ಯ ಕಾಡಿದಾಗ ಮಂತ್ರವಾದಕ್ಕೆ ಮೊರೆಹೋಗುವುದರಿಂದ ಸಾವು ಹಾಗೂ ಆರ್ಥಿಕ ನಷ್ಟ ಸಂಭವಿಸುತ್ತಿತ್ತು. ತಿಳಿಹೇಳುವವರು ಇಲ್ಲದೆ ಗೆಲ್ಲಲು ಸಾಧ್ಯವಿರಲಿಲ್ಲ. ರಜೆಯಲ್ಲಿ ಘಟ್ಟದಿಂದ ಹಿಂದಿರುಗುವಾಗ ಮೋಟಾರು ವಾಹನವನ್ನು ಬಳಸುವುದು, ಬೆಳ್ಳಿ ದುಡಿದ ಹಣದಿಂದ ಚೋಮ ಕುಡಿಯುವುದು ಉಳಿತಾಯ ಪ್ರಜ್ಞೆ ಇಲ್ಲದಿರುವುದನ್ನು ಸೂಚಿಸುತ್ತದೆ. ಕೈಯಲ್ಲಿ ಕಾಸಿದ್ದಾಗ ವಿಪರೀತ ಖರ್ಚು ಮಾಡಿ, ಇಲ್ಲದಿದ್ದಾಗ ಹಸಿದು ಮಲಗುವ ಪ್ರವೃತ್ತಿ ಬದುಕು ನಿರಂತರ ಹೋರಾಟವನ್ನಾಗಿಸುತ್ತದೆ. ಬೆಳ್ಳಿ ಸೇರಿದಂತೆ ಮಹಿಳೆಯರ ಮುಂಜಾಗ್ರತೆಯೂ ಕುಡುಕ ಗಂಡಸರಿಂದ ಯಶಸ್ವಿಯಾಗದೆ ಹೋಗುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಶೀನಮಯ್ಯನ ಮಕ್ಕಳು ಹೋಟೆಲಿನಲ್ಲಿ ಕೆಲಸ ಮಾಡಲು ಬೆಂಗಳೂರಿಗೆ ತೆರಳುವ ಚಿತ್ರಣವಿದೆ. ಆರಂಭದಲ್ಲಿ ಹಿರಿಯ ಮಗನನ್ನು ಹೋಟೆಲಿಗೆ ಕೆಲಸಕ್ಕೆ ಕಳುಹಿಸಿದ ಶೀನಮಯ್ಯ ಮಗನಿಂದ ದುಡ್ಡು ಪಡೆಯುತ್ತಾನೆ. ಇದರಲ್ಲಿ ಲಾಭವಿದೆ ಎಂದು ಅರಿತವನು ಸಾಲುಸಾಲಾಗಿ ತನ್ನ ನಾಲ್ಕು ಗಂಡು ಮಕ್ಕಳನ್ನು ಹೋಟೆಲಿನ ಕೆಲಸಕ್ಕೆ ಹಚ್ಚುತ್ತಾನೆ. ಹೋಟೆಲಿನ ಉದ್ಯಮದಿಂದ ಆರ್ಥಿಕ ಬಲ ಬಂದ ಹಾಗೂ ಉದ್ಯಮದ ಒಳಹೊರಗನ್ನು ಅರಿತ ನರಸಿಂಹ ಸ್ವಂತ ಹೋಟೆಲನ್ನು ತೆರೆಯುತ್ತಾನೆ. ಶೀನಮಯ್ಯನಿಗೆ

ಸಾಲುಸಾಲಾಗಿ ಎಂಟು ಗಂಡುಮಕ್ಕಳು. ಊರಿನಲ್ಲೇ ಇವರೆಲ್ಲಾ ಬೆಳೆದರೆ ಆತನಿಗೆ ಗೇಣಿಗೆ ಇದ್ದ ೮ ಮುಡಿ ಗದ್ದೆಗಳೆಲ್ಲಾ ಪಾಲಾಗಿ ಯಾರಿಗೂ ಸರಿಯಾಗಿ ದುಡಿಯಲು ಪಾಲು ಸಿಗದು ಎಂಬ ಸತ್ಯ ಅರಿವಾಗಿರುತ್ತದೆ. ಆದ್ದರಿಂದ ಶೀನಮಯ್ಯ ತನ್ನ ಯೋಚನೆಗಳಲ್ಲಿ ಪಲ್ಲಟ ಮಾಡಿ ಹೋಟೆಲ್ ಉದ್ಯಮಕ್ಕೆ ಮಕ್ಕಳನ್ನು ಕಳುಹಿಸುವ ಯೋಚನೆಗೆ ತೊಡಗುತ್ತಾನೆ.

'ಐತಾಳರೇ, ಹೇರ್ಳೆಯವರ ಹೋಟೆಲು ಬೆಂಗಳೂರಿಗೇನೆ ತೀರ ಹೆಸರಾದ ಹೋಟೆಲು. ತಿರುಪತಿಗೆ ಹೋದವರು, ಅಲ್ಲಿ ಹೊಕ್ಕು ಬಂದವರು ಹೇಳುತ್ತಾರೆ. ಬೆಂಗಳೂರು ಸಿಟಿಯಲ್ಲೇ ಅಂಥಾ ಮರ್ಯಾದೆಯಂತೆ-ಅವರಿಗೆ. ಅಲ್ಲದೆ ಅಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟವಂತೆ! ನೀವೇ ಹೇಳಿ-ಮನೆಯಲ್ಲಿ ಕುಳಿತರೆ, ಹೊಟ್ಟೆ ತುಂಬೀತೆ? ಬರೀ ಎಂಟು ಮುಡಿ ಗದ್ದೆ ಇರುವುದು ನನಗೆ. ಅದರಲ್ಲಿ ಬೆಳೆದರೆ ಏನು ಬಂದೀತು? ನಾನು ಕಣ್ಮುಚ್ಚಿ, ಮನೆ ಪಾಲಾದರೆ ಬರುವುದೆಷ್ಟು? ತಲಾ ಒಂದರ ಎರಡು ಮುಡಿ ಗದ್ದೆ. ನಾಳೆ ನಾನು ಕಣ್ಮುಚ್ಚಿದರೆ ಅದರಿಂದ ಅವುಗಳು ಏನು ಜೀವನ ಮಾಡಿಯಾವು!...'(ಮರಳಿ ಮಣ್ಣಿಗೆ, ಪುಟ ೯೫)

ಶೀನಮಯ್ಯ ಸೀಮಿತ ಪ್ರದೇಶದಲ್ಲಿ ವಾಸಿಸುತ್ತಿದ್ದರೂ ನಾಕೂರುಗಳಲ್ಲಿ ಆಗುತ್ತಿರುವ ಬದಲಾವಣೆ, ಆಲೋಚನಾ ಸ್ಥಿತ್ಯಂತರಗಳು ಆತನ ಗಮನಕ್ಕೆ ಬಂದಿದ್ದ ಕಾರಣ ಆತ ಮಹತ್ವದ ನಿರ್ಧಾರ ಕೈಗೊಳ್ಳುವುದು ಸಾಧ್ಯವಾಯಿತು. ಅಕ್ಕಿ ಮಾರಬಹುದಾದರೆ ಅನ್ನ ಏಕೆ ಮಾರಬಾರದು? ಎಂಬ ಪ್ರಶ್ನೆ ಎದುರಿಸಿದಾಗ ಹೊಸ ಜೀವನಮಾರ್ಗ ಗೋಚರಿಸುತ್ತದೆ. ವಲಸೆಗೆ ಮುಖ್ಯ ಕಾರಣ ಆರ್ಥಿಕತೆ. ಆರ್ಥಿಕತೆಯ ಹೆಚ್ಚಳ ಅದರಿಂದ ಲಭ್ಯವಾಗುವ ಸೌಖ್ಯ, ಸಮೃದ್ಧಿ, ಸ್ಥಾನಮಾನ ಇವೆಲ್ಲಕ್ಕಾಗಿ ಮನುಷ್ಯ ವಲಸೆ ಹೋಗುತ್ತಾನೆ. ನಿಷ್ಠೆಯಿಂದ ದುಡಿದ ಶೀನಮಯ್ಯನ ಮಕ್ಕಳು ಲಾಭ ಮಾಡುತ್ತಾ, ಹೋಟೆಲುಗಳ ಸಂಖ್ಯೆಯನ್ನು ವೃದ್ಧಿಸುತ್ತಾರೆ.

ವಲಸೆಯಿಂದ ಬಂದ ಲಾಭಾಂಶದಿಂದ ಊರಿನಲ್ಲಿ ಆಸ್ತಿ ಖರೀದಿಸಿ, ಇನ್ನೂ ಶ್ರೀಮಂತನಾಗುವ ನರಸಿಂಹನನ್ನು ಕಾಣಬಹುದು. ದುಡಿದ ಲಾಭವನ್ನು ಮತ್ತೆ ಬಂಡವಾಳ ಹೂಡಿ ಮರುಲಾಭ ಗಳಿಸುವ ಚಿಂತನೆ ಆರ್ಥಿಕತೆಯ ಹೆಚ್ಚಳದಲ್ಲಿ ಮಹತ್ವದ್ದಾಗುತ್ತದೆ. ಶೀನಮಯ್ಯ ಬಡ್ಡಿಗೆ ಹಣ ನೀಡಿ, ಗುರಿಕಾರರಿಂದ ಬಡ್ಡಿಯ ಹಣ ಖೋತವಾದಾಗ ಮಗನ ತೀರ್ಮಾನದಂತೆ ಆಸ್ತಿ ಖರೀದಿಸುವ ವಿಚಾರಕ್ಕೆ ಕೈಹಾಕುತ್ತಾನೆ.

ಲಚ್ಚನು ಇಂಗ್ಲಿಷ್ ವಿದ್ಯಾಭ್ಯಾಸ ಪಡೆದು ಬಳ್ಳಾರಿಯ ಮಣೆಗಾರನಾದುದರಿಂದ ಊರಿನಿಂದ ದೂರ ಸಾಗಬೇಕಾಗುತ್ತದೆ. ಅಲ್ಲಿಂದ ಕೇರಳಕ್ಕೆ ಅಬಕಾರಿ ಇಲಾಖೆಯಲ್ಲಿ ಇನ್ಸ್‌ಪೆಕ್ಟರನಾಗಿ ಕೆಲಸಕ್ಕೆ ಸೇರುತ್ತಾನೆ. ಲಚ್ಚನು ಉತ್ತಮ ವಿದ್ಯೆ, ಉದ್ಯೋಗ ಗಳಿಸಿದರೂ ಸ್ವನಿಯಂತ್ರಣವಿಲ್ಲದೆ ದುರಂತಮಯ ಜೀವನಕ್ಕೆ ಎದುರುಗೊಳ್ಳುತ್ತಾನೆ. ಆತನ ದುಂದುಗಾರಿಕೆ, ಸ್ತ್ರೀ ವ್ಯಾಮೋಹ ಆತನ ಬದುಕನ್ನು ಉತ್ತಮಗೊಳಿಸುವಲ್ಲಿ ಸೋಲುತ್ತದೆ. ಸಾಲಗಾರನಾಗುತ್ತಾ, ಕುಟುಂಬ ಪ್ರೇಮವೂ ಆತನಿಗೆ ಇಲ್ಲದೆ ಅವರನ್ನು ಅನಾಥರನ್ನಾಗಿ ಮಾಡುತ್ತಾ ಸ್ವಾರ್ಥಿಮನುಷ್ಯನಾಗಿ ಚಿತ್ರಿತನಾಗಿದ್ದಾನೆ. ಹೋಟೆಲ್ ಉದ್ಯಮಕ್ಕೆ ಕೈಹಾಕಿದರೂ ಅಲ್ಲಿಯೂ ಸದಾ ಜುಗಾರಿ, ಇಸ್ಪೀಟ್ ಆಟದಲ್ಲೇ ಮಗ್ನನಾಗುತ್ತಾ, ಶೋಕಿ ಜೀವನ ನಡೆಸುತ್ತಾ ತನ್ನ ಬದುಕನ್ನು ಹಾಳುಮಾಡುತ್ತಾನೆ.

ರಾಮ ಉದ್ಯೋಗ ಲಭಿಸದೆ ಬೆಂಗಳೂರಿನ ನರಸಿಂಹ ಮಯ್ಯನ ತಮ್ಮನ ಹೋಟೆಲಿನಲ್ಲಿ ದುಡಿಯುತ್ತಾನೆ. ಅಲ್ಲಿಯ ವಿಪರೀತ ಕೆಲಸದ ಒತ್ತಡ, ಕಡಿಮೆ ಸಂಬಳ ಆತನ ಜೀವನವನ್ನು ಸುಖಿಯಾಗಿಸುವುದಿಲ್ಲ. ಆದರೆ ದುಡಿಯದೆ ಅನ್ಯಮಾರ್ಗವಿಲ್ಲದೆ ಆತ ದುಡಿಯುತ್ತಾನೆ. ಅಲ್ಲಿಂದ ಮುಂಬಯಿ ವಲಸೆಗೂ ತೆರಳುತ್ತಾನೆ. ಅಲ್ಲಿಯೂ ಕೆಲಸ ಲಭ್ಯವಾಗದೆ ಊರಿಗೆ ಮರಳುತ್ತಾನೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ರಾಮನ ಔದ್ಯೋಗಿಕ ವಲಸೆ ದಾಖಲಾಗಿದೆ. ಆತನು ಬೆಂಗಳೂರು, ಮೈಸೂರು, ಮುಂಬೈಗೆ ಉದ್ಯೋಗಕ್ಕಾಗಿ ತೆರಳಿರುತ್ತಾನೆ. ಮೊದಲಿಗೆ ರಾಮನು ಉದ್ಯೋಗಕ್ಕಾಗಿ ಆಯ್ದುಕೊಂಡದ್ದು ಬೆಂಗಳೂರು ನಗರ. ಎರಡನೇ ಮಹಾಯುದ್ಧದ ಸಂದರ್ಭದ ಆ ಕಾಲಘಟ್ಟದಲ್ಲಿ ಉದ್ಯೋಗದ ತೀವ್ರ ಅಲಭ್ಯತೆ, ವಿಪರೀತ ದುಡಿತ ಮೊದಲಾದವುಗಳನ್ನು ಗಮನಿಸಬಹುದು. ರಾಮ ವಿದ್ಯಾಭ್ಯಾಸ ಗಳಿಸಿದ್ದರೂ ಅನಿವಾರ್ಯವಾಗಿ ಹೋಟೆಲ್ ಉದ್ಯಮದಲ್ಲಿ ಕ್ಯಾಷಿಯರ್ ಆಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ವಿಪರೀತ ದುಡಿತ, ಕಡಿಮೆ ವಿಶ್ರಾಂತಿ ರಾಮನನ್ನು ಹೈರಾಣಾಗಿಸುತ್ತದೆ. ದಿನಕ್ಕೆ ೧೬ ಗಂಟೆಗಳ ದುಡಿತ ಜೊತೆಗೆ ಮಾಲೀಕರ ಅಪನಂಬಿಕೆ ರಾಮನನ್ನು ಬೇರೆಡೆ ಉದ್ಯೋಗ ಗಿಟ್ಟಿಸಲು ಪ್ರೇರೇಪಿಸುತ್ತದೆ. ಆದರೆ ಭಯ ಬೇರೆ. ಎರಡನೇ ಮಹಾಯುದ್ಧ ಕಾಲದ ತೀವ್ರ ಆರ್ಥಿಕ ಕುಸಿತದ ಸ್ಥಿತಿ ಹಾಗೂ ಸ್ವಾತಂತ್ರ್ಯಹೋರಾಟದ ಸಂದರ್ಭದಲ್ಲಿ ಉಂಟಾದ ಹಣಕಾಸಿನ ಮುಗ್ಗಟ್ಟು, ಬಡತನದ ಪರಿಸ್ಥಿತಿಯಿಂದ ಅನ್ಯ ಉದ್ಯೋಗ ಸಾಧ್ಯತೆ ಹಾಗೂ ಸೂಕ್ತ ಶಿಕ್ಷಣಕ್ಕೆ ಸೂಕ್ತ ಉದ್ಯೋಗ ದುರ್ಲಭವಾಯಿತು. ಆದ್ದರಿಂದ ಅನಿವಾರ್ಯವಾಗಿ ರಾಮ ಹೋಟೆಲಿನಲ್ಲಿ ದುಡಿಯುವುದು ಅನಿವಾರ್ಯವಾಯಿತು. ನರಸಿಂಹ ಮಯ್ಯ ಹೆಚ್ಚು ಓದಿಲ್ಲ. ಆದರೆ ರಾಮ ಬಿ.ಎ. ಓದಿಯೂ ಜೀತದ ಆಳಿನಂತೆ ದುಡಿಯಬೇಕಾಗಿ ಬರುವುದು ವಿಪರ್ಯಾಸ. ಹಣವು ಹಣವನ್ನು ದುಡಿಯುತ್ತದೆ ಎಂಬ ಸತ್ಯವು ಇಲ್ಲಿದೆ. ನರಸಿಂಹ ಮಯ್ಯ ಸಾಲು ಸಾಲು ಹೋಟೆಲುಗಳನ್ನು ಇಡುವುದು ಆತನ ಶಿಸ್ತು, ಸಂಯಮ, ವ್ಯವಹಾರ ಚತುರತೆಯನ್ನು ಗಮನಿಸಬಹುದು. ಸಣ್ಣ ಪ್ರಾಯದಲ್ಲಿ ಬೆಂಗಳೂರು ಸೇರಿ ದುಡಿದು ಬದುಕುವ ಆತನ ಆರ್ಥಿಕ ಶಿಸ್ತಿನ ಮುಂದೆ ಶಿಕ್ಷಣ ಪಡೆದ ಲಚ್ಚ ನಿಷ್ಪ್ರಯೋಜಕ ಅನಿಸುತ್ತದೆ.

ರಾಮನ ಮುಂಬಯಿ ವಲಸೆ ಬಹುಯೋಜಿತ ಹಾಗೂ ಕನಸಿನ ಸಂಗತಿಯಾಗಿದ್ದರೂ ಆತನ ಬದುಕಿನಲ್ಲಿ ಆರ್ಥಿಕ ಶಕ್ತಿಯನ್ನು ತುಂಬಿಸುವಲ್ಲಿ ಸಫಲವಾಗಲಿಲ್ಲ. ಎರಡನೇ ಮಹಾಯುದ್ಧದ ಆ ಕಾಲದಲ್ಲಿ ಕೆಲಸವಿಲ್ಲದ ನಿರಾಶದಾಯಕ ಪರಿಸ್ಥಿತಿ ಎಲ್ಲೆಡೆ ರಾರಾಜಿಸುತ್ತಿತ್ತು. ರಾಮ ಸಂಗೀತ ಮೇಷ್ಟ್ರಾಗಿ ಎರಡು ಮನೆಗಳಲ್ಲಿ ದುಡಿದ. ಮುಂಬಯಿ ಜೀವನ ತೀರಾ ದುಸ್ತರವಾಗಿತ್ತು. ಎರಡು ಕಡೆ ಸಂಗೀತ ಕಲಿಸಿ ಸ್ವಲ್ಪ ಹಣ ದೊರಕಿದರೂ ತುಂಬಾ ತ್ಯಾಗದ ಜೀವನ ನಡೆಸಬೇಕಿತ್ತು. ತಿಂಗಳಿಗೆ ೨೨ರೂ. ಸಂಪಾದನೆಯಲ್ಲಿ ಬದುಕು ಸಾಗಿಸುವ ಛಲ, ಅನಿವಾರ್ಯತೆ ಅವನಿಗಿತ್ತು.

ರಾಮನ ಮುಂಬಯಿ ವಲಸೆಯ ಉದ್ದೇಶ ಇನ್ನೂ ಸಂಪತ್ತನ್ನು ಗಳಿಸಿ ಇರುವುದಕ್ಕಿಂತ ಉತ್ತಮ ಜೀವನ ರೂಪಿಸುವುದು. ಅದಕ್ಕಾಗಿ ತನಗೆ ಅಷ್ಟು ಪರಿಚಿತವಲ್ಲದ ನಗರದಲ್ಲಿ ಬಾಳುವ ಸಾಹಸ ಕೈಗೊಳ್ಳುವುದು. ಪ್ರತಿಕೂಲ ಪರಿಸ್ಥಿತಿಗಳನ್ನು ಸಹಿಸಿ ಹಣ ಗಳಿಸುವ, ಜೀವನದ ಕನಿಷ್ಟ

ಅಗತ್ಯಗಳನ್ನು ಪೂರೈಸುವ ಏಕ ಉದ್ದೇಶದಿಂದ ಬಾಳುವುದು. ಎರಡನೆಯ ಮಹಾಯುದ್ಧದ ಕಾಲಘಟ್ಟ ಭಾರತೀಯರ ಜೀವನದ ಮೇಲೂ ತೀವ್ರ ಪರಿಣಾಮಗಳನ್ನು ತಂದೊಡ್ಡುತ್ತದೆ. ಪ್ರಪಂಚದಾದ್ಯಂತ ಸಂಭವಿಸಿದ ರಾಜಕೀಯ ವಿಪ್ಲವಗಳು ಭಾರತೀಯರ ಜೀವನದಲ್ಲೂ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದು. ಇದರಿಂದಾಗಿ ರಾಮ ಕಷ್ಟಪಡಬೇಕಾಗಿ ಬರುತ್ತದೆ. ಹೊಸ ಊರಿಗೆ ದಾರಿ ತೋರುವ ಒಬ್ಬನಾದರೂ ಗೆಳೆಯ ಬೇಕು. ಮಾಧವನ ಪರಿಚಿತ ಮಾರುತಿರಾಯನಿಂದಾಗಿ ಆರಂಭದ ಸಹಕಾರ ದೊರೆತು 'ಸ್ನೇಹಿತರ ಕೊಠಡಿ'ಯ ಪರಿಚಯವೂ ಆಯಿತು. ವಲಸೆಯು ಎದುರಾಗುವ ಪರಿಸ್ಥಿತಿಗಳಿಗೆ ಹೊಂದಾಣಿಕೆ ಮಾಡುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ರಾಮ ಪರಿಸ್ಥಿತಿಗಳನ್ನು ಅಂದಾಜು ಮಾಡುತ್ತಾ ಹೊಂದಾಣಿಕೆ ಮಾಡುವುದು ಅನಿವಾರ್ಯವಾಗುತ್ತದೆ. 'ಬೂಟು, ಪ್ಯಾಂಟು ಹಾಕಿ ಉಪವಾಸವಿರುವುದರಿಂದ ಹೆಚ್ಚಿನ ಗೌರವವೇ?(ಮರಳಿ ಮಣ್ಣಿಗೆ, ಪುಟ ೩೯೫) ಎಂಬ ಮಾತುಗಳು ಬಡತನದ ಚಿತ್ರಣ ನೀಡುತ್ತವೆ.

ಪರವೂರಿಗೆ ಹೋದಾಗ ರಾಮನಿಗೆ ಕೈಯಲ್ಲಿಯ ಹಣ ಖಾಲಿಯಾಗುತ್ತಾ ಬರುತ್ತದೆ. ನಗರದಲ್ಲಿ ಕೆಲಸ ಹುಡುಕಿ ಸಾಕಾದಾಗ ಅನಿವಾರ್ಯವಾಗಿ ಊರು ಸುತ್ತುವಾಗ ಜಾಹೀರಾತಿನಿಂದಾಗಿ ಸಂಗೀತ ಕಲಿಸುವ ಉದ್ಯೋಗ ಲಭಿಸುತ್ತದೆ. ಆರ್ಥಿಕ ಕ್ಷೀಣತೆ ಪರ್ಯಾಯ ಮಾರ್ಗ ಗಳಿಸುವಲ್ಲಿ ಪ್ರೇರಣೆಯಾಗುತ್ತದೆ. ರಾಮನಿಗೆ ಆತನ ಆಸಕ್ತಿಯ ಕ್ಷೇತ್ರವಾದ ಸಂಗೀತ ಜೀವನಕ್ಕೆ ಮಾರ್ಗವಾಗುವುದು ಜೊತೆಗೆ ಚಿತ್ರಕಲೆ ಕಲಿಕೆಗೆ ದಾರಿಯಾಗುವುದು ವಿಶೇಷ. ರಾಮನ ಒಡನಾಡಿಗಳಾದ 'ಗೆಳೆಯರ ಕೋಣೆಯ' ಸದಸ್ಯರು ಯುವಕರು. ಅವರ ಮಾತುಕತೆ, ನಿರಾಶೆ, ಆಶಾವಾದ ಎಲ್ಲವನ್ನು ಕಾದಂಬರಿ ವಿಶ್ಲೇಷಿಸುತ್ತದೆ. ಜೊತೆಗೆ ನಿರುದ್ಯೋಗ ಸಮಸ್ಯೆಯೂ ಕಾಡುತ್ತಿರುತ್ತದೆ. ಮುಂದೆ ಒಳ್ಳೆಯದಾಗಲಿದೆ ಎಂಬ ಆಶಾಭಾವ ಕೂಡಾ ಇದೆ. ತೀರಾ ಆರ್ಥಿಕ ಕುಸಿತದ ಆ ಕಾಲದಲ್ಲಿ ಕೆಲಸ ಸಿಗದೆ ಪರದಾಡುವ, ಕೆಲಸಕ್ಕಾಗಿ ಊರು ಅಲೆದಾಡುವ, ದುಃಖ, ಹತಾಶೆ, ನೋವು, ಅದರಲ್ಲೂ ಖುಷಿ ಎಲ್ಲವೂ ವ್ಯಕ್ತವಾಗಿದೆ. ಪರಿಸ್ಥಿತಿ ಹದಗೆಟ್ಟಿರುವಾಗ ನಗುವುದನ್ನು ಅವರು ಕಲಿತಿದ್ದಾರೆ. ಮುಂದಿನ ಭವಿಷ್ಯದ ಕುರಿತು ಆಶಾಜನಕ ಚಿಂತನೆ ಅವರಲ್ಲಿದೆ.

ತುಳುನಾಡಿನ ಕೇಂದ್ರವಾದ ಮಂಗಳೂರಿನ ಆಸುಪಾಸಿನಲ್ಲಿ ನಡೆಯುವ 'ಗಾಂಧಿ ಬಂದ' ಕಾದಂಬರಿಯ ಘಟನೆಗಳು ಇಲ್ಲಿನ ಚಿತ್ರಣವನ್ನೇ ನೀಡುತ್ತವೆ. ಔದ್ಯೋಗಿಕ ವಲಸೆ ತೀರಾ ಕಡಿಮೆ ಎನ್ನಬಹುದು. ನಾರ್ಣಭಟ್ಟರು ಕೇರಳದ ಕಡೆ ವಲಸೆ ಹೋಗುವ ಚಿತ್ರಣವಿದೆ. ವಾರಸುದಾರರಿಲ್ಲದ ನಾರ್ಣಭಟ್ಟರು ಹೆಂಡತಿ ಪುಟ್ಟಮ್ಮಕ್ಕ ಹಾಗೂ ಎರಡೆಕ್ರೆ ತೋಟವನ್ನು ಹೆಬ್ಬಾರರ ಸುಪರ್ದಿಗೆ ಒಪ್ಪಿಸಿ ಕೇರಳಕ್ಕೆ ಪ್ರಯಾಣಿಸುತ್ತಾರೆ. ಇದ್ದ ಎರಡೆಕ್ರೆ ಅಡಿಕೆ ತೋಟವನ್ನೇ ಚೆನ್ನಾಗಿ ನೋಡಿಕೊಂಡಿದ್ದರೆ ಇಬ್ಬರ ಜೀವನಕ್ಕೂ ಸಾಕಾಗುವಷ್ಟಾಗುತ್ತಿತ್ತು. ಇನ್ನಿತರ ಬ್ರಾಹ್ಮಣರ ಜೊತೆ ಕೇರಳದ ಕಡೆ ಪೌರೋಹಿತ್ಯಕ್ಕೆಂದು ತೆರಳಿರುತ್ತಾರೆ. ಹೆಂಡತಿಗೆ ಟಪ್ಪಾಲಿನಲ್ಲಿ ಹಣವನ್ನು ಕಳುಹಿಸುತ್ತಾರೆ.

ನಾ.ಮೊಗಸಾಲೆ ಅವರ 'ಉಲಂಘನೆ' ಕಾದಂಬರಿಯಲ್ಲಿ ವಲಸೆಯ ಭಿನ್ನ ಬಗೆ ಹಾಗೂ ಕಾಲಾಂತರದಲ್ಲಿ ಆದ ತೀವ್ರತೆಯನ್ನು ದಾಖಲಿಸುವ ಪ್ರಯತ್ನ ನಡೆದಿದೆ.

ಹೋಟೆಲ್ ಉದ್ಯಮದಲ್ಲಿ ಕೆಲಸ ಮಾಡಲು ಶಾಂತಕ್ಕೆ ಬಾಬುವನ್ನು ಮುಂಬೈಗೆ ಕಳುಹಿಸಿಬಿಡುತ್ತಾಳೆ. ಇದರ ಹಿಂದಿನ ಉದ್ದೇಶ ಒಂದೆ–ಧನಿ ಮಗ ಸಂಕಪ್ಪ ರೈ ಜೊತೆ ಗೇಣಿದಾರನ ಅಳಿಯ ಬಾಬು ಓದಬಾರದು; ಕೂರಬಾರದು ಎಂಬ ಸ್ವಾರ್ಥಪರ ಚಿಂತನೆ. ಇಲ್ಲಿ ಧಣಿ ಮಾತೇ ಅಂತಿಮ. ಗೇಣಿದಾರರಿಗೆ ಪಾಲಿಸದೇ ವಿಧಿಯಿಲ್ಲ. ಬಾಬು ಕೂಲಿಂಗ್ ಗ್ಲಾಸ್, ಉತ್ತಮ ಬಟ್ಟೆಯ ಕನಸು ಕಾಣುತ್ತಾ ಮುಂಬೈಗೆ ತೆರಳಲು ಉತ್ಸುಕನಾಗುತ್ತಾನೆ. ಬಾಬು ಹೋಟೆಲ್‌ನಲ್ಲಿ ಉದ್ಯೋಗ ಮಾಡುತ್ತಾ ಕಾರ್ಮಿಕ ಸಂಘಟನೆ ಮಾಡಿ ಕಾಮ್ರೇಡ್ ಬಾಬು ಆಗಿ ಮಾರ್ಪಾಡಾಗುತ್ತಾನೆ. ಪ್ರೌಢಶಾಲಾ ಹಂತದ ವಿದ್ಯಾಭಾಸ ಪೂರೈಸಿದ ಬಾಬು ಕ್ರಾಂತಿಕಾರಿಯಾಗುತ್ತಾನೆ. ಗುತ್ತಿನ ಮನೆಯ ಕೃಪೆಯಿಂದ ತ್ಯಾಂಪಣ್ಣರ ಹೋಟೆಲಿಗೆ ತೆರಳಿದ ಬಾಬು ಕಾರ್ಮಿಕ ಸಂಘಟನೆಯನ್ನು ಕಟ್ಟುತ್ತಾನೆ. ಕೆಲಸದ ನಿಗದಿತ ಅವಧಿ, ಹೆಚ್ಚುವರಿ ದುಡಿತಕ್ಕೆ ಬೊನಸ್ ಮೊದಲಾದ ಬೇಡಿಕೆಗಳನ್ನು ಸಲ್ಲಿಸಿ ಮಾಲೀಕರ ಅವಕೃಪೆಗೆ ಗುರಿಯಾಗಿ ಕೆಲಸ ಕಳೆದುಕೊಳ್ಳುತ್ತಾನೆ. ರೋಗಕ್ಕೆ ತುತ್ತಾಗಿ ಊರಿಗೆ ಮರಳಿದಾಗಲೂ ಭೂಮಸೂದೆಯ ಲಾಭವನ್ನು ಶೀಘ್ರವೇ ಗಳಿಸಿಕೊಂಡು ಭೂಮಾಲೀಕನೂ ಆಗುತ್ತಾನೆ. ಗುತ್ತಿನ ಮನೆಯ ಒಕ್ಕಲುಗಳಲ್ಲೂ ಭೂಸುಧಾರಣೆಯ ಭೂಮಸೂದೆಯ ಅರಿವು ಮೂಡಿಸುತ್ತಾನೆ. ಗೇಣಿದಾರರು ಧಣಿಗಳ ಮನೆಯಲ್ಲಿ ಬಿಟ್ಟಿ ಚಾಕರಿ ಮಾಡುವುದನ್ನು ತಾನೇ ಮೊತ್ತಮೊದಲನೆಯವನಾಗಿ ನಿಲ್ಲಿಸುತ್ತಾನೆ. ಇತರರಲ್ಲೂ ತಿಳುವಳಿಕೆ ಮೂಡಿಸಲು ಪ್ರಯತ್ನಿಸುತ್ತಾನೆ.

'ಅಯ್ಯೋ ಪೆದ್ದೇ, ಭೂಮಸೂದೆ–ಅಂದರೆ ಉಳುವವನೇ ಹೊಲದೊಡೆಯ ಎಂಬ ಕಾನೂನನ್ನು ಸರಕಾರ ಜ್ಯಾರಿಗೊಳಿಸಿದ್ದು ಗೊತ್ತಿಲ್ವೇನೋ ನಿನಗೆ? ಕಳೆದ ವರುಷವೇ ನಾವು ಗುತ್ತಿನ ಗೇಣಿ ಒಕ್ಕಲುತನದ ಸಂಬಂಧ ಕಳಕೊಂಡಿದ್ದೇವೆ. ಆದರೂ–ದಾಕ್ಷಿಣ್ಯಕ್ಕೆಂದು ವರುಷ ಬಿಟ್ಟಿ ಚಾಕರಿ ಮಾಡಿದ್ದು ಹೌದು. ಈ ವರುಷವೂ ಮಾಡಲು ಹೋದರೆ, ಅದು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡ ಹಾಗೆ! ಅದೂ ಅಲ್ಲದೇ–ಎಷ್ಟು ವರುಷಗಳಿಂದ ನಾವು ಅವರನ್ನು ದೇವರ ಹಾಗೆ ತಲೆಯಲ್ಲಿ ಹೊತ್ತು ಬದುಕಿದ್ದೇವೆ! ಈಗ ಸರಕಾರ ನಮ್ಮನ್ನೆಲ್ಲ ಬಿಡುಗಡೆಗೊಳಿಸಿದೆ. ಇನ್ನೂ ಈ ಗುಲಾಮಗಿರಿ ಮಾಡೋದಂದ್ರೆ ಏನರ್ಥ?'(ಉಲ್ಲಂಘನೆ, ಪುಟ ೦೭) ಬಾಬು ಗುತ್ತಿನ ಮೂಲದಾಳು ಮಂಗ್ರುವಿನಲ್ಲಿ ಹೇಳುವ ಈ ಮಾತುಗಳು ಅವರಲ್ಲೂ ತಿಳುವಳಿಕೆ ಮೂಡುವಂತೆ ಮಾಡಿದರೂ ಗುತ್ತನ್ನು ಎದುರು ಹಾಕಿಕೊಳ್ಳಲು ಅವರು ಬಯಸುವುದಿಲ್ಲ. ಜಮೀನೇ ಇಲ್ಲದ ಅವರು ಗುತ್ತನ್ನು ಬಿಟ್ಟು ಹೋಗುವುದು ಸುಲಭವೂ ಆಗಿರಲಿಲ್ಲ.

ಮುಂಬೈಗೆ ತೆರಳಿ ಧೈರ್ಯ ಬೆಳೆಸಿಕೊಂಡ ಬಾಬು ಹೋರಾಟದ ಮನೋಭಾವವನ್ನು ರೂಢಿಸಿಕೊಳ್ಳುತ್ತಾನೆ. ಗುತ್ತಿನ ಮನೆಯ ಪಾರಮ್ಯವನ್ನು ಪ್ರಶ್ನಿಸುತ್ತಾನೆ. ವಲಸಿಗನಾದ ಬಾಬು ಪೂಜಾರಿ ಧೈರ್ಯ, ಸಂಘಟನಾ ಮನೋಭಾವ, ಸಮಾನತೆ ಮುಂತಾದ ಹಲವು ಗುಣಗಳನ್ನು ತನ್ನದಾಗಿಸಿಕೊಳ್ಳುತ್ತಾನೆ. ತುಳುನಾಡಿನಲ್ಲೇ ಇದ್ದಿದ್ದರೆ ಎಂದೂ ನಾಯಕನಾಗಲಾರದವನು ಮುಂಬೈಗೆ ತೆರಳಿ ನಾಯಕನಾಗುವುದು ವಿಶೇಷ. ಕಾರ್ಮಿಕರನ್ನು ಸಂಘಟಿಸಿ ಮಾಲೀಕರ ವಿರುದ್ಧ ಹೋರಾಡುತ್ತಾನೆ.

ಸಂಕಪ್ಪ ರೈಗಳ ಅಳಿಯ ಸುಂದರನ ವಲಸೆ ಬೇರೆ ರೀತಿಯಲ್ಲಿ ಸಂಭವಿಸುತ್ತದೆ. ಕೆಲವೊಂದು ಅಹಿತಕರ ಘಟನೆಗಳಿಂದ ಊರು ಬಿಡಬೇಕಾದ ಅನಿವಾರ್ಯ ಸಂದರ್ಭ ಒದಗಿಬರುತ್ತದೆ.

'ಬ್ರಾಹ್ಮಣರ ಹುಡುಗಿಯನ್ನು ಪ್ರತಿದಿನ ಮಂಗಳೂರಿಗೆ ಕರೆದೊಯ್ದು ವಾಪಾಸು ಕರೆತರುವ ಬ್ಯಾರಿಯನ್ನು ಗುತ್ತಿನ ಮಗನಾದ ಸುಂದರ ಹೆಗ್ಡೆಯೆ ಅಪಾರ್ಥ ಮಾಡಿಕೊಳ್ಳುತ್ತಾನೆ. ಈ ಅಪಾರ್ಥದಿಂದ ಉಂಟಾಗುವ ಗಲಾಟೆ-ಗೊಂದಲಗಳಿಂದಾಗಿ ಸುಂದರ ಹೆಗ್ಡೆಯೆ ಮುಂಬಯಿಗೆ ವಲಸೆ ಹೋಗುವ ಪರಿಸ್ಥಿತಿಯುಂಟಾಗುತ್ತದೆ.'(ಉಲ್ಲಂಘನೆ, ಪೀಠಿಕೆ)

ಇದರಿಂದ ಮುಂಬೈ ತೆರಳಿದ ಸುಂದರ ದೊಡ್ಡ ಹೋಟೆಲ್ ಉದ್ಯಮಿಯಾಗಿ ಹೊರಹೊಮ್ಮುತ್ತಾನೆ. ಹದಿನೈದು ವರ್ಷಗಳಲ್ಲಿ ಮೂರು ಹೋಟೆಲುಗಳ ಯಜಮಾನನಾಗುತ್ತಾನೆ. ಲೇಡಿಸ್ ಬಾರ್ ಮಾಡಲು ಹೊರಡುತ್ತಾನೆ. ಆದರ್ಶವಾದಿ ಧೋರಣೆ ತ್ಯಜಿಸಿದಾಗ ಉದ್ಯಮದಲ್ಲಿ ಯಶಸ್ಸು ಗಳಿಸುವುದನ್ನು ಕಾಣಬಹುದು. ಲೇಡಿಸ್ ಬಾರ್ ಮಾಡಬೇಕೇ? ಬೇಡವೇ ಎಂಬ ಜಿಜ್ಞಾಸೆ ಮರೆತು ವ್ಯಾಪಾರೀಕರಣದ ಕುರಿತು ಯೋಚಿಸಿದಾಗ ಆರ್ಥಿಕವಾಗಿ ಬೆಳೆಯಲು ಸಾಧ್ಯ. ಜನರ ಅಪೇಕ್ಷೆ ಮೇರೆಗೆ ವ್ಯಾಪಾರ ಮಾಡಿದರೆ ಉಳಿವು ಸಾಧ್ಯ. ಹೋಟೆಲ್ ಉದ್ಯಮದಲ್ಲಿ ತುಂಬಾ ಉನ್ನತಿ ಸಾಧಿಸಿದ ಸುಂದರ, ಭೂಗತ ದೊರೆಗಳಿಂದ ಹತನಾಗುತ್ತಾನೆ.ಪರಂಪರೆಯನ್ನು ಬಲಪಡಿಸುವ ನಾಗಮಂಡಲದ ಪೂಜೆ ಅದ್ದೂರಿಯಿಂದ ನೆರವೇರುತ್ತದೆ. ವಲಸೆಯಿಂದ ತುಳುನಾಡು ಸಮೃದ್ಧಗೊಳ್ಳುವ, ಪರಂಪರೆ ವೈಭವಯುತವಾದ ಆಚರಣೆಗಳನ್ನು ಹೊಂದಿ ತುಳು ಸಂಸ್ಕೃತಿಯನ್ನು ಇನ್ನಷ್ಟು ಬಲಪಡಿಸುವ ಪ್ರಯತ್ನ ಗಮನಿಸಬಹುದು. ಭೂಮಸೂದೆ ಕಾನೂನಿಂದ ಮಹತ್ವ ಕಳೆದುಕೊಂಡಿದ್ದ ಗುತ್ತು ಇನ್ನೊಮ್ಮೆ ಜನರ ಮನದಲ್ಲಿ ರಾರಾಜಿಸುತ್ತದೆ. ಸುಂದರನ ಮೇಲೆ ಪ್ರತಿಯೊಬ್ಬರೂ ಗೌರವ ಹಾಗೂ ಆದರ ತೋರಿಸುತ್ತಾರೆ.

ತುಳುನಾಡಿನಲ್ಲಿ ಹುಟ್ಟಿ ಬೆಳೆದು ಮುಂಬೈನಂತಹ ಪೇಟೆಗೆ ಹೋಗಿ ಅಲ್ಲಿ ವ್ಯಾಪಾರ ವಹಿವಾಟು ನಡೆಸಿ ಅಪಾರ ದುಡ್ಡು ಗಳಿಸಿ ಆಧುನಿಕತೆಯತ್ತ ವಾಲಿದವರು ಮರಳಿ ತಮ್ಮ ಊರಿಗೆ ಬಂದು ದೇವಸ್ಥಾನಗಳಿಗೆ ಉದಾರ ದೇಣಿಗೆ ನೀಡುವಂತಹುದು ಪರಂಪರೆಯನ್ನು ಬಲಪಡಿಸುವ ಒಂದು ಪ್ರಯತ್ನವಾಗಿ ಕಾಣುತ್ತದೆ. ಸುಂದರನ ಹೆಂಡತಿಯ ತಂದೆ ಹೋಟೆಲ್, ಬಾರ್ ತೆರೆದು ಶ್ರೀಮಂತರಾದರೂ ಊರಿಗೆ ಬಂದು ಮಾರಿಗುಡಿಗೆ ತಾಮ್ರ ಮುಚ್ಚಿಸುತ್ತಾರೆ. ಜೊತೆಗೆ ಶಾಲೆಗೆ ಐದು ಕೋಣೆಗಳನ್ನು ಕಟ್ಟಿಸುವುದು ಉದಾರತೆಯ ಸಂಕೇತ. ಜೊತೆಗೆ ವಲಸೆಯಿಂದ ಹೆಚ್ಚಾದ ಆರ್ಥಿಕತೆಯಿಂದ ತುಳುನಾಡು ಬಲಪಡಿಸುವುದನ್ನು ಕಾಣಬಹುದು.

ಉನ್ನತ ವಿದ್ಯೆಯಿಂದ ಉದ್ಯೋಗ ಪಡೆದು ದೆಹಲಿಗೆ ವಲಸೆ ಹೋಗುವ ಅಧಿಕಾರಿಯಾಗಿ ರಂಜಿತ್‌ನನ್ನು ಗುರುತಿಸಬಹುದು. ರಂಜಿತ್ ತುಳುನಾಡಿನ ಸಂಪರ್ಕವನ್ನು ಕಡಿಮೆ ಮಾಡುವ ಮನೋಭಾವ ಗೋಚರಿಸುತ್ತದೆ. ತುಳುನಾಡನ್ನು ಮರೆತು ಹೊಸ ಪರಿಸರ, ಜವಾಬ್ದಾರಿ ಎಂದು ದೂರಸಾಗುವ ಮನೋಭಾವ ಎದ್ದು ಕಾಣುತ್ತದೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಮಾಧವನ ಮದುವೆ ನಿಂತು ಹೋದಾಗ ಅಕ್ಕ ಭಾವನಿಗೆ ಮುಖ ತೋರಿಸಲಾಗದೆ ಅನಂತಯ್ಯ ಮುಂಬಯಿಯಲ್ಲಿ ನವ ಹಿಂದೂ ಹೋಟೆಲಿನಲ್ಲಿ ಕೆಲಸ ಮಾಡುವ ಉದ್ದೇಶದಿಂದ ತೆರಳುತ್ತಾನೆ. ಆದರೆ ಹೋಟೆಲ್ ಮಾಲೀಕನ ಮನೆ ಹಾಗೂ ಹೋಟೆಲಿನಲ್ಲಿ ಪೌರೋಹಿತ್ಯದ ಜವಾಬ್ದಾರಿ ವಹಿಸಬೇಕಾಗುತ್ತದೆ. ಅನಂತಯ್ಯನಿಗೆ ಭಟ್ಟರ ಮನೆ ಹಾಗೂ ಹೋಟೆಲಿನ ಪೂಜೆ ಮುಗಿಸಿದರೆ ಅಂದಿನ ಕೆಲಸ ಮುಗಿದಂತೆ. ಬಿಡುವಿನ ಸಮಯ ಮುಂಬಯಿ ಸುತ್ತಾಟ ಮಾಡುವ ಹವ್ಯಾಸ ಬೆಳೆಸಿಕೊಂಡ.

'ಮುಖಾಂತರ' ಕಾದಂಬರಿಯಲ್ಲಿ ಔದ್ಯೋಗಿಕ ವಲಸೆ ಚಿತ್ರಿತವಾಗಿದೆ. ಉನ್ನತ ವಿದ್ಯಾಭ್ಯಾಸದಿಂದ ಕೃಷಿಮೂಲ ಕುಟುಂಬದ ಮಕ್ಕಳು ವಿದ್ಯಾಭ್ಯಾಸ ಪಡೆದು ಉತ್ತಮ ಉದ್ಯೋಗ ಸಂಪಾದಿಸಿ ತುಳುನಾಡಿನಿಂದಲೇ ದೂರ ಉಳಿಯುವುದು ಇತ್ತೀಚಿನ ವಿದ್ಯಮಾನ. ಶಿಕ್ಷಣವೇ ಆರ್ಥಿಕತೆಯ ಬುನಾದಿಯಾದಾಗ ಕೃಷಿ ಆದಾಯ ಕಡಿಮೆ ಎಂಬ ಪರಮ ಸತ್ಯದ ಅರಿವು ಉಂಟಾಗಿ ಕೃಷಿ, ಮನೆ, ಊರು ಎಲ್ಲವನ್ನೂ ಮರೆತುಬಿಡುವುದು ಸಾಮಾನ್ಯ. ಕೃಷ್ಣಯ್ಯ, ಶಂಕರ, ಬಂಗಾರಣ್ಣ ಹೀಗೆ ಮೂರು ತಲೆಮಾರಿನವರು ಕೃಷಿಯನ್ನೇ ನಚ್ಚಿಕೊಂಡವರು. ಭತ್ತದ ಕೃಷಿ ಬಂಗಾರಣ್ಣನ ಕಾಲಕ್ಕೆ ಕಂಗಿನ ಕೃಷಿಯಾಗಿ ಪರಿವರ್ತನೆಯಾದರೆ, ಬಂಗಾರಣ್ಣನ ಮಗ ನಾರಾಯಣನ ಕಾಲದಲ್ಲಿ ಶಿಕ್ಷಣ ಪಡೆದು ಊರನ್ನೇ ತ್ಯಜಿಸಿ ಬೆಂಗಳೂರಿನಲ್ಲಿ ನೆಲೆ ಕಂಡುಕೊಳ್ಳುವ ಮನಸ್ಥಿತಿ ಗುರುತಿಸಬಹುದು. ತುಳುನಾಡಿನಲ್ಲಿ ವೃತ್ತಿ ಕಂಡುಕೊಳ್ಳಲು ಇಚ್ಛಿಸದ ನಾರಾಯಣ ಬೆಂಗಳೂರಿಗೆ ತೆರಳಿ ವಕೀಲಿ ವೃತ್ತಿಯ ಜೊತೆ ರಿಯಲ್ ಎಸ್ಟೇಟ್ ಉದ್ದಿಮೆಯನ್ನೂ ರೂಢಿಸಿಕೊಳ್ಳುತ್ತಾನೆ. ಬೆಂಗಳೂರಿನಲ್ಲಿ ವಕೀಲನಾಗಿ ದುಡ್ಡು ಗಳಿಸುತ್ತಾ ಜೊತೆಗೆ ರಿಯಲ್ ಎಸ್ಟೇಟ್ ದಂಧೆಯಿಂದಲೂ ಲಾಭಗಳಿಸುತ್ತಲೇ ಇರುತ್ತಾನೆ. ಕುಟುಂಬದಿಂದಲೇ ದೂರವಾಗುತ್ತಾನೆ. ತಂದೆಯ ಮೇಲಿನ ಪ್ರೀತಿ, ಊರಿನ ಮಮತೆ, ಮಣ್ಣಿನ ಕಾಳಜಿ ಯಾವುದೂ ಆತನಲ್ಲಿ ಕಂಡುಬರದೆ ವ್ಯಾಪಾರಿ ಸಂಸ್ಕೃತಿಯ ಪ್ರತೀಕವಾಗಿ ಗೋಚರಿಸುತ್ತಾನೆ. ಬಂಧುತ್ವಕ್ಕಿಂತ ಹಣಗಳಿಸುವುದಕ್ಕೆ ಮೊದಲ ಆದ್ಯತೆ ನೀಡುವುದು, ತಂದೆಯ ಮನಸ್ಸು ಅರ್ಥಮಾಡಲಾರದೆ ಹೋಗುವುದು ದುರಂತವೇ ಸರಿ. ನಾರಾಯಣನ ವಲಸೆ ಹಾಗೂ ಬದಲಾದ ಮನಸ್ಥಿತಿಯಿಂದ ಊರಿನ ಜಮೀನನ್ನು ವಶಪಡಿಸಿಕೊಂಡು ದೊಡ್ಡ ಮಟ್ಟದ ಲಾಭಗಳಿಸುವ ಷಡ್ಯಂತ್ರವನ್ನೇ ರೂಪಿಸುತ್ತಾನೆ. ತಂದೆ ಬಂಗಾರಣ್ಣನ ವಯೋಸಹಜ ಶಕ್ತಿಗುಂದುವ ದುರ್ಬಲತೆಯನ್ನು ಬಳಸಿಕೊಂಡು ಜಮೀನನ್ನು ವಶಪಡಿಸಿ ವಲಸೆಗೆ ಹೊರಡಿಸಲು ನಡೆಸುವ ಹುನ್ನಾರ ದುರಂತಮಯ. ಹೃದಯದಿಂದಲ್ಲದೆ ಕೇವಲ ವ್ಯಾಪಾರಿ ದೃಷ್ಟಿಯಿಂದ ಎಲ್ಲವನ್ನೂ ಅಳೆಯುವ ದೃಷ್ಟಿಕೋನದಿಂದ ಉಂಟಾದ ಅಪಾಯವಿದು. ನಾರಾಯಣ ತಂದೆ ಬಂಗಾರಣ್ಣ ತನ್ನ ಹಂಚಿಕೆಗೆ ಒಗ್ಗಲು ಮಾಡಿದ ತಂತ್ರಗಳು ಹಲವಾರು. ವಿಧವೆ ಒಪ್ಪಕ್ಕನನ್ನು ಮರುಮದುವೆಗೆ ಒತ್ತಾಯಿಸುವುದು. ಕೂಲಿ ಕಾರ್ಮಿಕ ಇಸ್ಮತ್ ಬ್ಯಾರಿಯನ್ನು ಅಪವಾದ ಒಡ್ಡಿ ಕೆಲಸಕ್ಕೆ ಬರುವಲ್ಲಿ ಅಡ್ಡಿಯುಂಟುಮಾಡುವುದು; ಇದರಿಂದ ಬಂಗಾರಣ್ಣ ಮತ್ತು ಸೊಸೆ ಒಪ್ಪಕ್ಕ ಕೃಷಿ ಕಾರ್ಯಗಳಲ್ಲಿ ದುಡಿಯಲೇಬೇಕಾದ ಅನಿವಾರ್ಯತೆ ಉಂಟುಮಾಡುವುದು. ಒಪ್ಪಕ್ಕನ ಮಗ ಶಂಕರನಿಗೆ ಉತ್ತಮ ವಿದ್ಯಾಭ್ಯಾಸದ ಆಮಿಷ ಶ್ರೀನಿವಾಸ ನೀಡುವುದು. ಹೀಗೆ ಈ ಎಲ್ಲಾ ಒತ್ತಡಗಳ ಮೂಲಕ ಬಂಗಾರಣ್ಣ ಪರಿಸ್ಥಿತಿಯನ್ನು ಹತೋಟಿಗೆ ತರಲು ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಕಾದಂಬರಿ ಎಲ್ಲಾ ರೀತಿಯಿಂದಲೂ ಮಣಿದ ಬಂಗಾರಣ್ಣ ಎಲ್ಲಾ ಮಾರಿ ಪೇಟೆಗೆ ತೆರಳಲೇಬೇಕಾದ ನಿರ್ಧಾರ ಅನಿವಾರ್ಯವಾಗಿಯೂ ತಾಳಲೇಬೇಕೆಂಬ ಮುನ್ಸೂಚನೆಯೊಂದಿಗೆ ಅಂತ್ಯವಾಗುತ್ತದೆ. ದೂರದೃಷ್ಟಿ ಇಲ್ಲದೆ ತತ್‌ಕ್ಷಣದ ಲಾಭಕ್ಕಾಗಿ ಹಾತೊರೆಯುವ ಯವಮನಸ್ಸುಗಳ ವಿವರವಿದೆ.

'ಈ ಕಾಂತಪ್ಪ ಶೆಟ್ರ ಸೋದರಳಿಯಂದಿರು ಬೊಂಬಾಯಿಯಲ್ಲಿ ದೊಡ್ಡ ದೊಡ್ಡ ಹೋಟೇಲ್ ಸೇಟುಗಳಂತೆ ಒಬ್ಬರದ್ದು ಒಂದು ಬಾರ್, ಇನ್ನೊಬ್ಬರದ್ದು ಒಂದು ಮನೆ, ಮತ್ತೊಬ್ಬರದ್ದು ಒಂದು ಕ್ಲಬ್ ಹೀಗೆ ಎಲ್ಲವುಗಳೂ ಈಗ ಸಿದ್ಧವಾಗಿದ್ದು ಅವುಗಳ ಪ್ರವೇಶ ನಿಮ್ಮ ಕೈಯಿಂದಲೇ ಆಗಬೇಕು ಎಂದು ಕಾಂತಪ್ಪ ಶೆಟ್ರು ನಮ್ಮ ಗೋವಿಂದನಿಗೆ ಹೇಳಿದ್ದಾರೆ.'(ಮುಖಾಂತರ, ಪುಟ ೫೦) ತುಳುನಾಡಿನವರು ವಲಸೆಯಿಂದ ಆರ್ಥಿಕ ಅಭಿವೃದ್ಧಿ ಸಾಧಿಸುವುದು ದೊಡ್ಡ ವಿಷಯ. ತಮ್ಮದಲ್ಲದ ಊರಿನಲ್ಲಿ ನೆಲೆನಿಂತು ಸ್ಪರ್ಧಿಸಿ ಹೆಸರು, ದುಡ್ಡು ಗಳಿಸುವುದು ವ್ಯಕ್ತಿಗಳ ಬುದ್ಧಿವಂತಿಕೆಯನ್ನು ಸೂಚಿಸುತ್ತದೆ.

ಪುರಂದರ ರೈಗಳು ತಮ್ಮ ಮಗನನ್ನು ದುಬೈಗೆ ಕಳುಹಿಸಿದ್ದು ಅದರಿಂದ ಬಂದ ಸೌಖ್ಯವನ್ನು ಅನುಭವಿಸಿರುತ್ತಾರೆ. 'ಡ್ರೈವರು ಇದ್ದಾನೆ ದುಬೈಯಿಂದ ಮಗನ ದುಡ್ಡು ಬರುತ್ತದೆ ಮತ್ತೆ ನಾನು ಯಾಕೆ ಡ್ರೈವಿಂಗ್ ಕಲಿಯಬೇಕು ಹೇಳಿರಣ್ಣ.'(ಮುಖಾಂತರ, ಪುಟ ೫೧೨).

ಪುರಂದರ ರೈಗಳು ಮುಂಬಯಿಯಲ್ಲಿ ನಾಲ್ಕೈದು ಹೋಟೇಲುಗಳ ಮಾಲಿಕ. ಇದೀಗ ಊರಿನಲ್ಲಿ ನೆಲೆನಿಂತು ಅಲ್ಲಿನ ದುಡ್ಡಿನಿಂದ ಸೀತಾಪುರದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆ ತೆರೆಯಲ್ಪಡುತ್ತದೆ.

'ನನ್ನ ಮಗ ಈಗ ದುಬೈಯಲ್ಲಿದ್ದಾನೆ. ಅವನ ಹೆಂಡತಿಯೂ ಅಲ್ಲೇ, ಮಗಳು ಇರುವುದು ಮುಂಬೈಯಲ್ಲಿ ಊರಲ್ಲಿ ಇರುವುದು ನಾನು ಮತ್ತು ನನ್ನ ಹೆಂಡತಿ ಮಾತ್ರ, ಮೊನ್ನೆ ನಮ್ಮ ಪುರಂದರ ರೈಗಳು ನನ್ನ ಮಗನಿಗೆ ಫೋನು ಮಾಡಿ ಜಮೀನಿಗೆ ಒಳ್ಳೆಯ ಗಿರಾಕಿ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರಂತೆ, ನಾನು ಸಾಯುವ ತನಕ ಎತ್ತಿನ ಬಾಲ ಹಿಡಿದುಕೊಂಡು ಇಲ್ಲೇ ಕುಳಿತುಕೊಳ್ಳಬೇಕು ಎಂದುಕೊಂಡಿದ್ದರೂ ಈಗ ಕೃಷಿ ಕಸುಬಿಗೆ ಬಂದು ಸಂಕಷ್ಟ ನೋಡಿದರೆ, ಯಾರಿಗೆ ಬೇಕು ಎಂದು ಊರಿಗೇ ನಮಸ್ಕಾರ ಹೇಳಬೇಕು ಎಂದುಕೊಂಡಿದ್ದೇನೆ' ಎಂದರು.(ಮುಖಾಂತರ, ಪುಟ ೫೭೩) ಇಲ್ಲಿ ಮೋಂತು ಪರ್ಬು ಬಂಗಾರಣ್ಣನಲ್ಲಿ ಹೇಳುವ ಮಾತುಗಳು ವಲಸೆಯ ಕುರಿತು ತೀವ್ರಗೊಂಡ ಅಕಾಂಕ್ಷೆಯನ್ನು ಗುರುತಿಸಬಹುದು.

ವಲಸೆ ಪ್ರಾರಂಭವಾಗುವ ಆರಂಭದ ಹಂತದಲ್ಲಿ ಕುಟುಂಬದಿಂದ ಗಂಡು ವಲಸೆ ಹೋಗುವುದು ಸಾಮಾನ್ಯವಾಗಿತ್ತು. ತೀವ್ರವಾದ ಹಂತದಲ್ಲಿ ಕುಟುಂಬದ ಸದಸ್ಯರು ಗಂಡ, ಹೆಂಡತಿ, ಮಕ್ಕಳು ದೂರ ದೂರ ಇರುವುದು ನಡೆಯಿತು. ಒಟ್ಟಿನಲ್ಲಿ ದುಡ್ಡು ಗಳಿಸುವುದು ಮುಖ್ಯ ಎಂಬ ಭಾವನೆ ವ್ಯಕ್ತವಾಗುತ್ತದೆ. ಪುತ್ತುಭಟ್ಟರಲ್ಲಿ ಶ್ರೀನಿವಾಸ ವ್ಯಕ್ತಪಡಿಸುವ ಮಾತುಗಳು ಈ ಮೇಲಿನ ಮಾತುಗಳನ್ನು ಸ್ಪಷ್ಟಪಡಿಸುತ್ತವೆ. 'ಹೌದು ಚಿಕ್ಕಪ್ಪ ನನ್ನ ಹೆಂಡತಿ ಹೈದರಾಬಾದಿನಲ್ಲಿ ದೊಡ್ಡ ಕೆಲಸದಲ್ಲಿದ್ದಾಳೆ. ಆಕೆ ಸೋಫ್ಟ್‌ವೇರ್ ಇಂಜಿನಿಯರ್ ತಿಂಗಳಿಗೊಮ್ಮೆ ಇಲ್ಲಿಗೆ ಬಂದು ಹೋಗುತ್ತಿರುತ್ತಾಳೆ. ನಾನೂ ಅಷ್ಟೇ ಆಗಾಗ ಅಲ್ಲಿಗೆ ಹೋಗುತ್ತಿದ್ದೇನೆ! ಎಂದಿದ್ದ. 'ಮಕ್ಕಳು?' 'ಒಬ್ಬಳು ಮಗಳಿದ್ದಾಳೆ, ಅಲ್ಲೇ ಹೈದರಾಬಾದಿನಲ್ಲಿ ಓದುತ್ತಿದ್ದಾಳೆ.'(ಮುಖಾಂತರ, ಪುಟ ೫೮೨)

'ಮುಖಾಂತರ' ಕಾದಂಬರಿಯಲ್ಲಿ ಬರುವ ಶ್ರೀಧರಾನಂದ ವೈದ್ಯನಾಗಿದ್ದು ವಿದೇಶದಲ್ಲಿ ಒಳ್ಳೆಯ ಸಂಪಾದನೆ ಮಾಡಿರುತ್ತಾನೆ. ಆದರೆ ಹೆಂಡತಿ ತೀರಿದಾಗ ಪ್ರಾಪಂಚಿಕ ವ್ಯಾಮೋಹಗಳನ್ನೆಲ್ಲಾ ಕಳಕೊಂಡು ಎಲ್ಲಾ ಸಂಪತ್ತನ್ನೂ ಶ್ರೀರಾಮಕೃಷ್ಣಾಶ್ರಮಕ್ಕೆ ದಾನಮಾಡಿ ಅವಧೂತನಾಗುತ್ತಾನೆ.

ಯುವಕರು ಡ್ರೈವಿಂಗ್, ಫಿಟ್ಟರ್ ಎಂದು ತರಬೇತಿ ಪಡೆದು ಅರಬ್ ದೇಶಗಳಾಚೆ ಚಲಿಸುವುದರಿಂದ ವಯೋವೃದ್ಧರು ಮಾತ್ರ ಊರಿನಲ್ಲಿ ಉಳಿದು ಕೃಷಿಭೂಮಿಯನ್ನು ಕಷ್ಟದಲ್ಲಿ ಸಂಭಾಳಿಸುವ ಪಲ್ಲಟ ಗಮನಿಸಬಹುದು. ಕೂಲಿಕಾರ್ಮಿಕರ ಕೊರತೆ ಇನ್ನಷ್ಟು ತೀವ್ರವಾಗಿ ಯುವಕರ ವಲಸೆಯಿಂದ ಕೃಷಿಕಾರ್ಮಿಕರೂ ಐವತ್ತರ ಗಡಿದಾಟಿದ್ದು ಅವರನ್ನು ಕಟ್ಟಿಕೊಂಡು ಕೃಷಿಕಾರ್ಯ ಮಾಡುವುದು ತ್ರಾಸದಾಯಕವೆನಿಸುತ್ತಿತ್ತು. ಕೃಷಿಭೂಮಿ ಇದ್ದರೂ ಮಾರಿ ವಲಸೆ ಹೋಗುವ ಮನೋಭಾವ ವ್ಯಕ್ತವಾಗಿದೆ.

'ಯಾರೊಬ್ಬರಿಗೂ ಈಗ ಹಳ್ಳಿಯಲ್ಲಿ ದುಡಿಯಲು ಇಷ್ಟವಿಲ್ಲ. ಎಂಥ ದುಡಿಮೆಗಾದರೂ ಪೇಟೆಯೇ ಬೇಕು ಎನ್ನುವ ಮನೋಸ್ಥಿತಿ. ಇದು ಹಳ್ಳಿಯಲ್ಲಿ ನೂರೈವತ್ತು ರೂಪಾಯಿ ಸಂಬಳ ಕೊಟ್ಟರೆ ಕಡಿಮೆಯಾಯಿತು ಎನ್ನುವ ಈ ಮಂದಿ ಪೇಟೆಯಲ್ಲಿ ಕೇವಲ ಇನ್ನೂರು ರೂಪಾಯಿ ಕೊಟ್ಟರೆ ಖುಸಿಯಿಂದ ಕೈಬಾಯಿ ಮುಚ್ಚಿಕೊಂಡು ದುಡಿಯುತ್ತಾರೆ. ಹಳ್ಳಿಯಲ್ಲಿ ಕೂಲಿಗಳಿಗೆ ಊಟ ಕಾಫಿ ತಿಂಡಿ ಉಚಿತವಾದರೆ ಪೇಟೆಯಲ್ಲಿ ಅವರೇ ಹೊಂದಿಸಿಕೊಳ್ಳಬೇಕು. ಆದರೂ ಅವರಿಗೆ ಖುಷಿ ಇರುವುದು ಪೇಟೆಯಲ್ಲೇ.'(ಮುಖಾಂತರ, ಪುಟ ೫೩೩)

ಊರು ಬಿಟ್ಟು ಪೇಟೆ ಕಡೆ ಹೆಚ್ಚಾದ ವಲಸೆ ಹಳ್ಳಿಯಲ್ಲಿ ದುಡಿಯುವ ಕಾರ್ಮಿಕರ ಸಮಸ್ಯೆಯನ್ನು ಸೃಷ್ಟಿಸಿದ್ದು ಪ್ರತಿಯೊಂದಕ್ಕೂ ಯಂತ್ರಗಳನ್ನು ಅವಲಂಬಿಸಬೇಕಾದ ದುಸ್ಥಿತಿ ಒದಗುವುದರ ಬಗ್ಗೆ ಖೇದ ವ್ಯಕ್ತವಾಗಿದೆ.

'ತೆಂಬರೆ' ಕಾದಂಬರಿಯಲ್ಲಿ ಲಕನನ ವಲಸೆಯ ವಿವರವಿದೆ. ಬೀದರ್‌ನ ಬಸವಕಲ್ಯಾಣದ ತಹಸೀಲ್ದಾರ್ ಹುದ್ದೆ ಪಡೆದ ಲಕನ ಭೂತಾರಾಧನೆಯ ಪರಂಪರೆಗೆ ಸೇರಿದವ. ಅಲ್ಲಿನ ಶೋಷಣೆಗಳನ್ನು ಗಮನಿಸಿ, ಬೇಸತ್ತು ವಿದ್ಯೆ ಗಳಿಸಿ ಉನ್ನತ ಹುದ್ದೆ ಗಳಿಸಿ ಅನ್ಯಾಯ, ಮೋಸಗಳನ್ನು ಸಮರ್ಥವಾಗಿ ಎದುರಿಸುತ್ತಾನೆ. ಕಂದಾಯ ಕಟ್ಟದ 'ಹನುಮಪ್ಪ ಘೂಳಪ್ಪ' ಸರಕಾರಕ್ಕೆ ಪಾವತಿಸುವಂತೆ ಮಾಡಿದ ಸಮರ್ಥ. ಸರ್ಕಾರಿ ಅಧಿಕಾರಿಯಾಗಿ ಪ್ರಾಮಾಣಿಕತೆಯಿಂದ ಸತ್ಯದ ಹಾದಿಯಲ್ಲಿ ನಡೆದರೂ ಭ್ರಷ್ಟ ವ್ಯವಸ್ಥೆಯಿಂದ ಕಷ್ಟಕೋಟಲೆಗಳಿಗೆ ತುತ್ತಾಗುವುದು ಆಧುನಿಕ ಸಮಾಜದ ನ್ಯೂನತೆಗಳಲ್ಲಿ ಒಂದು.

ಎಂ.ವೀರಪ್ಪ ಮೊಯಿಲಿ ಅವರು 'ತೆಂಬರೆ' ಕಾದಂಬರಿಯಲ್ಲಿ ಗಂಗಾಧರ ಅಣುವಿಜ್ಞಾನಿಯಾಗಿ ಪ್ರಸಿದ್ಧಿ ಪಡೆದ ಉತ್ತಮ ವ್ಯಕ್ತಿ ಹಾಗೂ ಅಧಃಪತನದ ವ್ಯಕ್ತಿಯಾಗಿ ಗೌರವ ಪಡೆಯುವ ಚೆಲುವಯ್ಯ ಶೆಟ್ಟಿ ಇಬ್ಬರು ವಲಸಿಗರನ್ನು ವಿವರಿಸುತ್ತಾರೆ. ಗಂಗಾಧರ ರಾಯರು ಅಣುವಿಜ್ಞಾನಿಯಾಗಿ ವೈಚಾರಿಕತೆಯ ಉತ್ತುಂಗದಲ್ಲಿದ್ದವರು ಊರಿನಲ್ಲಿ ಭೂತಕಟ್ಟಲು ಐತನಲ್ಲಿ ಕೇಳಿಕೊಳ್ಳುತ್ತಾರೆ. ಐತ ಉತ್ತಮವಾಗಿ ನಡೆಸಿಕೊಡುತ್ತಾನೆ. ಸಾತ್ವಿಕ ಹಾಗೂ ತಾಮಸಿಕ ಶಕ್ತಿಗಳೆರಡೂ ನೆಲೆಸಿರುವ ಬಗೆ ಹಾಗೂ ವ್ಯಕ್ತಿಗಳಲ್ಲಿ ನೆಲೆಗೊಂಡಿರುವ ಬಗ್ಗೆ ತಿಳಿಸಿಕೊಡುತ್ತದೆ. ಲಕನ ತುಳುನಾಡಿನಿಂದ ಹೊರಗೆ ಬಸವಕಲ್ಯಾಣದ ತಹಶೀಲ್ದಾರನಾಗಿ ಹಾಗೂ ಮಂಡ್ಯದ

ಕಮೀಶನರ್ ಆಗಿ ಪ್ರಾಮಾಣಿಕತೆಯ ಸೇವೆ ಸಲ್ಲಿಸುವುದನ್ನು ಕಾದಂಬರಿ ಚಿತ್ರಿಸುತ್ತದೆ. ಕೆಳವರ್ಗದಿಂದ ಬಂದ ವ್ಯಕ್ತಿಯ ಪ್ರಾಮಾಣಿಕತೆಗೆ ಬೆಲೆ ಕೊಡದಿರುವ ವ್ಯವಸ್ಥೆ, ರಾಜಕೀಯ ಹೊಲಸುತನ, ಸತ್ಯವಂತರಿಗೆ ಇಲ್ಲದ ಬೆಲೆ ಎಲ್ಲವೂ ವಿವರಿಸಲ್ಪಟ್ಟಿದೆ. ಚೆಲುವಯ್ಯ ಶೆಟ್ಟಿ ಅಪ್ರಾಮಾಣಿಕನಾಗಿ ಅಕ್ರಮವಾಗಿ ಹಣ ಗಳಿಸಿ ಊರಿನಲ್ಲಿ ಧಾರ್ಮಿಕ ಕಾರ್ಯಗಳಿಗಾಗಿ ಹಣ ವ್ಯಯಿಸಿ ಬಲಾಢ್ಯನಾಗುವುದನ್ನು ಗಮನಿಸಬಹುದು. ಕಾರ್ಯಸಾಧನೆಗಾಗಿ ಮೌಲ್ಯಗಳನ್ನು ದೂರೀಕರಿಸುವ, ಹಣದಿಂದ ಇಡೀ ವ್ಯವಸ್ಥೆಯನ್ನು ನಿಯಂತ್ರಿಸುವ ಮೌಲ್ಯರಹಿತ ಸಮಾಜದ ಮುಖವಾಗಿ ಚೆಲವಯ್ಯ ಶೆಟ್ಟಿ ಚಿತ್ರಿತನಾಗಿದ್ದಾನೆ.

'ತೆಂಬರೆ' ಕಾದಂಬರಿಯಲ್ಲಿ ಚೆಲುವಯ್ಯ ಶೆಟ್ಟಿ ಬೊಂಬಾಯಿಯಲ್ಲಿ ಹೋಟೆಲ್ ಕೆಲಸಕ್ಕೆ ಹೋಗಿ ಸ್ವಂತ ಹೋಟೇಲು ಮಾಡಿ ಭೂಗತ ದೊರೆಯಾಗಿ ಬೆಳೆಯುತ್ತಾನೆ. ನಾಲ್ಕು ಹೋಟೆಲ್‌ಗಳ ಧನಿ. ಕೊಲೆ, ಸುಲಿಗೆ ಈತನಿಗೆ ಮಾಮೂಲಾಗಿ ಬಿಡುತ್ತದೆ. ಇಂಥಹ ಚೆಲುವಯ್ಯ ಶೆಟ್ಟಿ ಊರಿಗೆ ಬಂದು ಎಪ್ಪತ್ತೈದು ಲಕ್ಷ ರೂಪಾಯಿ ಖರ್ಚಿನಲ್ಲಿ ಪಂಜುರ್ಲಿಗೆ ದೈವಸ್ಥಾನ ನಿರ್ಮಿಸುತ್ತಾನೆ. ದೈವಸ್ಥಾನಕ್ಕೆ ಹತ್ತು ಲಕ್ಷ ಖರ್ಚು ಮಾಡಿ ಬ್ರಹ್ಮಕಳಶ ಮಾಡುತ್ತಾನೆ. ಪಂಜುರ್ಲಿಗೆ ಏಳು ದಿನಗಳ ನೇಮವೂ ಆಗುತ್ತದೆ. ಕಾಳಹಣದಿಂದ ಸುಲಿಗೆಯ ಹಣದಿಂದ ವೈಭವದಿಂದ ಹಣ ಖರ್ಚುಮಾಡುತ್ತಾನೆ.

ಎಂ.ವೀರಪ್ಪ ಮೊಯಿಲಿಯವರ 'ಸಾಗರದೀಪ' ಕಾದಂಬರಿ ಮುಂಬೈ ಬದುಕಿನ ಅವಕಾಶಗಳು ಹಾಗೂ ಅದರ ಕರಾಳ ಮುಖವನ್ನು ಚಿತ್ರಿಸುತ್ತದೆ. ಮುಂಬೈ ಅವಕಾಶಗಳ ಸಾಗರವಾದರೂ ವಸತಿ ವ್ಯವಸ್ಥೆಯ ಮಿತಿ ಹಾಗೂ ದುಬಾರಿ ಜೀವನ, ದುಡಿಮೆ ವಿವರಿಸುತ್ತದೆ. ಕುಮಾರ ಮುಂಬೈಗೆ ಹೊಸ ಬದುಕನ್ನು ಅರಸಿ ಧಾವಿಸುತ್ತಾನೆ. ಮುಂಬೈ ಉದ್ಯೋಗ ಮಾತ್ರವಲ್ಲದೆ ಉನ್ನತ ಶಿಕ್ಷಣಕ್ಕೂ ಅವಕಾಶವನ್ನು ನೀಡಿತ್ತು. ಮುಂಬೈ ವಲಸೆಯಿಂದ ಕಥಾನಾಯಕ ಕುಮಾರ ಹಗಲು ದುಡಿದು ರಾತ್ರಿ ಶಾಲೆಗೆ ತೆರಳಿ ವಕೀಲನೂ ಆಗುತ್ತಾನೆ. ಮುಂಬೈ ಆರ್ಥಿಕ ಸಬಲತೆ ಮಾತ್ರವಲ್ಲದೆ ಶೈಕ್ಷಣಿಕ ಹಂಬಲವನ್ನು ಈಡೇರಿಸುತ್ತಿತ್ತು. ಕಠಿಣ ದುಡಿಮೆ ಅಗತ್ಯವಾಗಿತ್ತು. ಕುಮಾರ ಮೊಗವೀರ ಯುವಕ ಮಂಡಳಿಯನ್ನು ಸ್ಥಾಪಿಸುತ್ತಾನೆ. ವಿಸ್ತಾರವಾದ ಅನುಭವವನ್ನು ಮುಂಬೈ ನೀಡುತ್ತದೆ.

ವಾಮನ, ವಿಠೋಬರ ಬದುಕು ಮುಂಬೈಯ ಬದುಕಿನ ವಿಪುಲ ಅವಕಾಶಗಳನ್ನೂ, ಕರಾಳ ಮುಖಗಳನ್ನೂ ಚಿತ್ರಿಸುತ್ತದೆ. ವಿಠೋಬ ವಿವಾಹವಾಗಿ ಮುಂಬೈನಲ್ಲಿ ನೆಲೆ ಕಂಡುಕೊಳ್ಳದೆ ಗೆಳೆಯನ ಒಂದು ಕೋಣೆಯನ್ನು ಹಂಚಬೇಕಾಗಿ ಬಂದುದು ಬದುಕಿನ ದಾರುಣತೆ ಚಿತ್ರಿಸುತ್ತದೆ. ವಿಠೋಬನ ಮಡದಿ ಉದ್ಯೋಗಾಕಾಂಕ್ಷಿಯಾಗಿ ಉದ್ಯೋಗ ಗಳಿಸಿ ಕುಟುಂಬದ ಆರ್ಥಿಕತೆ ಹೆಚ್ಚಿಸಲು ಕಾರಣಕರ್ತಳಾಗುತ್ತಾಳೆ. ಆರ್ಥಿಕವಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಂತೆ ಭೂಗತ ಜಗತ್ತಿಗೆ ಇಡೀ ಕುಟುಂಬವೇ ಬಲಿಯಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಹಿಳೆಯರು ಪುರುಷರಿಗೆ ಸರಿಸಮವಾಗಿ ಆತ್ಮವಿಶ್ವಾಸದಿಂದ ದುಡಿಯಲು ವಲಸೆ ಅವಕಾಶ ನೀಡಿತ್ತು.

ಗಂಗಾಧರ ಪಣಿಯೂರು ಬರೆದ 'ಭೂಮಿ ತಿರುಗುವಾಗ' ಕತೆಯು ವಲಸೆಯನ್ನು 'ಕಥೆಯೊಳಗೊಂದು ಕತೆ' ಮಾದರಿಯಲ್ಲಿ ವರ್ಣಿಸುತ್ತದೆ. ಕತೆ ಹಾಗೂ ಕತೆಯ ಒಳಗೆ ಬರುವ ನಾಟಕ ಎರಡೂ ವಲಸೆಯ ವಿಭಿನ್ನ ಮುಖಗಳನ್ನು ಧ್ವನಿಸುತ್ತದೆ.

ನಾಟಕದಲ್ಲಿ ಕೊಲ್ಲಿ ರಾಷ್ಟ್ರದಲ್ಲಿ ದುಡಿದ ನಾಯಕ ಮರಳಿ ಊರಿಗೆ ಬಂದಾಗ ಆತನಿಗೆ ಸ್ಪಂದಿಸದ ಪತ್ನಿ ಮಕ್ಕಳು ವೈಭವಯುತ ಜೀವನ ನಡೆಸುತ್ತಾರೆ. ವಲಸೆಯ ಭಿನ್ನ ಮುಖ ಪ್ರಕಟವಾಗುತ್ತದೆ. ವಲಸೆಯು ಸಾಮಾಜಿಕ ಜೀವನದೊಂದಿಗೆ ಹುಟ್ಟುಹಾಕುವ ಸಮಸ್ಯೆಗಳ ಮೇಲೆ ಕಥೆಯೊಳಗಿನ ನಾಟಕವು ಬೆಳಕು ಚೆಲ್ಲುತ್ತದೆ. ಕೆಲವು ವರ್ಷ ಮಕ್ಕಳ, ಮನೆಯ ಆರ್ಥಿಕ ಪರಿಸ್ಥಿತಿ ಉನ್ನತಿಗೇರಲು ದುಡಿದ ವ್ಯಕ್ತಿಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಸೋಲುತ್ತಾರೆ. ಆದರೆ ವೈಭವದ ಜೀವನ ಬೇಕಾಗಿದೆ.

ಈ ನಾಟಕ ವೀಕ್ಷಿಸಿದ ಕತಾನಾಯಕನ ಪರಿಸ್ಥಿತಿಯೂ ಭಿನ್ನವಾಗಿರುವುದಿಲ್ಲ. ಹಲವು ವರ್ಷ ಮುಂಬೈನಲ್ಲಿ ದುಡಿದ ಆತನನ್ನು ಪತ್ನಿ, ಮಕ್ಕಳು ಪರಕೀಯನಾಗಿ ಕಾಣುತ್ತಾರೆ. ತನ್ನ ಮನೆಯಲ್ಲೇ ಅನ್ಯನೆಂಬ ಭಾವನೆ ಹುಟ್ಟಿ, ತನ್ನ ಊರು ನೆನಪಾಗುತ್ತದೆ. ಮರಳಿ ಊರಿಗೆ ಹೊರಟು ಕಷ್ಟದಿಂದ ಬದುಕುತ್ತಿರುವ ಸಹೋದರಿ ಹಾಗೂ ಆಕೆಯ ಮಕ್ಕಳ ಜತೆ ಬಾಳುವ ದೃಢ ನಿರ್ಧಾರಗೈಯುತ್ತಾನೆ. ತನ್ನವರು ಸ್ವೀಕರಿಸದಾಗಲೂ ತೊಳಲಾಡುವ ದೃಶ್ಯ ಇಲ್ಲಿದೆ. ವಲಸೆಯು ಆರ್ಥಿಕ ಪ್ರಗತಿಗೆ ಸಹಾಯವಾಗುತ್ತಾ, ಕೌಟುಂಬಿಕ ಸಾಮರಸ್ಯಕ್ಕೆ ತೊಡಕಾಗಿ ಬಿಡುತ್ತದೋ ಎಂಬ ಭಾವನೆ ಉದಯವಾಗುತ್ತದೆ.

ಔದ್ಯೋಗಿಕ ವಲಸೆ ತುಳುವರನ್ನು ಹೊಸ ಅವಕಾಶಗಳಿಗೆ ತೆರೆಯಿಸಿತು. ಇಲ್ಲಿನಿಂದ ಉದ್ಯೋಗಕ್ಕೆ ತೆರಳಿದ ಹೆಚ್ಚಿನವರು ಉತ್ತಮ ವಿದ್ಯಾಭ್ಯಾಸ ಪಡೆಯಲು ರಾತ್ರಿಶಾಲೆಗಳು ಅವಕಾಶ ಮಾಡಿದವು. ವಲಸಿಗರ ಸ್ವಂತ ದುಡಿಮೆಯಿಂದ ತುಳುನಾಡು ಶ್ರೀಮಂತವಾಯಿತು. ಬಂಟರು ಹೋಟೆಲ್‌ಗಳನ್ನು ತೆರೆದು ಊರಿನಲ್ಲಿ ಶಾಲೆಗಳಿಗೆ, ದೈವಸ್ಥಾನಗಳಿಗೆ ಖರ್ಚು ಮಾಡಿದರು. ನೇಮೋತ್ಸವ, ನಾಗಮಂಡಲಗಳು ವಿಜೃಂಭಣೆಯಿಂದ ಜರುಗಿದವು. ಆಸ್ತಿಪಾಸ್ತಿ ಹೆಚ್ಚಾಯಿತು. ವಲಸೆ ಬದುಕಿನ ಮಟ್ಟವನ್ನು ಹೆಚ್ಚಿಸಿತು. ಮುಂಬೈ ವಲಸೆ ಸ್ವಾಭಿಮಾನ ಮತ್ತು ಸ್ವಾವಲಂಬನೆಯನ್ನು ತುಳುವರಲ್ಲಿ ಹುಟ್ಟುಹಾಕಿತು.

೩. ಆದರ್ಶಕ್ಕಾಗಿ ವಲಸೆ

ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ಭಾರತದಲ್ಲಿ ಆದ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳು ಹಳ್ಳಿಹಳ್ಳಿಗಳನ್ನೂ ಪ್ರಭಾವಿಸಿದ್ದು ವಿಶೇಷ. ಪತ್ರಿಕೆಗಳು ಯುವಜನಾಂಗದ ದೃಷ್ಟಿಕೋನವನ್ನೇ ಬದಲಾಯಿಸುತ್ತವೆ. ಶಿಕ್ಷಣದಿಂದ ಅಕ್ಷರಜ್ಞಾನ, ಚಿಂತನಾ ಸಾಮರ್ಥ್ಯ, ಬಾಲ್ಯದಿಂದ ಬದುಕಿನ ರೀತಿಯನ್ನು ವಿಮರ್ಶಾ ಕ್ರಮದಿಂದ ನೋಡುವ ಕ್ರಿಯೆ ತೀವ್ರವಾಗಿ ಯುವ ಮನಸ್ಸುಗಳನ್ನು ಕಾಡಿದ್ದಿದೆ. ಕೆಳವರ್ಗದವರ ನೋವು, ನಲಿವುಗಳನ್ನು ಪ್ರತ್ಯಕ್ಷ ಕಂಡುಂಡವರಲ್ಲಿ ಆ ಜೀವನಕ್ರಮದ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಂಡು, ಊರು ಬಿಟ್ಟು ವಲಸಿಗನಾಗುವ ಸಂದರ್ಭಗಳು ಮೂಡುತ್ತವೆ.

ನಾ.ಮೊಗಸಾಲೆ ಬರೆದ 'ಉಲ್ಲಂಘನೆ' ಕಾದಂಬರಿಯಲ್ಲಿ ಸಂಕಪ್ಪ ರೈಗಳು ಗಾಂಧಿಯ ಪ್ರಭಾವದಿಂದ ಊರು ಬಿಟ್ಟು ಹೋದದ್ದು ವಲಸೆಯೆಂದೆ ಪರಿಗಣಿಸಬಹುದು. ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಉದ್ಭವವಾದ ಸ್ಥಾನಾಂತರವದು. ಮಾವ ಶೀನಪ್ಪರ ಅಂತ್ಯದಿಂದ ಊರಿಗೆ ಮರಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಸಂಕಪ್ಪ ರೈಗಳು ಗುತ್ತಿನಾರ್ ಆದರೂ, ಇರಬೇಕಾದ ಗತ್ತು ಬರದೆ ಆಪ್ತ, ಮೃದು ಹೃದಯಿ, ಸರ್ವರನ್ನೂ ಅರ್ಥೈಸಬಲ್ಲ ಸಾಮಾನ್ಯರಾಗಿ ಬಿಡುತ್ತಾರೆ. ಗಾಂಧಿತತ್ವಗಳೇ ಆದರ್ಶ. ಸರಳತೆಯೇ ಬದುಕು. ಸಂಕಪ್ಪ ರೈಗಳು ಹಲವು ಬದಲಾವಣೆಗಳಿಗೆ ತೆರೆದುಕೊಳ್ಳುತ್ತಾರೆ. ಗುತ್ತಿನ ಮನೆಯಲ್ಲೂ ಹಲವು ಬದಲಾವಣೆಗಳನ್ನು ತರಬಲ್ಲ ಕ್ರಾಂತಿಕಾರಿಯಾಗುತ್ತಾರೆ. ಧನಿ–ಒಕ್ಕಲು ಅಂತರ ಕ್ಷೀಣಿಸಿ ಸಮಾನತೆಯ ಯುಗ ಅರಳಲು ತಮ್ಮಿಂದಾದ ಸೇವೆಯನ್ನು ನೀಡುತ್ತಾರೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ಪಾರಳ ಗಂಡ ಗೋಪಾಲನ ಸ್ನೇಹಿತ ಸದಾನಂದ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಸಬರ್ಮತಿ ಆಶ್ರಮದಲ್ಲಿ ಕೆಲಕಾಲ ನಿಲ್ಲುತ್ತಾನೆ. ಅಲ್ಲಿನ ದಿನಗಳು ಅವನ ಬದುಕಿಗೆ ಗುರಿಯನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತವೆ. ಅಲ್ಲಿಂದ ಮರಳಿ ಊರಿಗೆ ಬಂದ ಸದಾನಂದ ತನ್ನ ಪಾಲಿನ ಆಸ್ತಿ ಹಾಗೂ ದಾನಿಗಳ ಸಹಾಯದಿಂದ ಅನಾಥಾಶ್ರಮ ಕಟ್ಟಿ ಬಡ ಮಕ್ಕಳಿಗೆ ಆಶ್ರಯದಾತನಾಗುತ್ತಾನೆ. ಪಿತ್ರಾರ್ಜಿತ ಆಸ್ತಿ ಪಡೆಯಲು ಆಜನ್ಮ ಬ್ರಹ್ಮಚಾರಿಯಾಗುವ ಭೀಷ್ಮ ಪ್ರತಿಜ್ಞೆಗೈಯುತ್ತಾನೆ. ಸಮಾಜಸೇವೆಯಲ್ಲಿ ಸುಖ ಕಂಡುಕೊಳ್ಳುತ್ತಾನೆ.

'ಮುಖಾಂತರ' ಕಾದಂಬರಿಯಲ್ಲಿ ಟೊಪ್ಪಿ ಶಂಭಟ್ಟ ಕೂಡ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದು ಸಬರ್ಮತಿ ಆಶ್ರಮದಲ್ಲಿ ಸ್ವಲ್ಪಕಾಲ ಇದ್ದು ಅಲ್ಲಿನ ಸರಳತೆ, ಸ್ವಚ್ಛತೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೆ. ಇವರ ಪ್ರಭಾವಕ್ಕೆ ಒಳಗಾಗಿ ಪಟೇಲರ ಉಗ್ರಾಣಿ ಚೆನ್ನಪ್ಪ ಗಾಂಧಿಯನ್ನು ಕಾಣಲು ಮನೆಮಠ ಬಿಟ್ಟು ಗಾಂಧಿಯನ್ನು ನೋಡಲು ಹೋಗುವುದು ಕೆಳವರ್ಗದವರಲ್ಲಿ ಆದ ಬದಲಾವಣೆಗೆ ಪ್ರಮುಖ ಕಾರಣ.

ಗಾಂಧಿ ಪ್ರಭಾವದಿಂದ ವಲಸೆಗೆ ತೆರಳಿ ಬದುಕಿನ ರೀತಿಯನ್ನು ಆದರ್ಶಮಯವಾಗಿ ಬದಲಾಯಿಸಿದ ತರುಣರು ಸ್ಫೂರ್ತಿಯ ಚಿಲುಮೆಯಾಗಿದ್ದಾರೆ. ಗಾಂಧಿವಾದವನ್ನು ಬದುಕಿನಲ್ಲಿ ಅಳವಡಿಸಿ ಇತರರಿಗೂ ಆದರ್ಶವಾಗಿದ್ದಾರೆ.

೮.೨. ತುಳುನಾಡಿಗೆ ವಲಸೆ

೧೮ನೆಯ ಶತಮಾನದಿಂದ ತುಳುನಾಡಿನ ಜನತೆ ಹೊರನಾಡುಗಳಿಗೆ ವಲಸೆ ಹೋಗುವುದು ಸಾಮಾನ್ಯ ಅಂಶವಾಗಿದ್ದರೆ, ಕರ್ನಾಟಕದ ಇತರ ಭಾಗಗಳಿಂದ ಜನ ಉದ್ಯೋಗ ಅರಸಿ ತುಳುನಾಡಿಗೆ ಬರುವ ಪ್ರಕ್ರಿಯೆಯೂ ಇಲ್ಲದಿಲ್ಲ. ಬಿಜಾಪುರ ಮೊದಲಾದ ಬರಪೀಡಿತ ಪ್ರದೇಶಗಳಿಂದ ಜಮೀನು ಇರುವ ಜನರೂ ಸೂಕ್ತ ಮಳೆಯ ಕೊರತೆಯಿಂದಾಗಿ ಉದ್ಯೋಗ ಹುಡುಕಿ ಬರುವ ಸಂದರ್ಭ ವಲಸೆಯ ತೀವ್ರತೆಯನ್ನು ಚಿತ್ರಿಸುತ್ತದೆ. 'ಮುಖಾಂತರ' ಕಾದಂಬರಿಯಲ್ಲಿ ತಮ್ಮ ಊರಿನ ಅನಾವೃಷ್ಟಿಯಿಂದ ಭೂಮಿಯಿದ್ದರೂ ಬೆಳೆ ಬೆಳೆಯಲಾಗದ

ಮಂದಿ ಉದ್ಯೋಗಕ್ಕಾಗಿ ತುಳುನಾಡಿಗೆ ವಲಸೆ ಬಂದು ಕೃಷಿಕಾರ್ಮಿಕರಾಗಿ ದುಡಿಯುವ ಸಂದರ್ಭ ಚಿತ್ರಿತವಾಗಿದೆ.

ತುಳುನಾಡಿನಲ್ಲಿ ಕಾರ್ಮಿಕರು ಸಿಗುವುದು ತುಂಬಾ ಕಠಿಣವಾದಾಗ ಗುಲ್ಬರ್ಗ, ಬಿಜಾಪುರಗಳಿಂದ ಬಂದ ಕೂಲಿಯಾಳುಗಳು ಕಂಟ್ರಾಕ್ಟ್ ಮೂಲಕ ಕೆಲಸ ಮಾಡಿಸುವ ರೀತಿ ಗಮನಿಸಬಹುದು. ದಿನದ ಪಡಿ ಅಳೆಯುವಾಗ ಕೆಲಸ ಮಾಡದೆ ಪಡಿ ತಗೊಂಡು ಸೋಮಾರಿಯಾಗುವ ಸಾಧ್ಯತೆ ಇದೆ. ಕಂತ್ರಾಟು ನೀಡಿ ಕೆಲಸ ಮಾಡುವ ವಿಧಾನ ಅಗತ್ಯವಾಗುತ್ತದೆ.

ಆಂಬಕ್ಕೆಯ ಜೊತೆ ನಿಲ್ಲಲು ಕೆಲಸಕ್ಕಾಗಿ ಸುಂದರ ದೂರದ ಊರಿನಿಂದ ಕೆಲಸಕ್ಕಾಗಿ ಜನ ನೇಮಿಸುತ್ತಾನೆ. ಸೂಕ್ತವಾಗಿ ಯಾರೂ ನಿಲ್ಲದಿರುವುದನ್ನು ಕಾಣಬಹುದು.

ವೀರಪ್ಪ ಮೊಯಿಲಿಯವರ 'ಕೊಟ್ಟ'ದಲ್ಲಿ ಔದ್ಯೋಗಿಕ ವಲಸೆ ಚಿತ್ರಿತವಾಗಿದೆ. ಮಲ್ಲಯ್ಯ ಜೇನುಕುರುಬರ ಸಮುದಾಯಕ್ಕೆ ಸೇರಿದ್ದರೂ ನಂಜಪ್ಪಣ್ಣನವರ ಸಹಕಾರ, ಪ್ರೋತ್ಸಾಹಗಳಿಂದ ಶಿಕ್ಷಿತನಾಗಿ ಕುಂದಾಪುರದ ವಲಯ ಅರಣ್ಯಾಧಿಕಾರಿಯಾಗಿ ತುಳುನಾಡು ಪ್ರವೇಶಿಸುತ್ತಾನೆ. ಕಾಡುಗಳ್ಳರನ್ನು ಬಂಧಿಸಿ ಶಿಕ್ಷಿಸುವ ಸಂದರ್ಭದಲ್ಲಿ ಉಂಟಾದ ರಾಜಕೀಯ ತಿರುವುಗಳಿಂದಾಗಿ ಅಮಾನತುಗೊಂಡು ಕಾರ್ಕಳದ ಕಂಗೂರಿ ಕೊಟ್ಟದಲ್ಲಿ ನೆಲೆ ಕಂಡುಕೊಳ್ಳುತ್ತಾ ಬದಲಾವಣೆಯ ಹರಿಕಾರನಾಗುವ ರೀತಿಯನ್ನು ಗುರುತಿಸಬಹುದು. ಕೊರಗ ಸಮುದಾಯದ ಸಾಮಾಜಿಕ ಸುಧಾರಣೆ ಈ ಕಾದಂಬರಿಯ ಕೇಂದ್ರಬಿಂದುವಾಗಿದೆ. ಇತರೆ ಕಾದಂಬರಿಗಳಲ್ಲಿ ತುಳುನಾಡಿನಿಂದ ಪರವೂರುಗಳಿಗೆ ವಲಸೆ ಹೋಗುವ ಚಿತ್ರಣವಿದ್ದರೆ, ಕೊಟ್ಟದಲ್ಲಿ ಮಲ್ಲಯ್ಯನ ಪಾತ್ರದ ಮೂಲಕ ತುಳುನಾಡಿಗೆ ವಲಸೆ ಬಂದು ಬದಲಾವಣೆಗೆ ಕಾರಣನಾಗುವ ಕಥೆಯಿದೆ. ಮಲ್ಲಯ್ಯನ ಜೀವನದಲ್ಲಿ ನಡೆದ ರಾಜಕೀಯ ನಾಟಕಗಳಿಂದಾಗಿ ಕೊಟ್ಟದ ಪರಿಚಯವಾಗಿ ಅಲ್ಲೇ ನೆಲೆ ಊರುವ ನಿರ್ಧಾರ ತಳೆಯುತ್ತಾನೆ. ತಾನೂ ಕೂಡ ಕಾಡಿನ ಒಂದು ಸಮುದಾಯಕ್ಕೆ ಸೇರಿದವನಾಗಿದ್ದು, ಅಂಥದ್ದೇ ಇನ್ನೊಂದು ಸಮುದಾಯವಾದ ಕೊರಗರ ಏಳಿಗೆಗೆ ಬೆಂಬಲವಾಗಿ ನಿಲ್ಲುವ ದೃಢತೆ, ತಾಳ್ಮೆ, ಎಡರುತೊಡರುಗಳನ್ನು ಎದುರಿಸುವ ಜಾಣ್ಮೆ, ನಿರಂತರತೆ ಅವನಲ್ಲಿದೆ. ಕುಂದಾಪುರದ ವಿಭಾಗೀಯ ಅರಣ್ಯಾಧಿಕಾರಿಯಾಗಿ ಕಾಡನ್ನು ರಕ್ಷಿಸಲು ರಾಜಕೀಯ ಷಡ್ಯಂತ್ರಗಳಿಂದ ಅಸಾಧ್ಯವಾದರೂ ಜೀವಂತ ಜನಾಂಗವೊಂದಕ್ಕೆ ನಾಗರಿಕ ಪ್ರಜೆಗಳಾಗಿ ಬದುಕಲು ಆತನ ತ್ಯಾಗ ಮಹತ್ವದ್ದು. ಯಾವುದೇ ಆಮಿಷಗಳಿಗೆ ಬಲಿಯಾಗದ ವ್ಯಕ್ತಿತ್ವ ಇದಕ್ಕೆ ಪೂರಕವಾದದ್ದು.

ಕೊರಗರ ಮೂಲ ಉದ್ಯೋಗವಾದ ಬುಟ್ಟಿ ಹೆಣೆಯುವುದನ್ನು ಸಹಕಾರಿ ಸಂಘದ ಮೂಲಕ ಉದ್ಯೋಗವಾಗಿ ಪರಿವರ್ತಿಸಿ ಆರ್ಥಿಕವಾಗಿ ಶಕ್ತಿ ಬರುವಂತೆ ಮಾಡುವುದು. ಇದಕ್ಕೆ ಪೂರಕವಾಗಿ 'ಹೋರಾಟ' ಪತ್ರಿಕೆಯ ಸದಾಶಿವ, ವಕೀಲ ಧೀರಜ್ ಇನ್ನಿತರ ಸಜ್ಜನರ ಸಹಕಾರವೂ ಲಭ್ಯವಾಗುತ್ತದೆ. ಎಂಜಲು ತಿನ್ನುವ ಸಂಪ್ರದಾಯವನ್ನು ಬಿಡಲು ಒತ್ತಾಯ ಹಾಗೂ ತಿಳುವಳಿಕೆ, ಸತ್ತ ದನ, ಎಮ್ಮೆಗಳ ಮಾಂಸ ತಿನ್ನುವುದರ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾ ತಿಳಿವು ಅರಳುವಂತೆ ಮಾಡುವುದು ಗಮನಾರ್ಹವಾದುದು.

'ಕೊಟ್ಟದ ಮಕ್ಕಳು ಶಾಲೆಗೆ ಹೋಗಬೇಕಾದರೆ ನಾಲ್ಕು ಮೈಲಿ ದೂರದಲ್ಲಿರುವ ಬೀಡಿನಗುಡ್ಡೆ ಹತ್ತಿರ ಹೋಗಬೇಕು. ಬೆಳಗ್ಗೆಯೇ ಮಕ್ಕಳನ್ನು ಸ್ಕೂಲ್‌ಗೆ ಕಳುಹಿಸಬೇಕೆಂಬ ಅರಿವು ಕೊರಗ ತಂದೆತಾಯಿಗಳಿಗೆ ಹೇಗೆ ಬರಬೇಕು? ಅವತ್ತಿನ ಹೊಟ್ಟೆಪಾಡನ್ನು ನೋಡಿಕೊಂಡರೆ ಸಾಕು, ಕಾಡಿಗೆ ಹೋಗಿ ಬಿದಿರುಬಿಳಲುಗಳನ್ನು ತರುವುದು; ಅದನ್ನು ನೆನೆಹಾಕಿ ಹದ ಮಾಡಿ ಸೀಳಿಟ್ಟುಕೊಳ್ಳುವುದು. ಇಲ್ಲಬೂನು, ಚೆನ್ನಬೂನು, ಮಾದೇರಿಬೂನು ಮೊದಲಾದವುಗಳಿಂದ ಬುಟ್ಟಿ, ತೊಟ್ಟಲು, ಗೆರೆಲನೆ, ಕಳಸಿಗೆ, ಪೆಟ್ಟಿಗೆ, ಕುತ್ತೇರಿ, ಕದಿಕೆ, ಕಪಾಯಿ ಮೊದಲಾದವುಗಳನ್ನು ಸಿದ್ಧಮಾಡಿ ಅವುಗಳನ್ನು ಸಂತೆಗೆ ತೆಗೆದುಕೊಂಡು ಹೋಗಿ ಮಾರಿ ಒಂದೆರಡು ಕಾಸು ಮಾಡಿಕೊಂಡು ಸಂಜೆ ಹೊತ್ತಿಗೆ ಹೆಂಡದಂಗಡಿಗೆ ಹೋಗುವುದು ಅವರ ದೈನಂದಿನ ಕೆಲಸ. ಓದುವುದರಿಂದ ದೊರೆಯುವ ಪ್ರಯೋಜನವಾಗಲಿ, ಓದಲೇಬೇಕೆಂಬ ನಿರ್ಬಂಧವಾಗಲಿ ಕೊರಗರಿಗೆ ಇಲ್ಲ.'(ಕೊಟ್ಟ, ಪುಟ ೧೫೫)

ಇಲ್ಲಿ ಶಿಕ್ಷಣದ ಬಗ್ಗೆ ಕೊರಗರಿಗೆ ಇರುವ ಅಲಭ್ಯತೆ, ಕಠಿಣತೆ ಹಾಗೂ ಅರಿವಿಲ್ಲದಿರುವುದನ್ನು ಗುರುತಿಸಬಹುದು. 'ಕೊರಗರದೇ ಒಂದು ಜೀವನಶೈಲಿ. ಅವರು ನೀರು ತರುವುದಕ್ಕೆ ಒಂದು ಮೈಲಿ ದೂರ ಹೋಗಬೇಕು. ಎಲ್ಲರದೂ ಹಳೆಯ ಗುಡಿಸಲುಗಳೇ. ಒಬ್ಬರ ಮನೆಯಲ್ಲಾದರೂ ಇತ್ತೀಚಿನ ಪಾತ್ರೆ-ಪರಟಗಳಿಲ್ಲ. ಹಳೆಯ ಕಾಲದ ಬುಟ್ಟಿ ಹೆಣಿಗೆಯೇ ಇವರ ಜೀವನಾಧಾರ. ಇವರ ಕಷ್ಟಕ್ಕೆ ಯಾರೂ ಆಗುವುದಿಲ್ಲ. ಇವುಗಳೆಲ್ಲ ಸದಾಶಿವನ ಗಮನಕ್ಕೆ ಬಂದವು.'(ಕೊಟ್ಟ, ಪುಟ ೬೧)

ಪೀಂಚಲು, ದಿನಿ ಮೊದಲಾದವರಿಗೆ ಅಕ್ಷರಜ್ಞಾನ ಮತ್ತು ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶ, ಪ್ರೋತ್ಸಾಹ ನೀಡುವುದು. ಸತ್ತ ದನವನ್ನು ತಿನ್ನುವುದರ ಕುರಿತ ತಿಳುವಳಿಕೆ, ಸುಬ್ರಾಯ ಹೆಬ್ಬಾರರ ಬೊಜ್ಜಕ್ಕೆ ಎಂಜಲು ಎಲೆ ಸಂಗ್ರಹ, ತಿನ್ನುವುದನ್ನು ನಿಲ್ಲಿಸಿ, ತಾನೇ ಅಷ್ಟೇ ಬಗೆಯ ಭಕ್ಷ್ಯ ಭೋಜನಗಳೊಂದಿಗೆ ಸತ್ಕರಿಸುವುದು, ಧೀರಜ್‌ನ ಸಹಕಾರದೊಂದಿಗೆ ಕೊರಗರ ಸಮಗ್ರ ಅಭಿವೃದ್ಧಿ ಸೇವಾ ಸಹಕಾರ ಸಂಘ ಪ್ರಾರಂಭಿಸಿ ಅನುಕೂಲ ಮಾಡಿಕೊಡುವುದು.

೮.೩. ವಲಸೆಯಿಂದ ತುಳುನಾಡಿನ ಮೇಲಾದ ಪರಿಣಾಮಗಳು

೧. ಉನ್ನತ ಶಿಕ್ಷಣ

ಉನ್ನತ ಶಿಕ್ಷಣ ಹಾಗೂ ರಾತ್ರಿ ಶಾಲೆಗಳು ವ್ಯಕ್ತಿಗಳ ಚಿಂತನೆ ಹಾಗೂ ಮನೋಭಾವದಲ್ಲಿ ಉಂಟು ಮಾಡಿದ ಬದಲಾವಣೆಗಳು ಹಲವಾರು. 'ಇಂದಿರಾಬಾಯಿ'ಯ ಭಾಸ್ಕರ ವಿಧವೆಯನ್ನು ಮದುವೆಯಾಗುವುದು. ಪುನರ್ವಿವಾಹದ ಬಗ್ಗೆ ಸದಭಿಪ್ರಾಯ ಹೊಂದಿರುವುದು ಗಮನಿಸಬಹುದು. 'ಮರಳಿ ಮಣ್ಣಿಗೆ'ಯ ರಾಮ ಮದ್ರಾಸಿನಲ್ಲಿ ವಿದ್ಯಾಭ್ಯಾಸ ಪಡೆದದ್ದು, ಸ್ವಾತಂತ್ರ್ಯ ಚಳುವಳಿಯಲ್ಲಿ ದುಡಿಯಲು ಶಿಕ್ಷಣದಿಂದ ಪಡೆದ ಓದು ಹಾಗೂ ಅಂದಿನ ಪರಿಸ್ಥಿತಿ ಕಾರಣವಾಯಿತು. 'ಸಾಗರದೀಪ'ದ ಕುಮಾರ ಉದ್ಯೋಗ ಮಾಡುತ್ತಾ ರಾತ್ರಿ ಶಾಲೆಗೆ ತೆರಳಿ ವಕೀಲನಾದದ್ದು. ಶಿಕ್ಷಣ ಬದುಕಿನ ಹೊಸ ದಾರಿಗಳನ್ನು ತೆರೆಯಿತು. ಪರಂಪರೆಯಿಂದ ಬಂದ ಅನ್ನದ ಮಾರ್ಗಗಳಿಗೆ ಭಿನ್ನವಾದ ಮಾರ್ಗಗಳನ್ನು ತೋರಿಸಿತು. ಕುಮಾರ ಮೊಗವೀರನಾದರೂ ಶಿಕ್ಷಣ ಆತನಿಗೆ ಉನ್ನತ ಸದವಕಾಶ ದಯಪಾಲಿಸಿತ್ತು. 'ಕರಾವಳಿ'ಯ ಸಂಜೀವ ಉನ್ನತ ಹುದ್ದೆ ಪಡೆಯುವುದು ರಾತ್ರಿಶಾಲೆಯಿಂದ ಸಾಧ್ಯವಾಯಿತು.

೨. ಧರ್ಮ, ದೇವರು

'ಉಲ್ಲಂಘನೆ' ಕಾದಂಬರಿಯಲ್ಲಿ ಸುಂದರ 'ನಾಗಮಂಡಲ' ನಡೆಸುವ ಚಿತ್ರಣವಿದೆ. ನಾಗಮಂಡಲದಿಂದ ಗುತ್ತು ಮತ್ತೊಮ್ಮೆ ಎಲ್ಲರ ಕೇಂದ್ರವಾಗುತ್ತದೆ. ಇದಕ್ಕೆ ಬೇಕಾದ ಹಣ ಮುಂಬೈನ ಹೋಟೆಲ್ ದುಡಿಮೆಯಿಂದ ಸಾಧ್ಯವಾಗುತ್ತದೆ.

'ತೆಂಬರೆ' ಕಾದಂಬರಿಯಲ್ಲಿ ಚೆಲುವಯ್ಯ ಶೆಟ್ಟಿ ಬೊಂಬಾಯಿಯಲ್ಲಿ ಹೋಟೆಲ್ ಕೆಲಸಕ್ಕೆ ಹೋಗಿ ಸ್ವಂತ ಹೋಟೇಲು ಮಾಡಿ ಭೂಗತ ದೊರೆಯಾಗಿ ಬೆಳೆಯುತ್ತಾನೆ. ಚೆಲುವಯ್ಯ ಶೆಟ್ಟಿ ಊರಿಗೆ ಬಂದು ಎಪ್ಪತ್ತೈದು ಲಕ್ಷ ರೂಪಾಯಿ ಖರ್ಚಿನಲ್ಲಿ ಪಂಜುರ್ಲಿಗೆ ದೈವಸ್ಥಾನ ನಿರ್ಮಿಸುತ್ತಾನೆ. ದೈವಸ್ಥಾನಕ್ಕೆ ಹತ್ತು ಲಕ್ಷ ಖರ್ಚು ಮಾಡಿ ಬ್ರಹ್ಮಕಳಶ ಮಾಡುತ್ತಾನೆ. ಪಂಜುರ್ಲಿಗೆ ಏಳು ದಿನಗಳ ನೇಮವೂ ಆಗುತ್ತದೆ. ಕಾಳಹಣದಿಂದ ಸುಲಿಗೆಯ ಹಣದಿಂದ ವೈಭವದಿಂದ ಹಣ ಖರ್ಚುಮಾಡುತ್ತಾನೆ. ಆತನ ಕಪ್ಪುಹಣವೆಲ್ಲವೂ ಬಿಳಿಯಾಗುತ್ತದೆ. ಈ ರೀತಿ ಧರ್ಮರಕ್ಷಕನಾಗಿ ಬೆಳೆದ ಚೆಲುವಯ್ಯಶೆಟ್ಟಿ ಬೂದಮೂಲ್ಯನ ಜಮೀನನ್ನು ಅಪಹರಿಸಲು ಪ್ರಯತ್ನಿಸುತ್ತಾನೆ.

೩. ಚಿಂತನೆಗಳ ಪಲ್ಲಟ

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ವಲಸೆಯಿಂದ ಚಿಂತನೆಗಳಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಬಹುದು. ಕಮಲಿಯ ಭಾವ ಮುಂಬಯಿಯಲ್ಲಿ ನೆಲೆಕಂಡುಕೊಂಡಿದ್ದರು. ಅವರಲ್ಲಿ ತುಳುನಾಡಿನ ಜನಸಾಮಾನ್ಯರ ಚಿಂತನೆಗಳಿಗಿಂತಲೂ ಮೇಲ್ಮಟ್ಟದ ಉನ್ನತ ಚಿಂತನೆಗಳನ್ನು ಕಾಣಬಹುದು. ಕಮಲಿಗೆ ಗಂಡು ನೋಡುವಾಗಲೂ ಮುಂಬಯಿಯ ಉದ್ಯೋಗಿ ಸಂಬಂಧ ನೋಡಿದ್ದರು. ಕಲಿಕೆಗೆ ದೇಶ, ಕಾಲ, ಪ್ರಾಯದ ಹಂಗು ಇಲ್ಲ ಎಂಬ ಚಿಂತನೆ ಇತ್ತು. ಈ ವಿಚಾರಧಾರೆ ಕಮಲಿಯ ಮನದಲ್ಲೂ ನೆಲೆನಿಂತಿತ್ತು. ವಲಸೆಯಿಂದ ವ್ಯಕ್ತಿಯ ಚಿಂತನೆಗಳು ವಿಶಾಲವಾಗುವುವು. ಹಳ್ಳಿಯ ಜನರಿಗಿಂತ ಮುಂಚೂಣಿಗೆ ಹೋಗಿರುವುದು ಅರಿವಾಗುತ್ತದೆ. ಕಲಿಕೆಯನ್ನು ವಿವಾಹಪೂರ್ವದಲ್ಲಿ ಮಾತ್ರ ಕೈಗೊಳ್ಳುವ ಚಿಂತನೆಗಿಂತ ಭಿನ್ನವಾದ ಚಿಂತನೆ ವ್ಯಕ್ತವಾಗುತ್ತದೆ. ಹತ್ತನೇ ತರಗತಿಗೆ ಹುಡುಗಿಯರ ವಿದ್ಯಾಭ್ಯಾಸ ಮೊಟಕುಗೊಳಿಸಿ ವಿವಾಹಬಂಧನಕ್ಕೆ ಒಳಪಡಿಸುವ ಮಂಗಳೂರಿನ ಹಳ್ಳಿಯ ಮನೋಸ್ಥಿತಿಗಿಂತ ಮುಂಬಯಿಯ ಬೆಳೆದಿತ್ತು ಎನ್ನಬಹುದು.

'ಏನಾಯ್ತು? ನಿಮ್ಮ ಬೊಂಬಾಯಿ ಭಾವ ಏನು ಹೇಳ್ತಿದ್ರು ಗೊತ್ತುಂಟ? ಕಲಿಯಲಿಕ್ಕೆ ಕಾಲ, ದೇಶ, ಪ್ರಾಯ ಯಾವುದೂ ಇಲ್ಲಂಬ್ರು. ಗೊತ್ತಿಲ್ದ. ಎರಡು ಮಕ್ಕಳಾದ ಮೇಲೆ ಐಏಟಿಗೆ ಹೋಯಿ ಹಾಸ್ಟೆಲಿನಲ್ಲಿದ್ದು, ಮುಂದಿನ ಕಲಿಕೆ ಮಾಡಿದ್ದು.'(ಪಾಚಿ ಕಟ್ಟಿದ ಪಾಗಾರ, ಪುಟ ೩೩೭) ತನ್ನ ಭಾವನಿಂದ ಹೊಸ ತಿಳುವಳಿಕೆ ಪಡೆದ ಕಮಲಿ ಗಂಡ ಸೀತಾರಾಮನಿಗೆ ಹವ್ಯಾಸ, ಕಲಿಕೆ ಮುಂದುವರಿಯಲು ಪ್ರೋತ್ಸಾಹಿಸುತ್ತಾಳೆ.

'ನಿನ್ನ ಮಗುವಿನ ಸ್ಥಿತಿ ಏನಾಗಬೇಕು? ಹಿಂದೆ ದಿನ ಹೋದಂತೆ ಮುಂದೆಯೂ ಹೋದೀತೆ? ಅವನಿಗೆ ಏನಾದರೂ ವಿದ್ಯೆ ಕಲಿಸಿ ದೊಡ್ಡವನನ್ನಾಗಿ ಮಾಡಬೇಡವೇ? ಊರ

ಮಂದಿಯನ್ನು ನೋಡು. ಅಲ್ಲಿ ಇಲ್ಲಿ ಜನರನ್ನು ನೋಡು. ಯಾವಾವ ಚಾಕರಿ ಹುಡುಕಿಕೊಂಡು ಊರೂರು ಸುತ್ತುತ್ತಾರೆ. ನಾನು ಸಣ್ಣದಿರುವಾಗ, ಇಲ್ಲಿ ಹುಟ್ಟಿದವನಿಗೆ ಇಲ್ಲೇ ಮೋಕ್ಷವಿತ್ತು. ಈಗ -ಹಾಗಿಲ್ಲ ಉಣ್ಣುವುದಕ್ಕೆ ಉಡುವುದಕ್ಕೆ ಹೆಚ್ಚು ಬೇಕು, ಅನಿಸುತ್ತದೆ. ಇನ್ನು ಮುಂದೆ ಪಾಣಿಪಂಚೆ ಉಟ್ಟು ದಿನ ಹೋಗುವ ಹಾಗಿಲ್ಲ' ಎಂದರು. (ಮರಳಿ ಮಣ್ಣಿಗೆ, ಪುಟ ೨೭೭) ವಾಸುದೇವಯ್ಯ ನಾಗವೇಣಿಗೆ ಹೇಳುವ ಮೇಲಿನ ಮಾತುಗಳು ವಲಸೆಯ ಹೆಚ್ಚಳ, ಬದುಕಿಗೆ ಅಗತ್ಯವಾದ ಬಗೆಯನ್ನು ಗಮನಿಸಬಹುದು.

೪. ಕೌಟುಂಬಿಕ ಆರ್ಥಿಕತೆಯ ಹೆಚ್ಚಳ

'ಮರಳಿ ಮಣ್ಣಿಗೆ'ಯಲ್ಲಿ ಶೀನಮಯ್ಯ ಹಂಚು ಹೊದೆಸುವುದು, ಆಸ್ತಿ ಖರೀದಿ, ಸಾಲ ನೀಡುವಷ್ಟು ಬೆಳೆಯುವುದು, ಹಣದ ಮದದಿಂದ ಹೊಗಳಿಕೆಗೆ ಹಣ ನೀಡುವುದು. ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಿ ಬೆಳೆಯುವುದು. 'ಉಲ್ಲಂಘನೆ' ಕಾದಂಬರಿಯಲ್ಲಿ ಭೂಮಸೂದೆಯಿಂದ ಸ್ಥಾನಮಾನ ಕಳೆದುಕೊಂಡ ಗುತ್ತು ಸಹಜವಾಗಿ ಅಧಿಕಾರ ಕಳೆದುಕೊಳ್ಳುತ್ತದೆ. ಮುಂಬೈಗೆ ವಲಸಿಗನಾದ ಸುಂದರ ಹೊಟೆಲ್ ಉದ್ಯಮದಿಂದ ಕಳೆದುಕೊಂಡ ಗುತ್ತಿನ ಸ್ಥಾನಮಾನ, ಹಣಕಾಸಿನ ನಾಲ್ಕು ಪಟ್ಟು ಹೆಚ್ಚಿಸುವ ಭರವಸೆ ನೀಡುತ್ತಾನೆ. ಗುತ್ತು ಮನೆಯ ಸಾಂಪ್ರದಾಯಿಕತೆ ಮರೆಯುವಂತೆ ಆಧುನಿಕ ಸಾಧನಗಳಿಂದ ಮನೆ ತುಂಬುತ್ತದೆ.

೫. ಆಧುನಿಕತೆಯ ಪ್ರವೇಶ

'ಉಲ್ಲಂಘನೆ'ಯಲ್ಲಿ ಗುತ್ತು ಮನೆಗೆ ಸೋಫಾ ಸೆಟ್ಟು ಬರುವುದು, ಮನೆಯ ಒಳಗಿನ ಶೌಚಾಲಯ, ಮಡಿವಂತಿಕೆ ಮರೆಯಾಗುವುದು. ಕೃಷಿಗೆ ಟಿಲ್ಲರ್ ಬಳಕೆ. ಆಧುನಿಕತೆಯಿಂದ ಮಡಿಮೈಲಿಗೆ ಕಡಿಮೆಯಾಗುವುದು.

೬. ವಲಸೆಯಿಂದ ಸ್ಥಿತ್ಯಂತರವಾದ ತುಳುನಾಡಿನ ಸಂಸ್ಕೃತಿ

ಆರ್ಥಿಕವಾಗಿ ಸಬಲತೆ, ಗಳಿಸಿದ ಹಣದಿಂದ ಊರಿನಲ್ಲಿ ಆಸ್ತಿ ಖರೀದಿ, ಹೆಚ್ಚಿದ ಸ್ಥಾನಮಾನ, ನಾಗಮಂಡಲ ಮೊದಲಾದ ಆಚರಣೆಗಳನ್ನು ವಿಜೃಂಭಣೆಯಿಂದ ಆಚರಿಸುವುದು, ಸಾಲದಿಂದ ಮುಕ್ತಿ ಮೊದಲಾದುವುಗಳಿಂದ ಆರ್ಥಿಕ ಭದ್ರತೆ ಕಾಣಬಹುದು. ಶಿಕ್ಷಣದಿಂದ ವಲಸೆಯ ಹೆಚ್ಚಳವಾಗುವುದನ್ನು ಗುರುತಿಸಬಹುದು. 'ಆಧುನಿಕ ವಿದ್ಯಾಭ್ಯಾಸದ ಅವಕಾಶಗಳು ನನ್ನ ಮೊದಲ ತಲೆಮಾರಿನ ಬದುಕಿಗೆ ಕೊಟ್ಟ ದಿಕ್ಕನ್ನೂ, ನನ್ನ ತಲೆಮಾರಿನವರಿಗೆ ಹೊಸತೆನಿಸಿದ್ದನ್ನೂ ತೋರಿಸಿದ್ದೆ. ಅದರ ದೆಸೆಯಿಂದ ನೆಲವನ್ನು ಬಿಟ್ಟು, ಪರವೂರಿನಲ್ಲಿ ಉದ್ಯೋಗಕ್ಕೆ ಹಂಬಲಿಸಬೇಕಾದ ಪರಿಸ್ಥಿತಿ ಬಂದಿತು. ಹಾಗೆ ಹೊರಟುಹೋದ ಮೂರನೇ ತಲೆಮಾರಿನ ವ್ಯಕ್ತಿ ರಾಮ ಐತಾಳರ ಮೊಮ್ಮಗ: ಅವನೂ ರಾಮನೇ.[೨] ವಲಸೆ ಜನರಲ್ಲಿ ಆಧುನಿಕತೆಗೆ ಮುಖಾಮುಖಿಯಾಗಲು ಪ್ರೇರೇಪಿಸುತ್ತದೆ. ವಲಸಿಗರ ಅನುಭವದಿಂದ ತುಳುನಾಡು ಸಮೃದ್ಧವಾಯಿತು ಮಾತ್ರವಲ್ಲದೆ ಹೊಸ ಚಿಂತನೆಗಳು ರೂಪುಗೊಂಡವು.

'ಮುಂಬಯಿ ಮಹಾನಗರವು ತುಳುನಾಡಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ನೆಲೆಗಳನ್ನು ಪಲ್ಲಟಗೊಳಿಸುವಂತೆ ಪಾತ್ರವಹಿಸುತ್ತದೆ. ತುಳುವರ ಮುಂಬಯಿ ವಲಸೆ ಎನ್ನುವುದು ಕೇವಲ ಉದ್ಯೋಗವನ್ನರಸಿ ಆ ಸೀಮಿತ ನೆಲೆಯಲ್ಲಷ್ಟೇ ಉಳಿಯುವುದಿಲ್ಲ. ಹಣ ಸಂಪಾದನೆ ಮತ್ತು ಸ್ವಾವಲಂಬನೆ ಹಲವು ರೀತಿಗಳಲ್ಲಿ ವಿಶಿಷ್ಟ ಮನೋಭಾವ ಮತ್ತು ವ್ಯಕ್ತಿತ್ವವನ್ನು ರೂಪಿಸುತ್ತದೆ. ತುಳುನಾಡಿನ ಆಧುನಿಕ ಇತಿಹಾಸದ ಸಮಗ್ರ ನೆಲೆಯನ್ನು ಪರಿಭಾವಿಸಬೇಕಾದರೆ ಉದ್ಯೋಗನಿಮಿತ್ತ ಮುಂಬಯಿ, ವಿದೇಶಗಳಿಗೆ ಒಟ್ಟನಲ್ಲಿ ಬೇರೆ ಬೇರೆ ಪರವೂರುಗಳಿಗೆ ಹೋಗಿ ಸಂಪಾದಿಸಿದ ಹಣವನ್ನು ತಂದು ತುಳುನಾಡಿನಲ್ಲಿ ವಿನಿಯೋಗಿಸಿದ ಚರಿತ್ರೆಯ ಮೂಲಕ ದರ್ಶಿಸಬೇಕಾಗುತ್ತದೆ.[illegible] ಎಂದು ಆನಂದ ಕೋಡಿಂಬಳ ಹೇಳುವ ಮಾತುಗಳು ಮುಂಬೈ ವಲಸೆಯ ದರ್ಶನವನ್ನು ಮಾಡಿಸುತ್ತವೆ.

ಅಡಿಟಿಪ್ಪಣಿ

೧. ದಕ್ಷಿಣ ಕನ್ನಡದ ಶತಮಾನದ ಕತೆಗಳು, ಸಂ.ಬಿ. ಜನಾರ್ಧನ ಭಟ್, ಕನಾಟಕ ಸಂಘ ಪುತ್ತೂರು, ೨೦೦೩, ಮುನ್ನುಡಿ.

೨. ಸ್ಮೃತಿಪಟಲದಿಂದ ಸಂಪುಟ ೨, ಡಾ.ಶಿವರಾಮ ಕಾರಂತ, ಐಬಿಎಚ್ ಪ್ರಕಾಶನ, ಬೆಂಗಳೂರು, (ಪ್ರಮು.೧೯೭೮), ನಾಲ್ಕನೇ ಮುದ್ರಣ ೨೦೧೧, ಪುಟ ೪೮.

೩. ತುಳು ಸಾಹಿತ್ಯ ಚರಿತ್ರೆ, ಡಾ. ಬಿ.ಎ. ವಿವೇಕ ರೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ ೮೭೭.

ಅಧ್ಯಾಯ ೯. ತುಳುನಾಡಿನ ಕಥನ ಸಾಹಿತ್ಯದಲ್ಲಿ ಚಿತ್ರಣಗೊಂಡಿರುವ ಕೌಟುಂಬಿಕ ವ್ಯವಸ್ಥೆ

೯.೧. ಮಾತೃಪ್ರಧಾನ ವ್ಯವಸ್ಥೆ

೯.೨. ಮಾತೃಪ್ರಧಾನ ವ್ಯವಸ್ಥೆಗೆ ಬಂದ ತೊಡಕುಗಳು

೯.೩. ಕೆಳವರ್ಗದಲ್ಲಿ ಕೌಟುಂಬಿಕ ವ್ಯವಸ್ಥೆ

ಅಧ್ಯಾಯ ೯. ತುಳುನಾಡಿನ ಕಥನ ಸಾಹಿತ್ಯದಲ್ಲಿ ಚಿತ್ರಣಗೊಂಡಿರುವ ಕೌಟುಂಬಿಕ ವ್ಯವಸ್ಥೆ

೯.೧. ಮಾತೃಪ್ರಧಾನ ವ್ಯವಸ್ಥೆ

ಮಾತೃಪ್ರಧಾನ ವ್ಯವಸ್ಥೆಯ ಸ್ವರೂಪ

ಮಾತೃಪ್ರಧಾನ ವ್ಯವಸ್ಥೆ 'ಸಮಷ್ಟಿ ಕುಟುಂಬ ಪದ್ಧತಿಯೊಳಗಿನ ಉತ್ತರದಾಯಿತ್ವ ವ್ಯವಸ್ಥೆಯ ನಿಯಮವಾಗಿದೆ'.[೧] ಎಂದರೆ ಸುಳ್ಳಾಗದು. 'ಅಳಿಯಸಂತಾನ ಕಟ್ಟು' ಮತ್ತು ಕೇರಳದ 'ಮರುಮಕ್ಕತ್ತಾಯ'–ಮಾತೃಪ್ರಧಾನ ವ್ಯವಸ್ಥೆ ಒಳಗೇನೇ ಇರುವ ಒಂದು ವಿಶಿಷ್ಟ ಕುಟುಂಬ ಪದ್ಧತಿಯಾಗಿದೆ.[೨] ಉತ್ತರ ಹಾಗೂ ದಕ್ಷಿಣ ಅಮೆರಿಕಾದ ಮೂಲನಿವಾಸಿಗಳು, ಆಫ್ರಿಕದ ಕೆಲವು ಬುಡಕಟ್ಟು ಜನಾಂಗಗಳು, ಗ್ರೀಕದೇಶದ 'ಕ್ರೀಟ್' ದ್ವೀಪದವರು, ಸಿಂಹಳ ದ್ವೀಪದ 'ಬೆಂಟೆನ್ನೆ' ಎನ್ನುವ ಪ್ರದೇಶದ ಒಂದು ಜಾತಿಪಂಗಡದವರು, ಭಾರತ ದೇಶದ ಎಲ್ಲಾ ಭಾಗಗಳಲ್ಲಿದ್ದ ಕೆಲವು ಜಾತಿಪಂಗಡಗಳವರು ಹಿಂದಿಗೂ ಇಂದಿಗೂ ಮಾತೃಪ್ರಧಾನ ವ್ಯವಸ್ಥೆಯನ್ನೇ ಅನುಸರಿಸಿಕೊಂಡು ಬರುತ್ತಿದ್ದಾರೆ.[೩] "ತುಳು ನಾಡನ್ನು ಆರಂಭದಿಂದಲೂ ಆಳಿದ ಅಳುಪರು ಕೊನೆಯ ದಿನಗಳವರೆಗೂ ಅಳಿಯ ಕಟ್ಟನ್ನು ಪಾಲಿಸುತ್ತಿರಲಿಲ್ಲ. ಕ್ರಿ.ಶ. ೧೩ನೆಯ ಶತಮಾನದ ಮಧ್ಯಭಾಗದಲ್ಲಿ ಹಾಡುವಲ್ಲಿ ಮತ್ತು ನಗಿರೆ ರಾಜ್ಯಗಳ ಅರಸು ಮನೆತನಗಳವರು ಅಳಿಯ ಸಂತಾನ ಕಟ್ಟಿನವರಿದ್ದರು. ಅದರ ಪ್ರಭಾವದಿಂದ ಅಳಿಯ ಬಂಕಿದೇವನಲ್ಲಿ ತಾನೂ ಅಳುಪ ಸಿಂಹಾಸನದ ಉತ್ತರಾಧಿಕಾರಿ ಎಂಬ ಭಾವನೆ ಹುಟ್ಟಿಸಿರಬೇಕು." ಎಂಬ ಅಭಿಪ್ರಾಯ ಕೆ.ವಿ. ರಮೇಶ್ ಅವರದು.[೪] ವರ್ಣಾಶ್ರಮದಲ್ಲಿ ಅನುಲೋಮವಾಗಿ ಹುಟ್ಟಿದವರಿಗೆ (ಮೇಲ್ಜಾತಿಯ ತಂದೆ–ಕೆಳ ಜಾತಿಯ ತಾಯಿ) 'ಅಪಸದರು' ಎನ್ನುತ್ತಾರೆ. ಅವರಿಗೆ ತಾಯಿಯ ಜಾತಿ ಬರುತ್ತದೆ. ಇದೇ 'ಅಳಿಯ ಸಂತಾನ' ಪದ್ಧತಿಯ ಮೂಲವಾಗಿರಬೇಕೆಂದು ಕಡವ ಶಂಭು ಶರ್ಮರ ಅಭಿಪ್ರಾಯವಾಗಿದೆ[೫] ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವಂತಿಲ್ಲ. "ಮಾತೃ ಪ್ರಧಾನ ವ್ಯವಸ್ಥೆಯು ಇಲ್ಲಿನ ಕುಟುಂಬ ಪದ್ಧತಿಯ ವೈಶಿಷ್ಟ್ಯವಾಗಿತ್ತು. ಹೆಣ್ಣು ಮಗು ಹುಟ್ಟುವುದು ಶಾಪವಲ್ಲ; ಹುಟ್ಟದೇ ಇದ್ದರೆ ಶಾಪ. ಮನೆತನದ ಆಸ್ತಿ ಹಕ್ಕು, ಒಡೆತನ, ಯಜಮಾನಿಕೆಗಳು ಸೋದರ ಮಾವನಿಂದ ಅಳಿಯನಿಗೆ ಹಸ್ತಾಂತರವಾಗುತ್ತದೆಯೇ ಹೊರತು ಅವನ ಮಡದಿ ಮಕ್ಕಳಿಗಲ್ಲ. ಆಸ್ತಿಯ ಒಡೆತನ ಬೇರೆ ಮನೆತನದವರ ಪಾಲಾಗದಿರಲಿ ಎಂಬ ಉದ್ದೇಶದಿಂದಲೇ ಇಲ್ಲಿ ಸೋದರಿಕೆಯ ಸಂಬಂಧದ ಮದುವೆಗಳು ಹೆಚ್ಚು ರೂಢಿಯಲ್ಲಿವೆ. ತಾಯಿಯ ಸೋದರರ ಮಗ/ಮಗಳನ್ನು ಹಕ್ಕಿನಿಂದ ಮದುವೆಯಾಗಬಹುದು. ಮೂಲ ಕುಟುಂಬಗಳಲ್ಲಿ ಹಿರಿಯವಳಾದ ಹೆಣ್ಣೇ ಮನೆಯ ಯಜಮಾನ್ತಿ. ಅವಳ ಒಪ್ಪಿಗೆಯಿಲ್ಲದೆ ಕುಟುಂಬದ ಯಾವುದೇ ಕೆಲಸ ಕಾರ್ಯಗಳು ನಡೆಯಲಾರವು."[೬] ಈ ರೀತಿ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಪ್ರಧಾನ ಸ್ಥಾನಮಾನ ಇತ್ತು. ಆಕೆಯ ಯಜಮಾನಿಕೆಯಲ್ಲಿ ಮನೆಯ ಆಗುಹೋಗುಗಳು ನಡೆಯುತ್ತಿದ್ದವು

ಎಂಬುದನ್ನು ಅರಿಯಬಹುದು. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯೇ ಪ್ರಥಮ, ಪ್ರಧಾನ. ಪುರುಷನಷ್ಟೇ ಮಹಿಳೆಗೂ ಸ್ವಾತಂತ್ರ್ಯವಿದೆ. ಆಕೆಯ ಬದುಕಿನ ಕುರಿತ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಅಧಿಕಾರ ಆಯ್ಕೆಯ ಸ್ವಾತಂತ್ರ್ಯ ಆಕೆಗಿತ್ತು. ಮಾತೃಪ್ರಧಾನ ವ್ಯವಸ್ಥೆಯ ವಿವರ 'ಗಾಂಧಿ ಬಂದ', 'ಉಲ್ಲಂಘನೆ', 'ಕರಾವಳಿ' ಕಾದಂಬರಿಗಳಲ್ಲಿ ಚಿತ್ರಿತವಾಗಿದೆ.

ಗಡಿ ಹಿಡಿಯುವ ಅಧಿಕಾರ

ಗುತ್ತು ಮನೆಗಳು ಆಯಾ ಗ್ರಾಮದ ಅಧಿಕಾರವನ್ನು ಹೊಂದಿದ್ದವು. ಆ ಅಧಿಕಾರ ಪಡೆಯಲು ಗಡಿ ಹಿಡಿಯುವ ಕ್ರಮ ನಡೆಯಬೇಕಿತ್ತು. ಗಡಿ ಹಿಡಿಯುವುದು ಪಟ್ಟಾಭಿಷೇಕಕ್ಕೆ ಸಮಾನವಾದ ಒಂದು ವಿಧಿಯಾಗಿತ್ತು. ಬಂಟ ಜನಾಂಗದವರೇ ಹೆಚ್ಚಾಗಿ ಗಡಿ ಹಿಡಿಯುವವರಾಗಿದ್ದರು. ಗಡಿ ಹಿಡಿದ ನಂತರ ಕುಲನಾಮಗಳು ಬದಲಾಗುತ್ತಿದ್ದವು. ಬಲ್ಲಾಳ, ಹೆಗ್ಗಡೆ, ಆಳ್ವ ಎಂಬ ಕುಲನಾಮಗಳಿಂದ ಅವರು ಕರೆಯಲ್ಪಡುತ್ತಿದ್ದರು.

"ಸಾಂತೇರ್ ಗುತ್ತಿನ ಯಜಮಾನನಾಗುವವನಿಗೆ 'ಗಡಿ ಪತ್ತು'ನ ಧಾರ್ಮಿಕ ವಿಧಿ ಇರುವುದರಿಂದ ಅತನ ಕುಲನಾಮ ಮರೆಯಾಗಿ ಗಡಿ ಹಿಡಿದ ನಂತರ ಆತ 'ಹೆಗ್ದೆ' ಎಂದು ಆಗುತ್ತಾನೆ."(ಉಲ್ಲಂಘನೆ, ಪುಟ ೭೦)

ಇಡೀ ಗ್ರಾಮದ ಸಾಮರಸ್ಯವನ್ನು ಕಾಪಾಡುವುದು ಗುತ್ತಿನ ಯಜಮಾನನ ಜವಾಬ್ದಾರಿಯಾಗಿತ್ತು. ಗ್ರಾಮದ ಜನರ ಶುಭ ಕಾರ್ಯಕ್ರಮಗಳಿಗೆ, ದೈವ ಕಾರ್ಯಗಳಿಗೆ, ಮರಣ ಮುಂತಾದ ವಿಧಿಗಳಲ್ಲಿ ಗುತ್ತಿನ ಯಜಮಾನ ಮೇಲ್ವಿಚಾರಣೆ ನಡೆಸುತ್ತಿದ್ದ. 'ಗಾಂಧಿ ಬಂದ' ಕಾದಂಬರಿಯಲ್ಲಿ ಗುತ್ತಿನ ಯಜಮಾನನಾದ ಪಾಂಡು ಶೆಟ್ಟಿ ಕಂಬಳ, ಜಾರಿಗೆ ಬೈಲು ಸುಬ್ಬಯ್ಯ ಶೆಟ್ಟರ ಪತ್ನಿಯ ಮರಣ, ದಾರುವಿನ ಮದುವೆ ಮುಂತಾದ ಕಡೆ ಸಲಹೆ ನೀಡುವುದು, ಸಹಾಯ ಮಾಡುವ ವಿವರವಿದೆ. ಎಲ್ಲಾ ಸಮುದಾಯದವರು ಸೇರುವ ಈ ಕಾರ್ಯಗಳಲ್ಲಿ ಜಾತಿಪ್ರಜ್ಞೆಗಿಂತ ಭಿನ್ನವಾದ ಸಾಮರಸ್ಯ ಇರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಪ್ರತಿ ಸಮುದಾಯದವನು ತನಗೆ ಒದಗಿಸಿದ ಕರ್ತವ್ಯವನ್ನು ಸರಿಯಾಗಿ ಮಾಡಿ ಮುಗಿಸುತ್ತಿದ್ದ. ಇದು ಒಂದು ರೀತಿಯ ಸಂಘ ಜೀವನವನ್ನು ತೋರಿಸುತ್ತದೆ. ತುಳುನಾಡಿನಲ್ಲಿ ವೃತ್ತಿಪರವಾಗಿ ಇದ್ದ ಪಂಗಡಗಳೇ ಮುಂದೆ ಜಾತಿಯಾಗಿ ಬೆಳೆದಿರಬಹುದೆಂಬ ನಿಲುವು ಸ್ಪಷ್ಟವಾಗಿದೆ. 'ಅಳಿಯಕಟ್ಟು ಸಂಪ್ರದಾಯದಲ್ಲಿ ವಿವಾಹಿತ ಹೆಣ್ಮಗಳಿಗೆ ಗಂಡನ ಮನೆಯಲ್ಲಿ ಖಾಯಂ ಆಗಿ ಇರಬೇಕಾಗಿರುವುದು ಕಡ್ಡಾಯವಲ್ಲ. ಆಕೆಗೆ ತವರಿನಲ್ಲಿ ಖಾಯಂ ಆಗಿ ಇರುವ ಹಕ್ಕೂ ಇದೆ.'(ಉಲ್ಲಂಘನೆ, ಪುಟ ೩೨೩) 'ಉಲ್ಲಂಘನೆ'ಯ ಶಾಂತಕ್ಕೆ, ಅಂಬಕ್ಕೆ, 'ಗಾಂಧಿ ಬಂದ' ಕಾದಂಬರಿಯ ಸೊನ್ನೆ ಮುಂತಾದವರು ತಮ್ಮ ತವರು ಮನೆಯಲ್ಲಿಯೇ ಇದ್ದು ಮೇಲ್ವಿಚಾರಣೆ ನಡೆಸಿದವರು.

ಆಡಳಿತ ವ್ಯವಸ್ಥೆ

"ಕರಾವಳಿಯ ಪ್ರತಿಯೊಂದು ಗ್ರಾಮಗಳಲ್ಲಿ ಗ್ರಾಮಕ್ಕೆ ನಾಲ್ಕು ಅಥವಾ ಐದು ಜನ ಗುರಿಕಾರರಿರುತ್ತಾರೆ. ಒಬ್ಬ ಗುರಿಕಾರನು ಸತ್ತರೆ ಅವನ ಸ್ಥಾನಕ್ಕೆ ಅಳಿಯ ಸಂತಾನ ಪದ್ಧತಿಗನುಸಾರವಾಗಿ ಮೃತನ ಸೋದರಿಯ ಮಗ ಅಂದರೆ ಅಳಿಯ ಗುರಿಕಾರನಾಗುತ್ತಾನೆ. ಆದ್ದರಿಂದ ಒಂದೇ ಮನೆತನದಲ್ಲಿ ವಾರೀಸು ಹಕ್ಕು ಪ್ರಕಾರ

ಗುರಿಕಾರರ ನೇಮಕವಾಗುತ್ತದೆ."(ಕರಾವಳಿ, ಪುಟ ೬೦) ಇದು ಮೊಗವೀರರಲ್ಲಿ ಅಸ್ತಿತ್ವದಲ್ಲಿದ್ದ ಗುರಿಕಾರ ಪದ್ಧತಿ ಹಾಗೂ ಅದು ಅದು ಮಾತೃವಂಶೀಯವಾಗಿತ್ತು ಎಂಬ ಸತ್ಯವನ್ನು ತಿಳಿಸುತ್ತದೆ.

ಹೆಣ್ಣಿನ ಸ್ಥಾನಮಾನ

ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹಿರಿಯ ಹೆಣ್ಣುಮಗಳ ಸ್ಥಾನ ಪ್ರಮುಖವಾದುದು. ಪ್ರಮುಖ ನಿರ್ಧಾರಗಳಲ್ಲಿ ಅವಳ ಪಾತ್ರ ಹಿರಿದು. ಕಾಲಕಾಲಕ್ಕೆ ಸಾಗಬೇಕಾದ ಜವಾಬ್ದಾರಿಗಳ ಬಗ್ಗೆ ಎಚ್ಚರಿಕೆಯ ನೋಟವೂ ಅವಳಲ್ಲಿದೆ. ಗುತ್ತಿನ ಮನೆಯ ಕೃಷಿ, ಗೇಣಿವಸೂಲಿ, ಹಬ್ಬಗಳು, ಅಡುಗೆ ಕೋಣೆಯ ಮೇಲುಸ್ತುವಾರಿ ಹೀಗೆ ವರ್ಷವೂ ನಡೆಯುವ ಪ್ರತಿ ಕೆಲಸಗಳ ಹಂತದಲ್ಲೂ ಅವಳ ಮೇಲ್ತನಿಖೆ ಇದೆ. ಸಂಪ್ರದಾಯಕ್ಕೆ ಚ್ಯುತಿ ಬಾರದಂತೆ, ನಂಬಿದ ದೈವಕ್ಕೆ ಅಪಚಾರವಾಗದಂತೆ, ತೀರಿದ ಹಿರಿಯರ ಬದುಕಿನ ಮಾರ್ಗದಲ್ಲಿ ನಡೆದು ಸೈ ಎನ್ನಿಸುವ ಎಚ್ಚರ ಆಕೆಯದು. ಎಲ್ಲರನ್ನೂ ಒಟ್ಟಿಗೆ ಸೇರಿಸಿ ಸೌಹಾರ್ದತೆಯಿಂದ ನಡೆಯುವ ಒಡತಿಯರಂತೆ ದರ್ಪದಿಂದ ಕಾಲಕಸ ಮಾಡುವ ಒಡತಿಯರೂ ಇದ್ದಾರೆ. "ಕಂಬಳದ ಕೋಣಗಳನ್ನು ಸಾಕುವುದೆಂದರೆ ಗುತ್ತಿನ ಶೆಟ್ಟರ ಹೆಂಡ್ತಿಯರನ್ನು ಸಾಕಿದಂತೆ! ಅಳಿಯಕಟ್ಟು ಸಂತಾನದಲ್ಲಿ ಶೆಡ್ತಿಯರದ್ದು ಐಷಾರಾಮದ ಬದುಕು. ರಾಣಿ ಜೇನ್ನೋಣದ ಸುತ್ತ ಗಂಡು ಜೇನ್ನೋಣ ಇರುವ ಹಾಗೆ ಗುತ್ತಿನ ಶೆಡ್ತಿಯರ ಬೇಕು ಬೇಡಗಳಿಗೆ ಒಬ್ಬ ಗಂಡನಿರಬೇಕು: ಸುತ್ತಲೂ ಇತರ ಕೆಲಸಗಳಿಗೆ ಸೈನಿಕ ಜೇನ್ನೋಣಗಳಿರುವ ಹಾಗೆ ಆಳುಕಾಳುಗಳಿರಬೇಕು."(ಗಾಂಧಿ ಬಂದ, ಪುಟ ೨೭) ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ.

"ನಿಮ್ಮ ಅಳಿಯಕಟ್ಟಿನಲ್ಲಿ ಮತ್ತೊಂದು ಮದುವೆಯಾದರೂ ಇದೆ."(ಗಾಂಧಿ ಬಂದ, ಪುಟ ೮೩) ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ಮರುಮದುವೆಗೆ ಅವಕಾಶವಿತ್ತು.

ಗುತ್ತಿನೊಡತಿ ಬಿಟ್ಟು ಉಳಿದ ಹೆಂಗಳೆಯರ ದಾರುಣ ಜೀವನಸ್ಥಿತಿ ಸೂರಕ್ಕೆ ಬದುಕಿನ ವಿವರಗಳಿಂದ ತಿಳಿಯುತ್ತದೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಪ್ರಧಾನ ಸ್ಥಾನವಿರುವುದು ನಿಜವಾದರೂ ಹಿರಿಯ ಮಗಳಿಗೆ ಲಭ್ಯವಾಗುವ ಸ್ಥಾನ ಎರಡನೇ ಇಲ್ಲವೇ ಮೂರನೆ ಮಗಳಿಗೆ ಲಭ್ಯವಾಗದೆ ಅವರು ಶೋಷಣೆಗೆ ಒಳಗಾಗುವ ವಿವರ ಹಾಗೂ ಸಿಡಿದೆದ್ದು ಬೇರೆ ಮನೆ ಮಾಡುವ ವಿವರ 'ಗಾಂಧಿ ಬಂದ' ಕಾದಂಬರಿಯಲ್ಲಿದೆ. ಗುತ್ತಿನೊಡತಿ ಅಲ್ಲದೆ ಇತರ ಹೆಣ್ಣುಮಕ್ಕಳ ಗಂಡಂದಿರಿಗೆ ಸೂಕ್ತ ಗೌರವವೂ ಪ್ರಾಪ್ತವಾಗುತ್ತಿರಲಿಲ್ಲ. ದಿನವಿಡೀ ಶ್ರಮವಹಿಸಿ ದುಡಿದು ಅವರು ಹೈರಾಣಾಗುತ್ತಿದ್ದರು.

೯.೨. ಮಾತೃಪ್ರಧಾನ ವ್ಯವಸ್ಥೆಗೆ ಬಂದ ತೊಡಕುಗಳು

ವಸಾಹತುಶಾಹಿ ಪಲ್ಲಟಗಳು

ಸ್ವಾತಂತ್ರ್ಯದ ಅಪೇಕ್ಷೆಯು ತುಳುನಾಡಿನ ಮೇಲೂ ತನ್ನ ಪ್ರಭಾವ ಬೀರದಿರಲಿಲ್ಲ. ತುಳುನಾಡಿನ ಸಂಸ್ಕೃತಿಯನ್ನು ಪಲ್ಲಟಿಸುವಲ್ಲಿ ಸ್ವಾತಂತ್ರ್ಯ ಚಳುವಳಿಯ ಪಾತ್ರ ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಪ್ರಥಮ ಬಾರಿ ಶಿಕ್ಷಣ ಪಡೆದು ಹೊಸ ವಿಚಾರ, ದೃಷ್ಟಿಕೋನ ಬೆಳೆಸಿಕೊಂಡವರಿಗೆ ತಮ್ಮ ಬದುಕಿನ ರೀತಿ ರಿವಾಜುಗಳನ್ನು ವಿಶ್ಲೇಷಿಸಲು ಅವಕಾಶ ದೊರೆಯಿತು. ಸರಿಯಾದ ಚಿಂತನೆ ಇದ್ದವರಿಗೆ ಆವರೆಗಿನ ಸಾಮಾಜಿಕ ಶೋಷಣೆಗಳು ಬೆಳಕಿಗೆ ಬಂದು ಅದನ್ನು ಬದಲಾಯಿಸಲೇಬೇಕೆಂಬ ಛಲ ಉದಯಿಸಿತು. ಇದರ ಫಲವಾಗಿ ವಿದ್ಯಾವಂತರೆನಿಸಿಕೊಂಡವರು ಅದುವರೆಗೆ ನಡೆದುಕೊಂಡು ಬಂದ ಹಲವು ಸಂಪ್ರದಾಯ, ಬದುಕಿನ ರೀತಿನೀತಿಯನ್ನು ಪ್ರಶ್ನಿಸಲಾರಂಭಿಸಿದರು. ಹೀಗೆ ವ್ಯವಸ್ಥೆಯನ್ನೇ ತಿದ್ದಲು, ಬದಲಾಯಿಸಲು ಪಟ್ಟ ಪ್ರಯತ್ನ ಕಾದಂಬರಿಗಳಲ್ಲಿ ದಾಖಲಾಗಿದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಗಡಿ ಹಿಡಿಯುವ ಪದ್ಧತಿ ಮರೆಯಾಗುವುದು. ಮಾತೃಪ್ರಧಾನ ವ್ಯವಸ್ಥೆಗೆ ಗುತ್ತಿನಾರ್ ಅಗತ್ಯವಿದೆ. ಸಹೋದರ ಗುತ್ತಿನಾರ್ ಆಗಿದ್ದು ತನ್ನ ಸಹೋದರಿಯ ಕುಟುಂಬದ ಯೋಗಕ್ಷೇಮ ಕಾಪಾಡುವುದು ಪದ್ಧತಿ. ಸಂಕಪ್ಪಣ್ಣ ಗಾಂಧಿವಾದದ ಪ್ರಭಾವದಿಂದ ಗಡಿ ಹಿಡಿಯುವ ಪದ್ಧತಿಯನ್ನೇ ಆಚರಿಸಲು ಒಪ್ಪುವುದಿಲ್ಲ. ಹೀಗೆ ನಿಧಾನವಾಗಿ ಮಾತೃಪ್ರಧಾನ ವ್ಯವಸ್ಥೆ ಕುಸಿಯುವುದು ಕಂಡುಬರುತ್ತದೆ.

ಆಸ್ತಿಯ ಅಧಿಕಾರ

ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮನೆಯ ಹಿರಿಯ ಹೆಣ್ಣುಮಗಳಿಗೆ ಆಸ್ತಿಯ ಹಕ್ಕು ಇರುತ್ತದೆ. ಇದರಿಂದ ಆಸ್ತಿಯ ಜವಾಬ್ದಾರಿ ಗುತ್ತಿನಾರ್ ನೋಡಿಕೊಂಡಿದ್ದರೂ ಹಲವು ಬಾರಿ ಆತ ಹಾಗೂ ಆತನ ಪತ್ನಿ ನಲುಗುವುದು ಸಾಮಾನ್ಯ. ತನ್ನ ಕುಟುಂಬದ ರಕ್ಷಣೆಗಾಗಿ ಗುಟ್ಟಿನಲ್ಲಿ ಆಸ್ತಿ ಖರೀದಿಸುವುದು ನಡೆಯುತ್ತಿತ್ತು. ಇದು ಮನೆಯ ಹೆಣ್ಣುಮಕ್ಕಳಿಗೆ ತಿಳಿದು ಸಮಸ್ಯೆಗಳೂ ಸೃಷ್ಟಿಯಾಗುತ್ತಿದ್ದವು. ಇದರ ವಿವರಗಳು 'ಗಾಂಧಿ ಬಂದ', 'ಉಲ್ಲಂಘನೆ', 'ಮುಖಾಂತರ' ಮುಂತಾದ ಕಾದಂಬರಿಗಳಲ್ಲಿ ಲಭ್ಯವಾಗುತ್ತವೆ.

"ತಾಯಿಯ ಮೂಲದಿಂದ ಬಂದ ಆಸ್ತಿ, ಹೆಣ್ಣು ಸಂತಾನದ ಮೂಲಕ ಮುಂದಿನ ತಲೆಮಾರಿಗೆ ಹೋಗಬೇಕೆಂಬುದು ಸಾಂಪ್ರದಾಯಿಕ ಕಾನೂನು. ಸಾಮಾನ್ಯವಾಗಿ ಆಸ್ತಿಯು ತಾಯಿಯ ಹೆಸರಿನಲ್ಲಿ ಇರುತ್ತಿತ್ತು. ಆಡಳಿತ ನಡೆಸುವವನು ಮಗನಾಗಿರುತ್ತಿದ್ದ. ಮಗನಿಗೆ ಆಸ್ತಿಯ ಅನುಭೋಗ್ಯದ ಅಧಿಕಾರ ಇರುತ್ತದೆ. ಆದರೆ ಆಸ್ತಿಯನ್ನು ಪರಭಾರೆ ಮಾಡುವಂತಿರಲಿಲ್ಲ"[೭] ಎಂದು ತಿಳಿದುಬರುತ್ತದೆ. ಮಗನಿಗೆ ಆಸ್ತಿಯ ಹಕ್ಕು ಇಲ್ಲದ ಕಾರಣ ಆತ ಹಲವು ಬಾರಿ ಹೆಂಗಸರ ತಿರಸ್ಕಾರಕ್ಕೆ ಒಳಗಾಗುತ್ತಿದ್ದ. 'ಗಾಂಧಿ ಬಂದ' ಕಾದಂಬರಿಯಲ್ಲಿ ಪಾಂಡು ಶೆಟ್ಟರು ಮುಂದಾಲೋಚನೆಯಿಂದ ಭೂಮಿಯನ್ನು ಖರೀದಿಸಿ ಉಸ್ತುವಾರಿಯನ್ನು ಜಾರಿಗೆ ಸುಬ್ಬಯ್ಯ ಶೆಟ್ಟರಿಗೆ ವಹಿಸಿಕೊಟ್ಟಿರುವ ವಿವರಗಳಿವೆ. "ಮುಂದೆ ಎಂದಾದರೊಂದು ದಿನ ತನ್ನ ತಾಯಿ–

ತಂಗಿಯರ ಒರಟುತನ, ಜಿಪುಣತನ, ದುರಹಂಕಾರ, ಸ್ವಾರ್ಥಲಾಲಸೆಯ ಸಿಕ್ಕೊಳಗೆ ತಾನು ಸಿಕ್ಕು ಒದ್ದಾಡುವುದು ಖಚಿತವೆಂದು ಮನಗಂಡು, ಈಗಿಂದೀಗಲೇ ತನ್ನ ಬುಡಗಟ್ಟಿ ಮಾಡಿಕೊಂಡಿರುವುದು ಅವರ ಮುಂದಾಲೋಚನಾ ಕಾರ್ಯವೈಖರಿಗೆ ಹಿಡಿದ ಕನ್ನಡಿ. ಪಣಂಬೂರಿನಲ್ಲಿ ಮೂವತ್ತು ಮುಡಿ ಗದ್ದೆ, ತಣ್ಣೀರು ಬಾವಿಯಲ್ಲಿ ನಾಕು ಎಕ್ರೆ ತೆಂಗಿನ ತೋಟ, ಬೈಕಂಡಿಯಲ್ಲಿ ನಾಕು ಮುಡಿ ಗದ್ದೆ, ಹತ್ತೆಕ್ರೆ ತೋಟ, ಕೂಳೂರಿನಲ್ಲಿ ನಲವತ್ತೆರಡು ಮುಡಿ ಬೈಲುಗದ್ದೆಯನ್ನು ಗುಟ್ಟಾಗಿ ಖರೀದಿಸಿ, ತನ್ನ ಹೆಸರಿಗೆ ಮಾಡಿಕೊಂಡು ಅದರ ಉಸ್ತುವಾರಿಯನ್ನು ಜಾರಿಗೆ ಬೆಟ್ಟಿನ ಸುಬ್ಬಯ್ಯ ಶೆಟ್ಟರಿಗೆ ವಹಿಸಿಕೊಟ್ಟಿದ್ದಾರೆ."(ಗಾಂಧಿ ಬಂದ, ಪುಟ ೯೯) ಮಾತೃಪ್ರಧಾನ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ, ತನ್ನ ಕುಟುಂಬದ ಭದ್ರತೆಯ ಬಗ್ಗೆ ಎಚ್ಚರಿಕೆ ವಹಿಸುವ ಪುರುಷ ತಲ್ಲಣದ ಚಿತ್ರಣ ಕಂಡುಬರುತ್ತದೆ. ಅಧಿಕಾರದ ಗರ್ವದಿಂದ ಹೆಣ್ಣುಮಕ್ಕಳು ದುರಂಹಕಾರಿಗಳಾದ ವರ್ತನೆ ಮಾತೃಪ್ರಧಾನ ವ್ಯವಸ್ಥೆಯ ಹುಳುಕುಗಳನ್ನು ಬಿಡಿಸಿಡುತ್ತದೆ.

'ಮುಖಾಂತರ' ಕಾದಂಬರಿಯಲ್ಲಿ ಇದೇ ರೀತಿ ಆಸ್ತಿ ಖರೀದಿಸಿದ ಸೋದರ ಮಾವನನ್ನು ಹಳಿಯುವ ಸೋದರ ಸೊಸೆಯ ವಿವರಗಳಿವೆ. ಆಸ್ತಿ ಖರೀದಿಸಿದ ಸಂಪತ್ತಿನ ಮೂಲ ಗುತ್ತು ಮನೆಯದೇ ಆದ ಕಾರಣ ಆಸ್ತಿ ಗುತ್ತಿನದೇ ಎನ್ನುವುದು ಅಕ್ಷರ ಕಲಿತ ಸೋದರ ಸೊಸೆಯ ವಾದ.

ವಸಾಹತೋತ್ತರ ಪಲ್ಲಟಗಳು

ಭೂಮಸೂದೆ ಜಾರಿಯಿಂದ ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆಗೆ ಪೆಟ್ಟು ಬೀಳುವುದು. ಆಸ್ತಿ ಒಕ್ಕಲುಗಳಿಗೆ ಹಂಚಿ ಹೋದುದರಿಂದ ಮಾತೃಪ್ರಧಾನ ವ್ಯವಸ್ಥೆಗೆ ತೊಡಕುಂಟಾಗಲು ಕಾರಣವಾಯಿತು.

"೧೯೪೯ರಲ್ಲಿ 'ಮದ್ರಾಸ್ ಅಳಿಯ ಸಂತಾನ ಕಾಯಿದೆ' ಬಂತು. ಅದುವರೆಗೆ ಹಲವಾರು ಹೆಣ್ಣುಮಕ್ಕಳ ಸಂತಾನ ಒಬ್ಬ ಯಜಮಾನನ ಆಡಳಿತದಲ್ಲಿ ಜೀವಿಸುತ್ತಿತ್ತು. ಕುಟುಂಬದ ಹಿರಿಯ ಮಹಿಳೆ ಯಜಮಾನಿಯಾಗಿ ಒಳ ಆಡಳಿತ ನೋಡುತ್ತಿದ್ದಳು. ಈ ಕಾನೂನಿನ ಪ್ರಕಾರ ಗಂಡಿನ ಸ್ವಯಾರ್ಜಿತ ಆಸ್ತಿಗೆ ಆತನ ಹೆಂಡತಿ ಮಕ್ಕಳು ಹಕ್ಕುದಾರರಾಗಬಹುದು ಅಥವಾ ತಾಯಿ ಹಾಗೂ ಕುಟುಂಬದವರು ಹಕ್ಕುದಾರರಾಗಬಹುದು."[೮] ಕಾದಂಬರಿಗಳಲ್ಲಿ ತಮ್ಮ ಹೆಂಡತಿಯರಿಗಾಗಿ ಆಸ್ತಿ ಖರೀದಿಸುವ ವಿವರಗಳಿವೆ.

"೧೯೫೬ರ ತಿದ್ದುಪಡಿ ಕಾನೂನಿನಂತೆ ತಾಯಿಯ ಮೂಲದ ಆಸ್ತಿ ಪಾಲಾಗುವಾಗ ಗಂಡಿಗೂ ಒಂದು ತಲೆಯ ಪಾಲು ದೊರಕುತ್ತಿತ್ತು. ಆದರೆ ಅವನ ಮರಣಾನಂತರ ಆ ಆಸ್ತಿಯು ಕರಾರು ಪತ್ರದಲ್ಲಿ ಸೂಚಿಸಿದ ಕುಟುಂಬದ ಹೆಣ್ಣು ಸಂತತಿಯ ಕವರಿಗೆ ಹೋಗುತ್ತಿತ್ತು."[೯] "೧೯೭೬ರಲ್ಲಿ ಬಂದ ಮೈಸೂರು ತಿದ್ದುಪಡಿ ಕಾಯಿದೆಯಂತೆ ಗಂಡು ಮಕ್ಕಳು ತಾಯಿಯ ಮೂಲದ ತಮ್ಮ ಪಾಲಿನ ಆಸ್ತಿಯನ್ನು ತಮ್ಮ ಇಚ್ಛಾನುಸಾರ ಪರಭಾರೆ ಮಾಡುವ ಹಕ್ಕು ಪಡೆದರು."[೧೦]

ವಿಶೇಷ ಆರ್ಥಿಕ ವಲಯದಿಂದಾಗಿ ತುಳುನಾಡಿನ ಕೆಲ ಪ್ರದೇಶಗಳು ಇತರ ಪ್ರದೇಶಗಳಿಗಿಂತ ಭಿನ್ನ ತೆರಿಗೆ ಹಾಗೂ ಕಾನೂನು ವ್ಯಾಪ್ತಿಗೆ ಒಳಪಟ್ಟವು. ಆರ್ಥಿಕತೆಯನ್ನು ಹೆಚ್ಚಿಸಲು ಜಾಗತೀಕರಣದ ಪ್ರಭಾವದಿಂದಾಗಿ ಭೂಮಿಯನ್ನು ಕಡಿಮೆ ಬೆಲೆಗೆ ಪಡೆದುಕೊಂಡು ಕೈಗಾರಿಕೋದ್ಯಮಿಗಳಿಗೆ ನೀಡುವ ವ್ಯವಸ್ಥಿತ ಜಾಲವೊಂದು ಅಸ್ತಿತ್ವಕ್ಕೆ ಬಂತು. ಪರಂಪರೆಯಿಂದ ಬಂದ ಕೃಷಿ ಭೂಮಿಯನ್ನು ನೋಡುವ ಜನರಿಲ್ಲದೆ, ಕೂಲಿ ಕಾರ್ಮಿಕರ ಅಲಭ್ಯತೆ, ಹೆಚ್ಚಿದ ಕೃಷಿ ಖರ್ಚು ಮೊದಲಾದವು ಅದನ್ನು ಮಾರಲು, ಲಾಭ ಪಡೆಯಲು ಯತ್ನಿಸಿದವು.

'ಉಲ್ಲಂಘನೆ' ಕಾದಂಬರಿಯಲ್ಲಿ ವಿಶೇಷ ಆರ್ಥಿಕ ವಲಯಕ್ಕಾಗಿ ಆಸ್ತಿ ಮಾರುವ ಹುನ್ನಾರ ನಡೆಸುವ ಪ್ರಶಾಂತನ ವಿವರವಿದೆ. ಗುತ್ತಿನ ಮನೆ ಹಾಗೂ ಆಸ್ತಿಯನ್ನು ಮಾರಿ ಹೆಚ್ಚಿನ ಲಾಭಗಳಿಸುವ ಆಸೆ ಆತನದು. ಜೊತೆಗೆ ಗುತ್ತಿನ ಜಮೀನಿನ ಸಮೀಪದ ಆಸ್ತಿಯನ್ನು ಲಾಭದ ಆಮಿಷ ಒಡ್ಡಿ ಮಾರಲು ತಂತ್ರ ರೂಪಿಸುತ್ತಾನೆ. ಗುತ್ತಿನ ಜಮೀನು ವಿಶೇಷ ಆರ್ಥಿಕ ವಲಯಕ್ಕೆ ಸೇರಿಹೋಗುವ ಎಲ್ಲ ಮುನ್ಸೂಚನೆಯನ್ನು ಕಾದಂಬರಿ ತೆರೆದಿಡುತ್ತದೆ.

'ಮುಖಾಂತರ' ಕಾದಂಬರಿಯಲ್ಲಿ ನಾರಾಯಣ ಹಾಗೂ ಶ್ರೀನಿವಾಸ ಜಮೀನನ್ನು ಹೆಚ್ಚಿನ ಲಾಭದ ಆಸೆಯಿಂದ ಮಾರುವ ಪ್ರಯತ್ನದ ವಿವರವಿದೆ. ಫಲವತ್ತಾದ ಕೃಷಿ ಭೂಮಿ ಕೈಗಾರಿಕೋದ್ಯಮಿಗಳ ಪಾಲಾಗುವುದು ತಪ್ಪದು ಎಂಬ ಸತ್ಯ ಕಾದಂಬರಿ ತೆರೆದಿಡುತ್ತದೆ. ಹಿರಿಯರಿಗೆ ಭೂಮಿ ಮಾರಲು ಮನಸ್ಸಿಲ್ಲ; ಆದರೆ ದುಡಿಯುವ ವಯಸ್ಸಿಲ್ಲ. ಎಲ್ಲವನ್ನು ಲಾಭದ ದೃಷ್ಟಿಯಿಂದ ನೋಡುವ ಹೊಸ ತಲೆಮಾರು ಜಮೀನು ಮಾರಿ ಲಾಭ ಗಳಿಸಲು ಹಿಂದೆ ಮುಂದೆ ನೋಡುವುದಿಲ್ಲ. ಹಳೆ ತಲೆಮಾರು ಮತ್ತು ಹೊಸ ತಲೆಮಾರಿನ ಈ ಸಂಘರ್ಷದಲ್ಲಿ ಹೊಸ ತಲೆಮಾರು ಗೆಲ್ಲುವ ಬಗೆ ದಾಖಲಾಗಿದೆ.

"ತೌಳವ ಸಂಸ್ಕೃತಿಗೆ ಅನನ್ಯವಾದ ಗುಣವೊಂದು ಇದೆ. ಅದು ತೀರ ಆಧುನಿಕವಾಗುತ್ತಿರುವಾಗಲೂ ತನ್ನ ಮಾತೃತ್ವದ ಗುಣವನ್ನು ಬಿಟ್ಟುಕೊಡುತ್ತಿಲ್ಲ. ಸಮುದಾಯದ ಬದ್ಧತೆಯನ್ನು ತಿರಸ್ಕರಿಸುತ್ತಿಲ್ಲ"[೧೧] ಆದರೂ ಇಂದು ಕೂಡ ಆಸ್ತಿಯ ಹಕ್ಕು ಹೆಣ್ಣುಮಕ್ಕಳಿಗೆ ಇರುವುದು ಮುಂದುವರಿದುಕೊಂಡು ಬಂದಿದೆ.

೯.೩. ಕೆಳವರ್ಗದಲ್ಲಿ ಕೌಟುಂಬಿಕ ವ್ಯವಸ್ಥೆ

'ತೆಂಬರೆ' ಕಾದಂಬರಿಯಲ್ಲಿ ಎಂ.ವೀರಪ್ಪ ಮೊಯಿಲಿ ಅವರು ಪಂಬದ ಜನಾಂಗದ ನೋವು-ನಲಿವು, ಏಳು-ಬೀಳು, ಭೂತಾರಾಧನೆಯ ಆಚರಣೆಯ ಸಂದರ್ಭದಲ್ಲಿ ಎದುರಾಗುವ ಸಂಕಷ್ಟಗಳನ್ನು ವಿವರವಾಗಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಮೋಂಟ ಪಂಬದನ ಮಗ ಪಿಜಿನ. ಪಿಜಿನ ಆತನ ಹೆಂಡತಿ ಮೈರೆ, ಹಾಗೂ ಮಕ್ಕಳಾದ ಲಕನ, ಐತ, ತೋಮು ಅವರ ಕೌಟುಂಬಿಕ ಜೀವನದ ಚಿತ್ರಣದೊಂದಿಗೆ ಕುಟುಂಬಗಳು ವಿಭಕ್ತಗೊಂಡಿರುವ ಬಗ್ಗೆ, ಕೂಡುಕುಟುಂಬದ ಸುಖದ ಅರಿವನ್ನು ನೀಡುವಂತಹ ವಿವರಗಳನ್ನು ನೀಡಿದ್ದಾರೆ. ಪಿಜಿನ

ಪಂಬದನದು ಬಡತನದ ಜೀವನ. ಭೂತದ ಕೋಲ ಕಟ್ಟುವುದು ಆತನ ವೃತ್ತಿ. ಭೂತಾರಾಧನೆ ಮಾಡಬೇಕಾದರೆ ಬಳೆ ಹಾಕುವ ಸಂಪ್ರದಾಯ ಪ್ರಧಾನವಾಗಿ ನಡೆಯುತ್ತಿತ್ತು. ಬಳೆ ಹಾಕಿದ ಮೇಲೆ ಹಲವು ನಿಯಮಗಳು ಅದರ ಸುತ್ತ ಸುತ್ತುತ್ತವೆ. ಬಳೆ ಹಾಕಿದ ಭೂತವನ್ನು ಹೊರತುಪಡಿಸಿ ಇನ್ನು ಯಾವುದೇ ಭೂತಗಳಿಗೆ ಕೋಲ ಕಟ್ಟಬಾರದು. ನಿಗದಿತ ಸೀಮೆಯ ಗಡಿ ದಾಟಿ ಹೋಗಬಾರದೆಂಬ ನಿಬಂಧನೆ. ಭೂತಾರಾಧನೆಯಿಂದ ಬರುವ ಆದಾಯದಿಂದ ಪಿಜಿನನ ಕುಟುಂಬ ಸಾಗುವುದಿಲ್ಲ. ಆತನ ಹೆಂಡತಿ ಮೈರೆ ಗದ್ದೆಯ ಕೆಲಸಕ್ಕೆ ಕೂಲಿ ಕೆಲಸಕ್ಕೆ ಹೋಗಿ ಮಕ್ಕಳನ್ನು ಸಾಕುತ್ತಾಳೆ. ಭೂತರಾಧನೆಯ ದಿನ ಪಿಜಿನನಿಗೆ ಮಹಾಗೌರವ ಲಭ್ಯವಾದರೂ ಉಳಿದ ದಿನಗಳಲ್ಲಿ ಆತ ಕೇವಲ ಅಸ್ಪೃಶ್ಯ, ಬಡವ. ಮೇಲ್ವರ್ಗದವರಿಂದ ಭೂತದ ಸತ್ಯದ ನುಡಿ ನುಡಿಯುವಾಗ ಹೇಳಬೇಕಾದ ಸತ್ಯಕ್ಕೆ ಚ್ಯುತಿ ಬಂದಾಗ ಆತ ಗೊಂದಲಕ್ಕೆ ಬೀಳುತ್ತಾನೆ. ಸತ್ಯವನ್ನು ಬಿಡದೆ ಸಾವಿಗೆ ಈಡಾಗುತ್ತಾನೆ. ಈ ರೀತಿ ಪಂಬದರ ಬದುಕು ಸಾವಿನೊಂದಿಗಿನ ಪಯಣ. ಪಿಜಿನನ ಹೆಂಡತಿಯಾಗಿ ಮೈರೆ ಓರ್ವ ಅಶಿಕ್ಷಿತ, ಕೆಳವರ್ಗದ ಮಹಿಳೆ ಭೂತಾರಾಧನೆ ಹಾಗೂ ಕುಟುಂಬದ ಹಿತಕ್ಕಾಗಿ ದುಡಿಯುವ ಶ್ರಮಸಂಸ್ಕೃತಿಯ ಮಹಿಳೆಯಾಗಿ ಗುರುತಿಸಿಕೊಳ್ಳಬಹುದು. ಭೂತಕೋಲ ಇಲ್ಲದ ದಿನಗಳಲ್ಲಿ ಪಿಜಿನ ಗೆಳೆಯರೊಡನೆ ಸಂಭಾಷಿಸುತ್ತಾ, ಸುತ್ತಾಡುತ್ತಾ ಸಮಯ ಕಳೆದರೂ ಮೈರೆ ಕುಟುಂಬದ ಭದ್ರತೆಗೆ ಹಠ ತೊಟ್ಟವಳಂತೆ ದುಡಿಯುತ್ತಾಳೆ. ಪಿಜಿನನ ಭೂತಕಟ್ಟುವ ಕೆಲಸದ ಹಿಂದೆ ಆಕೆಯ ಅಪಾರ ಶ್ರಮವಿದೆ. ಆದರೆ ಆಕೆ ಬೆಳಕಿಗೆ ಬಾರದೆ ಉಳಿಯುತ್ತಾಳೆ. 'ಮನೆಯಲ್ಲಾದರೂ ಅಷ್ಟೇ, ಪಿಜಿನನೊಬ್ಬನ ಸಂಪಾದನೆಯಿಂದಲೇ ಮನೆ ನಡೆಯುವುದಿಲ್ಲ. ಮೈರೆ ಗದ್ದೆಯ ಕೆಲಸಕ್ಕೆ, ಕೂಲಿಯ ಕೆಲಸಕ್ಕೆ ಹೋಗಿ ದುಡಿದು ತಂದ ಸಂಪಾದನೆಯಲ್ಲಿ ಮೂವರು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದ್ದು ಒಂದು ಸಾಹಸಗಾಥೆ. ಪಿಜಿನ ಕೋಲ-ನೇಮಗಳ ಕೆಲಸ ಇಲ್ಲದಿದ್ದಾಗ ಮನಸ್ಸಿಗೆ ಇಷ್ಟ ಬಂದರೆ ಕೂಲಿಯ ಕೆಲಸಕ್ಕೆ ಹೋಗುತ್ತಿದ್ದ. ಇಲ್ಲದಿದ್ದರೆ ಸುತ್ತಮುತ್ತ ತಿರುಗಾಡುವುದು, ಊರ ಅಂಗಡಿ ಹೋಟೆಲುಗಳ ಬಳಿ ಕುಳಿತು ಹರಟೆ ಹೊಡೆಯುವುದು-ಹೀಗೆ ಬಡತನದಲ್ಲೂ ಅವನದು ವಿರಾಮ ಜೀವನ. ಮೈರೆ ಕೋಳಿ ಕೂಗುವಾಗ ಎದ್ದವಳು, ಗಂಜಿ ಬೇಯಿಸಿ ಮಕ್ಕಳನ್ನು ಉಣ್ಣಿಸಿ, ಗಂಡನಿಗೆ ಬಡಿಸಿ ಕೆಲಸಕ್ಕೆ ಹೋದಳೆಂದರೆ ಮಾತ್ರ ನೇಸರು ನಡುನೆತ್ತಿಗೇರಿದಾಗ ಮನೆಗೆ ಬಂದಾಳು. ಎಲ್ಲೆಲ್ಲೂ ಚೆಲ್ಲಿಹೋಗಿದ್ದ ಮಕ್ಕಳನ್ನು ಹಿಡಿದುಕೊಂಡು ಬಂದು ನೀರಿನಲ್ಲಿ ಮುಳುಗಿಸಿ, ಉಣ್ಣಿಸಿ ಮತ್ತೆ ಕೆಲಸಕ್ಕೆ ಹೋದರೆ, ಮನೆಯ ಮುಖ ಕಾಣುವುದು ಕತ್ತಲಾದ ಬಳಿಕವೇ.'(ತೆಂಬರೆ, ಪುಟ ೩೬) 'ಪಿಜಿನನ ಕೈಹಿಡಿವಾಗ ತುಂಬಿಕೊಂಡು ಕೆಂಪು ಚಿಮ್ಮುತ್ತಿದ್ದ ಮೈರೆ ನಿಧಾನವಾಗಿ ಎಂಬಂತೆ ಚರ್ಮ ಅಂಟಿಕೊಳ್ಳುವಂತೆ ಆದದ್ದು ಮತ್ತು ಬೆಳೆದದ್ದು ಬೇರೆ ಬೇರೆ ಕತೆಗಳಲ್ಲ.'(ತೆಂಬರೆ, ಪುಟ ೩೭) ಕೆಳವರ್ಗದ ಕುಟುಂಬಗಳ ಮಹಿಳೆಯರ ಶ್ರಮಭರಿತ ಜೀವನ, ಕುಟುಂಬದ ಏಳಿಗೆಯಲ್ಲಿ ಅವರ ಶ್ರಮದ ಕುರಿತು ಸಹಾನುಭೂತಿಯಿಂದ ಚಿತ್ರಿಸಿದ್ದಾರೆ.

ಪಿಜಿನನ ಮಕ್ಕಳ ಕಾಲಕ್ಕೆ ಬದಲಾವಣೆಯ ದಾರಿಯನ್ನು ಗುರುತಿಸಬಹುದು. ಐತ ಹೆಚ್ಚು ಓದದೆ, ಗಾರೆ ಕೆಲಸಕ್ಕೆ ಮುಂದಾಗುತ್ತಾನೆ; ಲಕನ ಹೆಚ್ಚಿನ ವಿದ್ಯಾಭ್ಯಾಸ ಪಡೆದು ತಹಶೀಲ್ದಾರನಾಗುತ್ತಾನೆ; ತೋಮು ಹಿರಿಯರ ಒತ್ತಾಸೆಯಂತೆ ವಿವಾಹವಾದರೂ, ಹಿಂಸೆಗೆ ನಲುಗಿ ಅಲ್ಲಿಂದ ಹೊರಬಂದು ಓದಿ ವಕೀಲೆಯಾಗುತ್ತಾಳೆ. ದುಡಿಯಲು ಸ್ವಂತ ಭೂಮಿ ಸಿಗದ ಪಂಬದರಿಗೆ ಶಿಕ್ಷಣ ಶ್ರೀರಕ್ಷೆಯಾಗುತ್ತದೆ. ಐತ ಮರಳಿ ತಂದೆಯಂತೆಯೇ ಭೂತ ಕಟ್ಟುವ ಕೆಲಸಕ್ಕೆ

ಮರಳುತ್ತಾನೆ. ಐತ, ಲಕನ, ತೋಮು ಮೂವರೂ ಮೂರು ದಿಕ್ಕಿನಲ್ಲಿ ಚಲಿಸಿದರೂ, ಸತ್ಯವನ್ನು ಕಾಪಾಡುವ, ಅಪ್ರಾಮಾಣಿಕತೆಯ ವಿರುದ್ಧ ಹೋರಾಡಲೇಬೇಕಾದ ಅನಿವಾರ್ಯತೆಯನ್ನು ಬೆಳೆಸಿಕೊಳ್ಳುತ್ತಾರೆ. ಸತ್ಯ ಹೇಳುವ ಪರಂಪರೆಯಿಂದ ಬಂದ ಅವರು ಸತ್ಯಕ್ಕಾಗಿ ಶ್ರಮಿಸುತ್ತಾರೆ. ಅಸತ್ಯ ಅಪ್ರಾಮಾಣಿಕತೆ ಎಲ್ಲಾ ರಂಗಗಳಲ್ಲೂ ವ್ಯಾಪಿಸಿರುವುದನ್ನು ವೀರಪ್ಪ ಮೊಯಿಲಿ ಚಿತ್ರಿಸುತ್ತಾರೆ. ಅಪ್ರಾಮಾಣಿಕತೆಯಿಂದ ಪಾತ್ರಗಳು ತಲ್ಲಣ ಅನುಭವಿಸುತ್ತಾರೆ.

ಐತ ಭೂಮಸೂದೆಯ ಫಲವಾಗಿ ನ್ಯಾಯವಾಗಿ ಬೂದನಿಗೆ ಸಿಗಬೇಕಾದ ಭೂಮಿಯ ಕುರಿತು ಅಭಯ ನೀಡುತ್ತಾ ಸುಳ್ಳಿನ ವಿರುದ್ಧ ಹೋರಾಡುತ್ತಾನೆ. ಲಕನ ತಹಶೀಲ್ದಾರನಾಗಿ ದೊಡ್ಡ ದೊಡ್ಡ ಅಧಿಕಾರಿಗಳ ಮೋಸ, ವಂಚನೆ ಬಯಲಿಗೆ ಎಳೆಯುತ್ತಾನೆ. ತೋಮು ವಕೀಲೆಯಾಗಿ ಬೂದನ ಪರ ವಾದ ಮಾಡುತ್ತಾ, ಸಹವಕೀಲರ ಸಹಾಯ, ಸಹಕಾರವಿಲ್ಲದೆ ಏಕಾಂಗಿಯಾಗಿ ಹೋರಾಡುತ್ತಾಳೆ. ಈ ರೀತಿ ಮೂವರೂ ಸತ್ಯದ ನಿಷ್ಠೆಯನ್ನು ಕಾಪಾಡಲು ಹೆಣಗಾಡುತ್ತಾರೆ.

ಹಲವು ತಲ್ಲಣಗಳ ನಡುವೆ ಲಕನನ ಹೆಂಡತಿ ತನಿಯಾರು ಅಂಗವಿಕಲ ಮಗುವಿಗೆ ಜನ್ಮ ನೀಡುತ್ತಾಳೆ. ಐತನ ಸತ್ಯನಿಷ್ಠೆಯ ಮದಿಮುವಿನಿಂದ ಚೆಲುವಯ್ಯ ಶೆಟ್ಟಿಗೆ ಭೂಮಿ ಸಿಗದೆ ಆತನ ಅನುಚರರು ಬೆಂಕಿ ಕೊಟ್ಟ ಗುಡಿಸಲಿನಲ್ಲಿ ಮೈರೆ ಸುಟ್ಟು ಹೋಗುತ್ತಾಳೆ. ಈ ರೀತಿ ಹಲವು ವಿಪ್ಲವಗಳ ನಂತರ ಮತ್ತೆ ತನಿಯಾರುವಿನ ಬೇಡಿಕೆಗೆ ಮಣಿದು ಊರಿಗೆ ಮರಳಿದಾಗ ಆತನಿಗೆ ಕೂಡುಕುಟುಂಬದ ಮಹತ್ವದ ಅರಿವಾಗುತ್ತದೆ. ವಿಭಕ್ತ ಕುಟುಂಬಗಳಾಗಿ ಮಕ್ಕಳು, ದೊಡ್ಡವರು ಎಲ್ಲರೂ ಏಕಾಂಗಿ, ಅನಾಥ ಪ್ರಜ್ಞೆಗೆ ಒಳಗಾಗುತ್ತಿರುವ ಬಗ್ಗೆ ಆತನಿಗೆ ದುಃಖ ಉಂಟಾಗುತ್ತದೆ. ಹಿಂದಿನಂತೆಯೆ ಅವಿಭಕ್ತ ಕುಟುಂಬಗಳು ಬದುಕುವುದು ಅಸಾಧ್ಯವೆಂಬ ಚಿಂತನೆಯೂ ಆತನಲ್ಲಿದೆ. ಆದರೆ ಕುಟುಂಬಗಳು ಆಗಾಗ ಒಟ್ಟು ಸೇರಿ, ಬೇರೆ ಬೇರೆ ವಿಷಯಗಳನ್ನು ಮಾತನಾಡಬೇಕು, ಸಮಯ ಕಳೆಯಬೇಕೆಂಬ ಚಿಂತನೆ ಮಾಡುತ್ತದೆ.

'ನಮ್ಮ ಹಿಂದಿನ ಕಾಲದ ಕೂಡುಕುಟುಂಬಗಳನ್ನು ಮತ್ತೆ ಹಾಗೆಯೇ ಪುನರುಜ್ಜೀವನಗೊಳಿಸುವುದು ಅಸಾಧ್ಯ ಆದರೆ ಕುಟುಂಬದವರು ಮತ್ತೆ ಮತ್ತೆ ಒಟ್ಟು ಸೇರುವ, ಒಡನಾಡುವ ವಿಚಾರ ವಿನಿಮಯ ನಡೆಸುವ ಅವಕಾಶಗಳು ಹೆಚ್ಚಾಗಬೇಕು. ಹಳ್ಳಿಬಿಟ್ಟು ನಗರಕ್ಕೆ ಬಂದವರು ನಗರದ ಸೌಲಭ್ಯಗಳ ಜೊತೆಗೆ ಹಳ್ಳಿಯ ಲೋಕದೃಷ್ಟಿಯನ್ನು ಹೊಂದಬೇಕಾದರೆ ಇಂಥ ಸಮಾಗಮ ಬಹಳ ಮುಖ್ಯ'(ತೆಂಬರೆ, ಪುಟ ೧೩೩) ಕೆಳವರ್ಗದ ಕುಟುಂಬದ ಮಹಿಳೆಯರ ಶ್ರಮಭರಿತ ಜೀವನ, ಕುಟುಂಬದ ಏಳಿಗೆಯಲ್ಲಿ ಅವರ ಶ್ರಮದ ಕುರಿತು ಸಹಾನುಭೂತಿಯಿಂದ ಚಿತ್ರಿಸಿದ್ದಾರೆ.

ಅಡಿಟಿಪ್ಪಣಿ

೧. ತುಳುನಾಡವರ ಸಮಾಜ, ಬಿ.ಸಚ್ಚಿದಾನಂದ ಹೆಗ್ಡೆ, ಕೌಸ್ತುಭ ಪ್ರಕಾಶನ, ಬೆಂಗಳೂರು, ೨೦೧೦, ಪುಟ ೧೯.

೨. ತುಳುನಾಡವರ ಸಮಾಜ, ಬಿ.ಸಚ್ಚಿದಾನಂದ ಹೆಗ್ಡೆ, ಕೌಸ್ತುಭ ಪ್ರಕಾಶನ, ಬೆಂಗಳೂರು ೨೦೧೦, ಪುಟ ೨೦.

೩. ತುಳುನಾಡವರ ಸಮಾಜ, ಬಿ.ಸಚ್ಚಿದಾನಂದ ಹೆಗ್ಡೆ, ಕೌಸ್ತುಭ ಪ್ರಕಾಶನ, ಬೆಂಗಳೂರು ೨೦೧೦, ಪುಟ ೨೧.

೪. ರಮೇಶ್ ಕೆ.ವಿ. ತುಳುನಾಡಿನ ಇತಿಹಾಸ, ಗೀತಾಬುಕ್ ಹೌಸ್, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ಪುಟ ೫೯.

೫. ತುಳುನಾಡವರ ಸಮಾಜ, ಬಿ.ಸಚ್ಚಿದಾನಂದ ಹೆಗ್ಡೆ, ಕೌಸ್ತುಭ ಪ್ರಕಾಶನ, ಬೆಂಗಳೂರು ೨೦೧೦, ಪುಟ ೨೨.

೬. ಬಿ.ಎಂ. ರೋಹಿಣಿ, ಶಶಿಲೇಖಾ ಬಿ., ತುಳುನಾಡಿನ ಮಾಸ್ತಿಕಲ್ಲುಗಳು ವೀರಕಲ್ಲುಗಳು, ಪಿಕ್ಸೆಲ್ ಡಿಸೈನರ್ಸ್, ಕುದ್ರೋಳಿ ಮಂಗಳೂರು, ೨೦೧೦, ಪುಟ ೪೩.

೭. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಡಾ.ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ೧೬೬

೮. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಡಾ.ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪, ಪುಟ ೧೫೪.

೯. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಡಾ.ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ೧೫೫.

೧೦. ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಡಾ.ಇಂದಿರಾ ಹೆಗ್ಗಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ೧೫೫.

೧೧. ತುಳುವ ದರ್ಶನ, ಪೀಟರ್ ಜೆ. ಕ್ಲಾಸ್(ಅನುವಾದ ಎ.ವಿ. ನಾವಡ), ೧೯೮೭, ಪ್ರಾದೇಶಿಕ ವ್ಯಾಸಂಗ, ಕುಂದಾಪುರ, ಪುಟ ೧೮೬

ಅಧ್ಯಾಯ ೧೦. ತುಳುನಾಡಿನ ಕಥನ ಸಾಹಿತ್ಯ ಚಿತ್ರಿಸುವ ಉದ್ಯಮದ ಸ್ವರೂಪ

೧೦.೧. ಹೋಟೆಲ್ ಉದ್ಯಮ

೧೦.೨. ಬೀಡಿ ಉದ್ಯಮ

೧೦.೩. ಪ್ರಾಣಿ ಸಾಕಾಣಿಕೆ

೧೦.೪. ಬ್ಯಾಂಕಿಂಗ್

೧೦.೫. ಜೇನು

೧೦.೬. ಮೀನುಗಾರಿಕೆ

ಅಧ್ಯಾಯ ೧೦. ತುಳುನಾಡಿನ ಕಥನ ಸಾಹಿತ್ಯ ಚಿತ್ರಿಸುವ ಉದ್ಯಮದ ಸ್ವರೂಪ

೧೦.೧. ಹೋಟೆಲ್ ಉದ್ಯಮ

ಹೋಟೆಲ್ ಉದ್ಯಮ ತುಳುವರ ಪಾಲಿಗೆ ವರವಾಗಿ ಪರಿಣಮಿಸಿತು. ಇಲ್ಲಿನ ಬ್ರಾಹ್ಮಣ ಸಮುದಾಯದವರು ಅಡುಗೆಯಲ್ಲಿ ವಿಶೇಷ ಪರಿಣತಿ ಹೊಂದಿದ್ದವರು. ಕೆಲವರು ಹೋಟೆಲ್‌ಗಳನ್ನೂ ತೆರೆದರು. ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಇದೊಂದು ಉತ್ತಮ ಅವಕಾಶವಾಯಿತು.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಶೀನಮಯ್ಯ ತನ್ನ ಮಗ ನರಸಿಂಹನನ್ನು ಬೆಂಗಳೂರಿನಲ್ಲಿ ಹೋಟೆಲ್ ಕೆಲಸಕ್ಕೆ ಕಳುಹಿಸಲು ಸಿದ್ಧನಾಗುತ್ತಾನೆ. ಸಾಲವೂ ತೀರಿ, ಮನೆಯ ಆರ್ಥಿಕತೆಗೆ ದಾರಿಯಾಗುತ್ತದೆ ಎಂಬುದಾಗಿ ನಂಬುತ್ತಾನೆ. ರಾಮ ಐತಾಳರು ಎಲ್ಲ ಜಾತಿಯವರು ಬರುವ ಹೋಟೆಲಿನ ಬಗ್ಗೆ ತಾತ್ಸಾರ ವ್ಯಕ್ತಪಡಿಸುತ್ತಾರೆ. ಅಂಥ ಕಡೆ ದುಡಿಯಲು ಹೋಗುವ ಕುರಿತು ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಶೀನಮಯ್ಯ 'ಬ್ರಾಹ್ಮಣರಿಗೆ ಮಾತ್ರ ಊಟ ನೀಡುವ ಹೋಟೆಲು' ಎಂಬ ನಿಲುವನ್ನು ಸಮರ್ಥಿಸುತ್ತಾ, 'ಅಕ್ಕಿ ಮಾರಬಹುದಾದರೆ ಅನ್ನ ಏಕೆ ಮಾರಬಾರದು?' ಎಂಬ ಪ್ರಶ್ನೆಯನ್ನೇ ಮುಂದಿಡುತ್ತಾರೆ. ಅನ್ನ ಮಾರುವುದು ಅಪರಾಧ ಎಂಬ ನಂಬಿಕೆ ತೀವ್ರವಾಗಿತ್ತು. ಅನ್ನ ಮಾರಬಹುದು ಎಂಬ ಆಲೋಚನಾ ಪಲ್ಲಟ ಮುಖ್ಯವಾದದ್ದು. ಉಪನಯನದ ನಂತರ ನರಸಿಂಹನನ್ನು ಬೆಂಗಳೂರಿಗೆ ಕಳುಹಿಸಿಯೂ ಬಿಡುತ್ತಾನೆ. ಮುಂದಿನ ವರುಷಗಳಲ್ಲಿ ತನ್ನ ಎರಡನೆಯ ಮಗ ಹಾಗೂ ಮೂರನೆಯ ಮಗನನ್ನೂ ಕಳುಹಿಸಿಕೊಡುತ್ತಾನೆ. ಊರಿನಲ್ಲೇ ನಿಲ್ಲಿಸಿದರೆ ತನ್ನ ನಂತರ ದುಡಿಯಲು ಗದ್ದೆಗಳು ಸಾಲವು ಎಂಬ ಲೆಕ್ಕಾಚಾರ ಶೀನಮಯ್ಯರಲ್ಲಿದೆ. ಎಂಟು ಮಕ್ಕಳಿಗೆ ಇರುವ ಸ್ವಲ್ಪ ಗೇಣಿಗದ್ದೆಗಳನ್ನು ಪಾಲು ಮಾಡಿದರೆ ಬದುಕಲು ಸಾಧ್ಯವಿಲ್ಲದ ಪರಿಸ್ಥಿತಿ ಅವರಿಗೆ ಎದುರಾಗಿ ಮಕ್ಕಳನ್ನು ಹೋಟೆಲ್ ಉದ್ಯಮಕ್ಕೆ ಕಳುಹಿಸುವ ದಿಟ್ಟ ನಿರ್ಧಾರ ಕೈಗೊಳ್ಳುತ್ತಾರೆ.

ಶೀನಮಯ್ಯನ ಇಬ್ಬರು ಮಕ್ಕಳು ಹಾಗೂ ಭಾವ ಸೇರಿ ಮಾಡಿದ 'ಶ್ರೀಲಕ್ಷ್ಮೀನರಸಿಂಹ ಪ್ರಸನ್ನ', ಬಳೆಪೇಟೆಯ ಹೋಟೆಲು ಭಾರಿ ಮುನಾಫೆಯನ್ನು ನೀಡುತ್ತದೆ. ನರಸಿಂಹ ಪ್ರತಿ ತಿಂಗಳೂ ೫೦ ರೂಪಾಯಿಗಳ ಮನಿಯಾರ್ಡರನ್ನು ಮನೆಗೆ ಕಳುಹಿಸುತ್ತಾನೆ. ವ್ಯಾಪಾರ ವೃದ್ಧಿಯಾಗುತ್ತದೆ. ಮನೆಯವರೇ ಕೆಲಸ ಮಾಡುವುದರಿಂದ ನಂಬಿಕೆಯೂ ಇದ್ದು ವ್ಯಾಪಾರ ದಿನೇದಿನೇ ವೃದ್ಧಿಯಾಗುತ್ತದೆ. ಶೀನಮಯ್ಯನ ಮಕ್ಕಳು, ಭಾವನೂ ಉದ್ಯಮದಲ್ಲಿ ಪಳಗಿದರು. ಊರಿನಲ್ಲೇ ಇದ್ದಿದ್ದರೆ ಗದ್ದೆಯಲ್ಲಿ ದುಡಿದು ಆಸ್ತಿಪಾಲು ಮಾಡಿಕೊಂಡು ಇತಿಮಿತಿಯಲ್ಲಿ ಬದುಕು ಸಾಗಿಸಬೇಕಿತ್ತು. ಆದರೆ ಹೋಟೆಲ್ ಉದ್ಯಮವು ಬದುಕಿಗೆ ಹೊಸ ಮಾರ್ಗವಾಯಿತು. ಶೀನಮಯ್ಯ ತನ್ನ ಮೂವರು ಮಕ್ಕಳನ್ನು ಹೋಟೆಲ್ ಉದ್ಯಮಕ್ಕಾಗಿ ಬೆಂಗಳೂರಿಗೆ ಕಳುಹಿಸಿಕೊಡುತ್ತಾನೆ. ಮನೆಯವರೇ ಇದ್ದರೆ ನಂಬಿಕೆಗೆ ಮೋಸ ಇಲ್ಲ. ಲಾಭಾಂಶವೂ ಇರುವುದರಿಂದ ಶೀನಮಯ್ಯ ಈ ದಾರಿಯಲ್ಲಿ ಮುಂದುವರಿದ. ಯಾವುದೇ ಕೆಲಸ

ಮಾಡುತ್ತಿದ್ದಂತೆ, ಅದರ ಒಳಹೊರಗುಗಳನ್ನು ಅರಿತುಕೊಂಡು ಯಶಸ್ವಿಯಾಗುವುದು ವಾಡಿಕೆ. ಮಗನ ಶ್ರೀಮಂತಿಕೆ, ವೈಭವದಿಂದ ಶೀನಮಯ್ಯ ಊರಿನಲ್ಲಿ ಆಸ್ತಿಗಳನ್ನು ಕೊಳ್ಳಲಾರಂಭಿಸುತ್ತಾನೆ. ಆಸ್ತಿಗಳನ್ನು ಒಂದೊಂದಾಗಿ ಕೊಂಡಂತೆ ಶೀನಮಯ್ಯನಲ್ಲಿ ದೊಡ್ಡಸ್ತಿಕೆ ಅಧಿಕವಾಗುತ್ತದೆ. ತಾನೂ ಒಬ್ಬ ಶ್ರೀಮಂತನೆಂಬಂತೆ ಆತ ವರ್ತಿಸುತ್ತಾನೆ. ಸಾಲವನ್ನು ನೀಡಿ ಬಡ್ಡಿಯಿಂದ ದುಡ್ಡು ಮಾಡುವ ವಿಧಾನವೂ ಕರಗತವಾಗುತ್ತದೆ. ಊರಿನ ಗುರಿಕಾರರಿಗೆ ಸಾಲ ನೀಡಿದ ಶೀನಮಯ್ಯ ಗುರಿಕಾರನ ಮಗಳ ವಿವಾಹದಲ್ಲಿ ಭಾರಿ ಗೌರವಕ್ಕೆ ಪಾತ್ರನಾಗುತ್ತಾನೆ. ಗುರಿಕಾರನ ಮಗಳ ಲಗ್ನದ ಸಂದರ್ಭದಲ್ಲಿ 'ಶೀನಮಯ್ಯ ಮಹಾರಾಜಕೊ ದೌಲತ್‌ಜಾದ' ಎಂದು ಹದಿನೆಂಟು ಬಾರಿ ಸಲಾಮು ಹಾಕಿಸಿಕೊಳ್ಳುತ್ತಾನೆ. ಸಲಾಮುಗಳ ದುಡ್ಡನ್ನು ಕೊಟ್ಟುಬಿಡುತ್ತಾನೆ. ಶೀನಮಯ್ಯ ಕೋಡಿಯ ದೊಡ್ಡ ಕುಳವಾಗಿ ಹೊರಹೊಮ್ಮುತ್ತಾನೆ. ಮಕ್ಕಳ ಹೋಟೆಲಿನ ದುಡಿಮೆಯಿಂದ ಊರಿಗೆ ಶ್ರೀಮಂತನಾಗುತ್ತಾನೆ. ಶೀನಮಯ್ಯ ಹಾಗೂ ಕುಟುಂಬಕ್ಕೆ ಹೊಸ ಅನ್ನದ ದಾರಿಯೂ ದೊರೆತು ಊರಿನಲ್ಲಿ ಪ್ರತಿಷ್ಠಿತರಾಗುವುದು ಸಾಧ್ಯವಾಯಿತು. ಹಣ, ಹೆಸರು ಎರಡೂ ಮಕ್ಕಳಿಂದ ಶೀನಮಯ್ಯನಿಗೆ ದೊರೆಯಿತು. ಶೀನಮಯ್ಯನ ಮಕ್ಕಳ ಛಲ ಹಾಗೂ ದುಡಿಮೆಯಿಂದ ಹೊಸ ಮಾರ್ಗದಲ್ಲಿ ಯಶಸ್ವಿಯಾಗುತ್ತಾನೆ.

ಶೀನಮಯ್ಯ ಶ್ರೀಮಂತಿಕೆ, ಅಂತಸ್ತು, ಗೌರವ ಎಲ್ಲ ಪಡೆದದ್ದು ಮಕ್ಕಳು ಹೋಟೆಲ್ ಉದ್ಯಮದಲ್ಲಿ ಗಳಿಸಿದ ಹಣದಿಂದ. ಆಸ್ತಿ ಖರೀದಿಸಿ, ಸಾಲ ನೀಡಿ ಊರಿನಲ್ಲಿ ದೊಡ್ಡ ಜನ ಎನಿಸಿಕೊಂಡ. ಹಂಚನ್ನು ಹೊದಿಸಿ ಸ್ಥಾನಮಾನ ಲಭಿಸಿತು. ಹಣ ಹೆಚ್ಚಿದೊಡನೆ ಶೀನಮಯ್ಯರಲ್ಲಿ ವಿಚಿತ್ರಮನೋಸ್ಥಿತಿ ಬೆಳೆದಿರುವುದನ್ನು ಗುರುತಿಸಬಹುದು. ರಾಮ ಐತಾಳರಲ್ಲಿ ದುಡ್ಡಿದೆಯೆಂದು ತಿಳಿದು ಮೂಡುವ ಮತ್ಸರ, ಅದರಿಂದ ಉಂಟಾಗುವ ಸ್ಪರ್ಧೆ. ಪೈಪೋಟಿಯಿಂದ ಆಸ್ತಿ ಖರೀದಿಸುವ ಹುಚ್ಚು, ಮದುವೆ ಮನೆಯಲ್ಲಿ ಕಾಸು ನೀಡಿ ಸಲಾಮು ಹೊಡೆಸಿಕೊಳ್ಳುವುದು ಹೀಗೆ ಶೀನಮಯ್ಯನ ನಡವಳಿಕೆ ಬದಲಾಗುತ್ತದೆ. ದುಡಿಮೆ ಬದುಕಿಗೆ ಅನಿವಾರ್ಯವಾದಾಗ ಒಂದು ರೀತಿಯ ಬದುಕು ಹಾಗೂ ಶ್ರೀಮಂತಿಕೆ ನೆಲೆಯಾದಾಗ ಬದುಕಿನ ರೀತಿ ವ್ಯತ್ಯಾಸವಾಗುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಆಸ್ತಿ ಹೆಚ್ಚಿದಂತೆ ಸಾಲ ಕೇಳುವವರು ವೃದ್ಧಿಸುವುದು ಜೊತೆಗೆ ಊರ ಗುರಿಕಾರರೂ ಸಾಲ ಕೇಳಲು ಬರುವುದು ಹಾಗೂ ಸಾಲ ಮರುಪಾವತಿಸದೆ ಇರುವುದನ್ನು ಗಮನಿಸಬಹುದು. ಮಗ ನರಸಿಂಹಯ್ಯ ಎಚ್ಚರಿಸಿದಾಗ ಶೀನಮಯ್ಯ ಆಸ್ತಿಯನ್ನು ಒಂದೇ ಕಡೆ ಇರುವಂತೆ ಖರೀದಿಸಲು ಅನುವಾಗುವುದನ್ನೂ ಗಮನಿಸಬಹುದು.

ಶೀನಮಯ್ಯನ ಮಕ್ಕಳಲ್ಲಿ ಪೈಪೋಟಿ ಮೂಡುವುದು ಗಮನಿಸಬೇಕಾದ ಅಂಶ. ಒರಟ ಅಣ್ಣನಿಗೆ ಪ್ರತಿಸ್ಪರ್ಧಿಯಾಗಿ ಹೋಟೆಲ್ ಇಡುವುದು. ಲಚ್ಚ ಅಣ್ಣತಮ್ಮಂದಿರನ್ನು ಪರಸ್ಪರ ಎತ್ತಿಕಟ್ಟಿ ಒರಟನ ಆಪ್ತಸ್ನೇಹಿತನಾಗುವುದು ಮಾನವ ಸಂಬಂಧಗಳ ವಿಭಿನ್ನ ಮುಖಗಳನ್ನು ಪರಿಚಯಿಸುತ್ತದೆ. ಒರಟ ಹಾಗೂ ಲಚ್ಚನ ಮಹತ್ವಾಕಾಂಕ್ಷಿ ಯೋಜನೆಗಳು ದೂರದರ್ಶಿತ್ವ ಹಾಗೂ ದುಡಿಯುವ ಮನೋಭಾವ ಇಲ್ಲದೆ ಬೇಗನೇ ಸೋಲುತ್ತವೆ. ಕೇವಲ ಗಾಳಿಗೋಪುರ, ಒಣಪ್ರತಿಷ್ಠೆ, ಸ್ವನಿಯಂತ್ರಣ ಇಲ್ಲದೆ ಕನಸುಗಳು ಬಹುದೂರ ಸಾಗದ್ದನ್ನು ಕಾದಂಬರಿ ಚಿತ್ರಿಸಿದೆ. ಒಂದೆಡೆ ನರಸಿಂಹಯ್ಯನ ಫಲಭರಿತ ಹೆಜ್ಜೆಗಳನ್ನು ಗುರುತಿಸಿದರೆ ಮತ್ತೊಂದೆಡೆ ಒರಟ ಹಾಗೂ ಲಚ್ಚನ ಸೂಕ್ತ ಪ್ರಯತ್ನ ಇಲ್ಲದ ಯೋಜನೆಗಳು ಹಳಿತಪ್ಪುವುದನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ.

ಯಶಸ್ವಿ ಹಾಗೂ ನಷ್ಟ ಎರಡೂ ಬಗೆಗಳನ್ನು ತನ್ನ ಒಂದೇ ಕಾದಂಬರಿಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಕಾದಂಬರಿಕಾರರು ಮಾಡಿದ್ದಾರೆ.

ರಾಮ ಐತಾಳರ ಮಗ ಲಚ್ಚನು ಬಿ.ಎ. ಓದಿಗೆ ಬಳ್ಳಾರಿಯಲ್ಲಿ ಮಣೆಗಾರನಾಗುತ್ತಾನೆ. ಅಲ್ಲಿಂದ ವರ್ಗವಾಗಿ ರೆವಿನ್ಯೂ ಇಲಾಖೆಯಲ್ಲಿ ಕೆಲಸದಲ್ಲಿರುತ್ತಾನೆ. ಆದರೆ ಶೀನಮಯ್ಯನ ಮಕ್ಕಳಲ್ಲಿದ್ದ ದುಡಿಮೆ, ಕೆಲಸ ಮಾಡುವ ಉತ್ಸಾಹ ಇದು ಯಾವುದೇ ಇಲ್ಲದೆ ಆತ ದುಂದುವೆಚ್ಚದ ಜೀವನ ನಡೆಸಿ, ಸಾಲ ಮಾಡಿ ಉದ್ಯೋಗ ಕಳೆದುಕೊಳ್ಳುತ್ತಾನೆ. ಬೌರಿಂಗ್ ಪೇಟೆಯಲ್ಲಿ ಹೋಟೆಲ್ ತೆರೆದು ಸಾಲ ಮಾಡುತ್ತಾನೆ. ಲಚ್ಚನಲ್ಲಿದ್ದ ಹೊಣೆಗೇಡಿತನ, ಬೇಜವಾಬ್ದಾರಿ, ಮೋಜಿನ ಜೀವನದಿಂದ ಆತ ನಷ್ಟ ಹೊಂದುತ್ತಾನೆ. ನರಸಿಂಹ ಮೊದಲಾದವರು ಯೋಚಿಸಿ ಹೋಟೆಲ್‌ಗಳ ಸಂಖ್ಯೆ ಜಾಸ್ತಿ ಮಾಡಿದರೆ, ನರಸಿಂಹನ ತಮ್ಮ ಒರಟ ಹಾಗೂ ಲಚ್ಚ 'ದಿಲ್ಲಿ ದರ್ಬಾರ್' ಹೋಟೆಲ್ ಆರಂಭಿಸಿ, ಸಾಲ ಮಾಡಿ ಬ್ರ್ಯಾಂಚುಗಳನ್ನು ಬೆಂಗಳೂರಿನಲ್ಲಿ ತೆರೆಯಲು ಮುಂದಾಗುತ್ತಾರೆ. ಜೂಜು, ಜುಗಾರಿಯ ಅಭ್ಯಾಸ ನಿರಂತರವಾಗುತ್ತದೆ. ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸದಿದ್ದರೆ ಯಾವ ಉದ್ಯಮದಲ್ಲೂ ಯಶಸ್ವಿಯಾಗಲು ಸಾಧ್ಯವಿಲ್ಲ ಎಂಬ ಚಿರಸತ್ಯವನ್ನು ಕಾದಂಬರಿಕಾರರು ಧ್ವನಿಸಿದ್ದಾರೆ. ಲಚ್ಚ ದೊಡ್ಡ ದೊಡ್ಡ ಯೋಜನೆಗಳನ್ನು ಉತ್ಸುಕತೆಯಿಂದ ಕೈಗೊಂಡರೂ, ಒರಟನ ಸಹಾಯದಿಂದ ಸಾಲ ಮಾಡಿ ಹೋಟೆಲುಗಳನ್ನು ತೆರೆದರೂ ಆತನಲ್ಲಿ ಇಲ್ಲದ ಸದ್ಗುಣಗಳು ಹಾಗೂ ಆತನ ವ್ಯಕ್ತಿತ್ವದೋಷದಿಂದ ಆತ ಯಶಸ್ಸು ಗಳಿಸಲಿಲ್ಲ. ಕಾದಂಬರಿಯು ಉದ್ಯಮಿಯಾಗಿ ಯಶಸ್ಸಿನ ಉತ್ತುಂಗಕ್ಕೇರಿದ ನರಸಿಂಹ ಮಯ್ಯ ಹಾಗೂ ನಷ್ಟ ಅನುಭವಿಸಿದ ಒರಟ ಹಾಗೂ ಲಚ್ಚನನ್ನು ಚಿತ್ರಿಸುತ್ತಾ ಉದ್ಯಮಕ್ಕೆ ಅಗತ್ಯವಿರುವ ದೃಢನಿಷ್ಠೆಯ ಕುರಿತು ಸೂಚಿಸುತ್ತದೆ. ಲಚ್ಚ ಇದಕ್ಕೆ ಭಿನ್ನವಾಗಿ ವರ್ತಿಸುತ್ತಾನೆ. ಹೋಟೆಲನ್ನು ತೆರೆಯುತ್ತಾ, ಸಾಲ ಮಾಡುತ್ತಾ, ಜುಗಾರಿ ಆಡುತ್ತಾ ಬೇಜವಾಬ್ದಾರಿತನದಿಂದ ಸೋಲುವುದನ್ನು ಗಮನಿಸಬಹುದು. ಶೀನಮಯ್ಯನ ಮಕ್ಕಳು ಹೆಚ್ಚು ವಿದ್ಯಾಭ್ಯಾಸ ಪಡೆಯದಿದ್ದರೂ ಸ್ವನಿಯಂತ್ರಣ, ಅನುಭವ, ಶಿಸ್ತಿನಿಂದ ಯಶಸ್ವಿ ಆಗುವುದು. ಲಚ್ಚ ವಿದ್ಯಾಭ್ಯಾಸಕ್ಕಾಗಿ ಕುಟುಂಬದಿಂದ ದೂರವಿದ್ದು, ವಿವಿಧ ದುಶ್ಚಟಗಳಿಗೆ ದಾಸನಾಗುತ್ತಾ ಮನೆಯವರ ನಿಯಂತ್ರಣವಿಲ್ಲದೆ ಮುಂದೆ ಜೀವನದಲ್ಲೂ ಸೋಲುವುದು ಚಿತ್ರಿತವಾಗಿದೆ.

'ಲಚ್ಚನು ಬೌರಿಂಗ್ ಪೇಟೆಯಲ್ಲಿ ಹೋಟೆಲುಗಳನ್ನು ತೆರೆದು ಮಾಡಿದ ಸಾಲಗಳು, ಬಳ್ಳಾರಿಯಲ್ಲಿದ್ದಾಗ ಮಾಡಿದ ಸಾಲಗಳು, ಎಲ್ಲವೂ ಕ್ರಮವಾಗಿ ಊರಿಗೆ ಬೆನ್ನಟ್ಟಿಬಂದುವು. ಅಲ್ಲಿಂದ ಸಾಲದ ತಗಾದೆಗಳು, ಜೈಲಿಗೆ ಕಳುಹಿಸುವ ಬೆದರಿಕೆಗಳು ಹೊರಟವು. ನಾಗವೇಣಿಯು ಗಂಡನನ್ನು ಜೈಲಿಗೆ ಹೋಗಲು ಬಿಡಲಾರಳೆಂಬುದನ್ನು ತಿಳಿದೇ ಸಾಲಿಗರು ಕೆಲಸ ಸಾಧಿಸಿದರು.'(ಮರಳಿ ಮಣ್ಣಿಗೆ, ಪುಟ ೨೩೨) ಇಲ್ಲಿ ಉದ್ಯಮದಲ್ಲಿ ಸೋತು ಸಾಲಗಾರನಾಗಿ ಕುಟುಂಬದವರಿಗೆ ಸಂಕಷ್ಟಕ್ಕೆ ನೂಕುವ ಪ್ರವೃತ್ತಿಯನ್ನು ಕಾಣಬಹುದು.

೧೯೩೦ರ ನಂತರ ನಮ್ಮ ದೇಶದ ಪರಿಸ್ಥಿತಿ ದಯನೀಯವಾಗಿ ಬದಲಾಗುತ್ತಾ ಬಂದಿತ್ತು. ಸ್ವಾತಂತ್ರ್ಯ ಹೋರಾಟ ತೀವ್ರವಾಗುತ್ತಾ ಉಪ್ಪಿನ ಸತ್ಯಾಗ್ರಹ, ಮದ್ಯಪಾನ ನಿಷೇಧ ಮೊದಲಾದವುಗಳೆಲ್ಲ ತೀವ್ರವಾದಂತೆ ನಿರುದ್ಯೋಗ ಸಮಸ್ಯೆಯೂ ವ್ಯಾಪಕವಾಗಿ ಸೃಷ್ಟಿಯಾಯಿತು.

ಇಂಗ್ಲಿಷ್ ಶಿಕ್ಷಣ ಪಡೆದವರಿಗೆ ಸೂಕ್ತ ಕೆಲಸವು ಸಿಗದೆ ಪರದಾಡುವಂತಾಯಿತು. ರಾಮ ಇದಕ್ಕೆ ಉತ್ತಮ ಉದಾಹರಣೆ. ರಾಮನಿಗೆ ಕೆಲಸ ದಕ್ಕುವುದಿಲ್ಲ. ನರಸಿಂಹ ಮಯ್ಯರು ತಮ್ಮನ ಹೋಟೆಲಿನಲ್ಲಿ ಇಂಗ್ಲಿಷ್ ಬಲ್ಲ ಹೋಟೆಲ್ ಮ್ಯಾನೇಜರ್ ಅಗತ್ಯವಿದೆ ಎಂದಾಗ ದ್ವಂದ್ವ ಉಂಟಾದರೂ ಅಲ್ಲಿ ಸೇರುತ್ತಾನೆ. ವಿಪರೀತ ಕೆಲಸದ ಒತ್ತಡಕ್ಕೆ ಬಲಿಯಾಗುತ್ತಾನೆ.

'ಬೆಳಿಗ್ಗೆ ಐದು ಗಂಟೆಗೆ ಎದ್ದು ಹೋಟೆಲಿಗೆ ಹೋಗಿ ಕುಳಿತರೆ, ಹನ್ನೆರಡರ ತನಕ ಅಲ್ಲಿಯೇ. ಊಟ ಮಾಡಿ, ಅರೆತಾಸಿನ ವಿಶ್ರಾಂತಿಯನ್ನು ಪಡೆದರೆ, ದೀಪ ನಂದಿಸುವ ತನಕ (೧೧ ಘಂಟೆ) ತಿರುಗಿ ಅಲ್ಲೇನೆ. ಮಲಗಿಕೊಳ್ಳುವಾಗ ಶರೀರವೆಲ್ಲಾ ಹೆಣಗಟ್ಟುತ್ತದೆ.'(ಮರಳಿ ಮಣ್ಣಿಗೆ, ಪುಟ ೩೬೨) ಹೋಟೆಲಿನ ಮ್ಯಾನೇಜರ್ ಆಗಿ ಚಾಕರಿಗೆ ದುಡಿಯುವ ರಾಮ ಹೋಟೆಲ್ ಧಣಿಗಳ ಎಚ್ಚರದ ಮನೋಸ್ಥಿತಿಯನ್ನು ವಿವರಿಸುತ್ತಾನೆ. ಹಣವನ್ನು ಅರ್ಧಗಂಟೆಗೊಮ್ಮೆ ತೆಗೆದು ಎಣಿಸುವ ರೀತಿ, ಖೋಟಾ ನಾಣ್ಯ ಬಂದರೆ ಮ್ಯಾನೇಜರ್ ಸಂಬಳದಿಂದ ಕಡಿತ ಮೊದಲಾದ ಜಾಗ್ರತೆಯ ಮಾರ್ಗ ಅನುಸರಿಸುತ್ತಾನೆ. ಯಶಸ್ಸು ಸಿಗಬೇಕಾದರೆ ಅಗತ್ಯವಿರುವ ಶ್ರಮ, ಎಚ್ಚರದ ಮನಸ್ಥಿತಿಯನ್ನು ವಿವರಿಸಲಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಲಚ್ಚ ಮತ್ತು ಒರಟನ ಬೇಜವಾಬ್ದಾರಿತನದಿಂದ ಹೋಟೆಲ್ ತೆರೆಯುವುದು, ನಷ್ಟ ಅನುಭವಿಸುವುದು, ಜುಗಾರಿ ಆಡುವುದು, ಸಾಲ ಮಾಡುವುದು ಇಂತಹ ಹೊಣೆಗೇಡಿತನದ ಅರಿವೂ ಆಗುತ್ತದೆ. ಎರಡು ವಿಭಿನ್ನ ಬಗೆಯ ನಡೆವಳಿಕೆಗಳ ಚಿತ್ರಣವಿದೆ. ಕೃಷಿ, ಉದ್ಯಮ ಯಾವುದೇ ಇರಲಿ ಸಮಯಕ್ಕೆ ಸರಿಯಾದ ದುಡಿತದಿಂದ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂಬ ತಿಳುವಳಿಕೆ ಇದೆ.

ಎಂ.ವೀರಪ್ಪ ಮೊಯಿಲಿಯವರ 'ತೆಂಬರೆ' ಕಾದಂಬರಿಯಲ್ಲಿ ಬಸವಕಲ್ಯಾಣದಲ್ಲಿದ್ದ ಉಡುಪಿ ಹೋಟೆಲಿನ ಪ್ರಸ್ತಾಪವಿದೆ. ಹೋಟೆಲ್‌ನ ನಾಮಫಲಕ ಗಮನಿಸಿ ಬಂದ ಬೇರೆ ಪ್ರಾಂತ್ಯದ ಪ್ರಯಾಣಿಕರು ಉಡುಪಿಯ ವೈಶಿಷ್ಟ್ಯತೆ ಕಾಣಸಿಗದೆ ಕಾಲಘಟ್ಟದಲ್ಲಿ ಸ್ಥಿತ್ಯಂತರಗೊಂಡು ಎಲ್ಲ ತರದ ವೈವಿಧ್ಯ ಖಾದ್ಯಗಳಿಗೆ ತೆರೆದುಕೊಂಡದ್ದನ್ನು ದಾಖಲಿಸಲಾಗಿದೆ. ವ್ಯಾಪಾರೀಕರಣವು ಪರಂಪರೆಯನ್ನು ಬದಲಾಯಿಸಲೇಬೇಕಾದ ಅನಿವಾರ್ಯವನ್ನು ತಂದೊಡ್ಡುತ್ತದೆ. ಸ್ಥಿತ್ಯಂತರಗೊಂಡ ಕಾಲಘಟ್ಟದಲ್ಲಿ ವ್ಯಕ್ತಿಗತ ಆಲೋಚನೆಗಳೂ ಪೂರಕವಾಗಿ ಬದಲಾಗದಿದ್ದರೆ ಸೋಲು ಖಂಡಿತವೆಂಬ ಭಾವನೆ ಪುಟಿದೇಳುತ್ತದೆ. ಹೊಸ ಕಾಲದ ಹೊಸ ವಿಚಾರಗಳಿಗೆ ಸ್ಪಂದಿಸಲೇಬೇಕಾದ ಅನಿವಾರ್ಯತೆ ಹಳೆಯದನ್ನೇ ನಂಬಿಕೊಂಡರೆ ಆರ್ಥಿಕವಾಗಿ ಹಿಂದೇಟು ಖಂಡಿತ ಎಂಬ ಪ್ರಜ್ಞೆ ಇದೆ.

'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯು ವಲಸೆಯ ಬಗೆಗೆ ತಿಳಿಸುತ್ತದೆ. ವಲಸೆ ಹೋಗಲು ಸುಲಭದಲ್ಲಿ ಸಿಗುತ್ತಿದ್ದ ತಾಣವೆಂದರೆ ಆಗಿನ ಕಾಲದಲ್ಲಿ ಮುಂಬೈ. ಮಾಧವನ ಮದುವೆ ನಿಂತುಹೋದಾಗ, ಅನಂತಯ್ಯನಿಗೆ ವಿಪರೀತ ಮುಜುಗರಕ್ಕೆ ಈಡುಮಾಡಿದಾಗ ಆತ ಮುಂಬೈಗೆ ಹೋಟೆಲಿನಲ್ಲಿ ಕೆಲಸ ಮಾಡುವ ಉದ್ದೇಶದಿಂದ ಧಾವಿಸಿದ್ದ. ಆದರೆ ಅಲ್ಲಿ ಪೌರೋಹಿತ್ಯ ನಡೆಸುವ ಕಾಯಕ ದೊರೆತು ಅದನ್ನೇ ಕೃಷ್ಣದೇವರಾಯನ ಮರಣದವರೆಗೂ ಮುಂದುವರಿಸಿದ.

ಮಾಧವನು ಸಿಟ್ಟು ಬಂದಾಗಲೆಲ್ಲಾ ಅನಂತಯ್ಯನನ್ನು ಮನೆಯಿಂದ ಹೊರಹಾಕುವುದು ಸಾಮಾನ್ಯವಾಗಿತ್ತು. ಹೀಗೆ ಹೊರಹಾಕಿದಾಗಲೆಲ್ಲಾ ಅನಂತಯ್ಯನು ಬೇರೆ ಉದ್ಯೋಗ ಹಿಡಿಯಬೇಕಾದ ಅನಿವಾರ್ಯತೆ ಇತ್ತು. ಮಾಧವ ಮತ್ತೆ ಕರೆದಾಗ ಶೀಘ್ರವೇ ಓಡಿ ಬರುತ್ತಿದ್ದ ಅನಂತಯ್ಯ ಒಂದೊಂದು ಸಲ ಒಂದೊಂದು ಕಾಯಕದಲ್ಲಿ ಮಗ್ನನಾಗುತ್ತಿದ್ದ. ಒಮ್ಮೆ ಹೋಟೆಲ್ ಇರಿಸಿದ ಅನುಭವದ ಕುರಿತ ಲಕ್ಷ್ಮೀದೇವಿಯ ಉತ್ತರದಿಂದ ಹೋಟೆಲ್ ಉದ್ಯಮದ ಕಷ್ಟಗಳು ಮನದಟ್ಟಾಗುತ್ತವೆ. ಹೋಟೆಲ್ ಉದ್ಯಮ ಸರಳವಲ್ಲ, ಅದರೊಳಗೆ ಈಜಾಡಲು ತಾಕತ್ತು, ನೈಪುಣ್ಯ ಬೇಕು ಎಂಬ ಅಂಶ ಸ್ಪಷ್ಟವಾಗುತ್ತದೆ. 'ಆ ಹೋಟ್ಲುಮಿನಿ ನಮ್ಮಂಥವರಿಗಲ್ಲಯ. ಹೋಟ್ಲು ಮುಚ್ಚಿ ಎರಡು ತಿಂಗಳಾಯಿಂತು'. 'ಮಾರಾಯ ಅದನ್ನೂ ಕೌಂಚಿ ಹಾಕಿಯಾ?' 'ಕೌಂಚಿ ಹಾಕದೆ? ಏ ಅನಂತಣ್ಣ ಕಾಫಿ, ಏ ಅನಂತಣ್ಣ ದೋಸೆ, ತಿಂದ್ಕಂಡ್ ಹೋತ್ವು ದುಡ್ಡು ಕೊಡದ್ರೆ? ನಾಳೆ ಕೊಡ್ತೆ, ನಾಡ್ದು ಕೊಡ್ತೆ, ನಾ ಇಲ್ಲಿ ದಿವಾಳಿ' ಎಂದು ಎರಡೂ ಕೈಗಳನ್ನು ಮೇಲೆತ್ತಿ 'ಟಪ್' ಎಂಬ ಶಬ್ದದೊಂದಿಗೆ ಕೈಜೋಡಿಸಿದ.'(ಪಾಚಿ ಕಟ್ಟಿದ ಪಾಗಾರ, ಪುಟ ೧೯೭)

'ಕೊಟ್ಟ' ಕಾದಂಬರಿಯಲ್ಲಿ ಗಣಪತಿ ಕಾಮತರ ಹೋಟೆಲಿನ ಉಲ್ಲೇಖವಿದೆ. ಸದಾಶಿವ ಕಾಫಿ ಕುಡಿಯುವ ಸಂದರ್ಭದ ಚಿತ್ರಣ. ಕಾಮತರು ವ್ಯಾಪಾರದಲ್ಲಿ ಚಾಣಾಕ್ಷರು. ತಮ್ಮ ಮಾತಿನ ಬಲದಲ್ಲೇ ಜನರನ್ನು ಸೆಳೆಯಬಲ್ಲವರು. ಪತ್ರಿಕೆ, ಊರಿನ ಸುದ್ದಿ ಕಲೆಹಾಕಿ ಮೊದಲಿಗೆ ತಿಳಿಹೇಳುವುದರಲ್ಲಿ ನಿಷ್ಣಾತರು.

'ಕಾಮತರು ವರ್ಗಾವಣೆ ಹಿನ್ನೆಲೆಯ ಬಗ್ಗೆ ಮಾತನಾಡಲು ಮುಂದಾದರು. ತಮ್ಮ ಹೋಟೆಲಿನ ವ್ಯಾಪಾರ ಹೆಚ್ಚಿಸಲು ಎಷ್ಟು ಬೇಕಾದರೂ ಮಾತನಾಡಲು ಬಲ್ಲ ಕಾಮತರನ್ನು ತಾನು ಹೇಗೆ ಸರಿಗಟ್ಟಬಲ್ಲೆ ಎಂದುಕೊಳ್ಳುತ್ತಾ ಸದಾಶಿವ ಗಲ್ಲಾದ ಹತ್ತಿರ ಬಂದ.'(ಕೊಟ್ಟ, ಪುಟ ೧೪೧)

ಜನರನ್ನು ಸೆಳೆಯಲು ಮಾತಿನ ಸರಕಿನ ಅಗತ್ಯದ ಬಗ್ಗೆ ವಿವರವಿದೆ. ಲಾಭಗಳಿಸಲು ಬೆಳಿಗ್ಗೆ ಬೇಗನೇ ಹೋಟೆಲ್ ತೆರೆದು ಗಿರಾಕಿಗಳಿಗೆ ಬೇಕಾದ ತಿಂಡಿ, ಪಾನೀಯ ನೀಡಲೇಬೇಕಾದ ಒತ್ತಡವನ್ನು ಸೂಚ್ಯವಾಗಿ ತಿಳಿಸಲಾಗಿದೆ. 'ಉಲ್ಲಂಘನೆ' ಕಾದಂಬರಿಯಲ್ಲಿ ಹೋಟೆಲ್ ಉದ್ಯಮದಿಂದ ಶ್ರೀಮಂತರಾದ ಸಾಹಸಿಗರ ಚಿತ್ರಣವಿದೆ. ತ್ಯಾಂಪಣ್ಣ ಶೆಟ್ಟಿ, ರಮಾನಂದ, ಮಾಡ, ಸುಂದರ ಹೆಗ್ಡೆ, ಭೋಜ ಪೂಜಾರಿ ಯಶಸ್ಸುಗಳಿಸುತ್ತಾರೆ. ತ್ಯಾಂಪಣ್ಣ ಶೆಟ್ಟಿ ಹಲವು ಹೋಟೆಲ್‌ಗಳನ್ನು ತೆರೆಯುತ್ತಾ ಕೆಲಸ ಒದಗಿಸುತ್ತಾಯಶಸ್ಸು ಗಳಿಸುತ್ತಾರೆ. ಸುಂದರ ಮದುವೆಯ ಸಮಯದಲ್ಲಿ ಪಡೆದ ಹೋಟೆಲ್‌ನಿಂದ ಅನುಭವ ಪಡೆಯುತ್ತಾ ಸಾಂತೇರ್ ಗ್ರೂಫ್ ಅಫ್ ಹೋಟೆಲ್ ನಿರ್ಮಿಸುತ್ತಾನೆ. ಭೂ ಸುಧಾರಣೆ ಕಾನೂನಿನಿಂದ ಕಳೆದುಕೊಂಡ ಗುತ್ತಿನ ಸ್ಥಾನಮಾನ ಹೋಟೆಲ್ ಉದ್ಯಮದ ಯಶಸ್ಸಿನಿಂದ ಮತ್ತೆ ಚಿಗುರುತ್ತದೆ. ಹೀಗೆ ತುಳುವರು ಹೋಟೆಲುಗಳನ್ನು ನಿರ್ಮಿಸಿ ಗಳಿಸಿದ ದುಡ್ಡು ತುಳುನಾಡಿನ ಶ್ರೀಮಂತಿಕೆಗೆ ಕಾರಣವಾಯಿತು.

ಹೋಟೆಲ್ ಉದ್ಯಮದಿಂದ ತುಳು ಸಂಸ್ಕೃತಿಯ ಮೇಲಾದ ಪರಿಣಾಮಗಳು

- ಹೆಚ್ಚಿನ ತುಳುವರು ಹೋಟೆಲ್ ತೆರೆದದ್ದು ಬೆಂಗಳೂರು, ಮುಂಬೈಗಳಂತಹ ನಗರಗಳಲ್ಲಿ. ಅನೇಕ ತುಳುನಾಡಿನವರು ನಗರ ಜೀವನದ ಅನುಭವಗಳನ್ನು ಪಡೆಯಲು ಸಾಧ್ಯವಾಯಿತು. ಶ್ರಮ, ಅನುಭವದಿಂದ ಹೋಟೆಲ್ ತೆರೆದು ಯಶಸ್ವಿಯಾದ ಘಟನೆಗಳೂ ನಡೆದವು.
- ಮುಂಬೈನಂತಹ ನಗರಗಳಲ್ಲಿ ಲಭ್ಯವಾದ ರಾತ್ರಿ ಶಾಲೆಗಳಿಂದ ಉನ್ನತ ವಿದ್ಯಾಭ್ಯಾಸ ಪಡೆದು ವಕೀಲ ಮುಂತಾದ ಉನ್ನತ ಹುದ್ದೆಗಳನ್ನು ಪಡೆದು ಸ್ಥಾನಮಾನ ಹೆಚ್ಚಳವಾಯಿತು.
- ದುಡಿದ ದುಡ್ಡಿನಿಂದ ಊರಿಗೆ ಬಂದು ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸುತ್ತಾ ಸಹಬಾಳ್ವೆ ರೂಪಿಸಿದ್ದು ಮಹತ್ವದ್ದು. 'ಉಲ್ಲಂಘನೆ'ಯಲ್ಲಿ ನಾಗಮಂಡಲ, 'ತೆಂಬರೆ'ಯಲ್ಲಿ ಚೆಲುವಯ್ಯ ಶೆಟ್ಟಿ ಪಂಜುರ್ಲಿಗೆ ದೈವಸ್ಥಾನ ನಿರ್ಮಿಸಿದ್ದು ಮುಂತಾದವು ಧರ್ಮಸಂಬಂಧಿ ಕಾರ್ಯಗಳು ಜನರ ಮನ್ನಣೆಗೆ ಪಾತ್ರವಾದವು.
- ಊರಿನಲ್ಲಿ ಆಧುನಿಕತೆಯಿಂದ ಬಂದ ಯಂತ್ರಗಳ ಬಳಕೆ, ಆಧುನಿಕ ಶೌಚಾಲಯ, ಸಂಪರ್ಕ ಸಾಧನಗಳು, ಸಾರಿಗೆ ಸೌಲಭ್ಯ, ಮನೆಗಳ ನಿರ್ಮಾಣ ಹೀಗೆ ಹಣ ವಿನಿಯೋಗವಾಗಿ ಊರು ಶ್ರೀಮಂತವಾಯಿತು. ಬಡ ಜನರ ನೆಮ್ಮದಿ, ಸ್ಥಾನಮಾನ ಹೆಚ್ಚಿದವು.

೧೦.೨. ಬೀಡಿ ಉದ್ಯಮ

ಆಧುನಿಕ ಗಾಳಿ ಬೀಸುತ್ತಿದ್ದಂತೆ ಹೊಸ ಉದ್ಯಮಗಳು ತುಳುನಾಡಿಗೆ ಕಾಲಿಟ್ಟವು. ಸಾಮಾಜಿಕ ಸ್ಥಿತ್ಯಂತರವು ಆರ್ಥಿಕ ಸ್ಥಿತ್ಯಂತರವಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. ಹೋಟೆಲ್ ಉದ್ಯಮ, ಬೀಡಿ ಉದ್ಯಮ, ಹಂಚು ಕಾರ್ಖಾನೆ, ಮೀನುಗಾರಿಕೆ, ಮಲ್ಲಿಗೆ ಕೃಷಿ, ಮರದ ವ್ಯಾಪಾರ, ಗೇರು ಬೀಜದ ಫ್ಯಾಕ್ಟರಿ ಮುಂತಾದ ಹೊಸ ದುಡಿಯುವ ಕ್ಷೇತ್ರಗಳು ಜನರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವಲ್ಲಿ ಸಫಲವಾದವು. ಕೃಷಿಯನ್ನೇ ನೆಚ್ಚಿಕೊಂಡು ಬದುಕುತ್ತಿರುವ ಕುಟುಂಬಗಳಿಗೆ ಸ್ವಾವಲಂಬನೆಯ ಹೊಸ ದಾರಿಗಳು ಹುಟ್ಟಿಕೊಂಡವು. ಕೂತು ಕೆಲಸ ಮಾಡುವ ಹೊಸ ಕಲ್ಪನೆ ಬೀಡಿ, ಗೇರುಬೀಜ ಉದ್ಯಮದತ್ತ ಹೆಣ್ಣು ಮಕ್ಕಳು ಆಕರ್ಷಿಸುವಂತೆ ಮಾಡಿದವು. ಇಡೀ ದಿನ ಗದ್ದೆಯಲ್ಲಿ ಬಗ್ಗಿ ಕೆಲಸ ಮಾಡುವ ಶ್ರಮಿಕ ವರ್ಗಕ್ಕೆ ಕೆಲಸದ ಶ್ರಮ ಕುಂಠಿತಗೊಂಡಿತು. ರೈಲು, ಬಸ್ಸು, ರಸ್ತೆಗಳೆಂಬ ಆಧುನಿಕ ಸಾಧನಗಳು ಆಗಮನಗೊಳ್ಳುತ್ತಿದ್ದಂತೆ ದೋಣಿ, ಜಟಕಾ ಬಂಡಿಗಳು ಮೂಲೆಗುಂಪಾದವು. ಕೂಡಲೇ ಎಚ್ಚೆತ್ತು ಹೊಸ ಉದ್ಯಮಗಳತ್ತ ದೃಷ್ಟಿ ನೆಟ್ಟವರು ದುಡ್ಡುಗಳಿಸಿದರು. ಈ ಉದ್ಯಮಗಳಿಂದ ತುಳು ಸಂಸ್ಕೃತಿ ಹೊಂದಿದ ಪಲ್ಲಟವೇನು? ಆಲೋಚನಾ ವಿಧಾನಗಳಲ್ಲಾದ, ಜನಜೀವನದಲ್ಲಾದ ಬದಲಾವಣೆಯೂ ಮುಖ್ಯವೆನಿಸುತ್ತದೆ.

ಎಂ.ವೀರಪ್ಪ ಮೊಯಿಲಿಯವರ 'ಸುಳಿಗಾಳಿ' ಕಾದಂಬರಿಯಲ್ಲಿ ಬೀಡಿ ಉದ್ಯಮದ ಕೆಲವು ಸನ್ನಿವೇಶಗಳಿವೆ. ಬೀಡಿ ಕಟ್ಟುವ ಮುತ್ತಮ್ಮ ಘರ್‌ವಾಲಿಯಾದ ಪ್ರಸಂಗವನ್ನು ಕತೆ ವರ್ಣಿಸುತ್ತದೆ. ಬೀಡಿ ಕಟ್ಟಿ ಸ್ವಾವಲಂಬಿಯಾದ ಬದುಕು ಸಾಗಿಸುತ್ತಿರುವ ತೀವ್ರವಾದ ಅನಾರೋಗ್ಯಕ್ಕೆ ತುತ್ತಾದಾಗ, ಹಣಕ್ಕಾಗಿ ವೇಶ್ಯಾವಾಟಿಕೆಗೆ ಇಳಿದ ಮುತ್ತಮ್ಮನ ಸ್ಥಿತಿ ಹಲವು ಒಳನೋಟಗಳನ್ನು ತೆರೆದಿಡುತ್ತದೆ. ಬೀಡಿ ಕಂಪನಿಯ ಮೇನೆಜರ್ ಕೆಟ್ಟವನಾದಾಗ, ಬೀಡಿ ಕಟ್ಟುವವರ ಶೋಷಣೆ ನಡೆಯುತ್ತದೆ. ಆರ್ಥಿಕ ದುರ್ಬಲತೆ ಮನುಷ್ಯನನ್ನು ಅಸಹಾಯಕನನ್ನಾಗಿ ಮಾಡುತ್ತದೆ. ಆರ್ಥಿಕವಾಗಿ ಹಿಂದುಳಿದವರು ಬದಲಾದ ಪರಿಸ್ಥಿತಿಯಲ್ಲೂ ಭಿನ್ನವಾಗಿ ತುಳಿತಕ್ಕೆ ಒಳಗಾಗುವುದನ್ನು ಗಮನಿಸಬಹುದು. ದುರ್ಬಲ ವಿಧವಾ ಸ್ತ್ರೀಯರು ಪಡುವ ಸಂಕಟವನ್ನು ಹಾಗೂ ಸಮಾಜದ ದೃಷ್ಟಿಯಿಂದ ಕೆಟ್ಟದ್ದೆಂದು ಗುರುತಿಸಲಾಗುವ ಪ್ರಪಾತಕ್ಕೆ ಬೀಳುವುದನ್ನು ಕಾಣಬಹುದು. ಇಂಥಹ ಮುತ್ತಮ್ಮನು ಮುಂದೆ ಬೇರೆ ಸ್ತ್ರೀಯರನ್ನು ಇಂಥಹ ಕಸುಬಿಗೆ ಇಳಿಸುವ ಹುನ್ನಾರ ಮಾಡುತ್ತ ಘರ್‌ವಾಲಿಯಾಗಿ ಬಲಿಷ್ಠಳಾದಳು. ಮನುಷ್ಯನ ವ್ಯಕ್ತಿತ್ವದ ವಿಭಿನ್ನ ಚಿತ್ರಣಗಳು ಬೀಡಿ ಉದ್ಯಮದ ಸುತ್ತ ನೆಲೆಯಾಗಿವೆ.

'ಚಂದ್ರಗಿರಿ ತೀರದಲ್ಲಿ' ಕಾದಂಬರಿ ಬೀಡಿ ಕಟ್ಟುವ ವಿವರಣೆಯನ್ನು ಹೊಂದಿದೆ. ಬಡಮಹಿಳೆ, ಅಶಿಕ್ಷಿತ ಮಹಿಳೆ, ಮನೆಯಿಂದ ಹೊರಹೋಗಿ ದುಡಿಯಲಾರದ ಮಹಿಳೆಗೆ ಮನೆಯಲ್ಲೇ ದುಡಿಯುವ ಅವಕಾಶವನ್ನು ಬೀಡಿ ಉದ್ಯಮ ತಂದುಕೊಟ್ಟಿತು. ಆದರೆ ಆರ್ಥಿಕ ಸ್ವಾತಂತ್ರ್ಯವನ್ನು ಮಾತ್ರ ನಾದಿರಾ, ಜಮೀಲಾರಿಗೆ ಕೊಡಲಿಲ್ಲ. ಅವರು ಕಷ್ಟಪಟ್ಟು ಕಟ್ಟಿದ ಬೀಡಿ ಅಂಗಡಿಗೆ ಕೊಟ್ಟು ಹಣ ವಸೂಲಿ ಮಾಡಿ ಮನೆಗೆ ಬೇಕಾದ ಸಾಮಾನು ತರುವ ಕೆಲಸ ಖಾನರದಾಗಿತ್ತು. ಬೀಡಿ ದುಡಿಯಲು ಪ್ರೇರೇಪಿಸಿತೇ ಹೊರತು ತಮ್ಮ ವೈಯಕ್ತಿಕ ಆಸೆಗಳನ್ನು ನೆರವೇರಿಸಲು ಬೀಡಿ ಸಹಾಯಕವಾಗಲಿಲ್ಲ. ನಾದಿರಾ ಹೊತ್ತು ಕಳೆಯಲು ಬೀಡಿ ಕಲಿತರೆ, ಮುಂದೆ ಜೀವನದ ಅಗತ್ಯತೆಯಾಯಿತು.

ಮಹಮ್ಮದ್ ಖಾನ್ ತನ್ನ ಸ್ವಾರ್ಥಕ್ಕಾಗಿ ನಾದಿರಾಳನ್ನು ಗಂಡನ ಮನೆಗೆ ಕಳುಹಿಸುವ ಯೋಚನೆಯನ್ನೇ ಮಾಡುವುದಿಲ್ಲ. ಬೀಡಿ ಕಟ್ಟದೆ ಹೋದರೆ ಖಾನ್‌ರ ಬದುಕು ಸಾಗಬೇಕಲ್ಲವೇ? ಹೀಗೆ ನಾದಿರಾ ಬೀಡಿ ಕಟ್ಟುವುದನ್ನು ಕಾಯಕವನ್ನಾಗಿ ಮಾಡಬೇಕಾಯಿತು.

ಬೀಡಿ ಉದ್ಯಮ ಕೃಷಿಭೂಮಿ ಇಲ್ಲದ ಎಷ್ಟೋ ಮಹಿಳೆಯರಿಗೆ ಆರ್ಥಿಕತೆಯ ಮೂಲವಾಗಿ ಪರಿಣಮಿಸಿದರೆ, ಮನೆಯಿಂದ ಖುಷಿ ಬಂದಂತೆ ಹೊರಹೋಗುವ ಸ್ವಾತಂತ್ರ್ಯವಿಲ್ಲದ ನಾದಿರಾಳಿಗೆ ಬೀಡಿ ದುಡಿಯಲು ಮಾತ್ರ ಕೆಲಸ ಒದಗಿಸಿತೇ ಹೊರತು ಎಂದೂ ಆರ್ಥಿಕ ಸ್ವಾತಂತ್ರ್ಯ ನೀಡಲಿಲ್ಲ. ತನಗಾಗಿ, ಪಾಪುವಿಗಾಗಿ ಒಂದು ವಸ್ತುವನ್ನು ಖರೀದಿಸುವ ಅವಕಾಶವನ್ನು ನೀಡಲಿಲ್ಲ. ನಾದಿರಾ ಹರುಕು ಸೀರೆ ಉಡುತ್ತಿದ್ದರೂ, ಆಕೆಗೆ ಸೀರೆ ತರಲು ಫಾತಿಮ್ಮ ಹೇಳಬೇಕಾಗುತ್ತದೆ. ಮುಸ್ಲಿಂ ಸಮುದಾಯದಲ್ಲಿ ತೀರಾ ನಿಕೃಷ್ಟರಂತೆ ಬದುಕುತ್ತಿರುವ ಸಾಮಾನ್ಯ ಮಹಿಳೆಯ ಚಿತ್ರಣ ಅವರ ತವಕ ತಲ್ಲಣಗಳನ್ನು ಸೂಚಿಸುತ್ತದೆ.

'ನಾನು ಬೀಡಿ ಕಟ್ಟಿದರೆ ಅಲ್ಲೂ ಹೊಟ್ಟೆ ತುಂಬುತ್ತದೆ. ಇಲ್ಲೂ ಹೊಟ್ಟೆ ತುಂಬುತ್ತದೆ. ಅಲ್ಲಿ ಬೀಡಿಯ ಜೊತೆಯಲ್ಲಿ ಮನೆಕೆಲಸವನ್ನೂ ಮಾಡಬೇಕಾಗುತ್ತದೆ. ಇಲ್ಲಿ ಅದಿಲ್ಲವಲ್ಲ? ಪಾಪ,

ಉಮ್ಮಾ ತಾನೇ ಕಷ್ಟಪಟ್ಟರೂ ನಮ್ಮಿಂದ ಮನೆಕೆಲಸ ಮಾಡಿಸುತ್ತಿರಲಿಲ್ಲವಲ್ಲ?' ಎಂದು ಹೇಳಿದಳು. (ಚಂದ್ರಗಿರಿ ತೀರದಲ್ಲಿ, ಪುಟ ೭೧) ಜಮೀಲ ನಾದಿರಾಳಲ್ಲಿ ಹೇಳುವ ಈ ಮೇಲಿನ ಮಾತುಗಳು ಬದುಕಿನ ವಾಸ್ತವ ಚಿತ್ರಣವನ್ನು ನೀಡುತ್ತವೆ. ಬಡತನದ ವಿಭಿನ್ನ ಮುಖಗಳನ್ನು ನಮ್ಮೆದುರು ಹಿಡಿಯುತ್ತದೆ.

'ಉಲ್ಲಂಘನೆ' ಕಾದಂಬರಿಯಲ್ಲಿ ಆದಂಕುಟ್ಟಿ ಉಳ್ಳಾಲ ಹಾಗೂ ಒಂಬತ್ತು ಕೆರೆಯಲ್ಲಿ ಸ್ಥಾಪಿಸುವ ಬೀಡಿ ಉದ್ಯಮದ ವಿವರಗಳಿವೆ. ಸಾಧು ಬೀಡಿಯ ಕಂಟ್ರಾಕ್ಟ್ ಪಡೆದ ಆತ ಹಾಗೂ ಆತನ ಪತ್ನಿ ಹಾಜಿರಾ ಬೀಡಿ ಉದ್ಯಮದ ಬಗ್ಗೆ ಜನರಲ್ಲಿ ಸದಭಿಪ್ರಾಯ ರೂಪುಗೊಳ್ಳಲು ಶ್ರಮಿಸುತ್ತಾರೆ. ಹಾಜಿರಾ ಬೀಡಿ ಕಟ್ಟುವ ವಿಧಾನವನ್ನು ಕಲಿಸಿಕೊಡುತ್ತಾಳೆ. ಹೀಗೆ ಮನೆಮನೆಯಲ್ಲೂ ಹೆಂಗಳೆಯರು ಬೀಡಿ ಕಟ್ಟಲು ಆರಂಭಿಸುತ್ತಾರೆ. ಬೀಡಿಯನ್ನು ಗಂಡಸರು, ಹೆಂಗಸರು, ಮುದುಕರು, ಯುವಕರು, ಅಶಕ್ತರು ಎಲ್ಲರೂ ಕಟ್ಟಬಹುದು, ದಿನದ ಕೂಲಿಗಿಂತ ಎರಡರಷ್ಟು ಸಂಪಾದಿಸಬಹುದೆಂದು ಆದಂಬ್ಯಾರಿ ಮನವರಿಕೆ ಮಾಡಿಸುತ್ತಾನೆ. ಹೀಗೆ ನಿಧಾನವಾಗಿ ಊರ ಜನ ಬೀಡಿ ಕಟ್ಟುವಲ್ಲಿ ಪರಿಣತಿ ಪಡೆಯುತ್ತಾರೆ. ಒಂಬತ್ತು ಕೆರೆಯ ಬೀಡಿ ಬ್ರ್ಯಾಂಚಿನಲ್ಲಿ ಹದಿನೈದಕ್ಕಿಂತ ಹೆಚ್ಚು ಹುಡುಗಿಯರು ನೋಂದಾಯಿಸುತ್ತಾರೆ. ಬೆವರು ಸುರಿಸಿ ದುಡಿಯುವುದಕ್ಕಿಂತ ಕೂತು ಬೀಡಿ ಕಟ್ಟುವುದು ಸುಲಭವೆಂದು ಅವರಿಗೆ ತೋರಿತು.

'ಕುಡಾಲದ ಪೇಟೆಯಲ್ಲಿರುವ ಬೀಡಿ ಕಂಪನಿಗಳು, ಇನ್ನು ಮುಂದೆ ನಮ್ಮ ಹಳ್ಳಿ, ಹಳ್ಳಿಗೆ ಬಂದು ಬೀಡಿ ಬ್ರ್ಯಾಂಚು ತೆರೆದು, ಮನೆಮನೆಗೆ ಎಲೆ-ತಂಬಾಕು ಕೊಟ್ಟು ಬೀಡಿ ಕಟ್ಟಿಸುತ್ತವಂತೆ. ಹಸಿದ ಬಡವವರ ಹೊಟ್ಟೆ ತಣಿಸುವಂಥ ಸುದ್ದಿ ತಂದ ಮೈದಿನ್ ಬ್ಯಾರಿಯವರೇ, ಮೊಟ್ಟಮೊದಲಿಗೆ ಬೀಡಿ ಕಂಪನಿಯೊಂದರ ಕಾಂಟ್ರ್ಯಾಕ್ಟ್ ಪಡೆದು ನಮ್ಮೂರಲ್ಲಿ ಬೀಡಿ ಬ್ರಾಂಚೊಂದನ್ನು ಆರಂಭಿಸಿಯೇ ಬಿಟ್ಟರು. ಈ 'ಬೀಡಿ' ಬ್ರಾಂಚು ಆರಂಭಗೊಂಡಿದ್ದು ನಮ್ಮೂರಿಗೆ ವಿಮಾನ ಬಂದ ವರ್ಷದಲ್ಲೇ ಅಂದರೆ ೧೯೫೨ರಲ್ಲಿ.'[೧] ಬೀಡಿ ಬಡಜನರಿಗೆ ದುಡಿಯುವ ಒಂದು ಮೂಲವಾಯಿತು.

'ಆದರೆ ಈ ಬೀಡಿ ಉದ್ಯಮ ಎಂಬುದು ಕುಡಾಲ ಪೇಟೆಯಿಂದ ನಮ್ಮೂರೊಳಗೆ ಕಾಲಿಟ್ಟು, ಎಂದಿಗೆ ಮನೆ ಮನೆಗೆ ಪ್ರವೇಶ ಪಡೆಯಿತೋ ಅಂದಿನಿಂದಲೇ ಧಣಿಗಳ ಪಕ್ಕೆಲುಬುಗಳು ಲಟಲಟನೆ ಮುರಿದಂತಾಗಿ ಹೋಯ್ತು. ಧಣಿಯರ ಸಾಗುವಳಿ ಕೆಲಸಕ್ಕೆ, ಮನೆ-ಅಂಗಳದ ಕೆಲಸಕ್ಕೆ ಬರುತ್ತಿದ್ದ ಹೆಣ್ಣಾಳುಗಳನ್ನು ಈ ಬೀಡಿ ಉದ್ಯಮ ಸಂಪೂರ್ಣ ಸೆಳೆಯಿತಲ್ಲದೆ, ಒಡೆಯರ ಹಂಗಿಲ್ಲದಂತೆ, ಅವರಿಗೊಂದೂ ದೊಗ್ಗು ಸಲಾಂ ಹಾಕದಂತೆ ಮರ್ಯಾದೆಯಿಂದ ತಮ್ಮ ತಮ್ಮ ಮನೆಯೊಳಗೆ ಕೂತು ಕಾಸು ಸಂಪಾದಿಸುವುದರ ಜತೆಗೆ, ಸ್ವಾಭಿಮಾನ, ಆತ್ಮವಿಶ್ವಾಸವನ್ನೂ ಸಂಪಾದಿಸುವ ಅವಕಾಶವನ್ನೂ ಅವರಿಗದು ಒದಗಿಸಿಕೊಟ್ಟಿತು. ಅದುವರೆಗೂ ಹಾವಿನ ಹೆಡೆಯಡಿಯ ಕಪ್ಪೆಯಂತೆ ಬದುಕುತ್ತಿದ್ದ ಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಬಿಡುಗಡೆಯ ಹಾದಿಯೊಂದನ್ನು ಕಲ್ಪಿಸಿಕೊಟ್ಟ ಈ ಬೀಡಿ ಉದ್ಯಮ, ಭೂಮಾಲೀಕರನ್ನು ಪರೋಕ್ಷವಾಗಿ ಸಂಕಷ್ಟದ ಅಥವಾ ಇಕ್ಕಟ್ಟಿನ ಹಾದಿಗೆ ಇಳಿಸಿಬಿಟ್ಟಿದ್ದು ಒಂದು

ಐತಿಹಾಸಿಕ ಸತ್ಯ.[3] ಬೀಡಿ ಉದ್ಯಮ ತಳಸಮುದಾಯದ ಕಾರ್ಮಿಕರಲ್ಲಿ ಸ್ವಾವಲಂಬನೆ, ಸ್ವಾಭಿಮಾನ ಮೂಡಿಸಿತು.

'ಬೀಡಿ ಉದ್ಯಮದ ಪರೋಕ್ಷ ಆರ್ಥಿಕ ಬೆಂಬಲದಿಂದಾಗಿ ಅದುವರೆಗೂ ಅಸಂಘಟಿತವಾಗಿದ್ದ ಕೃಷಿ ಕಾರ್ಮಿಕ ವಲಯದಲ್ಲಿ, ಭೂಮಾಲೀಕರನ್ನು ಪ್ರಶ್ನಿಸುವ ಹಾಗೂ ಅವರಿಗೆ ಸಡ್ಡು ಹೊಡೆದು ನಿಲ್ಲುವ ಒಂದು ಪ್ರತಿಭಟನಾ ಶಕ್ತಿ ತನ್ನಿಂತಾನೆ ಹುಟ್ಟಿಕೊಂಡು ಬಿಟ್ಟಿತು. ಹಾಗೆಯೇ ಸ್ತ್ರೀ ಸಬಲೀಕರಣ ಎಂಬ ಪದವೇ ಚಾಲ್ತಿಯಲ್ಲಿಲ್ಲದ ಆ ಕಾಲದಲ್ಲಿ ಆ ಪ್ರಕ್ರಿಯೆಗೆ ಬೀಡಿ ಉದ್ಯಮ ನೀಡಿದ ಚಾಲನೆಯಿಂದಾಗಿ ನಮ್ಮೂರಿನ ಕೆಳವರ್ಗದ ಹಾಗೂ ಆರ್ಥಿಕವಾಗಿ ಕೆಳಪದರದಲ್ಲಿರುವ ಮೇಲ್ವರ್ಗದ ಮಹಿಳೆಯರಿಗೂ ಆರ್ಥಿಕ ಬಲ ಬಂದಂತಾಗಿ, ಆರ್ಥಿಕ ಬಲಾಢ್ಯರು ಮಾತ್ರವಲ್ಲ ಇಡೀ ಪುರುಷ ಲೋಕವನ್ನೇ ಎದುರಿಸುವ ಆತ್ಮಸ್ಥೈರ್ಯವೊಂದು ಅವರೊಳಗೆ ಪ್ರಾಪ್ತವಾಯಿತು.'[4] 'ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ ೨೦ನೇ ಶತಮಾನದ ಎರಡನೇ ದಶಕದ ಆದಿಯಲ್ಲಿ ಕೇರಳದ ಮಲಬಾರ್ ಪ್ರದೇಶದ ತಲಚೇರಿ, ಕಣ್ಣೂರು ಹಾಗೂ ಅವಿಭಜಿತ ದಕ್ಷಿಣ ಕನ್ನಡದ ಭಾಗವೇ ಆಗಿದ್ದ ಕಾಸರಗೋಡು ಜಿಲ್ಲೆಯ ದಕ್ಷಿಣ ತುದಿಯಲ್ಲಿರುವ ತ್ರಿಕರಪುರದವರೆಗೂ ಬಹಳವಾಗಿ ವ್ಯಾಪಿಸಿದ್ದ ಬೀಡಿ ಉದ್ಯಮದ ಪರಿಚಯ ಆಗ ಕುಡಾಲದ ಮಂದಿಗೆ ಅಷ್ಟೇನೂ ಇರಲಿಲ್ಲ. ಕೇರಳ ಪ್ರಾಂತ್ಯದಲ್ಲೆಲ್ಲ ಬೀಡಿ ಫ್ಯಾಕ್ಟರಿಗಳಿಗೇ ತೆರಳಿ, ದಬ್ಬಾಳಿಕೆ, ಶೋಷಣೆಯಿಂದಾಗಿ ಬೇಸತ್ತ ಬೀಡಿ ಕಾರ್ಮಿಕರೆಲ್ಲ ಸಂಘಟಿತರಾಗಿ, ಆಗ ಕೇರಳದಲ್ಲಿ ಚಾಲ್ತಿಯಲ್ಲಿದ್ದ ಟ್ರೇಡ್ ಯೂನಿಯನ್ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳತೊಡಗಿದರು. ಮಾಲೀಕರ ದರ್ಪಗಳನ್ನು ಬಗ್ಗು ಬಡಿಯಲು, ತಮಗೆ ದಕ್ಕಬೇಕಾದ ಸವಲತ್ತುಗಳನ್ನು ದಕ್ಕಿಸಿಕೊಳ್ಳಲು ಕಾರ್ಮಿಕರು ಟ್ರೇಡ್ ಯೂನಿಯನ್ ಸೇರಿ ಹಲವು ಹೋರಾಟದ ಚಟುವಟಿಕೆಗಳನ್ನು ವಹಿಸಿಕೊಳ್ಳತೊಡಗಿದಾಗ ಬೀಡಿ ಮಾಲೀಕರೆಲ್ಲ ಒಟ್ಟಾಗಿ ತಾವು ಮೊದಲೇ ನಿರ್ಧರಿಸಿಕೊಂಡಂತೆ ರಾತ್ರೋರಾತ್ರಿ ತಮ್ಮ ಕಂಪನಿಗಳನ್ನು ಯಾವುದೇ ರಗಳೆಯಿಲ್ಲದ ಕುಡಾಲದ ಪೇಟೆಗೆ ಸ್ಥಳಾಂತರಿಸಿಕೊಂಡರು. ತಮ್ಮನ್ನು ಬಗ್ಗುಬಡಿಯಲೆತ್ನಿಸಿದ ಕೇರಳದ ಬೀಡಿ ಕಾರ್ಮಿಕರನ್ನೆಲ್ಲ ಬೀದಿಪಾಲು ಮಾಡಿ ಕುಡಾಲದ ಪೇಟೆಗೆ ಬಂದ ಬೀಡಿ ಮಾಲಿಕರು, ಕೇರಳದಲ್ಲಿದ್ದಂತೆ ಫ್ಯಾಕ್ಟರೀ ಪದ್ಧತಿಯಲ್ಲೇ ಬೀಡಿ ತಯಾರಿಯನ್ನು ಮುಂದುವರಿಸಿಕೊಂಡು ಬಂದು ಮತ್ತೆ ಗಂಡಸರನ್ನೇ ಆ ಕೆಲಸಕ್ಕೆ ನೇಮಿಸಿಕೊಂಡರು. ಆದರೆ ಕುಡಾಲದ ಪೇಟೆಯಲ್ಲಿ ಈ ಬೀಡಿ ಮಾಲೀಕರ ನೆಮ್ಮದಿ ಬಹಳ ಕಾಲ ಬಾಳಲಿಲ್ಲ. ಕೇರಳದಲ್ಲಿ ಬೀಡಿ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದ ಕಾರ್ಮಿಕರೆಲ್ಲ ನಿಧಾನಕ್ಕೆ ಕುಡಾಲದ ಪೇಟೆಗೆ ಲಗ್ಗೆಯಿಟ್ಟು ತಮ್ಮ ಕಂಪನಿಗಳನ್ನು ಬದಲಾಯಿಸಿ ಮತ್ತೆ ಬೀಡಿ ಕೆಲಸಕ್ಕೆ ಸೇರಿಕೊಂಡರು. ಅಷ್ಟರಲ್ಲಿ ಕುಡಾಲದ ಪೇಟೆಯ ನದಿ ಸೆರಗಲ್ಲಿದ್ದ ಹಂಚಿನ ಕಾರ್ಖಾನೆಗಳಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆ ಉತ್ತುಂಗಕ್ಕೇರಿತು. ಇದೇ ಸಂದರ್ಭದಲ್ಲಿ ಕೇರಳದಿಂದ ಟ್ರೇಡ್ ಯೂನಿಯನ್ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಬಂದಿದ್ದ ಅಲ್ಲಿನ ಬೀಡಿ ಕಾರ್ಮಿಕರು ಮತ್ತೆ ಸಂಘಟಿತರಾಗಿ ತಮ್ಮ ಕೂಲಿ ಏರಿಕೆ ಮತ್ತು ಬೋನಸ್ ಬೇಡಿಕೆಯನ್ನು ಮುಂದಿಟ್ಟು ಮುಷ್ಕರಗಳನ್ನು ಆರಂಭಿಸಿದಾಗ ಬೀಡಿ ಮಾಲೀಕರು ತಮ್ಮ ರಕ್ಷಣೆಗಾಗಿ ಮತ್ತೊಂದು ಒಳದಾರಿಯನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು. ಕುಡಾಲದ ಪೇಟೆಯಲ್ಲಿ ಫ್ಯಾಕ್ಟರೀ ಒಳಗೇ ಕೂತು ತಯಾರಾಗುತ್ತಿದ್ದ ಬೀಡಿ ಉದ್ಯಮ

ಇದ್ದಕ್ಕಿದ್ದಂತೆ ಮಾಯವಾಗಿ, ಹಳ್ಳಿಹಳ್ಳಿಗೆ ತೆರಳಿ ಮನೆಮನೆಗೆ ಎಲೆ ತಂಬಾಕು ಕೊಡುವ ಕಂಟ್ರಾಕ್ಟ್ ಪದ್ಧತಿಯು ಸಾರ್ವತ್ರಿಕವಾಯಿತು.[೪] ಬೀಡಿ ಉದ್ಯಮ ಸಾರ್ವತ್ರಿಕವಾಗಿ ಜನರನ್ನು ಆಕರ್ಷಿಸಲು ಕಾರಣವಾದ ಬಗೆಯನ್ನು ಇದು ವಿಶದೀಕರಿಸುತ್ತದೆ. ಬೀಡಿ ಕಟ್ಟಿ ಜನ ಬದುಕನ್ನು ಕಟ್ಟಿಕೊಂಡರು. ಆರ್ಥಿಕ ಚೈತನ್ಯ ಪಡೆದರು. ಹಣ ಗಳಿಸುವ ಹೊಸ ದಾರಿಯನ್ನು ಬೀಡಿ ನೀಡಿತು.

೧೦.೩. ಪ್ರಾಣಿ ಸಾಕಾಣಿಕೆ

ತುಳುನಾಡಿನಲ್ಲಿ ಹಟ್ಟಿ ತುಂಬ ದನ, ಎತ್ತು, ಎಮ್ಮೆಗಳು ಶ್ರೀಮಂತಿಕೆಯ ದ್ಯೋತಕವಾಗಿತ್ತು. ಹಟ್ಟಿ ನೋಡಿಯೇ ಶ್ರೀಮಂತಿಕೆಯನ್ನು ನೋಡುತ್ತಿದ್ದ ದಿನಗಳಿದ್ದವು. ಜಮೀನ್ದಾರರ ಮನೆಯಲ್ಲಿ ತುಂಬಿದ ಹಟ್ಟಿಗಳು ಇರುತ್ತಿದ್ದವು. ಕಂಬಳಕ್ಕಾಗಿ ಕೋಣಗಳನ್ನು ಸಾಕಲಾಗುತ್ತಿತ್ತು. ಕೋಳಿ ಅಂಕಕ್ಕಾಗಿ ಕೋಳಿಗಳ ಸಾಕಾಣಿಕೆಯೂ ನಡೆದಿತ್ತು. ಪ್ರಾಣಿಗಳನ್ನು ನೋಡಿಕೊಳ್ಳುವುದಕ್ಕೆ ಜಮೀನ್ದಾರರ ಮನೆಯಲ್ಲಿ ಮೂಲದಾಳುಗಳು ಇರುತ್ತಿದ್ದರು. ಅವುಗಳ ತಿನಿಸು ಉಣಿಸಿನ ಕಡೆ ಗಮನ ಕೊಡುತ್ತಿದ್ದರು. ನಸುಕಿನಲ್ಲೇ ಒಲೆಗೆ ಬೆಂಕಿ ಹಾಕಿ ಅಕ್ಕಚ್ಚು ನೀಡುವ ಪರಿಪಾಠವಿತ್ತು. ಕೋಣಗಳಿಗೆ ಹುರುಳಿ ನೀಡುವ ಕ್ರಮವಿತ್ತು.

ಅಶಿಕ್ಷಿತ ಮಹಿಳೆಗೆ ಸಣ್ಣ ಸಣ್ಣ ಮೂಲಗಳು ಆರ್ಥಿಕ ಮೂಲಗಳಾಗಿ ಬದಲಾಗುವ ಅನಿವಾರ್ಯತೆಯನ್ನು ಗಮನಿಸಬಹುದು. ದೈನಂದಿನ ಬದುಕು ಎಚ್ಚರಿಕೆ, ದುಡಿಯುವ ಅನಿವಾರ್ಯತೆಯನ್ನು ತಂದೊಡ್ಡುತ್ತದೆ. ಕಾಸಿಗೆ ಕಾಸು ಕೂಡಿ ಹಾಕಲು ಹಲವು ಯೋಜನೆಗಳನ್ನು ಹೆಣೆಯುವ ಮಹಿಳೆ ಆರ್ಥಿಕ ತಜ್ಞೆ ಎಂದು ಗುರುತಿಸಿಕೊಂಡಿಲ್ಲ. ಫಾತಿಮ್ಮಳ ಎಡೆಬಿಡದ ದುಡಿಮೆಯಿಂದ ಕುಟುಂಬ ಸಾಗುತ್ತದೆ.

'ಒಂದೆರಡು ದನಗಳು, ಮೂರು ನಾಲ್ಕು ಆಡುಗಳು, ಅವುಗಳ ಮರಿಗಳು, ಒಂದಷ್ಟು ಕೋಳಿಗಳು ಇವೆಲ್ಲಾ ಮಹಮ್ಮದ್ ಖಾನರ ಹೆಂಡತಿ ಫಾತಿಮ್ಮಳ ಚರ ಆಸ್ತಿ.'(ಚಂದ್ರಗಿರಿ ತೀರದಲ್ಲಿ, ಪುಟ ೧)

ಕೋಳಿ ಸಾಕಾಣಿಕೆ ಕೂಡ ಹಳ್ಳಿಯ ಪರಿಸರದಲ್ಲಿ ಆದಾಯ ಮೂಲವಾಗಿತ್ತು. ಕೋಳಿಮರಿ ಹಾಗೂ ಮೊಟ್ಟೆ ಮಾರಾಟ ಮಾಡಿ ಹಣ ಮಾಡುವ ದೃಷ್ಟಿಕೋನವಿತ್ತು. ಗಿಡುಗ ಎತ್ತಿಹೋಗದಂತೆ ಕೋಳಿ ಮರಿಗಳನ್ನು ಜತನದಿಂದ ಕಾಪಾಡುತ್ತಾ ಎಚ್ಚರದ ಸ್ಥಿತಿ ಇರಬೇಕಾದುದು ಅಗತ್ಯ. ನಾದಿರಾಳ ಅತ್ತೆ ಕೋಳಿ ಸಾಕಾಣಿಕೆ ಮಾಡುತ್ತಿದ್ದಳು. ಮಹಿಳೆಯರು ಮನೆಯಲ್ಲೇ ಕೂತು ಮಾಡಬಹುದಾದ ಆದಾಯದ ವಿಭಿನ್ನ ಮೂಲಗಳನ್ನು ರೂಢಿಸಿಕೊಂಡಿದ್ದರು. ಮನೆಯಲ್ಲಿ ಆದಾಯವಿಲ್ಲದೆ ಕೂರುವುದಕ್ಕಿಂತ ಖರ್ಚುವೆಚ್ಚಗಳ ಕಡೆ ನಿಗಾ, ಕಠಿಣದುಡಿಮೆ, ಶ್ರಮಜೀವನ ಗಮನಿಸಬಹುದು. ಮನೆಯ ಆದಾಯ ಹೆಚ್ಚಿಸುವಲ್ಲಿ ಮಹಿಳೆಯರ ಪಾತ್ರವೂ ಮಹತ್ವದ್ದು ಎಂಬ ಅಂಶವನ್ನು ಗಮನಿಸಬಹುದು.

೧೦.೪. ಬ್ಯಾಂಕಿಂಗ್

ಮೊದಲನೇ ಮಹಾಯುದ್ಧದ ನಂತರ ಜಿಲ್ಲೆಯಲ್ಲಿ ಹುಟ್ಟಿಕೊಂಡ ೫-೬ ಬ್ಯಾಂಕುಗಳ ಕುರಿತು ಕಾದಂಬರಿಯಲ್ಲಿ ವಿವರಗಳು ದೊರೆಯುತ್ತವೆ. ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ವಿಜಯ ಬ್ಯಾಂಕ್, ಕರ್ನಾಟಕ ಬ್ಯಾಂಕ್ ಇವು ತುಳುನಾಡಿನಲ್ಲಿ ಜನ್ಮ ತಾಳಿದವು. ೨೮-೦೫-೧೯೦೬ರಲ್ಲಿ ಹಾಜಿ ಕಾಸಿಂ ಸಾಹೇಬರ ಮುಂದಾಳ್ತನದಲ್ಲಿ ಕಾರ್ಪೊರೇಷನ್ ಬ್ಯಾಂಕ್ ಆರಂಭಗೊಂಡಿತು. ೦೧-೦೭-೧೯೦೬ರಲ್ಲಿ ಅಮ್ಮೆಂಬಳ ಸುಬ್ರಾಯ ಪೈ ಅವರ ನೇತೃತ್ವದಲ್ಲಿ ಕೆನರಾ ಬ್ಯಾಂಕ್ ಸ್ಥಾಪಿತವಾಯಿತು. ೧೯೨೪ರಲ್ಲಿ ಕರ್ನಾಟಕ ಬ್ಯಾಂಕ್, ೧೯೨೫ರಲ್ಲಿ ಸಿಂಡಿಕೇಟ್ ಬಾಂಕ್‌ಗಳು ಆರಂಭವಾದವು. ೧೯೩೧ರಲ್ಲಿ ವಿಜಯಾ ಬ್ಯಾಂಕ್ ಸ್ಥಾಪನೆಯಾಯಿತು. ಬ್ಯಾಂಕ್‌ಗಳು ತುಳುನಾಡಿನಲ್ಲಿ ಹೊಸ ವ್ಯವಸ್ಥೆಯನ್ನು ಸೃಷ್ಟಿಸಿದವು. ಅದುವರೆಗೆ ಸಾಲಕ್ಕಾಗಿ ಜಮೀನ್ದಾರರಲ್ಲಿ ಜೀತ ಮಾಡುತ್ತಿದ್ದವರಿಗೆ ಹೊಸ ಅವಕಾಶಗಳನ್ನು ಬ್ಯಾಂಕ್‌ಗಳು ನೀಡಿದವು. ಭೂಸುಧಾರಣೆ ಕಾನೂನಿನಿಂದ ಹಣದ ಅಡಚಣೆಗೆ ಒಳಗಾದ ಜಮೀನ್ದಾರರಿಗೂ ಕೃಷಿ ಕಾರ್ಯಕ್ಕೆ ಉತ್ತಮ ಅವಕಾಶಗಳು ಸೃಷ್ಟಿಯಾದವು.

'ಯಮುನೆಯು 'ಏನಾ ಇದು ಪಾರ? ಕೈ ಕುತ್ತಿಗೆ ಎಲ್ಲ ಬೋಳುಬೊಪ್ಪನಾಂಗೆ?' ಎಂದು ಕೇಳಿದಳು' ಪಾರಳು ಮಾತನಾಡಲಿಲ್ಲ. ಸುಮ್ಮನೆ ನಕ್ಕು ಮಾತು ಬದಲಾಯಿಸಿದಳು. ಅವಳು ಹೇಳಿಯಾಳಾದರೂ ಏನು? ಶಾಲೆಯ ಮಾಸ್ತರಿಕೆಯಲ್ಲಿ ಇಷ್ಟು ಮಕ್ಕಳ ಸಂಸಾರವನ್ನು ನಡೆಸುವುದಾದರೂ ಎಂತು? ಮಕ್ಕಳ ಅನಾರೋಗ್ಯ, ಅವಳ ಬಾಣಂತನ, ಊಟ, ಉಡುಗೆ ಎಂದು ಅವಳ ಒಂದೊಂದೇ ಅಭರಣವು ಬ್ಯಾಂಕಿನ ಪಾಲಾಗುತ್ತಾ ಬಂದಿತ್ತು.'(ಪಾಚಿ ಕಟ್ಟಿದ ಪಾಗಾರ, ಪುಟ ೧೩೮) ಹೀಗೆ ಬ್ಯಾಂಕ್ ಹಣ ನೀಡುವುದರೊಂದಿಗೆ ಬಡಜನರು ಜಮೀನ್ದಾರರಲ್ಲಿ ಜೀತದಾಳುಗಳಾಗುವುದನ್ನು ತಪ್ಪಿಸಿತು.

'ಉಲ್ಲಂಘನೆ' ಕಾದಂಬರಿಯಲ್ಲಿ ಬ್ಯಾಂಕಿನಿಂದ ಸಾಲ ಪಡೆದು ಕೃಷಿ ಮಾಡುವ ವಿವರಣೆ ಇದೆ. ಭೂಸುಧಾರಣೆಯಿಂದ ಕೃಷಿ ಕಾರ್ಮಿಕರ ಕೊರತೆಯಾದಾಗ, ಭೂಮಿ ವಿಭಜಿಸಿ ಸಣ್ಣ ಹಿಡುವಳಿಗಳಾದಾಗ ಬ್ಯಾಂಕಿನಿಂದ ಸಾಲ ಪಡೆಯುವುದು ಅನಿವಾರ್ಯವಾಗುತ್ತದೆ.

೧೦.೫. ಜೇನು

'ಕೊಟ್ಟ' ಕಾದಂಬರಿಯಲ್ಲಿ ಕೊರಗರು ಕಾಡಿನಲ್ಲೇ ನೆಲೆ ಕಂಡುಕೊಂಡದ್ದರಿಂದ ಕಾಡಿನ ಉತ್ಪನ್ನಗಳನ್ನು ಬಳಸಿ ಆಹಾರ ಹಾಗೂ ಖರ್ಚಿಗೆ ಬೇಕಾದುದನ್ನು ಹೊಂದಿಸಬೇಕಾದ ಅನಿವಾರ್ಯತೆಗೆ ಒಳಗಾಗಿದ್ದರು. ಜೇನುತುಪ್ಪ ತೆಗೆಯುವ ಕಾಯಕವು ಕೊರಗರಿಗೆ ಸಲೀಸು. ಮರ ಹತ್ತಿ ಜೇನುಹುಳ ಎಬ್ಬಿಸಿ ತುಪ್ಪದ ತಟ್ಟಿ ಹಿಡಿದು ಜೇನು ತೆಗೆಯುವುದು ಮಾಮೂಲು. ಕಂಗೂರಿ ಕೊಟ್ಟದಲ್ಲಿ ಮಂಗನ ಬಾವು ಕಾಯಿಲೆ ತೀವ್ರವಾಗಿ ಕಾಡಿದಾಗ ಮಲ್ಲಯ್ಯ ಜೇನುತುಪ್ಪ, ಜೇನುಸಾಕಣೆ ಉದ್ಯಮ ಕುರಿತು ಆಲೋಚಿಸುತ್ತಾನೆ. ಪರಿಣತಿ ಇರುವ ಕ್ಷೇತ್ರದಲ್ಲಿ ಯಶಸ್ಸು ಖಂಡಿತ ಸಾಧ್ಯ. ಧೀರಜ್ ಜೊತೆ ಚರ್ಚೆ ಮಾಡಿ ಜೇನುಸಾಕಣೆಯನ್ನು ವ್ಯಾಪಾರವಾಗಿ

ಮಾಡುವಲ್ಲಿ ಸಫಲವಾಗುತ್ತಾರೆ. ಸಹಜ ಪರಿಣತಿಗೆ ವ್ಯವಹಾರ ಜ್ಞಾನವು ಜೊತೆಯಾದಾಗ ಜೇನುಸಾಕಣೆ ಉದ್ಯಮ ಯಶಸ್ವಿಯಾಗಿ ನಡೆಯುತ್ತದೆ.

'ಒಂದು ಭಾನುವಾರ ಧೀರಜ್ ಬಂದಾಗ ಮಲ್ಲಯ್ಯ ಅವರೊಡನೆ ಮಾತನಾಡಿ ಕಾರ್ಕಳದಿಂದ ಬಡಗಿಯನ್ನು ಕರೆಸಿ, ಏಳೆಂಟು ಚೌಕಾಕಾರದ ಮರದ ಪೆಟ್ಟಿಗೆಯನ್ನು ಮಾಡಿಸಿದ. ಅವುಗಳಿಗೆ ಒಂದೇ ಕಿಂಡಿ, ಮುಚ್ಚಿ ತೆಗೆಯಲಿಕ್ಕೆ ಬಾಗಿಲು. ಕಾಡಿಗೆ ಹೋಗುವುದಕ್ಕೆ ತಯಾರಾಗಿದ್ದ ಹುಲಿಯ–ಕಾಳರನ್ನು ಕರೆದ ಮಲ್ಲಯ್ಯ "ನೀವು ರಾಣಿಹುಳುವನ್ನು ನೋಡಿದ್ದೀರಾ?" ಎಂದು ಕೇಳಿದ.

ಅವರು 'ಹೂಂ' ಎಂದು ತಲೆಯಾಡಿಸಿದರು.

"ಇವತ್ತು ಒಂದೆರಡು ಹುಳುವನ್ನು ತನ್ನಿ." ಎಂದ.

ಸಂಜೆ ಹೊತ್ತಿಗೆ ಬರುವಾಗ ರಾಣಿಹುಳುವಿನ ಸಮೇತ ಜೇನುಹುಟ್ಟನ್ನು ಕಾಳಹಿಡಿದುಕೊಂಡು ಬಂದ. ಮಲ್ಲಯ್ಯ ಆ ಹುಟ್ಟನ್ನು ಪೆಟ್ಟಿಗೆಯಲ್ಲಿಟ್ಟು ಕೊರಗತನಿಯನ ಗುಡಿಯ ಮೇಲೆ ಇಟ್ಟ. ನೋಡುನೋಡುತ್ತಲೇ ಆ ಪೆಟ್ಟಿಗೆಗೆ ಜೇನುಹುಳುಗಳು ಸಾಲಾಗಿ ಮುತ್ತಿಕೊಳ್ಳಲು ಶುರುವಾದವು. ಉಳಿದ ಏಳೆಂಟು ಪೆಟ್ಟಿಗೆಗಳನ್ನು ಕೊಟ್ಟದ ಸುತ್ತ ಇಡಲಾಯಿತು. ಯಾವಾಗ ನೋಡಿದರೂ ಕೊಟ್ಟದ ಮೇಲೆ ಜೇನುಹುಳುಗಳ ಹಾರಾಟ. ಎರಡು ತಿಂಗಳಿಗೋ ಮೂರು ತಿಂಗಳಿಗೋ ಒಮ್ಮೆ ಹುಲಿಯ, ಕಾಳ ಸೇರಿ ಗೂಡನ್ನೆಲ್ಲಾ ಸ್ವಚ್ಛಮಾಡಿ ಜೇನುತುಪ್ಪ ಸೋಸಿ ಬಾಟಲಿಗೆ ತುಂಬುತ್ತಾರೆ.'(ಕೊಟ್ಟ, ಪುಟ ೨೪೫)

ಮುಷ್ಟಿ ಅನ್ನಕ್ಕೋ, ಹೋಳು ಅಡಿಕೆಗೋ, ಒಂದೆರಡು ಎಲೆಗೋ ಜೇನುತುಪ್ಪ ನೀಡುತ್ತಿದ್ದ ಕಾಳ, ಹುಲಿಯ ಸಂಘದ ಮೂಲಕ ಜೇನುಉದ್ಯಮ ಮಾಡಿ ಹಣಗಳಿಸುವ ಮಾರ್ಗ ಕಂಡುಕೊಳ್ಳುತ್ತಾರೆ. ಅಶಿಕ್ಷಿತರಾದ ಹಾಗೂ ಕಾಡಿನಲ್ಲಿ ದ್ವೀಪದಂತೆ ಬದುಕುತ್ತಿರುವ ಅವರಿಗೆ ನಾಗರಿಕ ಸಮಾಜದ ರೀತಿರಿವಾಜುಗಳು ಮಲ್ಲಯ್ಯ, ಧೀರಜ್‌ನಂತಹ ನಿಸ್ವಾರ್ಥ ಯುವಕರ ಮಾರ್ಗದರ್ಶನ ಅಗತ್ಯವಾಗಿ ಬೇಕಾಗಿದೆ.

ಕೊರಗರು ಕಾಡಿನಲ್ಲಿ ನೆಲೆಕಂಡುಕೊಂಡಿದ್ದು ಜೇನುಸಂಗ್ರಹ ಅವರ ಮುಖ್ಯ ಕಾಯಕವಾಗಿತ್ತು. ಆದರೆ ನಾಗರಿಕ ಸಮಾಜದ ವ್ಯಾಪಾರಿ ಸಂಸ್ಕೃತಿಯ ಅರಿವು ಅವರಿಗಿರಲಿಲ್ಲ. ಮಲ್ಲಯ್ಯನಂತಹ ತರುಣರು ಇದಕ್ಕೆ ಉದ್ಯಮದ ಆಯಾಮವನ್ನು ನೀಡುತ್ತಾರೆ. ಕೊರಗರ ಬದುಕಿನಲ್ಲಿ ಹೊಸ ಬದಲಾವಣೆ ತರುತ್ತಾರೆ.

೧೦.೬. ಮೀನುಗಾರಿಕೆ

ತುಳುನಾಡಿನ ಪ್ರಮುಖ ಜೀವನಾಧಾರ ವೃತ್ತಿಗಳಲ್ಲಿ ಮೀನುಗಾರಿಗೆಯೂ ಒಂದು. ಮೊಗವೀರ ಜನಾಂಗದ ಪ್ರಮುಖ ಕುಲಕಸುಬಾಗಿದ್ದು ಕ್ರಮೇಣ ವ್ಯಾಪಾರದಲ್ಲಿ ಬ್ಯಾರಿಗಳು ಸೇರಿಕೊಂಡು ಉತ್ತಮ ಮಾರುಕಟ್ಟೆ ಒದಗಿಸಿದ್ದು ತಿಳಿದಿರುವ ಸಂಗತಿ.

'ಸಾಗರದೀಪ'(೧೯೮೯) ಕಾದಂಬರಿಯು ಕರಾವಳಿಯ ಮೊಗವೀರರ ಮೂಲವೃತ್ತಿಯಾದ ಮತ್ಸ್ಯೋದ್ಯಮದ ಬಗೆಗಿನ ಹೋರಾಟ, ಸಂಘರ್ಷ ಮತ್ತು ದುರಂತ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. ತಮ್ಮ ಬದುಕಿನ ಔನ್ನತ್ಯಕ್ಕಾಗಿ ಹಗಲಿರುಳು ಸಮುದ್ರದ ಜೊತೆ ಸೆಣಸಾಡುವ ಮೀನುಗಾರರ ಬವಣೆ ದುಮ್ಮಾನಗಳನ್ನು ವಿವರವಾಗಿ ನಿರೂಪಿಸುವ ಒಂದು ಮುಖ್ಯ ಸಾಮಾಜಿಕ ಕಾದಂಬರಿಯಾಗಿ ಇದು ಹೊರಹೊಮ್ಮಿದೆ.[೫೫] ಸಾಗರದೀಪ ಕಾದಂಬರಿಯು ಮೀನುಗಾರಿಕೆಯನ್ನು ಸಾಂಘಿಕ ಚಟುವಟಿಕೆಯಾಗಿ ಪರಿವರ್ತಿಸಿ ಯಶಸ್ಸು ಪಡೆದ ಕುಮಾರ ಮತ್ತು ರಾಧಾರ ಬದುಕಿನ ಹೋರಾಟವನ್ನು ದಾಖಲಿಸುತ್ತದೆ.

'ಕರಾವಳಿ' ಕಾದಂಬರಿಯಲ್ಲಿ ಮೀನುಗಾರಿಕೆಯ ವಿವರಗಳಿವೆ. ಕರಾವಳಿಯಲ್ಲಿ ಸಮುದ್ರತೀರ ಚಾಚಿದ್ದು ಮೀನುಗಾರಿಕೆಗೆ ವಿಪುಲ ಅವಕಾಶವನ್ನು ನೀಡಿದೆ. ಆರಂಭದಲ್ಲಿ ದೋಣಿಯ ಮೂಲಕ ನಡೆಸುವ ಪಾರಂಪರಿಕ ಮೀನುಗಾರಿಕೆ ನಂತರ ಯಾಂತ್ರಿಕ ಮೋಟಾರು ಬೋಟುಗಳೊಂದಿಗೆ ಆಧುನಿಕ ತಂತ್ರಗಾರಿಕೆಯನ್ನು ತನ್ನದಾಗಿಸಿಕೊಳ್ಳುತ್ತದೆ. ಮೀನುಗಾರಿಕೆಗೆ ಹಡಗನ್ನು ಬಳಸುತ್ತಿದ್ದರು. ಅದರಲ್ಲಿ ಎಂಭತ್ತಕ್ಕೂ ಹೆಚ್ಚು ಬೆಸ್ತರು ದುಡಿಯುತ್ತಿದ್ದರು. ರಂಪನಿ ಬಲೆಯ ಹಡಗುಗಳು ಗ್ರಾಮದಲ್ಲಿ ಎರಡಾದರೂ ಇರುತ್ತವೆ. ಒಂದು ರಂಪನಿ ಬಲೆಗೆ ಐದು ಅಥವಾ ಆರು ಜನ ತಂಡೇಲರಿರುತ್ತಾರೆ. ಮೊದಲಿಗೆ ಇಬ್ಬರು ಬೆಸ್ತರು ಸಣ್ಣ ದೋಣಿಯಲ್ಲಿ ಮೀನು ಅರಸಿಕೊಂಡು ಹೋಗುತ್ತಾರೆ. ಮೀನು ಕಾಣಿಸಿದ ಕೂಡಲೇ ತಮ್ಮ ತಂಡದವರಿಗೆ ನಿಶಾನಿ ಕಳುಹಿಸುತ್ತಾರೆ. ನಿಶಾನಿ ದಿನಕ್ಕೊಂದು ಬದಲಿಸಿ ಬೇರೆ ತಂಡದವರಿಗೆ ತಿಳಿಯದಂತೆ ಎಚ್ಚರವಹಿಸುತ್ತಾರೆ. ನಂತರ ರಂಪನಿಯವರು ಹೋಗಿ ಬಲೆ ಹಾಕಿ ಮೀನು ಹಿಡಿದು ತರುತ್ತಾರೆ. ಮೀನು ಬಂದಿದೆ ಎಂದು ತಿಳಿಸಲು ಸಾಂಕೇತಿಕವಾಗಿ ಬಿಳಿಯ ಬಾವುಟ ಹಾರಿಸಲಾಗುತ್ತದೆ. ಈ ರೀತಿ ಮೀನನ್ನು ದಡಕ್ಕೆ ತಂದು ನಂತರ ಲಾರಿಗಳಲ್ಲಿ ಸಾಗಿಸಿ ಮಾರಲಾಗುತ್ತದೆ.

ಮೀನುಗಾರಿಕೆ ತುಳುನಾಡಿನ ಜನತೆಗೆ ಆರ್ಥಿಕತೆಯ ದಾರಿಯನ್ನು ತೋರಿಸಿತು. ಸಾಂಪ್ರದಾಯಿಕ ಮೀನುಗಾರಿಕೆಗೆ ಆಧುನಿಕ ಸ್ಪರ್ಶ ಲಭಿಸುವುದರೊಂದಿಗೆ ಮೀನುಗಾರಿಕೆ ಯಾಂತ್ರೀಕೃತವಾಗಿದೆ. ಮೀನುಗಾರಿಕೆ ಒಂದು ವ್ಯವಸ್ಥಿತ ಉದ್ಯಮವಾಗಿದೆ.

ಈ ರೀತಿ ಉದ್ಯಮಗಳು ತುಳುನಾಡಿನಲ್ಲಿ ಆರ್ಥಿಕತೆ ಹೆಚ್ಚಾಗಲು ದಾರಿತೋರಿದವು. ಸ್ವಾವಲಂಬನೆ, ಸ್ವಾಭಿಮಾನ, ಆರ್ಥಿಕ ಪ್ರಜ್ಞೆ ಬೆಳೆಸುವಲ್ಲಿ ಮಹತ್ತರ ಪಾತ್ರವಹಿಸಿದವು. ತುಳುನಾಡಿನ ಚಿತ್ರಣ ಈ ಉದ್ಯಮಗಳಿಂದ ಸಾಕಷ್ಟು ಬದಲಾಯಿತು. ತಳಸಮುದಾಯದ ಕಾರ್ಮಿಕರಲ್ಲಿ ಆರ್ಥಿಕ ಚೈತನ್ಯ ತಂದಿತು. ಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸಿ ಬದುಕು ಶ್ರೀಮಂತಿಕೆ ಪಡೆಯಲು ಸಾಧ್ಯವಾಯಿತು.

ಅಡಿ ಟಿಪ್ಪಣಿ

೧. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೬೪.

೨. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೬೪.

೩. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೬೫.

೪. ವಸುಂಧರೆಯ ಗ್ಯಾನ, ಎಚ್.ನಾಗವೇಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬, ಪುಟ ೬೮-೬೯.

೫. ತೆಂಬರೆಯ ತರಂಗ, ಸಂ. ಡಾ.ಚಂದ್ರಶೇಖರ ಕಂಬಾರ, ಡಾ.ಸಿ.ಆರ್. ಗೋವಿಂದರಾಜು, ಅಕ್ಕ ಪ್ರಕಾಶನ, ಕುವೆಂಪುನಗರ, ೨೦೦೭, ಪುಟ ೯೭

ಅಧ್ಯಾಯ ೧೧. ಅಧ್ಯಯನದ ಫಲಿತಗಳು

ಅಧ್ಯಾಯ ೧೧. ಅಧ್ಯಯನದ ಫಲಿತಗಳು

ತುಳುನಾಡಿನ ಸಂಸ್ಕೃತಿ ವಿಶಿಷ್ಟವೂ, ಅನನ್ಯವೂ ಆಗಿದ್ದು ಕಾಲಕಾಲಕ್ಕೆ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರಣಗಳಿಗಾಗಿ ಪಲ್ಲಟಗಳು ನಡೆದಿರುವುದು ಸುಳ್ಳಲ್ಲ. ತುಳುನಾಡು ದಟ್ಟ ಕಾಡು, ಸಮುದ್ರದಿಂದ ಕೂಡಿದ್ದು ತನ್ನದೇ ಆದ ವಿಶಿಷ್ಟ ಬದುಕಿನ ಶೈಲಿಯಿಂದ ಗಮನಸೆಳೆದಿದೆ.

೧. ಭೂತಾರಾಧನೆ ತುಳುನಾಡಿನ ಅನನ್ಯ ಆರಾಧನಾ ಕಲೆಯಾಗಿದ್ದು ಬಾಳಿ ಬದುಕಿದ ಮಹಾಚೇತನಗಳನ್ನು ನೆನೆಯುವುದಾಗಿದೆ. ತಮಗೆ ತೊಂದರೆ ಕೊಡುವ ಪ್ರಾಣಿಗಳ ಆರಾಧನೆಯಾಗಿದೆ. ನ್ಯಾಯ ವ್ಯವಸ್ಥೆ ಕಾಪಾಡುವಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಭೂತಾರಾಧನೆ ಕತೆ ಕಾದಂಬರಿಗಳಲ್ಲಿ ಪಾರಂಪರಿಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ದಾಖಲಾಗಿದೆ. ಕಂಬಳವು ಸಾಂಪ್ರದಾಯಿಕ ಹಾಗೂ ಕ್ರೀಡೆಯಾಗಿ ಬೆಳೆದ ಬಗೆಯನ್ನು ಕಾದಂಬರಿಗಳು ದಾಖಲಿಸಿವೆ. ಕೋಳಿ ಅಂಕ ತುಳುನಾಡಿನ ಸಾಂಸ್ಕೃತಿಕ ಅನನ್ಯತೆಯಾಗಿ ಚಿತ್ರಿತವಾಗಿದೆ. ತುಳುನಾಡಿನ ಮೂಲನಿವಾಸಿಗಳು ಬೇಟೆಗಾರರಾಗಿದ್ದರು. ಬೇಟೆ ಆಹಾರಕ್ಕೆ, ಕಾಡು ಪ್ರಾಣಿಗಳಿಂದ ರಕ್ಷಣೆಗೆ ಹಾಗೂ ಬೆಳೆ ರಕ್ಷಣೆಗೆ ಮುಖ್ಯವಾಗಿತ್ತು.

೨. ತುಳುನಾಡಿನ ಮೂಲನಿವಾಸಿಗಳ ಬದುಕು ಕಾಡಿನಿಂದ ಆರಂಭವಾಗಿದ್ದು, ಇತ್ತೀಚಿನವರೆಗೂ ಅಲ್ಲಿಯೇ ಬದುಕು ಕಂಡುಕೊಂಡಿದ್ದ ಮಲೆಕುಡಿಯರು ಹಾಗೂ ಕೊರಗರಲ್ಲಿ ಬೇಟೆ ಪ್ರಮುಖ ಆಹಾರ ಪಡೆಯುವ ಸಾಧನವಾಗಿತ್ತು. ನೀರಬೇಟೆ ಹಾಗೂ ಕಾಡುಬೇಟೆ ಅದರಲ್ಲಿ ಮುಖ್ಯವಾಗಿದ್ದವು. ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯಲು, ಬೆಳೆ ರಕ್ಷಿಸಲು ಬೇಟೆ ಅನಿವಾರ್ಯವಾಗಿತ್ತು. ಕಾಡು ನಾಶದಿಂದ ಕಾಡಿನಿಂದ ನಾಡಿಗೆ ಬಂದು ನೆಲೆ ಕಂಡುಕೊಳ್ಳಲು ಪ್ರಯತ್ನಿಸುವ ಈ ಸಮುದಾಯಗಳು ನಾಗರಿಕ ಸಮಾಜದೊಡನೆ ಬೆರೆಯಲು ಪ್ರಯತ್ನಿಸುತ್ತಿವೆ.

೩. ತುಳುನಾಡಿನ ಮೂಲನಿವಾಸಿಗಳು ವಿಶಿಷ್ಟ ಕುಣಿತಗಳ ಮೂಲಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಜಗತ್ತನ್ನು ಪೋಷಿಸಿದವರು. ಪಾಣಾರ ಅಥವಾ ನಲಿಕೆ ಸಮುದಾಯದವರು ತಮ್ಮ ವಿಶಿಷ್ಟ ನರ್ತನದ ಮೂಲಕ ಜೀವಂತಿಕೆ ತಂದವರು. ವರ್ಷಂಪ್ರತಿ ಬಿಡದೆ ಆಚರಿಸುತ್ತ ಮನರಂಜನೆ ಹಾಗೂ ಸಾಂಸ್ಕೃತಿಕ ಆಯಾಮವನ್ನು ಧಾರ್ಮಿಕತೆಯೊಂದಿಗೆ ಜೋಡಿಸಿ ಹೊಸ ಸಂಚಲನ ಮೂಡಿಸಿದರು.

೪. ತುಳುನಾಡಿನ ಜೀವನಾವರ್ತನ ಆಚರಣೆಗಳು ಬದುಕಿಗೆ ಸ್ಫೂರ್ತಿ ನೀಡುವಂಥವು. ಊರಿನ ಗುತ್ತು ಇಲ್ಲವೆ ಪಟೇಲರ ಮುಖಂಡತ್ವವು ಊರಿನ ಪ್ರಮುಖ ಸಂದರ್ಭಗಳಲ್ಲಿ ಇರುತ್ತಿತ್ತು. ಊರಿನ ಅಜಲೆ ಪದ್ಧತಿಯು ಗಮನಾರ್ಹವಾಗಿದ್ದು, ಎಲ್ಲ ಸಮುದಾಯದವರ ಪಾತ್ರ ಮುಖ್ಯವಾಗಿತ್ತು. ಜೀವನಾವರ್ತನ ಆಚರಣೆಗಳು ತುಳುನಾಡಿನ ಸಂಸ್ಕೃತಿಯ ವಿಶಿಷ್ಟತೆಯನ್ನು ದಾಖಲಿಸಿವೆ.

೫. ಕೊರಗರು, ಮಲೆಕುಡಿಯರು, ಪಂಬದರು, ಬಿಲ್ಲವರು, ಮೊಗವೀರರು, ಬಂಟರು ಇಲ್ಲಿನ ಪ್ರಮುಖ ಮೂಲನಿವಾಸಿಗಳಾಗಿದ್ದು ವಿಶಿಷ್ಟ ಸಂಪ್ರದಾಯಗಳ ಮೂಲಕ ಗಮನವನ್ನು ಸೆಳೆಯುತ್ತಾರೆ.

೬.ಹಿರಿಯರು ಪರಂಪರೆಯ ಕಡೆಗೆ ಒಲವು ತೋರಿಸಿದರೆ, ಶಿಕ್ಷಣ ಪಡೆದವರು ಆಧುನಿಕ ಚಿಂತನೆಗಳಿಂದ ಆಧುನಿಕತೆಯತ್ತ ಒಲವು ತೋರಿಸುತ್ತಾರೆ. ಅವರ ನಡುವಿನ ಸಂಘರ್ಷಗಳನ್ನು ಕಾದಂಬರಿಗಳು ವಿವರವಾಗಿ ದಾಖಲಿಸಿವೆ.

೭. ಇಂಗ್ಲಿಷ್ ಶಿಕ್ಷಣವು ತುಳುನಾಡಿನ ಜನರ ಚಿಂತನೆಯ ಪಲ್ಲಟದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಆಧುನಿಕತೆಯೊಂದಿಗೆ ಬಂದ ಇಂಗ್ಲಿಷ್ ಶಿಕ್ಷಣ ಸಮಾನತೆಯನ್ನು ತಂದಿತು. ಇಂಗ್ಲಿಷ್‌ನತ್ತ ತುಡಿತ ಇಂದು ಹಿಂದಿಗಿಂತಲೂ ಹೆಚ್ಚಾಗಿದ್ದು ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹೆಚ್ಚಾಗಿ ಕಂಡುಬರುತ್ತಿವೆ.

೮. ತುಳುನಾಡಿನಲ್ಲಿ ಗಾಂಧಿಯ ಪ್ರಭಾವ ಪ್ರಮುಖವಾದುದು. ಅನೇಕ ತರುಣರು ಸಾರ್ವಜನಿಕ ಜೀವನದತ್ತ ಆಸಕ್ತಿವಹಿಸಿ ದೇಶಕ್ಕಾಗಿ ತ್ಯಾಗ ಮಾಡಿದರು. ಸ್ವಾತಂತ್ರ್ಯ ಹೋರಾಟವು ಜನರಲ್ಲಿ ಅಸ್ಪೃಶ್ಯತೆ ತೊಡೆದು ಹಾಕುವಲ್ಲಿ ಶ್ರಮಿಸಿತಲ್ಲದೆ ತಳಸಮುದಾಯಕ್ಕೆ ವಿಮೋಚನೆಯ ಹಾದಿಯನ್ನು ನೀಡಿತು.

೯. ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ ಗಾಂಧಿ ಭೇಟಿಯ ಪರಿಣಾಮಗಳು. ಪತ್ರಿಕೆಗಳು ರಾಷ್ಟ್ರೀಯ ಪ್ರಜ್ಞೆ ಮೂಡಿಸುವಲ್ಲಿ, ಏಕತೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಜಾತೀಯತೆ ತೊಡೆದು ಹಾಕಲು ಸ್ವಾತಂತ್ರ್ಯ ಚಳುವಳಿ ಶ್ರಮಿಸಿತು.

೧೦. ಕೃಷಿ ಸಂಸ್ಕೃತಿಯಲ್ಲಿ ಭತ್ತದ ಕೃಷಿ ಮಹತ್ವದ್ದಾಗಿದ್ದು, ಸಾಂಸ್ಕೃತಿಕವಾಗಿ ಸಮೃದ್ಧವಾಗಿತ್ತು. ಕೃಷಿ ಸಂಬಂಧಿ ಹಲವು ಆಚರಣೆಗಳು ಇಲ್ಲಿನ ಬದುಕಿನ ಜೀವನಪ್ರೀತಿಗೆ ಸಾಕ್ಷಿಯಾಗಿವೆ. ಕೃಷಿ ಬದುಕು ಶ್ರಮದ ಜೊತೆಗೆ ಆಚರಣೆಗಳಿಂದ ಜೀವಂತಿಕೆಯಿಂದ ಕೂಡಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಭೂಸುಧಾರಣೆ ಕಾನೂನು, ಜಾಗತೀಕರಣ, ಉದಾರೀಕರಣ, ಕೈಗಾರಿಕರಣದಿಂದ ಕೃಷಿ ಬದುಕಿನಲ್ಲಿ ಹಲವು ಪಲ್ಲಟಗಳು ನಡೆದಿದ್ದು, ವಾಣಿಜ್ಯ ಬೆಳೆಗಳು ಬೆಳೆಯಲ್ಪಟ್ಟಿವೆ. ಕೃಷಿ ಸಂಸ್ಕೃತಿಯಿಂದ ಆಧುನಿಕ ಪೀಳಿಗೆ ದೂರಸರಿದಿದ್ದು, ಹಳೆಯ ತಲೆಮಾರಿನವರು ಅದನ್ನು ಉಳಿಸಲು ಶ್ರಮಪಡುತ್ತಿದ್ದಾರೆ. ಕೃಷಿ ಲಾಭದಾಯಕವಲ್ಲ ಎಂಬ ಅಂಶ ಇಂದಿನ ಜನರಿಗೆ ಮನದಟ್ಟಾಗಿದೆ. ಕೃಷಿ ಇಂದು ಹೊರಳು ದಾರಿಯಲ್ಲಿದೆ. ಇಂದಿನ ಜನಾಂಗ ಕೃಷಿಯಿಂದ ದೂರ ಸರಿಯುತ್ತಾ ಜಮೀನು ಮಾರುವ ಹಂತದಲ್ಲಿದೆ. ಭೂಸುಧಾರಣೆ ವಸಾಹತೋತ್ತರ ಕಾಲದಲ್ಲಿ ತುಳುನಾಡಿನ ಮಾತೃಪ್ರಧಾನ ವ್ಯವಸ್ಥೆ ಕ್ಷೀಣವಾಗಲು ಕಾರಣವಾಯಿತು. ಕೃಷಿಕರು ಭೂಮಿ ಪಡೆದುಕೊಂಡರು. ಆದರೆ ಅದನ್ನು ಉಳಿಸಿಕೊಳ್ಳಲಾಗದೆ ಮಾರಾಟ ಮಾಡಿದರು. ಭೂಸುಧಾರಣೆಯಿಂದ ಉಂಟಾದ ಕಾರ್ಮಿಕರ ಕೊರತೆಯಿಂದ ಆಚರಣೆಗಳು ನಿಂತುಹೋದವು. ಆಧುನಿಕತೆಯ ತಲ್ಲಣಗಳಿಂದಾಗಿ ಕಂಗು ಮತ್ತು ಇತರೆ ವಾಣಿಜ್ಯ ಬೆಳೆಗಳು ಬೆಳೆಯಲ್ಪಟ್ಟವು. ಕೃಷಿಕಾರ್ಮಿಕರ ಅಲಭ್ಯತೆಯಿಂದಾಗಿ ಕೃಷಿ ಬದುಕು ದುಸ್ತರವಾಯಿತು.

೧೧. ತುಳುನಾಡಿನವರು ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ವಲಸೆ ಹೋಗಿ ನಾಡನ್ನು ಸಮೃದ್ಧಗೊಳಿಸಿದರು. ಇಲ್ಲಿನ ಯಕ್ಷಗಾನ, ನಾಗಮಂಡಲ, ಭೂತಾರಾಧನೆಯನ್ನು ಇನ್ನೂ ಬಲಪಡಿಸಿದರು. ವಲಸೆಯಿಂದ ತುಳುನಾಡಿನಲ್ಲಿ ಸಮೃದ್ಧತೆ, ಅಭಿವೃದ್ಧಿ ಉಂಟಾಗಿದೆ. ಹೊರಗಿನಿಂದ ಬಂದ ಹಣ ಇಲ್ಲಿ ಜನ ಶ್ರೀಮಂತರಾಗಲು ಕಾರಣವಾಗಿದೆ.

೧೨. ಭೂಸುಧಾರಣೆ ಕಾನೂನಿಂದ ತುಳುನಾಡಿನ ಅನನ್ಯತೆಯಾದ ಮಾತೃಪ್ರಧಾನ ವ್ಯವಸ್ಥೆಗೆ ತೊಡಕುಂಟಾಯಿತು. ಮಾತೃಪ್ರಧಾನ ವ್ಯವಸ್ಥೆ ಭೂಸುಧಾರಣೆ ಕಾನೂನಿನ ನಂತರ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಾ ಬಂದಿದೆ.

೧೩. ಉದ್ಯಮಗಳು ತುಳುನಾಡಿನ ಚಿತ್ರಣ ಬದಲಿಸಿದವು. ಹೊಸ ರೀತಿಯ ಬದುಕಿಗೆ ಅವಕಾಶ ಲಭ್ಯವಾಯಿತು. ತಳ ಸಮುದಾಯದಲ್ಲಿ ಸ್ವಾಭಿಮಾನ, ಸ್ವಾವಲಂಬನೆ ಮೂಡಿದವು. ಹೋಟೆಲ್, ಬೀಡಿ, ಜೇನು, ಬ್ಯಾಂಕಿಂಗ್ ಉದ್ಯಮಗಳು ಜನರಲ್ಲಿ ಆತ್ಮವಿಶ್ವಾಸ ಬೆಳೆಸಿ ಆರ್ಥಿಕ ಚೈತನ್ಯ ನೀಡಿದವು.

೧೪. ಭೂತಾರಾಧನೆಯು ಕುಟುಂಬದ ಹಾಗೂ ಊರಿನ ಎಲ್ಲ ಜನರನ್ನು ಒಗ್ಗೂಡಿಸುವ ಸಾಂಸ್ಕೃತಿಕ ಉತ್ಸವವಾಗಿದೆ. ಭೂತಾರಾಧನೆ ಅವೈದಿಕ ಸಂಸ್ಕೃತಿಯಾದರೂ ಜೈನ, ಬ್ರಾಹ್ಮಣರು ಮೇಲ್ವಿಚಾರಣೆ ನಡೆಸಿದ ಉದಾಹರಣೆಗಳಿವೆ.

೧೫. ಕಂಬಳದ ನಂತರದ ದಿನ, ಭೂತಾರಾಧನೆಯ ಭಾಗವಾಗಿ ಹಾಗೂ 'ಬಿನ್ನರೆಕಟ್ಟ' ಎಂದು ಖುಷಿಗಾಗಿ ಆಡುವ ಕೋಳಿ ಅಂಕ ಈ ಮೂರು ರೀತಿಗಳಲ್ಲಿ ಕೋಳಿ ಅಂಕವು ನಡೆಯುತ್ತಿತ್ತು.

೧೬. ತುಳುನಾಡಿನ ಕುಣಿತಗಳಲ್ಲಿ ಮಾದಿರ ಕುಣಿತ ಹಾಗೂ ಮಾಯಿದೆ ಪುರುಷೆ ಕುಣಿತಗಳು ಇಂದು ನಶಿಸಿವೆ. ಆದರೆ ಯಕ್ಷಗಾನ ದಿನದಿಂದ ದಿನಕ್ಕೆ ಬೆಳೆದಿದೆ. ಮಾರ್ನೆಮಿ ವೇಷ ಹಾಗೂ ಆಟಿಕಳಂಜ ಇನ್ನೂ ಪ್ರಚಲಿತದಲ್ಲಿವೆ.

೧೭. ಗುತ್ತು ಮನೆಗಳ ಅಸ್ತಿತ್ವವು ಭೂಸುಧಾರಣೆ ಕಾನೂನು ಜಾರಿಯಾದ ನಂತರ ಕ್ಷೀಣಿಸಿದೆ.

೧೮. ಸ್ವಾತಂತ್ರ್ಯ ಚಳುವಳಿ ಹಾಗೂ ಶಿಕ್ಷಣ ತುಳುನಾಡಿನ ವೃತ್ತಿಪಲ್ಲಟಕ್ಕೆ ಕಾರಣವಾದವು.

೧೯. ಸ್ವಾತಂತ್ರ್ಯ ಚಳುವಳಿಯಿಂದ ಜಾತಿಪದ್ಧತಿ ಸಡಿಲವಾಯಿತು. ತಳಸಮುದಾಯದವರಿಗೆ ದೇವಸ್ಥಾನಕ್ಕೆ ಪ್ರವೇಶ ದೊರೆಯಿತು. ಸ್ವಾತಂತ್ರ್ಯ ಹೋರಾಟವು ತಳಸಮುದಾಯದವರಿಗೆ ವಿಮೋಚನೆಯ ದಾರಿಯಾಗಿ ಕಂಡಿತು.

೨೦. ಆಧುನಿಕತೆಯ ಸಾಧನಗಳು ಅಸ್ಪೃಶ್ಯತೆ ತೊಡೆದುಹಾಕಲು ಕಾರಣವಾದವು.

೨೧. ಇಂಗ್ಲಿಷ್ ಶಿಕ್ಷಣ ತಳಸಮುದಾಯದವರಿಗೂ ತೆರೆದುಕೊಂಡಿತು.

೨೨. ನಾಗಾರಾಧನೆ, ಭೂತಾರಾಧನೆ, ಯಕ್ಷಗಾನ, ಕಂಬಳ, ಕೋಳಿ ಅಂಕ ಮೊದಲಾದವು ಆಧುನಿಕತೆ ಹಾಗೂ ಜಾಗತೀಕರಣದ ಪ್ರವೇಶದ ಬಳಿಕವೂ ಜನಪ್ರಿಯವಾಗಿಯೇ ಉಳಿದು ಹಿಂದಿಗಿಂತಲೂ ಬಲಿಷ್ಠವಾಗಿವೆ.

೨೩. ಕಂಬಳವು ನಾಗಪೂಜೆ, ಫಲವಂತಿಕೆಯ ಆಚರಣೆ, ಅಳಿಯಕಟ್ಟು ಸಂಪ್ರದಾಯ ಹಾಗೂ ಕೃಷಿಯ ಜೊತೆ ಬೆಸೆದಿದ್ದು ಇಂದು ಕ್ರೀಡೆಯಾಗಿ ಜನಜನಿತವಾಗಿದೆ.

೨೪. ಭೂಸುಧಾರಣೆ ಕಾನೂನಿನಿಂದ ಗುತ್ತು ಮನೆಗಳು ಕ್ಷೀಣಿಸುವುದರೊಂದಿಗೆ ಧನಿ ಹಾಗೂ ಮೂಲದಾಳುಗಳ ಹಲವು ಆಚರಣೆಗಳು ನಶಿಸಿದವು. ಉದಾ: ಮೂಲೊಗು ನೀರು ಮಯಿಪ್ಪುನೆ, ಪೊಲಿ ಆಚರಣೆ ಮುಂತಾದವು.

೨೫. ಬೇಟೆ ಸಂಸ್ಕೃತಿ ತುಳುನಾಡಿನ ಸಂಸ್ಕೃತಿಯಾಗಿದ್ದು ಕಾಡು ನಶಿಸುವುದರೊಂದಿಗೆ, ಕಾನೂನಿನ ನಿರ್ಬಂಧವೂ ಸೇರಿ ಇಂದು ನಶಿಸಿದೆ. ಕಾಡು ಹಾಗೂ ವನ್ಯಜೀವಿಗಳ ನಾಶವು ಇದಕ್ಕೆ ಕಾರಣವಾಗಿದೆ.

೨೬. ಆಧುನಿಕ ವಿದ್ಯಾಭ್ಯಾಸವು ಸಮಾನತೆಯನ್ನು ರೂಢಿಗೊಳಿಸಲು ಪ್ರಮುಖ ಕಾರಣವಾಯಿತು. ಗುತ್ತಿನವ ಮಾತ್ರ ಸಮರ್ಥ ಎಂಬ ರೂಢಿಗತ ನಂಬಿಕೆಯನ್ನು ಅಸತ್ಯ ಎಂದು ಸಾಧಿಸಿತು. ಕಲಿಕೆ ಒಂದು ವರ್ಗದ ಸೊತ್ತಲ್ಲ ಎಂದು ಪ್ರತಿಪಾದಿಸುತ್ತದೆ. ಇಂಗ್ಲಿಷ್ ವಿದ್ಯಾಭ್ಯಾಸ ಭೂಮಿ ಇಲ್ಲದ ತಳಸಮುದಾಯದವರಿಗೆ ದುಡಿಯುವ ದಾರಿಯನ್ನು ನೀಡಿತು.

೨೭. ಕುಮೇರಿ ಕೃಷಿ ಇಂದು ಕಣ್ಮರೆಯಾಗಿದೆ.

ಕತೆ ಕಾದಂಬರಿಗಳಲ್ಲಿ ತುಳು ಸಂಸ್ಕೃತಿಯ ಸ್ವರೂಪದ ನೆಲೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಅವಕಾಶಗಳಿವೆ.

೧. ಕತೆ ಕಾದಂಬರಿಗಳಲ್ಲಿ ನಾಗಾರಾಧನೆ, ಪಿತೃ ಆರಾಧನೆ ಕುರಿತು ಅಧ್ಯಯನ ಮಾಡಲು ಅವಕಾಶವಿದೆ.

೨. ತುಳುನಾಡಿನ ಹಬ್ಬಗಳ ಕುರಿತು ಅಧ್ಯಯನ ಮಾಡಲು ಅವಕಾಶವಿದೆ.

೩. ತುಳುನಾಡಿನ ಪ್ರಮುಖ ಜನಾಂಗವಾದ ಮೊಗವೀರರ ಬದುಕಿನ ಕುರಿತು ಹೆಚ್ಚಿನ ಅಧ್ಯಯನ ಮಾಡಲು ಅವಕಾಶವಿದೆ.

೪. ಬ್ರಾಹ್ಮಣ, ಜೈನ, ಕೊರಗರು, ಬಿಲ್ಲವರು, ಕುಡಿಯರು ಇವರ ಜನಾಂಗೀಯ ಅಧ್ಯಯನ ಮಾಡಲು ಅವಕಾಶವಿದೆ.

ಅನುಬಂಧ

ತುಳುನಾಡಿಗೆ ಗಾಂಧೀಜಿ ಭೇಟಿ ನೀಡಿದ ಮಾಹಿತಿ

ಭೂಸುಧಾರಣೆ ಕಾನೂನು ಕುರಿತ ವಿವರ

ಛಾಯಾಚಿತ್ರಗಳು

ಆಕರ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ತುಳುನಾಡಿಗೆ ಗಾಂಧೀಜಿ ಭೇಟಿ ನೀಡಿದ ಮಾಹಿತಿ



ಅಸಹಕಾರ ಮತ್ತು ಖಿಲಾಫತ್ ಚಳುವಳಿಗಳ ಸಂದರ್ಭದಲ್ಲಿ ೧೯೨೦ರ ಆಗಸ್ಟ್ ೧೯ರಂದು ಗಾಂಧೀಜಿಯವರು ಮಂಗಳೂರಿಗೆ ಭೇಟಿ ಕೊಟ್ಟು ಬೃಹತ್ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡರು. ಗಾಂಧೀಜಿಯವರು ೧೯೩೪ರಲ್ಲಿ ಪುನಃ ಏಳು ವರ್ಷಗಳ ಬಳಿಕ ಕರ್ನಾಟಕಕ್ಕೆ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡುವ ಉದ್ದೇಶದಿಂದ ಭೇಟಿಕೊಟ್ಟರು. ಈ ಪ್ರವಾಸಕ್ಕೆ ಹರಿಜನ ಪ್ರವಾಸ ಎಂದೂ ಕರೆಯಲಾಗುತ್ತದೆ. ಇದೇ ಸಂದರ್ಭದಲ್ಲಿ ಅವರು ಮಂಗಳೂರಿಗೂ ಭೇಟಿಕೊಟ್ಟಿದ್ದರು. ನಿಮ್ನ ವರ್ಗಗಳ ಮಿಷನ್ ಆಯೋಜಿಸಿದ ಅದರ ಸ್ಥಾಪಕರಾಗಿದ್ದ ಕುದ್ಮಲ್ ರಂಗರಾವ್ ಅವರ ಪ್ರತಿಭೆಯನ್ನು ಅನಾವರಣಗೊಳಿಸಿದ್ದರು. ಈ ಭೇಟಿಯಲ್ಲೆ ಅವರು ಕಾರ್ನಾಡ್ ಸದಾಶಿವರಾಯರನ್ನು ಸಂಧಿಸಿ ಅವರು ದೇಶಕ್ಕಾಗಿ ತಮ್ಮ ಎಲ್ಲಾ ಆಸ್ತಿಪಾಸ್ತಿಗಳನ್ನು ಕಳೆದುಕೊಂಡ ಬಗ್ಗೆ ತಮ್ಮ ಅಂತಃಕರಣದ ನೋವನ್ನು ಸದಾಶಿವರಾಯರ ತಾಯಿಯ ಬಳಿ ವ್ಯಕ್ತಪಡಿಸಿದರೆಂದು ದಾಖಲಿಸಲಾಗಿದೆ. ಸದಾಶಿವರಾಯರು ಆಗ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಗಾಂಧೀಜಿಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಟೋಬರ್ ೨೭ರಿಂದ ೩೧ರವರೆಗೆ ಖಾದಿ ಪ್ರಚಾರ ಕಾರ್ಯಕ್ಕಾಗಿ ಪ್ರವಾಸ ಕೈಗೊಂಡರು. ಈ ಸಂದರ್ಭದಲ್ಲಿ ಅವರು ನೀಲೇಶ್ವರ, ಕಾಸರಗೋಡು, ಮಂಗಳೂರು, ಪುತ್ತೂರು, ಬಂಟ್ವಾಳ, ಕಾರ್ಕಳ, ಮೂಲ್ಕಿ, ಕುಂದಾಪುರಗಳಲ್ಲಿ ಪ್ರವಾಸ ಕೈಗೊಂಡು ಖಾದಿ ಕಾರ್ಯಕ್ಕಾಗಿ ಸಾಕಷ್ಟು ಹಣ ಸಂಗ್ರಹಿಸಿದರು. ಪಡುಬಿದಿರಿ ಮತ್ತು ಕಟಪಾಡಿಯ ಮೂಲಕ ಉಡುಪಿ ತಲುಪಿದ ಗಾಂಧೀಜಿಯವರು ಅಲ್ಲಿಯ ಮಾಜಿ ಎಂ.ಎಲ್.ಎ ಖಾನ್ ಬಹದ್ದೂರ್ ಅಬ್ದುಲ್ ಸಾಹೇಬ್ ಅವರ ಉಪಸ್ಥಿತಿಯಲ್ಲಿ ಉಡುಪಿಯ ಖಾದೀ ಭಂಡಾರವನ್ನು ಉದ್ಘಾಟನೆ ಮಾಡಿದರು.

ಗಾಂಧೀಜಿಯವರು ೧೯೩೪ರ ಫೆಬ್ರವರಿಯಲ್ಲಿ ಅಸ್ಪೃಶ್ಯತಾ ನಿವಾರಣಾ ಪ್ರಚಾರಕ್ಕಾಗಿ ಸಂಪಾಜೆ, ವಿಟ್ಲ, ಸುಳ್ಯ, ಪುತ್ತೂರು, ಕಬಕ, ಕಲ್ಲಡ್ಕ, ಪಾಣೆಮಂಗಳೂರು, ಬಂಟ್ವಾಳ, ಅರ್ಕುಳ, ಅಡ್ಯಾರುಗಳನ್ನು ಸಂದರ್ಶಿಸಿದರು. ಫೆಬ್ರವರಿ ೨೫ಕ್ಕೆ ಮಂಗಳೂರು, ಗುರುಪುರ, ಬಜ್ಪೆ, ಯೆಕ್ಕಾರು, ಕಟೀಲು, ಕಿನ್ನಿಗೋಳಿ ಮಾರ್ಗವಾಗಿ ಮುಲ್ಕಿ, ಕಟಪಾಡಿ, ಉಡುಪಿಗಳಿಗೆ ಭೇಟಿ ಕೊಟ್ಟು ದಿನಾಂಕ ೨೬ಕ್ಕೆ ಕಾರವಾರಕ್ಕೆ ಕುಂದಾಪುರದಿಂದ ಹಡಗಿನಲ್ಲಿ ಪ್ರಯಾಣ ಬೆಳೆಸಿದರು.(ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮುಖ್ಯ ಸಂ. ಎಸ್. ಎ. ಜಿಲಾನಿ, ಬೆಂಗಳೂರು ೨೦೦೭, ಪುಟ ೧೧೨)

ಮಹಾತ್ಮ ಗಾಂಧಿಯವರು ಖಾದಿ ಪ್ರಚಾರ ಪ್ರವಾಸದ ಭಾಗವಾಗಿ ಎರಡನೇ ಬಾರಿ ಮಂಗಳೂರಿಗೆ ೧೯೨೭ರಲ್ಲಿ ಭೇಟಿಯಿತ್ತರು. ಈ ಸಂಬಂಧ ೨೬ನೇ ಅಕ್ಟೋಬರ್ ೧೯೨೭ರಂದು ಒಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.(ಮಂಗಳೂರು ದರ್ಶನ, ಸಂಪುಟ-೧, ಬಿ.ಎ.ವಿವೇಕ ರೈ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ೨೦೧೬, ಪುಟ ೩೩೪)

ಭೂಸುಧಾರಣೆ ಕಾನೂನು ಕುರಿತ ವಿವರ

ಗೇಣಿದಾರ ಮತ್ತು ಭೂ ಮಾಲೀಕರ ನಡುವಿನ ಸಂಬಂಧಕ್ಕೆ ಯಾವುದೇ ಶಾಸನಬದ್ಧ ಆಧಾರವಿರಲಿಲ್ಲ ಮತ್ತು ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಸಾಗುವಳಿದಾರರು ತಮ್ಮ ಕುಂದುಕೊರತೆಗಳ ಪರಿಹಾರಕ್ಕಾಗಿ ಸರ್ಕಾರವು ತಮ್ಮನ್ನು ರಕ್ಷಿಸಲು ಬರುವಂತೆ ಕೋರುತ್ತಿದ್ದರು. ಆದ್ದರಿಂದ ಭೂಮಾಲೀಕರ ರಹಿತ ಗೇಣಿದಾರರ ರಕ್ಷಣೆಗೆ ಭೂ ಸುಧಾರಣೆಗಳನ್ನು ರೂಪಿಸಿತು. ಗೇಣಿದಾರರ ರಕ್ಷಣೆಯ ಸಲುವಾಗಿ ಸ್ವಾತಂತ್ರ್ಯ ಬಂದ ನಂತರ ಭಾರತದಲ್ಲಿನ ವಿವಿಧ ರಾಜ್ಯಗಳು ಗೇಣಿದಾರಿಕೆ ಪದ್ಧತಿಯ ಸುಧಾರಣೆಯ ಬಗೆಗೆ ಶಾಸನಗಳನ್ನು ಹೊರಡಿಸಿತು. ಮತ್ತು ದಕ್ಷಿಣ ಕನ್ನಡ ಜಿಲ್ಲೆಯು ೧೯೫೪ರ ಮದರಾಸು ಒಕ್ಕಲೆಬ್ಬಿಸುವಿಕೆಯ ನಿರ್ಬಂಧ ಶಾಸನದನ್ವಯ ಬಂದಿದ್ದರಿಂದ, ಭೂ ಮಾಲೀಕರಿಂದ ಗೇಣಿದಾರರು ಬಲಾತ್ಕಾರವಾಗಿ ಹೊರದೂಡಲ್ಪಟ್ಟರೇ ಅಥವಾ ಸ್ವ ಇಚ್ಛೆಯಿಂದ ಗೇಣಿದಾರರು ಹೊರಬಂದರೆ ಎಂಬುದನ್ನು ಗಮನಿಸುವುದು ಇದರ ಉದ್ದೇಶವಾಗಿದ್ದಿತು. ಜಿಲ್ಲೆಯು ಹೊಸ ಕರ್ನಾಟಕ ರಾಜ್ಯದ ಭಾಗವಾದಾಗ ಕರ್ನಾಟಕ ಸರ್ಕಾರವು ಈ ಶಾಸನದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತು. ಹೊಸ ಕರ್ನಾಟಕ ರಾಜ್ಯ ರೂಪುಗೊಂಡ ನಂತರ, ಮೇ ೧೯೫೭ರಲ್ಲಿ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿಕೆ ಕೃಷಿ ಭೂಮಿ ಕಾನೂನುಗಳ ಸಮಿತಿಯನ್ನು ನೇಮಿಸಲಾಯಿತು. ಗೇಣಿ ನಿರ್ಧಾರ ಮಾಡುವುದು, ಸಾಗುವಳಿಗಾಗಿ ಭದ್ರತೆ, ಸ್ವಂತ ಉಳುಮೆಗಾಗಿ ಭೂ ಮಾಲೀಕರು ಜಮೀನನ್ನು ವಾಪಾಸು ಪಡೆಯುವ ಹಕ್ಕು, ಗೇಣಿದಾರರಿಗೆ ಭೂಮಿಯನ್ನು ಖರೀದಿಸುವ ಹಕ್ಕು ಮತ್ತು ಭೂ ಒಡೆಯರಿಗೆ ಸಂದಾಯ ಮಾಡಬೇಕಾದ ಪರಿಹಾರ ಧನ ಮತ್ತು ಭೂ ಹಿಡುವಳಿಗಳು ಗರಿಷ್ಠ ಮಿತಿ, ಕೃಷಿಯೇತರರಿಗೆ ಭೂಮಿಯ ಪರಭಾರೆ ಮಾಡುವುದನ್ನು ತಡೆಯುವುದು ಇವುಗಳ ಬಗ್ಗೆ ಸಮಿತಿಯು ವರದಿ ಸಲ್ಲಿಸುವಂತೆ ತಿಳಿಸಿತು.

ಸಮಿತಿಯು ೧೯೫೪ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಒಕ್ಕಲೆಬ್ಬಿಸುವುದರ ನಿರ್ಬಂಧ ಶಾಸನ ೧೯೫೪) ಜಾರಿಯಲ್ಲಿದ್ದ ಗೇಣಿದಾರ ಕಾನೂನು ಒಕ್ಕಲುತನವನ್ನು ಸ್ಥಗಿತಗೊಳಿಸಿದೆ ಎಂದು ಭಾವಿಸಿ ಗೇಣಿದಾರಿಕೆ ಕಾನೂನು ಪ್ರಾರಂಭವಾದ ದಿನಾಂಕಕ್ಕೆ ಮೊದಲು ಆರು ವರ್ಷಗಳ ಅವಧಿಗೆ ನಿರಂತರವಾಗಿ ಭೂಮಿಯ ಹಿಡುವಳಿಯನ್ನು ಹೊಂದಿದ್ದ ಎಲ್ಲ ಗೇಣಿದಾರರು ಪುನಃ ಭೂಸ್ವಾಧೀನ ಪಡೆಯಲಿಕ್ಕಾಗಿ ಹೊಸ ಅಧಿನಿಯಮಗಳ ಪ್ರಾರಂಭದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಬೇಕೆಂದು ತನ್ನ ವರದಿಯನ್ನು ನೀಡಿತು.

ಪರಿಹಾರಧನ ಸಂದಾಯದ ವಿಷಯದಲ್ಲಿ, ಸಮಿತಿಯು ನ್ಯಾಯಸಮ್ಮತವಾದ ವ್ಯವಸ್ಥೆಯನ್ನು ಶಿಫಾರಸು ಮಾಡಿತು. ಅದರಂತೆ ಪರಿಹಾರಧನವನ್ನು ಸಾಗುವಳಿ ಮಾಡುತ್ತಿದ್ದ ಗೇಣಿದಾರನು ಭೂಮಿಗೆ ಎಷ್ಟು ಗೇಣಿ ಸಂದಾಯ ಮಾಡುತ್ತಿದ್ದನೋ ಅದೇ ಪ್ರಮಾಣದಲ್ಲಿಯೇ ಹಾಗೂ ಭೂ ಮಾಲೀಕರು ಮತ್ತು ಮಧ್ಯವರ್ತಿ ಗೇಣಿದಾರರ ನಡುವೆ ವಿತರಿಸಬೇಕು. ಗೇಣಿಯು ವಸ್ತುರೂಪದಲ್ಲಿದ್ದಲ್ಲಿ ಪರಿಹಾರಧನವನ್ನು ಉತ್ಪನ್ನ ಗೇಣಿಯನ್ನು ಹಂಚಿಕೊಂಡಂತೆಯೇ ಅದೇ ಪ್ರಮಾಣದಲ್ಲಿಯೇ ಹಂಚಬೇಕು.

ಮೈಸೂರು ಗೇಣಿದಾರಿಕೆ ಭೂ ಕಾನೂನುಗಳ ವರದಿಯನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಸರ್ಕಾರವು ಮೈಸೂರು ವಿಧಾನಮಂಡಲದಲ್ಲಿ 'ಕರ್ನಾಟಕ ಭೂ ಸುಧಾರಣಾ' ಎಂಬ ವಿಧೇಯಕವೊಂದನ್ನು ಮಂಡಿಸಿತು. ಆ ವಿಧೇಯಕದ ಮೇಲೆ ಕರ್ನಾಟಕ ವಿಧಾನಮಂಡಲದಲ್ಲಿ ಸಾಮಾನ್ಯ ಚರ್ಚೆಯಾದ ನಂತರ, ಈ ವಿಧೇಯಕವನ್ನು ಎರಡೂ ಸದನಗಳ ಜಂಟಿ ಪ್ರವರ ಆಯ್ಕೆ ಸಮಿತಿಯ ಪರಾಮರ್ಶೆಗೆ ಒಪ್ಪಿಸಿತು. ಅದು ೧೯೬೧ರ ಮಾರ್ಚ್ ೨೫ರಂದು ತನ್ನ ವರದಿಯನ್ನು ಸಲ್ಲಿಸಿತು. ಮೈಸೂರು ವಿಧಾನಮಂಡಲದಲ್ಲಿ ವರದಿಯ ಬಗ್ಗೆ ಚರ್ಚೆ ನಡೆಯಿತು ಮತ್ತು ೧೯೬೧ರಲ್ಲಿ ಮೈಸೂರು ಭೂಸುಧಾರಣಾ ವಿಧೇಯಕವು ಅಂಗೀಕೃತವಾಯಿತು. ೧೯೬೨ರ ಮಾರ್ಚ್ ತಿಂಗಳಿನಲ್ಲಿ ಅದಕ್ಕೆ ರಾಷ್ಟ್ರಪತಿ ಸಮ್ಮತಿ ದೊರೆಯಿತು. ಆದರೂ, ಈ ಅಧಿನಿಯಮದ ಕೆಲವು ಉಪಬಂಧಗಳಲ್ಲಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಕಂಡುಬಂದಿತು ಮತ್ತು ಅದರಂತೆ ೧೯೬೫ರಲ್ಲಿ ತಿದ್ದುಪಡಿ ಮಾಡಲಾಯಿತು.

ಸ್ವಾತಂತ್ರ್ಯವನ್ನನುಸರಿಸಿ ದೇಶಾದ್ಯಂತ ಭೂ ಸುಧಾರಣಾ ಕಾರ್ಯಕ್ರಮಗಳನ್ನು ಎರಡು ಪ್ರತ್ಯೇಕ ಉದ್ದೇಶದಿಂದ ಕೈಗೊಳ್ಳಲಾಯಿತು. ೧. ಹಿಂದಿನಿಂದ ಪಿತ್ರಾರ್ಜಿತವಾಗಿ ಬಂದ ಕೃಷಿಭೂಮಿಗೆ ಸಂಬಂಧಪಟ್ಟಂತೆ ಬರುವ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಇರುವಂಥ ಅಡ್ಡಿಗಳನ್ನು ಸುಧಾರಿಸುವುದು. ಅದರಿಂದಾಗಿ, ಸಾಧ್ಯವಾದಷ್ಟು ತ್ವರಿತವಾಗಿ ದಕ್ಷತೆಯ ಮಟ್ಟವನ್ನು ಏರಿಸುವ ಮತ್ತು ಉನ್ನತ ಮಟ್ಟದ ಕೃಷಿ ಪದ್ಧತಿಯಿಂದ ಕೃಷಿ ಆದಾಯದ ಉತ್ಪಾದಕತೆಯನ್ನು ಹೆಚ್ಚಿಸುವ ಪರಿಸ್ಥಿತಿಯನ್ನು ರೂಪಿಸುವುದು ಮತ್ತು ೨. ಕೃಷಿ ಪದ್ಧತಿಯೊಳಗಿನ ಶೋಷಣೆಯ ಎಲ್ಲ ದುಷ್ಪಶಕ್ತಿಗಳನ್ನು ಮತ್ತು ಸಾಮಾಜಿಕ ಅನ್ಯಾಯವನ್ನು ತೊಡೆದು ಹಾಕುವುದು. ಆ ಮೂಲಕ ಗ್ರಾಮೀಣ ಜನರ ಎಲ್ಲಾ ವರ್ಗಗಳಿಗೆ ಸ್ಥಾನಮಾನ ಮತ್ತು ಅವಕಾಶವನ್ನು ದೃಢಪಡಿಸುವುದು ಮತ್ತು ಉಳುಮೆ ಮಾಡುವವನಿಗೆ ಭದ್ರತೆಯನ್ನೊದಗಿಸುವುದು.(ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮುಖ್ಯ ಸಂ. ಎಸ್. ಎ. ಜಿಲಾನಿ, ಬೆಂಗಳೂರು ೨೦೦೭, ಪುಟ ೪೨೬, ೪೨೭)

ಮುಂದೆ ೧೯೭೪ರಲ್ಲಿ 'ಉಳುವವನೇ ಹೊಲದೊಡೆಯ' ಎಂಬ ಭೂ ಸುಧಾರಣಾ ಕಾನೂನು ಜಾರಿಗೆ ಬಂತು.

ಕರ್ನಾಟಕ ಭೂಸುಧಾರಣೆ ಕಾನೂನು – ೧೯೭೪ರ ಉದ್ಧೃತ ಭಾಗ ಈ ಕೆಳಗಿನಂತಿದೆ.

Amending Act No. 1 of 1974.—According to the existing provisions of the Mysore Land Reforms Act, 1961, a person can hold land upto 18 standard acres after 2nd October 1965 or 144 acres of last class of land. In the case of a person who had held land prior to 2nd October 1965, the extent to which he is permitted to continue to hold is 27 standard acres or 216 acres of last class of land. In the case of a family or a joint family, six additional standard acres are permitted to be held for each member in excess of five, subject however to double the ceiling limit applicable to the family. Thus a large family holding lands prior to 2nd October 1965 could own upto 432 acres of the last class of land. This is considered to be too liberal a scale having regard to the large number of landless persons desiring to take up cultivation.

The existing law defines family as follows:—

"family" in relation to a person means such person, and if married, the wife or husband, as the case may be, and the dependant children and grand-children of such person.

It is proposed to adopt a new definition, in which a family would consist of husband, wife and the minor children. This is the natural family. The ceiling for a family consisting of husband, wife and three minor children shall be 10 acres of land with assured irrigation capable of raising two crops of paddy in a year or one crop of sugarcane or 15 acres of irrigated land capable or raising only a single crop of paddy if irrigated from the river projects and major tanks; and 18 acres if irrigated from small tanks. Lands coming under lift irrigation will have a ceiling of 15 acres. Rainfed wet lands will have a ceiling of 25 acres. Dry lands will have a ceiling of 36 acres, 45 acres and 54 acres according to the range of rainfall. For larger families with more than 5 members a proportionate increase is made at the rate of two acres

of first class of land for every additional member subject to an overall limit of twenty acres of first class of land.

While applying the ceiling and determining the surplus land for a family, the lands held by the individual members will be added together. Where lands are held separately by the husband and wife of a family, the surplus to be surrendered shall be on *pro-rata* basis from the holding of each member of the family.

Ceiling will not apply to the lands held by Co-operative Farming Societies but the extent held by each person in such society and also in firms, associations and private trusts shall be deemed to be his personal holding for applying the ceiling.

Persons having assured income of not less than Rs. 12,000 per annum from non-agricultural source are not permitted to hold agricultural lands. Persons who are not cultivating personally are also not permitted to hold agricultural lands.

The term "to cultivate personally" is re-defined so as to require residence within 16 kilometres from the limits of the village in which the land is situated.

The exemptions from the ceiling at present available to the lands exclusively used for grazing of cattle, forest land, land used for specialised farms, land used for sugarcane farms and land used for efficiently managed farms have been removed and exemptions from ceiling area made available only in the following cases, namely:—

(*a*) lands owned by Government or taken on lease from Government for a period not exceeding twenty years;

(*b*) lands given as a gallantry award;

(*c*) lands used for stud farms approved by Government;

(*d*) lands belonging to Agricultural Produce Marketing Societies.

Section 8 regarding rent will apply even to exempted lands.

In the case of Sugar Factories hundred acres of land with assured irrigation facilities for purposes of Research and seed farm are permitted to be held.

Orchards will be treated as dry lands and the ceiling of fifty-four acres is made applicable to them. The lands on which coconut trees are grown are treated as dry if they are grown without any irrigation.

For computation of revised ceiling, transfers of lands made from 18th November 1961 will be taken into account.

Rent: Under the existing law, the rent payable by the tenant to the landlord shall not exceed one-fourth of the gross produce or its value in cash in the case of land

possessing facilities for assured irrigation from a tank or a river channel, and one-fifth of the gross produce or its value in cash in the case of any other land.

This involves determination of average yield of principal crops, market prices of the various commodities and as such, fixation of rent has become cumbersome process involving much time and energy. The method of fixing the rent is proposed to be simplified by fixing the rent at ten times land revenue for dry lands possessing no facilities for irrigation from Government sources. For lands classified as dry but possessing irrigation facilities from Government sources an additional rent ranging from Rs. 22 per acre per annum to Rs. 66 per acre per annum on the basis of irrigation facilities made available from Government source of irrigation is made payable.

The amount payable to the owner in respect of the non-resumable land vesting in Government under section 44 of the Act and the amount payable in respect of surplus land vesting in Government under section 72 will be a multiple of the net income, which is the same as rent. The multiple will be fifteen for net income upto Rs. 5,000 per annum, twelve for the next slab of net income from Rs. 5,000 to Rs. 10,000 and ten for the slab of net income over Rs. 10,000 per annum paid in instalments through negotiable bonds as at present. The amount payable is limited to rupees two lakhs.

The surplus land that would become available for distribution on applying the revised ceiling will be distributed by following the priorities given below, at the same time reserving fifty per cent of the surplus land for being allotted to the Scheduled Castes and Scheduled Tribes:—

(*a*) displaced tenants who have no land.	Not less than one unit each.
(*b*) landless agricultural labourers and other landless persons.	Not less than one unit each.
(*c*) other persons having less than one unit.	Not less than the extent required to make up one unit.

Opportunity has also been taken to—

(i) authorise the Deputy Commissioner of the District to issue notifications of vesting of non-resumable lands in Government as and when such extents are determined by the authorities concerned;

(ii) make the Assistant Commissioner the appropriate authority to investigate and locate lands which are deemed to be non-resumable under section 2(A), (29) and section 14(3);

(iii) reduce the price payable by a tenant for site on which a dwelling house is built from twenty times the rent to ten times the rent;

(iv) provide for application of ceiling to holdings becoming irrigable on a future date under Government irrigation projects;

(v) divest Munsiff Courts of certain non-judicial powers and investing them in Revenue Officers;

(vi) provide for the definition of 'Tahsildar' to include Special Tahsildar';

(vii) provide for review of the proceedings of the Tahsildar or the Assistant Commissioner by the Divisional Commissioner;

(viii) substitute a new Schedule I in place of the existing one;

And other consequential amendments to quicken the pace of implementation of the Act.

(Obtained from the Mysore Land Reforms (Amendment) Bill 1972 in File No. LAW 55 LGN 72.)

XI

Amending Act No. 26 of 1974.—Section 48A of the Karnataka Land Reforms Act, 1961 (Karnataka Act 10 of 1962) provides that every person entitled to be registered as an occupant under section 45 may make an application to the Tribunal within six months from 1st March 1974. This time limit is due to expire on 31st August 1974. It is proposed to extend it to 31st December 1974 as there is a great demand from the rural population to allow extension of time.

Section 66 of the said Act as it stood prior to the promulgation of the Ordinance on 29th May 1974 allowed time for filing declarations of holdings upto 30th May 1974 and the filing of declarations had to be done in terms of A, B, C and D classes of lands.

On further examination it was considered unnecessary to link up filing of declarations with the A, B, C and D classification of lands and that the time limit of 90 days from 1st March 1974 required to be extended further by 90 days to enable the declarants to file their declarations.

Accordingly the Karnataka Land Reforms (Amendment) Ordinance 1974 (Karnataka Ordinance No. 3 of 1974) was promulgated on 29th May 1974 providing for filing of declaration with reference to irrigated, rainfed and dry lands within the extended time of 90 days from 30th May 1974. It is proposed to further extend the time upto 31st October 1974.

Hence this Bill.

(Published in the Karnataka Gazette (Extraordinary), Part IV-2A, dated 26th August, 1974, as No. 2694, at p. 4.)

XII

Amending Act No. 31 of 1974.—Section 133 of the Karnataka Land Reforms Act expressly provides that the Civil Courts shall stay the suits involving issues required to be decided under the said Act and refer such issues to the Tribunal for decision.


In spite of the express provision in section 133, the Civil Courts had been granting injunctions against tenants in suits filed by land-lords under the specific Relief Act claiming that there were no tenants on the land as evidenced by entries in Record of Rights. The Courts took the view that actual possession on the relevant date and not legal title to the land was criteria in such suits. To safeguard tenants from dispossession in consequence of injunctions issued in such suits, further provision in the Land Reforms Act were considered desirable and accordingly an Ordinance (No. 6 of 1974) was issued on 3rd August 1974.

Section 91 of the Karnataka Land Reforms (Amendment) Act, 1973 is also proposed to be amended to make the intention clear.

Hence the Bill.

(Published in the Karnataka Gazette (Extraordinary), Part IV-2A, dated 26th August, 1974, as No. 2693, at p. 5.)

ಛಾಯಾ ಚಿತ್ರಗಳು



ಜುಮಾದಿ ಬಂಟ



ಕೋರ್ದಬ್ಬು



ಕೋಳಿ ಅಂಕ



ಕಂಬಳ




ಆಟಿ ಕಳೆಂಜ



ತೆಂಕುತಿಟ್ಟು
ಯಕ್ಷಗಾನ

ಕಂಗೀಲು ಕುಣಿತ





ಮಾರ್ನೆಮಿ ವೇಷ

ನಾಗಮಂಡಲ





ಗುತ್ತು ಮನೆ



ರೈಲ್ವೇ
ನಿಲ್ದಾಣ
ಮಂಗಳೂರು

ಛಾಯಾ ಚಿತ್ರಗಳು



ಜುಮಾದಿ ಬಂಟ



ಕೋರ್ದಬ್ಬು



ಕೋಳಿ ಅಂಕ



ಕಂಬಳ

ಆಟಿ ಕಳೆಂಜ





ತೆಂಕುತಿಟ್ಟು
ಯಕ್ಷಗಾನ







ಕಂಗೀಲು ಕುಣಿತ





ಮಾರ್ನೆಮಿ
ವೇಷ

ನಾಗಮಂಡಲ





ಗುತ್ತು ಮನೆ



ರೈಲ್ವೇ
ನಿಲ್ದಾಣ
ಮಂಗಳೂರು

ಕೃಪೆ : ಅಂತರ್ಜಾಲ, ಪೊಲಿ, ಮಂಗಳೂರು ದರ್ಶನ, ಭಾರತದಲ್ಲಿ ಬಾಸೆಲ್ ಮಿಷನ್.

ಆಕರ ಗ್ರಂಥಗಳು

ಪ್ರಾದೇಶಿಕ ಕಾದಂಬರಿಗಳು

೧. ಗುಲ್ವಾಡಿ ವೆಂಕಟರಾವ್; ತೃತೀಯ ಆವೃತ್ತಿ ೨೦೧೩(ಪ್ರಮು. ೧೮೯೯); **ಇಂದಿರಾಬಾಯಿ**; ವಸಂತ ಪ್ರಕಾಶನ, ಬೆಂಗಳೂರು.

೨.ನಾಗವೇಣಿ ಎಚ್.; ನಾಲ್ಕನೇ ಮುದ್ರಣ ೨೦೧೧(ಪ್ರಮು. ೧೯೯೯); **ಗಾಂಧಿ ಬಂದ**; ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.

೩. ಪ್ರಭಾಕರ ನೀರ್‌ಮಾರ್ಗ; ೧೯೯೭; **ದಾಯಿತ್ವ**; ಹೇಮಾವತಿ ಪ್ರಕಾಶನ, ಮಂಗಳೂರು.

೪. ಪ್ರಭಾಕರ ನೀರ್‌ಮಾರ್ಗ; ೨೦೦೫; **ಕಂಬುಲ**; ಹೇಮಾವತಿ ಪ್ರಕಾಶನ, ಮಂಗಳೂರು.

೫. ಪ್ರಭಾಕರ ನೀರ್‌ಮಾರ್ಗ; ೨೦೦೧; **ಧೀಂಗಿಣ**; ಹೇಮಾವತಿ ಪ್ರಕಾಶನ, ಮಂಗಳೂರು.

೬. ಪ್ರಭಾಕರ ನೀರ್‌ಮಾರ್ಗ; ೨೦೦೭; **ಮಾದಿರ**; ಹೇಮಾವತಿ ಪ್ರಕಾಶನ, ಮಂಗಳೂರು.

೭. ಮಿತ್ರಾ ವೆಂಕಟ್ರಾಜ; ೨೦೧೪; **ಪಾಚಿ ಕಟ್ಟದ ಪಾಗಾರ**; ಮನೋಹರ ಗ್ರಂಥ ಮಾಲಾ, ಧಾರವಾಡ.

೮. ಮೊಗಸಾಲೆ ನಾ.; ದ್ವಿತೀಯ ಮುದ್ರಣ ೨೦೧೦(ಪ್ರಮು. ೨೦೦೮); **ಉಲ್ಲಂಘನೆ**; ಸುಮುಖ ಪ್ರಕಾಶನ, ಬೆಂಗಳೂರು.

೯. ಮೊಗಸಾಲೆ ನಾ.; ೨೦೧೪; **ಮುಖಾಂತರ**; ಮನೋಹರ ಗ್ರಂಥ ಮಾಲಾ, ಧಾರವಾಡ.

೧೦. ವೀರಪ್ಪ ಮೊಯಿಲಿ ಎಂ.; ಮೂರನೇ ಮುದ್ರಣ ೨೦೧೨(ಪ್ರಮು.೧೯೮೫); **ಸುಳಿಗಾಳಿ**; ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು.

೧೧. ವೀರಪ್ಪ ಮೊಯಿಲಿ ಎಂ.; ದ್ವಿತೀಯ ಮುದ್ರಣ ೨೦೧೨(ಪ್ರಮು. ೧೮೯೬); **ಸಾಗರದೀಪ**; ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು.

೧೨. ವೀರಪ್ಪ ಮೊಯಿಲಿ ಎಂ.; ಮೂರನೇ ಮುದ್ರಣ ೨೦೧೨(ಪ್ರ ಮು.೧೯೯೯); **ತೆಂಬರೆ**; ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು

೧೩. ವೀರಪ್ಪ ಮೊಯಿಲಿ ಎಂ.; ತೃತೀಯ ಮುದ್ರಣ; ೨೦೧೪(ಪ್ರ ಮು. ೧೯೯೩); **ಕೊಟ್ಟ**; ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಬೆಂಗಳೂರು

೧೪. ವಿಶುಕುಮಾರ್; ೧೯೮೫; **ಕರಾವಳಿ**; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೫. ಶಿವರಾಮ ಕಾರಂತ ಕೆ.; ಎಂಟನೇ ಮುದ್ರಣ; ೨೦೧೩(ಪ್ರಮು. ೧೯೩೩); **ಚೋಮನ ದುಡಿ**; ಸಪ್ನ ಬುಕ್ ಹೌಸ್, ಬೆಂಗಳೂರು

೧೬. ಶಿವರಾಮ ಕಾರಂತ ಕೆ.; ಮರುಮುದ್ರಣ ೨೦೧೫(ಪ್ರಮು ೧೯೪೧); ಮರಳಿ ಮಣ್ಣಿಗೆ; ಸಪ್ನ ಬುಕ್ ಹೌಸ್, ಬೆಂಗಳೂರು.
೧೭. ಶಿವರಾಮ ಕಾರಂತ ಕೆ.; ಐದನೆಯ ಮುದ್ರಣ ೨೦೦೮ (ಪ್ರಮು. ೧೯೪೭); ಔದಾರ್ಯದ ಉರುಳಲ್ಲಿ; ಐಬಿಎಚ್ ಪ್ರಕಾಶನ, ಬೆಂಗಳೂರು.
೧೮. ಶಿವರಾಮ ಕಾರಂತ ಕೆ.; ಎರಡನೇ ಮುದ್ರಣ ೨೦೧೨(ಪ್ರಮು. ೧೯೫೧); ಕುಡಿಯರ ಕೂಸು; ಸಪ್ನ ಬುಕ್ ಹೌಸ್, ಬೆಂಗಳೂರು.
೧೯. ಸಾರಾ ಅಬೂಬಕ್ಕರ್; ಒಂಬತ್ತನೇ ಮುದ್ರಣ ೨೦೧೩(ಪ್ರ. ಮು. ೧೯೮೪); ಚಂದ್ರಗಿರಿ ತೀರದಲ್ಲಿ; ಚಂದ್ರಗಿರಿ ಪ್ರಕಾಶನ, ಮಂಗಳೂರು.

ಸಣ್ಣ ಕತೆಗಳು

೧. ಕಾರ್ಯಹಳ್ಳ ರಾಮಕೃಷ್ಣ ಶೆಟ್ಟಿ; ಜನಾರ್ಧನ ಭಟ್ ಬಿ.(ಸಂ); ೨೦೦೩; **ಗೌಡರ ಹೆಂಡತಿ ಹೆತ್ತರು**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೨. ಗಂಗಾಧರ ಫಣಿಯೂರು; ಜನಾರ್ಧನ ಭಟ್ ಬಿ.(ಸಂ) ೨೦೦೭; **ಭೂಮಿ ತಿರುಗುವಾಗ**; ಉಡುಪಿ ಜಿಲ್ಲೆಯ ಶತಮಾನದ ಕತೆಗಳು; ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೩. ಗುರುರಾಜ ಮಾರ್ಪಳ್ಳಿ; ಜನಾರ್ಧನ ಭಟ್ ಬಿ.(ಸಂ.); ೨೦೦೩; **ರಾಯರು ಮತ್ತು ಬಿಳಿಕುದುರೆ**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೪. ಶಿವರಾಮ ಕಾರಂತ, ಜನಾರ್ಧನ ಭಟ್ ಬಿ.(ಸಂ); ೨೦೦೩; **ಹೋಳಿಗೆ**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೫. ಶ್ರೀಕಂಠ ಪುತ್ತೂರು; ಜನಾರ್ಧನ ಭಟ್ ಬಿ. (ಸಂ); ೨೦೦೩; **ಡಿಕ್ಲರೇಷನ್**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೬. ನಾ. ಮೊಗಸಾಲೆ; ಜನಾರ್ಧನ ಭಟ್ ಬಿ.(ಸಂ); ೨೦೦೭; **ಪ್ರಭು ಸಮ್ಮಿತ**; ಉಡುಪಿ ಜಿಲ್ಲೆಯ ಶತಮಾನದ ಕತೆಗಳು; ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೭. ರಾಮದಾಸ್; ಜನಾರ್ಧನ ಭಟ್ ಬಿ.(ಸಂ); ೨೦೦೩; **ಉಳ್ಳಾಲ್ತಿ ಎಂದರೇನು ಸಾಮಾನ್ಯ ದೈವವೇ?**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೮. ಪ್ರಭಾಕರ ಶಿಶಿಲ ಬಿ.; ೨೦೦೩; **ಕಪಿಲಳ್ಳಿಯ ಕತೆಗಳು**; ಕರ್ನಾಟಕ ಸಂಘ, ಪುತ್ತೂರು.

೯. ಕೊರಡ್ಕಲ್ ಶ್ರೀನಿವಾಸ; ಜನಾರ್ಧನ ಭಟ್ ಬಿ.(ಸಂ); ೨೦೦೩; **ಧನಿಯರ ಸತ್ಯನಾರಾಯಣ**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

೧೦. ವ್ಯಾಸರಾವ್ ನಿಂಜೂರು; ಜನಾರ್ಧನ ಭಟ್ ಬಿ.(ಸಂ); ೨೦೦೭; **ಗರಡಿ ಮಜಲಿನ ಗಾಂಧಿ**; ಉಡುಪಿ ಜಿಲ್ಲೆಯ ಶತಮಾನದ ಕತೆಗಳು; ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೧೧. ರಾಮಚಂದ್ರದೇವ; ಜನಾರ್ಧನ ಭಟ್ ಬಿ.(ಸಂ); ೨೦೦೩; **ರಿಸಾರ್ಟ್**; ದಕ್ಷಿಣ ಕನ್ನಡದ ಶತಮಾನದ ಕತೆಗಳು; ಕರ್ನಾಟಕ ಸಂಘ, ಪುತ್ತೂರು.

ಪರಾಮರ್ಶನ ಗ್ರಂಥಗಳು

೧. ಅಮೃತಸೋಮೇಶ್ವರ(ಸಂ); ೧೯೯೭; **ತುಳುಪಾಡ್ದನ ಸಂಪುಟ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಮೃತ ಸೋಮೇಶ್ವರ; ೨೦೦೭; **ತುಳುವ ಜಾನಪದ: ಕೆಲವು ನೋಟಗಳು**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅನಂತಮೂರ್ತಿ ಯು. ಆರ್.; ೧೯೯೦; **ಪೂರ್ವಾಪರ**; ವಸಂತ ಪ್ರಕಾಶನ, ಬೆಂಗಳೂರು.

೪. ಆಮೂರ ಜಿ.ಎಸ್; ೧೯೯೫; **ಕನ್ನಡ ಕಥನ ಸಾಹಿತ್ಯ**; ಶ್ರೀಹರಿ ಪ್ರಕಾಶನ, ಧಾರವಾಡ.

೫. ಇಂದಿರಾ ಹೆಗ್ಗಡೆ; ೨೦೦೪; **ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೬. ಉಷಾ ಕಟ್ಟೆಮನೆ, ಪುರುಷೋತ್ತಮ ಬಿಳಿಮಲೆ(ಸಂ); ೨೦೦೯; **ಕಡಲ ತಡಿಯ ತಲ್ಲಣ**; ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.

೭. ಉಪಾಧ್ಯಾಯ ಯು.ಪಿ.; ೧೯೯೮; **ತುಳು ಕೈಪಿಡಿ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೮. ಕಡವು ಶಂಭು ಶರ್ಮ; ೧೯೭೦; **ತುಳು ದೇಶ ಭಾಷಾ ವಿಚಾರವು**; ಕೆ.ವಿ.ಶರ್ಮ, ಪೆರ್ಲ.

೯. ಕಡೆತೋಟದ ಎನ್.ಕೆ.; ೧೯೭೧; **ಹರಿಜನರ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ**; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಕೃಷ್ಣರಾಯ ಶಾ.ಮಂ.; ೨೦೧೨; **ನಾಡವರು(ಒಂದು ಜನಾಂಗದ ಕಥೆ)**; ಹೇಮಂತ ಸಾಹಿತ್ಯ, ಬೆಂಗಳೂರು.

೧೧. ಕೆದಂಬಾಡಿ ಜತ್ತಪ್ಪ ರೈ; ೧೯೭೮; **ಬೇಟೆಯ ನೆನಪುಗಳು**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨. ಕೆದಂಬಾಡಿ ಜತ್ತಪ್ಪ ರೈ; ೨೦೧೪; **ಬೇಟೆಗಾರನ ಹುಲಿಹೆಜ್ಜೆ**; ಕನಸು ಪ್ರಕಾಶನ, ಪುತ್ತೂರು.

೧೩. ಕೇಶವ ಕೃಷ್ಣ ಕುಡ್ವ ; ೨೦೦೯; **ತುಳುವ ಚರಿತ್ರೆ**; ವಿಶ್ವ ತುಳು ಸಮ್ಮೇಳನೊ, ಉಜಿರೆ.

೧೪. ಕೇಶವ ಭಟ್ಟ ಟಿ.; ೨೦೦೨; **ಯಕ್ಷಗಾನ ಕಲಾದರ್ಶನ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಗಂಗಾನಾಯಕ್ ಕೆ.ಎನ್.(ಪ್ರಸಂ); ೨೦೧೧; **ಹೊಸಗನ್ನಡ ಕಥೆಗರರು ಹಾಗೂ ಕಾದಂಬರಿಕಾರರು**; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೬. ಗಣನಾಥ ಎಕ್ಕಾರು; ೨೦೦೮; **ಮದಿಪು ಲೇಖನೊಲು**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೧೭. ಚಿನ್ನಪ್ಪಗೌಡ ಕೆ.; ೧೯೯೦; **ಭೂತಾರಾಧನೆ ಜಾನಪದೀಯ ಅಧ್ಯಯನ**; ಮದಿಪು ಪ್ರಕಾಶನ, ಮಂಗಳೂರು.

೧೮. ಚಿನ್ನಪ್ಪ ಗೌಡ ಕೆ.; ೨೦೦೩; **ಸಂಸ್ಕೃತಿ ಸಿರಿ**; ಮದಿಪು ಪ್ರಕಾಶನ, ಮಂಗಳೂರು.

೧೯. ಚಂದ್ರಶೇಖರ ಕಂಬಾರ, ಸಿ.ಆರ್. ಗೋವಿಂದರಾಜು(ಸಂ.); ೨೦೦೭; **ತೆಂಬರೆಯ ತರಂಗ**; ಅಕ್ಕ ಪ್ರಕಾಶನ, ಕುವೆಂಪುನಗರ.

೨೦. ಚಂದ್ರಶೇಖರ ಎನ್.; ೨೦೦೪; **ಭೂತಾಳಪಾಂಡ್ಯನ ಅಳಿಯಸಂತಾನಕಟ್ಟು ಒಂದು ವಿಭಿನ್ನ ನಿರೂಪಣೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೨೧. ಜನಾರ್ಧನ ಭಟ್ ಬಿ.; ೨೦೧೨; **ಬೆರ್ಮರು ಏನಾದರು?**; ಶ್ರೀರಾಮ ಪ್ರಕಾಶನ, ಮಂಡ್ಯ.

೨೨. ಜಿಲಾನಿ ಎಸ್.ಎ.(ಮು.ಸಂ); ೨೦೦೭; **ದಕ್ಷಿಣ ಕನ್ನಡ ಜಿಲ್ಲೆ**; ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೩. ಜೋಶಿ, ಜಿ.ವಿ.; ೧೯೯೯; **ದಕ್ಷಿಣ ಕನ್ನಡ ಜಿಲ್ಲೆಯ ರೈತ ಹೋರಾಟ**; ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೨೪. ಜ್ಯೋತಿ ಚೇಳ್ಯಾರು; ೨೦೧೬; **ಕೃಷಿ ಸಂಸ್ಕೃತಿಯಲ್ಲಿ ಕರಾವಳಿಯ ಮಹಿಳೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೨೫. ತಾರಾನಾಥ ಎನ್.ಎಸ್.(ಸಂ); ೨೦೦೧; **ಶತಮಾನದ ಸಂಶೋಧನೆ**; ಕರ್ನಾಟಕ ಸಾಹಿತ್ಯ ಅಕಾಡೆಮಿ, ಅನುಭವ ಪ್ರಿಂಟರ್ಸ್, ಬೆಂಗಳೂರು.

೨೬. ತಾಳ್ತಜೆ ವಸಂತ ಕುಮಾರ; ೨೦೦೧; **ಮುತ್ತಿನ ಸತ್ತಿಗೆ**; ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೨೭. ತಾಳ್ತಜೆ ವಸಂತ ಕುಮಾರ; ೨೦೦೩; **ಶಿವರಾಮ ಕಾರಂತ**; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೮. ತುಕಾರಾಂ ಪೂಜಾರಿ(ಸಂ); ೧೯೯೭; **ಕಣ್ಮರೆಯಾಗುತ್ತಿರುವ ತುಳು ಬದುಕು**; ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ಬಂಟ್ವಾಳ.

೨೯. ದಿವಾಕರ ಕೆ.; ೨೦೧೩; **ತುಳುನಾಡಿನ ಆಚರಣೆಗಳು**; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩೦. ದುಗ್ಗಪ್ಪ ಕಜೆಕಾರ್(ಸಂ); ೨೦೦೯; **ಕಳಸೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೩೧. ಧನಂಜಯ ಕುಂಬ್ಳೆ; ೨೦೧೬; **ಐತಿಹ್ಯಗಳು ಕಟ್ಟಿಕೊಡುವ ತುಳುನಾಡಿನ ಇತಿಹಾಸ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು

೩೨. ನಟರಾಜ ಮೈ.ಶ್ರೀ.(ಪ್ರ.ಸಂ); ೨೦೦೯; **ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು...** ; ಕನ್ನಡ ಸಾಹಿತ್ಯ ರಂಗ, ನ್ಯೂಜೆರ್ಸಿ, ಯು.ಎಸ್.ಎ.

೩೩. ನಟರಾಜ್ ಹುಳಿಯಾರ್; ೨೦೦೪; **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ನರೇಂದ್ರ ರೈ ದೇರ್ಲ; ೧೯೯೮; **ವಿಶುಕುಮಾರ**; ಪ್ರಸಾರಾಂಗ ಮಂಗಳೂರು ವಿ.ವಿ.

೩೫. ನರೇಂದ್ರ ರೈ ದೇರ್ಲ; ೨೦೧೪; **ಹಸಿರು-ಉಸಿರು**; ಕನಸು ಪ್ರಕಾಶನ, ಪುತ್ತೂರು.

೩೬. ನಾಗರತ್ನಮ್ಮ ಎಸ್; ೨೦೦೯; **ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳವಳಿ**; ದೇಸಿ ಪ್ರಕಾಶನ, ಬೆಂಗಳೂರು.

೩೭. ನಾಗವೇಣಿ ಎಚ್.; ೨೦೦೬; **ವಸುಂಧರೆಯ ಗ್ಯಾನ**; ಲೋಹಿಯಾ ಪ್ರಕಾಶನ, ಬಳ್ಳಾರಿ.

೩೮. ನಾಯಕ್ ಜಿ.ಎಚ್.(ಸಂ.); ೨೦೦೦; **ಶತಮಾನದ ಕನ್ನಡ ಸಾಹಿತ್ಯ**; ಬೃಂದಾವನ ಪ್ರಿಂಟರ್ಸ್, ಬೆಂಗಳೂರು. .

೩೯. ನಿಕೇತನ; ೨೦೧೪; **ತುಳು ಸಾಹಿತ್ಯ ಪರಂಪರೆ ಒಂದು ಅವಲೋಕನ**; ರಾಶಿ ಪ್ರಕಾಶನ, ಉಡುಪಿ.

೪೦. ಪಟವರ್ಧನ್ ಎನ್.ಜಿ.(ಸಂ); ೨೦೦೩; **ಅಬ್ಬಲಿಗೆ**; ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ.

೪೧. ಪದ್ಮಪ್ರಸಾದ್ ಎಸ್.ಪಿ.; ೨೦೧೪; **ಅನುಸಂಧಾನ**; ಪ್ರಕಾಶ್ ಸಾಹಿತ್ಯ, ಬೆಂಗಳೂರು.

೪೨. ಪುರುಷೋತ್ತಮ ಬಿಳಿಮಲೆ; ೧೯೯೦; **ಕರಾವಳಿ ಜಾನಪದ**; ಮಂಗಳ ಗಂಗೋತ್ರಿ; ಮಂಗಳೂರು.

೪೩. ಪುರುಷೋತ್ತಮ ಬಿಳಿಮಲೆ; ೧೯೯೨; **ಶಿಷ್ಟ- ಪರಿಶಿಷ್ಟ**; ಮದಿಪು ಪ್ರಕಾಶನ; ಮಂಗಳೂರು.

೪೪. ಪ್ರತಾಪಚಂದ್ರ ಶೆಟ್ಟಿ ಹಳ್ನಾಡು; ೨೦೧೦; **ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ**; ಹೇಮಾವತಿ ಪ್ರಕಾಶನ, ಮಂಗಳೂರು.

೪೫. ಪಾದೂರು ಗುರುರಾಜ ಭಟ್; ೨೦೦೯; **ತುಳುನಾಡು**; ಡಾ॥ ಪಾದೂರು ಗುರುರಾಜ ಮೆಮೋರಿಯಲ್ ಟ್ರಸ್ಟ್(ರಿ), ಉಡುಪಿ.

೪೬. ಪಾಲ್ತಾಡಿ ರಾಮಕೃಷ್ಣ ಆಚಾರ್; ೧೯೯೯; **ತುಳು ನಾಡು–ನುಡಿ**; ಕರ್ನಾಟಕ ಸಂಘ, ಪುತ್ತೂರು.

೪೭. ಪಾಲ್ತಾಡಿ ರಾಮಕೃಷ್ಣ ಆಚಾರ್; ೨೦೧೩; **ತುಳುನಾಡಿನ ಪಾಣಾರರು**; ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.

೪೮. ಪುಂಡಿಕ್ಯಾ ಗಣಪಯ್ಯ ಭಟ್; ೧೯೯೭; **ತೌಳವ**; ಸಿಂಧೂರ ಪ್ರಕಾಶನ, ಮೂಡುಬಿದಿರೆ.

೪೯. ಪುರುಷೋತ್ತಮ ಬಿಳಿಮಲೆ; ೧೯೯೨; **ಶಿಷ್ಟ ಪರಿಶಿಷ್ಟ** ; ಮದಿಪು ಪ್ರಕಾಶನ, ಮಂಗಳೂರು.

೫೦. ಪುರುಷೋತ್ತಮ ಬಿಳಿಮಲೆ(ಸಂ); ೧೯೯೫; **ಸಿರಿ**; ಕಲಾಗಂಗೋತ್ರಿ, ಅಮೃತ ಸೋಮೇಶ್ವರ ಅಭಿನಂದನ ಸಮಿತಿ, ಉಚ್ಚಿಲ.

೫೧. ಪೂವಪ್ಪ ಕಣಿಯೂರು; ೨೦೦೪; **ಪೂಕರೆ ಮತ್ತು ಇತರ ಜಾನಪದೀಯ ಲೇಖನಗಳು**; ರಾಜ್ ಪ್ರಕಾಶನ, ಮೈಸೂರು.

೫೨. ಫಕೀರ ಎಂ. ಮುಲಯ; ೨೦೧೪; **ಅಳಿಯ ಸಂತಾನ ಕಟ್ಟಿನ ತುಳು ಜನರ ಶುಭಾಶುಭ ಕಟ್ಟಳೆಗಳು**, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೫೩. ಬಡಿಗೇರ ಜಿ.ಎಲ್.; **ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ**; ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ.

೫೪. ಬರಗೂರು ರಾಮಚಂದ್ರಪ್ಪ (ಪ್ರ.ಸಂ); ೨೦೦೨; **ಕರ್ನಾಟಕ ಸಂಗಾತಿ**; ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೫೫. ಬರಗೂರು ರಾಮಚಂದ್ರಪ್ಪ; ೧೯೯೪; **ಸಂಸ್ಕೃತಿ ಉಪಸಂಸ್ಕೃತಿ**; ಭೂಮಿ ಬಳಗ, ಮೈಸೂರು.

೫೬. ಬನ್ನಂಜೆ ಬಾಬು ಅಮೀನ್; ೧೯೯೪; **ತುಳು ಜಾನಪದ ಆಚರಣೆಗಳು**; ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ.

೫೭. ಬನ್ನಂಜೆ ಬಾಬು ಅಮೀನ್; ೨೦೧೦; **ತುಳುನಾಡ ದೈವಗಳು**; ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ.

೫೮. ಬಾರ್ಕೂರು ಉದಯ; ೨೦೧೫; **ಇತಿಹಾಸದ ಶೋಧ ಗತದ ಹುಡುಕಾಟ**; ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು.

೫೯. ಮಂಜೇಶ್ವರ ಗಣಪತಿ ರಾವ್ ಐಗಳ್; ೧೯೨೩; **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ**; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೬೦. ಮುಕುಂದ ಪ್ರಭು(ಪ್ರ.ಸಂ.); ೨೦೦೦; **ಪೊಲಿ**; ಕೆನರಾ ೨೦೦; ಜಿಲ್ಲಾಧಿಕಾರಿ, ಮಂಗಳೂರು.

೬೧. ಮೊಹಿದೀನ್ ಬಿ.ಎ; ೨೦೧೮; **ನನ್ನೊಳಗಿನ ನಾನು**; ಭಾರತ ಪ್ರಕಾಶನ, ಜಪ್ಪು ಮಂಗಳೂರು.

೬೨. ಮೋಹನ್ ಕೃಷ್ಣ ರೈ ಕೆ.; ೧೯೯೯; **ತುಳುಸಂಸ್ಕೃತಿ ಚತುರ್ಮುಖೀ ಅಧ್ಯಯನ**; ಪ್ರಸಾರಾಂಗ ಕ.ವಿ.ವಿ, ಹಂಪಿ.

೬೩. ಮೋಹನ್ ಕುಂಟಾರ್; ೨೦೧೩; **ಯಕ್ಷಗಾನ ಸ್ಥಿತ್ಯಂತರ**; ಯಾಜಿ ಪ್ರಕಾಶನ, ಹೊಸಪೇಟೆ.

೬೪. ಮೋಹನ್ ಎಸ್.;೨೦೧೦; **ನಾಗಾರಾಧನೆ ಪರಂಪರೆ–ಸ್ಥಿತ್ಯಂತರಗಳು**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ಯೋಗೀಶ ಕೈರೋಡಿ; ೨೦೧೬; **ತುಳುತಿಟ್ಟು ಯಕ್ಷಗಾನ ಸ್ವರೂಪ ಮತ್ತು ಸಾಧ್ಯತೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೬೬. ರಮೇಶ್ ಕೆ.ವಿ.; **ತುಳುನಾಡಿನ ಇತಿಹಾಸ**; ಗೀತಾಬುಕ್ ಹೌಸ್, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೬೭. ರಹಮತ್ ತರೀಕೆರೆ; ೨೦೦೬; **ಲೋಕ ವಿರೋಧಿಗಳ ಜತೆಯಲ್ಲಿ ೧೫ ಮಾತುಕತೆಗಳು**; ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

೬೮. ರಮಾನಾಥ್ ಕೋಟೆಕಾರ್; ೨೦೧೧; **ಬಿಲ್ಲವರು ಮತ್ತು ಬಾಸೆಲ್ ಮಿಶನ್ ಒಂದು ಅಧ್ಯಯನ**; ಸಾಯಿಸುಂದರಿ ಸೇವಾಟ್ರಸ್ಟ್, ಕೋಟೆಕಾರ್ ಮಂಗಳೂರು.

೬೯. ರಮಾನಾಥ್ ಕೋಟೆಕಾರ್; ೨೦೧೨; ತುಳುನಾಡಿನ ಬಿಲ್ಲವರು–ಒಂದು ಅಧ್ಯಯನ; ಸಾಯಿ ಸುಂದರಿ ಸೇವಾಟ್ರಸ್ಟ್, ಮಂಗಳೂರು.

೭೦. ರಾಘವೇಂದ್ರರಾವ್ ಎಚ್.ಎಸ್.(ಸಂ); ೨೦೦೧; **ಶತಮಾನದ ಕನ್ನಡ ಸಾಹಿತ್ಯ ವಿಮರ್ಶೆ**; ಇಳಾ ಪ್ರಿಂಟರ್ಸ್, ಬೆಂಗಳೂರು.

೭೧. ರಾಜಪ್ಪ ದಳವಾಯಿ; ೨೦೦೨; ಉಳುಮೆ; ಭಾಗ್ಯಶ್ರೀ ಎಂಟರ್‌ಪ್ರೈಸಸ್, ಬೆಂಗಳೂರು.

೭೨. ರಾಜಾರಾಮ ಹೆಗಡೆ(ಸಂ); ೨೦೦೪; **ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ**; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೩. ರಾಜಶ್ರೀ; ೨೦೦೮; **ತುಳು ಜನಪದ ಕಾವ್ಯ ಇಹಪರ ಲೋಕದೃಷ್ಟಿ**; ಚೌಟ ಪ್ರತಿಷ್ಠಾನ(ರಿ.) ಬೆಂಗಳೂರು.

೭೪. ರಾಮಚಂದ್ರನ್ ಸಿ.ಎನ್.; ೧೯೯೦; **ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನೆ**; ಅಂಕಿತ ಪುಸ್ತಕ, ಬೆಂಗಳೂರು.

೭೫. ರೋಹಿಣಿ ಬಿ.ಎಂ, ಶಶಿಲೇಖಾ ಬಿ.; ೨೦೧೦; **ತುಳುನಾಡಿನ ಮಾಸ್ತಿಕಲ್ಲುಗಳು–ವೀರಗಲ್ಲುಗಳು**; ಪಿಕ್ಸೆಲ್ ಡಿಸೈನರ್ಸ್, ಕುದ್ರೋಳಿ ಮಂಗಳೂರು.

೭೬. ಲಲಿತಾಂಬ ಎನ್.ಆರ್.(ಪ್ರಸಂ.); ೨೦೧೦; **ಸಂಪ್ರೀತಿ**; ಡಾ. ಆರ್ ಲಕ್ಷ್ಮೀನಾರಾಯಣ ಅಭಿನಂದನ ಗ್ರಂಥ; ಪರಸ್ಪರ ಪ್ರಕಾಶನ, ಬೆಂಗಳೂರು.

೭೭. ಲಕ್ಷ್ಮೀ ಜಿ. ಪ್ರಸಾದ;೨೦೧೧; **ಬೆಳಕಿನೆಡೆಗೆ... ಸಂಶೋಧನಾ ಲೇಖನಗಳು**; ಮಾತೃಶ್ರೀ ಪ್ರಕಾಶನ, ಬೆಂಗಳೂರು.

೭೮. ಲಕ್ಷ್ಮೀ ಜಿ. ಪ್ರಸಾದ; ೨೦೧೩; **ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ**; ಪ್ರಚೇತ ಬುಕ್ ಹೌಸ್, ಬೆಂಗಳೂರು.

೭೯. ಲೋಕಯ್ಯ ಶಿಶಿಲ ಬಿ.ಎ.; ೨೦೧೬; **ತುಳುನಾಡ ಸಂಸ್ಕೃತಿಯಲ್ಲಿ ನಲ್ಕೆ ಯಾನೇ ಅಜಿಲ ಜನಾಂಗದ ಪಾತ್ರ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೮೦. ವಸಂತಕುಮಾರ ಪೆರ್ಲ; ೧೯೯೯; **ಅಭ್ಯಾಸ**; ಸಾಹಿತ್ಯ ಸಂಘ(ರಿ.), ಬದಿಯಡ್ಕ.

೮೧. ವಿಜಯ್ ಪೂಣಚ್ಚ ತಂಬಂಡ; ೨೦೦೪; **ಪಳಮೆ**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೮೨. ವಿಜಯ್ ಪೂಣಚ್ಚ ತಂಬಂಡ(ಪ್ರಸಂ.); ೨೦೧೦; **ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩. ವಿರೂಪಾಕ್ಷ ಹೆಚ್.ಎಸ್.; ೨೦೧೩; **ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ**; ಬಂಡಾರ ಪ್ರಕಾಶನ, ಮಸ್ಕಿ.

೮೪. ವಿವೇಕ ರೈ ಬಿ.ಎ.; ೧೯೯೦; **ಸಿರಿ**; ಅಮೃತ ಸೋಮೇಶ್ವರ ಅವರ ಅಭಿನಂದನಾ ಗ್ರಂಥ, ಅಮೃತ ಸೋಮೇಶ್ವರ ಅಭಿನಂದನಾ ಸಮಿತಿ, ಸೋಮೇಶ್ವರ.

೮೫. ವಿವೇಕ ರೈ ಬಿ.ಎ.; ೧೯೯೫; **ಗಿಳಿಸೂವೆ**; ಅಕ್ಕೆಸಿರಿ ಸಾಂಸ್ಕೃತಿಕ ಕೇಂದ್ರ, ಮಂಗಳೂರು.

೮೬. ವಿವೇಕ ರೈ ಬಿ.ಎ.(ಪ್ರಸಂ); ೧೯೯೭; **ಪೊನ್ನ ಕಂಠಿ**; ಅಖಿಲ ಭಾರತ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಂಗಳೂರು.

೮೭. ವಿವೇಕ ರೈ ಬಿ.ಎ. (ಸಂ); ೨೦೦೨; **ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ**; ಡಾ. ಶಿವರಾಮ ಕಾರಂತ ಪೀಠ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೮೮. ವಿವೇಕ ರೈ ಬಿ.ಎ., ೨೦೦೭; **ತುಳು ಸಾಹಿತ್ಯ ಚರಿತ್ರೆ**; ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೮೯. ವಿವೇಕ ರೈ ಬಿ.ಎ.; ೨೦೦೯; **ತುಳು ಬರವು ಸರವು ನಾಲಾಯಿಡ್ದ್ ನಾಲೂರುಗು**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೯೦. ವಿವೇಕ ರೈ ಬಿ.ಎ.; ೨೦೧೭; **ಮೊದಲ ಮೆಟ್ಟಿಲು**; ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು.

೯೧. ವಿವೇಕ ರೈ ಬಿ.ಎ.(ಪ್ರಸಂ.); ೨೦೧೬; **ಮಂಗಳೂರು ದರ್ಶನ ಸಂಪುಟ-೧**; ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು.

೯೨. ಶಿವರಾಮ ಪಡಿಕ್ಕಲ್; ೨೦೦೧; **ನಾಡು-ನುಡಿಯ ರೂಪಕ**; ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೯೩. ಶಿವರಾಮ ಶೆಟ್ಟಿ ಬಿ.(ಸಂ); ೨೦೦೬; **ನಾಡು ನುಡಿ ಪ್ರತಿನಿಧೀಕರಣದ ಕಥನ**; ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೯೪. ಷೇಕ್ ಅಲಿ ಬಿ.(ಪ್ರ. ಸಂ.); ೧೯೯೭; **ಕರ್ನಾಟಕ ಚರಿತ್ರೆ(ಕ್ರಿ.ಶ. ೧೯೦೦-೧೯೫೬) ಸಂಪುಟ ೭**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೫. ಸಚ್ಚಿದಾನಂದ ಹೆಗ್ಡೆ ಬಿ.; ೨೦೧೦; **ತುಳುನಾಡವರ ಸಮಾಜ**; ಕೌಸ್ತುಭ ಪ್ರಕಾಶನ, ಬೆಂಗಳೂರು.

೯೬. ಸಬಿಹಾ ಭೂಮಿಗೌಡ; ೨೦೦೧; **ಬಗೆ**; ಲೋಹಿಯಾ ಪ್ರಕಾಶನ, ಬಳ್ಳಾರಿ.

೯೭. ಸುಶೀಲಾ ಪಿ. ಉಪಾಧ್ಯಾಯ; ೧೯೮೯; **ಜನಪದ ಆರಾಧನೆ ಮತ್ತು ರಂಗಕಲೆ**; ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೯೮. ಸಂತಾನಂ ಕೆ; ೨೦೧೦; **ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯತೆ**; ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೯೯. ಸುಂದರ ಕೇನಾಜೆ; ೨೦೦೯; **ಬತ್ತದ ಲೋಕ**; ಸಿಂಚು ಮಲ್ಟಿಗ್ರಾಫ್; ಮೈಸೂರು.

೧೦೦. ಸ್ವಾಮಿ ಬಿ. ಎಸ್.; ೨೦೦೬; **ಜಾನಪದ ಐಸಿರಿ**; ದಾಮಿನಿ ಸಾಹಿತ್ಯ, ಬೆಂಗಳೂರು.

೧೦೧. ಹರಿದಾಸ ಭಟ್ಟ ಕು.ಶಿ.; ೧೯೭೯; **ತುಳುವ**; ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೧೦೨. ಹರೀಶ್ ಆಳ್ವ ಎಮ್.ಜಿ.; ೨೦೧೬; **ತುಳುವರ ಕೃಷಿ ಆರಾಧನಾ ಪದ್ಧತಿ, ಪೂಕರೆ ಆಚರಣೆ ಮತ್ತು ಸಮಾಜ ವ್ಯವಸ್ಥೆ**; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೧೦೩. ಹಳ್ಳಿಕೇರಿ ಎಫ್.ಟಿ.; ರವೀಂದ್ರನಾಥ ಕೆ.(ಸಂ); ೨೦೦೨; **ದಶಕದ ಕನ್ನಡ ಸಾಹಿತ್ಯ**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೪. Lawrence D'souza; 1994; **Malekudiyas a primitive tribe of south India**; Unesco co-action learning centre, Mangalore.